ಜನರು ಜಾಗ್ರತರಾದ ಹೊರತು ಏನೂ ಉಪಯೋಗವಿಲ್ಲ. ಈ ಕಾರ್ಯದಲ್ಲಿ ಸುಶಿಕ್ಷಿತರು ಅಶಿಕ್ಷಿತರಿಗೆ, ಶ್ರೀಮಂತರು ಬಡವರಿಗೆ ಸಹಾಯ ಮಾಡಬೇಕು' ಈ ಠರಾವು ಸಹ ಏಕಮತದಿಂದ ಪಾಸಾಯಿತು. 'ಸಧ್ಯದ ದೇವಸ್ಥಾನದ ಆಡಳಿತೆಯು ಬಹಳೇ ಕಡೆಯಲ್ಲಿ ತೀರ ಕೆಟ್ಟಿರುವದರಿಂದ ಸಾರ್ವಜನಿಕ ದೇವಸ್ಥಾನಗಳ ಕಾಯಿದೆಯಲ್ಲಿ ತಕ್ಕ ಸುಧಾರಣೆಗಳನ್ನು ಸೂಚಿಸಲು ಒಂದು ಕಮಿಟಿ ನೇಮಿಸುವ ಠರಾವನ್ನು ರಾ। ಡಿ. ಬಿ. ನಾಡಕರ್ಣಿ, ಕಾರವಾರ ಇವರು ಸೂಚಿಸಿದರು. ಈ ಠರಾವಿನ ಮೇಲೆ ಮಾತಾಡುವಾಗ ರಾ। ನಾಡಕರ್ಣಿಯವರು ಎಲ್ಲ ಮುಕ್ತೇಸರರ ಮೇಲೆ ಕೆಲ ನಿಷ್ಕಾರಣ ಆರೋಪಗಳನ್ನು ಹೊರಿಸಿದ್ದರಿಂದ, ರಾ। ಕೇಶವಯ್ಯನವರು ಅವುಗಳನ್ನು ನಿಷೇಧಿಸಿದರು. ಇದಕ್ಕೆ ರಾ। ಕರ್ಕಿ, ರಾ. ಬೀರಣ್ಣ ನ್ಯಾಕ ರಾ। ದತ್ತಾ ನ್ಯಾಕ ಇವರು ಪುಷ್ಟಿ ಕೊಡುವಾಗ ತಮ್ಮ ಅನುಭವದ ಕೆಲ ಸಂಗತಿಗಳನ್ನು ನಿವೇದಿಸಿದರು.

ಆಮೇಲೆ ಸ್ವಾ। ಕಮಿಟಿಯ ಸಭಾಸದರ ಸಮಕ್ಷಮ ಅಧ್ಯಕ್ಷರ ಫೋಟೋ ತೆಗೆಯಲಾಯಿತು. ಫೋಟೋ ಕೆಲಸ ಮುಗಿದ ಮೇಲೆ ರಾ। ಕರ್ಕಿಯವರು

'ಭಟಕಳ-ಶಿವಮೊಗ್ಗಾ ರೇಲ್ವೆ'

ಠರಾವನ್ನು ಸೂಚಿಸಿದರು. ಇದಕ್ಕೆ ಅನುಮೋದಿಸುವಾಗ ರಾ। ವಿಶ್ವನಾಥ ಪ್ರಭು, ಅಂಕೋಲಾ ಇವರು ಮಂಗಳೂರ, 'ಕಂಠೀರವನ' ಆಕ್ಷೇಪಗಳು ಎಷ್ಟರಮಟ್ಟಿಗೆ ಪೊಳ್ಳು ಮತ್ತು ಸ್ವಾರ್ಥಪ್ರೇರಿತವಾಗಿದ್ದವೆಂಬುದನ್ನು ತೋರಿಸಿದ್ದಲ್ಲದೆ, ಆ ರೇಲ್ವೆಯನ್ನು ಭಟಕಳದಲ್ಲಿಯೇ ಯಾಕೆ ಆಗಬೇಕೆಂಬುದನ್ನು ಸಪ್ರಮಾಣ ಪ್ರತಿಪಾದಿಸಿದರು. ಈ ಠರಾವು ಏಕಮತದಿಂದ ಪಾಸಾಯಿತು. ಆ ಮೇಲೆ ಮಂಜೂರಾದ ಎಲ್ಲ ಠರಾವುಗಳನ್ನು ಯೋಗ್ಯ ಅಧಿಕಾರಿಗಳಿಗೆ ಕಳಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಬೇಕಾಗಿ ರಾ। ಬಿ, ಯಜ್ಞಮೂರ್ತಿಯವರು ಸೂಚಿಸಿದ್ದಕ್ಕೆ ರಾ। ಎಚ್ ಎಸ್. ಶಾಸ್ತ್ರಿ ಹೊನ್ನಾವರ ಇವರು ಪುಷ್ಟಿ ಕೊಟ್ಟ ಮೇಲೆ ಠರಾವು ಪಾಸಾಯಿತು. ಬಳಿಕ ರಾ। ಕೇಶವಯ್ಯನವರು

ಮುಂದಿನ ಪರಿಷತ್ತನ್ನು

ಶಿರ್ಸಿಗೆ ನಿಮಂತ್ರಿಸಿದರು. ಕಾರವಾರದ ನಾಗರಿಕರು ಜಂಗಲ ಉಪದ್ರವಗಳ ಕುರಿತು ಮಾಡಿದ ತಂಟೆಗೆ ಸರಕಾರದ ಉತ್ತರವು ಅದೇ ದಿವಸ ಬಂತು. ಅದನ್ನು ರಾ। ಎಸ್. ಆರ್ ತೇಲಂಗ ಇವರು ಓದಿ ತೋರಿಸಿದರು. ಅದರ ಸಾರಾಂಶವು ಹೀಗಿರುತ್ತದೆ. ಸರಕಾರದವರು ಜಂಗಲ ಧೋರಣದ ವಿಷಯದಾಗಿ ಚೌಕಶಿ ಮಾಡುತ್ತಾರೆ. ಅದು ವರೆಗೆ ಜನರು ತಡೆಯಬೇಕಾಗಿ ಸರಕಾರದವರ ಇಚ್ಛೆ ಇರುತ್ತದೆ. ಸ್ವಾ। ಕ। ಕಾರ್ಯದರ್ಶಿಗಳು ಹೊಸ ಸಕ್ರೆಟರಿಗಳ ನೇಮಣೂಕಿ ವರೆಗೆ ಅದೇ ಜಾಗೆಯಲ್ಲಿ ಕೆಲಸ ಮಾಡಬೇಕೆಂದು ಠರಾಯಿಸಲಾಯಿತು. ಬಳಿಕ ರಾ। ಭಿ. ಮಾರುತಿ ಶೆಟ್ಟಿ ಮತ್ತು ರಾ। ಎಸ್. ಡಿ ನಾಡಕರ್ಣಿ ಇವರು ಸ್ವಾ। ಕಮಿಟಿಯು ಇಷ್ಟು ಅಲ್ಪ ಅವಕಾಶದಲ್ಲಿ ಎಲ್ಲ ಸಾಮಗ್ರಿಗಳನ್ನು ಒಟ್ಟುಗೂಡಿಸಿದ ಬಗ್ಗೆ ಹಾಗೂ ಸ್ವಯಂಸೇವಕರು ಮನಃಪೂರ್ವಕ ಅವಿಶ್ರಾಂತ ಪರಿಶ್ರಮ ಮಾಡಿದ ಬಗ್ಗೆ ಆಭಾರ ಪ್ರದರ್ಶಿಸಿದರು ಅದಕ್ಕೆ ಸ್ವಾ। ಕ। ಅಧ್ಯಕ್ಷರಾದ ಕಾಯಕಿಣಿಯವರು ಯೋಗ್ಯ ಶಬ್ದಗಳಿಂದ ಉತ್ತರ ಕೊಟ್ಟರು. ರಾ। ವಾಯ್. ಬಿ ಗುಂಡಕಂಡೆ, ರಾ। ಎಸ್. ಪಿ. ಮಾಳೆ ಈ ಇಬ್ಬರು ಸ್ವಯಂಸೇವಕರಿಗೆ ಹಗಲಿರುಳು ಪರಿಷತ್ತಿನ ಕೆಲಸ ಮಾಡಿದ ಬಗ್ಗೆ ಎರಡು ಬಂಗಾರದ ಉಂಗುರಗಳ ಪಾರಿತೋಷಿಕವನ್ನಿತ್ತರು. ಅಧ್ಯಕ್ಷರ ಆಭಾರ ಪ್ರದರ್ಶನವಾಗಿ ಸಮಾರೋಪವನ್ನು ಮಾಡುವಾಗ ಅಧ್ಯಕ್ಷರು, ತಮ್ಮ ಆಯುಷ್ಯಕ್ರಮದೊಳಗಿನ ದೇಶಸೇವೆಯ

ಕೆಲವು ಸಂಗತಿಗಳನ್ನು

ಹೇಳಿದರು "ಈ ಜಿಲ್ಲೆಯ ದರ್ಶನ ತಕ್ಕೊಳ್ಳಬೇಕೆಂದು ಎಷ್ಟು ಸಲ ಯೋಚಿಸಿದರೂ ಯೋಗಾಯೋಗವು ಕೂಡಿಬರಲಿಲ್ಲ. ತಂದೆಯವರು ಕೇರಿಯಲ್ಲಿ ಬಹು ಕಾಲ ವಾಸವಾಗಿದ್ದು ನಾನು ಹೊನ್ನಾವರದಲ್ಲಿ ಹುಟ್ಟಿದ್ದೆನು; ನನ್ನ ವಿವಾಹವು ಕುಮಟೆಯಲ್ಲಾಗಿತ್ತು; ವಿದ್ಯಾಭ್ಯಾಸವು ಕಾರವಾರದಲ್ಲಿ ಮಿ। ಕೀರ್ತನೆ ಅಭ್ಯಾಸಗಳ ಕೈಕೆಳಗಾಗಿತ್ತೆಂದು ನಿವೇದಿಸಿ ಬಹಳೇ ವರ್ಷಗಳಿಂದ ಪುನಃ ಕಾನಡಾ ಜಿಲ್ಲೆಯಲ್ಲಿ

ಮಾತೆಯ ಬಳಿಗೆ ಬಂದು

ಮುಟ್ಟಿದೆನು! (ಹೀಗೆ ಹೇಳುವಾಗ ಅವರ ಕಂಠವು ಸದ್ಗದಿತವಾಯಿತು! ಆತ್ಯುಮಾಕವಾಯಿತು!) ಪ್ರಿಯ ಪತ್ನಿಯ ವಿಯೋಗವಾದದರಿಂದ ಇಲ್ಲಿಗೆ ಬರುವ ಪ್ರಸಂಗವು ಅಕಸ್ಮಾತವಾಗಿ ಈ ವಿಚಾರವನ್ನೇ ಬಿಟ್ಟುಬಿಟ್ಟಿದ್ದೆನು. ಈಶ್ವರನ ನೇಮವೇನೆಂಬುವು ವಿಚಿತ್ರವದೆ! ಈಶ್ವರೇಚ್ಛೆಯಿಂದಲೇ ನಿಮ್ಮೆಲ್ಲರ ದರ್ಶನವು ನನಗಿಂದಾಯಿತು. ದೃಢನಿಶ್ಚಯದಿಂದ ಮತ್ತು ದಿಟ್ಟತನದಿಂದ ನೀವು ದುಡಿದರೆ ಆವನೇ ನಿಮ್ಮನ್ನು ಕಾಪಾಡುವನು. ನಿಮ್ಮ ಕಷ್ಟಗಳನ್ನು ದೂರಪಡಿಸುವನು. ಎಂದೂ ನಿರಾಶರಾಗಬೇಡಿರಿ. ರಾಷ್ಟ್ರಕಾರ್ಯದಲ್ಲಿ ಸ್ಥಿರಲಂಬಿಸುವವನು,

(ಸಜ್ಜ ಪೂರ ವಸಿ, ಸೋದಿ.)

❋ ಕಾರವಾರ ಜಿಲ್ಲಾ ಪರಿಷತ್ತು. ❋

ಪರಿಷತ್ತಿನ ಮಂಟಪದೊಳಗೆ
೨ ನೇ ದಿವಸ.

೩೦ ಸುಶ್ರಾವ್ಯ ಭಾಷಣಗಳಾದವು!
೧೫ ಠರಾವುಗಳು ಪಾಸಾದವು !!

ರವಿವಾರ ೮ ಘಂಟೆಗೆ ಅಧಿವೇಶನಕ್ಕೆ ಪುನಃ ಪ್ರಾರಂಭವಾಯಿತು. 'ಬಾವಟೆಯ ಅಧಿಕಾರ' 'ಯುವರಾಜರಿಗೆ ಸ್ವಾಗತ', 'ಪಂಜಾಬಿನೊಳಗಿನ ಅತ್ಯಾಚಾರಗಳ ನಿಷೇಧ', 'ಪಟ್ಟಣಶಾಹಿ ಕಾಯಿದೆಗಳು ರದ್ದು ಪಡಿಸುವದು' 'ರಾ. ಬಿ. ಗಂಗೊಳ್ಳಿಯವರ ನಿಧನದ ವಿಷಯವಾಗಿ ದುಃಖಪ್ರದರ್ಶನ', 'ಭಾರತಮಾತ್ರ ಮೊಂತೇಗ್ಯು ಧೋರಣೆಗಳ ಅಭಾವ', 'ಮುಂಬಯಿ ಕ್ರಾನಿಕಲದ ಸಂಪಾದಕರಿದ್ದ ಮಿ|| ಹಾರ್ನಿಮನರ ಅಭಾವ', 'ಪಂಚಾಯತ ಕಾಯಿದೆ ಕಮಿಟಿ' ಹೀಗೆ ೮ ಠರಾವುಗಳನ್ನು ಅಧ್ಯಕ್ಷರೇ ಸೂಚಿಸಿ ಏಕಮತದಿಂದ ಮಂಜೂರ ಮಾಡಿಕೊಂಡ ಮೇಲೆ,

ಸುಧಾರಣಾ ಕಾಯಿದೆ

ವಿಷಯದ ಠರಾವನ್ನು ರಾ|| ವ್ಹಿ. ಹಿ. ವಾಗಳೆ, ವಕೀಲ ಹುಬ್ಬಳ್ಳಿಯವರು ಚರ್ಚೆಗೆಂದು ಮುಂದಿಟ್ಟರು. 'ಮುಂಚಿನ ರಾಜ್ಯಪದ್ಧತಿಯು, 'ದಬಾವ' ಪದ್ಧತಿಯಾಗಿದ್ದು ಈಗ ಈ ಸುಧಾರಣಾ ಕಾಯಿದೆಯಿಂದ ನಮಗೆ ಅಲ್ಪ ಸ್ವಲ್ಪ ಸ್ವರಾಜ್ಯವು ಪ್ರಾಪ್ತವಾಗಿದೆ. ನಮಗೆ ಬೇಕಾದದ್ದು ಮಾತೃಸೇವೆಯನ್ನು ಮಾಡುವದಕ್ಕೆ ಅವಕಾಶವು ಈ ಭಾರತಮಾತೆಯ ಸೇವೆಯನ್ನು ಮಾಡಲಿಕ್ಕೆ, ಕುಲಸ್ತ್ರೀಯರು ತಮ್ಮ ಪತಿಗಳಿಗೆ ಅರಿಕೆಮಾಡಲಿ, ಎಲ್ಲ ದೇಶಪುತ್ರರು ಈ ಸೇವೆಯಲ್ಲಿ ನಿರತರಾಗಲಿ. ನಮ್ಮ ಭವಿತವ್ಯತೆಯು ಸ್ವರಾಜ್ಯದ ಮೇಲೆ ಅವಲಂಬಿಸಿದೆ' ಎಂದು ವಿನೋದಪ್ರಚುರ ಮತ್ತು ಸರಸ ಭಾಷಣದಿಂದ ಶ್ರೀ|| ವಾಗಳೆಯವರು ಸಭೆಯ ಮುಂದೆ ಇಟ್ಟರು. ಇದಕ್ಕೆ ಶ್ರೀ|| ಪಾಟೀಲ ವಕೀಲ ಮುಂಬಯಿ ಇವರು 'ಜವಾಬದಾರ ರಾಜ್ಯಪದ್ಧತಿಯೆಂದರೆ, ಮತದಾರರಿಗೆ ಪ್ರತಿನಿಧಿಗಳೂ, ಪ್ರತಿನಿಧಿಗಳಿಗೆ ದಿವಾಣರೂ ಹೀಗೆ ಹಬ್ಬಿಕೊಂಡಿರುವ ಸರಪಳಿಯನ್ನು ಹಾಕಿ ಕಟ್ಟಿದಂತೆ ಜವಾಬದಾರ ಇರುವರು ನಮಗೆ ಬೇಕಾದ ಜಂಗಲ ಹಕ್ಕುಗಳನ್ನೂ, ಶಿಕ್ಷಣವನ್ನೂ ನಮಗೆ ದೊರಕಿಸಿಕೊಳ್ಳಲಿಕ್ಕೆ, ಅವುಗಳಿಂದ ಜನರ ಹಿತ ಸಾಧಿಸಲಿಕ್ಕೆ ಯೋಗ್ಯ ನಿಯಾಮಕರು ತಮ್ಮ ಕರ್ತವ್ಯವನ್ನು ಮಾಡಲಿ [illegible] ಅವರನ್ನು

ನಾವು ಕಿತ್ತುಹಾಕಬೇಕು

ಎಂದು ಹೇಳಿ ಠರಾವನ್ನು ಅನುಮೋದಿಸಿದರು. ಆ ಮೇಲೆ ಶಿರಸಿ ಸ್ವರಾಜ್ಯ ಸಂಘದ ಅಧ್ಯಕ್ಷರಾದ ಶ್ರೀ|| [illegible]ಯವರು, 'ಈಗ ದೊರಕಿದ ಜವಾಬದಾರ ರಾಜ್ಯಪದ್ಧತಿಯು ಬಹಳೇ ಅಪೂರ್ಣವಿರುವದರಿಂದ ಅದು ನಿರಾಶಾಜನಕವದೆ, ಅಸಮಾಧಾನಕಾರಕವದೆ ಎಂದು ಹೇಳಿ ಠರಾವನ್ನು ಪುಷ್ಟೀಕರಿಸಿದರು. ಇದಕ್ಕೆ ರಾ|| ಭೀಮರಾವ ದೀಕ್ಷಿತ ವಕೀಲ ಶಿರಸಿ ಇವರು ಪುಷ್ಟಿಯನ್ನು ಕೊಟ್ಟಮೇಲೆ ಠರಾವು ಪಾಸಾಯಿತೆಂದು ಜಾಹೀರಾಯಿತು. ಅನಂತರ ಕಾರವಾರಜಿಲ್ಲೆಗೆ

ಎರಡು ಪ್ರತಿನಿಧಿಗಳನ್ನಾರಿಸುವ

ಹಕ್ಕು ದೊರೆಯಬೇಕೆಂಬ ಠರಾವು ಮಿ|| ಟಿ|| ಯಣ್ಣೆ ಮಡಿಯವರು ಸಪ್ರಮಾಣ ಸೂಚಿಸಿದಮೇಲೆ ರಾ|| ಶಂಭುರಾವ ಭದ್ರಿ ಹಳಿಯಾಳ, ರಾ|| ಮಾಧವರಾವ ಮಂಜುನಾಥ ಶಾನಭಾಗ, ರಾ|| ಎಸ್. ವಿ. ಕಾಮತ, ರಾ|| ಎಸ್. ಎಸ್. ಕೇಶವಯ್ಯನ, ಅಧ್ಯಕ್ಷ ಶಿರಸಿ ಮುನಿಸಿಪಾಲಿಟಿ, ಇವರು ಯೋಗ್ಯ ಭಾಷಣಗಳಿಂದ ಅನುಮೋದಿಸಿದ ಮೇಲೆ ಠರಾವು ಏಕಮತದಿಂದ ಮಂಜೂರಾಯಿತು.

ಅಸ್ಪೃಶ್ಯತಾ ನಿವಾರಣೆಯ

೧೧ ನೇ ಠರಾವನ್ನು ರಾ|| ಪಡಬಿದ್ರಿ, ಮುಂಬಯಿ ಇವರು ಸೂಚಿಸಿದ ಮೇಲೆ, ಅದಕ್ಕೆ ರಾ|| ವಾಗಳೆ ಹುಬ್ಬಳ್ಳಿ ಇವರು ಪುಷ್ಟೀಕರಿಸಿದರು ಈ ಠರಾವಿಗೆ ಕೆಲ ಪ್ರತಿನಿಧಿಗಳು

ವಿರೋಧಿಸಲು,

ಉಪಸೂಚನೆಯನ್ನು ಯಾರೂ ಮಾಡದ್ದರಿಂದ, ಅಧ್ಯಕ್ಷರು ಈ ಠರಾವಿನ ಅವಶ್ಯಕತೆಯನ್ನು ವಿವರಿಸಿ ಹೇಳಿ ಮತಗಳನ್ನು ಎಣಿಸಲು ಬಹುಮತದಿಂದ ಅದು ಪಾಸಾಯಿತೆಂದು ಜಾಹೀರಮಾಡಿದರು. ಇಷ್ಟಾದ ಮೇಲೆ ೧೧|| ಘಂಟೆ ಬಡಿಯಲು ಈ ದಿವಸದ ಬೆಳಿಗ್ಗಿನ ಸಭೆಯು ಮುಗಿಯಿತು.

ಅದೇ ದಿವಸ ಮಧ್ಯಾಹ್ನ ಮೂರು ಘಂಟೆಗೆ ಸಭೆಯ ಕೆಲಸಕ್ಕೆ ಪುನಃ ಪ್ರಾರಂಭವಾಯಿತು. ಪ್ರತಿನಿಧಿಗಳ ಆಗ್ರಹದ ಮೂಲಕ ಸ್ವಾಗತ ಚೇರಮನರ ಇಂಗ್ರಜಿ ಭಾಷಣದ ಕನ್ನಡ ಭಾಷಾಂತರವನ್ನು (ಈ ಭಾಷಣದ ಸಾರಾಂಶವನ್ನು ನಾವು ಬೇರೊಂದು ಕಡೆಯಲ್ಲಿ ಕೊಟ್ಟಿರುತ್ತೇವೆ) ರಾ|| ಶೆಟ್ಟಿ ವಕೀಲ ಕಾರವಾರ ಇವರು ಓದಿ ಹೇಳಿದಮೇಲೆ, ಅಧ್ಯಕ್ಷರು

'ಖಿಲಾಫತ್ತಿನ' ವಿಷಯವಾಗಿ

ಮಹಮ್ಮದೀ ಬಾಂಧವರಿಗೆ ಸಹಾನುಭೂತಿ ತೋರಿಸುವ ಠರಾವು ತಾವೇ ಮುಂದಿಟ್ಟು ಮಂಜೂರ ಮಾಡಿಕೊಂಡರು. 'ನಮ್ಮ ಜಿಲ್ಲೆಯ ಬೇಸಾಯದ ಅಭಿವೃದ್ಧಿಗೆ ಬೇಕಾಗುವ, ಶೇತಕಿ ಫಾರ್ಮ, ಸಣ್ಣ ಪ್ರಯೋಗಶಾಲೆ (Laboratury,) ಶೇತಕಿ ಶಾಲೆ, ಇವುಗಳ ಸ್ಥಾಪನೆ, ಕಬ್ಬಿನ ಬೆಳವಣಿಗೆಯ ಶಕ್ಯಾಶಕ್ಯತೆಯನ್ನು ವಿಚಾರಿಸಲು ಒಂದು ಕಮಿಶನ' ಈ ಬೇಡಿಕೆಗಳನ್ನು ಒಳಗೊಂಡಿರುವ

'ಬೇಸಾಯದ ಠರಾವನ್ನು

ರಾ|| ಪಾಲೇಕರರು ಸಭೆಯ ಮುಂದಿಟ್ಟರು. 'ಎಲ್ಲ ನೋಡಿದಲ್ಲಿ ಜಮೀನು ಬಂಜರು ಬಿದ್ದದೆ; ರಯತರ ಮನಸ್ಸು ನೊಂದು ಹೋಗಿದೆ. ಇದನ್ನು ಸುಧಾರಿಸಿ ರಯತರನ್ನು ಸಮಾಧಾನಗೊಳಿಸುವದು ಸರಕಾರದ ಕರ್ತವ್ಯವಿರುತ್ತದೆ ರಯತರ ಸಾಧನಗಳಿಂದಲೇ ಬೆಳೆಯನ್ನು ಹ್ಯಾಗೆ ಸುಧಾರಿಸಬೇಕೆಂದು ಕಲಿಸತಕ್ಕ ಶೇತಕಿ ಫಾರ್ಮಗಳನ್ನಿಡಿರಿ. ರಯತರ ಹುಡುಗರನ್ನು ಕಲಿಸಲಿಕ್ಕೆ ಬೇಸಾಯದ ಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಿರಿ. ಗೊಬ್ಬರದ ಮತ್ತು ಮಣ್ಣಿನ ಗುಣದೋಷದ ಪರೀಕ್ಷೆಯನ್ನು ಮಾಡಲಿಕ್ಕೆ ಒಂದು ಪ್ರಯೋಗ ಶಾಲೆಯನ್ನು ಇಡಿರಿ, ಎಂದು ಅವರು ಅಂತಃಕರಣಪೂರ್ವಕವಾಗಿ ಸೂಚಿಸಿದರು, ಇದಕ್ಕೆ

ರಾ|| ಗಂಗಾಧರರಾವ ಪಟವರ್ಧನ

ಇವರು ಸುಶ್ರಾವ್ಯ ಭಾಷಣಮಾಡಿ ಅನುಮೋದನ ಕೊಟ್ಟರು ಇವರ ಮನೋರಂಜಕ ಮತ್ತು ಮಾಹಿತಿಪೂರ್ಣ ಭಾಷಣವನ್ನು ಇನ್ನು ಅನೇಕ ಭಾಷಣಗಳೊಂದಿಗೆ ನಾವು ಸ್ವತಂತ್ರವಾಗಿ ಪ್ರಕಟಿಸುವವರಿದ್ದೇವೆ. "ಇದನ್ನು ಪುಷ್ಟೀಕರಿಸುವಾಗ ರಾ|| ದೊಮ್ಮಯ್ಯನ್ನಾಕ ಹಿರೇಗುತ್ತಿ ಇವರು ಅಂದದ್ದು:-" ಈಗಿನ ಆಣೇವಾರಿ ಪದ್ಧತಿಯು ಸದೋಷವಾದದ್ದು. ಪಟೇಲ–ಕುಲಕರ್ಣಿಗಳಿಗೆ

ಆಣೆವಾರಿಯ ಮರ್ಮವೇ ತಿಳಿಯು

ವದಿಲ್ಲ. 'ಯಾವ ಕೊಯ್ಲಿಗೆ ಭತ್ತ ಕಡಿಮೆ ಬರುತ್ತದೆ, ಯಾವದಕ್ಕೆ ಹೆಚ್ಚು ಬರುತ್ತದೆ, ಇದನ್ನು ನಿರೀಕ್ಷಿಸಲು ಅವರು ಅಸಮರ್ಥರು. ಆಣೆವಾರಿಯನ್ನು ಸರಿಯಾಗಿ ಮಾಡಲಿಕ್ಕೆ ನುರಿತ, ಅನುಭವಿಕ ಗೃಹಸ್ಥರೇ ಬೇಕು. ಆಣೇವಾರಿಯನ್ನು ನಿಶ್ಚಯಿಸಬೇಕಾದರೆ ಅಂಥ ಸದ್ಗೃಹಸ್ಥರ ಸಲ್ಲೆ ತೆಗೆದುಕೊಳ್ಳುವದು ಅತ್ಯವಶ್ಯವು. ಕಿರ್ವೆಯನ್ನು, ಠರಾಯಿಸಬೇಕಾದರೆ ಅಧಿಕಾರಿಗಳು ಮಣ್ಣಿನ ಪರಗತಿ, [illegible] ಜಂಗಲ ಹಕ್ಕುಗಳು ಮುಂತಾದ ಎಲ್ಲ ಸಂಗತಿಗಳನ್ನು ವಿಚಾರಿಸಿ ಕಿರ್ವೆ ಕಟ್ಟಿದ್ದಾರೆಂದು ನನ್ನ ಮತವು. ಈಗ ಮಳೆ ಅನಿಯಮಿತವಿರುವದರಿಂದಲೂ, ಜಂಗಲ ಹಕ್ಕುಗಳು ನಷ್ಟವಾದದ್ದರಿಂದಲೂ, ಕಿರ್ವೆಯು ಹೆಚ್ಚೆಂದು ಕಾಣುತ್ತದೆ! ನಮ್ಮ ಬೇಸಾಯ ಪದ್ಧತಿಯೊಳಗಿನ ಕೆಲ ನ್ಯೂನತೆಗಳನ್ನು ಹೋಗಲಾಡಿಸಲು ಪ್ರಯೋಗಶಾಲೆಗಳೂ, ಶೇತಕಿ ಫಾರ್ಮಗಳೂ ಬೇಕೇ ಬೇಕು! ಬಳಿಕ ಇದೇ ಠರಾವಿಗೆ ರಾ|| ಕಾಮತ ಅವರ್ಸೆ ಇವರು ಪುಷ್ಟಿಯನ್ನು ಕೊಡುವಾಗ ನುಡಿದದ್ದು "ಮಳೆ ಅನಿಯಮಿತವಿರುವದರಿಂದ, ಭೂಮಿಯ ತೇವ ಆರಿಹೋಗದಂತೆ ಹಸಿ ಎಲೆಗಳ ಗೊಬ್ಬರ ಹಾಕುವದು ಅತ್ಯುತ್ತಮ. ಇವುಗಳಿಗಾಗಿ ಜಂಗಲ ಹಕ್ಕುಗಳು ನಮಗೆ ತೀರ ಅವಶ್ಯವಿರುತ್ತವೆ! ಹಿರೇಗುತ್ತಿ ರಾ|| ದೊಮ್ಮಯ್ಯನ್ನಾಕರು ಕಿರ್ವೆ ವಿಷಯ ಹೇಳಿದ ಅಭಿಪ್ರಾಯವನ್ನು ವಿರೋಧಿಸುತ್ತ ಅಧ್ಯಕ್ಷರ ಅನುಮತಿಯಿಂದ, ರಾ|| ಮಾಧವ ರಾವ ಶಾನಭಾಗ, ಕಲಬಾಗಕರ ಕುಮಟಾ ಇವರು ಅಂದದ್ದು "ರಾ|| ದೊಮ್ಮಯ್ಯನ್ನಾಕರ ಅನುಭವವು ತೋರ್ಸೆ, ಹಿರೇಗುತ್ತಿ, ಮಾಸ್ಕೇರಿ, ಶಿರೂರ ಇಲ್ಲಿಯ ಭೂಮಿಗಳ ಉತ್ಪನ್ನದ ಮೇಲಿನದು. ಆ ಊರುಗಳ ಭೂಮಿಯು ಸಬಲವು. ಅದ್ದರಿಂದ ಅವರ ಆ ಅಭಿಪ್ರಾಯವು ಸರ್ವಸಾಧಾರಣವೆಂದು ತಿಳಿಯಬಾರದು. ನಿಜವಾಗಿ

ಕಿರ್ವೆಯ ಮಾನವು ತೀರ ಹೆಚ್ಚಿರು

ತ್ತದೆ. ಇದನ್ನು ಠರಾವಿನಲ್ಲಿ ಸೇರಿಸಿದಂತೆ ಕಮಿಶನ

PARTING MESSAGE
of
SIR NARAYEN CHANDAVARKAR
TO THE PEOPLE OF KANARA

Beloved Sisters and Brethren of Kanara, in taking leave of you and returning to Bombay, allow me to thank you once more for the honour you have done me by electing me to preside over the First Session of the Kanara District Political Conference and also for all you have done to help me to serve the District of my birth and ancestors and make the Session successful. All have worked with one heart and mind.

May the awakened life of the District continue to grow and yield its harvest of prosperity to its people of all classes. I pray you to keep the light of that life always burning. Towards that end, I beseech you in these words —

Sympathise, that is to say cultivate steadily the feeling of sympathy, love for all people, especially the masses, the ryots, the poor, distressed and the helpless.

Organise, that is to say, work by means of organised Associations to ventilate the grievances of the people to represent them to the authorities and to redress them by continued, steady, sober efforts, without exaggeration.

Lastly, *vitalise*, that is to say, let your efforts and activity be full of life, hope, and cheer. Be not daunted by difficulties and failures. Victory is sure to those who work for public good with faith, hope & charity. Remember the words of Shri Krishna to Arjuna in the *Bhagwad Gita* — नहि कल्याणकृत्कश्चिद् दुर्गतिं तात गच्छति ।

"Good works (for the people), Oh Dearest, never go to waste"

❀ ಕಾ ನ ಡಾ ವೃ ತ್ತ. ❀

ಗುರುವಾರ, ತಾರೀಖು ೨೭ ಮಾಹೆ ಮೇ ಸನ್ ೧೯೨೦ ನೇ ಇಸವಿ

ನವಜೀವನವು ಬೆಳಕಿಗೆ ಬಾತು!

ಕಾನಡಾಜಿಲ್ಲೆಯ ಮೊದಲನೇ ರಾಜಕೀಯ ಪರಿಷತ್ತಂತೂ ಕೊನೆಗಂಡಿತು. ಹಳ್ಳಿಹಳ್ಳಿಗಳಿಂದಲೂ, ಪಟ್ಟಣಗಳಿಂದಲೂ ಜನರ ಪ್ರತಿನಿಧಿಗಳಾಗಿ ನೂರಾರು ಮಂದಿಗಳು ಒಟ್ಟುಗೂಡಿ ಸಭೆಸೇರಿ, ನಾಲ್ಕು ದಿವಸಗಳ ತನಕ ರಾಷ್ಟ್ರೀಯ ಮತ್ತು ಸ್ಥಾನಿಕ ಸಮಸ್ಯೆಗಳನ್ನೂ, ಅವುಗಳ ... ದ ನೆಯ ಉಪಾಯಗಳನ್ನೂ, ವ್ಯವಸ್ಥಿತ ರೀತಿಯಿಂದ ಚರ್ಚಿಸಿ ನವಗೇನು ಇಷ್ಟಪ್ರಾಪ್ತಿಯಾಯಿತು? ಆಯಾಸಕರ ಪ್ರವಾಸದ ಶಾರೀರಿಕ ಕಷ್ಟಗಳನ್ನು ಸಹಿಸಿ ಬುದ್ಧಿ ಜ್ಞಾನ ಧನವನ್ನು ವೆಚ್ಚಮಾಡಿ ನಾವು ಗಳಿಸಿದ್ದೇನು? ನಮಗೇನು ದೊರೆಯಿತು? ಎಂದು ವ್ಯಾಪಾರಿ ದೃಷ್ಟಿಯಿಂದ ಈ ರಾಜಕೀಯ ಪರಿಷತ್ತಿನ ಲಾಭ-ಹಾನಿಗಳ ಆಧಾರವನ್ನು ... ಯನ್ನು ಹುಡುಕುವದು ಯತ್ನಿಸಲಿ. ಸಂತತ ಚೊಂಬೊಳಗಿನ ಗತ್ಯಂತರ ... ತನಗೆ ... ಉಪವ್ಯವಹಾರವು ಇದ್ದೀತು.

ರಾಜಕೀಯ ಮೂಕಗಳಿಂದ

ಅರ್ಥವಿಲ್ಲದ ಸ್ವಪರಾವಲಂಬನ ಇಂಥ ಸಾರ್ವಜನಿಕ ಕಾರ್ಯಗಳ ಮಹತ್ವವನ್ನು, ರಾಜಭಾಷಾಭಾಗದವರು ವ್ಯಾಪಾರೀ ಭಾಷೆಯಿಂದ ಹೇಳುವದಾದರೆ ಎಷ್ಟು ಪ್ರೌಢ ರಾಷ್ಟ್ರೀಯತನವು ನಮ್ಮ ಪಾಲಿಗೆ ಬಂತು? ಎಷ್ಟು ಹೊಂದಿಗೆ ದಿಟ್ಟತನವನ್ನು ನಾವು ಕೊಂಡು ಕೊಂಡೆವು? ಎಷ್ಟು ಏಕತೆ ಲೋಕಶಾಹಿಯು ಹಬ್ಬಿತು? ಎಷ್ಟು ದತ್ತಲು ಜಾಣ್ಮೆಯನ್ನು ನಾವು ಸಂಪಾದಿಸಿದೆವು? ಬಂಗಾರದಂತೆ ಬಹಳೇ ತುಟ್ಟಿಯಾಗಿರುವ ರಾಜಕೀಯ ಅನುಭವವನ್ನು ಎಷ್ಟು ತೊಲೆ ನಾವು ಸಂಗ್ರಹಿಸಿದೆವು? ರಾಜಕೀಯ ವ್ಯಾಪಾರಿಗಳಂತೆ ಲೆಕ್ಕಮಾಡುವದಿದ್ದರೆ ಇದೇ ದೃಷ್ಟಿಯಿಂದ ಎಣಿಕೆಮಾಡಿರಿ. ಸುದಾರಿಸಿದ ಸಾರ್ವಜನಿಕತೆಯ ರಾಜಕೀಯ ಅಂಗಡಿಯನ್ನು ಯಥಾಶಕ್ತ ನಡಿಸಲಿಕ್ಕೆ ಇವೆಲ್ಲ ಜಿನಸುಗಳನ್ನೂ ಕ್ಷೇತ್ರಗಳನ್ನೂ ನೀವು ಕೊಂಡುಕೊಂಡಿದ್ದರೆ, ನಿಮ್ಮ ಇಡೀ ವ್ಯಾಪಾರಕ್ಕೆ ಇಂದಿನಿಂದ ಕಾನಡಾಜಿಲ್ಲೆಯಲ್ಲಾದರೂ,

ನವಜೀವನದ ವ್ಯಾಪಾರವೆಂದು

ತೆರೆದರೆ ತೀರ ಯಥಾರ್ಥವಾಗುವದು. ಒಟ್ಟಿಗೆ ಮೊದಲನೇ ಪರಿಷತ್ತಿನಿಂದ ನವಜೀವನದ ಸಂಪಾದನೆ ನಮಗೆ ಪ್ರಾಪ್ತವಾಗಿದೆಂದು ಹೇಳುವದೇ ತಾತ್ಪರ್ಯವು.

ವಾಚಕರೇ,

ನಾಲ್ಕೈದು ವರ್ಷಗಳ ಹಿಂದೆ

ಕಾನಡಾಜಿಲ್ಲೆಯೊಳಗಿನ ಸಾರ್ವಜನಿಕ ಜೀವನಕ್ರಮವನ್ನೂ, ಇಂದಿನ ಜೀವನಕ್ರಮವನ್ನೂ ತುಲನೆ ಮಾಡಿ ನೋಡಿರಿ. ಆಫ್ರಿಕಾ ಖಂಡದೊಳಗಿನ ಕಾಡು ಜನರಲ್ಲಿರ ವಷ್ಟಿಲ್ಲದರೂ, ಅದೇ ವಿಧದ ಅಜ್ಞಾನವೂ, ಅಜಾಗ್ರತೆಯೂ, ಮರುಳತನವೂ ಹೀನತನವೂ ನಮ್ಮಲ್ಲಿ ತುಂಬಿ ತುಳುಕುತ್ತಿತ್ತು.

ಸಾರ್ವಜನಿಕ ಜೀವನಕ್ರಮದೊಳಗೆ ಸಜೀವತೆಯ ತೆರೆಗಳೇನೂ ಕಾಣುತ್ತಿದ್ದಿಲ್ಲ. ಬೆಟ್ಟದಲ್ಲಿರುವಂತೆ

ಒಂದು ವಿಧದ ಸ್ಮಶಾನಶಾಂತಿಯು

ಜಿಲ್ಲೆಯಲ್ಲಿ ವಾಸವಾಗಿತ್ತೆಂದು ಹೇಳಿದರೂ ಹೇಳಬಹುದು. ಹೊಟ್ಟೆಯೊಳಗೆ ಹಸಿವೆಯ ಬೆಂಕಿ ಬಿದ್ದರೂ, 'ಮಾಬಾಪ' ರೆಂದು ಮೆರೆಯುವ ಪರಿಷ್ಕಾಧಿಕಾರಿಗಳ ಮುಂದೆ ನಿಂತು 'ಭೂಕ ಲಗೀಹೈ,' ಎಂದು ಧಿಟ್ಟತನದಿಂದ ಹೇಳುವ ಧೈರ್ಯವು ಎಷ್ಟರಿಗಿತ್ತು? ಲೋಕಶಾಹಿಯ ಸಾಧನಗಳಾದ ಸಾರ್ವಜನಿಕ ವೃತ್ತಪತ್ರಿಕೆಗಳು (Press) ಸಾರ್ವಜನಿಕ ಸಂಸ್ಥೆಗಳೂ, ಅವುಗಳ ಕಾರ್ಯಕ್ರಮವೂ (Platform) ನಾಲ್ಕೈದು ವರ್ಷಗಳ ಹಿಂದೆ ನಮ್ಮಲ್ಲಿ ಎಷ್ಟಿದ್ದವು? ಮಿ। ಟಿಪ್ಪರರವರು ನಮ್ಮ ದೇಸಾಯಿಯವನ್ನು ಕಾಪಾಡಬೇಕೆಂದು, ನಾವು ಈ ಜಿಲ್ಲೆಯಲ್ಲಿ ಸುಖದಿಂದ ಬಾಳಿರಬೇಕೆಂದು, ಹಗಲಿರುಳು ಮಡಿಯುತ್ತಿದ್ದಾಗ,

ಕಾನಡಾವೃತ್ತವು

ಸಾರ್ವಜನಿಕ ಸಭೆಗಳ ಮುಖಾಂತರ ತಾಲೂಕು ತಾಲೂಕುಗಳಿಂದ ಅವರಿಗೆ ಬೆಂಬಲವನ್ನು ಕೊಡಿರೆಂದು ಒದರಿ ಹೇಳಿದರೂ ಅದರ ಕೂಗು ಎಷ್ಟು ಜನರ ಕಿವಿಗೆ ಮುಟ್ಟಿತ್ತು? ವೃತ್ತವು ತನ್ನ ಅಲ್ಪ ಸೇವೆಯನ್ನು ಮಾಡಲು, ನಮ್ರತೆಯಿಂದ ಮುಂದರಿಯಲು ಅದಕ್ಕೆ ಆಪತ್ತುಗಳೆಷ್ಟು ಬಂದೊದಗಿದವು! ಹಿಂದು ಕಾನಡಾವೃತ್ತವು ಜನ್ಮತಾಳದಿದ್ದರೆ, ಮತ್ತೊಂದು ಧುರೀಣವು ಜನಿಸುತ್ತಿತ್ತೇನು? ಇದೇನೂ ಇರಲಿ. ನಾಲ್ಕೈದು ವರ್ಷಗಳ ಹಿಂದೆ ಎರಡು ವೃತ್ತಪತ್ರಿಕೆಗಳ ಮಾತಿರಲಿ, ರಾಜಕೀಯ ವಿಷಯಗಳನ್ನು ಚರ್ಚಿಸುವ ಒಂದಾದರೂ ವೃತ್ತವು ನಮ್ಮಲ್ಲಿತ್ತೇನು? ಸಾರಾಂಶವಾಗಿ ಹೇಳುವದೇನಂದರೆ, ನಾಲ್ಕೈದು ವರ್ಷಗಳ ಹಿಂದಿನ ನಮ್ಮ ಸಾರ್ವಜನಿಕ ಜೀವನಕ್ರಮವು ಸಜೀವವಾಗಿದ್ದಿಲ್ಲ. ಇದ್ದರೆ, ಯಾಂತ್ರಿಕವಾಗಿತ್ತು, ಅದಕ್ಕಾಗಿ ಮೃತಪ್ರಾಯವಾಗಿತ್ತು. ಅದರೊಳಗೆ ಹೊಸದಾಗಿ ಚೈತನ್ಯವು ಸಂಚರಿಸಹತ್ತಿದೆ. ನಮ್ಮಲ್ಲಿಯೂ ರಾಷ್ಟ್ರೀಯ ಪುರುಷರು ಕೈಕಾಲುಗಳನ್ನು ಅಲ್ಲಾಡಿಸಹತ್ತಿರುವರು. ಅವರ ನಾಲಿಗೆಯು ನಿಜವಾದ ರಾಜನಿಷ್ಠೆಯಿಂದಲೂ ದೇಶನಿಷ್ಠೆಯಿಂದಲೂ ಮಾತಾಡಹತ್ತಿದೆ. ಇದೆಲ್ಲ ನಮ್ಮ ಸಾರ್ವಜನಿಕ ಶರೀರದೊಳಗಿನ

ನವಜೀವನವಲ್ಲದೆ ಮತ್ತೇನು?

ಮೊನ್ನಿನ ರಾಜಕೀಯ ಪರಿಷತ್ತು ನವಜೀವನವನ್ನು ಎಲ್ಲರಿಗೂ ಸ್ಪಷ್ಟವಾಗಿ ಕಾಣುವಂತೆ ಬೆಳಕಿಗೆ ತಂದಿರುವದು. ಪರಿಷತ್ತಿನಿಂದ ತೀರ ಸದ್ಯಕ್ಕೆ ನಮಗಾದ ಲಾಭವು ಇದೇ.

ನವಜೀವನವು ಕಾರವಾರದಲ್ಲಿ ಬೆಳಕಿಗೆ ಬಂತೆಂದು ನೀವು ನಗಾಣದೇಕಾದರೆ, ಪರಿಷತ್ತಿನ ನಾಲ್ಕು ದಿವಸಗಳ ಕಾರ್ಯಕ್ರಮವನ್ನು ಸಂಕ್ಷೇಪರೀತಿಯಿಂದ

ಪ್ರಯೋಗಿಸಲ್ಪಡುವ ಪರಿಷತ್ತು ಎಷ್ಟು ಮಹತ್ವದ ನಿರ್ಣಯಗಳನ್ನು ಪಾಸ ಮಾಡಿದೆಂದು ಲಕ್ಷಿಸಿರಿ. ಡಾ|| ಕೆಲ್ಲಾಗ್ ಆಚಾರ್ಯರು ಹೇಳಿದಂತೆ ಮೊಗಲರೂ, ಸ್ವಧರ್ಮಿಗರು ಬಾಳಕಷ್ಟು ಹಕ್ಕುಗಳನ್ನು ನಮಗೆ ಕೊಟ್ಟಿದ್ದು, ಅದಕ್ಕಾಗಿ ಅವು ಅಸಮಾಧಾನಕರವಿವೆ, ಎಂದು

ರಾಷ್ಟ್ರೀಯ ಸಭೆಯ ದೃಷ್ಟಿಯಿಂದ

ನಮ್ಮ ಪರಿಷತ್ತು ನಿರ್ಣಯಿಸಿದಂತಾಗಿದ್ದರೋ! ಮೊದಲನೇ ಕಂಡೆಂದು ತತ್ವಗಳನ್ನು ಸ್ವೀಕರಿಸುವಾಗಲೇ ಪೂರ್ಣ ಸ್ವರಾಜ್ಯಪ್ರಾಪ್ತಿಯನ್ನು ದೇಶದ ಹಕ್ಕಿನಿಂದ ಪಡೆಯ ಸ್ವದೇಶದ ನಮ್ಮ ಅಧಿಕಾರವೆಯು ಪಾರ್ಲಿಮೆಂಟಿಗ ಇದೇ ನಿರ್ಣಯದೊಳಗೆ ನಾವು ಅಂಗೀಕರಿಸಿಕೊಂಡಿದ್ದೇವೆ. ಇದಾದರೂ ನವಜೀವನದ ಬೆಳಕಿಗೆ ಸಾ. ಪ್ರಜಾ ಅಕ್ಷುಣ್ಣರೀತಿ ಅಕ್ಕುಗಳ ಧರ್ಮಸ್ವಾತಂತ್ರ್ಯವನ್ನು ಅವಲಂಬಿಸುವ ಪಡೆದ ಕಾಲ ಧರ್ಮಸೂತ್ರಗಳನ್ನು ನವಜೀವನದ ಬೆಳವಣಿಗೆ ಗೋಚರ ನಿರ್ದೇಶಿಸಿದ್ದೇವೆ. ಪಂಚಾಯತದೊಳಗಾದ ಆ ನಿರ್ಣಯ ಅಸ್ಪೃಶ್ಯರ ಸ್ಥಿತಿ ಶೀಘ್ರವಾಗಿ ವಿಶೇಷಿಸುವಾಗ, ಆ ಧರ್ಮ ಅನುಸಾರ ಕೃತ್ಯಗಳ ಪುನರ್ವ್ಯವಸ್ಥೆಯಾಗಬಾರದೆಂದು ಬ್ರಿಟಿಷ ಸರಕಾರಕ್ಕೆ ಸೂಚಿಸಿದೇವೆ.

ಜನ್ಮಸಿದ್ಧ ಹಕ್ಕುಗಳನ್ನು

(Declaration of Rights) ನಮ್ಮ ಪರಿಷತ್ತು ನವಜೀವನದ ಬೆಳಕಿಗೆ ರಾಷ್ಟ್ರೀಯ ಸಭೆಯ ಅಗ್ರಗ್ರಹಣ ಮಾಡಿಕೊಳ್ಳಬಹುದು ಇದೆ.

ನಮ್ಮ ಈ ವಿಷಯಕ ನಿರ್ಣಯಗಳನ್ನು ನೋಡಿರಿ. ಶಿಕ್ಷಣ ಶರೀರ ವಗೈರೆ ನಿರ್ಬಂಧಗಳ ಕರಾರುಗಳಿಗೆ, ಸುಶಿಕ್ಷಿತರಾದವರೂ, ಅಶಿಕ್ಷಿತರಾದವರೂ ಇದ್ದಾಗ್ಯೂ ಪರಿಷತ್ತು ಈ ಸುಧಾರಣೆಯ ಸತ್ಯವಾಗಿ ಕೆಲ ಪರಿಷ್ಕಾರಿಗಳೂ ಸ್ವತಃ

ಕಲೆಕ್ಟರ ಸಾಹೇಬರೂ ಹಾಜರಿದ್ದು

ಪರಿಷತ್ತಿನ್ನು ಎಷ್ಟು ಉತ್ಸಾಹದಿಂದ ಕೊಂಡಾಡಿ ನೆರೆದ ಜನರೆಲ್ಲರೂ ಬಲ್ಲರು. ರಾಷ್ಟ್ರೀಯ ಸಭೆಯಲ್ಲಿ ಸ್ವರಾಜ್ಯದ ಠರಾವನ್ನು ಬರೆದ ಹಾಗೆ ಎಷ್ಟು ಉತ್ಕಟತೆ, ಎಷ್ಟು ಆತುರತೆಯು, ಎಷ್ಟು ಮನಃಪೂರ್ವಕತೆಯು, ಕಂಡುಬರುತ್ತಿತ್ತು, ಅದಕ್ಕಿಂತ ಹೆಚ್ಚಿನದೂ ಇದ್ದು, ಉತ್ಸಾಹ, ಆತುರತೆಯೂ, ಮನಃಪೂರ್ವಕತೆಯೂ ಈ ನಮ್ಮ ದೇಶದ ಸ್ವರಾಜ್ಯದ ಪರಿಷತ್ತಿನಲ್ಲಿ ಕಂಡುಬರುತ್ತಿತ್ತು. ಸುಶಿಕ್ಷಿತರು, ಅಶಿಕ್ಷಿತರು, ಪಟ್ಟಣಿಗರು, ಹಳ್ಳಿಗರು, ಜಮೀನದಾರರು, ಒಕ್ಕಲಿಗರು, ಕೂಲಿಕಾರರು, ಧರ್ಮದವರೆಲ್ಲರನ್ನು, ಭಕ್ತಿಯ ಕರಗಿಸಿದನ್ನು ಸ್ಪಷ್ಟವಾಗಿ ಹಿಂದೂ ಮುಸಲ್ಮಾನ ಕೈಸ್ತರ ಮುಂತಾದ ಎಲ್ಲ ಜನಾಂಗಗಳನ್ನು ಒಕ್ಕೊರಲಿನಿಂದ ಒಪ್ಪಿಕೊಂಡಿದ್ದನ್ನು

ದೀಕ್ಷಿತನವರಿಂದ ಬಣ್ಣಿಸಿದರು.

ರೈತ ಸಭೆಯ ವರದಿಯ ಹೃದಯ ಸ್ಪರ್ಶಕ ಸುಂದರವಾಗಿ ದೀನದಲಿತರೊಳಗೆ ಶೋಷಣೆ ನಡೆಸಿದಂತಾಗಿತ್ತು. ಮಧ್ಯಮಧ್ಯದಲ್ಲಿ ಚಪ್ಪಾಳೆಗಳು ಕೇಳಿಬರುತ್ತಿದ್ದವು. ಈ ಚರ್ಚೆಯನ್ನು ಕೇಳಿ ರೈತರ ಹಳ್ಳಿಯ ದೇಶದಲ್ಲಿಯ ಬಂಗಲ ಕಾರ್ಖಾನೆಗಳಿಂದ ತಾವು ಶೋಷಿತರಾಗುವದನ್ನು ತೀರ ನಿಕೃಷ್ಟವಾಗಿದೆ, ದೇಶದ ಗಾರರು ಅಸಹ್ಯ ಯಾತನೆಗಳನ್ನು ಸಹಿಸುತ್ತಿರುವರು; ಇದನ್ನೆಲ್ಲ ಬೇಗನೆ ತಪ್ಪಿಸದಿದ್ದರೆ, ಆ ಹಳ್ಳಿಯ ಗತಿಯು ತೀರ ಶೋಚನೀಯವಾಗುವದು ಎಂಬ ನಿರ್ಣಯವನ್ನು ಹೊರಡಿಸಿದರೆ ಅತಿಶಯೋಕ್ತಿಯಾಗದು. ಈ ಠರಾವಿನ ಮೇಲಿನ ಭಾಷಣಗಳನ್ನು ಕೇಳಿ, ನಮ್ಮ ಪರಿಷತ್ತು ರಾಷ್ಟ್ರೀಯ ಮತವನ್ನು ಸ್ವೀಕರಿಸಲಿಲ್ಲೆಂದು ಹೇಳುವವರ್‍ಯಾರು? ಇರಲಿ. ಕರ್ತವ್ಯವನ್ನು ಅರಿಗಿಸಿದ್ದಕ್ಕೆ ಎಷ್ಟು ಯುಕ್ತಿಸಿದರೂ, ಅದು ಸ್ಥಳಿಗೆ ಬಂದೇ ಬರುವದು ಇದ್ದರೂ ನಾವು ದೇಶಾಯುತ

ಜನ್ಮಸಿದ್ಧ ಹಕ್ಕುಗಳನ್ನು

ಕ್ಷಣಕ್ಷಣ ಬಿಡಲಿಯವಾಗದೆ ಸರಕಾರವು ದೇಶಾಯಗಾರರಿಗೆ ಅನುಗ್ರಹಿಸಬೇಕೆಂದು ನಾವು ಹೃತ್ಪೂರ್ವಕವಾಗಿ ಹಾರೈಸುವೆವು. ಪ್ರದೇಶಿಕ ಪ್ರವಾಸದ ರಾಧಾಗರ ಪ್ರಯಾಣಗಾಗಿ, ಪ್ರಾಥಮಿಕ, ಮಾಧ್ಯಮ, ಔದ್ಯೋಗಿಕ ಮುಂತಾದ ಶಿಕ್ಷಣದ ಸಂಬಂಧ ಪರಿಷತ್ತು ನಿರ್ಣಯಗಳನ್ನು ಲಕ್ಷಿಸಿದರೆ, ನಮ್ಮ ಹಳ್ಳಿಯ ಸಾಲಿಯ ದಿಕ್ಕಿನಿಂದ ಹ್ಯಾಗೆ ಅದಗಿಲ್ಲವೆಂದ್ದಿದೆ, ಅದರ ಉಪಾಯ ಯೋಜನೆಗಳನ್ನು ಎಂದಿದ್ದ ಸ್ಪಷ್ಟವಾಗಿ ಕಂಡುಬರುವದು. ಇಷ್ಟೆಲ್ಲ ಇದ್ದ ನಮ್ಮ ನವಜೀವನದ ಆಕಾಂಕ್ಷೆಗಳೇ

ನವಜೀವನವಂತೂ ಇನ್ನು ಬೆಳಕಿಗೆ

ಬರುತ್ತ. ಅಧ್ಯಕ್ಷರಾದ ಸರ್ ನಾರಾಯಣ ಸಂಡೂರ ಯವರು ಪ್ರೈಮರಿ ಶಿಕ್ಷಣದ ಹೇಳಿಕೆಯಿಂದ ಹೇಳಿದಂತೆ ಇದೆಂದು. ಈಶ್ವರ ಪ್ರೇರಣೆಯೇ ಸರಿ. ಏರೇ ಅಧಿವೇಶನದ ಮೂರು ನಾಲ್ಕು ದಿವಸಗಳ ಬೆಳಕಿನಿಂದ ಈ ಹಾದಿ ಜೀವನವನ್ನು ರೂಪಿಸಲಿಕ್ಕೆ, ಬೆಳೆಸಲಿಕ್ಕೆ ನಮ್ಮ ದಾರಿ ಬೇಡದು ನಾವು ತಿಳಿಯಕೊಂಡೆವು. ಈ ಸಾರ್ವಜನಿಕ ಕಾರ್ಯದಲ್ಲಿ 'ಯಾಭಾಲಂಭ' ಜನಸಾಮಾನ್ಯರ ಸರಿಯಾಗಿ ಲಕ್ಷಿಸಿ, ನಾವು ಶಿಗಲಿರಲು

ಅವ್ಯಾಹತವಾಗಿ ದುಡಿಯಬೇಕು.

ಸರ ನಾರಾಯಣರಾವರ ಶಾನಭಾಗರಿಗೆ ರೀತಿ ನಿರೋಪದಲ್ಲಿ ಅಪ್ಪಣೆ ಸಿಡಿದಂತೆ, ನಮ್ಮ ಶಾನಭೋಗ ಬಾಂಧವರಿಗೆ ನಾವು ಕ್ಷೀಣಿಸಿ ನಾವಾದ ಹಾಗಿ ಯ ಹ್ಯಾಗೆ ಅರಿಕೆ ಮಾಡುತ್ತೇವಲ್ಲ:— Sympathise, Organise; Vitalise ಎಂಬ ತ್ರಿಸೂತ್ರ ದೇಶಸೇವೆ ಎಂಬ ವಿಶಾಲ ಕ್ಷೇತ್ರದಲ್ಲಿಗೆ ಸಾವಕಾಶ ಸಹಾನುಭೂತಿಯು ಕಣ್ಣಿಗಳಿರಲಿ; ಸಂಘಟನೆಯು ಕೈಗಳಿರಲಿ; ಚೇತನೆಯು ಪ್ರಾಣಗಳಿರಲಿ. ಇದು ಪರಸ್ಪರ ಸಹಾಯ, ಸೇವಾಭಾವನಾ ಮತ್ತು ಜೀವನದ ಎಂಬ ಧ್ಯೇಯದ ನಿಮ್ಮ ನವಜೀವನವನ್ನು ರೂಪಿಸುತ್ತದೆ. ಅದನ್ನು ಬೆಳೆಸುವನು, ಮತ್ತು ನಿಮ್ಮ ಹಳ್ಳಿಯ ನಿಮ್ಮ ದೇಶವು, ನಿಮ್ಮ ಸಾಮ್ರಾಜ್ಯಕ ಕಲ್ಯಾಣವನ್ನು ನಿರಂತರ ಸಾಧಿಸುತ್ತಿರುವನು!

ಸ್ಫುಟ ಸೂಚನೆಗಳು.

೧ ಕಳೆದ ವಾರದಲ್ಲಿ ಕರ್ನಾಟಕ ಪರಿಷತ್ತಿನ ವೃತ್ತಾಂತವು ನಮ್ಮ ಕೈಸೇರಿರುವದು. ಅಧ್ಯಕ್ಷರ ಭಾಷಣದ ಮುಖ್ಯಾಂಶವನ್ನು ನಾವು ಗತಸಂಚಿಕೆಯಲ್ಲಿ ಕೊಟ್ಟಿರುವೆವು. ಹೊಸ ಸುಧಾರಣೆಯಾದರೆಯೂ ಅದ್ಯ ವಹಾರ್ಯವೋ, ಅನಿತ್ಯ ಕರವು ಅದರಿಂದ ಆದರೂ ಲಭ್ಯವಾಗುವದೇ ನಮ್ಮ ಈಗಿನ ಕರ್ತವ್ಯವೆಂದು ಅವರು ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದರು. ಹಿಂದು ವಿಶಿಷ್ಟ ಪಕ್ಷದ ಮುಖಂಡರು ಅವು ಬರೇ ತಾತ್ವಿಕ ಮತ್ತು ಶಾಸ್ತ್ರದ ದೃಷ್ಟಿಯಿಂದ ಎಷ್ಟೋ ಸಮರ್ಥನೀಯ ವಿದ್ದರೂ ಅಖಿಲ ರಾಷ್ಟ್ರೀಯ ಸಭೆಯ ನಿರ್ಣಯಕ್ಕೆ ಸರ್ವಥಾ ಹೊಂದಿಕೊಳ್ಳದು ನಮ್ಮಿಂದ ಹೇಳಲಿಕ್ಕಾಗದು. ಸುಧಾರಣಾ ಕಾರ್ಯವೆಯು ಸ್ವತಂತ್ರಯೋಗ್ಯವೋ ಅಸ್ವತಂತ್ರವೋ ಎಂಬ ಈ ಮುಖ್ಯ ವಿಷಯದ ಕುರಿತು ರಾಷ್ಟ್ರೀಯ ಪಕ್ಷಾಭಿಮಾನಿಗಳಲ್ಲಿ ತೀವ್ರ ಮತಭೇದವಿರುವದು. ಯಶಸಾಧಕಗಳನ್ನು ಹುಡುಕ್ಕೆ ಅಶಕ್ಯವಿದ್ದರೂ ಅದನ್ನು ಅವಶ್ಯವಿದ್ದಿಗೆ ಸಾಧ್ಯವಾಗುವಂತೆ ಪ್ರಯತ್ನಿಸುವದು ಈಗಿನ ನಮ್ಮ ಕರ್ತವ್ಯವೆಂದು ರಾಷ್ಟ್ರೀಯ ಪಕ್ಷದ ಬಹುಜನ ಸದಾಚಾರ ಮತವೆಂದೇ ನಮ್ಮ ಭಾವನೆಯು ರಾಜಕಾರಣದೊಳಗಿನ ಅನುಭವ, ಅಧ್ಯಯನ, ಮತ್ತು ದೂರದೃಷ್ಟಿಗಳ ಸ್ಪಷ್ಟ ಪ್ರತೀತಿಯಿಂದ ದಿ|| ಲೋಕಮಾನ್ಯರಂಥ ಮುತ್ಸದ್ದಿ ಲೋಕನಾಯಕರ ಮತವನ್ನು ನಾವು ಸ್ವೀಕರಿಸಬೇಕೆಂದರೆ ಅದೊಂದು ಧಾರ್ಮಿಕವೇ ಸರಿ. ಆದರೂ ಬರೇ ಕರ್ತವ್ಯವೆಂದು ನಾವು ನಮ್ಮ ಪ್ರಾಂತೀಯ ಮತವನ್ನು ಹೇಳಿದ್ದೇವೆ. ಇರಲಿ. ಪರಿಷತ್ತಿನ ಕಾರ್ಯಕ್ರಮವು ಮುಂದಿನ ದಿವಸಗಳ ಕರ್ತವ್ಯವಾಗಿ ಸುಧಾರಣಾ ಕಾರ್ಯವೆ, ಕರ್ನಾಟಕದ ಏಕೀಕರಣ, ದೀರ್ಘ ಪ್ರಯತ್ನ ಹೊಸ ಇತಿಹಾಸ, ಪಂಚಾಯತ ನಿವಾರಣೆ, ಮೊದಲಾದ ಈ ಠರಾವುಗಳು ಪಾಸಾದವು. ಹೊಸದಾಗಿ ಶಿಗುವ ಸುಧಾರಣ ರಾಷ್ಟ್ರಪದ್ಧತಿಯ ಹಸ್ತದ ಕುರಿತು ಅಖಿಲ ಭಾರತ ರಾಷ್ಟ್ರೀಯ ಸಭೆಯ ನಿರ್ಣಯವನ್ನೇ ಪುಷ್ಟೀಕರಿಸಿರುವದು. ಇದಲ್ಲದೆ ಸೊಲ್ಲಾಪುರದ ಪ್ರಾಂತಿಕ ಪರಿಷತ್ತಿನ ನಿರ್ಣಯದ್ವಾರೆ ಒದಗಿದ ಕಾಯಿದೆ ಕೌನ್ಸಿಲದ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷದವರು ಮಾಡತಕ್ಕ ಕೆಲಸದ ಕುರಿತು ಠರಾವಿನ ಮೇಲೆ ಬಹಳ ವಾದವಿವಾದ ನಡೆದು ಕಡೆಗೆ ಅದು ಬಹುಮತದಿಂದ ಮಂಜೂರಾಯಿತು. ಅದೇ ಪ್ರಕಾರ ಮಾಡಿ, ಬ್ರಿಟಿಷ ಕರ್ನಾಟಕದಲ್ಲಿ ಒಂದುಗೂಡಿಸಿ, ಅವುಗಳಲ್ಲಿ ಗಣ್ಯವಾದವನ್ನು ಒಂದು ಕಾಯಿದೆ ಕೌನ್ಸಿಲನ್ನು, ಒಂದು ಹೈಕೋರ್ಟನ್ನು ಹಾಗು ಒಂದು ವಿಶ್ವವಿದ್ಯಾಲಯವನ್ನು ಕೊಟ್ಟು ಒಂದು ಸ್ವತಂತ್ರ ಕರ್ನಾಟಕ ಪ್ರಾಂತವನ್ನು ನಿರ್ಮಾಣಿಸಬೇಕೆಂಬುವ ಇನ್ನೊಂದು ಮಹತ್ವದ ನಿರ್ಣಯವಾಯಿತು. ಇದನ್ನು ರಾಷ್ಟ್ರೀಯ ಪಕ್ಷ ಪ್ರಾಂತಿಕ ಪ್ರಶ್ನೆಗಳೊಡನೆ, ನಮ್ಮ ಹಳ್ಳಿಗೆ ವಿಶೇಷವಾಗಿ ಸಂಬಂಧಿಸಿರುವ ಪರ ಮತ್ತು ನಿವಾರಣೆಯ ಠರಾವು ಬಹುಮತದಿಂದ ಮಂಜೂರಾಯಿತೆಂದು ನಾವು ನಮ್ಮ ಓದುಗರಿಗೆ ತಿಳಿಸುವೆವು. ಮ. ಗಾಂಧಿ, ಶಿಕ್ಷಕ ವರ್ಗದ ಬೇರೆ ಇಬ್ಬರು ಪರಿಷತ್ತಿಗೆ ಬರುವರೆಂದು ಪಾಕೀಟಾಗಿದ್ದರೂ ಕಾರ್ಯಬಾಹುಳ್ಯದ ಮೂಲಕ ಅವರು. ಬಾರದ್ದರಿಂದ, ಜನಸಮೂಹಕ್ಕೆ ಅತ್ಯಂತ

ವಿರ ಕೆಯಾಯಿತೆ. ಇದ [illegible] ಪರಿಸ್ಥಿತಿಯಲ್ಲಿ ಬರಗಿ ಸಿದ ಮಹತ್ವದ [illegible] ಲಕ್ಷಣಗಳು ನಿಜ ವಾಗಿ ಕರ್ನಾಟಕದ ಈ ಹೋರಾಟವೇ ವಿಷಯಕ್ಕೆ ಕಲ್ಪ ನಾತೀತವಾಗಿ [illegible] ವೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಈ ತಿಂಗಳ ೧೫ ತಾರೀಖಿಗೆ [illegible] ಕಿಯ ತಿರು ಸಭೆಯಲ್ಲಿ ಬಂಗಲ [illegible] ಕೆ ದಿಕ ಸ್ಟೇಟ್ ನಾಮದಾರ [illegible] ಸಾಹೇಬರಿಗೆ ತಂತಿ ಯಿಂದ ಮಾಡಿಕೊಂಡ ಮನವಿಗೆ ಅವರು ಕಳಿಕ್ತರಂ ಮುಖಾಂತರವಾಗಿ ಈ ಕೆಳಗಿನ ಉತ್ತರವನ್ನು ದಯ ಪಾಲಿಸಿರುವರು. — "ಸರಕಾರವು ಈ ವಿಷಯ [illegible] ಕರಿತು [illegible] ಮಾಡ [illegible] ಅವರ ನಿಖ. ಲೆಯಾಗುವ [illegible] ದೆಂದು ಸರಕಾರದ ಇಚ್ಛೆ [illegible] ಲೆಯ ಅಪರಾಧ [illegible] ಅ ದೆ [illegible] ಸರಕಾರವು ಈ ವಿಷಯ ವಾಗಿ [illegible] ಮಾಡ [illegible] ಯೋಗ್ಯ ಉಪಕ್ರಮವನ್ನು [illegible] ಅವರ ಅಭಿಪ್ರಾಯವು [illegible] ದೇಶಾವನ್ನು ಒಂದು [illegible] ವ ಹಕ್ಕು [illegible] ಸರಕಾರವು [illegible] ಲೆ [illegible] ಅರ್ಹತೆ [illegible] ಯೋಗ್ಯ [illegible] ಗುವದ [illegible] ಲೆಯ ಅಪರಾಧ [illegible]

[illegible]

ನಮ್ಮ [illegible] ಪರಿಸ್ಥಿತಿಯಿಂದ ಉದ್ಭವಿಸಿದ [illegible] ಲಯಿತರು [illegible] ಸರಕಾರದ ಮುಂ ದೆ [illegible] ಯೋತ ಪರಿಪೂರ್ಣವಾಗುವಂತೆ ದಕ್ಷತೆಯಿಂದ ಉ ದ್ಯೋಗ್ಯನಡಿಸುವದೇ ನಮ್ಮ [illegible] ಕರ್ತವ್ಯ.

೩ ಮಹಾಯುದ್ಧದೊಳಗಿನ ಭೀಷಣ ಸಮಾ ಚಂಥವರನ್ನಾಗುವಂತೆ ಅನ್ನದ ರಾಶಿಯನ್ನೇ ಅಟ್ಟಿಟ್ಟ ಕುವಾಗ ಸಜ್ಜು ಬಾಬಿನದಂತಿರುವ ನಮ್ಮ ರಾಷ್ಟ್ರದಲ್ಲಿ ನಮಗೆ ದೇಶಾವನ್ನು ಅನ್ನದನ್ನಾ [illegible] ಮ ಬೇಗೆ [illegible] ಎಂತು? [illegible] ನಮ್ಮ ಗತಿಯಾಗಿದೆ. ಹೀಗಾಗಿ ನಮ್ಮ [illegible] ಕರಗನ್ನು [illegible] ಆನಕಾರವೆನ್ನಿವೆ? [illegible]

[illegible] ಮಹತ್ವ [illegible] ಇಬ್ಬರಾಗಿದೆಯ ದೊರೆತಂತೆ ಪ್ರಕಾಶವಾಗಿ [illegible] ತ್ತಿರಬೇಕೆಂದು ನಮ್ಮ ಮನೀ ಷೆಯಿದೆ. [illegible] ಅಧ್ಯಕ್ಷರ ಉಪನ್ಯಾಸದ ಭಾಷೆಯು [illegible] ವ್ಯಕ್ತಿಗಳ [illegible] ತನ್ನ [illegible] ಕರ್ತವ್ಯ [illegible] ರಾಷ್ಟ್ರೀಯ [illegible] ಅಧ್ಯಕ್ಷ [illegible] ಕೀರ್ತಿಯನ್ನು [illegible] ದೇಶದ [illegible] ಅವರ ತನ್ನ [illegible] ಹಿಡಲಾರ [illegible] ಭಾಷಾಂತರ [illegible] ನ ಸಭೆಗೆ [illegible] ಗಳೆಲ್ಲ ವನ್ನೂ [illegible] ಪಾಡಿ [illegible] ಅಧ್ಯಕ್ಷರ [illegible] ರಾಷ್ಟ್ರೀಯ [illegible] ಭಾಷಣಗಳನ್ನು [illegible] ತಮ್ಮ [illegible]

ಇಹವೃತ್ತ.

ಕುಮಟಾ— [illegible] ಯಥಾ [illegible] ಕೆ ನೇಗರಾಯಿ ಸ್ವಪ್ನ [illegible]

ಕಳೆದ ಶನಿವಾರ ದಿವಸ ಮುಂಬಯಿ [illegible] ದು ಪ್ರಕಟ [illegible] ಸುಮಾರು [illegible] ವಿರ ಅಕ್ಕಿ [illegible] ಇಲ್ಲಿ [illegible] ಯಿರುವ [illegible] ವನ್ನು [illegible] ದು ನಟ್ಟಗೆ [illegible] ಹೋಯಿತು.

ಹಳಿಯಾಳ— [illegible] ಲಾಗದ ಮೂಲಕ [illegible] ಟು ಬವಿನಿಮ [illegible]

ಕಟ್ಟಿ [illegible] ಉದ್ದೇಶವ! ಸಂಶಿಂರಕ್ಕೆ ದಯೆ ಹುಟ್ಟುವದಿಲ್ಲವೇ!

ಗೋಗ್ರಾಸ ಭಿಕ್ಷಾಮಂಡಳಿಯ ಸ್ವಯಂ ಸೇವಕ ರ ಗೋ [illegible] ಫಂಡದ ಮುಂಬಯ ವ ಕೆ! ಪದೇ ಪದೇ ಹೋದರೂ ಯಾರೂ ಆ ಕಾರ್ಯ [illegible] ನ್ನು ಕೈಕೊಂಡಿ [illegible] ದಿಲ್ಲ! ಸಭೆಯಲ್ಲಿ ಕೆಲಸವಾಡುವ ಜವಾಬದಾರಿಯನ್ನು ಹೊತ್ತುಕೊಂಡು [illegible] ಮ [illegible] ವನ್ನು ಸ್ವೀಕರಿಸುವದು ಇದೆಂಥ ನ್ಯಾಯ [illegible]!

ಅಂಕೋಲಾ— [illegible], ಕಳೆ [illegible] ತ್ತದ [illegible] ದಿನಗಳಿಂದ ಸ್ವಲ್ಪ ಮುಳೆಯಾದರೂ [illegible] ಕೆಲಸದಲ್ಲಿ [illegible] ಗದ್ದೆ [illegible] ತ್ತು [illegible] ಕೆಲಸಗಳಲ್ಲಿದ್ದ [illegible] ಕೃಷಿಗೆ [illegible] ಕಟ್ಟಿಗೆ ಇಲ್ಲದಾಗಿ ಜನರು ಪರದಾಡುತ್ತಾರೆ. ಇದರ ಕಡೆ ಅಧಿಕಾರಿಗಳು ಲಕ್ಷಕೊಡಬೇಕು.

ಈ ವಾರದಲ್ಲಿ ಎಸ್. ನೋಡಿದಕ್ಕೆ ಕಾರವಾರ [illegible] ಷತ್ತಿನ [illegible] ಚರ್ಚೆಯು [illegible] ವಿಧದಿಂದ [illegible] ಯಾದರೂ, [illegible] ಲ್ಲ ದ [illegible] ಎದುಗಿ [illegible] ತ್ತಿವೆ. [illegible] ಪ್ರತಿನಿಧಿಗಳ ಸಹಿತಿಂದ ಅಧ್ಯಕ್ಷರ ಕಡೆಗೆ ಅರ್ಜಿ ಕೊಟ್ಟಿರುವ ಸಂಗತಿ ತಿಳಿದು ಬಂದಿಲ್ಲವೋ ಸಮಾಧಾನವೆನಿಸಿಕೊಂಡರು.

೩೧ ತಿಂಗಳ [illegible] ದಿವಸ [illegible] ಎಂಬ ವಿಷಯದ ಮೇಲೆ [illegible] ಅಧ್ಯಕ್ಷತೆ [illegible] ಅವರ [illegible] ವ್ಯಾಖ್ಯಾನವಾಯಿತು.

[illegible] ಗಾ [illegible] ಇಲ್ಲಿಂದ, ಕನ್ನಡ ಶಾಲಾಮಾಸ್ತರರು [illegible] ! [illegible] ಯ ದಿವಸಗಳಲ್ಲಿ ಅವರು ಇನ್ನೇನು ಮಾಡುವರು! ಅಧಿಕಾರಿ [illegible] ಈ ಬಡ [illegible] ಹೇಳುವಿ.

[illegible] ದೂರು.

[illegible] ಸಂಪಾದಕರೇ,

ಕಳೆದ ತಾರೀಖು ೨೨ ನೇ ದಿನದ ಮುಂಬಯಿ ಸ್ಪೇಶಲ್ ಬೋಟಿಯಿಂದ [illegible] ಗೋಣಿ [illegible] 'ಬಾಂಬ' ಅಕ್ಕಿಯು ಈ ಬಂದರ ಕ್ಕೆ [illegible] ದ [illegible] ಅಕ್ಕಿಯಿಂದ, [illegible] ಕೆಲದಿವಸ [illegible] ಅಕ್ಕಿಗಳ ಮಿ ಶ್ರಣ, ಹೊತ್ತು [illegible] ಎಷ್ಟು ಹಗ್ಗವಿಯಾಗಿ [illegible] ವಾಗಿರುವದು. ಇಂಥ ಅಕ್ಕಿಯನ್ನು [illegible] ಯಲ್ಲಿ ಬಹು ಅಗ್ಗದರದಿಂದ ಸಿಗುತ್ತಿರುವದರಿಂದ [illegible] ಕೆಲ ವ್ಯಾಪಾರಸ್ಥರು ಅದನ್ನು ಇಲ್ಲಿ [illegible] ಕೊಂಡ [illegible] ತ್ತಾರೆ. ಜನರ ಆರೋಗ್ಯ ಸಂರಕ್ಷಣದ ದೃಷ್ಟಿ ಯಿಂದ ನೋಡಿದರೆ ಈ ಅಕ್ಕಿಯು [illegible] ಆರೋಗ್ಯ ನಾಶ [illegible] ಸಂಭವಿ ಸಾಗಬಹುದು. [illegible] ಅಧಿಕಾರಿಗಳು ಈ ಬಗ್ಗೆ ತಕ್ಕ ಕಾಲಕ್ಕೆ ಯೋಗ್ಯ ವ್ಯವಸ್ಥೆ [illegible] ದುವರೆಂದು ನಂಬಿದ್ದೇನೆ.

ತಮ್ಮ ವಿಧೇಯ,

ಒಬ್ಬ ವ್ಯಾಪಾರಿ.

GIBB HIGH SCHOOL.

To the Editor "Kanara News"

In connection with a remark passed by you in one of your previous issues regarding our school grants, let me inform you that in the place of the old grants of Rs 2432 plus Rs 810 i. e. Rs 3242 the new grants (recurring) recommended by Mr Hesketh, the Educational Inspector for the year 1919-1920 were Rs 3228 plus Rs 1076, i. e Rs 4304 and although the grant sum actually paid at the end of the last official year was only Rs 3242, the following reply is received from the D P I on the question:—

"The President Kanara Education Society, Kumta is informed that the full admissible grant could not be paid to the school for want of funds The defficiency in the grant will, however, be made good as far as possible shortly".

The result of the late S. L. Examination, so far as our school is concerned is as under —

	No appeared	No passed	Percentage.
From school			
Matric side	12	6	5%
Govt. Service	7	7	7 %
Ex-students	5	2	40%

N. S Kamat
Superintendent

ನೋಟೀಸು.

ಹೊನ್ನಾವರ ಸಬಜಡ್ಜ ಕೋರ್ಟ
ನಾದಾರಿ ಅರ್ಜಿ ನಂಬರ ೯/೧೯
ಅರ್ಜದಾರ ರಾಂಭಟ್ಟಾ ಗಣ್ಪಭಟ್ಟಾ ಅಗ್ರಹಾರ
ನಾದಾರಿ ಅರ್ಜಿ ನಂಬರ ೧೯/೧೯
ಅರ್ಜದಾರ ಚನ್ನಪ್ಪಾ ಚನ್ನಪ್ಪಾ ನ್ಯಾಕ ಹಳದಿಪುರ

ಈ ಲೇಖದ ಮೂಲಕ ನೋಟೀಸು ಕೊಡುವದೇನಂದರೆ —

ಸದರಹು ಅರ್ಜದಾರರಿಂದ ಧನಕೋಗಳನಿಗೆ ಸಲ್ಲತಕ್ಕ ಸಾಲಗಳ ಬಾಬತು ಚೌಕಶಿ ನಡಿಸುವ ವಿಚಾರವು ಹೊನ್ನಾವರದಲ್ಲಿ ನಮ್ಮ ಆಫೀಸಿನಲ್ಲಿ ಇದೇ ಮೇ ತಿಂಗಳ ತಾರೀಖು ೩೧ ನೇ ಸೋಮವಾರ ಆರಂಭವಾಯ್ತು ಜೂನ ತಾ ೫ ನೇ ಶನಿವಾರ ೧೯೨೦ ವರೆಗೆ ೬ ದಿವಸಗಳ ಪರಿಯಂತರ ಮಧ್ಯಾಹ್ನ ೧೨ ಘಂಟೆ ಆರಂಭವಾಯ್ತು ಸಂಜೆ ೫ ಘಂಟೆ ವರೆಗೆ ಚೌಕಶಿ ಮಾಡಲಾಗುವದು. ಧನಕೋಗಳನು ತಮ್ಮ ತಮ್ಮ ಸಾಲಗಳ ಬಾಬತು ಲೇಖೀ ವ ತೋಂಡೀ ಪುರಾವೆ ಆ ಮುದ್ದತಿನೊಳಗೆ ನಮ್ಮ ಮುಂದೆ ಹಾಜರ ಮಾಡಿ ಸಾಲಗಳು ಸಾಬೀತ ಮಾಡಬೇಕು ಸದರಹು ಮುದ್ದತ್ತಿನೊಳಗೆ ಸಾಬೀತ ಮಾಡದಿದ್ದರೆ ಅಂಥಾ ಧನಕೋರರು ದಾವೆಯನ್ನು ಬಿಟ್ಟವರೆಂದು ವ ಅಂಥಾ ಧನಕೋರ ಸಾಲಗಳು ಖೋಟಾ ಮಾಡಿ 'ಫಾಯನಲ' ಡಿವಿಡಂಡ' ಠರಾಯಿಸಲಾಗುವದು. ಸದರಹು ಅರ್ಜಿಗಳಲ್ಲಿ ಕಾಣಿಸಿದ ಧನಕೋರಿಗೆ ವ ಅರ್ಜದಾರರಿಗೆ ಸಹಾ ಈ ಕುರಿತು ಟಪಾಲದ್ವಾರಾ ಅಲಾಹಿದಾ ತಿಳಿಸಿರುತ್ತದೆ. ತಿಳಿಯುವದು.

ಹೊನ್ನಾವರ } **Shivrao R Murdeshwar**
೧೮-೫-೨೦ } Vakil, & Receiver

ಕುಮಟೆ ಪೇಟೆ ಧಾರಣೆ.

ಜಿನಸು.	ದರ
	ರೂ ಆ
ರಂಗೂನ ಪೆ. ಗೋಣ ೧ಕ್ಕೆ	೧೩—೧೩।
ಗೋದಿ ಗೋಣ ೧ಕ್ಕೆ	೧೯—೨೫
ಹುರುಳಿ ನಿಜ „	೨೫।
ಕಡಲೆ ನಿಜ ೧ಕ್ಕೆ	೧೩—೧೬॥
ತೊಗರಿಬೇಳೆ ಗೋಣ ೧ಕ್ಕೆ	೨೩—೩೦
ಹೆಸರು ಬೇಳೆ „	೧೩—೨೮
ಉದ್ದು ಹಾಗಿನಿ	೮॥—೯
ಪೋರಿಸ ಸಕ್ಕರೆ ಮಣ „	೧೩—೧೩।
ಮೆಣಸಿನ ಕಾಯಿ ಮಣ „	೬—೧೨
ಹರಳೆಣ್ಣೆ ಮಣ	೧೮
ಕೊಬ್ರಿ ಖಂಡಿ	೧೧೫—೧೨೦
ಕೊಬ್ರಿ ಖಂಡಿ ೨ ನೇ	೯೫—೯೭॥
ಹತ್ತಿಕಾಳು ಹಿ ತಿ ಖಂಡಿ	೬೦
ಕೊಬ್ರಿ ಎಣ್ಣೆ ಮಣ	೯॥
ಕೊತ್ತಂಬರಿ ಗೋಣ „	೧೪—೧೬।
ಅಟ್ಲಕಾಯಿ ಮಣ ೧ ಕ್ಕೆ	೧-೪ ೦
ಉಪ್ಪು ಗೋಣ „	೪-೫-೦
ಪೂರ್ಯಾ „	೪ ೨-೦
„ ಹಂಸ „	೨-೬ ೬
ಗಾಂವಟಿ ಬೆಟ್ಟೆ ಖಂಡಿ ೧ಕ್ಕೆ	೭೦—೭೫
„ ಚಿಕಣಿ „	೭೫—೮೫
„ ಗೋಟು „	೫೦—೫೮
ಸಿದ್ದಾಪೂರ ರಾಶಿ „	೯೫—೧೦೫
ತಿಕ „	೧೦೦—೧೧೫
ಯಲ್ಲಾಪೂರ „	೯೦—೧೦೫
ಅಡವೆ „	೭೫—೮೨
ಚಾಲಿ ಅಡಿಕೆ „	೫೦—೫೫
ಹೊಸಕಾಳುಮೆಣಸು ಖಂಡಿ೧ಕ್ಕೆ	೧೩೫—೧೭೩
ಯಾಲಕ್ಕಿ ಮಣ೧ಕ್ಕೆ ..	೬೨—೫೧

ಜಗತ್ಪ್ರಖ್ಯಾತ' ಖಾತ್ರಿದಾಯಕ!! ಬಹುಮಾನಕಾರಕ'!!

ಮುಖಜೀವನಾಮೃತ.

ಈ ಔಷಧವು ಹಲ್ಲು ಕೆಳತ, ಹಲ್ಲು ನೋಯುವ ಹಲ್ಲು ಅಲಗಾಡುವ ಹಲ್ಲುಗಳಿಂದ ರಕ್ತ ವ ಕೀವು ಸುರಿಯುತ, ಮುಖದಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ ಇದಲ್ಲದೆ ಬಾಲಗ್ರಹ, ಎಲ್ಲಾ ತರದ ಜ್ವರ ತಲೆಯು ಬೇನೆ, ವಾಂತಿ, ಹೊಟ್ಟೆಕಚ್ಚೋಣ, ನಳಗು ಳು, ಪ್ಲೇಗ, ಕಾಲರಾ, ಗುಂಟುಗಳಿಗೆ ಮತ್ತು ವಿಷಕಾರ ಪ್ರಾಣಿಗಳು ಕಚ್ಚಿದ ಕೆಳತ, ಬಾಳಂತಿಯರಿಗೆ ನಂಜು ಏರಿದರೆ ಕ ೩೦ ಪ್ರಕಾರದ ರೋಗಗಳಿಗೆ ಉಪಯೋಗಕ್ಕೆ ಬರುತ್ತದೆ.

ಕ್ರಯ ಬಾಟ್ಲಿ ೧ಕ್ಕೆ ಕೇವಲ ೦-೧೨-೦

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದೀಕ ಕಂಪನಿ,
ಕುಮಟಾ (ಎನ್ ಕೆನರಾ)

ಬಂದೂಕ ಯಾ ಸಾಮಾನು.

ನಿಮಗೆ ಹೊಸ ತಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವರು. ಮಾಹಿತಿಗೆ ಭೆಟ್ಟಿ ಆಗಿರಿ ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಸಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ಮಾರಲ್ಪಡುವವು

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ.

ತ್ವರೆಮಾಡಿರಿ! ತ್ವರೆಮಾಡಿರಿ!!

ನ್ಯೂ. ಎಂಪೋರಿಯಮ್,

"ಸ್ಟೇಶನರ್ಸ ಎಂಡ್ ಜನರಲ್ ಮರ್ಚಂಟ್ಸ."

ನಮ್ಮ ಹೊಸ ಸ್ಟಾಕು ಇದೇ ಬಂದಿದೆ ಪೋಸ್ಟ ಗಿರಾಕಿಗಳಿಗೆ ಯೋಗ್ಯ ದರದಿಂದ ಮಾಲು ಸಿಗುವದಲ್ಲದೇ ಭರಪೂರ ಕಮಿಶನ್ ಕೊಡಲಾಗುವದು. ಒಂದಾವರ್ತಿ ಆರ್ಡರ ಕೊಟ್ಟಲ್ಲಿ ಖಾತ್ರಿಯಾಗುವದು

ನ್ಯೂ. ಎಂಪೋರಿಯಮ್,
ಹೊನ್ನಾವರ (ಕಾನಡಾ)

ಸತ್ಯಮೇವ ಜಯತೇ.
(ಗುಣಬಾರದ್ದರೆ ಹಣವಾಪಸು)
ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತೆ ಕ್ಷೀಣತೆ, ಸ್ವಪ್ನದೋಷ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗಮಿಕ, (ಜಾತಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಡಿಮೆ ಆಗಿ ರೋಗ ಮುಂತಾದವು ಅತಿಶೀಘ್ರಗುಣವಾಗಿ ಶರೀರಕ್ಕೆ ನಿರೋಗತ್ವವು ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೩೦ ಗುಳಿಗೆಗಳಿಗೆ ೪ ರೂಪಾಯಿ ಟಪಾಲ ಖರ್ಚು ಬೇರೆ. ಅನುಪಾನ ಪತ್ರಿಕ ಔಷಧದ ಸಂಗಡ.

ವಿಳಾಸ— ಜಿ. ಎಲ್. ಜೋಶಿ ಕಂಪನಿ,
ಪೋಸ್ಟ— ಬನವಾಸಿ. ಉತ್ತರ ಕಾನಡಾ,

ಸತ್ಯಾರ್ಥ ಪ್ರಕಾಶಃ.

೨ ಭಾಗಗಳ ಕಿಮ್ಮತು ೧-೪ ೦

ಎಸ್. ಎಲ್ ಧಾಕಪ್ಪಾ.

ಪೋಸ್ಟ- ಶಿರಸಿ (ಉತ್ತರ ಕಾನಡಾ)

ಅತ್ಯುತ್ತಮ ವಾಚಗಳು.
ಸುಲಭ ಕ್ರಯ.

ಟಕಳ ಸಮಯ ಕರಾರ ನಡಿಯು ವಂಥಾದ್ದು. ೩ ವರ್ಷ ಗ್ಯಾರಂಟಿ.

ಮುಂಚಿನ ಬೆಲೆ ರೂ. 7-8-0

ಪೆಕಿಂಗ ... ವರೆ

ಅತಿಸುಂದರವಾದ ವಾಚು. ಸರಿಯಾಗಿ ಉಪಯೋಗಿಸುವ ...



ಮುಂಚಿನ ಬೆಲೆ ರೂಪಾಯಿ 10-0-0 ... ಈಗಿನ ಬೆಲೆ ರೂಪಾಯಿ 5-0-0

ಪೆಕಿಂಗ ಪೋಸ್ಟೇಜು ಬೇರೆ.

೩ ವಾಚುಗಳನ್ನು ಒಂದೇ ಸಲ ತರಿಸುವವರಿಗೆ ಪೇಕಿಂಗು ಪೋಸ್ಟೇಜು ಪ್ರತ್ಯೇಕ.

... ವಾಚುಗಳ ಕ್ಯಾಟಲಾಗನ್ನು ... ಬರೆಯಬೇಕು.

ಕೃಷ್ಣವಿಲಾಸ ಟ್ರೇಡಿಂಗ್ ಕಂಪನಿ,

ಗಿರಗಾಂವ, ಮುಂಬಯಿ.

KRISHNAVILAS TRADING COMPANY,

Girgaum, *BOMBAY.*

शक्तिवर्धक 'कामेश्वर मोदक.'

[illegible]

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1. ವಿಶ್ವಾಂಬಸ್:— ಹಿಂದುಸ್ಥಾನದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆ ಹಾರಿ ... ತಲೆನೋವು, ... ಗಂಟು, ಗಂಟನೋವು, ... ಸೊಂಟದ ನೋವು ... ಅರ್ಧಾಂಗವಾಯು ... ಮೇಲೆ ... ಗುಣಪಡಿಸುತ್ತದೆ. ಬಾಟ್ಲಿ 1 ಕ್ಕೆ 0-8-0

2. ... ಕಾಮೇಶ್ವರಿ ಲೇಹ:— ... ಎದೆನೋವು ... ಅಶಕ್ತಿ ... ಸೇವಿಸಿದ್ದಕ್ಕೆ ... ಸೇವಿಸುವ ಲೇಹ. ಡಬ್ಬಿ 1 ಕ್ಕೆ ... 0

3. ... :— (ಖ್ಯಾತಿ, ಗುಣ):— ... ದಿವಸಕ್ಕೊಮ್ಮೆ ... ಮೇಲೆ ... ಬಾಟ್ಲಿ 1 ಕ್ಕೆ 0-8-0.

4. ... ಗುಳಿಗೆ:— ... ಬಾಟ್ಲಿ 1 ಕ್ಕೆಯು 0-10-0

5. ... ಬಾಟ್ಲಿ 1 ಕ್ಕೆಯು 0-10-0

6. ... ದಿವಸದೊಳಗೆ ... 1 ... ಕ್ರಯ ...

7. ... ಇದರ ಸೇವನೆಯಿಂದ ... ಮುಟ್ಟಾಗುವದು, ... ಗರ್ಭ ... 1 ಬಾಟ್ಲಿ ... 1 ಬಾಟ್ಲಿ ... 2-0-0.

8. ... ಬಾಟ್ಲಿಗಳಿಗೆ 2-0-0

9. ... ದಿವ್ಯ ಔಷಧಿ. ಬಾಟ್ಲಿ 1 ಕ್ಕೆ 0-12-0

10 ... ಇದರಿಂದ 3 ದಿವಸಗಳಲ್ಲಿ ಗುಣವಾಗುವದು. ಬಾಟ್ಲಿ 1 ಕ್ಕೆ 0-6-0. 3 ಬಾಟ್ಲಿಗಳಿಗೆ 1-0-0.

11. ... ಡಬ್ಬಿ 1 ಕ್ಕೆ 0-3-0 6 ಡಬ್ಬಿಗಳಿಗೆ 1-0-0.

ಎಮ್. ... ಸೆಟ್ಟಿ ... ರಥಬೀದಿ ...

ಹೊಸ ಶೋಧ! "ಓಂ" ಹೊಸ ಶೋಧ!!

ಗುಣ ಬಾರದಿದ್ದರೆ ಹಣ ವಾಪಸು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ... ಮಿಶ್ರವಾದ ಅನುಭವಿಕ ದೇಶೀವೈದ್ಯರ ... ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ... ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ, ಸ್ವಪ್ನಾವಸ್ಥೆಯು ಆಗುವದಿಲ್ಲ, ರಕ್ತಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯು ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚೆನ್ನಾಗಿ ಹಸಿವು ಹತ್ತುವದು. ಉಷ್ಣದಿಂದ ... ವಾದ ಶರೀರಕ್ಕೆ ಯಾವ್ಯಾವ ... ಗುಣಗಳು ಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ... ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ... ಬರುವದು. ಸ್ತ್ರೀಯರು ಸೇವಿಸಿದಲ್ಲಿ ... ಸ್ತ್ರೀಯರ ರೋಗಗಳು ... ಗರ್ಭಧಾರಣೆಗೆ ಯೋಗ್ಯರಾಗುವರು. ... ಒಂದು ಡಬ್ಬಿ ಪಾಕದಿಂದ ... ಮೂರು ಡಬ್ಬಿ ಪಾಕದಿಂದ ... ಗುಣ ಬರುವದು. ... ನೋಡಿರಿ.

ಬೆಲೆ ಅಂಚೇ ಹಾಸಲು ಸಹ ... ಡಬ್ಬಿಗಳಿಗೆ ... ಮೇಲೆ ... ಡಬ್ಬಿ ... ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟವಾಗಿ ಬರೆಯಬೇಕು.

ಪತ್ತೆ— ... ಬ್ರದರ್ಸ ಮತ್ತು ಕಂಪನಿ, ... ಪೋಸ್ಟ ... ಬೆಂಗಳೂರು.

ಗ್ಯಾಸ ದೀಪಗಳು

ಬಾಡಿಗೆಗೆ ಇಟ್ಟಿರುತ್ತೇವೆ.

ಈ ದೀಪಗಳು ... ಸಮಾರಂಭಗಳಲ್ಲಿಯೂ ... ಉಪಯೋಗಿಸಿದರೆ ... ಬೆಳಕು ...

... ತರಿಸಿಕೊಳ್ಳಬಹುದು.

ಪುರುಷೋತ್ತಮ ... ಗೋವಿಂದ ... ಕುಮಟಾ.

Printed and published by Krishnarao Keshav Shenvi, at his **Star of Kanara Press, Kumta.**

Reg. No B-1270

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೨.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಆಗಾವು ರೂಪಾಯಿ 2-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-13-0.

ಬಿಡಿ ಸಂಚಿಕೆಗೆ 0-1-0.

परोपितहितकर्ता प्रेष्यतां याति लोके अनपरहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:-

ಕನ್ನಡ, ಇಂಗ್ಲಿಷ ಸ್ಮಾಲ ಪೈಕಿನ(೧೫ ಎಮ್‌ಉದ್ದ) ೫ ಸಾಲುಗಳ ವರೆಗೆ ರೂ. 1-3-0. ಆಮೇಲೆ ಪ್ರತಿ ಸಾಲಿಗೆ 0-2-0.

ಹೆಚ್ಚಿಗೆ ಸಾಲು ಎಷ್ಟು ಮುಕ್ಕರಿರುವದೋ ಆ ಸಾಲಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೩ ಮಾಹೆ ಜೂನ ಸನ್ ೧೯೩೦ ನೇ ಇಸವಿ.]—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ನೀರು ಸುರಿಯುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಂಡಿತ ಗುಣವಾಗುತ್ತದೆ; ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆ 1ಕ್ಕೆ 0-12-0; 3 ಕ್ಕೆ 2-0-0. ದೊಡ್ಡ ಸೀಸೆಗೆ 1-8-0.

ಚಂದನಾಸವ.

ಮೂತ್ರ ಕೃಚ್ಛ್ರ ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೋಯ್ಯುವಾಗ್ಗೆ ಉರಿ, ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೋಹರೋಗವನ್ನು ಗುಣ ಮಾಡುತ್ತದೆ.

ಬಾಟ್ಲಿ 1 ರ ಕ್ರಯ 1-8-0.
ಬಾಟ್ಲಿ 3 ರ ಕ್ರಯ 4-0-0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಿ ಅತಿರೇಖವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃದ್ರೋಗ, ಬಿಳಿಪ್ರದರ (ಬಿಳಿಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ. 2/-.

ಚಿನ್ ಚಿನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಚಳಕು, ಘಾಯ, ಚೇಳು ಕಡಿತ ತಕ್ಷಣ ಗುಣ. ಬೆಲೆ ಸುಲಭ, ಗುಣ ಅಧಿಕ. ಡಬ್ಬಿ ೧ ಕ್ಕೆ ೩ ಆಣೆ. ಹೆ. ಖ. ಆಲಾಯದ ಕೆಟಲಾಗಿಗೆ ಬರೆಯಿರಿ. ವಿಳಾಸ:—

ಮನೋಲ್ಲಾಸಿನಿ ಕಂಪನಿ.

7. ಕರ್ಜಗಿ, ಪಶ್ಚಿಮ ಕಾನಡಾ.

MALARIANA COMPANY.

THAMPANKATTA, MANGALORE

ಮಲೇರಿಯಾನ:— ಮಲೆಜ್ವರ, ಚಳಿಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು. 8 ಔನ್ಸಿನ ಬಾಟ್ಲಿ 1ಕ್ಕೆ ರೂ. 1-8. ½ ಡಜನಿಗೆ ರೂ. 8-8; 1 ಡಜನಿಗೆ ರೂ. 16-8.

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರವದ್ದು. 25. 60 ಮತ್ತು 100 ಮಾತ್ರೆಗಳಿಗೆ ಆಣೆ 8. ರೂ. 1. ಮತ್ತು ರೂ. 8-1.

ರಿವುಮೊ ಬಾಮು: ತಲೆಶೂಲೆ, ಕಟಿವಾತ, ಇತರ ಎಲ್ಲಾ ನೋವುಗಳಿಗೆ. ಕ್ರಯ ಡಬ್ಬಿ 1ಕ್ಕೆ ಆ. 8. 1 ಡಜನಿಗೆ ರೂ. 5-4-0.

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ. 5. ½ ಡಜನಿಗೆ ರೂ. 1-10. 1 ಡಜನಿಗೆ ರೂ. 3.

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1.	2.	4.	ಔನ್ಸ್ 1.	2.	4.
ಆ. 2½	ಆ. 3½	ಆ. 6.	ಆ. 11.	ರೂ. 1-4.	ರೂ. 2-4.

ದೃಷ್ಟಿ ಚಕ್ರಗಳು.

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಕೊಡ್ಡರೊಡನೆ ಪಕ್ಕಾ ತರಬೇತಾಗಿ ಪ್ರತಿಯೊಬ್ಬರ ದೃಷ್ಟಿಗೂ ತಕ್ಕುದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ. ಇಲ್ಲಿ ರೋಲ್ಡ ಗೋಲ್ಡ ನಿಕ್ಕಲಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ, ಇತರ ಎಲ್ಲಾ ಸಾಲುಗಳೂ ದೊರೆಯುವವು. ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹಾಕುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ಕಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪನಿ,
7. ಮಂಗಳೂರು.

ಗುರುಪ್ರಸಾದಿಕ ಔಷಧಿ.

ಗುರುಕೃಪಾ— ಬಹಳವಾಡಿ ಯಾವತ್ತು ರೋಗಗಳ ಮೇಲೆ ಒಂದೇ ಖಾತ್ರಿ ಲಾಯಖ ಔಷಧ. ಮುಖ್ಯರೋಗ, ಜ್ವರ, ಅತಿಸಾರ, ಸಂಗ್ರಹಣಿ, ಹೊಟ್ಟೆಕಡಿತ, ದಮ್ಮು, ಶ್ವಾಸ, ನ್ಯೂಮೋನಿಯಾ, ವಾತವಿಕಾರ, ಹಡದಬೇನೆ, ದುರ್ಗಂಧನಾಶನ, ತಲೆನೋವು, ಹುಡುಗರ ಯಾವತ್ತು ರೋಗಗಳು. ಈ ಯಾವತ್ತೂ ರೋಗಗಳಿಗೆ ಈ ಔಷಧವು ಗುಣವನ್ನುಂಟು ಮಾಡುತ್ತದೆ. ವಿಶೇಷ ಮಾಹಿತಿ ಔಷಧದ ಸಂಗಡ. ಕಿಮ್ಮತ ೧ ತೊಲೆ ಬಾಟ್ಲಿಗೆ ೨ ರೂಪಾಯಿ, ½ ತೊಲೆ ಬಾಟ್ಲಿಗೆ ೮ ಆಣೆ.

ಜರದ ಚೂರ್ಣ:— ಪರದೇಶಿ ಮುಸ್ಲೀವೇಶಿ ಜ್ವರದ ಮೇಲಿನ ಔಷಧಕ್ಕಿಂತ ಇದು ಉತ್ತಮ ಇದೆ. ಡಾಕ್ಟರ, ಹಕೀಮ, ವೈದ್ಯ, ಇವರು ಅನುಭವ ನೋಡಿದರೇನು. ಸ್ವಾನುಭವ ಇದೇ ಸರ್ಟಿಫಿಕೇಟು. ಯಾವತ್ತು ಜ್ವರದ ಮೇಲೆ ಒಂದೇ ಪುಡಿಯಲ್ಲಿ ತಪ್ಪದೇ ಗುಣವಾಗುತ್ತದೆ. ಕ್ರಯ ೩ ಆಣೆ. ತಪಾಕ ಒಂದು ಪುಡಿಗೆ ೮ ಆಣೆ.

ವಾತಶತ್ರು:— ಯಾವತ್ತು ಬಗೆಯ ವಾಯುವಿನ ಮೇಲೆ. ೧ ತೊಲೆಗೆ ಕ್ರಯ ೧ ರೂಪಾಯಿ.

ಸೂರ್ಯಪುಟಲೋಹ ಭಸ್ಮ:— ಪರದೇಶಿ ಲೋಹಕ್ಕಿಂತ ಇದು ಉತ್ತಮ ಇದೆ. ಅನುಭವ ಇದ ಮೇಲೆ ಖಾತ್ರೀ ಆಗೀತು. ೧ ತೊಲೆಗೆ ಕ್ರಯ ೩ ರೂಪಾಯಿ.

ಸುಖಶಾಂತಿ ತೈಲ:— ಈ ಎಣ್ಣೆಯು ಸುಗಂಧವಿದ್ದು ಗುಣಕಾರಕ. ಇರುತ್ತದೆ. ತಲೆಗೆ ತಿಕ್ಕಲಾಗಿ ಸಂತೋಷ ಮೆಂದುವಿನ ವಿಕಾರ ಹೋಗುತ್ತದೆ. ಒಂದು ಬಾಟ್ಲಿಗೆ ೬ ಆಣೆ.

ನಪುಂಸಕತ್ವಾರಿ ತೈಲ:— ನಪುಂಸಕತ ಇಂದ್ರಿಯ ಶಿಥಿಲತೆಯು ಹೋಗುತ್ತದೆ. ಕಿಮ್ಮತ್ತು ೧ ತೊಲೆಗೆ ೨ ರೂಪಾಯಿ.

ಮುಖ್ಯಸಿ ಸುವಾಸಿಕ ಔಷಧಿ ಸಾಲೆಪುಡಿ— ಈ ದೇಶದೊಳಗಿನ ಯಾವತ್ತು ಸಾಲೆಪುಡಿಕ್ಕಿಂತ ಗುಣದಲ್ಲಿ ಶ್ರೇಷ್ಠವಿದೆ. ಕಿಮ್ಮತ ೧ ಬಾಟ್ಲಿಗೆ ೫ ಆಣೆ.

ನಮ್ಮಲ್ಲಿ ವಜ್ರಕ್ಷಾರ, ಬಾಲಗ್ರಹ ಸ್ತ್ರೀಯರ ರೋಗ ವಿನಾಶಕ, ನಾಗವಟಿ ವಗೈರೆ ಔಷಧಗಳು ಸಿಗುವವು. ಫೋಸ್ಟ್ ಖರ್ಚು ಬೇರೆ.

ಪತ್ತೆ— ನವಲರಾಮ ಗಣೇಶರಾವ ಶಾಸ್ತ್ರಿ ಮತ್ತು ಔಷಧ ವ್ಯಾಪಾರಿ.

ಅಥಣಿ, ಜಿಲ್ಹಾ ಬೆಳಗಾಂವ.

ಮೊದಲನೇ ಕರ್ನಾಟಕ ಪರಿಷತ್ತು.

ಭಾಷಾನುರೋಧ ಪ್ರಾಂತರಚನೆ.

ದಿ| ಬ| ವ್ಹಿ. ಪಿ. ಮಾಧವರಾಯರ ಭಾಷಣ.

ಈಗಿನ ಸುಧಾರಣೆಯ ಯೋಜನೆಯನ್ನು ರದ್ದುಪಡಿಸಿ, ಮತ್ತೊಂದು ಚಲೋ ಯೋಜನೆಯನ್ನು ನಮಗೆ ಮಾಡಿ ಕೊಟ್ಟರೆ ಭಾಷಾನುರೋಧವಾಗಿ ಪ್ರಾಂತಗಳನ್ನು ರಚಿಸುವದೇ ಅದರ ಮುಖ್ಯ ಅಂಗಗಳಲ್ಲಿ ಒಂದಾಗುವದು. ಯಾವದೊಂದು ಜನಾಂಗದವರು ಒಂದೇ ಭಾಷೆಯನ್ನಾಡುತ್ತಾರೆಂದು ಹೇಳಿದ ಕೂಡಲೆ, ಅವರ ವಾಙ್ಮಯ ಅವರ ಪೂರ್ವಪರಂಪರೆ, ಅವರ ಸಂಸ್ಕೃತಿ ಇವೆಲ್ಲವೂ ಒಂದೇ ಇರುತ್ತವೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ನಾಗರಿಕತ್ವದ ಹಕ್ಕುಗಳೂ, ಜವಾಬದಾರಿಗಳೂ ಯಾವವೆಂಬದನ್ನು ಜನರಿಗೆ ತಿಳಿಸಿ ಹೇಳಲಿಕ್ಕೂ, ಮತಗಳೂ ಪಂಥಗಳೂ ಭಿನ್ನವಿದ್ದಾಗ್ಯೂ ನಾಗರಿಕತ್ವವು ಭಿನ್ನವಿರದೆ ಒಂದೇ ಇರುತ್ತದೆಂಬ ಭಾವನೆಯನ್ನು ಜನರಲ್ಲಿ ಹುಟ್ಟಿಸಲಿಕ್ಕೂ ಭಾಷೆಯು ಪ್ರಬಲವಾದ ಸಾಧನವಿರುತ್ತದೆಂಬುದನ್ನು ಸಿದ್ಧಮಾಡಲಿಕ್ಕೂ ಇಂಥ ಪರಿಷತ್ತುಗಳಿಂದ ಒಳ್ಳೇ ಉಪಯೋಗವಾಗುತ್ತದೆ. ಇಲ್ಲದೆ ಭಾಷಾನುರೋಧವಾಗಿ ದೇಶವನ್ನು ವಿಭಾಗಿಸುವದು ಎಷ್ಟು ಅವಶ್ಯವಾಗಿರುತ್ತದೆಂಬದು ಸಹ ಇಂಥ ಪರಿಷತ್ತುಗಳನ್ನು ಕೂಡಿಸುವದರಿಂದ ಚನ್ನಾಗಿ ವ್ಯಕ್ತವಾಗುತ್ತದೆ.

೧೯೧೭ ನೇ ಇಸ್ವಿಯ ಕೊನೆಯ ಸುಮಾರಕ್ಕೆ

ಮಹಾತ್ಮಾ ಗಾಂಧಿಯವರು

ಕೈಗೆತ್ತಿದ ಪ್ರಚಂಡವಾದ ಅರ್ಜಿಗೆ ಸಹಿಗಳನ್ನು ದೊರಕಿಸುವದಕ್ಕಾಗಿ, ನಾನು ತಂಜಾವರ ಜಿಲ್ಲೆಗಳ ಹಳ್ಳಿಗಳಲ್ಲಿ ಸಹ ತಿರುಗಿದೆನು. ಮತ್ತು ಮುಂದೆ ಅನೇಕ ಸ್ಥಳಗಳಿಗೆ ಸಾರ್ವಜನಿಕ ಸಭೆಗಳಿಗಾಗಿ ಹೋಗಿರುವೆನು. ಆಗ ನನಗೆ ಪ್ರತ್ಯಕ್ಷವಾಗಿ ಬಂದ ಅನುಭವದ ಮೇಲಿಂದ ಜನಪ್ರಿಯ ಈ ಬಗೆಯ ಚಳವಳಿಯು ನಿಜವಾಗಿಯೇ ಹಬ್ಬಿರುವದೆಂಬುದನ್ನು ನಾನು ಸಂತೋಷದಿಂದ ಹೇಳಬಲ್ಲೆನು. ಈ ರೀತಿಯಾಗಿ ಒಬ್ಬ ಸಾಮಾನ್ಯ ಜನರಿಗೆ ಕೂಡ ಈ ವಿಚಾರಗಳು ಹಬ್ಬುವದು ಹೇಗೆ ಶಕ್ಯವಾಯಿತು? ಅವರೆಲ್ಲರ ಭಾಷೆಯು ಒಂದೇ ಇದ್ದುದರಿಂದಲ್ಲವೇ? ಧಾರ್ಮಿಕ ವಿಷಯಗಳು, ಆಚಾರ ವಿಷಯಕ ಸಂಗತಿಗಳು, ಸಾಮಾಜಿಕ ವಿಷಯಗಳು, ಜನರ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಲಿಕ್ಕೆ

ದೇಶಭಾಷೆಯೇ ಕಾರಣವು.

ಅದೇ ಮೇರೆಗೆ ದೇಶಭಾಷೆಯಲ್ಲಿ ಉಪನ್ಯಾಸಗಳನ್ನು ಕೊಡುವದರಿಂದ ರಾಜಕೀಯ ವಿಷಯಗಳೂ ಜನರ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸುವದಕ್ಕೆ ಅನುಕೂಲವಾಗುತ್ತದೆ. ಸ್ವರಾಜ್ಯವು ಈಗ ಸಕಲ ಜನರಿಗೆ ಉತ್ಸಾಹಜನಕ ವಿಷಯವಾಗಿದೆ. ಜನರು ಹರಿಕೀರ್ತನೆಗಳನ್ನು ಅತ್ಯಂತ ಉತ್ಸುಕತೆಯಿಂದ ಆಲಿಸುವಂತೆ ಈ ಸ್ವರಾಜ್ಯ ವಿಷಯಕ ಉಪನ್ಯಾಸಗಳನ್ನಾಲಿಸುವದಕ್ಕೆ ಉತ್ಸುಕತೆಯುಳ್ಳವರಾಗಿರುತ್ತಾರೆ. ಹಳ್ಳಿಹಳ್ಳಿಗಳಲ್ಲಿ ಕೂಡ, ಜನರು ಒಟ್ಟುಗೂಡಿ ತಮಗೆ ಪ್ರಿಯರಾದ ದೇಶಭಕ್ತರನ್ನು ಕರೆಸಿಕೊಂಡು ತಮ್ಮ ಊರುಗಳಲ್ಲಿ ಸಾರ್ವಜನಿಕ ಸಭೆಗಳನ್ನು ಕೂಡಿಸುತ್ತಾರೆ. ಊರ ಬೀದಿಗಳನ್ನು ಗುಡಿಗಳಿಂದಲೂ, ತಳಿರುತೋರಣಗಳಿಂದಲೂ, ಪತಾಕೆಗಳಿಂದಲೂ ಸಿಂಗರಿಸಿ, ಛತ್ರಚಾಮರಾದಿ ವೈಭವದೊಡನೆಯೂ, ವಾದ್ಯದೊಡನೆಯೂ ಪುರಜನರೆಲ್ಲರೂ ತಮ್ಮ ಸ್ವಾಮಿಗಳನ್ನು ಇದಿರುಗೊಳ್ಳುವಂತೆ ಈ ದೇಶಭಕ್ತರನ್ನು ಇವರು ಬಲು ವಿಜೃಂಭಣೆಯಿಂದ ಇದಿರುಗೊಳ್ಳುತ್ತಾರೆ. ಉಚ್ಚಸ್ಥಾನದ ಬಲಿಷ್ಠರ ಅಧಿಕಾರವನ್ನೂ, ಮರ್ಯಾದೆಯನ್ನೂ ಉಳಿಸಿಕೊಳ್ಳುವ ಪ್ರಶ್ನವು ಹೊರಟಿರುವದರಿಂದ ಪೋಷಾಸ್ತ್ರೀಯರು ಕೂಡ ಈ ದೇಶಭಕ್ತರ ಮುಖಾವಲೋಕನಕ್ಕಾಗಿ ಹೊರಗೆ ಬರಹತ್ತಿದ್ದಾರೆ.

ಇದೆಲ್ಲ ಏತರ ಪರಿಣಾಮವು?

ಉಪನ್ಯಾಸಕರು ದೇಶಭಾಷೆಗಳಲ್ಲಿ ಭಾಷಣವನ್ನು ಮಾಡುವದರಿಂದಲೇ ಅಲ್ಲವೇ? ಕಾಯಿದೆಕೌನ್ಸಿಲ್ಲ ಗಳಲ್ಲಿ ಏನು ನಡೆದಿದೆಂಬುದು ಸಾಮಾನ್ಯ ಜನರಿಗೂ ತಿಳಿದು ಬರಬೇಕಾದರೆ ಮತ್ತು ಅವರು ರಾಜಕೀಯ ವಿಷಯಗಳಲ್ಲಿ ಮನಸ್ಸು ಹಾಕಿ ಯೋಗ್ಯವಾಗಿಯೂ ದೇಶಕ್ಕೆ ನಿಜವಾದ ಕಲ್ಯಾಣವಾಗುವಂತೆಯೂ ತಮ್ಮ ಮತಗಳನ್ನು ಕೊಡಬೇಕಾದರೆ ಕಾಯಿದೆ ಕೌನ್ಸಿಲ್ಲ ಗಳಲ್ಲಿಯ ಕಾರ್ಯಕ್ರಮಗಳೆಲ್ಲವೂ ಆಯಾ ಪ್ರಾಂತಗಳ ದೇಶಭಾಷೆಯಲ್ಲಿ ನಡೆಯುವದು ಅತ್ಯಂತ ಅವಶ್ಯಕವಾದ ಸಂಗತಿಯಾಗಿದೆ. ಹೀಗಾದರೆ ಮಾತ್ರ ನಮಗೆ ನಿಜವಾದ ಪ್ರಜಾಪ್ರತಿನಿಧಿ ಸತ್ತಾತ್ಮಕ ಸರಕಾರವು ದೊರೆದಂತಾಗುತ್ತದೆ. ಅಂದರೇನೇ ನಾವು ಅಲ್ಪಸಂಖ್ಯಾಕರ ರಾಜಸತ್ತೆಯ ಕೈಯೊಳಗಿಂದಲೂ ನಿರಂಕುಶ ರಾಜಸತ್ತೆಯ ಕೈಯೊಳಗಿಂದಲೂ ಬಿಡುಗಡೆ ಮಾಡಿದಂತಾಗುತ್ತದೆ.

ಒಂದಾನೊಂದು ಕಾಲವು ಇದ್ದಾಗ ಉಂಟಾದ ಕೋಲಾಹಲವು, ತದನಂತರ ಆದ ಆ ಪ್ರಾಂತದ ಪುನರ್ಘಟನೆ, ಜನಸಾಮಾನ್ಯರು ಧರ್ಮಾಗಿ ಪ್ರಾಂತಗಳನ್ನು ರಚಿಸಬೇಕೆಂಬ ವಿಚಾರವನ್ನು ಮುಂದೆತಂದವು. ಅನಂತರ ಆಂಧ್ರರು ಈ ವಿಷಯದಲ್ಲಿ ತಮಗೊಂದು ಪ್ರತ್ಯೇಕ ಪ್ರಾಂತವು ಇರುವದು ಯೋಗ್ಯವೂ ಅವಶ್ಯವೂ ಎಂಬುದನ್ನು ಖಂಡಿತವಾಗಿ ಸಿದ್ಧಮಾಡಿ ತೋರಿಸಿದ್ದಾರೆ. ರಾಷ್ಟ್ರೀಯ ಸಭೆಯೂ ಅವರ ಹಕ್ಕನ್ನು ಈ ಮಾತಿನಲ್ಲಿ ಮಾನ್ಯಮಾಡಿದೆ. ಸರಕಾರವೂ ಅದನ್ನು ಮಾನ್ಯಮಾಡುವ ಸ್ಪಷ್ಟವಾದ ಲಕ್ಷಣಗಳು ತೋರುತ್ತಿವೆ. ಈಗಿನ ಹೊಸ ಸುಧಾರಣೆಯ ಕಾಯಿದೆಯಲ್ಲಿ ಈಗಿನ ದೊಡ್ಡ ದೊಡ್ಡ ಇಲಾಖೆಗಳು ಹಿಂದಿನ ಸ್ಥಾನ ಸರಕಾರದ ಕೆಳಗೆ ಸ್ವತಂತ್ರವಾದ ಪ್ರಾಂತಗಳಾಗಿ ಇದ್ದರೂ ಇಲಾಖೆಗಳ ಗಡಿಗಳೂ ಆ ಸರಕಾರಗಳ ರಚನೆಗಳೂ, ಯಾವದೇ ಒಂದು ಸಮಂಜಸವಾದ ತತ್ವಕ್ಕನುಸರಿಸಿ ಗೊತ್ತುಮಾಡಲ್ಪಡದೆ, ಐತಿಹಾಸಿಕ ಕಾರಣಗಳ ಮೂಲಕ ಸಿಕ್ಕಸಿಕ್ಕಂತೆ ಮಾಡಲ್ಪಟ್ಟವೆ. ಅವು ಅಲ್ಲ ಕೆಲವೊಂದು ಕಾರಣಗಳಿಂದ ಜನರ ಆಗಲಿ ಆಚಾರ ಆಗಲಿ, ಯಾವ ಬಗೆಯ ತತ್ವವೂ ಅದರಲ್ಲಿ ಕಂಡುಬರುವದಿಲ್ಲ. ಇದಕ್ಕೆ

ಕಾನಡಾ ಜಿಲ್ಲೆಯೇ ಉದಾಹರಣೆ.

ಯು ಇದು ಮೊದಲು ಒಂದು ಜಿಲ್ಲೆಗೆ ತಕ್ಕಷ್ಟು ಕ್ಷೇತ್ರವುಳ್ಳದ್ದಾಗಿ ಒಂದೇ ಕಡೆಗೆ ಇತ್ತು. ಆದರೆ ಅಲ್ಲಿಯ ಜನರ ಹಿತದ ಕಡೆಗೆ ಎಳ್ಳಷ್ಟಾದರೂ ಲಕ್ಷ್ಯಕೊಡದೆ ಅದು ಇಬ್ಭಾಗವಾಗಿ ಮಾಡಲ್ಪಟ್ಟು, ಮದ್ರಾಸ ಇಲಾಖೆಯಲ್ಲಿದ್ದ ಜನರಿಗೆ ಅಹಿತವಾಗುವಂತೆ ಅದರದೊಂದು ತುಂಡು, ಮುಂಬಯಿ ಇಲಾಖೆಗೆ ಜೋಡಿಸಲ್ಪಟ್ಟದೆ. ಹೀಗೆ ಮಹಾರಾಷ್ಟ್ರ ದೇಶವು ಮೂರು ತುಂಡಾಗಿದೆ. ಒಂದು ನಿಜಾಮುಸಾಹೇಬರಿಗೆ, ಮತ್ತೊಂದು ಮಧ್ಯಪ್ರಾಂತಕ್ಕೆ, ಮೂರನೇದು ಮುಂಬಯಿ ಇಲಾಖೆಗೆ ಸೇರಿದೆ. ತೆಲಗ ದೇಶದ ಪಾಡಾದರೂ ಇದೇ. ನಡುನಡುವೆ ಬೇರೆ ಬೇರೆ ಭಾಷೆಯನ್ನಾಡುವ ಜನರ ಅನೇಕ ಚಿಕ್ಕದೊಡ್ಡ ಸಂಸ್ಥಾನಗಳ ಶ್ರೇಣಿಗಳು ಹಚ್ಚಲ್ಪಟ್ಟಿರುವದರಿಂದಂತೂ, ವ್ಯವಸ್ಥೆಯಲ್ಲಿ ಮತ್ತಿಷ್ಟು ಅನವಸ್ಥೆಯುಂಟಾಗಿದೆ. ಇದರಲ್ಲಿ ಏನೂ ಹೇಳುತಂತಿಲ್ಲದಂತೆ ಪ್ರಾಂತಗಳು ಸಿಕ್ಕ ಸಿಕ್ಕ ಹಾಗೆ ರಚಿತವಾಗಿವೆ. ಹಲಕೆಲವು ಕಡೆಗೆ ಮಾತ್ರ ಪ್ರಜೆಗಳ ಜಾತಿ, ಧರ್ಮ, ಭಾಷೆ ಮೊದಲಾದವುಗಳು, ರಾಜರ ಜಾತಿ, ಧರ್ಮ, ಭಾಷೆಗಳಂತೆಯೇ ಇವೆ. ಆದರೆ ಹೀಗಿರದಿದ್ದ ಸ್ಥಿತಿಯೇ ಬಹಳ ಕಡೆಗೆ. ಮೈಸೂರು, ತ್ರಾವಣಕೋರ, ಕೋಚಿನ ಮತ್ತು ರಜಪೂತಸ್ಥಾನದ ಸಂಸ್ಥಾನಗಳು ಮೊದಲನೇ ವರ್ಗದ ಉದಾಹರಣೆಗಳು. ಕೊಲ್ಹಾಪೂರ, ಬಡೋದೆ ಇಂದೂರ ಮೊದಲಾದ ಮಹಾರಾಷ್ಟ್ರ ಸಂಸ್ಥಾನಗಳು ಎರಡನೇ ವರ್ಗದ ಉದಾಹರಣೆಗಳು. ಆದುದರಿಂದ ಈಗೀಗ ಪ್ರಾರಂಭವಾಗಿರುವ ರಾಷ್ಟ್ರೀಯ ಪುನರ್ಘಟನೆಯಲ್ಲಿ ತಮ್ಮ ಪ್ರಾಂತವು ಅಥವಾ ತಮ್ಮ ಜನರು ಇಂಥದೊಂದು ಸ್ಥಾನವನ್ನೇ ಪಡೆಯುವರೆಂದು ಖಂಡಿತವಾಗಿ ಹೇಳುವದು ಸಾಹಸದ ಮಾತೇ ಸರಿ. ಈ ಪುನರ್ಘಟನೆಯು ಸ್ಥಿರವಾದದ್ದೂ ಶಾಶ್ವತವಾದದ್ದೂ ಆಗಬೇಕಾದರೆ, ಧರ್ಮ, ಭಾಷೆ, ಸಂಸ್ಕೃತಿ ಇವಂತಾದ ಸ್ವಾಭಾವಿಕವಾದ ಸಂಬಂಧಗಳನ್ನು ಲಕ್ಷ್ಯದಲ್ಲಿ ತರಲೇ ಬೇಕು. ಹಾಗೆ ಮಾಡದಿದ್ದರೆ ಏನಾಗಬಹುದೆಂಬುದಕ್ಕೆ ರಕ್ತದ ಕಾಲುವೆ ಹರಿಯುತ್ತಿರುವ ಈಗಿನ ಯುರೋಪಖಂಡವೇ ಸಾಕ್ಷಿಯು.

ಈ ವಿಷಯದಲ್ಲಿ ಮತ್ತೂ

ಒಂದು ತೊಂದರೆಯುಂಟು.

ಅದೇನಂದರೆ ಈ ಮೇಲ್ಕಾಣಿಸಿದ ಜಾತಿ, ಧರ್ಮ, ಭಾಷೆ, ಹಾಗು ಸಂಸ್ಕೃತಿ ಈ ನಾಲ್ಕೂ ಸಂಗತಿಗಳು ಒಂದೇ ಇದ್ದವುಳ್ಳ ಜನಾಂಗವು ಹಿಂದುಸ್ಥಾನದಲ್ಲಿ ಈಗ ಒಂದೂ ಇಲ್ಲ. ಈ ದೇಶದ ಹಿಂದಿನ ಇತಿಹಾಸ ನೋಡಿದರೆ ಈ ಪ್ರಕಾರದ ಜನಾಂಗಗಳಾಗುವದು ಮುಂದೆ ಸಹ ಅಶಕ್ಯವೇ ಆಗಿದೆ. ಆದರೆ ಮುಸಲ್ಮಾನರು ಈ ದೇಶಕ್ಕೆ ಬರುವ ಪೂರ್ವದಲ್ಲಿ ಮಾತ್ರ ದೇಶವೆಲ್ಲವೂ ತುಸು ಹೆಚ್ಚು ಕಡಿಮೆಯಾಗಿ ಭಾಷೆಗೆ ಅನುರೋಧವಾಗಿಯೇ ವಿಭಾಗಿಸಲ್ಪಟ್ಟಿತ್ತೆಂಬುದನ್ನು ಕೂಡ ಅದೇ ಇತಿಹಾಸವೇ ನಮಗೆ ಹೇಳುತ್ತದೆ. ದಕ್ಷಿಣ ಹಿಂದುಸ್ಥಾನದಲ್ಲಿ ಉತ್ತರಕ್ಕೆ ಗುಜರಾಥ ಮಹಾರಾಷ್ಟ್ರ, ಮತ್ತು ಆಂಧ್ರ ಪ್ರಾಂತಗಳಿದ್ದವು. ದಕ್ಷಿಣಕ್ಕೆ ಕರ್ನಾಟಕ, ದ್ರವಿಡ, ಮಲಯಾಳ ಪ್ರಾಂತಗಳಿದ್ದವು. ಇವುಗಳಲ್ಲಿ ಪ್ರತಿಯೊಂದು ಪ್ರಾಂತವು ಸ್ವತಂತ್ರ ಆಚಾರ ವಿಚಾರ, ಹಾಗು ಸ್ವತಂತ್ರ ಸಂಪ್ರದಾಯಗಳುಳ್ಳ ಸುಸಂಘಟಿತವಾದ ಪ್ರತ್ಯೇಕವಾದ ಸಮಾಜವೇ ಆಗಿತ್ತು. ಇದಕಾರಣ ಈ ಬಗೆಯ ಸ್ವಾಭಾವಿಕ ಸಂಬಂಧಗಳು ಆದಷ್ಟು ಮಟ್ಟಿಗೆ ಉಳಿಯುವಂತೆಯೂ, ಬೆಳೆಯುವಂತೆಯೂ ಪ್ರಯತ್ನಿಸತಕ್ಕದ್ದು. ಇಂದಿಲ್ಲ ನಾಳೆ, ವಂಶದಿಂದಲೂ, ಭಾಷೆಯಿಂದಲೂ, ಸರ್ವಪ್ರಕಾರದಿಂದಲೂ, ಒಂದೇಯಾಗಿ ಹಿಂದುಸ್ಥಾನದ ರಾಷ್ಟ್ರಪುರುಷರ ಶರೀರದ ಬಲಿಷ್ಠವಾದ ಹಾಗು ನಿರಾಮಯ ಅವಯವವಾಗುವಂತೆ ಮಾಡುವುದು ಮುಂದಿನ ಸಂಯುಕ್ತ ಹಿಂದುಸ್ಥಾನ ರಾಷ್ಟ್ರದ ಕಳಕಳಿಯನ್ನು ಹಾಕುವವರ ಆದ್ಯ ಕರ್ತವ್ಯವಾಗಿದೆ. ಇಂಥ ಪರ್ಯವಸಾನವು ಈಗೇನೇ ಅಶಕ್ಯವಾಗಿಯೇ ತೋರಬಹುದು. ಆದರೆ ನಾವು ನಮ್ಮ ಸ್ಪಷ್ಟವಾದ ಕರ್ತವ್ಯವನ್ನು ಜರುಗಿಸಲಿಕ್ಕೆ ಎಂದೂ ಹಿಂಜರಿಯಕೂಡದು. ಇದಲ್ಲದೆ ಯಾವದೊಂದು ಜನಾಂಗವು ಕ್ರಿಯಾಶಕ್ತಿಯುಳ್ಳ ರಾಷ್ಟ್ರವು ಸುಸಂಘಟಿತವಾದ ರಾಷ್ಟ್ರವು ಆಗಬೇಕಾದರೆ ರಾಷ್ಟ್ರೀಯ ಭಾವನೆಯೊಂದೇ ಬೇಕೆಂಬುದು ಈಗ ಸರ್ವಮಾನ್ಯವಾದ ತತ್ವವಾಗಿದೆ. ರಾಷ್ಟ್ರೀಯ ಭಾವನೆಯಿಲ್ಲದೆ ರಾಷ್ಟ್ರವು ಎಂದಾದರೂ ಹುಟ್ಟಬಹುದೇ?

ಶಾಲೋಪಯೋಗಿ ಪುಸ್ತಕಗಳು

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳ ಸ್ಟೇಶನರಿ ಸಾಮಾನುಗಳೂ ನಾವು ಪೂರೈಸುವೆವು

ಪತ್ತೆ— ಭಟಕಿ ಭ್ರಾತೃಸಂಘ,
ಗೋಕರ್ಣ.

ಕಾರವಾರ ಜಿಲ್ಲಾ ಪರಿಷತ್ತು.

ಪತ್ರಿಕೆಗಳ ಅಂಬೋಣ.

ಚಂದ್ರೋದಯ.

(ಧಾರವಾಡ ತಾ ೩-೫-೧೯೨೦)

ಬಹುಕಾಲದವರೆಗೆ ಕಾರವಾರ ಜಿಲ್ಲೆಯು ಇಷ್ಟು ದಿವಸ ರಾಜಕೀಯ ವಿಷಯಗಳಿಂದ ಅಲಿಪ್ತವಾಗಿತ್ತು. ರಾಜಕೀಯ ವಿಷಯಗಳ ಪ್ರಸ್ತಾಪ ತೆಗೆದ ಕೂಡಲೆ, ಹೆದರಿಕೊಂಡು ದೂರ ಸರಿಯುವ ಜನರೇ ಅಲ್ಲಿ ವಿಶೇಷವಿದ್ದರು. ಈಗ ೪-೫ ವರ್ಷಗಳ ಹಿಂದೆ ಶಿರ್ಸಿ, ಕುಮಟಾ, ಹೊನ್ನಾವರ, ಅಂಕೋಲಾ ಮುಂತಾದ ಸ್ವಲ್ಪ ಸ್ಥಳಗಳಲ್ಲಿ ಹೋಮರೂಲ್‌ಲೀಗಗಳ (!) ಸ್ಥಾಪನವಾದ ನಂತರ, ಕೆಲವು ತರುಣ ಜನರು ರಾಷ್ಟ್ರೀಯ ತತ್ವಗಳನ್ನು ಸ್ವೀಕರಿಸಿ, ರಾಷ್ಟ್ರೀಯ ಪಕ್ಷದ ದೀಕ್ಷೆಯನ್ನು ಸ್ವೀಕರಿಸಿದರು. ಕಾರವಾರದಲ್ಲಿ ಕೆಲವು ವರ್ಷಗಳಿಂದ ಹೊರಡುತ್ತಿರುವ "ಹಿತವಾದಿ" ಎಂಬ ಮರಾಠಿ ವರ್ತಮಾನಪತ್ರದ ಜೊತೆಗೆ, ಕುಮಟೆಯಲ್ಲಿ "ಕಾನಡಾವೃತ್ತ" ಮತ್ತು 'ಕಾನಡಾ ಧುರೀಣ" ಎಂಬ ಹೊಸ ಕನ್ನಡ, ಹಾಗೂ ಹೊಸ ಧೋರಣದ, ಕನ್ನಡ-ಮರಾಠಿ ಹಾಗೂ ಕನ್ನಡ-ಇಂಗ್ರಜೀ ವರ್ತಮಾನಪತ್ರಗಳು ಹೊರಟು, ಕಾರವಾರದ ಜಿಲ್ಲೆಯು ತುಂಬ ಹೊಸ ಜಾಗ್ರತಿಯನ್ನು ಹುಟ್ಟಿಸುತ್ತಿದ್ದು ರಾಷ್ಟ್ರೀಯ ಪರಿಷತ್ತು, ಹೋಮರೂಲಲೀಗ ಪರಿಷತ್ತು, ಪ್ರಾಂತಿಕ ಪರಿಷತ್ತು, ಜಿಲ್ಲಾ ಪರಿಷತ್ತು ಮೊದಲಾದ ಪರಿಷತ್ತುಗಳು ಹಿಂದುಸ್ಥಾನದಲ್ಲಿ ಮಮರುಮಿಸಿ ಹೋಗಿ, ಅವುಗಳ ವೀರ ಗರ್ಜನೆಯು ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ, ತಮ್ಮ ಅತ್ಯಂತ ಸಮೀಪವಿರುವ ಕರ್ನಾಟಕದ ಇತರ ಜಿಲ್ಲೆಗಳಲ್ಲಿ ನಡೆದಿರುವದನ್ನು ಕೇಳಿ, ಕಾರವಾರ ಜಿಲ್ಲೆಯ ವಕೀಲರು ಮೊದಲಾದ ಸುಶಿಕ್ಷಿತರು, ವ್ಯಾಪಾರಸ್ಥ ಮೊದಲಾದ ನಾಗರಿಕರು, ಏಕತ್ರರಾಗಿ ತಮ್ಮಲ್ಲಿ ಜಿಲ್ಲಾ ಪರಿಷತ್ತನ್ನು ಕೂಡಿಸುತ್ತಿರುವದನ್ನು ನೋಡಿ, ಯಾವ ರಾಷ್ಟ್ರಾಭಿಮಾನಿಯ ಮನಸ್ಸು ಆನಂದದಿಂದ ತುಂಬಿ ತುಳುಕಲಿಕ್ಕಿಲ್ಲ? ಕಲೆಕ್ಟರ ಕಮಿಶನರರಿಗೆ ಪ್ರತ್ಯಕ್ಷ ದೇವರ ಅವತಾರವೆಂದು ಭಾವಿಸಿ, ಅವರ ಮರ್ಜಿಯುಳ್ಳಂಥ ಕೆಲಸದಲ್ಲಿ ತಮ್ಮ ಮನಸ್ಸನ್ನು ತೊಡಗಿಸಿಕೊಂಡು ವರ್ತಿಸುವ ಜನರು, ಹಾಗೂ ರಾ ಸಾ, ರಾ ಬ, ಖಾನಸಾ, ಖಾನ ಬ, ಪದವಿಗಳಿಗೆ ಹಪಾಹಪಿಸಿ, ಚಿನ್ನ ಬೂಟುಗಳಿಂದಲೂ, ಕಾಲರ್ ನೆಕ್‌ಟಾಯಿಗಳಿಂದಲೂ ಅಲಂಕೃತರಾಗಿ, ಸಾಹೇಬರ ಬಂಗ್ಲೆಗಳಿಗೆ ಪ್ರದಕ್ಷಿಣ ಹಾಕುವ ಜನರು ಇನ್ನು ಮೇಲೆ ಕಾರವಾರ ಜಿಲ್ಲೆಯಲ್ಲಿ ಈ ರಾಜಕೀಯ ಪರಿಷತ್ತಿನ ಯೋಗದಿಂದ ತೀವ್ರವಾಗಿ ಕಡಿಮೆಯಾಗುವರೆಂದು ನಾವು ಪೂರ್ಣವಾಗಿ ನಂಬುತ್ತೇವೆ. ಪತಿಯ ಶಾಪದಿಂದ ಶಿಲೆಯಾಗಿ ಬಿದ್ದುಕೊಂಡಿದ್ದ ಅಹಿಲ್ಯೆಗೆ, ಶ್ರೀ ರಾಮಚಂದ್ರನ ಪಾದವು ಸ್ಪರ್ಶವಾದ ಕೂಡಲೆ, ಅವಳು ಪುನಃ ಜನ್ಮ ಪಟ್ಟು ಉದ್ಧಾರ ಹೊಂದಿದ ಪ್ರಕಾರಕ್ಕೆ, ನಮ್ಮ ಕಾರವಾರ ಜಿಲ್ಲೆಯು ಈ ರಾಜಕೀಯ ಪರಿಷತ್ತಿನಿಂದ ಉದ್ಧಾರವಾಗುವದೆಂದು ಅನ್ನಲಿಕ್ಕೆ ಏನೂ ಸಂಶಯವಿಲ್ಲ.

ಸ್ವದೇಶಾಭಿಮಾನಿ.

(ಮಂಗಳೂರ ತಾ ೨೮-೫-೧೯೨೦)

ನಮ್ಮ ನೆರೆಯ ಜಿಲ್ಲೆಯಾದ ಉತ್ತರ ಕಾನಡಾ ಜಿಲ್ಲೆಯ ಜಿಲ್ಲಾ ಪರಿಷತ್ತನ್ನು ನೆರೆಸಿತು ಮತ್ತು ಆ ಪರಿಷತ್ತು "ಯಶಸ್ವಿ" ಯಾಯ್ತು ಎಂದು ಆ ಜಿಲ್ಲೆಯೊಳಗಿನ ಪತ್ರಿಕೆಗಳ ಮೇಲಿಂದ ತಿಳಿದು ಬರುತ್ತದೆ. ಕಾನಡಾ ಜಿಲ್ಲೆಯಂಥ ಹಿಂದುಳಿದ ಜಿಲ್ಲೆಯು ಈಗಿನ ಕಾಲದಲ್ಲಿ ಜಾಗ್ರದಾವಸ್ಥೆಗೆ ಬಂದದ್ದೆ ಮೊದಲು ಸಂತೋಷದ ಮಾತು, ಅದರಲ್ಲಿಯೂ ಪರಿಷತ್ತು 'ಯಶಸ್ವಿ' ಯಾದದ್ದು ಇನ್ನೂ ಸಂತೋಷದ ಮಾತು. ಪರಿಷತ್ತಿನ ಅಧ್ಯಕ್ಷರಾದ ಸರ ನಾರಾಯಣರಾಯರು ರಾಜಕೀಯ ವಿಷಯದಲ್ಲಿ ಪ್ರಾಗತಿಕ ಪಕ್ಷದವರಾದರೂ ಪರಿಷತ್ತಿನಲ್ಲಿ ಸುಧಾರಣಾ ಎಕ್ಸ್‌ಟೆನ್ಶನ್ ಇತ್ಯಾದಿ ವಿಷಯಗಳ ಮೇಲಿನ ಠರಾವು ರಾಷ್ಟ್ರೀಯ ಪಕ್ಷದ ಧೋರಣಕ್ಕೆ ಅನುಗುಣವಾಗಿಯೇ ಪಾಸಾದವು ಎಂದು ಅಲ್ಲಿಯ ಪತ್ರಿಕೆಗಳು ಬರೆಯುತ್ತವೆ. ಇದಕ್ಕೆ ಕಾರಣ ಅಧ್ಯಕ್ಷರ ಮತದ ವರ್ಚಸ್ಸು ಪರಿಷತ್ತಿನ ಮೇಲೆ ಬೀಳುವದರ ಬದಲು ಪರಿಷತ್ತಿನ ವರ್ಚಸ್ಸು ಅಧ್ಯಕ್ಷರನ್ನು ಮೋಹಿಸಿ ಅನುಕೂಲಪಡಿಸಿತೆಂದು ಹೇಳುವದು ಸಮಂಜಸವಾಗಿದೆ. ಈ ವಿಷಯವು ಹೇಗೂ ಇರಲಿ ಹಿಂದೂಸ್ಥಾನದೊಳಗಿನ ಈಗಿನ ರಾಜಕಾರಣದ ವಾತಾವರಣವು ಯಾವ ದಿಕ್ಕಿನಿಂದ ಬೀಸಹತ್ತಿದೆ ಎಂಬುದನ್ನು ಯಾರಾದರೂ ಪರೀಕ್ಷಿಸಬೇಕೆಂದಿದ್ದರೆ ಅವರು ಇದುವರೆಗೆ ಕೇವಲ ನಿದ್ರಾವಸ್ಥೆಯಲ್ಲಿ ಇದ್ದ ಮತ್ತು "ಜಂಗಲಿ ಅಡಚಣಿಗಳ ಹೊರೆ" ಎಂದೂ ತಲೆ ಎತ್ತಿ ನೋಡದ ಉತ್ತರ ಕಾನಡಾ ಜಿಲ್ಲೆಯ ರಾಜಕೀಯ ಪರಿಷತ್ತಿನ ವಿವರಗಳನ್ನೆ ನೋಡಿದರೆ ಸಾಕಾಗಿದೆ. ಅಗಲಿ, ಸರ ಚಂದಾವರಕರರು ಹೃತ್ಪೂರ್ವಕವಾಗಿ ಅಪೇಕ್ಷಿಸುವಂತೆ ನಾವು ಕೂಡ ಅಪೇಕ್ಷಿಸುವದೇನೆಂದರೆ, ಹಿಂದೂಸ್ಥಾನದೊಳಗಿನ ಬೇರೆ ಬೇರೆ ಭಾಗಗಳು ಸ್ವರಾಜ್ಯದ ಮಾರ್ಗವನ್ನು ಅಕ್ರಮಿಸ ಹತ್ತಿದ್ದಂತೆ ನಮ್ಮ ಉತ್ತರ ಕಾನಡವು ಕೂಡ ಆ ವ್ರತವನ್ನು ಕೈಕೊಳ್ಳಲಿ ಮತ್ತು ಈಗಿನ ಕಾಲದ ನಿಜವಾದ ಸುಖಶಾಂತಿಯನ್ನು ಹೊಂದಲಿ.

ಕರ್ನಾಟಕ ಮಿತ್ರ.

(ಬೆಳಗಾಂವ ತಾ. ೨೭-೫-೧೯೨೦)

ಕರ್ನಾಟಕ ಪರಿಷತ್ತಿನಿಂದ ಕಾನಡಾ ಜಿಲ್ಲೆಯವರಿಗೂ ಎಚ್ಚರಿಕೆಯುಂಟಾದದ್ದು ಆನಂದದ ಮಾತು ತಡವಾಗಿ ಎಚ್ಚರಗೊಂಡರೂ, ಕಾನಡಾ ಬಂಧುಗಳು ತಮ್ಮ ಜಿಲ್ಲೆಯ ದುಃಖಗಳನ್ನು ಒಕ್ಕಟ್ಟಾಗಿ ಸೇರಿ ಧೈರ್ಯವಾಗಿ ಸರಕಾರದವರ ಮುಂದೆ ಮಂಡಿಸಿದ್ದನ್ನು ಕಂಡರೆ ಅಲ್ಲಿಯೂ ಸ್ವಾತಂತ್ರ್ಯದ ಗಾಳಿಯು ಸ್ವಲ್ಪ ಸ್ವಲ್ಪಾದರೂ ಮುಟ್ಟತೊಡಗಿದದು ಸ್ಪಷ್ಟವಾಗುತ್ತದೆ. ಜಂಗಲ್ ಖಾತೆ (department) ಯ ಹಾವಳಿಯು ಬೆಳೆದು ಅಲ್ಲಿಯ ಹಳ್ಳಿಪಳ್ಳಿಗಳು ಸಹ ನಿರ್ಜನ ಗಟ್ಟಿ ಹಾಳಾಗುತ್ತಿರುವದು ಒಂದು ಸುಧಾರಿಸಿದ ಸರಕಾರದವರು ಲಕ್ಷದಲ್ಲಿಡತಕ್ಕ ಸಂಗತಿಯು. ಇದು ಹೊಟ್ಟೆ ಬಟ್ಟೆಯ ವಿಚಾರವಾಯಿತು. ಇನ್ನು ತಲೆಯ ವಿಚಾರವು, ಅಂದರೆ ಶಿಕ್ಷಣ ವಿಚಾರವು. ಹಿಂದುಸ್ಥಾನದೊಳಗೆ ಸಾಧಾರಣವಾಗಿ ಅನ್ನದ ಮತ್ತು ಶಿಕ್ಷಣದ ಬರಗಾಲವು ಬಿದ್ದಂತೆ, ಅದು ಕಾನಡಾ ಜಿಲ್ಲೆಯಲ್ಲಿಯೂ ಇದೆ. ಕಾನಡಾ ಜಿಲ್ಲೆಯು ಕಾಡಿನ ಪಾಳಾದ ಜಿಲ್ಲೆಯೆಂದು ಅಲ್ಲಿ ಶಿಕ್ಷಣ ಪ್ರಸಾರ ಇಲ್ಲ, ಮತ್ತೆ ಅಲ್ಲಿಂದ ಎರಡನೇ ಜಿಲ್ಲೆಗೆ ಕಲಿಯಲಿಕ್ಕೆ ಹೋಗಬೇಕೆಂದರೆ ರೇಲ್ವೆಯು ಅನುಕೂಲವಿಲ್ಲ, ಬೇನೆ ಬೇಸರಿಕೆ ಬಂದರೆ ಅದನ್ನು ಕಳೆಯುವಂಥ ಆಸ್ಪತ್ರೆಗಳಿಲ್ಲ, ಇವೆಲ್ಲವುಗಳನ್ನು ಮೀರಿಸುವಂಥದೊಂದು ಭಾರವೆಂದರೆ ಧರ್ಮದ ಮೇಲಿನ ಹೊಡ್ತವು ಕೂಡಾಯಿತು. ಹೀಗೆ, ನೂರೆಂಟು ಸಂಕಟಗಳ ಮುಲುಕಿನಲ್ಲಿ ಸಿಕ್ಕು, ನಮ್ಮ ಕಾನಡಾ ಬಂಧುಗಳು ಒದ್ದಾಡುತ್ತಲಿದ್ದಾರೆ. ಈ ದುಃಖವನ್ನು ಈ ಮೊದಲೇ ತಿಳಿದುಕೊಂಡು ಅದನ್ನು ಪರಿಹರಿಸುವದು ನಮ್ಮ ಸರಕಾರದ ಕರ್ತವ್ಯವಾಗಿತ್ತು, ಆದರೆ ಪ್ರಜೆಗಳ ದೂರುಗಳನ್ನು ಕೇಳುವದೆಂದರೆ ನಮ್ಮ ಸರಕಾರಕ್ಕೆ ತಲೆಶೂಲಿ ಏಳುವಂತಿದ್ದುದರಿಂದ, ಆ ಕಾರ್ಯವನ್ನು ಪ್ರಜೆಗಳೇ ಮೈಮೇಲೆ ತೆಗೆದುಕೊಂಡಿದ್ದು ಒಳ್ಳೇದಾಯಿತು. ಅಧ್ಯಕ್ಷ ಸಾಹೇಬರು ಕಾನಡಾ ಜಿಲ್ಲೆಯವರೂ, ಕಾನಡಾ ಜಿಲ್ಲೆಯ ಪ್ರಮುಖರೂ ಇದ್ದು, ಕೂಡಿದ ಜನರಿಗೆಲ್ಲ ತಿಳಿಯುವಂತೆ, ಧರ್ಮಕ್ಕೆ ಕನ್ನಡದಲ್ಲಿ ಅಲ್ಲದಿದ್ದರೂ, ಮರಾಠಿಯಲ್ಲಿ ಮಾತಾಡಿದ್ದೊಂದು ಆನಂದದ ಸುದ್ದಿಯು ಮತ್ತು ಅಧ್ಯಕ್ಷರು ಸುಧಾರಣೆಯ ಬಿಲ್ಲನ್ನು ಬಯ್ಯುವ ಪಾಪಕಾರ್ಯದೊಳಗಿಂದ ಪಾರಾಗಿ ಮಡಿವಂತರಾಗಿರುವರು ! ಅಸ್ತು. ಇನ್ನು ಮುಂದೆ ಕಾನಡಾ ಧುರೀಣರು ತಮ್ಮ ಲಕ್ಷವನ್ನೆಲ್ಲ ಒಕ್ಕಲಿಗರ ದುಃಖದ ಮೇಲೆ ಕೇಂದ್ರೀಕರಿಸಿ, ಅವರ ಕಷ್ಟದ ಗುಡ್ಡದೊಳಗಿನ ಒಂದು ಗುಂಜಿ ತೂಕವನ್ನು ಕಷ್ಟನ್ನಾದರೂ ಕಡಿಮೆ ಮಾಡಲೆತ್ನಿಸಿದರೆ ಅವರು ಕೈಕೊಂಡ ಕಾರ್ಯವು ಸಾರ್ಥಕವೆಂದು ಹೇಳುವೆವು.

To the Editor, Kanara News,
Kumta.

Sir,

Allow me please to bring to the notice of the signatories to the letter of appreciation of Mr V P. Prabhu's services to the Gibb High School Kumta, published in your issue dated 1. th May that the signatories may be labouring under a misapprehension caused by the report of the resolution as published in the Kanara News regarding Mr. Prabhu's resignation I understand that Mr Prabhu applied in August last for *retirement* under circumstances, necessitated by ill health and domestic misfortunes. I also learn that he has not yet received any reply thereto The signatories therefore, will be well advised to wait a little longer as the matter may be under the consideration of the Governing Body.

Ankola }
21-5-20 } Yours truly,
M. M Shanbhag.

ಕಾನಡಾವೃತ್ತ.

ಗುರುವಾರ, ತಾರೀಖು ೩ ಮಾಹೆ ಜೂನ ೧೯೩೦

ಇನ್ನೂ ನೇಮಣೂಕಿಗಳ್ಯಾಕೆ?

ಸದ್ಯಕ್ಕೆ ಊರಲ್ಲೆಲ್ಲ ನವಯುಗವು, ಅದಕ್ಕೆ ಕಾರಣವಾಗಿದೆಂದು ಹೇಳುವ ಸುಧಾರಣೆ ಕಾಯಿದೆಯೂ ಅದಕ್ಕೆ ಸಂಬಂಧಿಸಿದ ಮತಾಧಿಕಾರವೂ ಮತದಾರರೂ ಉಮೇದವಾರರೂ ಅವರ [illegible] ಇವೆಲ್ಲವುಗಳ ವಿಷಯವಾಗಿ ವ್ಯಾಸಪೀಠಗಳಲ್ಲಿಯೂ ವೃತ್ತಪತ್ರಗಳಲ್ಲಿಯೂ [illegible] ತ್ತಿದ್ದಾಗ ಅಸ್ತವಾಗುತ್ತಿರುವ [illegible] ಯುಗದ [illegible] ರಾಜ್ಯವ್ಯವಸ್ಥೆಯು [illegible] ನೇಮಣೂಕಿಯ ತತ್ವವನ್ನು ಲಕ್ಷಿಸಿ ನಾವು [illegible] ಮಾತುಗಳನ್ನು ಬರೆಯಬೇಕಾಗಿದೆ. ವಿಷಯವು ಒಂದು ಕಾರಣದಿಂದ ಪ್ರಾಸಂಗಿಕವಾಗಿದೆ. ನಮ್ಮ ತಾಲೂಕಾ ಮತ್ತು ಜಿಲ್ಲಾ ಬೋರ್ಡುಗಳಿಗೆ [illegible] ಸರಕಾರಿ ಅಧ್ಯಕ್ಷರನ್ನು ಅನುಗ್ರಹಿಸುವ ವಿಚಾರಣೆಯು ಸರಕಾರದಲ್ಲಿ ನಡೆದಿದೆ. ಈ [illegible] ಸಂಸ್ಥೆಗಳಿಗೆ ಅಧ್ಯಕ್ಷರನ್ನು ಆರಿಸುವ [illegible] ಅವರನ್ನು ನೇಮಿಸುವದೇ ಯುಕ್ತವೆಂದು ಸರಕಾರದ ನಿರ್ಣಯವಾಗಿರಬಹುದು. ತಿಳಿದ ಕಾಲಪ್ರವಾಹವು ಒಂದು ದಿಕ್ಕಿನಿಂದ, [illegible] ಮತ್ತೊಂದು ದಿಕ್ಕಿನಿಂದ, ಪರಸ್ಪರ ವಿರುದ್ಧವಾಗಿ ವಿಸಂಗತವಾಗಿ [illegible] ಯನ್ನು ಇಂದಿಗೆ [illegible]

ಲೋಕಲಬೋರ್ಡು [illegible] ಪಂಚಾಯತ [illegible] ಸ್ಥಾನಿಕ [illegible] ಗಳಲ್ಲಿ ಇನ್ನು [illegible] ಪ್ರತಿನಿಧಿಗಳ [illegible] ಕಡಿಮೆ [illegible], ನಮ್ಮ ನಿಶ್ಚಿತ ಮತವಿದೆ. ಇನ್ನು ಮುಂದಾದರೂ ಎಲ್ಲ ಲೋಕನಿಯುಕ್ತ ಸಾರ್ವಜನಿಕ ಸಂಸ್ಥೆಗಳಲ್ಲಿ ಅವು ರಾಜಕೀಯವಿರಲಿ, ಸಾಮಾಜಿಕವಿರಲಿ, ಶಿಕ್ಷಣವಿಷಯಕವಿರಲಿ, ಜನರ ಪ್ರತಿನಿಧಿಗಳನ್ನು

ಜನರೇ ಆರಿಸತಕ್ಕದ್ದು.

ಮತದಾರರ ಸಂಖ್ಯೆಯನ್ನು ಅಷ್ಟು [illegible] ಏರಿಸುವದು, ಮತಾಧಿಕಾರವನ್ನು ಎಲ್ಲ ಬಗೆಯಿಂದ ವಿಸ್ತೃತಪಡಿಸುವದು, ಲೋಕಶಾಹಿಗೆ ಬೇಕಾಗುವ ಚುನಾವಣೆಯ ಅನ್ಯ ತತ್ವಗಳನ್ನನುಸರಿಸಲಾಯಿತು. ಸರಕಾರವು ಏರ್ಪಡಿಸಲಿಚ್ಛಿಸುವ ಗ್ರಾಮಪಂಚಾಯತು ಕಾಯಿದೆಯೊಳಗೆ, ಇವೇ ತತ್ವಗಳನ್ನು ಸರಕಾರವು ಮನ್ನಿಸಿರುವದು. ಹೀಗಿರುವಾಗ ಲೋಕಲಬೋರ್ಡುಗಳ ಅಧ್ಯಕ್ಷರ ವಿಷಯವಾಗಿ,

ನೇಮಣೂಕಿಯ ಹಳೆ ಶಾಸ್ತ್ರ

ವನ್ನೇ ಪುನಃ ಪುನಃ ಆಶ್ರಯಿಸುವದು ಏನೂ ಸಮರ್ಥನೀಯವಲ್ಲೆಂದು ನಮಗೆ ಹೇಳಬೇಕಾಗಿದೆ. ಮತದಾರರಿಗೆ ತಮ್ಮ ಪ್ರತಿನಿಧಿಗಳನ್ನು ಆರಿಸುವ ಪಾತ್ರತೆಯು ಇಲ್ಲೇ ಇಲ್ಲೆಂದು ಹೇಳಬೇಕೇನು? ಇಲ್ಲ ನಾವು ಹೀಗೆಂದೂ ಹೇಳಲಾರೆವು. ಮ್ಯುನಸಿಪಾಲಿಟಿಗಳಲ್ಲಿ ಮತದಾರರು ತಮ್ಮ ಮೆಂಬರರನ್ನು ಆರಿಸುವರು [illegible] ಬರು ತಮ್ಮ ಉಪಾಧ್ಯಕ್ಷರನ್ನೂ ಕಾರ [illegible], ಹಳಿಯಾಳ ಮ್ಯುನಸಿಪಾಲಿಟಿಗಳಲ್ಲಿ ತಮ್ಮ ಅಧ್ಯಕ್ಷರನ್ನು ಸಹ ಆರಿಸಿರುವರು. ಇವರೇನು ತಮ್ಮ ಹಕ್ಕುಗಳ ದುರುಪಯೋಗ ಮಾಡಿದ್ದಾರೆಂದು ಹೇಳಿದರೆ ಸರಕಾರವು ಒಪ್ಪುವದು? ಮ್ಯುನಸಿಪಾಲಿಟಿಗಳ ಅಧ್ಯಕ್ಷರಲ್ಲಾಗಲಿ, ಉಪಾಧ್ಯಕ್ಷರಲ್ಲಾಗಲಿ ನಾಲಾಯಕರು ಯಾರೂ ಆರಿಸಲ್ಪಡಲಿಲ್ಲೆಂದು ಸರಕಾರವು ಒಪ್ಪುವದು. ಮ್ಯುನಸಿಪಾಲಿಟಿಯ ಕ್ಷೇತ್ರದೊಳಗಿನ ಲೋಕಲಬೋರ್ಡಿನ ಕ್ಷೇತ್ರದೊಳಗೆ ಹೆಜ್ಜೆಯನ್ನಿಟ್ಟ ಕೂಡಲೆ, ಅಧ್ಯಕ್ಷ [illegible] ಬೇರೆಯಾದಂತಾಗಿ ನೇಮಣೂಕಿಯನ್ನೇ ಯಾಕೆ ಆಶ್ರಯಿಸುತ್ತದೆಂದು, ನಮಗೆ ತಿಳಿಯದು. ಲೋಕಲಬೋರ್ಡಿನ ಕ್ಷೇತ್ರದೊಳಗೆ ಸಹ ([illegible]) ಉಪಾಧ್ಯಕ್ಷರನ್ನು [illegible] ಆರಿಸುತ್ತಿದ್ದಾರೆ. ಅವರೇ ಬೋರ್ಡುಗಳ [illegible] ನಡೆಸುತ್ತಿದ್ದರು. ಇವರ [illegible] ನಕಾರವಿದೆಂದು ನಂಬಿ ಇವರನ್ನೇ [illegible] ಅಧ್ಯಕ್ಷರಾಗಿ ನೇಮಿಸಬೇಕೆಂದು ಸರಕಾರವು [illegible] ಈಗಾದ ನೇಮಣೂಕಿಗಳ [illegible] ಅನುಮಾನಿಸಲಿಕ್ಕಾಗುವದೇ [illegible] ಇವರನ್ನು ಅಧ್ಯಕ್ಷರಾಗಿ

ನೀವೇಕೆ ನೇಮಿಸುತ್ತೀರಿ?

ನಮಗೇಕೆ ಆರಿಸಗೊಡುವದಿಲ್ಲ? ಎಂಬುದೇ ಸರಕಾರಕ್ಕೆ ನಮ್ಮ [illegible] ಸವಾಲಿದೆ.

ಲೋಕಲಬೋರ್ಡ ಕಾಯಿದೆಯಂತೆ ಈ ಸಂಸ್ಥೆಗಳ ಅಧ್ಯಕ್ಷರನ್ನು ಚುನಾಯಿಸಲಿಕ್ಕೆ ಆತಂಕವೇನಿಲ್ಲ. ಸರಕಾರವು ಈ ಹಕ್ಕನ್ನಷ್ಟು ಸಂಸ್ಥೆಗಳಿಗೆ ಅನುಗ್ರಹಿಸಿದ [illegible] ಇಷ್ಟು ಅನುಗ್ರಹವನ್ನು ಸರಕಾರವು [illegible] ಕಾಪಾಡಲಿಚ್ಛಿಸದಿಲ್ಲ? ನಮಗೆ [illegible] ಹೊಸಾ [illegible] ಹಕ್ಕುಗಳೇ ಬೇಕು, [illegible] ಕಾರಣವೊಂದು ಬೇಕಾದರೆ ನಾವು ಹೇಳುತ್ತೇವೆ. ನೇಮಣೂಕಿಗಳನ್ನು ಮಾಡುವ ಅಧಿಕಾರಿಗಳು ಎಷ್ಟು ಸದ್ಬುದ್ಧಿಯಿಂದ ಪ್ರೇರಿತರಾಗಿದ್ದರೂ, ಸರಕಾರದಿಂದ ನೇಮಿಸಲ್ಪಟ್ಟ ಅಧ್ಯಕ್ಷರಾಗಲಿ, ಮೆಂಬರರಾಗಲಿ, ತಮ್ಮನ್ನ

ಸರಕಾರವು ಉಪಕರಿಸಿದೆ;

ತಮ್ಮ ನಾವು [illegible] ಇದರಿಂದಾಗಿಲ್ಲ, ಸರಕಾರದಿಂದಾಗಿದೆ, ಅದಕ್ಕಾಗಿ ಕೃತಜ್ಞತೆಯ ಮರ್ಯಾದೆ, ತಾನೊಬ್ಬ ಸರಕಾರಿ ಮೆಂಬರನೇ ಆಗಿದ್ದೇನೆಂಬ ಭಾವನೆಯು, ಅವರಲ್ಲಿ ಯಾವಾಗಲೂ ಹೆಚ್ಚಿರುವದು ಸಹಜವು. ಇವರೊಳಗೆ ಬಹಳೇ ನೀತಿಧೈರ್ಯವಿರುವ ಅಪವಾದಕ ಜನರನ್ನು ಬದಿಗಿಟ್ಟರೆ, ಸ್ವತಂತ್ರ ಮತವನ್ನು ಪ್ರತಿಪಾದಿಸುವವರ ಸಂಖ್ಯೆಯು ಹೆಚ್ಚೆಂದರೆ ಎಷ್ಟಿರುವದು? ಕಾಯಿದೆ ಕೌನ್ಸಿಲದಿಂದ ಕೆಳತನಕ ಇಂಥ ನೇಮಿಸಲ್ಪಟ್ಟ "ಜೀ ಹುಕುಮು" ವರ್ಗದವರು ಎಷ್ಟಿರುವರೆಂದು, ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುವವರೆಲ್ಲರೂ ಬಲ್ಲರು. ಮನುಷ್ಯರ ಮನೋಧರ್ಮವು ಸರ್ವಸಾಧಾರಣವಾಗಿ ಸ್ವತಂತ್ರವಾಗಿರುವದಕ್ಕಿಂತ, ಕೃತಜ್ಞವಾಗಿರುವದು. ಅಲ್ಪ ಸಂಖ್ಯಾಕ ಜಾತಿಯ ಪ್ರತಿನಿಧಿಗಳನ್ನು ಆರಿಸಲಿಕ್ಕಾಗದಿರುವ ಸಂಗತಿಗಳಲ್ಲಿ ಅವರನ್ನು ನೇಮಿಸುವದು ಅನಿವಾರ್ಯ ಪಕ್ಷವು. ಅಧ್ಯಕ್ಷ ಉಪಾಧ್ಯಕ್ಷತೆಯ ಚುನಾವಣೆಗಳಿಗೆ ಈ ತತ್ವದ ಅತ್ಯಲ್ಪ ಸಹ ಸಂಬಂಧವಿಲ್ಲ. ಇದಲ್ಲದೆ ನೇಮಣೂಕಿಗಳೊಳಗೆ ರೂಢಿಯಿಂದ, ಇಲ್ಲವೆ ಔಪಚಾರಿಕತೆಯ [illegible] ಕೆಲವು ವಿವಕ್ಷಿತ ದೋಷಗಳು ಸೇರಿವೆ. ಒಬ್ಬರನ್ನು ಒಮ್ಮೆ ನೇಮಿಸಿದರೆಂದರೆ, ಅವರು ಏನೂ ಮಾಡಲಿ, ಮಾಡದಿರಲಿ, ಅವರಿಗಿಂತ ನೇಮಣೂಕಿಗೆ ಹೆಚ್ಚು ಪಾತ್ರರಾದ ಜನರು ಎಷ್ಟು ಇರಲಿ, ಒಬ್ಬರನ್ನೇ ಎಷ್ಟೂ ಪಾಳಿಗಳಾದರೂ

ಪುನಃ ಪುನಃ ನೇಮಿಸುತ್ತಿದ್ದ

ಉದಾಹರಣೆಗಳೇನು ಕಡಿಮೆಯಿಲ್ಲ. ಇದ್ದವರನ್ನೇ ಮತ್ತೊಮ್ಮೆ ಸೂಚಿಸುವ ಮತ್ತಾರನ್ನು ಹುಡುಕುವ ಶ್ರಮವೇಕೆ? ಇವರ ಮನಸ್ಸನ್ನು ನೋಯಿಸುವದೇಕೆ? ಅವರಂಥ ಧಿಟ್ಟರು ನಮಗೆ ಬೇಡ, ಎಂಬ ನಾನಾ ತತ್ವಗಳ ಮೇಲೆ, ಕೆಳಗಿನ ಅಧಿಕಾರಿಗಳು ಯಾರೊಬ್ಬರ ಶಿಫಾರಸು ಮಾಡಿದರಾಯಿತು. ಸ್ಥಾನಿಕ ಅಧಿಕಾರಿಗಳ ಮೇಲೆ ವಿಶ್ವಾಸವನ್ನಿಟ್ಟು ಕಲೆಕ್ಟರರು "ಅಸ್ತು" ಹೇಳಿದರೆ, ಇಂಥ ಅನೇಕ ನೇಮಣೂಕಿಗಳು, ಜಾಹೀರಾಗುವದಕ್ಕಿಂತ ಮುಂಚೆಯೇ ಮಂಜೂರಾದವೆಂದು, ಒಮ್ಮೊಮ್ಮೆ ಸುದ್ದಿ ಸಹ ತಿಳಿಯುತ್ತದೆ. ನೇಮಣೂಕಿಗಳ ತತ್ವಗಳೊಳಗೆ ಇಂಥ ದೋಷಗಳಿದ್ದಾವೆಂದು ಕಲ್ಪಿಸಿದರೆ, ಅವುಗಳ ಪರಿಣಾಮವು ಯಾವಾಗಲೂ ಹಿತಕರವಾಗುವದು, ಇಷ್ಟಪ್ರದವಾಗುವದು ಎಂದು ನಾವು ಹೇಳಲಾರೆವು. ಸ್ಥಾನಿಕ ಸ್ವರಾಜ್ಯದಲ್ಲಿ ಇಂಥ ನೇಮಣೂಕಿಗಳಿಗೆ ಇಷ್ಟು ಪ್ರಾಧಾನ್ಯವಿರುವದು, ಈಗಿನ ಯುಗದಲ್ಲಿ ತೀರ ವಿಸಂಗತವು. ತನ್ನ ಪ್ರೀತಿಯ ಜನರಿಗೆ ಉಪಕಾರದಿಂದ ಮನ್ನಿಸುವದೊಂದು ಸಾಧನವು ಇದಾಗಿರುವದೆಂದು ಯಾರಾದರೂ ಅಧಿಕಾರಿಗಳು ಭಾವಿಸಿದರೆ ನೇಮಣೂಕಿಯ ಬಹಳ ಪುರಾಣವು ಪೂರ್ಣವಾಗಿ ಕೆಡುವದೆಂದು ತಜ್ಞರೇ ಹೇಳುವರು. ಇಂಥ ರೀತಿಯು ಇನ್ನೇನಿಲ್ಲ ಬರಿ ಅಭಿನಂದನಾಸ್ಪದವು. ಇವೆಲ್ಲ ಕಾರಣಗಳ ಮೂಲಕ ನೇಮಣೂಕಿಯ ತತ್ವವು ದೂಷಿಸಲ್ಪಟ್ಟಿದೆ. ಅದಕ್ಕಾಗಿ ಅದು ಹೊಸ ಕಾಯಿದೆಯಲ್ಲಿ ಲುಪ್ತಪ್ರಾಯವಾಗುವಷ್ಟು ಅದರಿಸಲ್ಪಟ್ಟಿದೆ. ಇದೆಲ್ಲರಿಗೂ ಭೂಷಣಾವಹವು.

ಇದಲ್ಲದೆ ಚುನಾವಣೆಯ ಹಕ್ಕಿಗೆ ಜನರು ಪ್ರಾಪ್ತರಿದ್ದಾಗ ನೇಮಣೂಕಿಯನ್ನು ಅವರ ಮೇಲೆ ಹೊರಿಸುವದು ಒಂದು ಪರಿಯಿಂದ ಮಹದನ್ಯಾಯವಾಗುತ್ತದೆ. ನಿಮ್ಮ ಅಧ್ಯಕ್ಷರನ್ನು ನಿಮ್ಮ ಮೆಂಬರರನ್ನು ನೀವೇ ಆರಿಸುವ ಪಾತ್ರತೆಯು ನಿಮ್ಮಲ್ಲಿಲ್ಲ. ಗಣಪತಿ ಮಾಡಿರೆಂದು ನಿಮಗೆ ಹೇಳಿದರೆ ಮಂಗವನ್ನು ನೀವು ಮಾಡಿಬಿಡುವಿರಿ.

ತಯಾರಾದ ಗಣಪತಿಯನ್ನೇ

ನಾವು ನಿಮಗೆ ಕೊಡುತ್ತೇವೆ. ಅದನ್ನೇ ನೀವು ಪೂಜಿಸಿರಿ, ಎಂಬ ಅರ್ಥದಿಂದ ಈ ನೇಮಣೂಕಿಗಳನ್ನು ಲೋಕಸಂಸ್ಥೆಗಳ ಮೇಲೆ ಹೊರಿಸಿದ್ದಾದರೆ, ನಾಲಾಯಖಿಯ ಆರೋಪವನ್ನು ವಿಧಿಸಿ, ಲೋಕಮತದ ಜವಾಬಿಯನ್ನು ತಕ್ಕೊಳ್ಳದೆ, ಸಾಕ್ಷಿ ಪುರಾವೆಯನ್ನು ಮುಂದಿಡದೆ, ನಿರಪರಾಧಿಗಳಿಗೆ ದಂಡಿಸಿದಂತಾಗುವದಲ್ಲವೇ? ಅದರ ಮೇಲೆ ಇಂಥ ನಿರ್ಣಯನಾದದ್ದು ನಿಜವಿದ್ದರೆ, ಸರಕಾರದ ಕೂಡ ಅಪೀಲು ಹೂಡಿದರೆ, ಮೊಂಟೆಗ್ಯೂ ರಿಫಾರ್ಮ ಕಾಯಿದೆಯ ಬಹಿರಂಗವನ್ನಷ್ಟು ನಮ್ಮವರೆಲ್ಲರು ಮುಂದೊತ್ತಿದರೆ, ಇಂಥ ನಿರ್ಣಯವು ನಿಸ್ಸಾರವಾದದ್ದೆ, ನಿರಾಧಾರವದ್ದೆ, ಎಂದು ಸರಕಾರವೇ ಶೀಘ್ರ ಕೊಡುವದೆಂದು

ನಿಸ್ಸಂಶಯವು ನಾವು ಹೇಳುವೆವು. ಆದಕಾರಣ ಚುನಾವಣೆಗೆ ನಾವು ಅಪಾತ್ರರೆಂಬ ನಿರ್ಣಯದಮೇಲೆ ಸರಕಾರವು ನೇಮಣೂಕಿಗಳನ್ನು ಮಾಡಲಿಚ್ಛಿಸುತ್ತದೆಂದು ನಾವೆಂದೂ ನಂಬುವದಿಲ್ಲ ನೇಮಣೂಕಿಯ ತತ್ವದಮೇಲೆ ರಚಿಸಲ್ಪಡುವ, ಎಂವರರಿ.

ಬೆಂಚು ಕೋರ್ಟುಗಳ ಗೋಡೆ

ಗಳನ್ನು ಈ ವಿಷಯದ ವ್ಯಾಪಕ ಚರ್ಚೆಗೆಂದು ನಾವು ಇಂದಿಗೆ ಮುಕ್ತವಾ ತೊಳೆಯಲಿಚ್ಛಿಸುವದಿಲ್ಲ ಅವಶ್ಯಕವಾದರೆ ಅದನ್ನು ಸ್ವತಂತ್ರವಾಗಿ ಕೈಕೊಳ್ಳುವೆವು. ನೇಮಣೂಕಿಯ ತತ್ವವೇ ಇನ್ನು ಮುಂದೆ ಹೆಚ್ಚೆಚ್ಚು ಅನಾವಶ್ಯಕವಾಗುತ್ತದೆಂದು, ಸರಕಾರಕ್ಕೆ ತಿಳಿಸಲು ಈ ವಿಷಯವನ್ನು ಇಷ್ಟು ಪ್ರತಿಪಾದಿಸಿದೆವು. ನಮ್ಮ ಗೆಳೆಯರಾದ ಧಾ। ಸಾ। ಗಣಪತರಾವ ಮಾಸೂರಕರರು ಕುಮಟಾ ತಾಲೂಕ ಲೋಕಲಬೋರ್ಡಿನ ಅಧ್ಯಕ್ಷರಾಗಿ "ಆರಿಸಲ್ಪಟ್ಟರೆಂದು" ನಮ್ಮ ಘುರೀಣ ಬಾಂಧವರು ಆನಂದವನ್ನು ವ್ಯಕ್ತಪಡಿಸಿರುವರು. ಹೌದು, ಅವರು ಅಧ್ಯಕ್ಷರಾದದ್ದು ಅವರಿಗೆ ಅಭಿನಂದನಾಸ್ಪದವು, ನಮಗೂ ಸಂತೋಷಕರವು ಆದರೆ ಅವರು ಆರಿಸಲ್ಪಡಲಿಲ್ಲ, ನೇಮಿಸಲ್ಪಟ್ಟಿರುವರೆಂಬುದು (appoint) ತಾತ್ವಿಕ ದೃಷ್ಟಿಯಿಂದ ನಮ್ಮ ಸ್ಥಾನಿಕಸ್ವರಾಜ್ಯಕ್ಕೆ ಭೂಷಣಾವಹವಾಗಿಲ್ಲೆಂಬುದು ಅಲ್ಪ ವಿಷಾದಕರವಾಗಿದೆ. ಇದು ಕೇವಲ ವ್ಯಕ್ತಿವಿಷಯಕ ಪ್ರಶ್ನೆಯಾಗಿಲ್ಲ ಜಿಲ್ಲೆಯೊಳಗಿನ ಎಲ್ಲ ತಾಲುಕಾ ಬೋರ್ಡುಗಳ ಪಾಲಿ ಇದೇ ವಿಧದ ದುರ್ಭಾಗ್ಯವು ಬಂದಿದೆಂದರಿತು, ನಮಗೆ ಇಂದಿಗೆ ನಿವಡಣೂಕಿಯ ತತ್ವದ ಪ್ರೂವಾಪರವನ್ನು ಅಲ್ಪತಃ ಚರ್ಚಿಸಬೇಕಾಯಿತು ತತ್ವವೇತ್ತರುಗಳು ಇವನ್ನು ಪರ್ಯಾಲೋಚಿಸಲಿ

ಸ್ಫುಟ ಸೂಚನೆಗಳು.

೧ ನಮ್ಮ ಜಿಲ್ಲಾಧಿಪರಾದ ಮಿ। ಹೇಗ ದೊರೆಗಳು ಆರು ತಿಂಗಳ ರಜೆ ಕೊಂಡು ಸ್ವದೇಶಕ್ಕೆ ತೆರಳಿವರು. ಕಳೆದ ಆರೇಳು ತಿಂಗಳ ಅವರ ಅಧಿಕಿತವು ನಿಶ್ಚಿತ ಸ್ವರೂಪವನ್ನು ತಾಳಿದ್ದು ದೃಶ್ಯವಾಗಿ ಕಂಡುಬರಲಿಲ್ಲಾದ್ದರಿಂದ, ಜಂಗಲಖಾತೆಯ ವಿಷಯ ಅವರ ಧೋರಣವೂ ಸ್ಪಷ್ಟಸ್ವರೂಪದಿಂದ ತಿಳಿಯಲಿಲ್ಲಾದ್ದರಿಂದ, ಪುನಃ ಆರು ತಿಂಗಳಾದಮೇಲೆ ಅವರು ಇದೇ ಜಿಲ್ಲೆಗೆ ಪುನಃ ಬರುವರೆಂದು ನಂಬಿ, ಇವರ ಆಡಳಿತೆಯನ್ನು ಪರ್ಯಾಲೋಚಿಸುವ ಅವಶ್ಯಕತೆಯು ನಮಗೆ ಕಾಣುವದಿಲ್ಲ ಮುಂದಿನ ಆರು ತಿಂಗಳು ಸಾರ್ವಜನಿಕ ದೃಷ್ಟಿಯಿಂದ ತೀರ ಮಹತ್ವದ ಕಾಲವಾಗಿರುವದು, ಇದೊಂದು ಜಿಲ್ಲಾಧಿಪರ ಪರೀಕ್ಷಣದ ಕಾಲವೆಂದೂ ನಮ್ಮ ಮತವು ವನದುಃಖನಿವಾರಣೆಗಾಗಿ ನಮ್ಮ ಬೇಸಾಯದ ರಕ್ಷಣೆಗೆಂದು, ನಮ್ಮ ಬೇಸಾಯಗಾರರಿಗೆ ಹಕ್ಕುಗಳೇನಿರಬೇಕು, ಸರಕಾರಿ ಧೋರಣವು ಇದೇ ಸಮಯ ನಿಶ್ಚಿತವಾಗುವದೆಂದು ನಾವು ತಿಳಿದಿರುವೆವು ಈ ಮಹತ್ವದ ಕೆಲಸವು ಮಿ। ಹೇಗ ಸಾಹೇಬರ ಬದಲಿಗೆ ನೇಮಿಸಲ್ಪಟ್ಟ ಮಿ॥ ಹೂಡ ಸಾಹೇಬರ ಪಾಲಿಗೆ ಬಂದಿರುವದು ಮಿ॥ ಹೂಡ ಸಾಹೇಬರಿಗೆ ಈ ಜಿಲ್ಲೆಯ ಪೂರ್ವ ಪರಿಚಯವು ಏನೂ ಇಲ್ಲ. ಇಂಥ ಸಂದರ್ಭದಲ್ಲಿ ಹೊಸ ಜಿಲ್ಲಾಧಿಪರಿಗೆ ತಮ್ಮ ಕೆಲಸವು ಕಠಿಣಪ್ರಾಯವಾಗಿದೆಂದು ಭಾಸಿಸಿದರೂ ಭಾಸಿಸಬಹುದು. ಈಗ ನಮ್ಮ ಜಿಲ್ಲೆಯಲ್ಲಿ ನಡೆದಿರುವ ಬೆಟ್ಟಬೇಸಾಯಗಳ ಸನದಸೀರ ಕಾದಾಟದಲ್ಲಿ ಬೇಸಾಯದ ಪಕ್ಷವು ನ್ಯಾಯಪಕ್ಷವದೆ ಅದಕ್ಕೆ ವಿಪರೀತ ಅನ್ಯಾಯವಾಗಿದೆ ಹಿಂದುಸ್ಥಾನ ಸರಕಾರದ ಧೋರಣದ ಠರಾವುಯನ್ನು ಸಹ, ಅಧಿಕಾರ ಶಕ್ತಿಯುಳ್ಳ ಬೆಟ್ಟವು ಬರೇ ಹಿಂದು ಕಾಗದವೆಂಬಂತೆ ತಿರಸ್ಕರಿಸಿದೆಂದು. ಯಾರೊಬ್ಬ ಮೇಲಧಿಕಾರಿಗಳ ಮತವಾಗಬೇಕಾದರೆ ಅವರು ಯಾವದೇ ಪಕ್ಷದ ಪೂರ್ವಗ್ರಹಗಳನ್ನು ಹಿಡಿಯದೆ ಸ್ವತಂತ್ರವಾಗಿ ನಿರ್ಲೇಪಬುದ್ಧಿಯಿಂದ, ನಿರ್ಮಲ ದೃಷ್ಟಿಯಿಂದ ಎರಡೂ ಪಕ್ಷಗಳ ಲೇಖಿ ತೋಂಡಿ ಪುರಾವೆಯನ್ನು ನ್ಯಾಯಾಧೀಶರಂತೆ ಸಂಪರ್ಕಿಸಿ, ತಮ್ಮ ನಿರ್ಣಯಗಳನ್ನೂ, ಶಿಫಾರಸುಗಳನ್ನೂ ಪ್ರಕಟಿಸಬೇಕಾಗುವದು ಇಂಥ ಭಾರೀ ಜವಾಬದಾರಿಯು ಮಿ॥ ಹೂಡ ಸಾಹೇಬರಮೇಲಿದೆ. ಇವನ್ನೆಲ್ಲ ನೆನಿಸಿ ಈ ವಿಷಯದಲ್ಲಿ ಮತ್ತು ಇತರ ವಿಷಯಗಳಲ್ಲಿ ಹೊಸ ಜಿಲ್ಲಾಧಿಪರು ತಮ್ಮ ಕರ್ತವ್ಯವನ್ನು ಮನಮುಟ್ಟಿ ಮಾಡುವರೆಂದು ನಂಬಿ, ಅವರಿಗೆ ನಾವು ಮನಃಪೂರ್ವಕ ಸ್ವಾಗತವನ್ನೀಯುವೆವು

---

೨. ಪ್ರಾಥಮಿಕ ಶಿಕ್ಷಕರ ಸಂಬಳವೆಷ್ಟಿದೆ? ಈಗಿನ ಮಹಾಗರ್ತೆಯ ದುರ್ಭಿಕ್ಷಸಮಯದಲ್ಲಿ ಈ ಬಡ ವಿದ್ಯಾರ್ಥಿರ ಪಾಡು ಏನಾಗಿದೆಂದು ಅರಿತುಕೊಳ್ಳಲಿಚ್ಛಿಸುವವರು ಅಂಗಡಿಕಾರರ ಖಾತೆಯ ಪುಸ್ತಕಗಳನ್ನು ತೆರೆದರೆ ಇಲ್ಲವೆ ಮಾಸ್ತರರ ಖಾಸಗಿ ಲೆಕ್ಕದ ಟಿಪ್ಪಣಿಗಳನ್ನು ನೋಡಿದರೆ, ಯಥಾರ್ಥವಾಗಿ ಕಂಡುಬರುವದು ಇವರ ಸಂಬಳದ ಪ್ರಶ್ನೆಯನ್ನು ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಚರ್ಚಿಸಿದ್ದನ್ನು ನೋಡಿ, ಮುಂಬಯಿ ಕ್ರಾನಿಕಲ ಪತ್ರಿಕೆಯ ಶಿಕ್ಷಣ ವಿಷಯಕ ಟಿಪ್ಪಣಿಗಳನ್ನು (Educational Notes) ಬರೆಯುವ ಲೇಖಕನು, ನಮ್ಮ ಭಾವೀ ರಾಷ್ಟ್ರದ ಜನಕರಾಗಿರುವ ಈ ಅಧ್ಯಾಪಕ ವರ್ಗದ ಪ್ರಶ್ನೆಯು ರಾಷ್ಟ್ರೀಯ ಪ್ರಶ್ನೆಯಾಗಿದ್ದು, "ರಾಷ್ಟ್ರೀಯ ಸಭೆಯೇ' ಇದನ್ನು ಕೈಕೊಳ್ಳಬೇಕೆಂದು ಸೂಚಿಸಿರುವನು ಮತ್ತು ಈ ಉಪಕ್ರಮಕ್ಕಾಗಿ ನಮ್ಮ ಪರಿಷತ್ತನ್ನು ಹೊಗಳಿರುವನು ಬಡ ಪ್ರಾ। ಶಾಲಾ ಮಾಸ್ತರರ ಪಾಡು ಇಷ್ಟು ಕರುಣಾಸ್ಪದವಿದ್ದಾಗ, ಈಗ ದೊರೆಯುವ ಅವರ ಸಂಬಳವು ಲೊ। ಬೊ। ಮಾಸ್ತರರಿಗೆ ಎರಡು ತಿಂಗಳು ತಡವಾಗಿ ಸಿಗುವದೆಂದರೆ ದೊಡ್ಡ ಹುಣ್ಣಿನ ಮೇಲೆ ಮತ್ತೊಂದು ಹುಣ್ಣು ಎದ್ದಂತಾಗಿತ್ತೆಂದು ಹೇಳಬೇಕಲ್ಲವೇ? ಮಾರ್ಚ ತಿಂಗಳ ಪಗಾರು ಮೇ ತಿಂಗಳ ಕೊನೆಗೆ ಅವರ ಕೈಗೆ ಬಂದರೆ ಅವರು ಬಾಳಿರುವ ಬಗೆ ಹೇಗೆ? ಉದ್ರೀ ವ್ಯಾಪಾರ ಕೊಡುವ ಅಂಗಡಿಕಾರರಿಗೆ ಯಾ ಮತ್ಯಾರಿಗಾದರೂ ತಮ್ಮ ಸಂಬಳದ ರಕಮಿನ ರಶೀದಿಯನ್ನು ಕೊಟ್ಟು ವಿರ್ವಾಹಿಸುವ ಎಂದರೆ, ಇಂಥ ಅನಿಯಮಿತ ಮತ್ತು ದೀರ್ಘ ವಿಲಂಬದ ವ್ಯವಸ್ಥೆಯಿಂದ ರಶೀದಿಗಳನ್ನು ಸಹ ಇನ್ನು ಯಾರೂ ಕೊಳ್ಳುವದಿಲ್ಲ; ಸಂಬಳವೂ ಬೇಗ ದೊರೆಯುವದಿಲ್ಲ, ಇದ್ದ ಪತ್ತು ಸಹ ಹಾಳಾಗಿಹೋಗಿದೆ ಇಂಥ ಶೋಚನೀಯ ಗತಿಗಾಗಿ ಅವರಿಗೆ ಎಷ್ಟು ಶಾಬ್ದಿಕ ಸಹಾನುಭೂತಿಯನ್ನು ತೋರಿಸಿದರೂ ಅವರ ಹೊಟ್ಟೆಯೇನು ತುಂಬದು ಇಂಥ ಆಪತ್ತು ಅವರ ಮೇಲೆ ಯಾಕೆ ಬರುತ್ತದೆ? ಅವರಿಗೆ ಇದೊಂದು ಶಿಕ್ಷೆಯೋ? ಇಲ್ಲವೆ ಲೊ। ಬೊ। ಡೆಪ್ಯುಟಿ ಇನಸ್ಪೆಕ್ಟರರಿಗೆ ಸಂಬಳದ ಹಣವನ್ನೇ ಬೇಗ ಕೊಡುವದಿಲ್ಲ? ಈ ಯಾವ ಕಾರಣಗಳಿಂದ ಇದೆ, ಬರೆ ಡೆಪ್ಯುಟಿ ಇನಸ್ಪೆಕ್ಟರ ಸಾಹೇಬರ ಅಜಾಗ್ರತೆಯಿಂದ ಹೀಗಾಗಿದ್ದರೆ, ಈ ಅಜಾಗ್ರತೆಯನ್ನು 'Grave error" ದೊಡ್ಡ ತಪ್ಪೆಂದು ನಾವು ನಿಶೇಧಿಸುವದು ಪ್ರಚಲಿತ ಭಾಷೆಯಲ್ಲಿ ಯಥಾರ್ಥವಾಗುವದು ಇಂಥ ಅಜಾಗ್ರತೆಯು ಅನೇಕ ಕಡಿಮೆ ಪಗಾರದ ಮಾಸ್ತರರ-ಅವರ ಸಂಖ್ಯೆಯೇ ಹೆಚ್ಚಿರುವದು—ಹಣ ಕಾಡಿಸುವದು, ಕುದಿಯಲ್ಲಿ ಬಹಳೇ ಅನರ್ಥಕರವಾಗುವದು ಆದ್ದರಿಂದ ವಿದ್ಯಾಖಾತೆಯ ವರಿಷ್ಠರಿಗೆ ಇಂಥ ತಪ್ಪಿನ ಮೂಲಕಾರಣಗಳನ್ನು ಶೋಧಿಸಿ, ಇಂಥ ಆಪತ್ತು ಶಾಲಾ ಮಾಸ್ತರರಿಗೆ ಎಂದೂ ಸಂಭವಿಸದಂತೆ ಯೋಜಿಸಬೇಕಾಗಿ ನಾವು ಅತ್ಯಾಗ್ರಹಪೂರ್ವಕ ಅರಿಕೆಮಾಡುವೆವು.

---

೩ ಪಂಜಾಬನೊಳಗಾದ ಮತ್ತು ಇತರ ಪ್ರಾಂತಗಳಲ್ಲಾದ ಅಸ್ವಸ್ಥತೆಗಳ ವಿಷಯವಾಗಿ ಹಂಟರ ಕಮಿಟಿಯು ರಿಪೋರ್ಟು ಹಿಂದುಸ್ಥಾನ ಸರಕಾರ ಮತ್ತು ಬ್ರಿಟಿಶ ಸರಕಾರಗಳ ಅಭಿಪ್ರಾಯಗಳೊಡನೆ ಕಟ್ಟಕಡೆಗೆ ಮೊನ್ನೆ ಜಾಹೀರಾಯಿತು ಹಂಟರ ಕಮಿಟಿಯ ಯುರೋಪಿಯನ್ ಸಭಾಸದರ ಬಹುಮತದ ನಿರ್ಣಯು, ಹಿಂದೀ ಸಭಾಸದರ ಬೇರೊಂದು ನಿರ್ಣಯ, ಹಿಂದುಸ್ಥಾನ ಸರಕಾರದ ವಕಾಲತೀ ಸಮರ್ಥನೆ, ವಿಲಾಯತ ಸರಕಾರದ "ಶಾಂತಿರಸ್ತು ಪುಷ್ಟಿರಸ್ತು" ಹೇಳುವ ಆಜ್ಞಾದಾಯಕ, ಇವೆಲ್ಲವುಗಳನ್ನು ಎಷ್ಟೂ ತಾಳ್ಮೆಯಿಂದ, ಎಷ್ಟೂ ಶಾಂತಚಿತ್ತದಿಂದ ಓದಿನೋಡಿ, ಸತ್ಯವನ್ನಷ್ಟು ನೋಡಬೇಕಾದರೆ ಹಿಂದೀ ಲೋಕಮತಕ್ಕೆ ಕಮಿಟಿಯ ಬಹುಮತದ ನಿರ್ಣಯದಿಂದ ತೀರ, ನಿರಾಶೆಯಾಗಿದೆಂದು ಹೇಳದ ಹೊರತು ನಮಗೆ ಗತ್ಯಂತರವಿಲ್ಲ. ಹಿಂದುಸ್ಥಾನದಲ್ಲೆಲ್ಲ ಹಬ್ಬಬಹುದಾದಂಥ ಬಂಡಾಯಕ್ಕೆ ಕಾರಣವಾಗುವಂತೆ ಕೆಲವು ಸಣ್ಣದೊಡ್ಡ ಪಟ್ಟಣಗಳೊಳಗಿನ ಜನರು ದಂಗೆಯನ್ನೇ ಎಬ್ಬಿಸಿದ್ದರೆಂದು ಸಿದ್ಧಾಂತವನ್ನೊಂದು ಸ್ಥಾಪಿಸಿ, ಅದರ ಮೇಲೆ ಯಾವದೇ ನಿರ್ಣಯಗಳ ಇಮಾರತನ್ನು ಕಟ್ಟಿದರೆ, ಲಷ್ಕರ ಕಾಯಿದೆ, ಅದರಂತೆ ವಿಧಿಸಿದ ಅಮಾನುಷ ಶಿಕ್ಷೆ, ರಣಶೂರ ಡಾಯರ್ನ ಕೊಲೆ, ಇವೆಲ್ಲವುಗಳನ್ನು ಸಾಧಾರವಾಗಿ ಸಶಾಸ್ತ್ರವಾಗಿ ಅಚ್ಚ ತೋರಿಯಲಿಕ್ಕಾಗುವದು ೧೮೫೭ ನೇ ಬಂಡಾಯದಂಥ ಬಂಡಾಯವಾಗುವ ಪೂರ್ವ ಲಕ್ಷಣದ ದಂಗೆಗಳು ಅಲ್ಲಿ ಸಂಭವಿಸಿದ್ದವೆಂದು ಹಿಂದುಸ್ಥಾನದಲ್ಲಿ ವಾಸಿಸುವ ನಮಗೆ ಹಂಟರ ಕಮಿಟಿಯನು ಮನಗಾಣಿಸಲಿಕ್ಕೆ ಹವಣಿಸುವದೆಂದರೆ— ಈ ಪ್ರಯತ್ನವು ನಮ್ಮ ದೃಢ ರಾಜನಿಷ್ಠೆಗೆ ಅಪಮಾನಾಸ್ಪದವಿದೆಂಬ ಮಾತಿರಲಿ—ಇಂಥ ಅರಾಜಕ ಅನರ್ಥಪಾತವು ಸತ್ಯಸ್ಥಿತಿಯಾಗಿತ್ತೆಂದು ದೇವನೇ ಅವತರಿಸಿದರೂ ನಮ್ಮ ಮನಸ್ಸಿನಲ್ಲಿ ಹುಟ್ಟಿಸಿದ ಶಂಕೆಯನ್ನು ಅಲ್ಪವಾದರೂ ವೃಥಪಡಿಸಲಿಕ್ಕಾಗದು ಇಂಥ ವಿಸಂಗತ ಅನುಮಾನವನ್ನು ನಿರಾಕರಿಸಿ ನಮ್ಮ ರಾಜನಿಷ್ಠೆಯು ದೃಢವಾಗಿದೆಂದು ಹಿಂದುಸ್ಥಾನ ಸರಕಾರವೇ ಹೇಳುತ್ತದಲ್ಲವೆ? ಹಿಟ್ಟಿಗೆ ಹಂಟರ ಕಮಿಟಿಯು ಪ್ರಮಾಣಿಕ ಬುದ್ಧಿಯಿಂದ "ಪ್ರಮಾಣಿಕ ಕರ್ತವ್ಯತೆಯ" ತತ್ವಗಳನ್ನು ಬಹುಮತದಿಂದ ಪ್ರತಿಪಾದಿಸಿ ತಮಗೆ ಯುಕ್ತ ಕಂಡ ನಿರ್ಣಯಗಳನ್ನು ಕೊಟ್ಟಿರಬಹುದಿದ್ದು, ಈ ಹಿಂದೀ ಜನತೆಗೆ ಬಹಳೇ ನಿರಾಶಕರವಾಗುವಂಥ ಬಹಳೇ ಅಸಮಾಧಾನಕ್ಕೆ ಕಾರಣವಾಗುವ ತೀರ್ಪು ಕೊಟ್ಟಿದೆಂದು ಲೋಕಮತವಾಗಿತ್ತೆಂದು ಭಾವೀ ಇತಿಹಾಸಕಾರರು ಬ್ರಿಟಿಶ ಹಿಂದುಸ್ಥಾನದ ಇತಿಹಾಸದಲ್ಲಿ

ಸತ್ಯವನ್ನು ಸ್ಮರಿಸಿ ಬರೆಯಲಿಕ್ಕಾಗುವದೆಂದು. ನಮ್ಮ ಪ್ರಾಮಾಣಿಕಪಣತನದ ಇಂಥ ಅತಿರೇಕ ಮಹಾಪದವಿ ಪ್ರಕರಣದಲ್ಲಿ ನ್ಯಾಯಾನ್ಯಾಯದ ವಿಷಯವಾಗಿ ನಾವು ಮತ್ತೇನು ಬರೆಯುವದು? ಈ ನಿರ್ಣಯದಿಂ ದುಂಟಾಗುವ ವಿಷಾದದ ಮನೋಭಾವನೆಗಳನ್ನು ಸತ್ಯಶೀಲರಂತೆ ಸತ್ಯಾಗ್ರಹದಿಂದ ನಮ್ಮ ಸ್ವಶಕ್ತಿ ನಾವು ನಿಯಂತ್ರಿಸಿಕೊಳ್ಳುವದೇ ಲೇಸು. ಮತ್ತೇನು ಹೇಳುವದು?

ಹವ್ಯಕ ಸಮಾಜ.

ಕಾನಡಾ ಜಿಲ್ಲೆಯ ಹವ್ಯಕರೆ ಅವನತಿಯು ವಿಷಯವಾಗಿ ಈ ಮೊದಲು ಹಲವು ಜನರು ಅನೇಕ ಕಾರಣಗಳನ್ನು ತೋರಿಸಿರುವರು. ಆದರೆ ಹವ್ಯಕ ಸಮಾಜದ ದುಃಸ್ಥಿತಿಯ ನಿಜವಾದ ಕಾರಣವನ್ನು ತಿಳಿಯಲಿಕ್ಕೆ ಅವರ ಮುಖ್ಯ ಉದ್ಯೋಗಗಳನ್ನು ಅದು ವಿಶೇಷವಾಗಿ ಹಬ್ಬಿಕೊಂಡಿರುವ ಪ್ರದೇಶವನ್ನು ವಿಚಾರಿಸಿ ನೋಡಬೇಕಾಗುತ್ತದೆ. ಕಾನಡಾ ಜಿಲ್ಲೆಯ ಹವ್ಯಕರಲ್ಲಿ ಅನಿವಾರ್ಯ ಪಕ್ಷದಿಂದ ಶಹರಗಳಲ್ಲಿ ಮನೆ ಮಾಡಿಕೊಂಡಿರುವ ಸ್ವಲ್ಪ ಜನರ ಹೊರತು ಬಹುತಃ ಇತರ ಎಲ್ಲರೂ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಅವರ ಮುಖ್ಯ ಉದ್ಯೋಗವು ಕೃಷಿಕರ್ಮವಾಗಿರುವದು. ಅದ್ದರಿಂದ ಬೇರೆ ಸಮಾಜಗಳಂತೆ ಶಹರವಾಸದಿಂದ ಲಭಿಸುವ ಸುಧಾರಣಾ ಫಲದ, ಅಲ್ಪ ಸ್ವಲ್ಪವಾದರೂ ಉಪಭೋಗಿಸಲಿಕ್ಕೆ ಅವರಿಗೆ ಅನುಕೂಲತೆ ಇರುವದಿಲ್ಲ. ಇದರಿಂದಲೇ ಶಿಕ್ಷಣದ ನಿಜವಾದ ಮಹತ್ವವು ಅವರಿಗೆ ಗೊತ್ತಾಗುವದಿಲ್ಲ. ವಿದ್ಯೆ ಕಲಿಯುವದು ನೌಕರಿ ಮಾಡುವ ಇಚ್ಛೆಯಿಂದಲೇ ಎಂಬದೊಂದು ತಪ್ಪು ತಿಳುವಳಿಕೆಯು ಹಳ್ಳಿಗಾಡ ಜನರಲ್ಲಿ ಸಂಪೂರ್ಣವಾಗಿ ನೆಲೆಗೊಂಡಿರುವದು. ಮಕ್ಕಳಿಗೆ ವಿದ್ಯೆ ಕಲಿಸೆಂದರೆ "ನಮ್ಮ ಮನೆಗೆ ಓದು ಬರಿಯಲಿಕ್ಕೆ ಒಂದರಾಯಿತು. ಹೆಚ್ಚಿಗೆ ಕಲಿತು ಅವನೇನು ನೌಕರಿ ಮಾಡಬೇಕಾಗಿಲ್ಲ" ಎಂದೆನ್ನುವ ಧನಿಕರಿಗೇನೂ ಕಡಿಮೆಯಿಲ್ಲ. ಆದರೆ ಆ ಧನಿಕರಿಗೆ ಸದ್ಯದ ರಾಜಕೀಯ ಮುಂತಾದ ಮಹತ್ವದ ವಿಷಯಗಳ ಗಂಧವಾದರೂ ಇರುವದೋ? ಸಾಮಾನ್ಯವಾಗಿ ಅಧಿಕಾರಿಗಳಿಗೆ ಸಣ್ಣಪುಟ್ಟ ಅರ್ಜಿಗಳನ್ನು ಬರೆಯಲಿಕ್ಕೆ ಪರರ ಹಂಗು ತಪ್ಪದು. ಹಾಗಿರುವ ವಿದ್ಯಾಹೀನರೆಷ್ಟು! "ಕಾಕೋಽಪಿ ಜೀವತಿ ಚಿರಾಯು ಬಲಿಂಚ ಭುಂಕ್ತೇ" ಎಂಬ ಕವಿಯ ಉಕ್ತಿಯಂತೆ ಇಡೀ ಆಯುಷ್ಯವನ್ನೆಲ್ಲ ಒರೇ ಉದರಂಭರಣದಲ್ಲೇ ಹರಣ ಮಾಡಿದರೆ ಮನುಷ್ಯ ಜನ್ಮವನ್ನು ಪಡೆದೇನು ಸಾರ್ಥಕವಾಯಿತು?

ಅದ್ದರಿಂದ ಹವ್ಯಕ ಬಾಂಧವರೇ, ಇನ್ನಾದರೂ ಕಣ್ದೆರೆಯಿರಿ. ವಿದ್ಯಾಭ್ಯಾಸದಲ್ಲಿ ದಿನ ನೌಕರಿಗಿಂತ ಹೆಚ್ಚಿನ ಅಸಾಮಾನ್ಯವಾದದ್ದೊಂದು ಲಾಭವಿರುವದೆಂದು ಇನ್ನಾದರೂ ಮನಗಾಣಿರಿ. "ವಿದ್ಯಾವಿಹೀನಃ ಪಶುಃ" ಎಂಬಂತೆ ವಿದ್ಯೆ ಕಲಿಯದವನು ಅಜ್ಞಾನಾಂಧಕಾರದಲ್ಲಿ ಮುಣುಗಿದ ಪಶುವೇ ಸರಿ. ನಮ್ಮ ದೇಶದಲ್ಲಿ ಸಕಲ ಸಮಾಜಗಳೂ ವಿದ್ಯಾಸಾಗರದಿಂದ ಜ್ಞಾನಾಮೃತವನ್ನು ಉತ್ಸುಕತೆಯಿಂದ ಮಥಿಸುತ್ತಿರುವಾಗ ಮೃತ್ಯುವಿನ ಭಗಿನಿಯಾದ ನಿದ್ರಾದೇವತೆಯ ಮೋಹಪಾಶಕ್ಕೊಳಗಾಗಿ ಅವಳ ಸೇವೆಯಲ್ಲೇ ಮಗ್ನರಾಗಿರುವದೆಂದ ಬಾಣಾ? ಇನ್ನಾದರೂ ನಮ್ಮ ನೆರೆಯವರ ಜ್ಞಾನದಿಂದ ತೃಪ್ತಿ ಪಡದೆ ಹೆಚ್ಚಿನ ವಿದ್ಯಾರ್ಜನೆಗೆ ಪ್ರವರ್ತಿಸಿರಿ. ನಿಮ್ಮ ಮಕ್ಕಳಿಗೆ ವಿದ್ಯೆ ಕಲಿಸುವದಲ್ಲದೆ ನಿಮ್ಮ ಆಪ್ತೇಷ್ಟರಿಗೂ ಅದರಂತೆಯೇ ಆಗ್ರಹಪೂರ್ವಕವಾಗಿ ಉಪದೇಶಿಸುವದೂ ನಿಮ್ಮ ಕರ್ತವ್ಯವಾಗಿರುವದು. ನಿಮಗೆ ಮನೆಯೊಳಗೆ ಬೇಕಷ್ಟು ಉಣ್ಣ ತಿನ್ನಲಿಕ್ಕೆ ಇರುವದೆಂದು ನಿಮ್ಮ ಮಕ್ಕಳನ್ನು ಅಜ್ಞಾನದೊಳಗಿಡಬೇಡಿರಿ. "ಲೋಭಿಯ ಬದುಕು ಇದಿರೀ ಪಾಲು." ಎಂಬ ಗಾದೆಯನ್ನು ಚನ್ನಾಗಿ ಲಕ್ಷದಲ್ಲಿಟ್ಟು ಧನವನ್ನು ದೇವರು ದಯಪಾಲಿಸಿದಾಗಲೇ ಅದರ ಸದುಪಯೋಗವನ್ನು ಮಾಡಿಕೊಳ್ಳುವದು ನಿಮ್ಮ ಜಾಣತನವು. ನಿಮಗೆ ಬಹಳ ಹೆಚ್ಚಿನ ವಿದ್ಯಾರ್ಜನೆಗೆ ಅನುಕೂಲತೆ ಇಲ್ಲದಿದ್ದರೆ ಸಾಧ್ಯವಿದ್ದಷ್ಟಾದರೂ ಮನಃಪೂರ್ವಕ ಪ್ರಯತ್ನದಿಂದ ಸಂಪಾದಿಸಿಕೊಳ್ಳಿರಿ. ಇನ್ನು ಹಾಸಿಗೆಯ ಮೇಲೇ ಹೊರಳಾಡದೆ ಕಾಲ ಕಳೆಯಬೇಡಿರಿ [illegible].

ಓರ್ವ ಹವ್ಯಕ

ಕುಮಟಾ ಸಹಕಾರಿ ಸಂಘ.

ಈ ಸಂಘದ ವಾರ್ಷಿಕ ಸಾಧಾರಣ ಸಭೆಯು ರಾ|ಸಾ| [illegible] ಕಳೆದ ರವಿವಾರ ರಾ| ಸಾ| [illegible] [illegible]

[illegible] ಪರೀಕ್ಷಕರ) ರನ್ನು ನೇಮಿಸಲಾಯಿತು. "ಕುಮಟಾದ ವಿಸ್ತೃತ ಸಹಕಾರಿ ಸಂಘವು [illegible] ದರ ದರ [illegible] ಇಷ್ಟು ೧೧,೦೦೦ ರೂ. ರೇವು ವರ [illegible] ಮೇಲೆ ಸಂಘಕ್ಕೆ ಹಾನಿಯಾಗುತ್ತದೆ; (ಮಿ| ಮಿ [illegible] ಇವರ ಸಾಹುಕಾರ) ಗಂಗಾಬಾಯಿ ಇವರಿಗೆ ಬಂದೇ ನಂಟಿನಿಂದ ಕೊಡುವ ಕರಾರಿನ ಮೇಲೆ ದಾಗಿನೆ ಕೊಳ್ಳಲಿಕ್ಕೂ ೧,೦೦೦ ಕೊಟ್ಟದ್ದು ಪ್ರಶಸ್ತವಲ್ಲ, ಸಂಘದ ರಿಕಾರ್ಡಿನಲ್ಲಿ ಹಳೇ ಸಾಲದ ಕರಾರುಗಳೆಲ್ಲ ಕಾಣುವದಿಲ್ಲ; ಸಭಾಸದರ ಮೇಲಿನ ಬಾಕಿ ರಕಮು ಕಿಕ್ಕಿರಿದ್ದಷ್ಟರ ಮಟ್ಟಿಗೆ ಕಡಿಮೆ ಮಾಡಬೇಕು, ಸಂಘಕ್ಕಾಗಿ ಒಂದು ಸ್ವತಂತ್ರ ಆಫೀಸು ಇರಬೇಕು," ಎಂದು ಆಡಿಟರರು ಅಭಿಪ್ರಾಯಪಟ್ಟಿರುವರು. ಬಳಿಕ ಕೆಳಗಿನ ಗೃಹಸ್ಥರು ಕಾರ್ಯಕಾರೀ ಮಂಡಳದ ಸಭಾಸದರಾಗಿ ಆರಿಸಲ್ಪಟ್ಟರು. ರಾ| ಸಾ| ಪೈ (ಚೇರಮನ), ರಾ| ಜನಾರ್ದನ ಶಿವಪಂಡಿತ, ರಾ| ಗಣಪತಿ ಗಣೇಶ ಶಾಸ್ತ್ರಿ, ಮಿ| ಅಲ್ಲಿ ಅದವು ಸಾಹೇಬ, ರಾ| ಮಾಧವ ರಾವ ಕಾನ್ಹಾಗ ಕಲಬಾಗಕರ ಮಿ| ಘನಶ್ಯಾಂಡಿಸ ರಾ|ಸಾ| ಕುಲಕರ್ಣಿ. ಸಂಘದ ಆಫೀಸ ಕಟ್ಟುವದ ಸ್ಥಳದ ಸಂಬಂಧ ಸ್ವಲ್ಪ ಚರ್ಚೆಯಾದ ಮೇಲೆ ಸಭೆಯು ವಿಸರ್ಜನವಾಯಿತು.

ಇಹವೃತ್ತ.

ಕುಮಟಾ— ಆಕಾಶದಲ್ಲಿ ಮೋಡಗಳು ಕವಿಯುತ್ತಿವೆ. ನಿನ್ನೆ ರಾತ್ರಿ ಸ್ವಲ್ಪ ಮಳೆ ಬಿತ್ತು. ಹೀಗೆಯೇ ಮೇಘರಾಜನ ಕೃಪೆಯಾದರೆ, ಕಬ್ಬಿನ ಬಜಾವಾರೀತು. ಮೈಲಿಯ ಹಾವಳಿಯು ವಿಶೇಷವಿಲ್ಲ. ಸದ್ಯಕ್ಕೆ ಬಂದ ಪಾಲಾ ಅಕ್ಕಿಯಲ್ಲಿ ಕಸ-ಕಡ್ಡಿಗಳು ಸ್ವಲ್ಪ ಹೆಚ್ಚಿದ್ದರೂ, ಅದು ಆರೋಗ್ಯಕ್ಕೆ ಬಾಧಕವಲ್ಲೆಂತ ಹೇಳುತ್ತಾರೆ.

ಇಲ್ಲಿಯ ಜುಬಲಿ ಧರ್ಮಶಾಲೆಯಲ್ಲಿ ಕಳೆದ ತಾ. ೨೮ ನೇ ಶುಕ್ರವಾರ ದಿವಸ, ಈಗ ಇಲ್ಲಿ ಸ್ಥಾಪಿಸಲಿಕ್ಕಿದ್ದ ಕೆನರಾ ಬೆಂಕಿನ ಕುಮಟಾ ಶಾಖೆಗೆ ಭಾಂಡವಲು ಕೂಡಿಸಲು ಸ್ಥಾವಕಾರ ಜನರದೊಂದು ಜಾಹೀರ ಸಭೆಯೊಂದು ಡಿ| ಡೆ| ಕಲೆಕ್ಟರ ಮಿ| ಕೊಯಿಮುತ್ತೂರ ಇವರ ಅಧ್ಯಕ್ಷತೆಯ ಕೆಳಗೆ ಕೂಡಿತು. ಸಭೆಯ ಉದ್ದೇಶವನ್ನು ಅ| ರಿಜಿಸ್ತ್ರಾರ ಮಿ| ಹುಲಿ ಇವರು ತಿಳಿಸಿ ಹೇಳಿದರು. ಸಭೆಯಲ್ಲಿ ಕುಮಟೆ ಊರಿನಿಂದ ಹುರ್ತ ಬೇಕಾದ ೨೦ ಸಾವಿರ ರೂಪಾಯಿಗಳ ಭಾಂಡವಲನ್ನು ಕೂಡಿಸಿ ಕೊಡುತ್ತೇವೆಂದು ರಾ| ಸಾ| ಪೈರು ಅಭಿವಚನ ಕೊಟ್ಟರು.

ಕಳೆದ ವಾರದಿಂದ ಬಿಕ್ಕಿಯ ಗದ್ದಲದಿಂದ ಊರೆಲ್ಲ ಗೊಂದಲವಾಗಿದೆ! ಇಡೀ ಊರು ತಿರುಗಿದರೂ, ಎಲ್ಲ ಸಾಮಗ್ರಿಗಳಿದ್ದ ಒಂದು ಗಾಡಿ ಸಹ ಸಿಗುವದು ಅಪರೂಪವಾಗಿದೆ! ನೆರೆಯ ಹಳ್ಳಿಗಳಿಂದ ಗಾಡಿಗಳು ಬರುವದಿಲ್ಲ' ಈ ಪ್ರಸಂಗದಲ್ಲಿ ಗಾಡಿಕಾರರೆಲ್ಲರು ಕಳೆದ ಸಂಚಿಕೆಯಲ್ಲಿ ಕೊಟ್ಟ ಸರ್ ನಾರಾಯಣರಾಯರ ಉಪದೇಶವನ್ನು ಸ್ಮರಿಸಿ, ಬಿಟ್ಟ ಹಿಡಿದು ಬುಕ್ಸಾನಿ ಮಾಡುವವರ ಮೇಲೆ ಕೋರ್ಟಿನಲ್ಲಿ ದಾವೆ ಮಾಡುವರೇನು?

ಇಲ್ಲಿಯ ಗಿಬ್ಬ ಹಾಯಸ್ಕೂಲಿನ ಶಿಕ್ಷಕರಿದ್ದ ಶ್ರೀ| ಮಾಧವ ಮಂಜನಾಥ ಕಾನಡಾಗ ಇವರು ಕುಮಟೆಯ ಗೌಡ ಸಾರಸ್ವತ ಬ್ರಾಹ್ಮಣ ಜ್ಞಾತಿಯೊಳಗೆ ಎಮ್. ಏ., ಎಲ್.ಎಲ್. ಬಿ ಯಂಥ ಉಚ್ಚ ಪರೀಕ್ಷೆಯಲ್ಲಿ ಪಾಸಾದವರು ಇವರೇ ಮೊದಲಿನೇದಾವರಿರುವದರಿಂದ ಅವರನ್ನು ಅಭಿನಂದಿಸಲು ರಾ| ಮಾಧವ ರಾಮಕ್ಯಾನಬಾಗ, ರಾ|ಸಾ| ಪೈ ಮೊದಲಾದವರ ನಿಮಂತ್ರಣದ ಮೇರೆಗೆ ಕಳೆದ ಸೋಮವಾರ ದಿವಸ ಪಾಮುಲೇದಾರ ಶ್ರೀ| ನಾಡಿಗ ಇವರ ಅಧ್ಯಕ್ಷತೆಯಲ್ಲಿ ವೆಂಕಟರಮಣ ದೇವಸ್ಥಾನದ ಮಾಳಿಗೆ ಮೇಲೆ ಆ ಜ್ಞಾತಿಯವರ ಒಂದು ಸಭೆಯಾಯಿತು. ಜನಸಮೂಹವು ೨೦೦–೨೫೦ ಕ್ಕೆ ಮಿಕ್ಕಿತು. ಸಭೆಯಲ್ಲಿ, ರಾ| ಕೃಷ್ಣ ಪದ್ಮನಾಭ ಪ್ರಭು, ರಾ| ಮಾಧವ ರಾವ ಕಾನಡಾಗ, ರಾ| ಜಗನ್ನಾಥ ವಿಷ್ಣು ಗಾವಸಕರ, ರಾ| ನಾರಾಯಣ ಸುಬ್ರಾಯ ಕಾಮತ ರಾ| ಶೇಷಗಿರಿ ವಾಸುದೇವ ಕಾಮತ ಮೊದಲಾದವರ ಅಭಿನಂದನಪರ ಹಾಗೂ ಉಪದೇಶಪರ ಭಾಷಣಗಳಾದಮೇಲೆ "ಶಿಕ್ಷಣವು ಸಮಾಜದ ಉತ್ಕರ್ಷಕ್ಕೆ ಅತ್ಯವಶ್ಯವೆಂದೂ, ಇಂಥ ಸಮಾರಂಭಗಳಿಂದ ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತೇಜನ ಬರುತ್ತದೆಂದೂ ಅಧ್ಯಕ್ಷರು ನುಡಿದರು.

ಅಂಕೋಲಾ— ಹವಾಮಾನ ಕಳೆ ಮೋಡಗಳು ಗುತ್ತವೆ. ಮಳೆಯ ಹನಿಗಳೂ ನಾಲ್ಕು ಬೀಳುತ್ತವೆ.

ಈ ವರ್ಷ ಹಳ್ಳಿಪಳ್ಳಿಗಳಲ್ಲಿ ಇನ್ಫ್ಲುಎಂಜಾ ಮೈಲಿಗೆ ಬಹಳ ಜನರು ಬಲಿಬಿದ್ದರು.

ಬಾಜಾರ ದಾರಣೆಯು ಏರುತ್ತಲಿದೆ. ಜನರು ಚಿಂತಾಕುಲರಾಗಿರುವರು. ಸಕ್ಕರೆಯು ಬಹಳೇ ತುಟ್ಟಿಯಾಗಿದೆ.

ಇಲ್ಲಿಯ ಮಹಮ್ಮದೀ ಬಾಂಧವರು ಸಭೆ ಸೇರಿ ಖಿಲಾಫತ ಸಂಬಂಧ ದುಃಖಪ್ರದರ್ಶನದ ವಾರ್ತೆ ಕೆಲವು ದಂತಿಗೆ ಕೂಡಿಸಿ ಖಿಲಾಫತ ಕಮಿಟಿಗೆ ಈ ಮೊದಲೇ ಕಳುಹಿಸಿರುವದಾಗಿ ಊರಲ್ಲಿ ಸುದ್ದಿ. ಇದು ನಿಜವೋ? ನಿಜವಿದ್ದರೆ ಹಿಂದೂ ಬಾಂಧವರು ಅವರಿಗೆಷ್ಟು ಸಹಾಯ ಮಾಡಿದರು ?

ಹಳಿಯಾಳ— ತೀರ್ವ ಮಹಾರಿ ಬಗ್ಗೆ ಜಮೀನ ಜಪ್ತಿ ಮಾಡುವ ನೋಟೀಸುಗಳು ಹೊರಡುತ್ತಲಿವೆ ಬಡ ರಯತರ ಗೋಳಾಟ! ಅಧಿಕಾರಿಗಳು ಜಿಲ್ಲಾ ಸಭೆಯ ರಿವಾಜವನ್ನು ಲಕ್ಷಿಸಿ ತೀರ್ವ ಮಾಫ ಮಾಡುವರೇನು? ಟಪ್ಪರ ಸ್ಮಾರಕದ ಇಂಗ್ಲಿಷ ಶಾಲಾ ಸ್ಥಾಪನೆಯಾಗುವ ಚಿಹ್ನಗಳೇನು ತೋರುವದಿಲ್ಲ ಕಾರ್ಯಕಾರೀ ಮಂಡಳಿ ಏನು ಮಾಡುತ್ತಿದೆ?

— ✻ —

Boy Scout Movement in Kanara.

To

The Editor,

"Kanara News", Kumta.

Dear Sir,

It is admitted beyond doubt that the Boy Scout Movement which has been hailed as a happy augury for the future is spreading fast and wide and I am of opinion that if the need for any such movement be anywhere felt, it is our District of Kanara. The advantages of such an institution are immense, in that it teaches one to observe discipline (this is only one of the many advantages) which the youth of our District might need to a greater extent. It must be clearly explained here that such a movement has no political aspect about it and as such I entertain a hope that the Head Masters of every school will seriously take it into their heads, to institute it. Perhaps your readers will be interested to know that two such units are already in existance in Bombay, the members of which could be safely said to be Kanarites. It will therefore be observed that any advice and instructions will be readily tendered by the organisers of the movements in Bombay free of charge.

I further beg to announce through your columns that if any such movements are to see the light of day in the District of Kanara (preferably in every Taluka) the same shall receive financial assistance from me to an extent of nothing less than Rs 250/- each.

I shall be obliged if you will kindly give this letter the widest publicity in English and in the vernaculars so that all the people of the District may rightly appreciate the movement.

I am yours truly,

K. Y. Wagle.

Ambewadi, Girgaum, Bombay.

Calendar for 1920.

To

The Editor Kanara News.

Sir,

Will you please publish the following in your journal and oblige?

"Kanara can in future have a bright new freedom owing to Reforms".

The above sentence gives in short the future condition of Kanara as well as the calendar for 1920.

How to refer the calendar.—The sentence contains 12 words which stand for the 12 months. The number of letters in each word gives the exact date of the first **Tuesday** of that month. As:—Take the word "have". It is the 5th word, so the 5th month May. There are four letters in it, that means on the first Tuesday of that month the date will be four; and so also with other words in that sentence.

I am yours &c.

M. D. Nayak

ಕುಮಟೆ ಪೇಟೆ ಧಾರಣೆ.

ಜಿನಸು.	ದರ.
	ರೂ. ಆ.
ರಂಗೂನ ಬಿ. ಗೋಣಿಗೆ ೧ಕ್ಕೆ ..	೧೬—೧೬।
ಗೋದಿ ಗೋಣಿ ೧ಕ್ಕೆ ...	೧೯—೨೫
ಹುರುಳಿ ನಿಜ „ ...	೧೫॥
ಕಡಲೆ ನಿಜ ೧ಕ್ಕೆ ...	೧೬—೧೬॥
ತೊಗರಿಬೇಳೆ ಗೋಣಿ ೧ಕ್ಕೆ ...	೨೨—೨೦
ಹೆಸರು ಬೇಲ „ ...	೧೬—೨೮
ಉದ್ದು ವಸಾನಗಿ ...	೮॥—೯
ವೆಗೋರಿನ ಸಕ್ಕರೆ ಮಣ „ ...	೧೩—೧೩॥
ಮೆಣಸಿನ ಕಾಯಿ ಮಣ „ ...	೬—೧೩
ಹರಳೆಣ್ಣೆ ಮಣ ...	೧೦॥
ಕೊಬ್ರಿ ಖಂಡಿ ...	೧೧೫—೧೨೦
ಕೊಬ್ರಿಹಿಂಡಿ ಖಂಡಿ ...	೩೫—೩೭॥
ಹತ್ತಿಕಾಳು ಹಿಂಡಿ ಖಂಡಿ ...	೪೦
ಕೊಬ್ರಿ ಎಣ್ಣೆ ಮಣ ...	೧೦॥
ಕೊತ್ತಂಬರಿ ಗೋಣಿ „ ...	೧೨—೧೨॥
ಅಪ್ಪಕಾಯಿ ಮಣ ೧ಕ್ಕೆ ...	೧-೪-೦
ಉಪ್ಪು ಗೋಣಿ „ ...	೪-೫-೦
ಸೂರ್ಯ „ ...	೪-೨-೦
„ ಹಂಸ „ ...	೩-೬-೬
ಚಾಲಿ ಅಡಿಕೆ. „ ..	೬೦—೬೫
ಹೊಸಕಾಳುಮೆಣಸು ಖಂಡಿ ೧ಕ್ಕೆ...	೧೬೫—೧೭೨
ಯಾಲಕ್ಕಿ ಮಣ ೧ಕ್ಕೆ ...	೪೩—೫೧

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವೆವು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಜಗತ್ಪ್ರಖ್ಯಾತ! ಖಾತ್ರಿದಾಯಕ!! ಬಹುಮಾನಕಾರಕ!!!

ಮುಖ ಜೀವನಾಮೃತ.

ಈ ಔಷಧವು ಹಲ್ಲು ಕಳೆತ, ಹಲ್ಲು ನೋಯುವ ಹಲ್ಲು ಅಲಗಾಡುವ ಹಲ್ಲೊಳಗಿಂದ ರಕ್ತ ವ ಕೀವು ಸೋಯುವ, ಮುಖದಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ. ಇದಲ್ಲದೆ ಬಾಲಗ್ರಹ, ಎಲ್ಲಾ ತರದ ಜ್ವರ ತಲೆಯ ಬೇನೆ, ವಾಂತಿ, ಹೊಟ್ಟೆಕಚ್ಚೋಣ, ನಳಗುಳ, ಪ್ಲೇಗ, ಕೋಲರಾ, ಗುಂಟುಗಳಿಗೆ. ಮತ್ತು ವಿಷಕಾರ ಪ್ರಾಣಿಗಳು ಕಚ್ಚಿದ ಕಳೆತ, ಬಾಳಾಂತಿಯರಿಗೆ ನಂಜು ಏರಿದರೆ ವ ೨೦ ಪ್ರಕಾರದ ಮೋಹರೋಗಕ್ಕೆ ಗುಣ.

ಕ್ರಯ ಬಾಟ್ಲಿ ೧ಕ್ಕೆ ಛಕ್ತ ೦-೧೨-೦.

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದಿಕ ಕಂಪನಿ,

ಕುಮಟಾ. (ಎನ್. ಕೆನರಾ.)

ಸತ್ಯಮೇವ ಜಯತೇ.

(ಗುಣಬಾರದ್ದರೆ ಹಣಪರತು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ; ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗರ್ಮಿ, (ಹಾಕಿ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಚಟಕೋಲೆ ವಾತರೋಗ ಮುಂತಾದವು ಅತಿತ್ವರ್ಯದಿಂದಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ. ಖ. ಬೇರೆ. ಅನುಪಾನ ಪತ್ರಿಕೆ ಔಷಧದ ಸಂಗಡ.

ವಿಳಾಸ— ಜಿ. ಎಲ್. ಜೋಶಿ ಕಂಪನಿ,

ಪೋಷ್ಟ— ಬನವಾಸಿ. ಉತ್ತರ ಕಾನಡಾ,

ಸತ್ಯಾರ್ಥ ಪ್ರಕಾಶಃ.

೨ ಭಾಗಗಳ ಕಿಮ್ಮತು ೧-೪-೦.

ಎಸ್. ಎಲ್. ಧಾಕಪ್ಪಾ.

ಪೋಷ್ಟ- ಶಿರಸಿ. (ಉತ್ತರ ಕಾನಡಾ)

ಅತ್ಯುತ್ತಮ ವಾಚಗಳು.
ಸುಲಭ ಕ್ರಯ.

ಬಹಳ ಸಮಯ ತನಕ ನಡಿಯು ವಂಥಾದ್ದು ೩ ವರ್ಷ ಗ್ಯಾರಂಟಿ



ಜಂಜಿನ ಬೆಲೆ [illegible]
ರೂ 7–8–0 [illegible]

ಅತಿಸುಂದರವಾದ [illegible]

ಗುಂಜಿನ ಬೆಲೆ
ರೂಪಾಯಿ 10–0–0 [illegible]
[illegible]
ಪ್ಯಾಕಿಂಗು [illegible]
[illegible]
ಕೃಷ್ಣವಿಲಾಸ ಟ್ರೇಡಿಂಗ ಕಂಪನಿ,
ಗಿರಗಾಂವ, ಮುಂಬಯಿ
KRISHNAVILAS TRADING COMPANY,
Girgaum, BOMBAY

शिफारशीचे 'कामेश्वर मोदक.'
[illegible]
पत्ता— [illegible]

ಬ್ಯಾಧಿಯಿಂದ ಗುಣಪಡಿಸುವ
ಔಷಧಗಳು.

1 [illegible] ಬೆಳೆಯು [illegible] ತಲೆಸೋವು [illegible] ಗಂಟುಸೋವ, [illegible] ಸೋವು [illegible] ಸಂಧಿವಾತ [illegible] ತರದ ಸೋವುಗಳ ಮೇಲೆ [illegible] ಗುಣಪಡಿಸುತ್ತದೆ. [illegible] 1 ಕ್ಕೆ 0–8–0 [illegible]

2 [illegible] ಬಹಳ [illegible] ಎದೆಸೋವು [illegible] ದಿಂದ [illegible]

3 [illegible] — ([illegible]) — [illegible] 1 ಕ್ಕೆ 0–8–0

[illegible] 1 ಕ್ಕೆ 0–10–0

[illegible] 1 ಕ್ಕೆ 0–10–0

[illegible]

8 [illegible] 10 [illegible] 0–1–0 [illegible] 1–2–0

9 [illegible] ರೋಗಗಳ ಮೇಲೂ [illegible] ಔಷಧ [illegible] 1 ಕ್ಕೆ 0–12–0

10 [illegible] ಗಜಕರ್ಣ, ದದ್ದು, [illegible] ರೋಗಗಳು ಇದರಿಂದ 3 ದಿವಸಗಳಲ್ಲಿ ಗುಣವಾಗುವವು. ಡಬ್ಬಿ 1 ಕ್ಕೆ 0–6–0 3 ಡಬ್ಬಿಗಳಿಗೆ 1–0–0.

11 ದಂತಶೋಧನ . ಡಬ್ಬಿ 1 ಕ್ಕೆ 0–3–0 6 ಡಬ್ಬಿಗಳಿಗೆ 1–0–0

ಎಸ್. [illegible] ಸನ್ಸ್
ನೇಟಿವ್ ಕೆಮಿಸ್ಟ್ಸ [illegible]
[illegible]

ಹೊಸ ಶೋಧ! "[illegible]"
ಗುಣ ಬಾರದಿದ್ದರೆ ಹಣವರತು ಕೊಡುತ್ತೇವೆ!!
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)
ಅಮೃತ ಜೀವನ ಪಾಕು.

ಈ ಅತ್ಯುತ್ತಮವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ [illegible] ಸಿದ್ಧಮಾಡಿ ಅನುಭವಿಕ ದೇಶವೈದ್ಯರ [illegible] ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ [illegible] ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ [illegible] ಅಥವಾ ಅದರ ಮೇಲೆ ಧಾತು ಬೀಳುವದು [illegible] ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವದು. [illegible] ಉಷ್ಣ ಸಂಬಂಧಿಯ [illegible] ವಿಕಾರಗಳ [illegible] ಚೆನ್ನಾಗಿ ಹೊಟ್ಟೆ ಹಸಿಯುವದು. [illegible] ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣಪ್ರಾಪ್ತವಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ [illegible] ಆಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣ [illegible] ಇದರ ಅನುಭವವು ಸೇವನೆಯು [illegible] ದಿವಸ [illegible] ಬರುವದು. ಸ್ತ್ರೀಯರು ಸೇವಿಸಿದಲ್ಲಿ [illegible] ಸ್ತ್ರೀಯ [illegible] ವಾಗುವವಲ್ಲದೆ, ಮುಟ್ಟು [illegible] ವಾಗುವದರಿಂದ ಸ್ತ್ರೀಯು [illegible] ಗರ್ಭಧಾರಣೆಗೆ ಯೋಗ್ಯರಾಗುವ [illegible] ಇದ್ದರೆ [illegible] ಡಬ್ಬಿ [illegible] ಡಬ್ಬಿ ಪಾಕದಿಂ [illegible] ನಿದಾನ ಒಂದು ಸಾರಿಯಾದರೂ [illegible] ನೋಡಿರಿ.

ಬೆಲೆ [illegible] ಡಬ್ಬಿ [illegible]

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು [illegible] ಬರೆಯಬೇಕು

ಪತ್ತೆ— [illegible] ಬ್ರದರ್ಸ ಮತ್ತು ಕಂಪನಿ,
ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ

ಗ್ಯಾಸ ದೀಪಗಳು
ಬಾಡಿಗೆಗೆ ಇಟ್ಟಿರುತ್ತೇವೆ.

[illegible] ಸಾರ್ವಜನಿಕ [illegible] ಲಗ್ನ [illegible] ಸಮಾರಂಭಗಳ [illegible] ಜನಸಮೂಹ [illegible] ಇದರಿಂದ ಬೆಳಕು ಹೆಚ್ಚು [illegible] ಕಡಿಮೆ ತಗಲುತ್ತದೆ. ಈ [illegible] ಈ ದೀಪಗಳು ಹೆಚ್ಚು [illegible] ಕ್ರಯಗಳು ಸಹ ಇವೆ.

[illegible] ಬಾಡಿಗೆಯ [illegible]

[illegible]
[illegible] ಕುಮಟಾ

Reg. No B.1270

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೪.

ಪತ್ರದ ವರ್ಗಣಿ:-
ಕುಮಟೆಯಲ್ಲಿ ಅಗಾವು ರೂಪಾಯಿ 2-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-13-0
ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ –
ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ(೧೫ ಎರ್ಡ) ೩ ಸಾಲುಗಳ ವರೆಗೆ ರೂ. 1-0-0.
ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಂಗಿನ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ತಿಳಿಸಲ್ಪಡುವದು.

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೦ ಮಾಹೆ ಜೂನ ಸನ್ ೧೯೨೦ ನೇ ಇಸವಿ.]—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಸುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ, ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆ 1ಕ್ಕೆ 0-12-0 3 ಕ್ಕೆ 2 0 0
ದೊಡ್ಡ ಸೀಸೆಗೆ 1-8-0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಕೊಂಚವಾಗಿ ಉರಿ ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗಗಳನ್ನು ಗುಣ ಮಾಡುತ್ತದೆ
ಬಾಟ್ಲ 1 ರ ಕ್ರಯ 1 8 0
ಬಾಟ್ಲ 3 ರ ಕ್ರಯ 4-0 0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋ ಸಮಯದಲ್ಲಿ ಅತ್ಯಲ್ಪವಾಗಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ವೇದನಾಗುವದು ಸೊಂಟನೋವು, ಹೃದ್ರೋಗ, ಬಿಳಿಪ್ರದರ (ಬಿಳಿಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ ಬಾಟ್ಲಿಗೆ ರೂ 2/-

ಚೆನ್ ಚೆನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಜಕಂ, ಗಾಯ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ ಕ್ಕೆ ೩ ಆಣೆ ಟ ಞ. ಅನಾಯಿದ ಕೆಟಲಾಗಿಗೆ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7 ಕಂಕನಾಡಿ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೇರಿಯಾ, ಕಂಪಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳ ಪೂರ್ಣ ಗುಣಪಡಿಸುವದು. 8 ಔನ್ಸಿನ ಬಾಟ್ಲಿ 1 ಕ್ಕೆ ರೂ 1 8 ½ ಡಜನಿಗೆ ರೂ 8 8 1 ಡಜನಿಗೆ ರೂ 16 8

ಮಲೇರಿನ್:— ಮಲೇರಿಯದ ಮಾತ್ರೆಗಳು, ಪ್ರಯಾಣದಲ್ಲಿ ಬಹು ಪ್ರಯೋಜನಕರವಾದ್ದು 25 60 ಮತ್ತು 100 ಮಾತ್ರೆಗಳ ಆಣೆ 8 ರೂ 1 ಮತ್ತು ರೂ 8-1

ರೆಸ್ಟ್ರೆಮೊ ಬಾಮು: ತಲೆಶೂಲೆ, ಕರ್ಣಪಾಕ ಇತರ ಎಲ್ಲಾ ನೋವುಗಳಿಗೆ. ಕ್ರಯ ಡಬ್ಬಿ 1 ಕ್ಕೆ ಆ 8 1 ಡಜನಿ ರೂ 5-4 0

ಯೂಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ 1 10 1 ಡಜನಿಗೆ ರೂ 3

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1 2 4 ಔನ್ಸ್ 1 2 4
ಆ 2½ ಆ 3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರಿಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಹೊಕ್ಕ ರೊಡನೆ ಪಕ್ಕಾ ಪರಿಚಿತರಾಗಿ ಪ್ರಾಯಕ್ಕೂ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ಗೋಲ್ಡ ಗೋಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ, ಇತರ ಎಲ್ಲಾ ಸಾಮಾನುಗಳೂ ದೊರೆಯುವವು ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ತಿಳಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು

ಪತ್ತೆ:—
ಮಲೇರಿಯಾನಾ ಕಂಪೆನಿ,
7. ಮಂಗಳೂರು

ಗುರುಪ್ರಸಾಧಿಕಔಷಧಿ.

ಗುರುಕೃಪಾ— ಬಹಳವಾದಿ ಯಾವತ್ತು ರೋಗಗಳ ಮೇಲೆ ಒಂದೇ ಖಾತ್ರಿ ಲಾಯಕು ಔಷಧ. ಮುಷ್ಟಿರೋಗ, ಜ್ವರ, ಅತಿಸಾರ, ಸಂಗ್ರಹಣಿ, ಹೊಟ್ಟೆಶಳಕ, ದಮ್ಮು, ಶ್ವಾಸ, ನ್ಯುಮೋನಿಯಾ, ವಾತವಿಕಾರ ಹಡದವೇನೆ, ದುರ್ಗಂಧವೇನೆ, ತಲೆನೋವು ಮುಂತಾದ ಯಾವತ್ತು ರೋಗಗಳು. ಈ ಯಾವತ್ತು ರೋಗಗಳಿಗೆ ಈ ಔಷಧವು ಗುಣವನ್ನುಂಟು ಮಾಡುತ್ತದೆ ವಿಶೇಷ ಧಾತುಪುಷ್ಟಿ, ಔಷಧದ ಸಂಗಡ ಕಿಮ್ಮತ ೧ ತೊಲೆ ಬಾಟ್ಲಿಗೆ ೨ ರೂಪಾಯಿ. ½ ತೊಲೆ ಬಾಟ್ಲಿಗೆ ೮ ಆಣೆ

ಜ್ವರದ ಚೂರ್ಣ:— ಪರದೇಶಿ ಮತ್ತು ಸ್ವದೇಶಿ ಜ್ವರದ ಮೇಲಿನ ಔಷಧಕ್ಕಿಂತ ಇದು ಉತ್ತಮ. ಅದೆ. ಡಾಕ್ಟರ, ಹಕೀಮ ವೈದ್ಯ ಇವರು ಅನುಭವ ನೋಡಬೇಕು ಸ್ವಾನುಭವ ಇದೇ ಸರ್ಟಿಫಿಕೇಟು ಯಾವತ್ತು ಜ್ವರದ ಮೇಲೆ ಒಂದೇ ಪುಡಿಯಲ್ಲಿ ಕಡಿಮೆ ಗುಣವಾಗುತ್ತದೆ ಕ್ರಯ ೨ ಆಣೆ ಕಾಲ ಒಂದು ಪುಡಿಗೆ ೮ ಆಣೆ

ವಾತಶತ್ರು:— ಯಾವತ್ತು ಬಗೆಯ ವಾಯುವಿನ ಮೇಲೆ ೧ ತೊಲೆಗೆ ಕ್ರಯ ೧ ರೂಪಾಯಿ

ಸೂರ್ಯಪುಟಲೋಹ ಭಸ್ಮ:— ಪರದೇಶಿ ಲೋಹಕ್ಕಿಂತ ಇದು ಉತ್ತಮ. ಅದೆ ಅನುಭವ ಆದ ಮೇಲೆ ಎಚ್ಚರ ಆದೀತು. ೧ ತೊಲೆಗೆ ಕ್ರಯ ೨ ರೂಪಾಯಿ.

ಸುಖಶಾಂತಿ ತೈಲ:— ಈ ಎಣ್ಣೆಯು ಸುಗಂಧವಿದ್ದು ಗುಣಕಾರಕ ಇರುತ್ತದೆ, ತಲೆಗೆ ಹಚ್ಚಲಾಗಿ ಸಂತೋಷ ಮೆದುವಿನ ವಿಕಾರ ಹೋಗುತ್ತದೆ ಒಂದು ಬಾಟ್ಲಿಗೆ ೬ ಆಣೆ

ನಪುಂಸಕತ್ವಾರಿ ತೈಲ:— ನಪುಂಸಕರ ಇಂದ್ರಿಯ ಶಿಥಿಲತೆಯು ಹೋಗುತ್ತದೆ, ಕಿಮ್ಮತ್ತು ೧ ತೊಲೆಗೆ ೨ ರೂಪಾಯಿ

ಮುದ್ರಿಕ ಸುವಾಸಿಕ ಔಷಧಿ ನಾಶಪುಡಿ— ಈ ದೇಶದೊಳಗಿನ ಯಾವತ್ತು ನಾಶಪುಡಿಕ್ಕಿಂತ ಗುಣದಲ್ಲಿ ಶ್ರೇಷ್ಠವದೆ. ಕಿಮ್ಮತ ೧ ಬಾಟ್ಲಿಗೆ ೫ ಆಣೆ.

ನಮ್ಮಲ್ಲಿ ವಜ್ರಕ್ಷಾರ, ಬಾಲಗ್ರಹ ಸ್ತ್ರೀವಿಯೋಗದೋಷ ವಿನಾಶಕ, ನಾಗವಟಿ ವಗೈರೆ ಔಷಧಗಳು ಸಿಗುವವು. ಪೋಸ್ಟ ವ ಪ್ಯಾಕಿಂಗ ಖರ್ಚು ನಿರೆ

ಪತ್ತೆ— ನವಲರಾಮ ಗಣೇಶರಾಮ ಕಾಪಡ ಮತ್ತು ಔಷಧ ವ್ಯಾಪಾರಿ
ಕಾರವಾರ [illegible]

कानडा जिल्ह्याची पहिली जिल्हा परिषद व तिजवरून घेण्या जोगा बोध.

मुंबई इलाख्याच्या इतर जिल्ह्यात ज्या प्रमाणे राजकीय प्रश्नांची चर्चा मोठ्या जोरा ने चालली आहे तशी आजवर कानडा जिल्ह्यात चालली नसून तेथील लोक नायकांत मूकवृत्ति व प्रसंग विशेषी राजनिष्ठा व्यक्त करण्याची घडपड ही [illegible] हा प्रश्न एक तर साम्राज्यांतर्गत स्वराज्य मिळणे दूर भोगीत असावा. किंवा [illegible] उपभोगांत सर्वत्र [illegible] असावा असा समज होत असे [illegible] मध्यभागी वसलेल्या शहरांतील [illegible] उडयास येऊन त्यांना [illegible] विषयी थोडा [illegible] तथापि नोकरशाही [illegible] प्रावल्य कमी होण्यास [illegible] प्रकट होत राहिले पाहिजे [illegible] व स्थानिक हितासंबंधी प्रश्नांची [illegible] वाढ झाली पाहिजे म्हणूनच [illegible] आपले सार्वजनिक [illegible] काम करण्यास उमेद येते व [illegible] महत्वाचा वाटतो.

कानडा जिल्ह्याची [illegible] प्रारंभ झाला असून [illegible] नाहींशी झाली या जिल्ह्यांतील [illegible] मुख्य ठाण्यांत भरलेल्या जिल्हा सभेच्या पहिल्या अधिवेशनांत [illegible] गाऱ्हाणी मांडण्यास मुंबई सरकारने प्रतिनिधींस पाठवून दिले कोणत्याही पक्षा-च्या राजकीय प्रश्नांचे ज्ञान [illegible] हे प्रति-निधि सभागृहांत बसून करणार तरी काय? फार तर कानडावासीयांच्या मागे [illegible] जंगलखाते रूपी ससेमिऱ्यास [illegible] देऊन हे प्रतिनिधि स्वस्थानी जातील असाच कित्येकांचा समज होता. परंतु अधिवेशनांत पसार झालेले ठराव लक्षांत घेता हे प्रतिनिधि राजकीय शिक्षणाच्या व मताच्या बाबतीत इतर कोणत्याही जिल्ह्यास हार जाणारे नाहींत असे दिसून आले ही जितकी आन-दाची तितकीच अभिमानाची गोष्ट होय.

जरी कानडा जिल्ह्यांत सार्वजनिक चळवळी दृष्टीस पडत नाहींत, तरी लोकांस आपले हितहित कशांत आहे हें कळूं लागले आहे ही गोष्ट या जिल्हा सभेच्या अधिवेशनाहून सिद्ध झाली पंजाबांतील अत्याचारांनीं त्यांचे मन कळवळलें, रौलेट आक्ट नांवाच्या राक्षसी कायद्याचे हिडिस स्वरूप त्यांनीं जाणले, लोकपक्षाचा कैवार घेऊन त्यांच्या वतीने सर-कारापाशी भांडणाऱ्या होर्निमन् साहेबांच्या स्पष्ट-वक्त्या शूर गृहस्थास हद्दपार केलेले त्यास रुचले नाहीं हिंदु मुसलमानांचे सख्य कायम राहावे व खिलाफत प्रकरणांत आपल्या मुसलमान बंधूंस पूर्ण पाठिंबा द्यावा, हे त्यास इष्ट वाटलें अर्थात् अनेक राष्ट्रीय प्रश्नांचे महत्व आजवर मूकवृत्तीने दिवस कंठणाऱ्या कानडावासी यास आधींच कळून चुकले होते व संधि प्राप्त होताच त्यांनी आपले मत स्पष्ट पणे सरका-र या निदर्शनास आणून दिले यावरून नोकरशाहीने बोध घ्यावयाचा तो हा की, प्रत्येक तालुका व जिल्हा, तो कितीही गरीब असो व अज्ञानी असल्याप्रमाणे दिसो, त्याच्या ठायी राष्ट्रीय भावना उदित झाली आहे [illegible] चळवळ दिसून येत नाहीं इतक्या [illegible] संतुष्ट किंवा दैववादी आहेत व [illegible] मनमानेल तसा अधिकार गाजवून [illegible] हक्क हिरावून घेण्यात हरकत नाहीं [illegible] नोकरशाहीने लोकांचे खरे [illegible] प्रयत्न करावा. हें या जिल्हा [illegible] ठरावावरून व्यक्त होत नाही [illegible] जाणण्यास वकील, पगाराचे बडे अधिकारी, किंवा रावसाहेब रावबहादुर यांचे मत अथवा गुप्त पोलिसांचे रिपोर्ट उप-[illegible] नाहींत जे गरीबींत आणि [illegible] आहेत, ज्यांस त्रासदायक [illegible] परिणाम प्रत्यक्ष भोगावा लागतो व ज्यांस सरकार दरबारांत स्थान नसतो व आपले गाऱ्हाणी व्यवस्थित रीतीने अधिकाऱ्यांपुढें मांडण्याची कधीं सवीच साप-डत नाहीं अशा दीनहीन दिसणाऱ्या लोका [illegible] पुढाऱ्यांस सवलत करून त्यांकडून खरी [illegible] समजून घेण्याची [illegible] जिल्ह्यांतील [illegible] अधिकाऱ्यांत उत्पन्न झाली पाहिजे म्हणूनच खरें लोकमत कोणते हें त्यास [illegible]

परिषदेचे सुप्रसिद्ध अध्यक्ष व कानडा-जिल्ह्याचे [illegible] सुपुत्र [illegible] नारायणराव हे [illegible] किंवा पक्षपाती आहेत असे [illegible] लागणार नाहीं कारण कधीं त्यांचे मत नेमस्तांच्या मतीचें, तर कधीं राष्ट्रीय पक्षास मान्य होईल अशी असतात. अर्थात आपले मत प्रगट करताना ते आपल्या मनोदेवतेस विचारून तिच्या सल्ल्याप्रमाणे वागणारे आहेत. तरी पण त्याचा ओटा नेमस्त, नवाळ किंवा प्रागतिक या विशेषणाने ओळ-खल्या जाणाऱ्या राजकीय पक्षाकडे असून त्यांचे आधिपत्य पत्करणाऱ्या या परिषदेंत पसार झालेल्या ठरावांपैकी कित्येक ठरावें पसार होतील असे वाटले नव्हते. इतकेंच नव्हे तर यापैकी काही ठरावें त्यांनीच सभे-पुढें मांडले यावरून देखील असें म्हणता येईलकीं, लोकशाहीचा प्रभाव अत्यंत परिणाम-कारक असून त्याच्या देदीप्यमान तेजापुढें कोणत्याही पक्षाला एकतर्फी विजय मिळ-विता येत नाही. म्हणूनच नकळत आमचे अध्यक्ष कित्येक बाबींत राष्ट्रीय मताचे– किं-बहुना राष्ट्रीय सभेच्या मताचे – झाले ही संतोषाची गोष्ट होय.

खरें पाहिले असता हा पक्षभेद कां असावा? सर्वांना एकच अंतिम ध्येय साधवयाचें आहे. ते अंतिम ध्येय म्हटलें म्हणजे “साम्रा ज्यांतर्गत संपूर्ण स्वराज्य ” या स्वराज्यांत सर्व पक्षाच्या लोक नायकास समान हक्क प्राप्त होणार आहेत तेव्हां तें स्वराज्य लवकर हस्तगत करून घेण्याच्या कामी शक्तीचा उपयोग करावयाचा आहे. एक मेकाच्या उखाळ्या पाखाळ्या काढून मुख्य कार्याचा विध्वंस करण्यांत कोणत्याही प्रकारचा स्वार्थ ही नाहीं आणि परमार्थ ही नाहीं. इहपर लोकीं अपायकारक असें वर्तन समाज नाय-काकडून घडूंनये अशी खबरदारी घेणें हेच नवयुगास साजेसें आहे. याच धोरणानें कानडावासी लोक कार्यभार शिरावर घेऊन तें पारपाडण्यास अहर्निश झटतील तर त्यांनी ठरावांत मागितलेले स्वराज्य त्यास अल्प कालांत प्राप्त होईल. वंदे मातरम्.

मुंबई. } आपला,
ता १७–५–२० } श्रीकृष्ण.

ಜಗತ್ಪ್ರಖ್ಯಾತ' ಖಾತ್ರಿದಾಯಕ!! ಬಹುಮಾನಕಾರಕ'!!

ಮುಖ ಜೀವನಾಮೃತ.

ಈ ಔಷಧವು ಹಲ್ಲು ಬೆಳತ, ಹಲ್ಲು ನೋಯುವ ಹಲ್ಲು ಅಲುಗಾಡುವ ಹ ಲ್ಲುಗಳಿಂದ ರಕ್ತ ವ ಕೀವು ಸುರಿ ಯುವ, ಮುಖದಲ್ಲಿ ಉಂಟಾದ ದು ರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮ ಬಾಣ ಔಷಧ ಇದಲ್ಲದೆ ಬಾಲಗ್ರಹ, ಎಲ್ಲಾ ತರದ ಜ್ವರ ತಲೆನೋವು, ವಾಂತಿ, ಹೊಟ್ಟೆಕಚ್ಚೋಣ, ಸಳೆಗು ಳಾ, ಪ್ಲೇಗ, ಕಾಲರಾ, ಗುಂಟೆಗಳಿಗೆ, ಮತ್ತು ವಿಷಕಾರ ಪ್ರಾಣಿಗಳು ಕ ಚ್ಚಿದ ಬೆಳತ, ಬಾಳಂತಿಯರಿಗೆ ನಂ ಜು ಮೊದಲಾದ ವ ೨೦' ಪ್ರಕಾರದ ಮೇಹರೋಗಕ್ಕೆ ಗುಣ.

ಕ್ರಯ ಬಾಟ್ಲಿ ೧ಕ್ಕೆ ರೂ ೦–೧೨–೦.

ಪತ್ತೆ:- ಗೋವಿಂದ ಎಸ್. ಕೆರೇಕರ.
ಶ್ರೀ ಪಾಂಡುರಂಗ ಪ್ರಸಾದಿಕ ಕಂಪನಿ,
ಕುಮಟಾ (ಎನ್. ಕೆನರಾ)

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲೀಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳನ್ನು ನಾವು ಪೂರೈಸುವೆವು

ಪತ್ತೆ— ಭಟತೀ ಭ್ರಾತೃಸಂಘ,
ಗೋಕರ್ಣ

ರಾ। ರಾ। ಕಾನಡಾವೃತ್ತ ಕರ್ತರಿಗೆ.—

ಕಾನಡಾ ಜಿಲ್ಲೆಯ ರೈತರು ಫೋರೆಸ್ಟ್ ಖಾತೆಯಿಂದ ಮತ್ತು ಮೇಜಿಸ್ಟ್ರೇಟರಿಂದ ಹ್ಯಾಗೆ ಲುಕ್ಸಾನಿಗೆ ಪಾತ್ರರಾಗುತ್ತಾರೆಂಬ ಬಗ್ಗೆ ಒಂದು ಉದಾಹರಣೆ.

ನರಸಿಂಹ ವಿಶ್ವನಾಥ ಪರಾಂಜಪೆ ಮುಕ್ಕಾಮ ಮಾಜಗಣಿ, ತಾಲೂಕ ಶಿರ್ಶಿ, ಇವರು ತಮ್ಮ ಹೊಲಕ್ಕೆ ತಾಗಿದ್ದ ಅಡವಿಯಲ್ಲಿ ಸಾಧಾರಣ ೩೦ ಫೂಟವರೆಗೆ ಕಿರಿರುಮಾಡಿ ಕಡಿಯುವ ಬಗ್ಗೆ ರೈತರಿಗಿದ್ದ ಹಕ್ಕಿನ ಪ್ರಕಾರ ಅವರು ಕಡಿದ ಬಗ್ಗೆ ಫೋರೆಸ್ಟ ಗಾರ್ಡನು ಪಂಚನಾಮೆ ಮಾಡಿ ಪ್ರಕರ್ಣ ಮಾಡಿದಾ. ಅದರ ಬಗ್ಗೆ ಸದರಿಯವರಿಗೆ ೨-೦-೦ ಎರಡು ರೂಪಾಯಿ ಕಂಪೇನಸೇಶನ್ ಕೊಡಬೇಕು ಎಂತ ಹುಕುಂ ಆಯಿತು. ಅದು ಅವರು ಕೊಡಲಿಲ್ಲಾದ ಮೇಲೆ, ಶಿರ್ಶಿ ಮೇಜಿಸ್ಟ್ರೇಟರಲ್ಲಿ ಫಿರ್ಯಾದ ದಾಖಲಾಗಿ, ೪-೦-೦ ರೂಪಾಯಿ ಕಂಪೇನಸೇಶನ್ ಮತ್ತು ೧೦-೦-೦ ದಂಡಕೊಡಬೇಕೆಂತ ಠರಾವು ಆಯಿತು. ಅವರು ಇದೂ ಕೊಡದೆ, ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಕಡೆಗೆ ಅಪೀಲ ಮಾಡಿದರು. ಅಲ್ಲಿ

ಪೂರಾ ಮಾಫಿ ಆಯಿತು.

ತಮ್ಮ ಹೊಲದ ಹದ್ದಿಗೆ ಇದ್ದ ಅಡವಿಯ ಹದ್ದಿನಲ್ಲಿ ೩೩ ಫೂಟನವರೆಗೆ ಕಿರಿರುಮಾಡಿ ಕಡಿಯಬಹುದೆಂತಾ ಹುಕುಂ ಇದ್ದು, ಆ ಪ್ರಕಾರ ಮಾಡಿದಬಗ್ಗೆ ಬಡಪಾಯಿಯವರಿಗೆ ಇಷ್ಟು ತ್ರಾಸ ಆಯಿತು. ಬರಹ ಅರಿಯದ ಹಳ್ಳಿ ಸ್ಥಿತಿಯ ಜನರಿಗೆ ಫೋರೆಸ್ಟ ಖಾತೆಯವರು ಎಷ್ಟು ತ್ರಾಸಕೊಡುತ್ತಿರಬಹುದೆಂಬ ಕಲ್ಪನೆ ವಾಚಕರೇ ಮಾಡಬೇಕು. ಫೋರೆಸ್ಟ ನೌಕರರು ರೈತರಿಗೆ ಈ ಪ್ರಕಾರ ತ್ರಾಸ ಕೊಡುವ ಉದ್ದೇಶವೇನಿರಬಹುದು? ಮತ್ತು ಮೇಜಿಸ್ಟ್ರೇಟರು ಅನ್ಯಾಯದಿಂದ ಮಾಡುವ ದಂಡದ ಉದ್ದೇಶವೇನಿರಬಹುದೆಂಬುದನ್ನು ವಿಚಾರಿಸುವ ಕೆಲಸವನ್ನು ವಾಚಕರ ಕಡೆಗೇ ವಹಿಸಿ ಈ ಚಿಕ್ಕ ಲೇಖವನ್ನು ಮುಗಿಸುತ್ತೇನೆ

ತಾ ೨-೬-೨೦

ಗಂಗಾಧರ ರಾಮಚಂದ್ರ ಪಟವರ್ಧನ.

ಪತ್ರಿಕೆಗಳ ಅಂಬೋಣ.

(ಕಂಠೀರವ—ಮಂಗಳೂರ.)

ತುರ್ಕಿಯ ಆಟ ಇಲ್ಲಿಗೆ ಮುಗಿಯಿತು! — ತುರ್ಕಿಯ ಭವಿಷ್ಯ ಆಲೋಚಿಸಿದಂತೆಯೋ! ವೈಶ್ಯಾಸವೆಂದರೆ—ಕಾಲಬುದ್ಧಿ ಮಾತ್ರ! ಮಿತ್ರರು ಆಗಲೇ ತಮ್ಮ ಷರತ್ತುಗಳನ್ನು ತುರ್ಕಿಯ ಬಳಿಗೆ ಕಳುಹಿಸಿದ್ದಾರೆ ಅದರ ಇವು ಸಮಗ್ರವಾದ ಮುಸಲ್ಮಾನರ ಜಗತ್ತಿನಲ್ಲಿ ವಿಪರೀತವಾದ ಆಶ್ಚರ್ಯವನ್ನೇ, ಕೋಪಾನುತಾಪವನ್ನೇ ಉಂಟುಮಾಡತಕ್ಕವುಗಳಾಗಿರಬಹುದು, ನ್ಯಾಯಕ್ಕೂ, ನೀತಿಗೂ ಅಪ್ರಿಯವೆಂದೇ ತೋರತಕ್ಕವುಗಳಾಗಿರಬೇಕು ಆಡಿದ ಮಾತನ್ನು ಇಲ್ಲವೆಂದಾಡಿ, ಮಾಡಿದ ಶಪಥವನ್ನು ಇಲ್ಲವೆಂದು ದೂಡಿ, ಕೊನೆಗೂ ಸರ್ವ ಮಹಮ್ಮದೀಯರ ಮನೋಭಾವಗಳನ್ನೂ, ವಿನಂತಿಗಳನ್ನೂ ತಿರಸ್ಕಾರಪೂರ್ಣವಾಗಿ ತುಚ್ಛೀಕರಿಸುವ ಅಂಥ ಷರತ್ತುಗಳನ್ನೇ ಹೇಳಿ ಬರೆಯಿಸಲಿಕ್ಕೆ ಇಷ್ಟು ಕಾಲವು ಬೇಕಾಯಿತೇ! ಇದಕ್ಕೆ ಮಹಾಮಹಿಯ ಆ ಹದಿನಾಲ್ಕು ತಾಯಿಂಟುಗಳೇ ರಕ್ಷಾಯಂತ್ರವಾಯಿತೇ! ಹೇಗೂ ಮತಸಂಬಂಧದ ಮೌಢ್ಯವು ತನ್ನ ಜಯಭೇರಿಯನ್ನು ಹೊಡೆದು ವಿಕಟ ನರ್ತನಮಾಡುವುದಕ್ಕೆ ಉತ್ಕೃಷ್ಟ ಸಂದರ್ಭವೇ ಒದಗಿದಂತಾಯಿತು. ಇನ್ನೇನು? ತುರ್ಕರೆಲ್ಲರೂ ತಮ್ಮ ಮಂದಿರಗಳನ್ನು ಬಿಟ್ಟು, ಗಂಟು ಮೂಟೆಯ ಸಹಿತ, ಹೊರಗೋಂದೊಂದು ದಿಕ್ಕಿನ ಬಿಡಾರವನ್ನು ಹುಡುಕುವುದೇ. ತುರ್ಕೀ ಸುಲ್ತಾನರು ಮಿತ್ರರ ದಯೆಯಿಂದ ಕೊಟ್ಟಷ್ಟನ್ನೂ ಬೇಡನೆಂದು, ಬಿಟ್ಟಷ್ಟನ್ನೂ ಕೈ ನೀಡಿಯೂ, ಕೈ ಜೋಡಿಸಿಕೊಂಡೂ ತೆಗೆದುಕೊಂಡು, ಅಲ್ಲೆಲ್ಲಾದರೂ ಒಂದು ಮೂಲೆಯಲ್ಲಿ ಸುಖವಾಗಿರುವುದೇ. ಮತಸೀಮೆಕ್ಷತಿ, ಸ್ವಾರ್ಥಸಾಧನೆ, ವರ್ಣದ್ವೇಷಗಳ ಪ್ರತಿಫಲಗಳೆಲ್ಲವನ್ನೂ ಅನುಭವಿಸುತ್ತ, ಮಿತ್ರಪಕ್ಷದ ದಯೆ, ನ್ಯಾಯ, ನಾಗರೀಕತೆ, ಸ್ವಯಂನಿರ್ಣಯಗಳ ಪ್ರಭಾವವನ್ನು ಕುರಿತು ಹಗಲಿರುಳೂ ಚಿಂತಿಸುವುದೇ! ಈ ಮಧ್ಯೆ, ನಮ್ಮ ವೈಸರಾಯರದೊಂದು ವಿನಂತಿ; ನಮ್ಮ ಮುಸಲ್ಮಾನ ಬಂಧುಗಳಲ್ಲಿ! 'ನೀವು ನಮಗೆ ಸಹಾಯ್ಯಮಾಡಿದಿರಿ; ನಾವೂ ನಿಮಗಾಗಿ ಪ್ರಯತ್ನಪಟ್ಟೆವು. ಆದರೆ? ಆಗುವಂತೆಯೇ ಆದಾದ್ದರಿಂದ ನೀವು ಶಾಂತರಾಗಿರಿ! ಅದೇನು ಸಕ್ಕರೆಯು ಔಷಧ ವಿಷಪ್ರಯೋಗದ ಪ್ರಾಣವನ್ನುಳಿಸೀತೆ!

ಹಿಂದುಸ್ಥಾನದಲ್ಲಿ ಹಿಂದೂ–ಮುಸಲ್ಮಾನರು ಸರಕಾರಕ್ಕೆ ಹಾಕುವ ಬಹಿಷ್ಕಾರ.

(ವಿಜಯ—ಧಾರವಾಡ)

ಆಯರ್ಲಂಡದಲ್ಲಿ ನಡೆದ ಬಹಿಷ್ಕಾರದ ತೀವ್ರ ಚಿಕ್ಕ ಆವೃತ್ತಿಯು ಹಿಂದುಸ್ಥಾನದಲ್ಲಿ ತೋರತಕ್ಕದ್ದಿದೆ ಖಿಲಾಫತದ ಚಳವಳಿಯಲ್ಲಿ ಮುಸಲಮಾನರ ಶ್ರಮವೆಲ್ಲ ಗುಡ್ಡಕ್ಕೆ ಕಲ್ಲು ಹೊತ್ತಂತಾದ್ದರಿಂದ, ಸರಕಾರಕ್ಕೆ ಬಹಿಷ್ಕಾರ ಹಾಕಬೇಕೆಂದು ನಿರ್ಣಯಿಸಿದ್ದಾರೆ ಈ ಬಹಿಷ್ಕಾರವನ್ನು ಯಾವಪ್ರಕಾರದಿಂದ ಮೆಟ್ಟು ಹಿಡಿದು ಪ್ರಾರಂಭಿಸಬೇಕೆಂಬದನ್ನು ಈ ವರೆಗೆ ಹೊರವು ಹಾಕಿದ್ದರೂ, ಅದಕ್ಕೆ ದೃಶ್ಯ ಸ್ವರೂಪ ಕೊಡುವ ಬಗ್ಗೆ ಬೇಗನೆ ನಿಯಮ ಮಾಡತಕ್ಕವರಿದ್ದಾರೆ. ಮಹಾತ್ಮಾ ಗಾಂಧಿಯವರು ಈ ಅಸಹಕಾರಿತೆಯಲ್ಲಿ ಮುಂದಾಳುತನವನ್ನು ಸ್ವೀಕರಿಸಿದ್ದರಿಂದ, ಮುಸಲಮಾನರಿಗೆ ದೊಡ್ಡ ಬೆಂಬಲಕ್ಕಿರುತ್ತದೆ ಪೋಲೀಸ ಮತ್ತು ದಂಡಿನಲ್ಲಿರುವ ಹಿಂದೂ ಮುಸಲಮಾನ ಸಿಪಾಯರು ರಾಜೀನಾಮೆ ಕೊಟ್ಟು, ಮನೆಯದಾರೀ ಹಿಡಿಯಬೇಕೆಂದೂ ಇದರಲ್ಲಿ ಸರಕಾರವು ತಾನಾಗಿ ಹಣ್ಣಿಗೆಬರುವದೆಂಬು ತತ್ವವಿರುವದರಿಂದಲೂ, ಬಹಿಷ್ಕಾರಕ್ಕೆ ಉಗ್ರಸ್ವರೂಪ ಬರತಕ್ಕದ್ದಿದೆ ಒಮ್ಮಿಂದೊಮ್ಮೆ ಬಹಿಷ್ಕಾರದ ದೀಕ್ಷೆಯನ್ನು ತೆಗೆದುಕೊಂಡು ಕೆಲಸಬಿಡತಕ್ಕವರ ಪೋಷಣೆಗಾಗಿ ಫಂಡು ಕೂಡಿಸುವ ಉದ್ಯೋಗ ನಡದಿದೆ.

ಬ್ರಿಟಿಶ್ ನ್ಯಾಯದೇವತೆಯ ಕೊಲೆ.

(ಕರ್ನಾಟಕಮಿತ್ರ—ಬೆಳಗಾಂವಿ.)

ಬಹುದಿವಸ ಕಾಯ್ದು ಕೊಂಡಿದ್ದ ಹಂಟರಕಮಿಟಿಯ ರಿಪೋರ್ಟು ಒಮ್ಮೆ ಬಿಸಿಲು ಕಂಡಿತು. ವರ್ಷಾನುವರ್ಷ ವಿಚಾರಣೆ ನಡಿಸಿ ಸಾಕ್ಷಿಪುರಾವೆಗಳನ್ನು ಹಿಗ್ಗಾಮುಗ್ಗಾ ಎಳೆದು, ಹಿಂಡಿ ತೆಗೆದ ಈ 'ರಿಪೋರ್ಟ'ನಲ್ಲಿ ಸಮುದ್ರಮಂಥನಮಾಡಿದಂತೆ, ಏನಾದರೂ ಅಮೃತದಂಥ ವಸ್ತುವು, ವಿಷದಂಥ ಅಸವ್ಯವಸ್ತು ಅಂದರೆ ನಿಜವಾದ ಸತ್ಯಾಸತ್ಯವು ಹೊರಬೀಳುವದೆಂದು ನಾವು ನನಿಸಿದ್ದೆವು, ಆದರೆ ಅವೆಲ್ಲ ಸುಳ್ಳಾಗಿ ವಿಷಮಯದ ಮತ್ತು ಅನ್ಯಾಯದ ಕಂತೆಯೇ ನಮ್ಮ ತಲೆಯ ಮೇಲೆ ಹೇರಲ್ಪಟ್ಟಿದೆ. ಹಂಟರಸಾಹೇಬರೇ ಪ್ರಮುಖರಾದ ಈ ಮಂಡಲಿಯಲ್ಲಿ ೬ ಜನ ಯುರೋಪಿಯನ್ನರಿದ್ದು, ೩ ಹಿಂದು ಜನರಿದ್ದರು. ಈ ಮೂವರು ಹಿಂದು ಜನರೆಂದರೆ ಸರಕಾರದವರ ಅಂಗೈಯಲ್ಲಾಡುವ ಗಿಣಿಗಳು; ಈ ಗಿಣಿಗಳೇ ತಮ್ಮ ಹುಟ್ಟು ಗುಣವನ್ನು ಬಿಟ್ಟು, ಸರಕಾರದವರಿಗೆ ಎದುರುತ್ತರವನ್ನು ಕೊಟ್ಟು, ಅವರ ರಾಕ್ಷಸೀ ಕೃತ್ಯದ ಬಗ್ಗೆ ತೀವ್ರ ತಿರಸ್ಕಾರವನ್ನು ನಿರ್ದೇಶಿಸುತ್ತಿರುವದು ಮನ್ವಂತರದ ದ್ಯೋತಕವಾಗಿದೆ ಅದು ಹೇಗೇ ಇರಲಿ. ಸರಕಾರದವರು ನಮ್ಮ ಜನರ ಕಮಿಟಿಗೆ ಎಷ್ಟರಮಟ್ಟಿಗೆ ಮಾನ ಕೊಡುವರೆಂಬುದು ಗೊತ್ತಾದ ಹಾಗಾಯಿತು; ಏನೋ ಜನರಿಂದ ಯಾವ ವಿಧದ ದೂರುಗಳು ಒದಗುವವೆಂದು ಅವರು ಹೆಸರಿಗೆ ೩ ಬಣ್ಣದ ಗೊಂಬೆಗಳನ್ನು ಕೂಡ್ರಿಸಿ, ತಮ್ಮ ಕೆಲಸವನ್ನು ನಡಿಸಿದರು; ಮತ್ತು ತೋರಿಕೆಗೆ, ಅವರಿಗೂ ತಮ್ಮ ಅಭಿಪ್ರಾಯವನ್ನು ಕೊಡಲಿಕ್ಕೆ ಹೇಳಿದರು. ಆದರೆ ಆ ಅಭಿಪ್ರಾಯವು ಮಾತ್ರ 'ಇಗೋ ನೋಡಿರಿ' ನಿಮ್ಮ ಜನರನ್ನು ಈ ವಿಚಾರಣೆಯಲ್ಲಿ ತೆಗೆದುಕೊಂಡಿರುವೆವೆಂದು ತೋರಿಸಲಿಕ್ಕಷ್ಟೇ' ಕೆಲಸಕ್ಕಲ್ಲ. ಈ ಮೇರೆಗೆ, ಹಂಟರ ಕಮಿಟಿಯ ಬಂಟರು ಬಂಧುಗಳಾದ ತಮ್ಮ ಡಾಯರ, ಓಡ್ವಾಯರ, ಮೊದಲಾದವರ ಆಸುರೀ ಕೃತಿಗಳನ್ನು "ಅಗ್ಗ ಹಾಗೆ ಮಾಡುವದು ಅವಶ್ಯವೇ ಇತ್ತು. " ಹಾಗಿಲ್ಲದಿದ್ದರೆ "ಜನರೆಬ್ಬಿಸಿದ ಬಂಡಾಯವು ತಮ್ಮಷ್ಟಕ್ಕೆ ತಣಿಯುತ್ತಿರಲಿಲ್ಲ " "ಇಂಥ ಘೋರ ಕೃತಿಗಳು ಇನ್ನು ಮುಂದೆ ಆಗಗೊಡದಂತೆ ವ್ಯವಸ್ಥೆ ಇರಬೇಕು " ಎಂದು ಮುಂತಾಗಿ ಬೆಲ್ಲದಂಥ ಮಾತುಗಳನ್ನಾಡಿ ತಮ್ಮ ಘೋರಕೃತಿಗಳ ಮೇಲೆ ಕಂಬಳಿಯನ್ನೆಳೆಯಲು ಪ್ರಯತ್ನಿಸಿರುವರು. ಮತ್ತು ಈ ಘೋರ ಕೃತಿಯ ಪ್ರವರ್ತಕರಿಗೆ ಚೌಕಿಯಲ್ಲಿ ಒಂದೆರಡು ಪೆಟ್ಟುಗಳು ಬಿದ್ದಂತಾಯಿತು, ಮತ್ತೊಂದೆಡೆಯಲ್ಲಿ ಓಡ್ವಾಯರಿಗೆ ಭಲೆ, ಭಲೆ, ಎಂದು ಬೆನ್ನು ಚಪ್ಪರಿಸಿ, ಅನ್ಯೋನ್ಯರೆಡೆಗೆ ಲಾರ್ಡ ಚಮ್ಸಫರ್ಡರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಅರ್ಪಿಸಿರುತ್ತಾರೆ

ಹಂಟರ ಕಮಿಟಿಯವರು ಈ ರೀತಿಯಾಗಿ ಘೋರ ದೋಷಿಗಳಾದ ತಮ್ಮ ಬಾಂಧವರ ತಪ್ಪಿಗೆ ಒಪ್ಪುವ ಸ್ವರೂಪವನ್ನು ಕೊಟ್ಟು, ಬೊಲಕ್ಕೇರಿಸುವವರನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿದ್ದೇನೂ ಅಸ್ವಾಭಾವಿಕವಲ್ಲ; ಅದು ಒಂದು ವೇಳೆ ಸಮಂಜಸವಿರಬಹುದು; ಅನ್ಯಾಯವೂ ಇರಬಹುದು. ಆದರೆ, ಆ ಅನ್ಯಾಯವೂ, ಆ ಅಸಮಂಜಸತನವೂ, ಹುಟ್ಟು ಕುರುಡಾದ ಬಂಧುಪ್ರೇಮಕ್ಕೆ ಕಾಣಿಸುವ ಮಾರ್ಗವೆಂತು! ತನ್ನದೆಂಬುವದೆಲ್ಲ ಚೆನ್ನವೆಂಬೀ ದೃಷ್ಟಿಯಿಂದ ತೀರ್ಪು ಕೊಟ್ಟ ಯುರೋಪಿಯನ್ನರಿಗೆ ನೂರಾರು ಹಿಂದು ಜನರ ಕೊಲೆಮಾಡಿದ ಆಕ್ಷಮ್ಯ ತಪ್ಪು ಕಾಣದೆ ಹೋಗಿ, ಆ ತಪ್ಪಿಗಾಗಿ ಅವರು ಡಾಯರರಿಗೇ 'ರಂಡೇಗಂಡಾ' ಎಂದು ಮತ್ತಗೆ ಕೈಬದ್ದನ್ನು, ಹಿಂದು ಜನರಿಗೆ ಮಾತ್ರ 'ಒಂದುಗಾರ'ರೆಂದು ಕರೆದದ್ದನ್ನು ನೋಡಿದರೆ, ಕಳ್ಳನ ಜೊತ್ತೆಯ ಕಥೆಯು ನೆನಪಾಗುತ್ತದೆ

ಯುರೋಪಿಯನ್ನರು ಸತ್ಯ ನುಡಿಯುವದರಿಂದ ಜಲಿಯನ್‌ವಾಲಾ ಬಾಗಿನಲ್ಲಿ ಸತ್ತವರು ತಿರಿಗಿ ಜೀವಿಸುವರು, ಹೀಗೇನೂ ಅಲ್ಲ, ಅವರು ನಿಜವಾದ ರಾಜನೀತಿಜ್ಞರಾದ ಪಕ್ಷಕ್ಕೆ ನಾಲ್ಕು ಜನರ ಜೀವಕ್ಕಿಂತ ಬ್ರಿಟಿಶ ನ್ಯಾಯದೇವತೆಯನ್ನು ಮನ್ನಿಸಬಹುದಾಗಿತ್ತು. ಅದಕ್ಕೇ, 'ರಾಜನೀತಿಜ್ಞರು ಧರ್ಮನೀತಿಜ್ಞರಷ್ಟೇ ನಿರ್ವಿಕಾರ ಹಾಗೂ ಉದಾರದೃಷ್ಟಿಯುಳ್ಳವರಾಗಿರಬೇಕು' ಎಂದು ನಮ್ಮ ಋಷಿಗಳು ಹೇಳುವರು. ಪಾಶ್ಚಾತ್ಯ ರಾಜನೀತಿಜ್ಞರ ದೃಷ್ಟಿಯು ಯಾವಾಗಲೂ ಸಂಕುಚಿತವಾದ ಸ್ವಾರ್ಥದಿಂದ ಕುರುಡಾಗಿರುವ ವಿದ್ಯಮಾನವು ಅನೇಕ ಪ್ರಸಂಗಗಳಲ್ಲಿ ವ್ಯಕ್ತವಾಗುತ್ತದೆ. ಅದರಂತೆ, ಅದು ಈಗ ನಿರ್ವಿವಾದವಾಗಿ ಸಿದ್ಧವಾಗಿದೆ, ಆದರೆ ಈ ಬಲ್ಲಿಗರು ತಮ್ಮ ಅಮೃತಸರ ಕೊಲೆಯಿಂದ ತಮ್ಮ ಬಂಧುಗಳನ್ನು ಉಳಿಸಲಿಕ್ಕೆ ಹೋಗಿ, ಸ್ವಾರ್ಥಕ್ಕೆ ಮರುಳಾಗಿ ಬ್ರಿಟಿಶ ನ್ಯಾಯದೇವತೆಯ ಕೊಲೆಯನ್ನೇ ಮಾಡಿದ್ದು ಅತ್ಯಂತ ಖೇದಜನಕವಾದ ಸಂಗತಿಯು.

ಕಾನಡಾವೃತ್ತ.

ಗುರುವಾರ, ತಾರೀಖು ೧೦ ಮಾಹೆ ಜೂನ ೧೯೨೦

ನ್ಯಾಯ್ಯ ಬೇಡಿಕೆ.

ಹೊಸ ಕಾಯಿದೆ ಕೌನ್ಸಿಲಿಗೆ, ಜಾತಿವಾರ ಸಂಘಗಳಿಂದ ಮತ್ತು ಇತರೆ ಸಂಘಗಳಿಂದ, ಯಾವ್ಯಾವ ಮತದಾರರು ಎಷ್ಟೆಷ್ಟು ಮೆಂಬರರನ್ನು ಆರಿಸಬೇಕು? ಒಟ್ಟೂ ಮೆಂಬರರ ಸಂಖ್ಯೆಯೆಷ್ಟು? ಮತದಾರಿ ಲಾಯಖಿ, ಉಮೇದ್ವಾರಿ ಲಾಯಖಿ, ಎಲೆಕ್ಷನ ವಿಷಯಗಳ ಬಗ್ಗೆ ಪೂರ್ಣ ಖುಲಾಸೆ, ನಿಯಮ, ಸ್ಟೇಟ ನಿಯಮಗಳೆಲ್ಲ ಪ್ರಸಿದ್ಧವಾಗಿವೆ ಹಿಂದುಸ್ಥಾನ ಸರಕಾರವು ಪಸಂತಿಗೆಂದು ಅವುಗಳನ್ನು ಸ್ಟೇಟ ಸೆಕ್ರೆಟರಿಯವರಿಗೆ ಸಾದರಪಡಿಸಿದೆ ಸ್ಟೇಟ ಸೆಕ್ರೆಟರಿಯವರು ಪಾರ್ಲಿಮೆಂಟಿನ ಮುಂದಿತರ ಆಶ್ವಾಸನೆಯನ್ನು ಕೊಟ್ಟಂತೆ, [illegible] ಮತದ ಚರ್ಚೆಗೆಂದು, ಈ ನಿಯಮಾವಳಿಯು ಪ್ರಕಟಿಸಲ್ಪಟ್ಟಿದೆಂದು ಕೇಳಿದು, ಈ ವಿಷಯ ನಮ್ಮ ಜಿಲ್ಲೆಯ ತರ್ಫೆಯಿಂದ ಒಂದು ಬೇಡಿಕೆಯನ್ನು ಸರಕಾರದ ಮುಂದಿಡುವೆವು

ಮುಸಲ್ಮಾನೇತರ ಜಿಲ್ಲಾ ಸಂಘಗಳ ಮೆಂಬರರನ್ನು ಹಂಚುವಾಗ, ಯಾವ ತತ್ವಗಳನ್ನು ಸರಕಾರವು ಅವಲಂಬಿಸಿದೆಂಬದು ನಾವು ಅರಿಯೆವು ಜನಸಂಖ್ಯೆ, ಮತದಾರರ ಸಂಖ್ಯೆ, ಬಡತನ, ಅಶಿಕ್ಷಿತತೆ, ಹಿಂದುಳಿದಿರುವ ಸ್ಥಿತಿ, ಇವೆಲ್ಲ ಕಾರಣಗಳನ್ನು ಲಕ್ಷಿಸಿ ಜಿಲ್ಲಾ ಸಂಘಗಳ ಮೆಂಬರರ ಸಂಖ್ಯೆಯು ನಿರ್ಣಯಿಸಲ್ಪಡುವದು ನ್ಯಾಯ್ಯವದೆಂದು ನಮ್ಮ ಮತವು ಇವೆಲ್ಲ ಸಂಗತಿಗಳನ್ನು ಲಕ್ಷಿಸದೆ, ಇವುಗಳೊಳಗಿನ ಯಾವದೊಂದೇ ಕಾರಣವನ್ನು ಅವಲಂಬಿಸಿ, ಮೆಂಬರರ ವಾಂಟಣಿಯಾದದ್ದಿದ್ದರೆ, ಅನೇಕ ಜಿಲ್ಲಾ ಸಂಘಗಳಿಗೆ ಒಂದಿಲ್ಲೊಂದು ರೀತಿಯಿಂದ ಅನ್ಯಾಯವಾಗದಿರದು. ಸಾಕಷ್ಟು ಪ್ರಮಾಣಕ್ಕಿಂತ ಕಡಿಮೆ ಸಂಖ್ಯೆಯ ಮೆಂಬರರಿಂದ ತಮ್ಮ ಜಿಲ್ಲಾ ಸಂಘದ ಹಿತವನ್ನು ಸಾಧಿಸಲಿಕ್ಕಾಗದೆ, ಸುಧಾರಣಾ ಯೋಜನೆಯು ಉದ್ದಿಷ್ಟವೇ. ಬಹಳ ಅಪೂರ್ಣವಾಗಿ ಕೊನೆಗಾಣುವದು. ಇದೇ ದೃಷ್ಟಿಯಿಂದ ನಮ್ಮ ಜಿಲ್ಲೆಯ ಪಾಲಿಗೆ ಒಂದೇ ಒಂದು ಮೆಂಬರರನ್ನಾರಿಸುವ ಹಕ್ಕನ್ನು ಅನುಗ್ರಹಿಸಿದ್ದು ನ್ಯಾಯವಾಗಿಲ್ಲ. ನಮಗೆ ದೊರೆತ ಪ್ರತಿನಿಧಿತ್ವದ ಹಕ್ಕು ಸಾಕಷ್ಟಿಲ್ಲ, ಕೊಟ್ಟಷ್ಟು ಹಕ್ಕಿನಿಂದ ನಮ್ಮ ಕಲ್ಯಾಣವಾಗದು, ಆದದರಿಂದ ನಮಗೆರಡು ಮೆಂಬರರನ್ನು ಆರಿಸಗೊಡಿರಿ, ಇದೇ ನಮ್ಮ ಬೇಡಿಕೆಯು. ಇದು ನ್ಯಾಯವವೆಯೋ? ಇಲ್ಲವೋ? ಎಂಬುದನ್ನಷ್ಟು ಬೇಗನೆ ವಿಚಾರಿಸಿ, ಅದನ್ನು ಅನುಗ್ರಹಿಸುವದು ಸರಕಾರದ ಕೈಯಲ್ಲಿದೆ. ಈ ನಮ್ಮ ಬೇಡಿಕೆಯು ಎಷ್ಟು ಸಕಾರಣವದೆ ಎಷ್ಟು ನ್ಯಾಯವದೆಂದು ತೋರಿಸಲು ನಾವೊಂದು ಸ್ಫುಟ ಸೂಚನೆಯನ್ನು ಬರೆದು ನಮ್ಮ ಮತವನ್ನು ಪ್ರಕಟಿಸಿದ್ದೆವು ಈ ವಿಷಯದ ಮಹತ್ವದ ದೃಷ್ಟಿಯಿಂದ ಅದರ ಮುಖ್ಯಾಂಶವನ್ನಷ್ಟು ಇಂದಿಗೆ ನಮಗೆ ಪುನಃ ಎತ್ತಿಕೊಡಬೇಕಾಗಿದೆ. “ನಮ್ಮ ಜಿಲ್ಲೆಯೊಳಗೆ ಘಟ್ಟದ ಮೇಲೆ ಮತ್ತು ಕೆಳಗಿನ ಸೀಮೆ ಹೀಗೆ ನಿಸರ್ಗತಃ ಎರಡು ಭಾಗಗಳಾಗಿರುವವು ಘಟ್ಟದ ಮೇಲಿನ ಮತ್ತು ಕೆಳಗಿನ ಜನರೊಳಗೆ ಸಾಮಾಜಿಕ ವ್ಯವಹಾರವೂ, ಪರಿಚಯವೂ ಅನೇಕ ಕಾರಣಗಳ ಮೂಲಕ ತೀರ ಕಡಿಮೆಯಾಗಿರುವದು. ಜಿಲ್ಲೆಯೊಳಗೆ ಮತ್ತು ಜಿಲ್ಲೆಯ ಹೊರಗೆ ಪ್ರವಾಸದ ಸಾಧನಗಳು ತೀರ ನಿಕೃಷ್ಟವಾಗಿರುವದರಿಂದ, ಇಡೀ ಜಿಲ್ಲೆಯು ಪ್ರಗತಿಯ ಮೇಲಿನ ಟದಲ್ಲಿ ಎಷ್ಟೋ ಹಿಂದುಳಿದದೆ ಹಿಂದಿನ [illegible]ತಿಗಳ ವಿಷಯವಾಗಿ ಅವರ [illegible]ತವನ್ನು ದಕ್ಷತೆಯಿಂದ [illegible] ಸರಕಾರವು ಯಾವಾಗಲೂ ಯೋಚಿಸುತ್ತಿರುವದು. ಹಿಂದುಳಿದ ವರ್ಗದವರ ಪ್ರತಿನಿಧಿಗಳನ್ನು ಸರಕಾರವು ತಾನಾಗಿ ನೇಮಿಸುವ ಯೋಜನೆಯನ್ನು ಮೊನ್ನಿನ ಜಾಹೀರನಾಮೆಯಲ್ಲಿ ಪ್ರಕಟಿಸುವದು ಇದು ತೀರ ಸ್ತುತ್ಯವೆಂದು ನಮ್ಮ ಮತವು ಹಿಂದುಳಿದ ವರ್ಗದವರಿಗೆ ಅವರ ಸುಧಾರಣೆಗೆಂದು ಸ್ವತಂತ್ರ ಪ್ರತಿನಿಧಿಗಳನ್ನು ನೇಮಿಸುವ ಸಹಾನುಭೂತಿಯನ್ನು ತಳೆದ ಸರಕಾರವು ನಮ್ಮ ಜಿಲ್ಲೆಯಿಂದ ಹಿಂದುಳಿದ ಮತದಾರರ ಸಂಬಂಧಕ್ಕಾದರೂ ವಿಶೇಷ ಸವಲತ್ತುಗಳನ್ನು ದಯಪಾಲಿಸಬೇಕೆಂದು. ನಮ್ಮ ಅರಿಕೆಯು ಸರಾಸರಿ ೧೪ ಸಾವಿರ ಮತದಾರರಿಗೆ ಒಬ್ಬ ಮೆಂಬರನೆಂಬ ಪ್ರಮಾಣದಿಂದ ಒಬ್ಬನೇ ಮೆಂಬರನು ಬರುವನು ೩೨ ರೂಪಾಯಿ ತೀರ್ವೆಯ ಮಾನವು ನಮ್ಮ ಜಿಲ್ಲೆಯೊಳಗೆ ಮತದಾರಿಯ ಹಕ್ಕೆಂದು ಎಣಿಸಲ್ಪಟ್ಟಿದೆ. ರತ್ನಾಗಿರಿ ಜಿಲ್ಲೆಯಲ್ಲಿ ೧೬ ರೂಪಾಯಿಯು ಮಾನವದೆ ರತ್ನಾಗಿರಿಯ ಮಾನದಿಂದ ನಮ್ಮಲ್ಲಿ ೧೪ ಸಾವಿರದ ದುಪ್ಪಟ್ಟು ಅಂದರೆ ೨೮ ಸಾವಿರ ಮತದಾರರಾಗುವರು ಅದರೊಳಗಿನ ಮೂರು ಪಾಲು ತೀರ ಹಿಂದುಳಿದ ಮತ್ತು ಅಶಿಕ್ಷಿತ ಮತದಾರರಿರುವರು ಅವರ ಸುಧಾರಣೆಗೂ ಹಿತರಕ್ಷಣೆಗೂ ರತ್ನಾಗಿರಿಗೆ ಕೊಟ್ಟಂತೆ ಎರಡು ಮೆಂಬರರನ್ನು ಕೊಡುವದು ಅವಶ್ಯಕವೂ ನ್ಯಾಯವಿದೆಂದು ನಮ್ಮ ಮತವು

ಮೊನ್ನೆ ಜರುಗಿದ ಕಾರವಾರ ಪರಿಷತ್ತಿನಲ್ಲಿ ಈ ವಿಷಯದ ಸಾಂಗೋಪಾಂಗ ಚರ್ಚೆಯಾಗಿ ಒಂದು ಸ್ವತಂತ್ರ ಠರಾವು ನಿರ್ಣಯಿಸಲ್ಪಟ್ಟಿದೆ. ಈ ಠರಾವಿನಲ್ಲಿ ಪರಿಷತ್ತು ನಿರ್ಣಯಿಸಿದ್ದೇನಂದರೆ— ಸುಧಾರಿಸಿದ ಹೊಸ ಕೌನ್ಸಿಲದಲ್ಲಿ ಈ ಜಿಲ್ಲೆಗೆ ಕೊಟ್ಟ ಪ್ರಾತಿನಿಧ್ಯದ ಹಕ್ಕು ಸಾಕಷ್ಟಿಲ್ಲ. ಆದಕಾರಣ ಕೌನ್ಸಿಲದೊಳಗೆ ಸಾಕಷ್ಟು ಪ್ರಮಾಣದಿಂದ ಪ್ರತಿನಿಧಿಗಳನ್ನು ಕಳುಹಿಸಲಿಕ್ಕಾಗುವಂತೆ ಈ ಜಿಲ್ಲೆಯ ಪಾಲಿಗೆ ಎರಡು ಮೆಂಬರರನ್ನು ದಯಪಾಲಿಸಬೇಕೆಂದು ಪರಿಷತ್ತು ಸರಕಾರಕ್ಕೆ ಅರಿಕೆಮಾಡುತ್ತದೆ. ಮತ್ತು ಮುಂಬಯಿ ಸರಕಾರಕ್ಕೆ ಈ ವಿಷಯವಾಗಿ ಒಂದು ಅರ್ಜಿಯನ್ನು ಸಾದರಪಡಿಸಲಿಕ್ಕೆಂದು ದಿ| ಬಾ| ಎಣ್ಣೆಮಡಿ ಪ್ರಮುಖರ ಕಮಿಟಿಯನ್ನು ನೇಮಿಸಿದೆ. ಠರಾವಿನ ಮೇಲೆ ನಡೆದ ವಾದವಿವಾದದೊಳಗೆ ಕೆಲವು ವಿಶಿಷ್ಟ ಮುದ್ದೆಗಳು ಚರ್ಚಿಸಲ್ಪಟ್ಟಿರುವವು. (೧) ಈ ಜಿಲ್ಲೆಯ ನೈಸರ್ಗಿಕ ರಚನೆಯು ಅಪೂರ್ವವಾಗಿ ಲಷವಾದಕವದೆ ಘಟ್ಟದ ಸೀಮೆ, ದಂಡೆಯ ಸೀಮೆ ಈ ರೀತಿ ನಿಸರ್ಗತಃ ಜಿಲ್ಲೆಯು ಎರಡು ಭಾಗಗಳಾಗಿರುವವು. ಅವುಗಳ ಕುಂದು–ಕೊರತೆಗಳಾದರೂ ಅಷ್ಟೇ ಬಿನ್ನವಾಗಿರುವವು. ಅವುಗಳ ಹಿತಸಂಬಂಧದೊಳಗೆ ಸಮಾನ ಧರ್ಮವಾದರೂ ಹೆಚ್ಚಿಲ್ಲ. (೨) ಜಿಲ್ಲೆಯೊಳಗೆ ಪ್ರವಾಸದ ಸಾಧನಗಳು ತೀರ ನಿಕೃಷ್ಟವಾಗಿರುವ ಮೂಲಕ, ಒಂದೇ ಮೆಂಬರನಿಗೆ ಜಿಲ್ಲೆಯ ಎಲ್ಲ ಭಾಗಗಳೊಳಗಿನ ಜನರ ಕೊರತೆಗಳನ್ನೂ, ಬೇಡಿಕೆಗಳನ್ನೂ, ಆಗ್ಯಾಗ್ಗೆ ಅರಿತುಕೊಳ್ಳಲಿಕ್ಕೆ ಆಗಬಹುದಾದ ಅಪರಿಹಾರ್ಯ ತೊಂದರೆಗಳು. (೩) ಮತದಾರಿ ಲಾಯಖಿಯ ಭೂಮಿ ತೆರಗಿಯ ಕಿಮಾನ ಪ್ರಮಾಣವು ೩೨ ರೂಪಾಯಿ ಇರಬೇಕೆಂದು ಸರ್ವಸಾಧಾರಣ ಪ್ರಮಾಣವನ್ನು ನಮ್ಮ ಜಿಲ್ಲೆಗೆ ಲಾಗೂ ಮಾಡಿ ತೀರ ಅವಶ್ಯಕ ಮತ್ತು ನ್ಯಾಯವಾಗಿರುವ ರತ್ನಾಗಿರಿ ಜಿಲ್ಲೆಯ ೧೬ ರೂಪಾಯಿಯ ಇಯತ್ತೆಯನ್ನು ನಮ್ಮ ಜಿಲ್ಲೆಗೆ ಲಾಗೂ ಮಾಡದಿರುವದು. (೪) ನಮ್ಮ ಇಡೀ ಜಿಲ್ಲೆಯು ನಿಜವಾಗಿ ಬಹಳೇ ಹಿಂದುಳಿದ ಮತ್ತು ನಿಕೃಷ್ಟವಾಗಿರುತ್ತದೆಂಬ ವಿಶಿಷ್ಟ ಕಾರಣವನ್ನು ಲಕ್ಷಿಸದಿರುವದು. ಕೊನೆ[illegible]ಸ್ನದ ಚರ್ಚೆಯೊಳಗೆ ಇವೆಲ್ಲ ಕಾರಣಗಳ ಪೂರ್ವಾಪರ ವಿಚಾರಣೆಯಾಗಿದೆ.

ಕಾನಫರನ್ಸದಲ್ಲಿ ನೇಮಿಸಲ್ಪಟ್ಟ ಕಮಿಟಿಯು ಇಷ್ಟರೊಂದಿಗೆ ತಮ್ಮ ಮನವಿಯನ್ನು ಸರಕಾರಕ್ಕೆ ಬೇಗನೆ ಸಾದರಪಡಿಸುವ ಸಿದ್ಧತೆಯನ್ನು ಮಾಡತೊಡಗಿದೆಂದು ನಂಬಿರುವೆವು. ಮೇಲೆ ತೋರಿಸಿದ ಎಲ್ಲ ಕಾರಣಗಳು ಜನತೆ ತರ್ಫೆನಿಂದ ಸಾದರಪಡಿಸುವ ಈ ಅರ್ಜಿಯೊಳಗೆ ಸಮಾವಿಷ್ಟವಾಗದಿರವು. ನಿಸರ್ಗತಃ ಮೊದಲೇ ಎರಡು ಭಾಗಗಳಾಗಿರುವ ಕಾನಡಾ ಜಿಲ್ಲೆಯೊಳಗೆ ಪ್ರವಾಸದ ಸಾಧನಗಳಿಲ್ಲದಿರು ಇನ್ನೊಂದು ಕಾರಣವು ಕೂಡಿದ ಮೇ

ನಮಗೆ ದೊರೆತ ಮತದಾರಿ ಹಕ್ಕಿನ ಲಾಭವು ಎಷ್ಟು ತೀರ ಕಡಿಮೆ ನಮಗೆ ದೊರಕುವದೆಂಬುದು ಸರಕಾರವೇ ವಿಚಾರಿಸಲಿ. ೩೦ ರೂಪಾಯಿಯ ತೀರ್ವೆಯ ಪ್ರಮಾಣದಿಂದ ಅಲ್ಪಸಂಖ್ಯಾತರಾಗಿರುವ ಶ್ರೀಮಂತ ಜಮೀನದಾರರಲ್ಲದೆ ತುಲನಾತ್ಮಕ ದೃಷ್ಟಿಯಿಂದ ತೀರ ಕಡಿಮೆ ಸಂಪತ್ತಿಯ ಈ ಜಿಲ್ಲೆಯೊಳಗಿನ ಬಹು ಸಂಖ್ಯೆಯ ಬಡಜನರಿಗೆ ತಮ್ಮ ಪ್ರತಿನಿಧಿಗಳನ್ನು ಆರಿಸಲು ಅವಕಾಶವೇ ಕೊಡದಂತಾಗಿದೆ. ಒಟ್ಟಿಗೆ ಇನಕಮಟೀಕ್ಸ ಕೊಡುವ ಹೆಚ್ಚು ಪಗಾರದ ಸರಕಾರಿ ನವಕರರೂ, ಕೆಲವು ವ್ಯಾಪಾರಿಗಳೂ, ಶ್ರೀಮಂತ ಜಮೀನದಾರರೂ ಅತಿ ಪ್ರಮಾಣದಿಂದ ಮತದಾರರೊಳಗೆ ಬಹುಮತವನ್ನು ಪಡೆಯುವರು. ಲೋಕಶಾಹಿ ತತ್ವದ ಕೇವಲ ವಿಡಂಬನೆ ಇದಾಗುವದು. ನಿಕೃಷ್ಟವಾಗಿದ್ದ ಹಿಂದುಳಿದ ಮತ್ತು ದರಿದ್ರಿಯಾದ ನಮ್ಮ ಜಿಲ್ಲೆಯೊಳಗಿನ ಜನತೆಗೆ ತಮ್ಮ ರಾಜಕೀಯ ಸಾಮಾಜಿಕ ಮತ್ತು ಸಾಂಪತ್ತಿಕ ಅವನತಿಯನ್ನು ದೂರಪಡಿಸಿಕೊಳ್ಳಲಿಕ್ಕೆ ಈಗಿದ್ದ ನಿರ್ಣಯದಿಂದ ತೀರ ಕಡಿಮೆ ಇಂಬು ದೊರೆಯುವದು. ಅದಕ್ಕಾಗಿ ನಮ್ಮ ಜಿಲ್ಲಾ ಪರಿಷತ್ತಿನ ಅರಿಕೆಯನ್ನು ಎಷ್ಟೇ ಸಹಾನುಭೂತಿಯಿಂದ ಚಿತ್ತೈಸಿ ನಮ್ಮ ಜಿಲ್ಲೆಗೆ ಎರಡು ಪ್ರತಿನಿಧಿಗಳನ್ನಾರಿಸುವ ಹಕ್ಕನ್ನು ಸರಕಾರವು ದಯಪಾಲಿಸಬೇಕಾಗಿ ನಮ್ಮ ಅತ್ಯಾಗ್ರಹದ ಬೇಡಿಕೆ ಇದೆ.

ಸ್ಫುಟ ಸೂಚನೆಗಳು.

೧. ಕಳೆದ ಒಂಭತ್ತು ವರ್ಷಗಳವರೆಗೆ ದಕ್ಷಿಣಭಾಗದ ತರ್ಫೆನಿಂದ ಕಾಯಿದೆ ಕೌನ್ಸಿಲದೊಳಗೆ ಮೆಂಬರರಾಗಿ ನಮ್ಮ ಜಿಲ್ಹೆಯ ಸೇವೆಯನ್ನು ಅತ್ಯುತ್ಸಾಹದಿಂದಲೂ ಅತಿನಿಷ್ಠೆಯಿಂದಲೂ ಜರುಗಿಸಿದಕ್ಕಾಗಿ ರಾ| ದತ್ತಾತ್ರಯ ವೆಂಕಟೇಶ ಬೆಳವಿ ಮಹಾಶಯರನ್ನು ನಮ್ಮ ಜಿಲ್ಹಾ ಪರಿಷತ್ತು ಮನ್ನಿಸಿ ಏಕಮತದಿಂದ ಅವರ ಆಭಾರಗಳನ್ನೆಣಿಸಿದಕ್ಕಾಗಿ ಪರಿಷತ್ತನ್ನು ನಾವು ಅಭಿನಂದಿಸುವೆವು. 'ಮಹಾನ್ಯಾನ್ ಮೊನಯು' ಎಂಬ ದೃಷ್ಟಿಯಿಂದ ಈ ಲೋಕಸಭೆಯು ರಾ| ಬೆಳವಿಯವರಿಗೆ ಇಡೀ ಜಿಲ್ಹೆಯ ಕೃತಜ್ಞತೆಯನ್ನು ತೋರಿಸಿದ್ದು ಯಥಾಯೋಗ್ಯವಿದೆ. ಬರೇ ಆಭಾರಗಳಿಂದ ಅವರ ಸಾಲವನ್ನು ನಮ್ಮಿಂದ ತೀರಿಸಲಿಕ್ಕಾಗದೆಂದೂ ನಮ್ಮ ಲೋಕಮತವು ಅರಿತಿರುವದು. ಕಳೆದ ಇಲೆಕ್ಷನದಲ್ಲಿ ಕಾನಡಾಜಿಲ್ಹೆಯೊಳಗಿನ ಮ್ಯುನಿಸಿಪಾಲಿಟಿಗಳು ಅವರಿಗೆ ತೀರ ಕಡಿಮೆ ಬೆಂಬಲವನ್ನು ಕೊಡದವಾದದಕ್ಕಾಗಿ ಈ ಸಂಸ್ಥೆಗಳಿಗೆ ಇನ್ನಾದರೂ ವಿಷಾದವಾಗಲಿಕ್ಕೆ ಸಾಕು. ಜಿಲ್ಹೆಯ ಎಲ್ಲ ಪ್ರತಿನಿಧಿಗಳು ಪ್ರತ್ಯಕ್ಷ ಮತದಿಂದ, ಏನೂ ಮತಭೇದವಿಲ್ಲದೆ, ಅವರನ್ನು ಮನ್ನಿಸಿದಾಗ, ಮ್ಯುನಿಸಿಪಾಲಿಟಿಗಳಂಥ ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳ ಆಗಿನ ವರ್ತನವು ದೋಷಾಸ್ಪದವಾಗಿತ್ತೆಂದು ಇನ್ನಾದರೂ ನಿರ್ಣಯಿಸಿದಂತಾಗಿಲ್ಲವೆ? ಇರಲಿ. ಇದೊಂದು ಅಪ್ರತ್ಯಕ್ಷ ಚುನಾವಣೆಯ ಹಳೆ ಪದ್ಧತಿಯ ದೋಷವೆಂದು ನಾವು ಎಣಿಸುವೆವು. ಮ್ಯುನಿಸಿಪಾಲಿಟಿಗಳೊಳಗಿನ ಕೆಲ ಮತದಾರರು ಅವರಿಗೆ ಅನ್ಯಾಯವನ್ನು ಮಾಡಿದ್ದರೂ, ರಾ| ಬೆಳವಿಯವರು ನಮ್ಮ ಜಿಲ್ಹೆಯ ಸೇವೆಯನ್ನು ಮತ್ತಷ್ಟು ಉತ್ಸಾಹದಿಂದ ನಡಿಸಿದರೆಂಬುದು ಅವರಿಗೆ ಬಹಳೇ ಭೂಷಣಾವಹವು. "ವಸುಧೈವ ಕುಟುಂಬಕಂ" ಎಂದು ಹೇಳುವ ಉದಾರ ಚರಿತವು ಬರೇ ಸಾಧುಸಂತರಲ್ಲಿಯೆ ಕಂಡು ಬರುತ್ತದಷ್ಟೇ ಅಲ್ಲ, ನಮ್ಮ ಲೋಕನಾಯಕರಲ್ಲಿ ಸಹ ಅದು ಕಂಡುಬರುತ್ತದೆಂದು ಹೇಳಲಿಕ್ಕೆ ಇದೊಂದು ದೃಷ್ಟಾಂತವು. ಇಷ್ಟು ಔದಾರ್ಯ ಬುದ್ಧಿಯು ನಮ್ಮ ಮುಖಂಡರಲ್ಲಿ ಇರಬೇಕು. ಅಂದರೆ ಮಾತ್ರ ಜನತೆಯ ಕಲ್ಯಾಣವಾಗುವದು ಎಂಬುದನ್ನು ರಾ| ಬೆಳವಿ ಮಹಾಶಯರು ತಮ್ಮ ಆಚರಣೆಯಿಂದ ಮನಗಾಣಿಸಿದರು. ಇದಕ್ಕಾಗಿ ರಾ| ಬೆಳವಿಯವರನ್ನು ನಾವು ಮನಃಪೂರ್ವಕ ಕೊಂಡಾಡುವೆವು ಮತ್ತು ಇನ್ನೇ ಔದಾರ್ಯದಿಂದ ಮತ್ತು ಉತ್ಸಾಹದಿಂದ ಅವರು ತಮ್ಮ ದೇಶಸೇವೆಯನ್ನು ಹೊಸ ಕೌನ್ಸಿಲದಲ್ಲಿ ನಡಿಸಲಿಕ್ಕಾಗುವಂತೆ ಅವರ ಈಗಿನ ಮತದಾರ ಸಂಘವು ಪರಿಪೂರ್ಣ ಬೆಂಬಲವನ್ನು ಅವರಿಗೆ ಕೊಡಬೇಕೆಂದು ನಮ್ಮ ಬೆಳಗಾವ ಬಾಂಧವರಿಗೆ ನಾವು ಅರಿಕೆ ಮಾಡುವೆವು.

---

೨. ನಮ್ಮ ಜಿಲ್ಹೆಯಲ್ಲಿ ಪ್ರವಾಸದ ಅನುಕೂಲತೆಯು ಮೊದಲೇ ತೀರ ಕಡಿಮೆ. ಈಗಿದ್ದ ಸಾಧನವೆಂದರೆ ಎತ್ತಿನ ಗಾಡಿಗಳು. ಬಸ್ಸಿಯ ಗೊಂದಲದೊಳಗೆ ಅವು ಸಹ ಕಾಣದೆ ಹೋದರೆ, ಚಕ್ರಗಳಿಲ್ಲದ ಕಾಲುಗಾಡಿಯು. ಸರಕಾರಿ ರಾಜಮಾರ್ಗಗಳಿಂದ ಇವುಗಳನ್ನು ನಡಿಸಬೇಕಾದರೆ, ಮಧ್ಯದಲ್ಲಿ ಸಣ್ಣ ಸಣ್ಣ ನದಿಗಳನ್ನು ದಾಟಬೇಕಾಗುತ್ತದೆ. ಇವುಗಳಿಗೆ ಧಕ್ಕೆಗಳಿಲ್ಲದೆ ಗಾಡಿಗಳಿಗೂ, ಮೋಟಾರಗಳಿಗೂ, ನದಿಗಳನ್ನು ದಾಟುವದೆಂದರೆ, ಮಹತ್ ಪ್ರಯಾಸವಾಗುತ್ತದೆ. ಧಕ್ಕೆಗಳ ಕೊರತೆಗಳನ್ನು ಶಕ್ಯವಿದ್ದಷ್ಟು ದೂರಪಡಿಸಿ, ಆದನ್ನು ಅನುಕೂಲತೆಯನ್ನು ಮಾ| ಟನ್ನರ ಸಾಹೇಬರು ಆಗ್ರಹದಿಂದ, ನಮ್ಮ ಜಿಲ್ಹಾ ಲೋಕಲಬೋರ್ಡು ಮಾಡುವಷ್ಟರೊಳಗೆ, ಮತ್ತೊಂದು ತೀರ ಚಿಂತಾಜನಕ ಪರಿಸ್ಥಿತಿಯುಂಟಾಗಿದೆ. ಅಂದವಾಗಿ ಕಟ್ಟಿದ ಧಕ್ಕೆಗಳಮೇಲಿಂದ ಗಾಡಿಗಳನ್ನೂ, ಪ್ರವಾಸಿಕರನ್ನೂ ಮುಂಚಿನಂತೆ ನೀರಿನ ಸ್ಪರ್ಶವಾಗಗೊಡದೆ, ಜಂಗಲಗಳಲ್ಲಿ ಮತ್ತು ದೋಣಿಗಳಲ್ಲಿ ಇಳಿಸಿ, ಮುಂದರಿಯುವಾಗ ತಮ್ಮ ಪ್ರಾಣಗಳನ್ನು ಕೈಮುಷ್ಟಿಯಲ್ಲಿಟ್ಟುಕೊಂಡು, ನದಿಗಳನ್ನು ದಾಟಬೇಕಾಗುತ್ತದೆಂದು, ಪ್ರವಾಸಿಕರು ಬಹಳೇ ಭೀತಿಗ್ರಸ್ತರಾಗಿ ದೂರುತ್ತಿರುವರು. ಗಂಗಾವಳಿ, ಉಳವರೆ, ಮಿರ್ಜಾನ ಈ ತಾರಿಗಳನ್ನು ಈಗಿನ ಮಳೆಗಾಲದಲ್ಲಿ ದಾಟಿ ಹೋಗುವದೆಂದರೆ, ದೀರ್ಘಾಯುಷಿಗಳೇ ದಾಟಬಹುದು, ಇತರರ ಆಯುಷ್ಯವು ಈ ನದಿಗಳ ಮಧ್ಯದಲ್ಲೇ ಲೋಪವಾದೀತು, ಎಂದು ಸಹ ಅವರು ವಿನೋದಪೂರ್ವಕ ಹೇಳುತ್ತಿರುವರು. ಇದಕ್ಕೆ ಕಾರಣವೇನೆಂದರೆ— ತಾರಿ ಕಂಟ್ರಾಕ್ಟರರು ಇಟ್ಟ ಬಾಡಿಗೆಯ ಸಣ್ಣ ಪುಟ್ಟ ದೋಣಿಗಳು, ದುರಸ್ತಿ ಇಲ್ಲದ ಜಂಗಲಗಳು, ತಮ್ಮ ಫಾಯಿದೆಗೆ ಹಾನಿಯಾಗದಂತೆ ಅವರಿಟ್ಟ ಶಿಬಂದಿಯು, ಹೀಗಾಗಿ ಉಳವರೆಯಿಂದ ಗಾಡಿಗಳು ತಿರುಗಲಿಕ್ಕೆ ಬಹಳೇ ಬೆದರುತ್ತವೆ. ಮಿರ್ಜಾನದಲ್ಲಂತೂ ಒಂದು ದೋಣಿಯು ಶಿಟ್ಟಾಗಿ ನಾಲ್ಕೈದು ಮಾರು ಮುಂದರಿಯುವಷ್ಟರೊಳಗೆ, ಬೆನ್ನು ತಿರುಗಿಸಿ ಬಿಟ್ಟಿತು. ಸುದೈವದಿಂದ ಅಪಘಾತವೇನಾಗಿಲ್ಲಂತೆ. ಗಂಗಾವಳಿಯ ದೋಣಿಗಳು "ಇನ್ನಾದರೂ ಜಾಗ್ರತರಾಗಿರಿ, ಪಶ್ಚಾತ್ತಾಪಕ್ಕೆ ಕಾರಣವಾಗುವದು," ಎಂದು ಪಿಸರಿ ಹೇಳುವಂತೆ ತೆರೆಗಳಮೇಲೆ, ಮೇಲಮೇಲಕ್ಕೆ ತಾರಿ ಅಧಿಕಾರರನ್ನು ದಿನಂಪ್ರತಿ ಬೆದರಿಸುತ್ತಿರುವವು. ಒಟ್ಟಿಗೆ ಮುಂಚಿನಂತೆ ಒಂದೇ ವರ್ಷದ ಕರಾರಿನ ಮೇಲೆ ಮಕ್ತಗಳನ್ನು ಕೊಟ್ಟರೆ, ಮಕ್ತೇದಾರರು ಸರಕಾರಿ ದೋಣಿಗಳನ್ನು ಕೆಡಿಸುತ್ತಾರೆಂದು, ಮೂರು ವರ್ಷದ ಮಕ್ತೆ ಪದ್ಧತಿಯನ್ನು ಚಾಲುಮಾಡಿ "ಇದ್ದದ್ದು ಹೋಗಿ ಮದ್ದಿನ ಗುಣ"ವೆಂಬಂತೆ ಈ ತಾರಿ ಮಕ್ತೆಗಳ ಗತಿಯಾಗಿದೆ. ಸ್ಥಿತಿಯು ಸುಧಾರಿಸುವದರ ಬದಲು ವಿಪರೀತವಾಗಿ ಅದು ಕೆಟ್ಟಿದೆ, ಎಂದು ಹೇಳುವದೇ ತಾತ್ಪರ್ಯವು.

---

೩. ನಮ್ಮಲ್ಲಿ ಇಂಥ ಚಿಂತಾಜನಕ ಸ್ಥಿತಿಯು ಹ್ಯಾಗೆ ಉಂಟಾಗಿದೆಂದು ಶ್ರೀ|| ಮಾಧವ ಎಸ್. ಕಾಸಭಾಗರವರು ಒಂದು ಸಣ್ಣ ಪತ್ರದ ಮುಖಾಂತರ (ಅದನ್ನು ನಾವು ೨೯ ಅಕ್ಟೋಬರ ೧೯೨೯ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು) ಮೊದಲೇ ತಿಳಿಸಿದ್ದರು. ಗಂಗಾವಳಿ, ಉಳವರೆ, ಮಿರ್ಜಾನ ಮುಂತಾದ ತಾರಿಗಳಲ್ಲಿಯ ನಾವು ಬಹಳ ವರ್ಷದಿಂದ ನೋಡುತ್ತಿದ್ದ ಮಜಬೂತಾದ ದೊಡ್ಡ ದೋಣಿಗಳು, ಈಗ ಮೂರು ನಾಲ್ಕು ವರ್ಷದಿಂದ ಕಾಣದಂತಾಗಿವೆ. ಮತ್ತು ಮಾಡುವ ದೋಣಿಗಳಂಥ ಸಣ್ಣ ದೋಣಿಗಳನ್ನು ಪ್ರವಾಸಿಕರಿಗಾಗಿ, ತೆಪ್ಪ(ಜಂಗಲು)ಗಳಿಗಾಗಿ, ಈಗ ಉಪಯೋಗಿಸುತ್ತಿರುವರು. ಈ ದೋಣಿಗಳಲ್ಲಿ ಜನರನ್ನು ತುಂಬಿದರೆ, ನೀರಿಗೂ ದೋಣಿಗಳ ಅಂಚಿಗೂ ನಾಲ್ಕು ಬೊಟ್ಟು ಸಹ ಅಂತರವಿರುವದಿಲ್ಲ. ಇದು ಬಹಳ ಭಯಂಕರ ಸ್ಥಿತಿಯು. ಮೊದಲಿನ ಮಾದರಿಯ ದೊಡ್ಡ ದೋಣಿಗಳಿಲ್ಲದೆ, ಈ ಸ್ಥಿತಿಯು ಬಂದೊದಗಿದೆಯೋ? ಸಣ್ಣ ದೋಣಿಗಳಿಗೆ ಕಡಿಮೆ ಅಂಬಿಗರಿದ್ದರೆ ಸಾಕೆಂದು ತಿಳಿದು, ಮಕ್ತೆದಾರರು ತಮ್ಮ ಫಾಯಿದೆಗೆಂದು ಇಂಥ ಭೀತಿಪ್ರದ ದೋಣಿಯ ಯಂತ್ರಗಳನ್ನು ನಡಿಸುತ್ತಿದ್ದಾರೋ? ನಾವರಿಯೆವು. ಕಂಟ್ರಾಕ್ಟದಾರನೇ ತನ್ನ ದೋಣಿಗಳನ್ನಿಡಬೇಕೆಂದು ಸುಧಾರಿಸಿದ ವ್ಯವಸ್ಥೆಯಲ್ಲಿ ಕರಾರು ಆದದ್ದಿದ್ದರೆ, ಮಕ್ತೆದಾರರಿಗೆ ತುಂಬಾ ಹಣ್ಣು ತಿನ್ನಲಿಕ್ಕೆ ಕೊಟ್ಟಂತಾಗಿದೆಂದು ಹೇಳಬೇಕಲ್ಲವೆ? ತಪಾಸಿನ ಮೇಲಧಿಕಾರಿಗಳು ಬಂದ, ಇಲ್ಲವೆ, ಬರುವ ಸಂಭವವಿದ್ದ ಅವಧಿಯನ್ನು ಹೊರತುಪಡಿಸಿ, ತಿಂಗಳೊಳಗೆ ೨೮ ದಿವಸ ಬೇಕಾದಷ್ಟು ಕಿಂಬಂದಿಯನ್ನೂ, ಬೇಕಾದಷ್ಟು ದೋಣಿಗಳನ್ನೂ ತನ್ನ ಆಳಿದಿಟ್ಟು ಮುನಾಫೆಯು ರಕಮಿಗೆ ಕೂಡಿಬರುವಂತೆ, ಇಡಲಿಕ್ಕೆ ಮಕ್ತೆದಾರನಿಗೆ ಫರ್ಮಾನು ಕೊಟ್ಟಂತಾಗುವದೆಂದು ಹೇಳಬಹುದು. ದೊಡ್ಡ ದೋಣಿಗಳು ಎಲ್ಲಿ ಹುಡುಕಿದರೂ ಸಿಗುವದಿಲ್ಲೆಂದು ಅವರು ಹೇಳುವ ಮಾತು ಸಾಧುತ್ವ ಅವರು ತಮ್ಮ ಮೂರು ವರ್ಷದ ಅವಧಿಯನ್ನು ಹ್ಯಾಗೂ ಕಳೆಯಬಲ್ಲರು. ಮಿರ್ಜಾನದಿಂದ ಹೋಗುವ ಗಾಡಿಯು ಅಲ್ಲಿಯ ತೆಪ್ಪ (ಜಂಗಲ) ಕೆಟ್ಟದೆಂದು ದಿವಗಿಯಿಂದ ಹೋದರೆ ನಾಲ್ಕು ಆಣೆ ಮುಣಿಗೆಯೆಂದು ಮಕ್ತೆದಾರನು ಅತ್ತವೂ, ಸ್ವತಃ ಖರ್ಚಿನಿಂದ ದೊಡ್ಡ ದೋಣಿಗಳೇನು ಅವನು ಮಾಡಿಕೊಳ್ಳನು. ಇಂಥ ದೋಣಿಗಳನ್ನೂ, ತೆಪ್ಪಗಳನ್ನೂ ಲೋಕಲಬೋರ್ಡ ಖರ್ಚಿನಿಂದ ಮಾಡಿಸಿ, ಮೂರು ವರ್ಷಗಳವರೆಗೆ ಅವುಗಳ ದಾಗದುಜಿ ಮಾಡಿ, ಅಜಾಗ್ರತೆಯಿಂದ ಅವುಗಳನ್ನು ಕೆಡಿಸದಂತೆ ಇಡುವ ಜವಾಬದಾರಿಯಮೇಲೆ ಮಕ್ತೆದಾರನಿಗೆ, ಬಾಡಿಗೆಗೆ ಕೊಡುವದೇ ಸಾಧ್ಯವಾದ ಉಪಾಯವೆಂತ ನಮಗೆ ಕಾಣುತ್ತದೆ. ಇಂಥ ಕೆಲಸಕ್ಕೆ ಬಹಳೇ ಹಣಬೇಕು. ನಮ್ಮ ಜಿಲ್ಹೆಯ ಲೋಕಲಬೋರ್ಡ ಬಡವಿದೆ. ಆದದರಿಂದ ಈ ಸೂಚನೆಯೊಳಗೆ ಉದಿಷ್ಟವು ಸಾಧ್ಯವಾಗುವ ಶಕ್ಯತೆಯು ಕಡಿಮೆ ಎಂದು ಅದನ್ನು ಬಗೆಯುಕೊಡದು

ಲೋಕಲ್ ಬೋರ್ಡಿನ ಪಾತ್ರೆಯೊಳಗೆ ಅಕ್ಕಿ ಇಲ್ಲದ್ದರೆ, ಕಾರವಾರ ಪರಿಷತ್ತು ಸೂಚಿಸಿದಂತೆ, ಜಂಗಲಖಾತೆಯ ಉತ್ಪನ್ನದ ಮೇಲೆ ಟಿಸಿಲಪಟ್ಟಿಯನ್ನು ಹಚ್ಚಿ ನಿಂದ ಬೇಕಿ, ಅಕ್ಕಿಯನ್ನು ಪೂರೈಸಿಕೊಳ್ಳಲಿಕ್ಕಾಗುವದು. ಅದು ಸಾಕಾಗದಿದ್ದರೆ, ಪ್ರಾಂತಿಕ ಕಂಪಾಯದಿಂದ ಪ್ರವಾಸಿಕರ ಪ್ರಾಣ ರಕ್ಷಣೆಯಂಥ ಮಹತ್ವದ ಕಾರ್ಯಕ್ಕೆ ಬೇಕಾದಷ್ಟು ಸಹಾಯ ಮಾಡಲಿಕ್ಕೆ ಸರಕಾರವು ಸಮರ್ಥವೇ ಇರುವದು. ಹಣದ ಕೊರತೆಯಿಂದ ತಾರಿಗಳನ್ನು ದಾಟುವ ಜನರ ಕಣ್ಣ-ಹಾರಿಸುವ ದುರವಸ್ಥೆಯು ಯಾವದೇ ಸಾಧನಗಳಿಂದ ಏನೂ ವಿಲಂಬವಾಗದೆ, ದೂರವಾಗಲೇ ಬೇಕು. ತಾರಿಗಳ ಮೇಲಿನ ರಹದಾರಿಯ ಸ್ಥಿತಿಯು ಅಷ್ಟು ಭಯಪ್ರದವಾಗಿದೆ, ಅಂತಃಕರಣಜನಕವಾಗಿದೆ

---

೪. ಇಂಥ ದುರವಸ್ಥೆಯು ನಮ್ಮ ಕೆಲ ನದಿಗಳನ್ನು ದಾಟುವಾಗ ಉಂಟಾಗಲಿಕ್ಕೂ, ಸರಕಾರವು ಬೇರೊಂದು ಕಾರಣದಿಂದ ಲಕ್ಷ್ಯಪೂರ್ವಕ ಈ ವಿಷಯದ ಚೌಕಸಿ ನಡಿಸುತ್ತಿರುವದಕ್ಕೂ ಸ್ವಲ್ಪ ದಿನದ ಹಿಂದೆ [illegible] ಬಿದ್ದದೆ. ಈ ಆಕಸ್ಮಿಕ ಗೋಳಾಟವು ಪ್ರವಾಸಿಕರಿಗೆ ಮುಖ್ಯಪ್ರದವಾಗುವದೆಂದು ನಾವು ಭಾವಿಸುವೆವು. ಎಂಟುಹತ್ತು ತಿಂಗಳ ಹಿಂದೆ [illegible] ನದಿಯನ್ನು ದಾಟಿಸುವ [illegible] ಮಕ್ತೆದಾರನ ಲಕ್ಷ್ಯವಿಲ್ಲದ ಅಜಾಗ್ರತೆಯಿಂದ, ಒಂದು ದೋಣಿಯು ಮುಣುಗಿ ಸುಮಾರು ೨೦ ಜನರು ಬತ್ತಲೆ ಕೆರೆಲಿ, ಪರಲೋಕಕ್ಕೆ ಪಾರಾದರು. ಇದೇ ರೀತಿ [illegible] ನದಿಯ ಮೇಲೆ ಸಹ ಅಪಘಾತವು ಸಂಭವಿಸಿತ್ತು. ಇಂಥ ಭಯಂಕರ ಅನರ್ಥಗಳನ್ನು ನೋಡಿ, ಮಕ್ತೆದಾರರ ಸ್ವಾರ್ಥದ ಆಸೆಯಿಂದ ಪ್ರವಾಸಿಕರಿಗೆ ಎಂದೂ ಪ್ರಾಣಸಂಕಟವು ಸಂಭವಿಸಬಾರದೆಂದು, ಕಲೆಕ್ಟರರಿಗೂ, ಕಮೀಶನರರಿಗೂ, ತಮ್ಮ ತಮ್ಮ ಹಿಡಿಯೊಳಗಿನ ತಾರಿ ಮಕ್ತೆಗಳ, ಮತ್ತು ನದಿಗಳನ್ನು ದಾಟುವ ವ್ಯವಸ್ಥೆಯ ವಿಷಯವಾಗಿ, ಸಾದ್ಯಂತವಾದ ರಿಪೋರ್ಟ ಮಾಡಬೇಕೆಂದು, ಅಪ್ಪಣೆಯಾಗಿದೆಂದು ನಾವು ಕೇಳುವೆವು. ತಮಗೆ [illegible] ಬೇಕೆಂದು, ಪ್ರವಾಸಿಕರ ಜೀವಗಳ ಬಲಿದಾನವನ್ನು ಕೊಡಲಿಕ್ಕೆ, ಹಿಂದೆಮುಂದೆ ನೋಡದಿರುವ ಮಕ್ತೆದಾರರಿಗೆ, ಶಾಲೆಯ ಹುಡುಗರಂತೆ ಶಿಕ್ಷಿಸಿ ಬುದ್ಧಿ ಕಲಿಸದೆ, ಇನ್ನುಮುಂದೆ ಕಠಿಣ ಶಿಕ್ಷೆ ವಿಧಿಸಬೇಕೆಂದು ನಾವು ಕೋರುವೆವು. ಸರಕಾರವು ಈ ವಿಷಯದ ವ್ಯವಸ್ಥೆಯನ್ನಿಷ್ಟು ಬರೇ ಕಂಟ್ರ್ಯಾಕ್ಟದಾರರ ಕೈಯಲ್ಲಿ ಬಿಡದೆ, ಪ್ರವಾಸಿಕರ ಸುರಕ್ಷಿತತೆಗೆ, ಅವರ ಅನುಕೂಲತೆಗೆ, ಎಂದು ಎಲ್ಲಿ ಮಕ್ತೆದಾರರ [illegible] ಗಾಣುವಂತೆ, ಮತ್ತು ಎಲ್ಲ ಪ್ರವಾಸಿಕರು [illegible] ಯಿಂದ ಹೋಗುವಂತೆ, ಅಧಿಕಾರಿಗಳ ಈ ವಿಷಯದ ಸೂಚನೆಗಳಿಂದ ಸರಕಾರವು ಅತ್ಯುತ್ತಮ ಯೋಜನೆಯನ್ನು ತಯಾರಿಸುವದೆಂದು, ಈಗ ನಡೆದ ಚೌಕಶಿಯಿಂದ ನಾವು ಪ್ರತೀಕ್ಷೆ ಮಾಡುತ್ತಿರುವೆವು. ಪ್ರವಾಸಿಕರ ಅನುಕೂಲತೆಯೂ, ಅವರ ಜೀವಿತದ ರಕ್ಷಣೆಯೂ, ಈ ಯೋಜನೆಯ ಪ್ರಧಾನ ಧ್ಯೇಯವಿದ್ದು, ಮಕ್ತೆದಾರರೂ, ಅವರ ದೋಣಿಗಳೂ, ಅವರ ತಿಬಂದಿಯೂ, ಧ್ಯೇಯದ ಸಾಧನೆಗಳು, ಎಂಬುವನ್ನು ಅಧಿಕಾರಿಗಳು [illegible] ಬಲ್ಲರು. ಮಕ್ತೆದಾರರ [illegible] ಒಂದು ತಕ್ಕಡಿಯಲ್ಲಿ, ಪ್ರವಾಸಿಕರ ಪ್ರಾಣಗಳು ಮತ್ತೊಂದು ತಕ್ಕಡಿಯಲ್ಲಿ ಹಾಕಿ, ಮಕ್ತೆದಾರರ ಮೋಹಗಳಲ್ಲಿ ಅಸಹಾಯ ಹೆಂಗಸರು ಮತ್ತು ಮಕ್ಕಳನ್ನು ಪ್ರಾಣಸಂಕಟವಾಗುವಷ್ಟು ಕೆಲವೆಡೆಯಲ್ಲಿ ತೂಗಾಡಿಸುವರೆ? ಇನ್ನುಮುಂದೆ ಯಾವ ಮಕ್ತೆದಾರನಿಗೂ ಹೀಗೆ ಮಾಡಿಸಲಿಕ್ಕಾಗದು. ಇಷ್ಟನ್ನಷ್ಟು ಸ್ವಾರ್ಥಪರಾಯಣ ಮಕ್ತೆದಾರರು [illegible] ತಿಳಿದಿರಲಿ

---

೫ ನಮ್ಮ ಪ್ರವಾಸಾಯ ಬಂಧುಗಳ ಧಾರವಾಡದ [illegible] ಕಾರರು ಕೆಲವು ಅನಾನುಕೂಲತೆಗಳ ಮೂಲಕ ವಿಶ್ರಾಂತಿಕೊಳ್ಳುತ್ತೇವೆಂದು ಜಾಹೀರ ಮಾಡಿರುತ್ತಾರೆ. ಇದು ಬಹು ಶೋಚನೀಯವು. ಈ ವರುಷದ ಪ್ರಾರಂಭದಲ್ಲಿ ಇಂಥ ರಯತರ ಮುಖಗಳಿಷ್ಟನ್ನು ಕಳಿಸಿ ಈ ಪತ್ರವು [illegible] ನಡಿಸಿದ ಕಾಲದಿಂದ ಅದು ಸರ್ವಮಾನ್ಯವಾಗಿತ್ತು. ಅದರಲ್ಲಿ ಬರುವ ಲೇಖಗಳನ್ನು ನೋಡಿದರೆ ಸಾರ್ವಜನಿಕ ಹಿತಕ್ಕಾಗಿ [illegible] ಸ್ವತಂತ್ರತನದಿಂದಲೂ ತಮ್ಮ ಕರ್ತವ್ಯ [illegible] ಸೇವೆಯನ್ನು ಮಾಡುತ್ತಿದ್ದರೆಂಬ [illegible] ಅವರು ಜ್ಯಾಹೀರ ಮಾಡಿದ್ದ? ಅವರ ಮಿತ್ರರೂ, ಆಶ್ರಯದಾತರೂ ಅವರ ಅನಾನುಕೂಲತೆಗಳನ್ನು ತಿಳಿದುಕೊಂಡು ಪತ್ರವು ಸ್ಥಿರವಾಗಿ ನಡೆಯುವಂತೆ ಅವಶ್ಯ [illegible] ಪ್ರೋತ್ಸಾಹನೆಯನ್ನು ಕೊಡುವರೆಂದು ಪೂರ್ಣ ನಂಬುವೆವು

---

೬ [illegible] ಲಾಯರ ಮೆಂಬರರೊಳಗೂ, ಕರ್ನಾಟಕದೊಳಗಿನ [illegible] ಲಾಯರ [illegible] ಕುರಿತು 'ಪ್ರಜಾ [illegible]' ಎಂಬಂತೆ [illegible], ಆದರಿಂದ [illegible] ವಿಷಯದ [illegible] ನೋಡಿ [illegible] ಆಗಿತ್ತು. ಆದರೆ ರಾ. ಸಾ [illegible] ನಾವಗಿಯಂಥ ಮಹನೀಯರನ್ನು [illegible] ಆಗಿ [illegible] ಈ [illegible] ಸಮಾಧಾನಕರವಾಗಿ [illegible] ಅನಂದ ಪಡುತ್ತೇವೆ [illegible] ಸಂಸ್ಥೆಗಳು ನಮ್ಮ [illegible] ಲ್ಲಿ [illegible] ಅವರೊಳಗೂ ಇಂಥ ಸಂಸ್ಥೆಗಳನ್ನು ಸ್ವಾರ್ಥತ್ಯಾಗಪೂರ್ವಕ ನಡಿಸುವಷ್ಟು ಯೋಗ್ಯತೆಯು ನಮ್ಮಲ್ಲೊಂದು [illegible] ಹೀಗಿದ್ದು ಉಡುಪಿ ಪಕ್ಷದವರೂ ಇಂಥ ಸಣ್ಣ ಸಣ್ಣ [illegible] ಗಳನ್ನಿಟ್ಟಿಸಿ ಸಂಸ್ಥೆಯ ಹಿತವನ್ನು [illegible] ಶೋಚನೀಯವು. ಇನ್ನು ಕರ್ನಾಟಕ ಎಜ್ಯುಕೇಶನ ಸೊಸಾಯಿಟಿಯಾಗಲೀ, ಕೆನರಾ ಎಜ್ಯುಕೇಶನ ಸೊಸಾಯಿಟಿಯಾಗಲೀ ಶಿಕ್ಷಣ ಎಜ್ಯುಕೇಶನ ಸೊಸಾಯಿಟಿ ಮಾದರಿಯ [illegible] ಸ್ವಾರ್ಥತ್ಯಾಗದ ಧೋರಣದಿಂದ ಸಂಸ್ಥೆಯ ಹಿತವನ್ನೇ [illegible] ಚಿಂತಿಸಿ, ಅದರಿಂದ [illegible] ಕೀರ್ತಿಯನ್ನು ಆಭಿಮಾನದಿಂದ [illegible] ರೆಂದು ಕೋರುವೆವು

---

2 ಈ ಜಿಲ್ಲೆಯ ಸಮುದ್ರ ದಂಡೆಯ ತಾಲೂಕುಗಳಿಗೆ [illegible] ಒಂದು [illegible] ಈ ಮೊದಲೇ ಗೊತ್ತಾಗಿದ್ದು, ಅದರ ಏರ್ಪಾಡು ಮುಂದೆ ಮುಂದೆ ಸಾಗುತ್ತಲಿದೆ. ಆ ಬಗ್ಗೆ ಸ್ಥಾನಿಕ ಮುನಿಸಿಪಾಲಿಟಿಯಿಂದ ಸದ್ಯದ ಉಪಯೋಗಕ್ಕೆಂತ ಚಿತ್ರಿಗೆ ಧರ್ಮಶಾಲಾ ಕಟ್ಟಡವು ಕೊಡುವದು ನಿಶ್ಚಿತವಾಗಿದೆ. ವೈದ್ಯ ಮುಂತಾದ ಶಿಬಂದಿಯ ಸಂಬಳ, ಮತ್ತು ಔಷಧಗಳ ಬಗ್ಗೆ ಡಿಸ್ಟ್ರಿಕ್ಟ ಲೋಕಲಬೋರ್ಡಿನಿಂದ ಖರ್ಚಿನ ಅರ್ಧ ವಾರ್ಷಿಕ ವರ್ಗಣಿ ಮಂಜೂರಾಗಿರುವದೆ. ಇದು ತುಂಬಾ ಆನಂದಕರವಿದ್ದಷ್ಟು ಉತ್ಸಾಹಕರವೂ ಆಗಿದೆ. ಇಷ್ಟೇ ಅಲ್ಲ, ಈ ದವಾಖಾನೆಯ ಕಾಯಂ ಇಮಾರತು ಕಟ್ಟಿಸುವಬಗ್ಗೆ ಇಲ್ಲಿಯ ಶ್ರೀಯುತ ಹಂಸರಾಜ ಲದ್ಧಾ ಶೇಟರವರು ರೂಪಾಯಿ ೨,೦೦೦ ಉಚಿತ ಕೊಡಲು ವಾಗ್ದಾನ ಮಾಡಿರುವರಂತೆ! ಇದೊಂದು ಅತ್ಯಾನಂದದ ಸಂಗತಿಯು! ಗುಜರಾತಿ ಭಾಟಿಯಾ-ವೈಶ್ಯ ಮುಂತಾದವರು ಸ್ವಾಭಾವಿಕವಾಗಿ ಧರ್ಮಿಷ್ಠರು. ಇದೇ ಹಂಸರಾಜ ಶೇಟರವರು ತಮ್ಮ ಪಿತೃಗಳ ಜ್ಞಾಪಕಾರ್ಥವಾಗಿ ಇಲ್ಲಿಯ ಹೆಡ್ ಬಂದರದ ಮೇಲೂ, ಗೋಕರ್ಣ ಕ್ಷೇತ್ರದಲ್ಲೂ ಸಾವಿರ ಗಟ್ಟಲೆ ಹಣವನ್ನು ವೆಚ್ಚಮಾಡಿ ಧರ್ಮಶಾಲೆಗಳನ್ನು ಕಟ್ಟಿಸಿ ಅಜರಾಮರರಾಗಿರುವರು. ಈ ಸಲ ದವಾಖಾನೆಗೆಗೋಸುಗ ಕೊಡಲೊಪ್ಪಿದ ಈ ದಾನದಿಂದ ಅಸಹಾಯ ಗೋವುಗಳ ಮೇಲಿರುವ ಅವರ ಭಕ್ತಿಯೂ, ಧರ್ಮಬುದ್ಧಿಯೂ ಮತ್ತಿಷ್ಟು ವ್ಯಕ್ತವಾಗುತ್ತದೆ. ಇದರಿಂದ ಆ ಬಡ ಮೂಕ ಪ್ರಾಣಿಗಳ ಮತ್ತು ಸಾರ್ವಜನಿಕರ ಪರವಾಗಿ ನಾವು ಆ ಮಹನೀಯರನ್ನು ಮನಃಪೂರ್ವಕ ಅಭಿನಂದಿಸುವೆವು; ಮತ್ತು ಅವರ ವ್ಯಾಪಾರವು ಇನ್ನಷ್ಟು ಅಭಿವೃದ್ಧಿಯಾಗಿ ಇಂಥ ಸಾರ್ವಜನಿಕ ಹಿತದ ಸತ್ಕೃತ್ಯಗಳು ಅವರ ಕೈಯಿಂದ ಮತ್ತಿಷ್ಟು ಜರಗಲೆಂದು ಬಯಸುವೆವು

---

೮ ಇನ್ನೊಂದುವೇಳೆಯಲ್ಲಿ ಜಂಗಲಖಾತೆಯು [illegible] ಸು ಮಾಡಿದ ಶಿಕ್ಷೆಯ ಸಂಬಂಧಿ ಪತ್ರವ್ಯವಹಾರ ನೋಡಿರಿ, ಅದರಿಂದ ಜಂಗಲಖಾತೆಯ ಉದ್ಧಟತನವೂ ಅದರ [illegible] ವ್ಯಕ್ತವಾಗುತ್ತದಷ್ಟೇ ಅಲ್ಲ, ನ್ಯಾಯ ನಿರ್ಣಯಿಸಿದ ಮಾಜಿಸ್ಟ್ರೇಟರ ನ್ಯಾಯಾಧೀಶತ್ವದ ಪರೀಕ್ಷೆಯಾಗುತ್ತದೆ. ಈ ಜಿಲ್ಲೆಯ ಮಾಜಿಸ್ಟ್ರೇಟರೆಂದರೆ ಬರೇ ಗುನ್ಹೆ ವಿಚಾರ ಮಾಡುವವರಲ್ಲ. ಮುಲ್ಕಿ ಅಮಲದಾರರೂ ಸಹ ಅವರೇ! ಆದ್ದರಿಂದ ಜಂಗಲಖಾತೆಯ ನಿಯಮಗಳೂ, ರಯತರ ಹಕ್ಕುಗಳೂ, ಅವರ ನಿತ್ಯ ವ್ಯವಹಾರದ ಸಂಗತಿಗಳು. [illegible] ಸ್ಥಾಪನೆಯಾದಂದಿನಿಂದಲೂ ರಯತರ ಜಂಗಲ ಹಕ್ಕುಗಳು ಈ ಅಮಲದಾರರಿಗೆ ಮುಖೋದ್ಗತ. ಹೀಗಿದ್ದು ತನ್ನ ಹಕ್ಕಿಗನುಸರಿಸಿ ಆರೋಪಿಯು [illegible] ಗುನ್ಹೆ ಎಂದು ತಿಳಿಯುವಷ್ಟು ಇವರೇನು ಬುದ್ಧಿಮಂದರೆಂದು ಯಾರು ಹೇಳ್ಯಾರು? ಹಾಗಾದರೆ, ಈ ನಿರ್ಣಯವನ್ನು ನ್ಯಾಯಬುದ್ಧಿಯಿಂದ ತಾವು ಕೊಟ್ಟಿದ್ದೇವೆಂದು ಅವರು ಹೇಳ್ಯಾರೋ? ತಮ್ಮ ಪವಿತ್ರ ಕರ್ತವ್ಯ, ತಮ್ಮ ಖಾತೆಯ ಅಭಿಮಾನ, ನ್ಯಾಯ ನೀತಿಗಳನ್ನೆಲ್ಲ ಬಿಟ್ಟು ಇಂಥ ನಿರ್ಣಯದಿಂದ ಇವರು ಸಾಧಿಸುವದಾದರೂ ಏನು? ಹೊಸ ಮನ್ವಂತರ ಪ್ರಾರಂಭವಾದರೂ ಜಂಗಲಖಾತೆಯ ಅಳಿಯತನವು ಇನ್ನೂ ಅಳಿದಿಲ್ಲ, ಇದಿಷ್ಟು ನಿಜ ಆದರೆ, ಕಟ್ಟಕಡೆಗೆ, ಇವರಿಂದಾದ ತೀರ್ಪು ಡಿಸ್ಟ್ರಿಕ್ಟ ಮಾಜಿಸ್ಟ್ರೇಟರು ಕಿತ್ತು ಹಾಕಿ, ಆರೋಪಿಗೆ ನ್ಯಾಯದಾನ ಕೊಟ್ಟದ್ದೇ ಮಹದಾನಂದವೂ, ಅಭಿನಂದನೀಯವೂ ಅಲ್ಲದೆ, ಲೋಕಪಕ್ಷದ ವಿಜಯವೂ ಆದಂಥಾಗಿದೆ.

ಪತ್ರ ಸ್ವೀಕಾರ.

ಏಕ ಮುಸಲಮಾನ ನಾಗರಿಕ—ಕಾರವಾರ. ಸ್ವಲ್ಪ ವಿಲಂಬದಿಂದ ಬಂದದ್ದರಿಂದ ಮುಂದಿನ ಸಂಚಿಕೆಗೆ.

ಇನ್ನೂ ಬಹಳ ಪತ್ರವ್ಯವಹಾರದಿಂದಸ್ಥಳ ಸಂಕೋಚಕ್ಕೋಸ್ಕರ ವಿಲೆವಾರಿ ಕೊಡಲಾಗಿವೆ. ಸವಡಿಯಂತೆ ಪ್ರಕಟಿಸುವೆವು

ಇಹವೃತ್ತ.

ಕುಮಟಾ— ಈ ವರೆಗೆ ಮಳೆ ೧೫-೮೬ ಬಿತ್ತು. ರೋಗರಾಯಿ ಸ್ವಲ್ಪ ಕಡಿಮೆಯಾಗಿದೆ.

ಈ ತಾಲೂಕ ಕಾನಭಾಗ (ಕುಳಕರ್ಣಿ) ಯವರು ಒಟ್ಟುಗೂಡಿ ತಮ್ಮ ಇಡೀ ವರ್ಗದ ಹೀನದೀನ ಸ್ಥಿತಿಯನ್ನು ಹೋಗಲಾಡಿಸಿ ತಮ್ಮಿಂದ ಜರಗಿಸಿಕೊಳ್ಳುವ ಅನೇಕ ವಿಧದ ಭಾರಿ ಹೊರೆಯ ಕರ್ತವ್ಯಗಳಿಗನುರೂಪ ಸಂಬಳ ದೊರಕಿಸಿಕೊಳ್ಳುವ ದೆಸೆಯಿಂದ ಒಂದು ಸಂಘವು ಸ್ಥಾಪನೆಮಾಡಿಕೊಂಡಿದ್ದಾರೆ, ಮತ್ತು ಪ್ರತಿಒಬ್ಬ ಕಾನಭಾಗರು ಈ ಕುರಿತು ಬೇರೆಬೇರೆಯಾಗಿ ಸರಕಾರಕ್ಕೆ ಧರ್ಣ ವಿಲೆವಾರಿಯ ಮನವಿಗಳನ್ನು ಸಾದರಪಡಿಸಿರುವರು.

ಸಾಕಷ್ಟು ಮಳೆ ಬಿದ್ದು ಕೆರೆ ಬಾವಿಗಳು ತುಂಬಿದ್ದರೂ ಕೆಲವು ಸ್ಥಳಗಳಲ್ಲಿ ಅಜಾಗ್ರತೆಯಿಂದ ಉಪ್ಪು ನೀರು ಅಡ್ಡಗಟ್ಟುವ ಜಂತ್ರಡಿಗಳು ಮುರಿದು ಸಾಧಾರಣ ಒಂದು ಮೈಲು ಚೌಕ ಗದ್ದೆ ಬೈಲು ಉಪ್ಪು ನೀರಿನಿಂದಲೆ ತುಂಬಿ ತುಳುಕುತ್ತಿರುವದು. ಬಡ ರಯತರು ಹಾಕಿದ ೧೦೦-೨೦೦ ಖಂಡುಗ ಬೀಜ ನಷ್ಟವಾಗಬಹುದು.

ನಿನ್ನೆ ತಾ. ೯ ನೇ ಯಿಂದ ಸಿವ್ಹಿಲ ಕೋರ್ಟು ಪುನಃ ತೆರೆಯಿತು.

ತಾ ೭ ನೇಯಿಂದ ಸ್ಕೂಲು ತೆರೆಯಲ್ಪಟ್ಟಿತು.

ತಾ. ೮ ನೇಗೆ ಕುಮಟೆಯ ದಾರಿಯ ೧೫-೨೦ ಜನರು ಹತ್ತಿದ ದೋಣಿ ಮುಳುಗಿತು. ದಾಟುವ ಜನರಿಗೆ ಸುದೈವದಿಂದ ಅಪಘಾತವೇನೂ ಆಗಿಲ್ಲ.

ಹೆಗಡೆ-ಮಿರ್ಜಾನ ದಾರಿಯ ಒಂದು ಜಂಗಲು, ೨ ಗಾಡಿ ೪ ಎತ್ತು ಮತ್ತು ೬-೮ ಜನರು ಸಹಿತ ಮುಳುಗಿತು. ಕೆಲವು ಸಾಮಾನು ಹೋದರೂ, ಗಾಡಿ, ಎತ್ತು, ಜನರು ಹ್ಯಾಗಾದರೂ ದಡಕ್ಕೆ ಬಂದು ಮುಟ್ಟಿದ್ದು ಅವರ ಸುದೈವ. ಈ ಕುರಿತು. ಪಂಚನಾಮೆಯಾಗಿದಂತೆ!

ಗೋಕರ್ಣ— ಇಲ್ಲಿಗೆ ಬಂದಿರುವ ವಿದ್ಯಾಖಾತೆ ಸಾವಕಾರ ಹಿರೇಕೈ. ಡಾ। ರಾ। ಗಣಪತ ರಾಮಯ್ಯ ಹೆಗಡೆರು ಇಲ್ಲಿಯ ಎಲ್ಲ ಪ್ರಾಥಮಿಕ, ಸಂಸ್ಕೃತ, ಗರ್ಲ್ಸ, ಇಂಗ್ಲಿಷ ಶಾಲಾ ಹುಡುಗರಿಗೆ ಮಾವಿನ ಹಣ್ಣುಗಳನ್ನು ಹಂಚಿ ಆನಂದಪಡಿಸಿದರು. ಈ ಸಮಾರಂಭಕ್ಕೆ ಊರೊಳಗಿನ ಎಲ್ಲ ಪ್ರತಿಷ್ಠಿತ ಗೃಹಸ್ಥರು ದಯಮಾಡಿದ್ದರು.

ಶಿರ್ಶಿ— ಬಹಳೇ ಅಪರೂಪವಾಗಿ ಬಂದಿರುವಂಥ ಮೈಲಿಯು ತನ್ನ ಮಳಗಾಲವನ್ನು ಇಲ್ಲಿಯೇ ಕಳೆಯುವ ಆಲೋಚನೆಯಲ್ಲಿರುವಂತೆ ಕಾಣುತ್ತದೆ. ಆದ್ದರಿಂದ ಯೋಗ್ಯ ಅಧಿಕಾರಿಗಳು ಇದನ್ನು ಗಡಿಪಾರುಮಾಡುವ ವ್ಯವಸ್ಥೆ ಮಾಡಿದರೆ ಬಹಳೇ ಉಪಕಾರವಾಗುತ್ತಿತ್ತು.

ಮಳೆಯು ಬೀಳುತ್ತಲೇ ಇದ್ದ ಮೂಲಕ, ಬೇಸಿಗೆಯಲ್ಲಿ ಒಣಗಿಹೋದಂಥ ಬೆಟ್ಟದಮೇಲಿನ ಹುಲ್ಲು ಪುನಃ ಚಿಗಿಯುತ್ತಲಿದೆ. ಅದರಂತೆ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಆಗಮನದ ಮೂಲಕ ಇಲ್ಲಿಯ ಮೋಟಾರ ಕಂಪನಿಯ ಕಾರಕೂನ ಸಾಹೇಬರ ಗರ್ಡಾವರೂ ಬಗಿಯಹತ್ತಿದೆ.! ಪೆಟ್ರೋಲದ ಅಭಾವದಮೂಲಕ ಮೋಟವು ಇದ್ದೂ ಇಲ್ಲದ ಲೆಕ್ಕವಾಗಿ ವಿದ್ಯಾರ್ಥಿಗಳ ಕಾಟಕ್ಕೆ ಮಿತಿಯೇ ಇಲ್ಲ.

ಇಲ್ಲಿಯ ಪೋಸ್ಟಮಾಸ್ತರರ ಕಾಯಿದೆ ಕಾನೂನುಗಳ ಮೂಲಕ ಜನರಿಗೆ, ವಿಶೇಷವಾಗಿ ವ್ಯಾಪಾರೀ ವರ್ಗಕ್ಕೆ, ಬಹಳೇ ತೊಂದರೆಯಾಗುತ್ತಲಿದ್ದು ಮೇಲಧಿಕಾರಿಗಳಿಗೆ ಅರ್ಜಿಗಳೂ ಹೋಗಿರುತ್ತವೆ.

ಊರೊಳಗಿನ ಕೆಲವು ರಸ್ತೆಗಳು ನೆಟ್ಟಹಚ್ಚಲಿಕ್ಕೆ ಅಗಲೇ ಸಿದ್ಧವಾಗಿವೆ.! ಆದ್ದರಿಂದ ದೀಪಸ್ತಂಭಗಳ ಕುರಿತಾಗಿ ವಿಶೇಷವಾದ ಕಾಳಜಿಯನ್ನು ತೆಗೆದುಕೊಳ್ಳುತ್ತಿದ್ದಂಥ ಮುನಿಸಿಪಾಲಿಟಿಯು ಈಗಲಾದರೂ ದೀಪಗಳನ್ನು ಸ್ವಲ್ಪ ಹೆಚ್ಚು ಪ್ರಕಾಶಮಯವಾಗಿ ಮಾಡುವ ವ್ಯವಸ್ಥೆಯನ್ನು ಮಾಡಿದರೆ ಎಷ್ಟೋ ಪಾಂಥಸ್ಥರಿಗೆ ಕತ್ತಲೆಯಲ್ಲಿ ಮೈಯೆಲ್ಲಾ ರಾಡಿಮಾಡಿಕೊಳ್ಳುವ ಭೀತಿಯು ಕೆಲಮಟ್ಟಿಗಾದರೂ ಕಡಿಮೆಯಾಗುತ್ತಿತ್ತು.

ಈ ಸಾರೆ ಇಂಟರಮೀಜಿಏಟ್ ಪರೀಕ್ಷೆಯಲ್ಲಿ ಇಲ್ಲಿಯ ವ್ಹಿ ಜೆ ಪ್ರಭು, ಡಿ ಎಸ್ ಹೆಗಡೆ ಮತ್ತು ವ್ಹಿ ಜಿ ಹೆಗಡೆ ಎಂಬವರು ತೇರ್ಗಡೆಯಾಗಿರುತ್ತಾರೆ.

ವಿಶ್ವೇಶ್ವರ ಗಣಪತಿ ಭಟ್ಟಾ ಶಾಸ್ತ್ರಿಗಾರ ೫೬ ಎಂಬವರು ಮದ್ರಾಸ ವಿಶ್ವವಿದ್ಯಾಲಯದ "ವಿದ್ಯಾ ವಾಣಿ" ಎಂಬ ಪರೀಕ್ಷೆಯಲ್ಲಿ ಮೊದಲನೇ ನಂಬರಕ್ಕೆ ಉತ್ತೀರ್ಣರಾದರು. ಕರ್ನಾಟಕದಲ್ಲಿ ಇವರೇ ಮೊದಲನೆಯವರಾದದ್ದು ಇದಿ ಕರ್ನಾಟಕಕ್ಕೂ ಮತ್ತು ವಿಶೇಷವಾಗಿ ನಮ್ಮ ಕಾನಡಾಜಿಲ್ಲೆಗೂ ಭೂಷಣವಾಗಿದೆ.

ಅಂಕೋಲಾ— ಮಳೆಯು ಚನ್ನಾಗಿ ಬೀಳುತ್ತದೆ. ರೈತರು ಸುಗ್ಗಿಯ ಕೆಲಸದಲ್ಲಿ ತೊಡಗಿರುವರು. ಜ್ವರವು ಸ್ವಲ್ಪ ಇದೆ.

ತಾ ೪-೬-೨೦ನೇ ದಿವಸ ಇಲ್ಲಿಯ ನಾಗರಿಕರು ಶ್ರೀ ವಾಸುದೇವ ಮಂಜನಾಥ ಕಾನಭಾಗ ಇವರು ಅಂಕೋಲಾ ಶಾಲೆಯ ವಿದ್ಯಾರ್ಥಿಯಾಗಿದ್ದು M.A.LL.B ಪರೀಕ್ಷೆಯಲ್ಲಿ ಉತ್ತೀರ್ಣರಾದಬಗ್ಗೆ ಅವರ ಅಭಿನಂದನ ಮಾಡುವ ಬಗ್ಗೆ ಶ್ರೀ ಎಫ್. ಎಸ್. ಸಾಲದಾನಾ, ಎಕ್ಸಟ್ರಾ ಅಸಿಸ್ಟಂಟ ಕನ್ಸರವೇಟರ, ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು ಆವಾಗ ಶ್ರೀ ವ್ಹಿ. ಪಿ ಪ್ರಭು. ಶ್ರೀ ಎಸ್ ಎ ನಾಡಕರ್ಣಿ ಸ್ಥಳೀಕರ. ಆರ್. ಪಿ. ಕಾಮತ ವಗೈರೆ ಸಮಯೋಚಿತ ಭಾಷಣಗಳಾದವು.

ತಾ. ೫ನೇ ದಿವಸ ಅರಸರ ಹುಟ್ಟಿದ ದಿವಸದ ಉತ್ಸವದ ಬಗ್ಗೆ ಕಚೇರಿಯಲ್ಲಿ, ಎಷ್ಟರ್ನ ಶಾಲೆಯಲ್ಲಿ, ವಗೈರೆ ತೋರಣಗಳು ಹಾಕಿ ಶೃಂಗರಿಸಿದ್ದರು. ಸಾಯಂಕಾಲ ಎಷ್ಟರ್ನ ಶಾಲೆಯಲ್ಲಿ ಸಭೆ ಸೇರಿ ಅಲ್ಲಿಂದ ಶ್ರೀ ಶಾಂತಾದುರ್ಗಾ ದೇವಸ್ಥಾನಕ್ಕೆ ಹೋಗಿ ಅರಸರ ಮಂಗಳಚಿಂತನ ಮಾಡಿದ ನಂತರ ಉತ್ಸವವು ಮುಗಿಯಿತು.

ಇಲ್ಲಿಯ ಇಷ್ಟು ದಿವಸ ಹೆಸರಿಗೆ ಮಾತ್ರ ಇದ್ದ ಎಷ್ಟರ್ನ ಲಾಯಬ್ರೇರಿಯ ಉರ್ಜಿತಾವಸ್ಥೆಗೆ ತರುವ ವಿಚಾರ ಮಾಡುವರೆ ಶ್ರೀ ಎಫ್. ಎಸ್. ಸಾಲದಾನಾ ಸಾ। ರವರ ಅಧ್ಯಕ್ಷತೆ ಕೆಳಗೆ ತಾ ೬ನೇ ದಿವಸ ಒಂದು ಸಭೆಗೂಡಿತ್ತು. ಅಲ್ಲಿ ಮೊದಲು ಸಂಗತಿಗಳ ಚರ್ಚೆಯಾಗಿ ನಿಯಮಗಳನ್ನು ತಯಾರಿಸುವರೆ ಶ್ರೀ ವ್ಹಿ. ಪಿ ಪ್ರಭು ಶ್ರೀ ವ್ಹಿ. ಟಿ. ನಾಡಕರ್ಣಿ. ಶ್ರೀ ಆರ್. ಪಿ. ಕಾಮತರವರ ಒಂದು ಕಮಿಟಿಯು ಆರಿಸಲ್ಪಟ್ಟಿತು.

ಇಲ್ಲಿಯ ಲೋಕಲಬೋರ್ಡಿನ ಗ್ರಾಂಟ ನಂ ೧ನೇ ವರ್ನಾಕ್ಯುಲರ ಫೀಟ ನಿವಡಣೂಕಿಯು ಇದೇ ಬರುವ ತಾ. ೨೧ನೇಗೆ ಅಡಿಗೋಣ ಶಾಲೆಯಲ್ಲಿದ್ದು ಆ ಬಗ್ಗೆ ವಿ ಕೆ ನರಸಿಂಹರವರಲ್ಲಿ ನೋಟೀಸು ಸಹ ಪ್ರಸಿದ್ಧ ಆಗಿದೆ "ಧುರೀಣ" ಜಾಹೀರಾತಿ ದರಕ್ಕಿಂತ "ವೃತ್ತ" ದ ಜಾಹೀರಾತಿ ದರ ಕಡಿಮೆ ಇದೆ. ಮತ್ತು ವೃತ್ತದ ಮಾಗಣಿಯೂ ಬಹಳವಿದೆ ಹೀಗಿದ್ದು "ವೃತ್ತ" ದಲ್ಲಿ ನೋಟೀಸು ಯಾಕೆ ಬರಲಿಲ್ಲ? "ವೃತ್ತ" ದಲ್ಲಿ ಕೊಟ್ಟರೆ, ಲೋಕಲ ಫಂಡಕ್ಕೆ ಹಣದ ದೃಷ್ಟಿಯಿಂದಲೂ ಫಾಯಿದೆ ಆಗುತ್ತಿತ್ತಲ್ಲವೆ?

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವರು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಸತ್ಯಾರ್ಥ ಪ್ರಕಾಶ.

೨ ಭಾಗಗಳ ಕಿಮ್ಮತು ೧-೪-೦.

ಎಸ್. ಎಲ್. ಧಾಕಪ್ಪಾ.

ಪೋಸ್ಟ- ಶಿರಸಿ. (ಉತ್ತರ ಕಾನಡಾ)

ಕುಮಟೆ ಪೇಟೆ ಧಾರಣೆ.

ಜಿನಸು.	ದರ.
	ರೂ. ಆ.
ರಂಗೂನ ಪಟ್ನಿ ಗೋಣಿ ೧ಕ್ಕೆ ...	೧೬—೧೬॥
ಕುಚ್ಚಿಗೆ ಅಕ್ಕಿ ...	೮—೮-೩-೦
ರಾಗಿ ನಿಜಕ್ಕೆ .	೧೩—೧೪
ಗೋದಿ ಗೋಣಿ ೧ಕ್ಕೆ ...	೧೯—೨೫
ಹುರುಳಿ ನಿಜ " ...	೧೫॥
ಕಡಲೆ ನಿಜ ೧ಕ್ಕೆ ...	೧೬—೧೬॥
ತೊಗರಿಬೇಳೆ ಗೋಣಿ ೧ಕ್ಕೆ . .	೨೨—೨೦
ಹೆಸರು ಕಾಳು " ...	೧೬—೨೮
ಉಪ್ಪು ಕಸಾನಗಿ ...	೮।—೯
ಮೋರಿಸ ಸಕ್ಕರೆ ಮಣ " ...	೧೩॥—೧೪
ಮೆಣಸಿನ ಕಾಯಿ ಮಣ " ...	೬—೭೨
ಹಳೇಬೆಲ್ಲ ಮಣ ..	೧೦॥
ಸೆಕಪ್ರಿ ಖಂಡಿ ...	೧೧೫—೧೩೦
ಹೊಪ್ರಿಹಿಂಡಿ ಖಂಡಿ ...	೩೫—೩೭॥
ಕೊಬ್ರಿ ಎಣ್ಣೆ ಮಣ ...	೧೦॥
ಕೊತ್ತಂಬರಿ ಗೋಣಿ " ...	೧೨॥—೧೪
ಉಪ್ಪು ಗೋಣಿ " ...	೪-೫-೦
ಕೆರೊಸಿನ ಸೂರ್ಯ " ..	೪-೫-೦
" ಹಂಸ " ...	೩-೭-೬

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣಮರಳು.)

ನಾಶ-ಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗಮಿ, (ಚಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಡಿಮೆಯಾಗಿ ವಾತರೋಗ ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ. ಖ. ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ.

ವಿಳಾಸ—**ಜಿ. ಎಲ್. ಜೋಶಿ ಕಂಪನಿ,**

ಪೋಸ್ಟ— ಬನವಾಸಿ. ಉತ್ತರ ಕಾನಡಾ,

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD

Bombay.

ಅತ್ಯುತ್ತಮ ವಾಚಗಳು.

ಸುಲಭ ಕ್ರಯ.



ರ॰ 7-8-0



ಲ್ಲಿ ಗ್ಯಾರೈಟ

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆ..

ಗಿರಗಾಂವ ಮುಂಬಯಿ

KRISHNAVILAS TRADING COMPANY

Girgaum BOMBAY

शक्तिवर्धक 'कामेश्वर मोदक'

शरीरात आणि पुष्टता आणण्यासाठी ... जीवन प्राप्त करून घेण्याची ... आहे अनुपानाप्रमाण खाव त्यास दिवसा ... देखील पडत नाही अनुभव घ्या ... रुपये

पत्ता— मुरलीजी हिरालाल ... गुर्जे हवेलि, पत्र- कुमठा ...

ಔಷದಿಯಿಂದ ಗುಣಪಡಿಸುವ

ಔಷದಗಳು

1 ... ಒಂದ ...

2 ... ಮದನ ...

3 ...

4 ...

6 ...

9 ...

10 ... ಹುಳ ... ಪೊಡಿಲಾದ ...

11 ... 1 ಕ್ಕೆ 0-3-0 ... 1-0-0

ಎಸ್. ಗಣಪತ್ಯಾ ಎಂಡ ಸನ್ಸ್

ನೇಟಿವ್ ಡೊಕ್ಟರ್ಸ ...

ಹೊಸ ಕೋರಿ ... ಹೊಸ ಕೋದ

ಗಣ ಬಾಧಿಸಿದ್ದರೆ ...

(ಅತ್ಯಂತ ... ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಅತ್ಯುತ್ತಮ ಪಾಕ ... ಕಗಳಲ್ಲಿ ಅಮೃತವಲ್ಲಿಯ ರಸದ ... ನು ... ಅನುಭವಿಕ ದೇಶೀವೈದ್ಯರ ... ರೋಗಿಗಳಿಗೆ ಉಪಯುಕ್ತವಾಗುವಂ ... ತಯಾರಿಸಿರುತ್ತೇವೆ ಈ ... ಸೇವನೆಯಿಂದ ... ಮೂತ್ರದ ... ದಲು ... ಧಾತು ಬೀಳುವದು ... ಆಗುವದಿಲ್ಲ ರಕ್ತ ಶುದ್ಧಿ ... ವೀರ್ಯ ವೃದ್ಧಿಯಾಗುವದು. ಬಹುದಿವಸದಿಂ ... ಮೇಹ ಇದ್ದ ಸಂಬಂಧಿಯು ... ಗುಣವಾಗುವದು ... ಯಾವತ್ತೂ ... ಅಪ್ರತಿಮ ಗುಣವು ... ಈ ಪಾಕಸೇವನೆಯಿಂದ ... ಇನ್ನು ಅನೇಕ ಮಹತ್ವದ ಗುಣ ... ಇದರ ಅನುಭವವು ಸೇವನೆಯ ... ನಿದರ್ಶನಕ್ಕೆ ಬರುವದು ಸ್ತ್ರೀ ... ಮೊದಲಾದ ಸ್ತ್ರೀಯ ... ಮುಟ್ಟ ... ವಾಗುವದರಿಂದ ಸ್ತ್ರೀಯು ... ಯೋಗ್ಯರಾಗುವ ... ಇದ್ದರೆ ಒಂದು ಡಬ್ಬಿ ಪಾಕದಿಂದ ... ಮೂರು ಡಬ್ಬಿ ಪಾಕದಿಂ ... ಒಂದು ಸಾರೆಯಾ ... ತೆಗೆದುಕೊಂಡು ನೋಡಿರಿ

... ಗಳ ಕೂಲಿಯು ... ಡಬ್ಬಿಗೆ ... ಮೇಲೆ ... ಡಬ್ಬಿ ...

— ... ಇಂಗ್ಲಿಷ ಅಥವಾ ಕನ ... ಬರಿಯಬೇಕು

... ಬ್ರದರ್ಸ ಮತ್ತು ಕಂಪನಿ

... ಬೆಳಗಾಂವ್

ಗ್ಯಾಸ ದೀಪಗಳು

ಬಾಡಿಗೆಗೆ ಇಟ್ಟಿರುವೆವು.

... ಯಾವ ತರದ ಸಾರ್ವಜನಿಕ ... ಸಮಾರಂಭ ... ರಾತ್ರಿ ಹೊತ್ತಿನಲ್ಲಿ ... ಹಚ್ಚಿದರೆ ... ದಿಂದ ಬೆಳಕು ಹೆಚ್ಚು ಬಿದ್ದು ... ಈ ವಿನಹಾ ... ಹಚ್ಚು ಎಂಬ ... ಕ್ರಯಗಳು ಸಹ ಇವೆ

... ದರವಾರ ಪತ್ರಿಕೆ ... ಶಿಕ್ಕೆ ...

ಪುರುಷೋತ್ತಮ ಲಕ್ಷ್ಮಣ ಮ್ಯೆನೇಜರ್

ಹೆಗಡೇಕರ, ದುಕಾನ, ಕುಮಟಾ.

Printed a[redacted] ... R ... rao Keshav Shenvi at his Star of Kanara Press Kumta

Reg. No. B. 1270

ವರ್ಷ ೪.

ಕಾನಡಾವೃತ್ತ.

THE KANARA NEWS

ಸಂಚಿಕೆ ೧೫.

ಪತ್ರದ ವರ್ಗಣಿ —

ಕುಮಟೆಯಲ್ಲಿ ಆಗಾವು
ರೂಪಾಯಿ 2-0-0

ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 2-13-0

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ —

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ(೧೫ ಎಮ್‌ಎಸ್) ೫ ಸಾಲುಗಳ ವರೆಗೆ ರೂ. 1-8-0.
ಅವಕ್ಕಿಂತ ಪ್ರತಿ ಸಾಲಿಗೆ ೦-೩-೦.
ಹೆಚ್ಚಿನ ಸಾಲು ಎಷ್ಟು ಹೊತ್ತಿರುವದೋ ಅ ಜಾಗ ದಿಂದ ಅಳತೆಯಾಗುವದು ತಿಳಿ ಯಲ್ಪಡುತ್ತಿದೆ.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಕರಾರು ತಿಳಿಸಲ್ಪಡುವದು

ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೨ ಮಾಹೆ ಜೂನ ಸನ್ ೧೯೩೦ ನೇ ಇಸವಿ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಹೊಟ್ಟು, ಕಣ್ಣು ಉರಿ ಇವುಗಳಿಂದ ಕೀವು ಸೋರುವದು ಕಿವಿ ಸೋರುವದು, ಕಣ್ಣು ನೋವು, ಅಪಸ್ಮಾರ, ನಿದ್ದೆ ಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಚಿತ ಗುಣಮಾಡುತ್ತದೆ; ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆ 1ಕ್ಕೆ 0-12-0, 3 ಕ್ಕೆ 2-0-0
ದೊಡ್ಡ ಸೀಸೆಗೆ 1-8-0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗವನ್ನು ಗುಣ ಮಾಡುತ್ತದೆ
ಬಾಟ್ಲಿ 1 ರ ಕ್ರಯ 1-8-0
ಬಾಟ್ಲಿ 3 ರ ಕ್ರಯ 4-0-0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮೈನೆರೆಯಾಗುವದು, ರಜೋದರ್ಶನ ಸಮಯದಲ್ಲಿ ಅತ್ಯಲ್ಪವಾಗಿ ಅತಿ ಹೇರಳವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳಿಪ್ರದರ ಬಿಳಿಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ 2/-

ಚಿನ್ ಚಿನ್ ಬಾಮು.

ಎಲ್ಲಾ ತರದ ನೋವು, ತಲೆನೋವು, ಜಳಂ, ಕೆಮ್ಮು, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ ಕ್ಕೆ ೩ ಆಣೆ ಟ ೩. ಅಲಾಯದ ಚಟಾಗಿಗೆ ಬರೆಯಿರಿ. ವಿಳಾಸ—

ಮನೋಲ್ಲಾಸಿನಿ ಕಂಪನಿ.

7 ಕುಂಬಳೆ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೇಜ್ವರ, ಕೆಂಪುಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು 8 ಔನ್ಸಿನ ಬಾಟ್ಲಿ 1ಕ್ಕೆ ರೂ 1 8 ½ ಡಜನಿಗೆ ರೂ 8 8, 1 ಡಜನಿಗೆ ರೂ 16 8

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು 25 60 ಮತ್ತು 100 ಮಾತ್ರೆಗಳಿಗೆ ಆಣೆ 8 ರೂ 1 ಮತ್ತು ರೂ 8-1.

ರೆವ್ಯುಮೊ ಬಾಮು: ತಲೆಶೂಲೆ, ಕಟಿವಾತ, ಇತರ ಎಲ್ಲಾ ನೋವುಗಳಿಗೆ. ಕ್ರಯ. ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 5-4-0

ಯುಕೆಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ 1 10 1 ಡಜನಿಗೆ ರೂ 3

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1 2 4. ಔನ್ಸ್ 1 2. 4.
ಆ 2½ ಆ 3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಹೊಕ್ಕರೊಡನೆ ಪಳ್ಯಾಂತರರಾಗಿ ಪ್ರಾಯಕ್ಕೂ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ, ಇತರ ಎಲ್ಲಾ ಸಾಮಾನುಗಳೂ ದೊರೆಯುವದು. ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ತಿಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸುವೆವು.

ಪತ್ತೆ:—

ಮಲೇರಿಯಾನಾ ಕಂಪೆನಿ,
7. ಮಂಗಳೂರು.

ಗುರುಪ್ರಸಾದಿಕ ಔಷಧಿ.

ಗುರುಕೃಪಾ— ಬಹಳವಾದಿ ಯಾವತ್ತು ರೋಗಗಳ ಮೇಲೆ ಒಂದೇ ಖಾತ್ರಿ ಲಾಯಖ ಔಷಧ ನೂಪ್ಪುರೋಗ, ಜ್ವರ, ಅತಿಸಾರ, ಸಂಗ್ರಹಣಿ, ಹೊಟ್ಟೆಕಡಿತ, ದಮ್ಮು, ಶ್ವಾಸ, ನ್ಯೂಮೋನಿಯಾ, ವಾತವಿಕಾರ, ಹಡದಬೇನೆ, ದುರ್ಗಂಧಬೇನೆ, ತಲೆನೋವು, ಹುಡುಗರ ಯಾವತ್ತು ರೋಗಗಳು. ಈ ಯಾವತ್ತು ರೋಗಗಳಿಗೆ ಈ ಔಷಧವು ಗುಣವನ್ನುಂಟು ಮಾಡುತ್ತದೆ ವಿಶೇಷ ಮಾಹಿತಿ, ಔಷಧದ ಸಂಗಡ. ಕಿಮ್ಮತ ೧ ತೊಲೆ ಬಾಟ್ಲಿಗೆ ೩ ರೂಪಾಯಿ, ೩ ತೊಲೆ ಬಾಟ್ಲಿಗೆ ೪ ಆಣೆ

ಜ್ವರದ ಚೂರ್ಣ:— ಪರದೇಶಿ ಮತ್ತು ಸ್ವದೇಶಿ ಜ್ವರದ ಮೇಲಿನ ಔಷಧಕ್ಕಿಂತ ಇದು ಉತ್ತಮ ಅದೆ, ಡಾಕ್ಟರ, ಹಕೀಮ ವೈದ್ಯ ಇವರು ಅನುಭವ ನೋಡಬೇಕು. ಸ್ವಾನುಭವ ಇದೇ ಸರ್ಟಿಫಿಕೇಟು ಯಾವತ್ತು ಜ್ವರದ ಮೇಲೆ ಒಂದೇ ಪುಡಿಯಲ್ಲಿ ತಪ್ಪದೇ ಗುಣವಾಗುತ್ತದೆ. ಕ್ರಯ ೩ ಆಣೆ ತೂಕ ಒಂದು ಪುಡಿಗೆ ೪ ಆಣೆ

ವಾತಶತ್ರು:— ಯಾವತ್ತು ಬಗೆಯ ವಾಯುವಿನ ಮೇಲೆ ೧ ತೊಲೆಗೆ ಕ್ರಯ ೧ ರೂಪಾಯಿ

ಸೂರ್ಯಪುಟಲೋಹ ಭಸ್ಮ:— ಪರದೇಶಿ ಲೋಹಕ್ಕಿಂತ ಇದು ಉತ್ತಮ ಅದೆ, ಅನುಭವ ಅದ ಮೇಲೆ ಖಾತ್ರೀ ಆದೀತು. ೧ ತೊಲೆಗೆ ಕ್ರಯ ೩ ರೂಪಾಯಿ.

ಸುಖಶಾಂತಿ ತೈಲ:— ಈ ಎಣ್ಣೆಯು ಸುಗಂಧವಿದ್ದು ಗುಣಕಾರಕ ಇರುತ್ತದೆ. ತಲೆಗೆ ತಿಕ್ಕುವಾಗಿ ಸಂತೋಷ ಮೇಂದುವಿನ ವಿಕಾರ ಹೋಗುತ್ತದೆ ಒಂದು ಬಾಟ್ಲಿಗೆ ೬ ಆಣೆ

ನಪುಂಸಕತ್ವಾರಿ ತೈಲ:— ನಪುಂಸಕತ ಇಂದ್ರಿಯ ಶಿಥಿಲತೆಯು ಹೋಗುತ್ತದೆ ಕಿಮ್ಮತ್ತು ೧ ತೊಲೆಗೆ ೩ ರೂಪಾಯಿ.

ಮದ್ರಾಸ ಸುವಾಸಿಕ ಔಷಧಿ ಸಾಬೂನು.— ಈ ದೇಶದೊಳಗಿನ ಯಾವತ್ತು ಸಾಬೂನಿಕ್ಕಿಂತ ಗುಣದಲ್ಲಿ ಶ್ರೇಷ್ಠವದೆ. ಕಿಮ್ಮತ ೧ ಬಾಟ್ಲಿಗೆ ೫ ಆಣೆ.

ನಮ್ಮಲ್ಲಿ ವಜ್ರಕ್ಷಾರ, ಬಾಲಗ್ರಹ ಸ್ತ್ರೀಯರ ದೋಷ ವಿನಾಶಕ, ನಾಗವಟಿ ವಗೈರೆ ಔಷಧಗಳು ಸಿಗುವವು. ಪೋಸ್ಟ್ ವ ಪ್ಯಾಕಿಂಗ ಖರ್ಚು ಬೇರೆ.

ಪತ್ತೆ— ನವಲರಾಮ ಗಣೇಶರಾಮ ಕಾಪಡ ಮತ್ತು ಔಷಧ ವ್ಯಾಪಾರಿ ,
ಕೊಲ್ಹಾಪೂರ ಜಿಲ್ಲಾ ಬೆಳಗಾಂವ.

कानड्यांत कानडी की मराठी ?

रा. कामत याचा इशारा !

(लेखक — D P)

कोणत्याहि उपयुक्त वस्तूची रचना कर ण्यापेक्षा ती हाणून पाडण्यास प्रयत्न किंवा अक्कल फार कमी लागत असल्यामुळे आधु निक शहाण्या तरुणांची प्रवृत्ति या दुसऱ्या तऱ्हेच्या सोप्यामार्गाकडे वळावी हे साहजि कच आहे आणि त्यांतनहि नर का या शहाण्याना येनकेन प्रकारेण आपलें नाव वर्तमानपत्रद्वारा का होईना चव्हाट्यावर आणण्याची संधी मिळत असल्यास मग उल्हासाला फाल्गुणमासाचा जोड पण याह पेक्षा अधीक गम्मत अशी आहे का, हे शहाणे स्वत च तर एखाद्याचा प्रयत्न हाणून पा ड ण याचे निदान त्यात फूट तरी उत्पन्न करा वयाचे आणि वर,

चोराच्या उलट्या बोंबा

मारून, हें खापर जो खराखरा एखादा मग्न रत रहण्याकरिता चोखपाठ ए र नाहिंतो त्याच्याच डोक्यात फोडण्य न चुकत

याचें अलिकडील एक ताजा शिळ नाहेले उदाहरण ह्मणजे S G W या ने मधील १८ मार्चच्या पत्रावरील मि. S V Kamat B A यांची त्याच तर्हेवार पत्र न २४ मार्चच्या प्रसिद्ध झालेली टीका होय ही टीका S G W ने समग्र पत्र न वाचता केवळ मथळा आणि लिहिणारांचे नाव व एखादे दुसरें वाक्य वाचून चालेल्या कोणाच्या तडाक्यात लिहिलें असावा असे दिसते अर्थात् हीं टीका इतकी बावळट आणि बाष्फळ आहे की, रा कामतच्या विरुद्ध या बाबतात शस्त्र धरणें ह्मणजे मेंढरोच्या वीराना बाराक सारीक गोष्टीला भलतेंच महत्व देण्यासारखे वाटत असल्यामुळे, रा कामत याना आजपर्यंत बरोबर थप्पड मिळाली नव्हती परंतु याजमुळे रा कामत यास थोडा जिकच असा गर्व उत्पन्न झाला का, या "कानडी का मराठी" या वादविशयक डावात आपल्यासमोर मांडीवर थाप मारून उभा राहणारा वीर शिल्लक राहिला नाहीं, आणि यामुळे शेफारून जाऊन आपलें अजिंक्यत्व जग प्रस्थापित करण्याकरिता म की काय त्यानीं गेल्या २० तारखेच्या कनारा लीडर मधून आपल्या मताची द्वाही फिरवून रा. W म व इतरास उघड आव्हान केल आहे इतक्या प्रगल्भ विचाराच्या मनुष्याने दिपून जाऊन रा. कामतनीं सुचविल्याप्रमा ण रा. W आपले शब्द मागे घेतात, का आपलें पुर्वीचेच मत बरोबर असल्याबद्दल त्याचे समर्थन करितात, की मूग गिळून स्वस्त बसतात हें लौकरच दिसेल आपल काम रा कामत याचा गर्व हरण करण्याचे, किंवा रा W ची पाठ थापटण्याचे नसुन आपल्या जिल्ह्यात मराठाचा प्रवेश करवून त्या जिल्ह्याची अवनती करण्याचा काही W सारख्या

माथेफिरूनी (*Ia ati*)

घाट घातला आहे अशी सार्वत्रीक समजूत करण्याचा काही उपद्व्याप्याचा जो प्रयत्न चालू आहे त्याच्या ह्मणण्यात कितपत तथ्य आहे एवढच तर्त पाहण्याचे आहे

रा कामत यास कानडीचा केवढा अभिमान ते ह्मणतात की, कानडी भाषा मराठीपेक्षा फ जुनी द्राविडियन अर्थात पूर्वकालीन नोठमाच्या वीराची सर्वांत पूज्य अशा ग्रंथाची भाषा तर असल्ली व वीरश्री उत्पन्न करणारी अस न नार आपल्या लोकाना योग्य पात्र आणि ग्राह्य होय ' न ह्मणतात मद्रासी लोक याना मराठीचा गंधही नाही ते देखील आपल्या र जनीतीने देशाभिमानाने व राज निष्ठेने मग य हिंदुस्थानात लाजवीत आहेत तव्हा तुमचे न ड भाषेच्या मराठीची नेरटो प्र तिष्ठा कशाला परंतु कानडी भाषेचे पोवाड गाण्यात आपल्या मनात यावेळीं रा कामत याना जिन कारण का श्रम दिले त समजत नाही W न तरी कानडी भाषा नवी, त्या ग्रथांत भावांतरे नसून स्वतंत्र विचाराचें व डमय असलेली किंवा वीरानी न वापरलेली अशी असल्याबद्दल निंदा केल्याचे किंवा निंदा व्हाळ झाल्याचे त्याच्या पत्रात कोठेही दिसत नाही आणि कानडी भाषेची प्राप्ति ध्यानी मराठाला निंदाकरण्यास रा कामत यास

मद्रासची मदत नको

कशाला हवी हे का ? हिंदुस्थानात काय किंवा हिंदुस्थानाबाहेर काय, जे दक्ष पुढे आले त मराठी भाषेमुळें आले नाहीत किंवा कानडी भाषेमुळेही आले नाहीत त्याला अन्य करण आहेत प्रस्तुतचा मुद्दा कानडी भाषा अधिक जुनी का मराठी अधीक विकास पावलेली हे नसून आपल्या जिल्ह्यातील कोंकणी भाषा बोलणाऱ्याना शिक्षणाच्या बाबतीत कानडी अधीक मानवेल की मराठी अधीक मानवेल हा आहे (पुढें चालू)

ಬಂಗಾರ ರಾಜಾ ಸಾಬೂನು

ನಿಮಗೆ ಬೂಸ ಕ ಮಿಡಿಮಿಂತ ಬಂ ದಂತಾ ಅಪಾವಾ ಬೇಕಾದ ಸಾಬೂನು ಈ ಕೆಳಗಿನ ಪತ್ತೆಗೆ ಬರೆದುಕೊಂಡರೆ ಒಂದು ಪೆಟ್ಟಿ ...ದರೆ ತರಿಸಿಕೊ ಮಾವರು ಸಾಬೂನುಬಗ್ಗೆ ಪೆಟ್ಟಿ ೪೫೦ ಅದಾಂ ಪತ್ರವ್ಯವಹಾರದ ವಿಳಾಸ ಶ್ರೀ ಗೋವಿಂದರಾವ ಧಾರವಾಡ, ೩೬೯

मुसलमान मेंबर.

कानडावृत्तकर्ते यास

सलाम खालील पत्रास आपल्या पत्रात जागा द्याल अशी आशा आहे

नवीन सुधारणान्वये होणाऱ्या मुंबई कायदे कौन्सिलात बिगर मुसलमान मातबार (Rural) मतसंघाच्यावतीने आमच्या कानडा जिल्हा तर्फे एक, व मुसलमान मातबार मत संघाच्या वतीनें दक्षिण भागातर्फे तीन, असे मेंबर देणार असल्याचे सरकाराकडून जाहीर झालेलें सर्वास माहीत आहेच पूर्वी सार्वजनिक मत संघाच्या वतीने म्युनिसिपालिट्याकडून एक, व लोकलबोर्डाकडून एक, असे दोन प्रतिनिधी सर्व दक्षिणभागातर्फे घेण्यात येत होते यापुढे आमच्या जिल्ह्यातर्फेच एक स्वतंत्र मेंबर जाणार पण मुसलमानतर्फे मात्र सर्व दक्षिणभागाचे तीन प्रतिनिधी जाणार. आम च्या जिल्ह्याच्या गरजा योग्य रीतीनें सम जून घेऊन त्या कौन्सिलपुढें मांडण्यास एका मेंबरची कामगिरी अपुरी होईल, त्या करिता आमच्या जिल्ह्यास दोन मेंबर निवडण्याचा अधिकार असावा अशी मागणी परवा येथें भरलेल्या जिल्हा सभेनें केली आहे मागणी योग्य आहेच पण ती फार उशीरा झालेली असल्यामुळे, व सर्व जिल्ह्यात अखेरची वाटणी झालेली दिसत असल्यामुळे, या पुढें आमच्या मागणीचा विचार होऊन या खेपेसच आह्मास दोन जागा मिळतील अशी फारशी आशा दिसत नाही दोन मेंबर निवडण्याचा अधि कार मिळाल्यास तो पाहिजे आहेच पण एखा देवेळी या खेपेसच तसे न झाल्यास, दक्षिणभाग तर्फे निवडून जाणार असलेल्या तीन मुसलमा प्रतिनिधींतून एक प्रतिनिधी आमच्या जिल्ह्या तून गेल्यास तेवढाच एक जास्त प्रतिनिधी आ मच्या जिल्ह्यास लाभल्यासारखें होईल हे उघ आहे सदर मेंबर मुसलमानाचा प्रतिनिधी ह्मणून गेल्यासहि आमच्या जिल्ह्यातर्फे का करून आमच्या जिल्ह्याच्या मेंबरास सहा य्यक होईल हें सांगणें नकोच. तेव्हा दक्षि भागातर्फे जाणाऱ्या तीन मुसलमान मेंब रातून एक तरी आमच्या जिल्ह्यातूनच जा अशी माझी आग्रहाची सूचना आहे

आमचा जिल्हा मागसलेला आहे ये सुशिक्षित मुसलमान वर्ग फार थोडा आ असे कोणी ह्मणतील पण असे ह्मणून जर आह्मा आमच्यातून एक प्रतिनिधी तरी निव डून पाठविण्याची खटपट करणार नाही तर आह्मीं कधींच पुढे सरणार नाहीं. कौन्सि लात काम चालविण्याची लायकी, कामाचा अनुभव घेतल्याशिवाय येत नसतो आह्मा स आलेल्या जबाबदारीचा हल्लाचा यो

उपयोग करून घेऊनच आम्ही आमची प्रगती साधली पाहिजे. तेव्हा आमच्यांतून योग्य मुसलमान प्रतिनिधी एक तरी पाठविण्याची आम्हीं खटपट केलीच पाहिजे असें माझें आग्रहाचें सांगणें आहे. माझ्या मतें आमच्या जिल्ह्यांतून पाठविण्यासारखा मुसलमान प्रतिनिधी कोण होईल एवढेंच सांगून मी हें पत्र संपवितो. माझ्या पुढें एकच नाव उभें राहतें व तें येथील लोकप्रिय गृहस्थ

शेख आदम शेख अबदुल करीम

यांचे होय. येथील महमडन् प्रेसचे मालक, व 'विचारी' पत्राचे संपादक, असलेल्या सदर गृहस्थांची कोणाला ओळख करून देण्याची आवश्यकता आहे? ते डिस्ट्रिक्ट लोकलबोर्डाचे मेंबर आहेत येथील बेंच म्याजिस्ट्रेट आहेत आज सात आठ वर्षें येथील कोऑपरेटिव्ह सोसायटीमध्ये लोकहितार्थ ते करीत असलेली अविश्रांत कामगिरी सर्वविश्रुत आहेच. तेव्हा दक्षिणभागातर्फे निवडायाचे असलेल्या तीन प्रतिनिधींतून आमच्या जिल्ह्यांतून एक प्रतिनिधी म्हणून त्यानाच निवडून देण्याची ही सूचना या जिल्ह्यातील सर्व मुसलमान बंधूंस पसंत पडेल व शेख आदम साहेब हेहि आमच्या विनतीस मान देऊन कौन्सिलकरितां उभे राहण्यास तयार होतील अशी आम्हां कारवारकर मुसलमानांची फारफार आशा आहे कळावें हे सलाम

कारवार. ता. ७-६-२० } आपला एक मुसलमान नागरिक

ಫೊರೆಸ್ಟ ಖಾತೆಯವರ ರೈತಜನರಿಗೆ ತ್ರಾಸಕೊಡುವ ಶೈಲಿ.

ರಾ| ರಾ| ಕಾನಡಾವೃತ್ತ ಕರ್ತರಿಗೆ

ಶಿರ್ಸಿ ತಾಲೂಕ ಸದರ ಫಿರ್ಕಾ ಕಲ್ಲಿಕೊಪ್ಪ ಗ್ರಾಮದ ಮುಲಕಪ್ಪ ಗೌಡಾ ಎಂಬ ರೈತನು ಮೂಲ್ಕಿ ನಂಬರದಿಂದ ಜಲಾವ ಕಟ್ಟಿಗೆಗಳನ್ನು ತಂದು ದಾಸ್ತಾನಮಾಡಿದ್ದಾ ಇದು ದಾಸನಕೊಪ್ಪ ಫೊರೆಸ್ಟರ ಅಬ್ದುಲ ರಹಿಮಾನ ಶೇಕ ಬುಡಣ ಇವರ ನಜರಿಗೆ ಬಂದು "ಮುಲಕಪ್ಪಗೆ ನೀನು ಅಡವಿಯೊಳಗಿಂದ ಕಟ್ಟಿಗೆ ತಂದಿದ್ದಿ" ಎಂತ ಹೇಳಿದರು ಅದಕ್ಕೆ ಅವನು ತಾನು ಮೂಲ್ಕಿ ನಂಬರದಿಂದ ತಂದಿರುತ್ತೇನೆಂತ ಹೇಳಿದನು. ಆದರೆ ಅದರಿಂದ ಫೊರೆಸ್ಟರರಿಗೆ ಸಮಾಧಾನವಾಗದೆ, ನಿನ್ನಮೇಲೆ ಖಟ್ಲೆಮಾಡುತ್ತೇನೆ ಎಂತ ಹೇಳಿ, ಕಲ್ಲಿಕೊಪ್ಪ ಗ್ರಾಮದಲ್ಲಿ ಜನರು ಮತ್ತು ಪಾಟೀಲರು ಇರುತ್ತ, ಸದರ ಪಾಟೀಲರನ್ನು ಮತ್ತು ಕಲ್ಲಿಕೊಪ್ಪದಲ್ಲಿ ಫಿರ್ಕಾ ಜನರಿದ್ದರು, ಅವರನ್ನು ತೆಗೆದುಕೊಂಡು, ಪಂಚನಾಮು (ಪಂಚನಾಮೆ ಅಂದರೆ ಫಿರ್ಕಾ ಜನರ ಹೆಬ್ಬೊಟ್ಟಿನ ಗುರ್ತಗಳು ತೆಗೆದುಕೊಂಡದ್ದು ಇಷ್ಟೇ ಆ ಜನರಿಗೆ ಗೊತ್ತು) ಮಾಡಿ ಸದ್ರಿ ಕಟ್ಟಿಗೆಗಳು ಜಪ್ತಿಯಿಂದ ಸದರ ಪಾಟೀಲರ ತಾಬೆ ಕೊಟ್ಟರು. ಅಷ್ಟರಮೇಲೆ ಮುಲಕಪ್ಪಗೆ ಫೊರೆಸ್ಟರರು ಮತ್ತು ಬೇರೆ ಜನರು ಖಟ್ಲೆಯೆಂದರೆ ಬಹಳ ಲುಕ್ಸಾನಿಗೆ ಬೀಳುತ್ತಿ ಹಗ್ಗರೆ ಸಮುಜ ಹೇಳಿದ ಮೇಲೆ ಅವರ ಫೊರೆಸ್ಟರರ ಹೇಳಿಕೆಯಂತೆ ಕಂಪೆನಸೇಶನ್ ಕೊಡಲಿಕ್ಕೆ ಒಪ್ಪಿದಾ ಆಗ್ಗೆ ಫೊರೆಸ್ಟರರು ಅವರಂತೆ ಜವಾಬ ತೆಗೆದುಕೊಂಡು ನಿನಗೆ ಸೋಯಿಯಿಂದ ವಿಚಾರಿಸಮಾಡುತ್ತೇವೆಂತ ಹೇಳಿ ಕಂಪೆನಸೇಶನ್ ನೀನು ಕೊಡುವದಾದಮೇಲೆ ಇನ್ನು ನೀನು ಕಟ್ಟಿಗೆಗಳ ದಾಸ್ತಾನಮಾಡಿಕೊಳ್ಳಬಹುದೆಂದು ಹೇಳಿ ಹೋದರು. ಆ ಪ್ರಕಾರ ಅವನು ಸದ್ರಿ ಕಟ್ಟಿಗೆಗಳನು ತುಂಡುಮಾಡಿ ಕಟ್ಟಿಗೆ ದಾಸ್ತಾನುಮಾಡುವ ಕೊಟ್ಟಿಗೆಯಲ್ಲಿ ಪಟ್ಟು ಇಟ್ಟು (ಮಳೆಗಾಲ ಬಂದದ್ದರಿಂದ ಅವನಿಗೆ ಕಟ್ಟಿಗೆ ಒಯ್ಯುದಂತೆ ಜಾಗ್ ಮಾಡುವ ಅಗತ್ಯವಿತ್ತು) ಫೊರೆಸ್ಟರರು ಪಂಚನಾಮೆ ಮುಗಿಸಿಕೊಂಡು ಹೋಗುವ ಕಾಲಕ್ಕೆ ಮುಲಕಪ್ಪಗೆ ಬನವಾಸಿಗೆ ಬರಲಿಕ್ಕೆ ಹೇಳಿ ಹೋಗಿದ್ದರು. ಆದರೆ ಮುಲಕಪ್ಪ ಹೋಗಲಿಲ್ಲ (ಇದೇ ಇವನ ಲುಕ್ಸಾನಿಗೆ ಕಾರಣವಾಯಿತು) ಆಗ್ಗೆ ಫೊರೆಸ್ಟರರಿಗೆ ಬಹಳ ಆಲೋಚನೆಮಾಡುವ ಪ್ರಸಂಗ ಬಂತು ಒಂದು ಯುಕ್ತಿಯನ್ನು ಆಲೋಚಿಸಿ ಕಲಿಕೊಪ್ಪ ಗ್ರಾಮಕ್ಕೆ ಹೋದರು ಅಲ್ಲಿ ಅವರಿಗೆ ಅವರ ಆಲೋಚನೆ ಪ್ರಕಾರ ಕೆಲಸವಾಗಿತ್ತು ಅಂದರೆ ಜಪ್ತಾದ ಕಟ್ಟಿಗೆಗಳು ಪಾಟೀಲರು ಬಿಟ್ಟುಹೋದದ್ದು ಬಂದೇ ಕಡೆಗೆ ಕಡಿದು ದಾಸ್ತಾನಮಾಡಿದ್ದು ಕಂಡು ತಮ್ಮ ಕೆಲಸವಾಯಿತೆಂದು ತಿಳಿದು ಸದರ ಪಾಟೀಲಗೆ ನಿನ್ನ ತಾಬೆ ಕೊಟ್ಟ ಕಟ್ಟಿಗೆಗಳು ಸ್ಥಳಾಂತರವಾಗಿಯವೆ ಆದ್ದರಿಂದ ನೀನು ರಿಪೋರ್ಟ ಕೊಡಬೇಕೆಂತ ಆತಗೆ ಉಪದ್ರವ ಕೊಟ್ಟು ಆತನ ಕಡಿಂದಾ ರಿಪೋರ್ಟ ತೆಗೆದುಕೊಂಡು ಪೋಲೀಸರಿಗೆ ಖಾತ್ರಿಕೊಟ್ಟನು ಪೋಲೀಸರು ಖಟ್ಲೆಮಾಡುವ ಕೆಲಸ ನಡಿಸಿದರು ಇಷ್ಟರವಳಗೆ ಮುಲಕಪ್ಪನು ೨೦-೦-೦ ರೂಪಾಯಿ ಕಂಪೆನಸೇಶನ್ನ ಹಣ ಫೊರೆಸ್ಟರರಿಗೆ ಕೊಟ್ಟು ಪಾವತಿಪಡೆದಿದ್ದಾ ಆದರೆ ಈ ಸಂಗತಿ ಫೊರೆಸ್ಟರರು ಪೋಲೀಸರಿಗೆ ತಿಳಿಸಬೇಕಿತ್ತು. ತಿಳಿಸಲಿಲ್ಲ ಆ ವೇಳೆ ಮುಲಕಪ್ಪನಮೇಲೆ ಖಟ್ಲೆಯಾಗಿ ಅವನು ಕೈದಿನಲ್ಲಿ ಬೀಳಬೇಕಾಯಿತು ಆಗ್ಗೆ ಮುಲಕಪ್ಪನೆ ತನ್ನ ಬಿಡುಗಡೆ ಬಗ್ಗೆ ವಕೀಲರಿಗೆ ಕೊಡಬೇಕಾಯಿತು. ವಕೀಲರು ಮೋಜಿಸ್ತ್ರೇಟರಿಗೆ ಬಿಡಲಿಕ್ಕೆ ಹೇಳಿದರು ವಿಚಾರದ ನಂತರ ಮುಲಕಪ್ಪಗೆ ಬಿಡುತ್ತೇವೆಂತ ಹೇಳಿದರು. ಕೆಲವು ವಿಚಾರವಾದಮೇಲೆ ಜಾಮೀನಿನಮೇಲೆ ಬಿಟ್ಟರು. ಫೊರೆಸ್ಟರರ ಜವಾಬಿನಲ್ಲೇ ಅವರ ಹೇತು ತೋರುತ್ತಿತ್ತು ಸದರ ಪಾಟೀಲರ ಜವಾಬಿನಿಂದ ಫೊರೆಸ್ಟರರ ಹೇತು ಪೂರ್ಣ ತೋರುತ್ತಿತ್ತು ಆಗ್ಗೆ ಪೋಲೀಸರಿಗೂ ತಾವು ಫೊರೆಸ್ಟರರ ಹೇಳಿಕೆಯಿಂದ ಕೆಲಸಮಾಡಿದ್ದು ತಪ್ಪೆಂದು ತಿಳಿದುಬಂದು, ಖಟ್ಲೆ (ಫಿರ್ಯಾದ) ಪರತ ತೆಗೆದುಕೊಂಡರು ಆಗ್ಗೆ ಮುಲಕಪ್ಪಾ ಪೂರ್ಣ ಬಿಡುಗಡೆ ಆದನು. ಇದರಮೇಲಿಂದ ತಿಳಿಯತಕ್ಕ ಸಂಗತಿಗಳು ಯಾವವೆಂದರೆ— ಫೊರೆಸ್ಟ ಖಾತೆಯವರ ಹೇಳಿಕೆಯಂತೆ ಪಾಟೀಲರು ನಡಿಯುತ್ತಾರೆಂತಲೂ, ಅವರು ಮಾಡತಕ್ಕ ಪಂಚನಾಮೆಗಳು ಅವರ ಹೇಳಿಕೆಯಂತೆ ಆಗುತ್ತವೆ ಹೊರ್ತು, ಪಂಚರ ಹೇಳಿಕೆಯಂತೆ ಆಗುವದಿಲ್ಲೆಂಬದೂ ಫೊರೆಸ್ಟ ಖಾತೆಯವರು ರೈತ ಜನರಿಗೆ ಎಷ್ಟರಮಟ್ಟಿಗೆ ಲುಕ್ಸಾನಮಾಡಿಸಲಿಕ್ಕೆ ಸಮರ್ಥರಿರುತ್ತಾರೆಂಬದೂ ತಿಳಿಯುವಂತೆ ಇದೆ. ಇಂಥ ಅನೇಕ ಉದಾಹರಣೆಗಳುಂಟು ಇವುಗಳಮೇಲಿಂದ ರೈತರಿಗೆ ಫೊರೆಸ್ಟಖಾತೆಯಿಂದ ವಿನಾಕಾರಣ ಎಷ್ಟು ತ್ರಾಸ ಆಗುತ್ತದೆಂಬದು ತಿಳಿಯುವಂತೆ ಇದೆ ಗವರ್ನಮೆಂಟಿನವರು ಇಂಥ ಜನರ ವಿಚಾರಮಾಡಿ, ಆ ಜನರಮೇಲೆ ಉಲಟ ಖಟ್ಲೆಗಳು ಮಾಡಿದರೆ ಮಾತ್ರ ರೈತರಿಗೆ ವಿನಾಕಾರಣ ಕೊಡುವ ತ್ರಾಸವು ಕೆಲವುಮಟ್ಟಿಗಾದರೂ ಕಡಿಮೆಯಾದೀತು.

ಒಬ್ಬ ರಯತ.

ಜಾಹೀರವಿನಂತಿ.

ಓ ಪತ್ರಕರ್ತರೇ? ಈ ಪುಟ್ಟ ಲೇಖವನ್ನು ಒಂದು ಬದಿಯಲ್ಲಿ ಪ್ರಕಟಿಸುವಿರಾ?

ಹವ್ಯಕರೇ? ಕಳೆದ ತಾ ೧೧ ಮೇ ಕಾನಡಾ ದುರೀಣ ಪಂಚಿಕೆಯಲ್ಲಿ ಬಂದ ಸಣ್ಣ ಜಾಹೀರವಿನಂತಿಯು ಹೊರಟಿದ್ದನ್ನು ನೋಡಿದಿರೋ? ಅದರಲ್ಲಿ ಹವ್ಯಕ, ಚಿತ್ಪಾವನ, ದೇಶಸ್ಥ ಮೊದಲಾದವರ ಐಕ್ಯ ವಿಷಯವು ಬರೆದಿತ್ತು ಅದನ್ನು ಕರ್ಚಿಸಿ ನೋಡಲೇಬೇಕಾಯಿತು ನೋಡಿದೆನು. ಆಶ್ಚರ್ಯ ಕಾಣಿಸುತ್ತದೆ! ಒಳಬೇದವಿಲ್ಲದಿದ್ದರೆ ಸಂಘಶಕ್ತಿ ಬೆಳೆಯುವದೇ! ಕರಾಡ-ಕರ್ನಾಟಕಾದಿ ಚಿತ್ಪಾವನಾದಿ ಜನಾಂಗಗಳೆಲ್ಲವರೂ ಬ್ರಾಹ್ಮಣರಲ್ಲೆಣಿಸಲ್ಪಟ್ಟಿದ್ದರೂ, ಅವರೊಳಗಿನ ಸ್ವಾಭಾವಿಕ ಭೇದವನ್ನು ಹೇಗೆ ತೆಗೆಯಬೇಕೋ? ಇವರ ಅಂತರ್ಯ ಭೇದವು ಪುಂಡುಗಾಟಕೆ ನಿಂತಾಗಿರದೆ ಅನ್ವರ್ಥದಿಂದ ಇದ್ದದ್ದೆಂದು ನಮಗೆ ಕಂಡು ಬರುವದು 'ಹವ್ಯಾನಿಯ್ಯೈಃ ಪ್ರದೀಯಂತೇ ದೇವತಾಭ್ಯೋ ವಿಶೇಷತಃ ತೇ ಹವ್ಯಕಾ ಇತಿ ಪ್ರೋಕ್ತಾ ದೇಶೇ ಗೋ-ರಾಷ್ಟ್ರನಾಮನಿ'। ಇತ್ಯಾದಿ ಇರಲಿ ಈ ಒಳಭೇದದಿಂದ ಸಂಘಕ್ಕೆ ಆಸ್ಪದ ತೊಂದರೆಯೇನಾಗುವದು? ಧರ್ಮೈಕ್ಯವಿಲ್ಲದ ಹಿಂದೂ-ಮುಸಲ್ಮಾನರು ಒಕ್ಕಟ್ಟಾಗಿ ರಾಜಕೀಯ ಪರಿಸ್ಥಿತಿಯನ್ನು ಸಹೋದರರಂತೆ ನೋಡುವರಾಗಿ ಕಂಡುಬರುವದು. ಅದೇನು ಒಬ್ಬರ ಪಂಕ್ತಿಯಲ್ಲಿ ಒಬ್ಬರು ಊಟಕ್ಕೆ ಕುಳಿತರೆ, ಭೇದವಿಲ್ಲೆಂದು ಭಾವಿಸಬೇಕೇ? ಇಲ್ಲವೆ ಹೆಣ್ಣು ಗಂಡುಗಳಾಗದಿದ್ದರೆ, ಭೇದವುಂಟೆಂದು ತಿಳಿಯಬೇಕೋ? ಇಲ್ಲ ಹಾಗೇನೂ ಇಲ್ಲ ಇದಕ್ಕೆ ಕಳವಳ ನಡಿಸುವವಕ್ಕಿಂತಲೂ ಸರ್ವಸಮಾಜದ ಮನಸ್ಸನ್ನು ಏಕೀಕರಿಸಲಿಕ್ಕೆ ಪ್ರಯತ್ನಿಸಿದರೆ, ಕ್ರಮವು ಯಶಸ್ವಿಯಾಗುವದರಲ್ಲಿ ಸಂಶಯವಿಲ್ಲ ಒಳಭೇದವನ್ನು ಕೂಡಿಸಲಿಕ್ಕೆ ಹೋದರೆ, ಪರಿಪೂರ್ಣ ಶ್ರೇಷ್ಠರೆಂಬವರು ಸಮ್ಮತಿಸುವರೇ? ರಾಜಕೀಯ ಪರಿಸ್ಥಿತಿ ಒಕ್ಕಟ್ಟಾಗಿರಲಿ ನಾವೇನು ಬರುವದಲ್ಲ ಎಂದು ಹೇಳುವ ಜನರೇನು ಕಡಿಮೆಯಿಲ್ಲ. ಧರ್ಮವೇ ಒಂದು ಕಡೆಗೆ, ರಾಜಕೀಯ ಸ್ಥಿತಿಯೇ ಒಂದು ಕಡೆಗೆ ಬೇಡ, ಭೇದವನ್ನು ಸಂಧಾನಿಸುವದು ಬೇಡ ಎಂಬಭಿಪ್ರಾಯವೇ ನಮ್ಮನ್ನು ಆವರಿಸಿದೆ. ಇದಕ್ಕೆ ಸುಜ್ಞರ ಅನುಮತಿಯು ಪತ್ರಿಯತಃ ಸಿಗಲಿಕ್ಕಿಲ್ಲ ಇದ್ದದ್ದು ಇರಲಿ ಉಳಿದದ್ದನ್ನು ನೋಡಿಕೊಳ್ಳುವಾ

ಕಾಸರಕೋಡ ತಾ ೧೨-೬-೨೦ } ಶಂಭುಶಾಸ್ತ್ರೀ ನಾಚಗಾರ

ಕಾನಡಾವೃತ್ತ.

ಗುರುವಾರ ತಾರೀಖು ೧೭ ಮಾಹೆ ಜೂನ ೧೯೨೦

ಜಂಗಲ ಖಾತೆಯ ವಾರ್ಷಿಕ ರಿಪೋರ್ಟ. ೧೯೧೮-೧೯೧೯.

(ಲೇಖಾಂಕ—೧)

ಜಂಗಲಖಾತೆಯ ಇ ಸನ ೧೯೧೮-೧೯ನೇ ಸಾಲಿನ ವಾರ್ಷಿಕ ರಿಪೋರ್ಟ ಮತ್ತು ಅದರಮೇಲಿನ ಸರಕಾರೀ ಠರಾವು ಪ್ರಕಟಿಸಲ್ಪಟ್ಟಿದೆ. ರಿಪೋರ್ಟಿನೊಳಗ ಸಂಖ್ಯಾವಾರಿಕ ವೃತ್ತಾಂತವು ಕೂಡಿರುವದಲ್ಲದೆ, ಮಹರಾಜಾನ ಕೆಲಸಗಾರರಿಂದ ಅನುಭವಿಕ ತಜ್ಞ ಸಲ್ಲಾಗಾರರ ಅಭಿಪ್ರಾಯವು ಇದರೊಳಗೆ ಕಾಣುತ್ತಿರುವ ಮೂಲಕ ರಿಪೋರ್ಟಿಗೆ ಸರಕಾರೀ ದೃಷ್ಟಿಯಿಂದ ಮಹತ್ವವು ಪ್ರಾಪ್ತವಾಗಿದೆ. ತಮ್ಮ ಠರಾವಿನೊಳಗೆ ಸರಕಾರದವರು ಏನು ಹೇಳಿರುವರೆಂದು ಸಾರಾಂಶತಃ ನಾವು ನಿವೇದಿಸುವೆವು.

ಜಂಗಲಕಟ್ಟಿಗೆ, ಅದರಿಂದ ತಯಾರಾಗುವ ಸಾಮಾನು, ಇಂಥ ಬೆಟ್ಟದ ಸಂಪತ್ತನ್ನು ಹೆಚ್ಚಿಸುವ ಸಾಧನೆಗಳು ಉಪಯುಕ್ತವಾಗಿರುವ ರೈಲು ದಾರಿಯನ್ನೂ ಇತರ ಕೆಲಸಗಳನ್ನು ಬೆಳೆಸಲಿಕ್ಕೆ ಸರಕಾರವು ಐದು ವರುಷಗಳಲ್ಲಿ ಐದುಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳನ್ನು ನಿಶ್ಚಯಮಾಡಿದೆ. ಅಳ್ನಾವರದಿಂದ ದಾಂಡೇಲಿಯವರೆಗಿನ ಉಗಿಬಂಡಿಯ ದಾರಿಯು ನಡೆದಿರುತ್ತಿದೆ. ದಾಂಡೇಲಿಯಿಂದ ಬಾಗವತಿ ಅಲ್ಲಿಂದ ಬರವರೆಗೆ ಇದೇ ರೈಲಿನ ದಾರಿಯನ್ನು ಮುಂದರಿಸಬೇಕೆಂದು, ಸರ್ವೆ ಕೆಲಸವು ನಡೆದಿದೆ. ಯಲ್ಲಾಪುರದ ಸುತ್ತುಮುತ್ತಲಿರುವ ಬೆಟ್ಟದೊಳಗಿನ ಸರಕಾರೀ ಸಂಪತ್ತು ವ್ಯಾಪಾರಕ್ಕೆಂದು ಹೊರಗೊಯ್ಯಲು ಇನ್ನುಮುಂದೆ ಸುಸಾಧ್ಯವಾಗುವದು. ಇವೆಲ್ಲ ಕೆಲಸಗಳಿಗಾಗಿ ಪ್ರೊಫೆಸ್ಸ ಇಂಜಿನಿಯರರನ್ನು ನೇಮಿಸಿ ಈ ಖಾತೆಯ ಶಿಬಂದಿಯನ್ನು ಬಹಳೇ ಹೆಚ್ಚಿಸಿ, ಅದರ ಪುನರ್ಘಟನೆಯನ್ನು ಮಾಡಬೇಕೆಂದು ಸಿದ್ಧತೆಯಾಗುತ್ತಲಿದೆ. ಹೋದ ಫೆಬ್ರುವರಿ ತಿಂಗಳಲ್ಲಿ ಇವೇ ಕೆಲಸಗಳಿಗೆಂದು ಒಬ್ಬ ತಜ್ಞ ಕನ್ಸರವೇಟರರನ್ನು ನೇಮಿಸಿರುವರು. ಅವರ ಕೈಕಳಗಿನ ಮದತನೀಸರು, ಇತರ ಶಿಬಂದಿಯು ಬೇಗನೆ ನೇಮಿಸಲ್ಪಟ್ಟು ಈಗ ಸರಕಾರದ ವಿಚಾರಣೆಯಲ್ಲಿರುವ ಸ... ಗಳು ಅಮಲಿನಲ್ಲಿ ಬಂದ ಕೂಡಲೆ, ಈ ವಿಷಯದ ಪ್ರಗತಿಯು ಕಣ್ಣಿಗೆ ಬೀಳುವದು. ಜಂಗಲಖಾತೆಗೆ ಉತ್ಪನ್ನವೆಷ್ಟಾಗುತ್ತದೆ? ಅದರ ವೆಚ್ಚವೇನೆಂಬ ಲೆಕ್ಕವನ್ನು ನೋಡಿರಿ! ಇ ಸನ್ ೧೯೦೧ ರಲ್ಲಿ ಈ ಖಾತೆಗೆ ೪೩ ಲಕ್ಷ ರೂಪಾಯಿಗಳ ಉತ್ಪನ್ನವಾಗಿದ್ದಿತು, ... ವರ್ಷಗಳಲ್ಲಿ ಏರುತ್ತ ೧೯೧೫ನೇ ಸಾಲಿನಲ್ಲಿ ಅದು ೬೩ ಲಕ್ಷಕ್ಕೆ ಮುಟ್ಟಿತು. ೧೯೧೮-೧೯ ನೇ ಸಾಲಿನಲ್ಲಿ ೧೦೫ ಲಕ್ಷಕ್ಕೆ ಹೋಯಿತು. ಕಳೆದ ವರುಷ ೯೬½ ಲಕ್ಷ ರೂಪಾಯಿ ನಿಶ್ಚಿತ ಆದಾಯವಾಗುವದೆಂದು ... ಮುಂಬಯಿ ಇಲಾಖೆಯ ಜಂಗಲಗಳ ... ಲೆಕ್ಕಕ್ಕೆ ... ಸಾಲಿನಲ್ಲಿ ಆದ ಹೆಚ್ಚಿನ ಆದಾಯವನ್ನು ವಜಾ ಕಳೆದು ... ಸಾಲಿನಲ್ಲಿ ಈ ಖಾತೆಗೆ ೯೦ ಲಕ್ಷ ಉತ್ಪನ್ನವಾಗಿತೆಂದು ... ವರುಷದ ಹಿಂದಿನ ಉತ್ಪನ್ನಕ್ಕಿಂತ ... ಉತ್ಪನ್ನವು ಮುಪ್ಪಟ್ಟು ಮೀರಿರುವದೆಂದು ಹೇಳುವದೇ ತಪ್ಪು ... ದ ಮಾನವನ್ನು ನೋಡಿದರೆ, ಸನ್ ೧೯೧೩ ರಲ್ಲಿ ಈ ಖಾತೆಗೆ ೨೬½ ಲಕ್ಷ ... ವೆಚ್ಚವಾಗಿತ್ತು ... ವರ್ಷದ ನಂತರ ೩೩ ಲಕ್ಷಕ್ಕೆ ಏರಿ ಅದು ಮರುವರುಷವೇ ... ೧೮-೧೯ ... ಸಾಲಿನಲ್ಲಿ ೪೭½ ಲಕ್ಷಕ್ಕೆ ... ಕಳೆದ ವರುಷ ೬೪ ಲಕ್ಷ ರೂಪಾಯಿಯ ... ವದೆಂದು ಪಕ್ಕಾ ... ಸಾಲಿನಲ್ಲಂತೂ ೫೫ ... ಗಾಗಿ ತೆಗೆದಿಟ್ಟಿರುವರು ... ವರುಷದ ... ಇದೇ ಈ ... ಸನ ೧೯೦೧ರಲ್ಲಿ ಇನ್ನೂ ... ಕೆಲಸನ್ನ ಕೈಕೊಳ್ಳತಕ್ಕದ್ದಿದೆ ... ದಾಗಿ ... ಈ ಕೆಲಸವನ್ನು ಕೈ ... ಅದನ್ನು ... ಮಾಡಿಸ ... ದನ್ನು ಹೆಚ್ಚಿಸುತ್ತ ... ಈ ... ಉತ್ಪನ್ನವು ಸಕ ... ರಿಗೆ ಬಿನ ಹೋದಂತೆ ... ಬೆಟ್ಟದ ಸಂಪತ್ತಿಯ ಲಾಭವು ಹೆಚ್ಚಿ ... ದೊರಕುವದೆಂದೂ, ಗವ್ಹರನರ್ ಇನ್ ಕೌನಸಿಲ್‌ದವರು ದೃಢವಾಗಿ ನಂಬಿರುವರು.

ಇನ್ನು ಜಂಗಲಖಾತೆಯ ದೋರಣದ ಮಾತು ... ಧೋರಣದ ಪ್ರಶ್ನೆಯು ಯಾವಾಗಲೂ ನಡೆಯುವದೇ. ಈ ವಿಷಯದೊಳಗೆ ಮತಭೇದವು ಒಪರಿಹಾರ್ಯವು. ಯಾವದೇ ಖಾತೆಯ ಕಾರಭಾರವನ್ನು ಯಶಸ್ವಿಯಾಗಿ ನಡಿಸಲಿಕ್ಕೆ ಸರಳವಾದ ರಾಜಮಾರ್ಗವಿರುವದಿಲ್ಲ. ಬೆಟ್ಟದ ಹಳ್ಳಿಗಳಲ್ಲಿರುವ ಜನರ ಹಿತವೂ ಒಂದು, ಇತರ ಸಾರ್ವಜನಿಕ ಹಿತವು ಮತ್ತೊಂದು, ಈ ಬಗೆಯಾಗಿರುವ ಭಿನ್ನ ಭಿನ್ನ ಹಿತಸಂಬಂಧಗಳನ್ನು ಲಕ್ಷಿಸಬೇಕಾದಾಗ್ಗೆ, ಉಭಯತರ ಕಲ್ಯಾಣವಾಗುವಂತೆ ಮಧ್ಯದ ಮಾರ್ಗವನ್ನು ಹಿಂಬಾಲಿಸುವ ಧೋರಣವನ್ನು ಸ್ವೀಕರಿಸುವದು ಶ್ರೇಯಸ್ಕರವಾಗುವದು. ಇದಲ್ಲದೆ ಈ ಖಾತೆಯ ಪ್ರಮೇಯಗಳು ಎಲ್ಲ ಕಡೆಯಲ್ಲಿ ಒಂದೇಯಾಗಿಲ್ಲ. ಅವು ಸ್ಥಲ ವಿಶಿಷ್ಟವಾಗಿರುವವು. ಸಿಂಧದ ಪರಿಸ್ಥಿತಿಯೂ, ಮೇವನ್ನು ಬೆಳೆಸುವ ದಕ್ಷಿಣ ಗುಜರಾಥಪ್ರಾಂತದ ಸ್ಥಿತಿಯೂ, ಉಚ್ಚತರಗತಿಯ ಬೆಟ್ಟಗಳಿರುವ ಕಾನಡಾ ಜಿಲ್ಲೆಯ ಪ್ರಮೇಯಗಳೂ ಭಿನ್ನ ಭಿನ್ನವಾಗಿರುವವು. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲಿನ ಶಿರ್ಸಿಯ ತೋಟಗಳ ಕೊರತೆಗಳು ದಂಡೆ ಸೀಮೆಯ ಕೊರತೆಗಳಾಗವು. ಗೋಚರಾವ ನಿಯಮಗಳು ಮೊನ್ನೆ ಮೊನ್ನೆಗೆ ತಿದ್ದಲ್ಪಟ್ಟವೆ. ಹಳ್ಳಿಗಳೊಳಗಿನ ದನಕರುಗಳಿಗೆ ಮೇವಿನ ಅನುಕೂಲತೆಯನ್ನು ಸಾಕಾಗುವಷ್ಟಾಗುವದು. ಇಂಥ ಕಾನೂನುಗಳನ್ನು ಅಮಲಿನಲ್ಲಿ ತರುವಾಗ ಸಹಾನುಭೂತಿಯ ದೃಷ್ಟಿಯು ಅಧಿಕಾರೀ ವರ್ಗದಲ್ಲಿರಬೇಕು. ಹೀಗಿದ್ದರೂ, ಸಾರ್ವಜನಿಕ ಕೊರತೆಗಳಿಗೆ ಅವಶ್ಯಕರವಾಗುವಂಥ ಸಡಿಲುತನವು ಪ್ರಯೋಜಕವಿಲ್ಲ. ಬೇಸಾಯಗಾರರಿಗೆ ತಮ್ಮ ಕೊರತೆಗಳನ್ನು ಪೂರೈಸಿಕೊಳ್ಳಲಿಕ್ಕೆ ಬೇಕಾಗುವ ಬೆಟ್ಟದ ಅನುಕೂಲತೆಯನ್ನು ಮಾಡಿಕೊಡುವ ಕೆಲಸಕ್ಕೊಬ್ಬ ... ಆಫೀಸರನನ್ನು ಬೇಗನೇ ನೇಮಿಸುವರು. ಬೆಟ್ಟ ಬೇಸಾಯಗಳ ಹಿತದೃಷ್ಟಿಯ ಪಕ್ಷಪಾತಿಗಳು ಸರಕಾರದ ಅಧಿಕಾರಿಗಳೊಳಗೆ ಇದ್ದಾರೆಂಬುದು, ಒಂದು ಬಗೆಯಿಂದ ಸುದೈವವೇ ಸರಿ! ಅದಕ್ಕಾಗಿ ಈ ವಿಷಯದ ಕರ್ತವ್ಯಗಳ ಜವಾಬದಾರಿಯು ಸರಕಾರಕ್ಕೆ ಹೊರೆಯಾಗಿಲ್ಲೆಂದು ಅದು ಭಾವಿಸುವದು. ತುರ್ತಿನಲ್ಲಿ ಜಂಗಲಖಾತೆಯ ಅಧಿಕಾರಿಗಳು ಯುದ್ಧದಿಂದುಂಟಾದ ಹಲವು ಅಡಚಣಿಗಳ ಸಂದರ್ಭಗಳಲ್ಲಿ ತಮ್ಮ ಕರ್ತವ್ಯಗಳನ್ನು ಮನಮುಟ್ಟಿ ಮಾಡಿದ್ದಕ್ಕಾಗಿ, ಗವ್ಹರನರ ಇನ್ ಕೌನ್ಸಿಲ್‌ದವರು ಎಲ್ಲ ಅಧಿಕಾರಿಗಳನ್ನು ಶಾಬಾಸ ಹೊಗಳಿರುವರು.

ಸರಕಾರೀ ಠರಾವಿನ ಮತಿತಾರ್ಥವಿದು. ಇದರ ಮೇಲಿನ ನಮ್ಮ ವಿಚಾರಗಳನ್ನು ಎರಡನೇ ಲೇಖಾಂಕದಲ್ಲಿ ಪ್ರಕಟಿಸಬೇಕೆಂದು ನಮಗ ಕಾದಿಡಬೇಕಾಗಿದೆ. ನಮ್ಮ ಜಿಲ್ಲೆಗೆ ಈ ಖಾತೆಯ ವಿಷಯವು ಅಷ್ಟು ಮಹತ್ವದ್ದಾಗುವದಿಲ್ಲ. ಅದರ ವಿಸ್ತೃತ ವಿವೇಚನೆಯನ್ನು ಕೈಕೊಳ್ಳಬೇಕಾಗಿದೆ.

ಸ್ಫುಟ ಸೂಚನೆಗಳು.

೧ ನಮ್ಮ ಜಿಲ್ಲೆಯಲ್ಲಿ ಸಹಕಾರಿ ತತ್ವದಮೇಲೆ ಒಂದು ಮಧ್ಯವರ್ತಿ ಬೇಂಕವನ್ನು ಸ್ಥಾಪಿಸಬೇಕೆಂದು, ನಮ್ಮ ಮುಖಂಡರು ನಿರ್ಣಯಿಸಿದ್ದನ್ನು ನೋಡಿ ನಾವು ಆನಂದಪಡುತ್ತೇವೆ. ಸಹಕಾರಿ ಸಂಘಗಳ ವ್ಯವಹಾರವು

...ದ ಹೋದಂತೆ ಪಡೆಯಲು, ಅವುಗಳಿಗೆ ಸಾಂಪತ್ತಿಕ ಸಹಾಯವನ್ನು ಕೊಡುವ, ಇದೇ ಜಿಲ್ಲೆಯ ಮಧ್ಯವರ್ತಿ ಸಂಸ್ಥೆಯು ಬೇಕೇಬೇಕು. ನಮ್ಮಲ್ಲಿಯ ಕಾಹರ ಸಂಘಗಳು ಹಿಂದು ವಿಧದ ತಾಲುಕಾ ಬೇಂಕುಗಳಾಗಿಯೆ ಇರುವವು. ಆದರೆ ಈ ಅಬಕಾನ ನೋಸ್ಟಿಗಳಿಗೆ ತಮ್ಮ ಲೇವಾದೇವಿ ವ್ಯವಹಾರವನ್ನು ಬೆಳೆಸಲಿಕ್ಕೆ ಬೇಕಾಗುವ ಕೊರತೆಗಳಲ್ಲಿ, ಹಣದ ಕೊರತೆಯೆ ಮುಖ್ಯವಾಗಿದೆಂದು ಹೇಳಬಹುದು. ಸದ್ಯಕ್ಕೆ ಈ ಸಣ್ಣ ಸಣ್ಣ ತಾಲುಕಾ ಬೇಂಕುಗಳಾಗಿರುವ ಅರ್ಬನ ಸೊಸಾಯಿಗಳು, ಹೊರಗಿಂದ ಹಣ ಹೆಚ್ಚಿಗೆ ಸಾಲ ಕೊಳ್ಳದೆ, ತಮ್ಮ ಕಾಲಿನ ಮೇಲೆ ತಾನೇ ನಡೆದಿರುವವು. ಈಗಿನ್ನಕ್ಕಿಂತ ಹೆಚ್ಚು ಶೀಘ್ರವಾಗಿ ಅವು ಮುಂದರಿಯ ಬೇಕಾದರೆ, ಅವುಗಳ ಪತ್ತಿಗೆ ಸಾಕಾಗುವಷ್ಟು ಹಣವನ್ನು ಹೊರಗಿಂದ ಸಾಲವಾಗಿ ತಂದು ಕೊಡುವ ನಿರ್ವಾಹವಿಲ್ಲದಂತಾಗಿದೆ. ಇಂಥ ಹಣವನ್ನು ಪೂರೈಸಲಿಕ್ಕೆ, ಜಿಲ್ಲೆಯ ಮಧ್ಯವರ್ತಿ ಬೇಂಕಿನ ಅವಶ್ಯಕತೆಯಿದೆ. ಇಂಥ ಮಧ್ಯವರ್ತಿ ಬೇಂಕುಗಳನ್ನು ಸ್ಥಾಪಿಸಿದರೆ, ನಮಗೆ ಅನೇಕ ಫಾಯಿದೆಗಳಿವೆ. ದೊಡ್ಡ ದೊಡ್ಡ ಸಾರ್ವಜನಿಕ ಸಂಸ್ಥೆಗಳ ಫಂಡುಗಳು, ದೇವಸ್ಥಾನಗಳ ನಗದೀ ಶಿಲಕು, ಅಲ್ಪವಯ ಸ್ಕನಾದ ಮಠಾಧೀಶರ ಶಿಲ್ಕು ಹಣ, ಸಣ್ಣ ದೊಡ್ಡ ಶ್ರೀಮಂತರ ಅನುತ್ಪಾದಕವಾಗಿ ಬಿದ್ದಿರುವ ದ್ರವ್ಯ ಸಂಗ್ರಹ, ಇವೆಲ್ಲವುಗಳನ್ನು ದೊಡ್ಡ ಬಾಂಡವಲಿನ ಜಿಲ್ಲಾ ಸಹಕಾರಿ ಬೇಂಕಿನಲ್ಲಿ ಅಪಾಯದ ಭೀತಿಯಿಲ್ಲದೆ, ...ವೆಂದು ಇಡಲಿಕ್ಕಾಗುವದು ಸ್ಪಷ್ಟವಾಗಿ ಸಡೆಂಬ ಸಾರಲಿ, ಮುಂಬಯಿಯ ಸಂಟ್ರಲ ಬೇಂಕು ಇಂಥ ಜಿಲ್ಲಾ ಬೇಂಕುಗಳಿಗೆ, ಕಡಿಮೆ ಬಡ್ಡಿಯಿಂದ ಬೇಕಾದಾಗ, ದ್ರವ್ಯ ಸಹಾಯವನ್ನು ಮಾಡಬೇಕೆಂದು, ...ವರುಷ ತೆಗೆದಿಟ್ಟ ಒಂದು ಲಕ್ಷ ರೂಪಾಯಿಗಳೂ ...ಗಿನ ಸಾಲಕೊಳ್ಳಲಿಕ್ಕಾಗುವಷ್ಟು ರಕಮಿನ ಹಾಮಿಯನ್ನು ಸಹ, ನಮ್ಮ ಜಿಲ್ಲಾ ಬೇಂಕಿಗೆ ದೊರಕಿಸಲಿಕ್ಕಾಗುವದು. ಈ ಬಗೆಯಿಂದ ತಾಲುಕಾ ಬೇಂಕುಗಳ ಅಡಚಣಿಗಳನ್ನು ಸಾಕಷ್ಟು ದೂರ ಮಾಡಿಕೊಳ್ಳಲಿಕ್ಕಾಗುವದು. ಮುಂಬಯಿಯ ಸೆಂಟ್ರಲ ಬೇಂಕು, ಜಿಲ್ಲಾ ಬೇಂಕು, ತಾಲುಕಾ ಬೇಂಕು ಇವೆಲ್ಲ ಒಂದು ಕಟ್ಟಿನ ಸರಪಳಿಯಿಂದ ಕಟ್ಟಿದಂತಾಗಿ, ಕಾರ್ಯ ಸಾಧಕವಾಗಿರುವ ಸಂಹತಿಯು ತಂನಿಂದ ತಾನೇ ಹುಟ್ಟಿ, ನಮ್ಮ ಸಾಂಪತ್ತಿಕ ಸಹಕಾರಿತೆಯು ಸ್ಥಿರವಾಗುವದು, ಏಳಿಗೆ ಹೊಂದುವದು. ಅದಕ್ಕಾಗಿ ಜಿಲ್ಲಾ ಬೇಂಕಿನ ಸ್ಥಾಪನೆಯನ್ನು ನಾವು ಮನಃಪೂರ್ವಕ ಪುಷ್ಟೀಕರಿಸುವೆವು.

---

೨ ಪರಿಷತ್ತಿನ ಮಹಾಪವರ್ಣಿಯ ಯೋಗದ ಮಹಾಸ್ಥಾನದೊಳಗೆ ಮತ್ತೊಂದು ಸಣ್ಣ ಚಳಕವು ಕೈಗೂಡಿತು. ಕಾರವಾರದೊಳಗೆ ಸರ ನಾರಾಯಣ ಚಂದಾವರಕರರ ಅಧ್ಯಕ್ಷತೆ ಕೆಳಗೆ ನಮ್ಮ ಜಿಲ್ಲೆಯ ಪ್ರಮುಖರು ಕಳೆದ ಮೇ ೧೯ ನೇ ತಾರೀಖಿಗೆ ಕೂಡಿ, ಸರಕಾರವು ಸೂಚಿಸಿದಂತೆ, ಈ ಜಿಲ್ಲೆಯೊಳಗೆ ನರ್ಸಿಂಗ ಎಸೋಸಿಏಶನದ ಶಾಖೆಯನ್ನೊಂದು ಸ್ಥಾಪಿಸಬೇಕೆಂದು ನಿರ್ಣಯಿಸಿರುವರು. ನರ್ಸಿಂಗ ಎಸೋಸಿಏಶನೆಂದರೆ, ದರಿದ್ರಿಗಳಾದ ರೋಗಿಗಳಿಗೂ, ಬಾಣಂತಿಗಳಿಗೂ ಶುಶ್ರೂಷೆಯನ್ನು ನಡಿಸುವ ಯೋಜನೆಯ ಸ್ಥಾಪಿಸುವ ಸಂಸ್ಥೆಯು. ಶುಶ್ರೂಷೆ ಶಾಸ್ತ್ರವನ್ನು ಕಲಿತ ಪರಿಚಾರಿಕೆಗಳನ್ನು ಇಟ್ಟು ರೋಗಿಗಳಿಗೂ, ಅರ್ಭಕರಿಗೂ, ಔಷಧೋಪಚಾರವನ್ನು ನಡಿಸುವದು ದಿನ ಹೋದಂತೆ ಹೆಚ್ಚೆಚ್ಚು ಅವಶ್ಯಕವಾಗುತ್ತಿದೆ. ನಮ್ಮ ಲೋಕಪ್ರಿಯ ದೊರೆಸಾನಿಗಳಾದ ಲೇಡಿ ಜೋರ್ಜ ಲಾಯಿಡರವರು ಇತ್ತಲಾಗೆ ಔದಾರ್ಯ ಬುದ್ಧಿಯಿಂದ ನಡಿಸುತ್ತಿರುವ ಶಿಶುಸಂಗೋಪನೆಯ ಸಾರ್ವತ್ರಿಕ ಯೋಜನೆಯ ಪ್ರಯತ್ನಗಳಿಂದ ಇಂಥ ಶುಶ್ರೂಷೆ-ಸಂಘಗಳ ಕಲ್ಪನೆಯು ಹೊರಟಿದೆಂದು ನಂಬಿ, ನಾವು ಆಭಾರಿಯಾಗಿರುವೆವು. ಬಾಲ ಶುಶ್ರೂಷೆಯ ಸಾದಾ ನಿಯಮಗಳನ್ನು ಸಹ ಅರಿಯದೆ, ಮತ್ತು ಬಾಣಂತಿಗಳಿಗೆ ತಕ್ಕ ಉಪಚಾರಗಳನ್ನು ನಡಿಸಲಿಕ್ಕಾಗದೆ ಬಹಳೇ ಅಜ್ಞಾನಿಗಳೂ, ದರಿದ್ರಿಗಳೂ, ಹೆಂಡರು ಮಕ್ಕಳನ್ನು ಕಳಕೊಳ್ಳುತ್ತಾರೆ. ಅಕಾಲಿಕ ಆಪತ್ತುಗಳಿಗೆ ಒಳಗಾಗುತ್ತಾರೆ. ಇಂಥ ಅನರ್ಥಗಳನ್ನು ಶಕ್ಯವಿದ್ದಷ್ಟು ಪರಿಹರಿಸಲಿಕ್ಕೆ ದವಾಖಾನೆಗಳಲ್ಲಿ ನರ್ಸುಗಳನ್ನು ಇಡುವ ಯೋಜನೆಯು ಸರ್ವಸಮ್ಮತವಾಗುವದೆಂದು ನಮ್ಮ ಮತವು. ಅದ... ಈ ಯೋಜನೆಗೆ ದರಾವುಗಳ ಸಮ್ಮತಿಯೂ ... ಧನಿಕರ ಕೀಲಿಕೈಗಳ ಸಮ್ಮತಿಯೂ ಬೇಕು. ನಮ್ಮ ಗಂಧದ ಗಣಪತಿಯನ್ನು ತೇದಿ, ಅದರ ಗಂಧವನ್ನು ಅದಕ್ಕೆ ಹಚ್ಚಿ, ನಾವೆಷ್ಟು ಪೂಜೆಗಳನ್ನು ಸಾಗಿಸಿದೆ ಕೇದು, ಇಂದ ಧಾರ್ಮಿಕ ದಾನಕಾರ್ಯದಲ್ಲಿ ಶ್ರೀಮಂತರು ಮುನ್ನುಗ್ಗಿ ಕೂಡದು. ಸರಕಾರವು ಈ ಕಾರ್ಯದಲ್ಲಿ ನಮ್ಮ ಬಿಡಿಹಣವನ್ನು ಲೆಕ್ಕಿಸಿ ಅತಿ ಪ್ರಮಾಣದಿಂದ ದ್ರವ್ಯ ಸಹಾಯವನ್ನು ಮಾಡುವದೆಂದು ನಾವು ನಂಬಿರುವೆವು. ಇದೇ ಜಿಲ್ಲೆಗೆ ಒಂದು ನರ್ಸನ್ನು ಇಟ್ಟರೆ, ಅದರಿಂದ ನ್ಯಾಯವಾಗಿ ಲಾಭವು ಹೆಚ್ಚಿಗಿದ್ದರೂ ಈ ಸ್ತುತ್ಯ ಪ್ರತ್ನ ಅವಶ್ಯಕ ಉಪಕ್ರಮದ ಪ್ರಾರಂಭವಿದಾಗುವದೆಂದು, ಏನಿದು ಪೂರ್ಣ ಅಭಾವಕ್ಕಿಂತ ಅತ್ಯಲ್ಪವಾದರೂ ಲೇಸೆಂಬ ತತ್ವದ ಮೇಲೆ ಈ ಯೋಜನೆಯನ್ನು ನಾವು ಮನಃಪೂರ್ವಕ ಅನುಮೋದಿಸುವೆವು.

---

೩ ಮಹಾತ್ಮಾ ಗಾಂಧಿಗಳ ನೇತೃತ್ವದಲ್ಲಿ, ಕಾರ್ಕಿ ತಹನಾಮೆಯನ್ನು ಮಹತ್ವದ ಪ್ರಜೆಗಳ ಧಾರ್ಮಿಕ ಮತ್ತು ರಾಜಕೀಯ ಆಕಾಂಕ್ಷೆಗಳಿಗೆ ಒಪ್ಪುವಂತೆ ತಿದ್ದಿ ಮಾಡಿಸಿಕೊಳ್ಳಲಿಕ್ಕೆ ಜರುಗಿಸಬೇಕಾಗಿ ಬರುವ, ಅಸಹಕಾರಿತೆಯ ವಿಷಯ ಲೋಕಮತ ಬೇಕಾಗುತ್ತಿದೆಂದು ತಿಳಿಯಲು, ನಮ್ಮ ಧಾರವಾಡದ ಬಂಧು ' ವಿಜಯ ' ದ ವಿಚಾರಗಳನ್ನು ಕಳೆದ ಸಂಚಿಕೆಯೊಳು ಪತ್ರಿಕೆಗಳ ಅಭಿಪ್ರಾಯದಲ್ಲಿ ನಾವು ಅವತರಿಸಿದ್ದೆವು. ರಾಜಕೀಯ ಅಸಹಕಾರಿತೆಯ ತತ್ವಗಳ ಬಗ್ಗೆ ಲೋಕನಾಯಕರಲ್ಲಿ ಇನ್ನು ಮತಭೇದವಿದೆ. ಅದಕ್ಕಾಗಿ ರಾಷ್ಟ್ರೀಯ ಸಭೆಯ ಕಮಿಟಿಯು ಅದರ ವಿಷಯವಾಗಿ ಏನೂ ನಿರ್ಣಯವನ್ನು ಕೊಡುವ ಕಲಕತ್ತೆಯಲ್ಲಿ ನೂತನವಾಗಿ ಕೂಡಿಸುವ ಖಾಸಾ ಅಧಿವೇಶನದಲ್ಲಿ ಅದನ್ನ ಪರ್ಜಿಸಬೇಕೆಂದು ಕಾದಿಟ್ಟಿದೆ. ಅಸಹಕಾರಿತೆಯೂ, ಬಹಿಷ್ಕಾರವೂ ನಮಗೆ ಸಾಧಕ ತತ್ವಗಳೆಂದು ನಾವು ಹೇಳಲಾರೆವು. ಮ॥ ಗಾಂಧಿಯವರಿಗೆ ಬಹಿಷ್ಕಾರವು ಮಾನ್ಯವಿಲ್ಲ, ಇಷ್ಟೇ ಅಲ್ಲ ತಿರಸ್ಕರಣೀಯವೆಂದು ತೋರುತ್ತದೆಂದು ಅವರು ಮೇಲಿಂದಮೇಲೆ ಜಾಹೀರು ಪಡಿಸುತ್ತಿರುವರು. ಬಹಿಷ್ಕಾರದಂಥ ಸಾಧನಗಳಲ್ಲಿರುವ ದ್ವೇಷ ಬುದ್ಧಿಯು ಸತ್ಯಾಗ್ರಹದ ಮೂಲ ತತ್ವಗಳಿಗೆ ವಿರೋಧಕವಾಗಿರುವದು. ರಾಜಕೀಯ ದೃಷ್ಟಿಯಿಂದಾಗಲಿ, ಸಾಮಾಜಿಕ ದೃಷ್ಟಿಯಿಂದಾಗಲಿ, ಬಹಿಷ್ಕಾರವೆಂದೂ ಹಿತಕರವಾಗದು. ಅದಕ್ಕಾಗಿ ಲೋಕಮತಕ್ಕೆ ಅದು ಗ್ರಾಹ್ಯವಾಗದು ಎಂದು ನಮ್ಮ ಅಭಿಮತವು. ಅಸಹಕಾರಿತೆಯು ಒಂದು ಸಾತ್ವಿಕ, ತ್ಯಾಗರೂಪದ ಧರ್ಮವೆಂದು ಆಚರಿಸುವದು, ಅನಿವಾರ್ಯದ ಪಕ್ಷದ ಕರ್ತವ್ಯವಾಗಿದೆಂದು, ಪ್ರತೀಕಾರವಾದ ಮೂಲಕ ಉಂಟಾದ ಪರಿಸ್ಥಿತಿಯೇ ಸಮರ್ಥಿಸುವದು. ಮಹಮ್ಮದೀಯರಿಗೂ, ಅವರ ಹಿಂದೀ ಬಾಂಧವರಿಗೂ, ದೇಶಕ್ಕೆ ಮಾಡಿಕೊಂಡಿರುವ ಮನೋವಿಕಾರಗಳನ್ನು ಅಸಹಕಾರಿತೆಯ ಆತ್ಮಸಂಯಮನದಿಂದ ನಿಯಂತ್ರಿಸುವದು ಎಲ್ಲರಿಗೂ ಹಿತಕರವಾಗುವದು. ಬಹಿಷ್ಕಾರವು ಸಕ್ರಿಯ ವಿರೋಧವಾಗುವ ಸಂಭವವಿದ್ದದರಿಂದ ಅದನ್ನು ನಾವು ಯಾವಾಗಲೂ ನಿಷೇಧಿಸಬೇಕಾಗುವದು.

---

೪. ಈ ಜಿಲ್ಲೆಯಲ್ಲಿ ಸಾರ್ವಜನಿಕ ಹಿತಾಹಿತವು ವೈಯಕ್ತಿಕ ಹಿತದಕಿಂತ ಕನಿಷ್ಟವೆಂದು ತಿಳಿಯಲ್ಪಡುತ್ತಿದೆ. ಜನರು ತಾವು ಆದರು, ತಮ್ಮ ಸ್ವಾರ್ಥ ವಾಯಿತು, ಪರರ ಹಿತವನ್ನು ಅವರು ಬಯಸುವದೇ ಇಲ್ಲ! ಅವರ ಮೇಲಣ ಅಂಥ ಜವಾಬದಾರಿಯಿಂದ ಸಹ ಪರರ ಹಿತಕ್ಕೆ ತಾವು ಬದ್ಧರೆಂದು ತಿಳಿಯದೆ, ಕೇವಲ ತಮ್ಮ ಸ್ವಾರ್ಥವನ್ನೇ ಸಾಧಿಸುವರು. ಈ ರೀತಿ, ಇಂದ ಅವನ್ನಾದಿಗಳ ಸಂಖ್ಯೆಯೇ ದಿನೇದಿನೇ ವೃದ್ಧಿ ಹೊಂದುತ್ತಿದೆ. ತಮ್ಮ ಸ್ವಾರ್ಥವನ್ನು ಗಳಿಸುವ ಉದ್ದೇಶ್ಯ ಅಂದಂಥ ಪ್ರಸಂಗಕ್ಕೆ ಯಾವಾಗಲೂ ಕೊಟ್ಟಿಗೆಯೊಳಗಿನ ದನಗಳನ್ನ ಹೊಗಿಸಿದರೆ, ಈಗಿನ ಆಧುನಿಕ ಸ್ವಾರ್ಥಿಗಳು ಕೊಟ್ಟಿಗೆಯನ್ನೇ ಹೊಗಿಸುತ್ತೈಸುವರು. ಇದು ಸಾರ್ವಜನಿಕ ಹಿತಾಹಿತದ ದೃಷ್ಟಿಯಿಂದ ಬಹು ಶೋಚನೀಯವು. ಇದರ ತಾಜಾ ಉದಾಹರಣೆ ಎಂದರೆ— ಕುಮಟೇ ಶಾಲೆಯ ಮೋಜಿ ಮಾರಿದ ಪ್ರಕರಣವೆಂದೆನ್ನಬಹುದು. ಈ ನೌಕರ-ಮಕ್ತೇದಾರರಿಗೆ ಇಷ್ಟು ಧೈರ್ಯವೆಲ್ಲಿಂದ ಬಂತೆಂಬದೇ ಆಶ್ಚರ್ಯ! ಯಾಕೆ, ಈ ಧಂದೆಯಲ್ಲಿ ತಮ್ಮಕಿಂತ ಹತ್ತು ಹದಿನೈದು ಹೆಚ್ಚು ಚಾತುರ್ಯವುಳ್ಳ ಗಳಿಸ ಮಿರ್ಜನ ಬಡೇಸಾಹೇಬರನ್ನು ತಮ್ಮ ಯುಕ್ತಿಪ್ರಯುಕ್ತಿಗಳಿಂದಲೇ ಸೋಲಿಸಿ, ತಮ್ಮ ವಿಷಯದ ನ್ಯಾಯ ತಿಳಿಯಕ್ಕೆ ತಿರುವದಿರಿಗೆ ಧೈರ್ಯಕ್ಕೇನು ಕಡಿಮೆ? ಕಳೆಯಿಗದಲ್ಲಿ ಬೆಂದು ಗುಂಡು, ಗುಂಡು ಬೆಂದು ಎಂಬುದೊಂದು ಗಾದೆ! ನೀರಲ್ಲಿ ಹೋಮ ಮಾಡ ಪಡಿಗ ಗಾಳಿಕಾಕುವವರೇ ಹೆಚ್ಚಂತೆ! ಕಜೇಷ್ಟಯಿ ಐದಲೆ ಪ್ರತಿಷ್ಠೆಯಂತೆ! ಅಂದಮೇಲೆ, ಸಾರ್ವಜನಿಕ ಹಿತವೆಲ್ಲಿ! ಕರ್ತವ್ಯವೆಲ್ಲಿ! ನ್ಯಾಯವೆಲ್ಲಿ! ಆದರೆ, ಇಂಥವರಿಗೆ ಸಾರ್ವಜನಿಕ ಸಂಸ್ಥೆಗಳ ಚಾಲಕರು ಪನಸ್ಸುಮಾಡಿದರ ಅಂಕಿತರಾಗಬಹುದು, ಅವರಾಯ ಜನರನ್ನು ಕಾಪಾಡಬಹುದು, ಮತ್ತು ಕರ್ತವ್ಯದಕ್ಷತೆಯಿಂದ ತಮಗೆ ಲಭಿಸಿದ ಅಧಿಕಾರದ ಸದುಪಯೋಗವನ್ನು ಮಾಡಿ, ತಾವು ಸ್ವರಾಜ್ಯದಾನಕ್ಕೆ ಪೂರ್ಣ ಪಾತ್ರರೆಂದು ಸರಕಾರಕ್ಕೆ ಮನಗಾಣಿಸಬಹುದು. ಇದಕ್ಕೆ ಜನರೆಷ್ಟು ಭಾಗ್ಯಶಾಲಿಗಳೆಂಬುದು ಪರಿಣಾಮದಿಂದಲೆ ತಿಳಿಯಬೇಕು.

---

೫ ಕಳೆದ ತಾ ೧೫ನೇ ರಾತ್ರಿ ೧೧ ಘಂಟೆ ಸಮಯ ಒಂದು ಮಾರು ಉದ್ದ ಮೊಸಳೆ (crocodile) ಯು ನದಿಪಾದದ ಹಳ್ಳದಿಂದ ಹರಿದು ಮುನ್ಸಿಪಾಲಿಟಿ I ನೇ ನಂಬರ ಶಾಲೆಯ ಬಾಜುವಿಗೆ ಬಂದದ್ದು ಯಾರೋ ನೋಡಿ ಭಯಭೀತರಾಗಿ ಗುಲ್ಲುಹೊಡೆಯುವಷ್ಟರಲ್ಲಿ, ಆಜೀಜೆಯ ಜನರು ಕೂಡಿ ದೊಡ್ಡ ಸಮೂಹ ನೆರೆಯಿತು. ಕತ್ತಲೆಯಾದ್ದರಿಂದ ಅದು

ಯಾರಿಗೂ ಸರಿಯಾಗಿ [illegible] ಇವರ ಬಂಗಾರದ ಆಟೋಟದಿಂದ ಜನರು ಸೈರ್ಯಗುಂದಿ ಅವನ್ನು ಕೊಲ್ಲುವ ವಿವಂಚನೆಯಲ್ಲಿ ಇದ್ದರು. ಕಟ್ಟಕಡೆಗೆ ಈ ತಾಲೂಕ ಮಾಮಲೆದಾರ ರಾ ರಾ| ನಾಡಿಗರಿಗೆ ಈ ಸಂಗತಿ ತಿಳಿದು ಅವರ [illegible] ತಮ್ಮ ಬಂದೂಕಿನಿಂದ ಒಂದು ಗುಂಡು ಹಾರಿಸಿದ್ದು ಅದರ ಬೆನ್ನಿಗೆ ತಾಗಿ ಮತ್ತಷ್ಟು [illegible] ಯಿದಲ್ಲೆ ಮಾರ್ಕೆಟಿನ ದ್ವಾರ [illegible] ಹಾಯಿತ ಅಲ್ಲಿ ಸಾಕಷ್ಟು ಬೆಳಕು ಇದ್ದು, ಅದರ ಹೊಟ್ಟೆಯ [illegible] ತ್ತೊಂದು ಗುಂಡು ಹಾರಿಸಿ [illegible] ಲಿಸಿ, ಬಾಯಿ ಕಳೆದು [illegible] ಮಹಾಶಯರು ತಮ್ಮ [illegible] ಬಾಯೊಳಗೆ [illegible] ಹಾರಿಸಿ ನೆರೆದ ಜನರನ್ನು [illegible] ವಿಮೋಚಿಸಿದರ [illegible] ಸಹ [illegible] ಸಾಹಸದಿಂದ [illegible] ಮುಟ್ಟಿದಾಗಿ ಇಲ್ಲಿಯ [illegible] ವಾಚಕ ಸಾಹೇಬರ [illegible] ತಿರಸ್ಕ [illegible] [illegible]

[illegible] ಪ್ರಸಂಗದಲ್ಲಿ [illegible] ಸಹ [illegible] ದಿನದಲ್ಲಿ [illegible] ಜನರು [illegible] ಈ ದಿನ [illegible] ಹೊಟ್ಟೆಗಿಲ್ಲದೆ [illegible] ಸರ [illegible] ಕಳ್ಳರ [illegible] ಧನವಾಗಬಹುದಾಗಿ [illegible] ಮಹಾಶನ್ನ [illegible] ಯೋಗ್ಯ ಅಧಿಕಾರಿಗಳ ಲಕ್ಷ್ಯವ [illegible] ಅವಶ್ಯಕ [illegible] ಕ್ಕನ್ನು ಬಂದೋಬಸ್ತ ಇದ ವರೆ [illegible]

ಇಹವೃತ್ತ.

ಕುಮಟಾ— [illegible] ಬಿದ್ದು ಆದಾವು [illegible] ಇತ್ತಿತ್ತ ಚಟೋ ಮಳೆ ಬೀಳಹತ್ತಿದೆ ಈ ವರೆಗೆ [illegible] ಎಲ್ಲಿ ನೋಡಿದರೂ ಆಗೆ ಹಾಕಿದ ಬಿಜ ಸಷ್ಟವಾಗಿ [illegible] ಕೊರತೆಯುಂಟಾಗಿ ಒಕ್ಕಲಿಗರು [illegible]

ಇಲ್ಲಿ ಸ್ಥಾನಿಕಲ್ಪದ [illegible] ದವಾಖಾನೆಯ [illegible] ಸಾರ್ವಜನಿಕರ ವತಿಯಿಂದ ವಾಗ್ದಾನ [illegible] ರೂಪಾ ೧೦೦೦ ರಲ್ಲಿ ಮಿ|| ಹರಿ ವೆಯಾಳಕರ ರಾಪ್ಯಾ ೪೦೦ ಇತರರು ೪೦೦, ಮತ್ತು ಜೆಗೆಸೆಯ [illegible] ೩೦೦ ಹೀಗೆ ವಂತಿಗೆಯಿಂದ ಒಟ್ಟುಗೊಡಿದಂತಾಯಿತು

ಇಲ್ಲಿಯ ಗಿಬ್ಬ ಹ್ಯಾಸ್ಕೂಲ ವಿದ್ಯಾರ್ಥಿಗಳಾಗಿದ್ದ [illegible] ಪದ್ಮನಾಭ ಪ್ರಭು, ಅನಂತ ನಾರಾಯಣ [illegible] ಲಕ್ಷುಮಣ ಹನುಮಂತ ಪ್ರಭು (ಹೊನ್ನಾವರ) ಇವರ ೩ ನೇ ಕ್ಲಾಸಿನಲ್ಲಿ, ಗಣಪತಿ ಅಚ್ಯುತ [illegible] ಚಾಲಕನ ಧನಾಕಂಡಿಸ ಮತ್ತು ಸರಹರಿ ಎಸ ಭಟ್ಟ ಗೋಕರ್ಣ [illegible] ಕ್ಲಾಸಿನಲ್ಲಿ [illegible] ಪರೀಕ್ಷೆಯಲ್ಲಿ ಉತ್ತೀರ್ಣರಾದರು

ಶ್ರೀ ವಿಠೋಬದೇವರ ಸಪ್ತಾಹ ಭಜನೆ ಉತ್ಸಹಪ್ರೆ ಮಾಡಿಕೆಯಂತೆ ವಿಜೃಂಭಣೆಯಿಂದ ನೆರವೇರಿತು

ಅಂಕೋಲಾ— ತಾ ೧೩-೬-೩೦ ನೇ ದಿವಸ ಅಂಕೋಲಾ ವಕ್ತಾ ಶ್ರೀ ಪ್ರ| ಮು| ರಾ| ವಿ ಪಿ ಪ್ರಭು ಇವರ ಅಧ್ಯಕ್ಷತೆಯ ಕೆಳಗೆ ಮಹಾಸಭೆಯಾಗಿ ಆದ ಠರಾವುಗಳ —

೧ ಇತ್ತಲಾಗೆ ಏವಾರ ತಿಂಗಳಿಂದ ಪ್ರತಿ ತಿಂಗಳ [illegible] ತಡವಾಗಿ ಬರುತ್ತದೆ ಅಂದರೆ ಮಾರ್ಚ [illegible] ನೇ ತಾ ಕ್ಯ ತಾಲೂಕಿಗೆ ಬಂತು [illegible] ಇನ್ನೂ ಇಲ್ಲ ಅದರಿಂದ ದುರ್ಭಿಕ್ಷದಲ್ಲಿ [illegible] ದಿನಗಳಲ್ಲಿಂತು ಬಡ ನೌಕರರು [illegible] ಲುಕಸಾನು ಪಡಬೇಕಾಗು ವದ [illegible] ಇನ್ನು ಮುಂದೆ ಬೇಗನೆ ಬರವಾಡ ಮಾಡಬೇಕ್ಕೆ [illegible] ಪ್ರತಿ ತಿಂಗಳ [illegible] ೧೦ ನೇ ತಾರೀಖಿನೊಳಗೆ [illegible] ಮಾಸ್ತರರ [illegible] ಮುಟ್ಟುವಂತೆ ವ್ಯವಸ್ಥೆ [illegible] ಈ ಸಂಘವು [illegible] ಇತ್ಯಾದಿ [illegible] ಠರಾವುಗಳು [illegible] ವರ್ಗಣಿ, ಮುನೆಬಂಗ [illegible] ಸಮ್ಮತವಾಗಿ ಇದುತ್ತವೆ

ಕಾರವಾರ— [illegible] ತಾಲೂಕ ಪ್ರಾಥಮಿಕ [illegible] ಸಂಘದ ಜನರಲ್ ಕಮಿಟಿಯು ಕಳೆದ [illegible] ತಿಂಗ ೧೧ ನೆ ತಾರೀಖಿನ ದಿವಸ ನೆರೆದಿತ್ತು [illegible] ದ ಬಗ್ಗೆ ಈ ಕೆಳಗೆ ಕಾಣಿಸಿದ [illegible] ಆರಿಸಿದರು ಈ ವರ್ಷವಾದರೂ [illegible] ಕಾರ್ಯವನ್ನು ಉತ್ಸಾಹದಿಂದ ನಡಿಸಿ, [illegible] ಅವ್ಯವಸ್ಥಿತವಾದ [illegible] ಬರವಡೆ ಇದೆ [illegible] ಶಿಕ್ಷಕರ ಸುಧಾರಣೆಗಳನ್ನು [illegible] ವರೀಗಿ [illegible]

ಅಧ್ಯಕ್ಷ ವ| ರಾ| ಡಿ ಎ ನಾಡಕರ್ಣಿ Esq B A LL B

[illegible] ರಾ| ರಾ| [illegible] ವಿ [illegible] ಹೆ| ಮಾ| [illegible]

[illegible]

[illegible] ರಾ| ರಾ| [illegible] ತೊಂಡೆ [illegible]

[illegible] ರಾ| ರಾ| [illegible] ಹೆ| ಮಾ| ಸಂಕ [illegible] ಮತ್ತು ೨೦ ಮೆಂಬರರು

ಹಳಿಯಾಳ— [illegible] ಸೆಟ್ಟಿಗೆ [illegible] ಬೇಸೆ [illegible] ಅದೆ ಮೃಗದ ಜಡಿ ಬಂದೇ ಸವಸೆ ಹಕ್ಕಿಪ್ಪಂದಿ ನಡನಡುವೆ ದೊಡ್ಡ ದೊಡ್ಡ ಕರವು [illegible] ವತ್ತ ಕ್ಷಣದಲ್ಲೇ ಅಳ್ಳಕಲ್ಪ ಸೂರ್ಯದರ್ಶನವಾಗು ವದು ಹೀಗಾಗಿ ವಿತ್ತಿ ಹುಟ್ಟದ ಜೆಳಗೆ ಹುಲ್ಲು ಪ್ರತಿಸ್ಪ [illegible] ಹುಟ್ಟದ ಬೀಜ ಕೊಳತು ಹೋಗು [illegible] ಇನ್ನೂ ವಿತ್ತತಕ್ಕ ಭೂಮಿಗೆ ಹದವಿಲ್ಲ (ಹಂಗಾಮ ಇಲ್ಲ) ತಳಿಗೆ ವಸೂಲೀ ಇನ್ನೂ ನಡೆದದೆ ಕಾಯಿಕ್ಕೆ ಅವಶ್ಯಕತೆಯುಂಟು ಮಳೆಯು ಇನ್ನು ೮-೧೦ ದಿನ ತೆಗೆದರೆ (ಹೋದರೆ) ಉತ್ತಮವಾಗುವದು ಈ ವರೆಗೆ ೬-೮೦ ಮಳೆಯಾಗಿದೆ [illegible] ಸ್ವಾಲಿಸೊಹೇಬರು ರಜೆಮೇಲೆ ಹೋಗುವವ ರಿದ್ದಾರಂತೆ

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು ಸ್ಟೇಶನರಿ ಸಾಮಾನುಗಳೂ ನಾವು ಪೂರೈಸುವೆವು

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ

ಭಯಂಕರ ಸಾಧು!

ಮ| ರಾ| ಕಾನಡಾವೃತ್ತ ಕರ್ತರಿಗೆ,

ಮಹಾಶಯರೇ, ಸಾವಂತವಾಡಿ ಎಂಬ ಊರಲ್ಲಿ ಸಾಧು ರಹಿತನೆಂಬ ಸಾಧುವಿನ ಪ್ರವೇಶವಾಗಿದ್ದು ಬಂದು ಬಂದೂವರೆ ವರ್ಷವಾಯಿತು ಅವನ ಸಾಧುತ್ವವನ್ನು ಎಷ್ಟೆಂತ ಬಣ್ಣಿಸಲಿ! ಶಾಂತತೆಯಲ್ಲಿ ಅವನು ಜಮದಗ್ನಿಗೆ ಸಮಾನನು! ಅವನು ಬ್ರಹ್ಮಚಾರಿಯಂತೆ ಊರೊಳಗಿನ ವಿಧವೆಯರೇ ಅವನ ಶಿಷ್ಯಂದಿರು! ಹಗಲೆಲ್ಲ ಇವರು ಅವನ ಸೇವೆಯಲ್ಲಿಯೇ ಮಗ್ನರಾಗಿದ್ದು, ಅವರಲ್ಲೇನಾದರೂ ಸ್ವಲ್ಪ ಹೆಚ್ಚು ಕಡಿಮೆಯಾದರಂತೂ ತೀರಿತು ಜಮದಗ್ನಿಯು ಅಲ್ಲಿ ಹಾಜರಾದನೆಂತಲೇ ತಿಳಿಯ ತಕ್ಕದ್ದು! ಹೀಗಾಗಿ ಒಮ್ಮೆ ಅವನು ಒಬ್ಬ ಇಸ್ತ್ರಾಯದ ವಿಧವೆಯ ಮೇಲೆ ಅರ್ಧಚಂದ್ರ ಪ್ರಯೋಗವನ್ನು ಮಾಡಿ ಕಳುವಿದನು! ಮತ್ತೊಬ್ಬಳಿಗೆ ಕೈಗಳನ್ನು ಕಟ್ಟಿ ಹೊಡೆದನು!! ಇನ್ನೊಬ್ಬಳಿಗೆ ಮೋರೆಯ ಮೇಲೆ ಹೊಡೆದು ಬಂದೆರಡು ಹಲ್ಲುಗಳನ್ನು ಸಹ ಉದುರಿಸಿದನು!!! ಇಷ್ಟಾದರೂ ಅವನ ಡಾಂಭಿಕತನಕ್ಕೆ ಮರುಳಾದ ಆ ಮೂಢ ವಿಧವೆಯರು ಗಾಳಿಗೆ ಬಂದದ್ದೇ ವಂಚಾಮೃತವೆನ್ನುತ್ತ ಅವನ ಸೇವೆಯಲ್ಲಿಯೇ ಕಾಲ ಹರಣ ಮಾಡುತ್ತಿರುವರು ಎಂಥ ಆಶ್ಚರ್ಯವು! ಇದು ಅವನ ಸುದೈವವೇ ಸರಿ! ಯಾರಾದರೂ ಸಹಜವಾಗಿ ಊರನ್ನಾಗಲಿ ಹೆಸರನ್ನಾಗಲಿ ಕೇಳಿದರೆ, ಮೈಮೇಲೆಯೇ ಬರುವದಲ್ಲದೆ ಶಕ್ಯವಿದ್ದಲ್ಲಿ ಮುಷ್ಟಿಪ್ರಹಾರವನ್ನು ಸಹ ಮಾಡುವದಕ್ಕೆ ಹಿಂಜರಿಯನು. 'ಪಟ್ಟುಗಳನ್ನು ತಿನ್ನಲಿಕ್ಕೆ ಸಿದ್ಧರಾಗಿರುವವರೇ ತನ್ನ ದರ್ಶನಕ್ಕಾಗಿ ಬರಬೇಕು, ಎಂಬುವದೇ ಇವನ ಹೇಳಿಕೆಯು! ಹಗಲು ಕೆಂಬ ವಾದ್ಯವೂ, ರಾತ್ರಿಯಲ್ಲಿ ಸಿಳ್ಳ ಇವನ ಶಿಷ್ಯಮಂಡಳಿಗೆ ರಕ್ಷಣದ ಸೂಚನೆಯು! ತರತರದ ಮೃಷ್ಟಾನ್ನ ಭೋಜನದಿಂದ ಮದಾಂಧನಾದ ಈ ಸಾಧುವು ಅನ್ಯರನ್ನು ಸಹ ವೃಥಾ ಹೊಡೆಯಲಿತ್ತು ಸಿದ್ಧನಲ್ಲದೆ, ಅದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಸಹ ಹೊಂದಿರುವನು. ಈ ಮಹಾತ್ಮನ ಚರಿತ್ರೆಯನ್ನು ಕೇಳುವವರಿಗೆ, ಅವನ ವಿಷಯವಾಗಿ ತಿರಸ್ಕಾರವೂ ಆ ಬಡ ವಿಧವೆಯರ ವಿಷಯವಾಗಿ ಕನಿಕರವೂ ಉಂಟಾಗದೇ ಇರಲಾರದು ಆದರೆ ಅಲ್ಲಿಯ ಪ್ರಮುಖರು ಮಾತ್ರ ಈ ವರೆಗೂ ಅವನಿಗೆ ಸಾರ್ವಜನಿಕ ದೇವಸ್ಥಾನದಲ್ಲಿ ಆಶ್ರಯಕೊಟ್ಟಿರುವದು ಅವರ ಹೇಡಿತನದ ಅತಿರೇಕವಲ್ಲವೇ?

ಕಿ೯ } ತಮ್ಮ,
ತಾ ೧೫-೬-೧೯೩೦ } ಸತ್ಯಕಾಮ.

ಜಗತ್ಪ್ರಖ್ಯಾತ! ಖಾತ್ರಿದಾಯಕ!! ಬಹುಗುಣಕಾರಕ!

ಮುಖ ಜೀವನಾಮೃತ.

ಈ ಔಷಧವು ಹಲ್ಲು ಕಳಿತ, ಹಲ್ಲು ನೋಯುವ ಹಲ್ಲು ಅಲುಗಾಡುವ ಹಲ್ಲೊಳಗಿಂದ ರಕ್ತ ವ ಕೀವು ಸುರಿಯುವ, ಮುಖದಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ ಇದಲ್ಲದೆ ಬಾಲಗ್ರಹ ಎಲ್ಲಾ ತರದ ಜ್ವರ ತಲೆಯು ಬಿಡದ ವಾಂತಿ, ಹೊಟ್ಟೆಶೂಲೆ ಸಳಗು ಳು, ಪ್ಲೇಗ, ಕಾಲರಾ, ಗುಂಟುಗಳು ಮತ್ತು ವಿಷಕಾರಕ ಪ್ರಾಣಿಗಳು ಕಚ್ಚಿದ ಕಳತ, ಬಾಳಂತಿಯರಿಗೆ ನಂಜು ಏರಿದರೆ ಮ ೩೦ ಪ್ರಕಾರದ ಮೇಹರೋಗಕ್ಕೆ ಗುಣ

ಕ್ರಯ ಬಾಟ್ಲಿ ೧ಕ್ಕೆ ಕಿ|| ೦-೧೨-೦

ಪತ್ತೆ:- ಗೋವಿಂದ ಎಸ್. ಕೆರೇಕರ.
ಶ್ರೀ ಪಾಂಡುರಂಗಪ್ರಸಾದಿಕ ಕಂಪನಿ,
ಕುಮಟಾ (ಎನ್ ಕೆನರಾ)

ಪ್ರಾಥಮಿಕ ಶಿಕ್ಷಕರ ವರ್ಗಾವರ್ಗಿ.

ಅಮ್ಯಾ! ಕಾನಡಾವೃತ್ತಕಾರರೇ, ಈ ಕೆಳಗಿನ ನಾಲ್ಕು ಸಾಲುಗಳಿಗೆ ಅವಕಾಶ ದೊರೆಯಬೇಕಾಗಿ ಅಪೇಕ್ಷಿಸುತ್ತೇನೆ

ಶಾಲೆಯಿರುವ ಪ್ರತಿಯೊಂದು ಊರಲ್ಲಿ ಕೆಲಸಮಾಡ ಲಿಕ್ಕೆ ಅದೇ ಊರ ನಿವಾಸಿಗಳಾದ ಮಾಸ್ತರ ಜನರು ಸಿಗುವದು ದುರ್ಲಭವು ಒಂದು ವೇಳೆ ಊರಲ್ಲಿ ನೌಕರಿ ಕೊಟ್ಟರೂ ಅದರ ಸದ್ಬಳಕೆಯನ್ನು ಎಷ್ಟೋ ಜನರು ವ ರೆಶು ಸೋಮಾರಿತನದಿಂದ ಕೆಲಸವನ್ನು ಕೆಡಿಸುವರು ಇದಲ್ಲದೆ ಶಿಕ್ಷಣಕಾರ್ಯವು ಸರಿಯಾಗಿ ಸಾಗಬೇಕಾದರೆ ಅನುಭವವು ವಿದ್ವತ್ತಿಗಿಂತ ಮಹತ್ವವಾದದು ಕಾರಣ ಬೇರೆ ಬೇರೆ ಸ್ಥಳಗಳ ವ ಅಲ್ಲಿರುವ ನಿವಾಸಿಗಳ ಸಂಬಂಧದ ಜ್ಞಾನವು ದೊರೆದಷ್ಟು, ಕೆಲಸಕ್ಕೆ ಅನುಕೂಲವಾಗುವದು ಒಂದೇ ಊರಲ್ಲಿಯೇ ಪೆನ್‌ಶನ್ ಆಗುವವರೆಗೆ ನೌಕರೀ ಮಾಡಿದ ಮನುಷ್ಯನು ಕೂಪ ಮಂಡೂಕ ನ್ಯಾಯದಂತೆ ಪ್ರಪಂಚದ ಅನುಭವ ರಹಿತನಾಗುವನು ಈ ಕಾರಣದ ದೆಸೆಯಿಂದಲೂ, ಮತ್ತು ಬೇರೆ ಬೇರೆ ಸ್ಥಳಗಳಿಗೆ ಹೋಗಿ ಕೆಲಸಮಾಡಬೇಕಾಗುವದರ ದೆಸೆಯಿಂದ ಆಗತಕ್ಕ ಸುಖ-ದುಃಖಗಳು ಎಲ್ಲಾ ವರ್ಗದವರಿಗೆ ಸರಿಯಾಗಿ ದೊರೆಯಬೇಕೆಂಬ ನ್ಯಾಯದಿಂದಲೂ ಸರಕಾರದವರು ನೌಕರರ ವರ್ಗಾವರ್ಗಿಯನ್ನು ಕಲ್ಪಿಸಿರುವರು ಆದರೆ ನಮ್ಮ ಕಾನಡಾಜಿಲ್ಲೆಯ ಪ್ರಾಥಮಿಕ ಶಿಕ್ಷಕರ ವರ್ಗಾವರ್ಗಿಯಲ್ಲಿ ಸದ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ದೂರಪಡಿಸಿದ ಹೊರತು ಸ ಧಾರಣೆಯಾಗಲಾರದೆಂದು ಈ ಕೆಳಗಿನ ವಿಚಾರಗಳಿಂದ ಸಿದ್ಧವಾಗುವದು

ಕಾನಡಾಜಿಲ್ಲೆಯೊಳಗೆ ಹವಾ-ನೀರು-ಆಹಾರ ಭೇದದಿಂದ ೩ ಭಾಗಗಳಾಗುತ್ತವೆ

(೧) ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ತಾಲೂಕುಗಳೆಂಬ ಸಮ ಪ್ರದೇಶವು ಉತ್ತಮ ಹವೆಯ ಪ್ರದೇಶವು

(೨) ಶಿರ್ಸಿ, ಸಿದ್ದಾಪುರ ತಾಲೂಕುಗಳೆಂಬ ಘಟ್ಟದ ಮೇಲಿನ ಮಧ್ಯಮ ಹವೆಯ ಪ್ರದೇಶ

(೩) ಯಲ್ಲಾಪುರ ಹಳಿಯಾಳ ತಾಲೂಕುಗಳೆಂಬ ಘಟ್ಟದಮೇಲಿನ ತೀರ ಕೆಟ್ಟ ಹವೆಯ ಪ್ರದೇಶವು

೧ ನೇ ಭಾಗದಲ್ಲಿರುವ ಶಾಲೆಗಳಿಗೆ ಸಾಕಷ್ಟು ಮಾಸ್ತರ ಜನರು ಈ ಭಾಗದಲ್ಲಿರುತ್ತಾರೆ ಆದರೆ ಘಟ್ಟದ ಮೇಲಿನ ತಾಲೂಕುಗಳಿಗೆ ಸಾಲುವಷ್ಟು ಮಾಸ್ತರ ಜನರು ಆ ಭಾಗಗಳಲ್ಲಿಲ್ಲ ಸಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ಮಾತ್ರ ಕೆಲವರು ಟ್ರೇಂಡರಿರುವರು ಟ್ರೇನಿಂಗ ಕಾಲೇಜದ ಆರಂಭದಿಂದಲೂ ಘಟ್ಟದ ಮೇಲಿನ ಉಮೇದವಾರರಮೇಲೆ ದಯೆಯನ್ನು ತೋರಿಸಿ, ಎಷ್ಟೋ ಮೇಲು ನಂಬರು ಪಡೆದ ಕುಮಾರ ಇದ್ದ ವ ಘಟ್ಟದ ಕೆಳಗಿನ ವಿದ್ಯಾರ್ಥಿಗಳನ್ನು ಬಿನ್ ಪಗಾರಿಯಿಂದ ಇಟ್ಟು ಇಲ್ಲವೆ ತೆಗೆದುಹಾಕಿಯಾದರೂ ಘಟ್ಟದ ಮೇಲಿನ ಲಾಸ್ಟ ನಂಬರು ಬಂದ ವಿದ್ಯಾರ್ಥಿಗಳನ್ನು ಪಗಾರಿಯಿಂದ ೩ ವರ್ಷಗಳ ವರೆಗೂ ಇಟ್ಟುಕೊಂಡು ಟ್ರೇಂಡರನ್ನು ಮಾಡಿ ಕಳಿಸಿರುವರು ಇದರಿಂದ ಘಟ್ಟದ ಮೇಲೆ ವಿದ್ಯಾಭಿವೃದ್ಧಿಯಾದೀತೆಂಬವೇ ಮುಖ್ಯ ಹೇತುವಿರುತ್ತದೆ ಅಂದ ಬಳಿಕ ಇವರನ್ನು ಘಟ್ಟದ ಕೆಳಗೆ ವರ್ಗ ಮಾಡುವ ಪ್ರಯೋಜನವೇನೂ ಕಾಣುವದಿಲ್ಲ.

ಉದಾ — ಕೆ ಕೆ ಜೋಶಿ, ಶ್ರೀ ವಿ ಜೋಶಿ, ಬಾಪಟ, ಭಡಕೆ, ಕಾಂಚು.

ಆದರೆ ಎಷ್ಟೋ ಘಟ್ಟದ ಮೇಲಿನ ಟ್ರೇಂಡರು ತಮ್ಮ ಘಟ್ಟದ ಮೇಲಿನ ಪ್ರದೇಶದಲ್ಲಿಯೇ ಕೆಲಸಮಾಡುತ್ತಿದ್ದರೆ ಇದು ಸ್ತುತ್ಯವು ಆದರೆ ಇವರು ತಮ್ಮ ಹುಟ್ಟಿದ ಊರಲ್ಲಿ ಇಲ್ಲವೆ ಅದೇ ತಾಲೂಕಿನಲ್ಲಿಯೇ ೨೫-೩೦ ವರ್ಷಗಳಿಂದ ಕೆಲಸಮಾಡುವರು ಇದು ಮಾತ್ರ ನ್ಯಾಯವಾಗಲಾರದು ಇವರನ್ನು ಘಟ್ಟದ ಮೇಲಿನ ವಿದ್ಯಾಸುಧಾರಣೆಯ ಉದ್ದೇಶದಿಂದ ತಯಾರ ಮಾಡಿರುವ ವ ಕಾರಣ ಘಟ್ಟದ ಮೇಲಿನ ನಾಲ್ಕು ತಾಲೂಕುಗಳಲ್ಲಿ ಇವರು ಕೆಲಸಮಾಡಬೇಕಲ್ಲದೆ ಒಂದೇ ಊರಲ್ಲಿ ಇಲ್ಲವೆ ಒಂದೇ ತಾಲೂಕಿನಲ್ಲಿ ತಮ್ಮ ಇಡೀ ಸರ್ವೀಸು ಮಾಡುವದು ಎಂದೂ ನ್ಯಾಯವಾಗಲಾರದು ಹೀಗೆ ಮಾಡುವದರಿಂದ ಅವರಲ್ಲಿ ಸೋಮಾರಿತನವೂ, ಉದ್ಧಟವರ್ತನವೂ ಉಂಟಾಗಿ "ಸುಧಾರಿಸಾಕುವಾಗುವದರ" ಬದಲು ದುಷ್ಪರಿಣಾಮವೇ ಆಗತಕ್ಕ ಸಂಭವವು ಹೆಚ್ಚಿರುತ್ತದೆ ಇದಲ್ಲದೆ ಘಟ್ಟದ ಕೆಳಗಿನವರು ಮಾತ್ರ ನೂರಾರು ಮೈಲು ದೂರದ ಘಟ್ಟದ ಮೇಲಿನ ಹಳ್ಳಿಗಳಿಗೆ ತಮ್ಮ ಹೆಂಡರು ಮಕ್ಕಳನ್ನು ಕಟ್ಟಿಕೊಂಡು ಜಾತಿ, ಗೋತ್ರ, ಬಂಧುಬಾಂಧವರನ್ನು ಬಿಟ್ಟು ತಿರುಗುತ್ತಿರುವದೂ, ಘಟ್ಟದ ಮೇಲಿನವರು ತಮ್ಮ ಜನ್ಮಭೂಮಿಯಲ್ಲಿ ಸುಖದಿಂದ ಕಾಲಹರಣಮಾಡುತ್ತಿರುವದೂ ನ್ಯಾಯವಲ್ಲ ಘಟ್ಟದ ಕೆಳಗಿನವರಿಗೆ ಶಿರ್ಸಿ, ಸಿದ್ದಾಪುರ ತಾಲೂಕುಗಳಿಗೆ ಘಟ್ಟದ ಮೇಲಿನ ವಾಳಗಳ ದೆಸೆಯಿಂದ ವರ್ಗಮಾಡುವದೂ, ಘಟ್ಟದ ಮೇಲಿನ (ಶಿರ್ಸಿ, ಸಿದ್ದಾಪುರ ತಾಲೂಕುಗಳೊಳಗಿನ) ವರಿಗೆ ಯಲ್ಲಾಪುರ, ಹಳಿಯಾಳ ತಾಲೂಕುಗಳಿಗೆ ವರ್ಗಮಾಡುತ್ತಿರುವದೂ (ಅಂದರೆ ಪಾಳಿಯ ಪ್ರಕಾರ) ಯೋಗ್ಯವಾಗುವದ

ಘಟ್ಟದ ಕೆಳಗೆ ಸಹ ಎಷ್ಟೋ ಜನರು ಒಂದೇ ಊರಲ್ಲಿ ೧೦-೧೫ ವರ್ಷಗಳ ವರೆಗೆ ಇರಲು ಸಮರ್ಥರಾಗುವದ ಎಷ್ಟೋ ಜನರು ಬಿಡಾರವನ್ನು ೨-೩ ವರ್ಷಗಳಿಗೊಮ್ಮೆ ತಪ್ಪದೆ ಕಟ್ಟಿಕೊಂಡು ಬೇರೆ ಬೇರೆ ಊರಿಗೆ ಹೋಗಬೇಕಾಗುವದು ಎಷ್ಟೋ ಜನರು ಊರ ಜನರಿಗೆ ಪ್ರಿಯರಾಗಿ ಉತ್ತಮ ಕೆಲಸವನ್ನು ಮಾಡುತ್ತಿರಲು ಅವರಿಗೆ ಪ್ರತಿಫಲವಾಗಿ ಅನಿಷ್ಟ ಸ್ಥಳಗಳಿಗೆ ವರ್ಗವಾಗುವದು ಕೆಲವರು ಇದಕ್ಕೆ ವಿರುದ್ಧವಾಗಿ ಊರ ಜನರ ದ್ವೇಷಕ್ಕೆ ಪಾತ್ರರಾಗಿ ಹೋದಹೋದಲ್ಲಿ ಶಾಲೆಯ ಸ್ಥಿತಿಯನ್ನು ಕೆಡಿಸುತ್ತಿದ್ದರೂ ಅವರಿಗೆ ಇಷ್ಟಾರ್ಥವಾಗಿ ಇಷ್ಟ ಜಾಗೆಗಳಿಗೆ ವರ್ಗವಾಗುವದು ಎಷ್ಟೋ ಮಾಸ್ತರ ಜನರು ತಮ್ಮ ೧೨-೧೫ ವರ್ಷಗಳ ಸರ್ವೀಸಿನಲ್ಲಿ ಘಟ್ಟದ ದಾರಿಯನ್ನು ಸಹ ನೋಡದೆ ಘಟ್ಟದ ಕೆಳಗೆ ಕೆಲಸಮಾಡುವಂಥ ಸುದೈವಿಗಳಾಗಿರುವರು ಎಷ್ಟೋ ಜನರು ಅದೇ ಅವಧಿಯಲ್ಲಿ ೨-೩ ಸಾರೆ ಘಟ್ಟದ ಮೇಲಿನ ಪಾಳಿ ಬಂದು ಅನೇಕತರದ ಕಷ್ಟನಷ್ಟಗಳನ್ನನುಭವಿಸಿದಂಥ ದುರ್ದೈವಿಗಳಾಗಿರುವರು ಘಟ್ಟದ ಮೇಲಿನ ಒಂದೇ ಪಾಳಿಯನ್ನಾದರೂ ಕೆಲವರು ೧|-೨ ವರ್ಷಗಳವರೆಗೂ, ಕೆಲವರು ೪-೪|| ವರ್ಷಗಳವರೆಗೂ ಮಾಡುವಂಥ ಪ್ರಸಂಗವು ಬರುವದು ಇದೆಲ್ಲಿಯ ನ್ಯಾಯ?

ಇಷ್ಟರಮೇಲೆ ನಮ್ಮ ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ವರ್ಗಾವರ್ಗಿಯಲ್ಲಿ ಬಹಳ ಅನ್ಯಾಯವು ನಡೆಯುತ್ತಿರುವ ಮೂಲಕ ಪ್ರಾಥಮಿಕ ಶಿಕ್ಷಣದಂಥ ವ ಹತ್ವದ ಕೆಲಸವನ್ನು ಮನಃಪೂರ್ವಕವಾಗಿ ಉತ್ಸಾಹದಿಂದ ಮಾಡಲಿಕ್ಕೆ ಮಾಸ್ತರ ಜನರಿಗೆ ಸಾಕಷ್ಟು ಉತ್ತೇಜನ ದೊರೆಯುವದಿಲ್ಲ. ಮಾಸ್ತರ ಜನರಿಗೆ ತಕ್ಕಷ್ಟು ಉತ್ಸಾಹವಿದ್ದ ಹೊರತು, ಅವರ ಕಾರ್ಯವು ಸುಸೂತ್ರವಾಗಿ ಸಾಗಲಾರದೆಂಬುವದು ಸರ್ವಶ್ರುತವೇ ಸರಿ ಅಧಿಕಾರಿಗಳು ವರ್ಗಾವರ್ಗಿಯ ಸುಖದುಃಖಗಳ ಪಾಲು ಎಲ್ಲ ಮಾಸ್ತರ ಜನರಿಗೂ ಸರಿಯಾಗಿ ಸಿಗುವಂತೆ ವ್ಯವಸ್ಥೆಮಾಡುವದು ಯೋಗ್ಯವಿರುತ್ತದೆ

ಶಿಕ್ಷಣ ಸುಧಾರಣಾಕಾಂಕ್ಷಿ

ಸತ್ಯಾರ್ಥ ಪ್ರಕಾಶ.

೨ ಭಾಗಗಳ ಕಿಮ್ಮತು ೧-೪-೦

ಎಸ್. ಎಲ್. ಧಾಕಪ್ಪಾ

ಪೋಸ್ಟ- ಶಿರಸಿ, (ಉತ್ತರ ಕಾನಡಾ)

ಕುಮಟೆ ಪೇಟೆ ಧಾರಣೆ.

ಜಿನಸು.	ದರ
	ರೂ.
ರಂಗೂನ ದೆ ಗೋಣೆ ೧ಕ್ಕೆ ...	೧೫||—೧೬|||
ಕುಚ್ಚಿಗೆ ಅಕ್ಕಿ ಮಾನಗಿ ...	೮—೮-೭-೦
ಶಾಗಿ ನಿದಕ್ಕೆ ..	೧೨—೧೩
ಗೋದಿ ಗೋಣೆ ೧ಕ್ಕೆ ...	೧೯—೨೬
ಹುಡುಕಿ ನಿದ " ...	೧೫|
ಕಡಲೆ ನಿದ ೧ಕ್ಕೆ ...	೧೬—೧೬||
ತೊಗರಿಬೇಳೆ ಗೋಣೆ ೧ಕ್ಕೆ ..	೨೫ -೨೭
ಹೆಸರು ಬೇಳೆ " ...	೧೬—೨೮
ಉದ್ದು ಮಾನಗಿ ...	೮||—೯
ವೋರಿಸ ಸಕ್ಕರೆ ಮಣ " ...	೧೨೫
ಮೆಣಸಿನ ಕಾಯಿ ಮಣ " ...	೬—೧೨
ಹರಿಶಿಣ ಮಣ ...	೧೦|
ಕೊಬ್ರಿ ಖಂಡಿ ...	೧೧೫—೧೨೦
ಕೊಬ್ರಿ ಹಿಂಡಿ ಖಂಡಿ ...	೨೫—೨೭||
ಕೊಬ್ರಿ ಎಣ್ಣೆ ಮಣ ...	೧೦|
ಕೊತ್ತಂಬರಿ ಗೋಣಿ " ...	೧೩||—೧೪
ಉಪ್ಪು ಗೋಣಿ " ...	೪-೫-೦
ಕರೆಸಿನ ಸೂರ್ಯ " ..	೪-೫-೦
" ಹಂಸ " ...	೩-೭-೬

ಸತ್ಯಮೇವ ಜಯತೇ.

(ಗುಣವಿದ್ದರೆ ಕೊಳ್ಳಿರಿ)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾದಕ ಇಂದ್ರಿಯಸ್ತಂಭಕ ಗರ್ಮಿ, (ಪಾರಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬೊಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಅತಿಶೀಘ್ರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ ಖ ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ

ವಿಳಾಸ— ಜಿ. ಎಲ್. ಜೋಶಿ ಕಂಪನಿ,

ಪೋಸ್ಟ— ಬನವಾಸಿ ಉತ್ತರ ಕಾನಡಾ,

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD

Bombay.

ಅತ್ಯುತ್ತಮ ವಾಚಗಳು.
ಸುಲಭ ಕ್ರಯ.

ಬಹಳ ಸಮಯ ತನಕ ನಡೆಯುವ ಪಂಘಾದು ೩ ವರ್ಷ ಗ್ಯಾರಂಟಿ

ಪ್ರಸಿದ್ಧ ಪಟ್ಟ [illegible] ಪೇಟೆಂಟ್ ನಿಕಲ್ ಸಿಲ್ವರ್ ವಾಚ

ಮುಂಚಿನ ಬೆಲೆ ರೂ 7-8-0

ಈಗಿನ ಬೆಲೆ ರೂಪಾಯ್ 3-1-0 ಮಾತ್ರ

ಪಕಿಂಗ್ ಪೋಸ್ಟೇಜ ಬೇರೆ

ಅತಿ [illegible] ದ ವಾಚು, ಸರಿ [illegible] ಉಪ [illegible]

ತಳ್ಳಿಸಲ್ [illegible] ವಾಚು ಪಕ್ಕಾ ಸಿಲ್ವರ್ [illegible]

ಮುಂಚಿನ ಬೆಲೆ ರೂಪಾಯ್ 10-0-0

ಈಗಿನ ಬೆಲೆ ರೂಪಾಯ್ 5-0-0

ಪೆಕಿಂಗ ಪೋಸ್ಟೇಜ ಬೇರೆ

[illegible] ವಾಚ್‌ಗಳನ್ನು [illegible] ವಿ ಪೀ ಪೋಸ್ಟೇಜ ಪ್ರತ್ಯೇಕ

ಇವಲ್ಲದೆ [illegible] ಎಲ್ಲ [illegible] ಶಿಗ್ಗುತ್ತವೆ

ಕೃಷ್ಣವಿಲಾಸ ಟ್ರೇಡಿಂಗ ಕಂಪನಿ.

ಗಿರಗಾಂವ ಮುಂಬಯಿ

KRISHNAVILAS TRADING COMPANY

Girgaum, BOMBAY

शक्तिवर्धक 'कामेश्वर मोदक.'

[illegible] अनुपानाप्रमाणे [illegible]

पत्ता— मुरारजी हिरालाल [illegible] गुजराती [illegible]

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ವಿಷ್ಣುಂಜನ — ಹಿಂದುಸ್ಥಾನದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇಸ ಹಾಗೂ [illegible] ಇದರ ಉಪಯೋಗದಿಂದ ತಲೆನೋವು [illegible] ಗಂಟಿನೋವು, ಎದೆನೋವು, [illegible] ವಾತ, ಸಂಧಿವಾತ [illegible] ಮೊದಲಾದ ಎಲ್ಲಾ ತರದ ನೋವುಗಳು [illegible] ಗುಣಪಡಿಸು [illegible] 1 ಕ್ಕೆ 0 8 0 12 ಕ್ಕೆ [illegible]

2 [illegible] ಮದನ ಕಾಮೇಶ್ವರಿ [illegible] — [illegible] ಶ್ರಮಪಟ್ಟು [illegible] ಇಂದ್ರಿಯ ದೌರ್ಬಲ್ಯ [illegible] ಶರೀರಗಳ [illegible] ಪ್ರಕೃತಿಯು [illegible] 40 [illegible] 1 [illegible]-8-0

3 [illegible] — ([illegible]) - [illegible] ದ್ವಿತೀಯ ತೃತೀಯ [illegible] 1 [illegible] 0-8-0

4 [illegible] ಗುಟಿಕೆ — [illegible] ಮಕ್ಕ [illegible] 1 [illegible] 0 10 0

5 [illegible] ಗುಟಿಕೆ ಇದು [illegible] ಸಿದ್ಧ ಔಷಧಿ [illegible] 1 [illegible] 0 10 0

6 [illegible] — [illegible] ಆಕ್ಕರಿ, [illegible] 2 ದಿವಸದೊಳಗೆ [illegible] 1 [illegible] ಕ್ರಯ [illegible] 2

7 [illegible] ಮತ್ತು [illegible] - ಇದರ [illegible] 2 [illegible] 1 [illegible] 1 [illegible] 2-0-0

8 [illegible] ಮತ್ತು [illegible] ಸುಖ ನಿದ್ರ [illegible] 10 [illegible] 0-12-0 3 [illegible] 2 0 0

9 [illegible] ಔಷಧಿ [illegible] 1 [illegible]-12-0

10 [illegible] ಹುಳ [illegible] ಮೊದಲಾದ [illegible] 3 ದಿವಸಗಳಲ್ಲಿ ಗುಣ ವಾಗುವವು, [illegible] 1 ಕ್ಕೆ 0-6 0 3 [illegible] 1-0-0

11 [illegible] 1 ಕ್ಕೆ 0-3-0 6 [illegible] 1-0 0

ವಿ ಪೇ. ಗಣಪಯ್ಯಾ ಎಂಡ ಸನ್ಸ್

ನೇಟಿವ್ ಡಾಕ್ಟರ್ಸ್ ರಹಬೆಂದಿ

ಬೆಂಗಳೂರು [illegible]

ಹೊಸ ಶೋಧ! "ಓಂ" ಹೊಸ ಶೋಧ!!

ಗುಣ ಬಾರದಿದ್ದರೆ ಹಣಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ [illegible] ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆ [illegible] ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೂಲದಲು ಅಥವಾ ಅದರ ಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ [illegible] ಹೊಟ್ಟೆ ಹಸಿಯುವದು. ಉಷ್ಣದಿಂದ [illegible] ವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣಗಳುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದ [illegible], ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿದಾನ ಒಂದು ಸಾರೆಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧ಳ ತೊಲೆಯ ಡಬ್ಬಿಗೆ ರು ೧ [illegible] ಡಬ್ಬಿಗಳಿಗೆ ೪ ರು. ೮ ಆಣೆ. [illegible] ಡಬ್ಬಿಗಳಿಗೆ ೧೫ ರು ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮಾಡಿ ಬರೆಯಬೇಕು.

ಪತ್ತೆ—ಸ್ಮಿಥ್ ಆಂಡ್ ಬ್ರದರ್ಸ ಮತ್ತು ಕಂಪನಿ

ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವದೇ ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾ ಮದುವೆ ಸಮಾರಂಭಗಳ ಸ್ಥಲಗಳಲ್ಲಿ ರಾತ್ರಿ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ, ಇದರಿಂದ ಬೆಳಕು ಹೆಚ್ಚು ಬಿದ್ದು ಖರ್ಚು ಬಹಳ ಕಡಿಮೆ ತಗಲುತ್ತದೆ. ಈ ವಿನಹಾ ಆ ದೀಪಗಳು ತಾ, ಈ ದೀಪಗಳು ಹೆಚ್ಚು [illegible] ಕ್ರಯಗಳು ಸಹ ಇವೆ.

ಬೇಕಾದವರು ಭಾಡಿಗೆಯ ದರವಾನ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಪತ್ರಾ ಬರೆದು ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷುಮಯ್ಯ ಶ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

Printed and published by Krishnarao Keshav Shenvi at his Star of Kanara Press, Kumta

Reg. No. B 1270.

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೬.

ಪತ್ರದ ವರ್ಗಣಿ –

ಕುಮಟೆಯಲ್ಲಿ ಆಗಾವು ರೂಪಾಯಿ 2-0-0.

ವ್ಹಿ ಪಿ ಅಂಚೆವೆಚ್ಚ ಸಹಿತ ರೂಪಾಯಿ 2-13-0

ಬಿಡಿ ಸಂಚಿಕೆಗೆ 0-1-0

ನರಪತಿಹಿತಕರ್ತा द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ –

ಕನ್ನಡ, ಇಂಗ್ಲಿಷ ಪ್ರಾಕ್ಟಿಕಲ ಟೈಪಿನ(೧೫ ಎಮ್‌ಅಗಲ) ೮ ಸಾಲುಗಳ ವರೆಗೆ ರೂ 1 0 0 ಅನಂತ ಪ್ರತಿ ಸಾಲಿಗೆ ೦-೨-೦.

ಹೆಚ್ಚಿನ ಗಧ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

-[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೪ ಮಾಹೆ ಜೂನ ಸನ್ ೧೯೩೦ ನೇ ಇಸವಿ.]-

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಹುರಿ, ಕಣ್ಣುರಿ ಕಿವಿಯಿಂದ ಕೀವುಸೋರುವದು ಕಿವುದ ತನ ಕಣ್ಣನೋವು, ಅಪಸ್ಮಾರ, ನಿದ್ರಾನಾಶವಿರ ವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳಲ್ಲಿ ಖಚಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಸಿ ಕೂದಲಿಗೆ ಸೌಂದರ್ಯವನ್ನು ... ಟ್ಟ ... ಹಣ್ಣಾಗುವ ಕೂದಲನ್ನು ... ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸ 1ಕ್ಕೆ 0-12-0 3ಕ್ಕೆ 2 0 0 ಪೋಸ್ಟ ಖರ್ಚು 1-3-0

ಚಂದನಾಸವ.

ಮೂತ್ರಕೃಚ್ಛ್ರ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೋಯ್ಯುವಾಗ್ಗೆ ಉರಿ ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬಿಳುವದು, ಸ್ವಪ್ನಾವಸ್ಥೆ, ಮೂತ್ರಾಘಾತ ಈ ಮೊದಲಾದ ರೋಗಗಳನ್ನು ಗುಣ ಮಾಡುತ್ತದೆ

ಬಾಟ್ಲಿ 1 ರ ಕ್ರಯ 1 8 0

ಬಾಟ್ಲಿ 3 ರ ಕ್ರಯ 4 0 0

ನಾರೀಸಖಿ.

ಹೆಂಗಸರು ಪ್ರಸೂತರಾಗುವಾಗ ಕಷ್ಟವಾಗುವದು, ಋತು ಸಮಯದಲ್ಲಿ ಅತ್ಯಲ್ಪವಾಗಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳಿಪ್ರದರ (ಬಿಳಿಸೀರೆ) ಈ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ ಬಾಟ್ಲಿಗೆ ರೂ 2/-

ಚಿನ್ ಚಿನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಜಕಂ, ಘಾಯ ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ ಗುಣ ಅಧಿಕ ಡಬ್ಬಿ ೧ ಕ್ಕೆ ೬ ಆಣೆ ಟಪಾಲು ಖರ್ಚು ಬೇರೆ ಕಾಗದ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7 ಕಂಕನಾಡಿ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE

ಮಲೇರಿಯೋಸ:— ಮಲೇರಿಯಾ, ಚಳಿಜ್ವರ ಮತ್ತು ... ದಿಂದ ಉಂಟಾಗುವ ಬಾಧೆಗಳು ಪೂರ್ಣ ... 8 ಡೋಸ್‌ನ ಬಾಟ್ಲಿ 1ಕ್ಕೆ ರೂ 1 8 1 ಡಜನಿಗೆ ರೂ 8 8 1 ಡಜನಿಗೆ ರೂ 16 0

ಮಲೇರಿನಾ:— ಮಲೇರಿಯಾದ ಮಾತ್ರೆಗಳು, ಪ್ರಯೋಗ ... ಪ್ರಯೋಜನಕಾರಿ 20 ... 100 ಮಾತ್ರೆಗಳಿಗೆ ಆಣೆ 8 ... 1 ... 8-1

ರೆನ್ಯುನೊ ಬಾಮ: ತಲೆಸಿಡಿತ, ಕರುಣವಾತ ಇತರ ... ನೋವುಗಳಿಗೆ ಕ್ರಯ ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 3 4 0

ಯೂಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ ... ಡಜನಿಗೆ ರೂ 1 10 1 ಡಜನಿಗೆ ರೂ 3

ಮಿಸ್ಟರ್ ಪಂಡಿತರ ಹನ್ನೆರಡು ಹಿತ್ತು ಔಷಧಗಳು

ಪ್ರಮಾಣ 2 4 ಔನ್ಸ್ 1 2 4

ಆ 2½ ಆ 3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇ ಇಸವಿಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಡೆದು ... ತಿಳುವಳಿಕೆ ... ದೃಷ್ಟಿಗೂ ... ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೋಡುಗಳೂ ಬಿಸಿಲಿಗೆ ಹಾಕಿಕೊಳ್ಳುವ ... ಕನ್ನಡಕಗಳೂ ಇತರ ಎಲ್ಲಾ ವಸ್ತುಗಳೂ ದೊರೆಯುವವು ... ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ ಅದರ ನಂಬ್ರವನ್ನಾಗಲಿ ನಮಗೆ ಕಳಹಿಸಿದಲ್ಲಿ ಅವರಿಗೆ ಯೋಗ್ಯ ಕನ್ನಡಕವನ್ನು ಕಳುಹಿಸಬಹುದು

ಪತ್ತೆ:—

ಮಲೇರಿಯಾನಾ ಕಂಪೆನಿ,

7. ಮಂಗಳೂರು.

ಗುರುಪಾನಾಧಿಕಔಷಧಿ.

ಗುರುಕೃಪಾ— ಬಹಳವಾದಿ ಯಾವತ್ತು ರೋಗಗಳ ಮೇಲೆ ಒಂದೇ ಖಾತ್ರಿ ಲಾಯಕು ಔಷಧ ಮ ... ರೋಗ, ಜ್ವರ, ಅತಿಸಾರ, ಸಂಗ್ರಹಣಿ, ಹೊಟ್ಟೆಕಡಿತ, ದಮ್ಮು, ಶ್ವಾಸ, ನ್ಯೂಮೋನಿಯಾ, ವಾತವಿಕಾರ, ಹಡದಬೇನೆ, ದುರ್ಗಂಧನಬೇನೆ, ತಲೆನೋವು ... ಯಾವತ್ತು ರೋಗಗಳು ಈ ... ರೋಗಗಳಿಗೆ ಈ ಔಷಧವು ಗುಣವನ್ನುಂಟು ಮಾಡುತ್ತದೆ ... ಔಷಧದ ಸಂಗಡ ... ೩ ೧ ತೊಲೆ ಬಾಟ್ಲಿಗೆ ೨ ರೂಪಾಯಿ. ಸಣ್ಣ ಬಾಟ್ಲಿಗೆ ೪ ಆಣೆ

ಜ್ವರದ ಚೂರ್ಣ:— ಪರದೇಶಿ ಮತ್ತು ಸ್ವದೇಶಿ ಜ್ವರದ ಬೇರೆ ಔಷಧಕ್ಕಿಂತ ಇದು ಉತ್ತಮ. ಆದ ... ಡಾಕ್ಟರ ಹಾಕೀಮ ವೈದ್ಯ, ಇವರು ... ನೋಡಬೇಕ ಸ್ವಾನುಭವ ಇದೇ ಸರ್ಟಿಫಿಕೇಟ. ಯಾವತ್ತು ಜ್ವರದ ಮೇಲೆ ಒಂದೇ ... ತಪ್ಪದೇ ಗುಣವಾಗುತ್ತದೆ. ಕ್ರಯ ೨ ಆಣೆ ... ಒಂದು ಪುಡಿಗೆ ೪ ಆಣೆ

ವಾತಶತ್ರು:— ಯಾವತ್ತು ಬಗೆಯ ವಾಯುವಿನ ಮೇಲೆ ೧ ತೊಲೆಗೆ ಕ್ರಯ ೧ ರೂಪಾಯಿ

ಸೂರ್ಯಪುಟಲೋಹ ಭಸ್ಮ:— ... ಲೋಹಕ್ಕಿಂತ ಇದು ಉತ್ತಮ. ಆದ ... ಆದ ಮೇಲೆ ... ೧ ತೊಲೆಗೆ ಕ್ರಯ ೨ ರೂಪಾಯಿ.

ಸುಖಶಾಂತಿ ತೈಲ:— ಈ ಎಣ್ಣೆಯು ಸುಗಂಧವಿದ್ದು ಗುಣಕಾರಕ ಇರುತ್ತದೆ. ತಲೆಗೆ ... ಲಾಗಿ ... ವಿಕಾರ ಹೋಗುತ್ತದೆ ಒಂದು ಬಾಟ್ಲಿಗೆ ೬ ಆಣೆ

ನಪುಂಸಕತ್ವಾರಿ ತೈಲ:— ನಪುಂಸಕತ ಇಂದ್ರಿಯ ಶಿಥಿಲತೆಯು ಹೋಗುತ್ತದೆ ಕಿಮ್ಮತ್ತು ೧ ತೊಲೆಗೆ ೨ ರೂಪಾಯಿ.

ಮದ್ರಾಸಿ ಸುವಾಸಿಕ ಔಷಧಿ ನಾಸಪುಡಿ – ಈ ದೇಶದೊಳಗಿನ ಯಾವತ್ತು ನಾಸಪುಡಿಕ್ಕಿಂತ ಗುಣದಲ್ಲಿ ಶ್ರೇಷ್ಠವದೆ ಕಿಮ್ಮತ ೧ ಬಾಟ್ಲಿಗೆ ೫ ಆಣೆ.

ನಮ್ಮಲ್ಲಿ ವಜ್ರಕ್ಷಾರ, ಬಾಲಗ್ರಹ ಸ್ತ್ರೀಯರ ದೋಷ ವಿನಾಶಕ, ನಾಗವಟ ವಗೈರೆ ಔಷಧಗಳು ಸಿಗುವವು ... ಪಾಕಿಂಗ ಖರ್ಚು ಬೇರೆ

ಪತ್ತೆ— ನನಲರಾಮ ಗಣೇಶರಾಮ ಕಾಪಡ

ವ ಮತ್ತು ಔಷಧ ವ್ಯಾಪಾರಿ.

ಶಹಾಪೂರ ಜಿಲ್ಹಾ ಬೆಳಗಾಂವ.

ಜವಾಬುನೋಟೀಸು.

ಹೊನ್ನಾವರ ಕಸಬಾದಲ್ಲಿರುವ ಶ್ರೀ ಪೊನ್ನಶಂಬ ಮಂಗೇಶರಾವ ಮಂಜುನಾಥಯ್ಯಾ [illegible] ಇವರ ಸನ್ನಿಧೀಗೆ—

ಬಾಲಕ ವೆಂಗೇಶರಾವ [illegible] ಇವರು ಈ ಜವಾಬುನೋಟೀಸು [illegible] ಳುವದೇನಂದರೆ—

ಬರೇ ಮೋಜಾಟೆಂದು ಇಷ್ಟು ಸರುಪ ಕೊಡೆಯುತ್ತಿದ್ದರೆಂದು ನೋಡಿ, ಮನುಷ್ಯ ಸ್ವಭಾವದ ಸ್ವಾರ್ಥಪರಾಯಣತೆಯು ಎಷ್ಟು ಅಂದವದೆಂದು ಯಾರಿಗೂ ಕಂಡುಬರುವದು ನಮ್ಮ ಜಿಲ್ಲೆಯೊಳಗೆ ರಸಯಿಯ ಪ್ರಕಾರವೇನಿಲ್ಲದಿದ್ದರೂ ಹಿಂದೊಮ್ಮೆ ಪಟೇಲರಿಂದ ಅಣೆ ಪಟ್ಟಿ ವಸೂಲು ಮಾಡಿದ್ದಕ್ಕಾಗಿ ಒಬ್ಬ ಮಾಮಲೇದಾರರಿಗೆ ಹಿಂಬಡತಿ ದೊರೆತು, ಅವರ ಶಿರಸ್ತೇದಾರರಿಗೆ ನೌಕರಿಯನ್ನೇ ಕ್ಷಮಾಪಣೆ ಮಾಡ ಬೇಕಾಯಿತು ಇಂಥ ಪ್ರಘಾತವು ಇನ್ನೇನೂ ಕಂಡುಬರುವದಿಲ್ಲ. ತಮ್ಮ ಭೆಟ್ಟಿಗೆ ಬರುವಾಗ ಒಂದು ಲಿಂಬೆ ಹಣ್ಣನ್ನು ಸಹ ತಕ್ಕೊಂಡು ಬರಬಾರದೆಂದು ಹುಕುಮು ಕೊಡುವಷ್ಟು ಪರಿಷ್ಕೃತಿಕಾರಿಗಳು ಅದನ್ನು ತಿರಸ್ಕರಿಸುತ್ತಾರೆ ಆದರೆ ಸರಬರಾಯಿ ಎಂಬ ಶಬ್ದವು ನಮ್ಮಲ್ಲಿ ಎಲ್ಲ ಕಡೆಯೂ ಪ್ರಚಲಿತವದೆ ಅದು ತೀರ ಉಪೇಕ್ಷಿತವದೆಯೋ, ಅದರ ಹೊಟ್ಟೆಯೊಳಗೆ ಅಲ್ಪಸ್ವಲ್ಪ ಪದಾರ್ಥಗಳಿದ್ದಾವೋ, ನಮಗೇನೂ

ಪತ್ತೆ ಹತ್ತುವದಿಲ್ಲ.

ಎಲ್ಲ ಖಾತೆಯ ಸಾಹೇಬರು ಮೇಲಿಂದಮೇಲೆ ಸರ್ಕಿಟಿಗೆ ಬರುತ್ತಾರೆ. ಸಮೀಪದ ಹಳ್ಳಿಗಳೊಳಗಿನ ಕೋಳಿ ಮರಿಗಳನ್ನೂ, ತತ್ತಿಗಳನ್ನೂ, ಬೇಕಾಗುವಷ್ಟು ಹಾಲನ್ನೂ, ಏನೂ ತೊಂದರೆಯಾಗದಂತೆ ಈ ಅಧಿಕಾರಿಗಳಿಗೆ ಪೂರೈಸಬೇಕೆಂದು ಅಲ್ಲಲ್ಲಿಯ ಪಟೇಲರಿಗೆ ಅಪ್ಪಣೆಯಾಗುತ್ತದೆ ಸರ್ಕೀಟು ಅಮಲದಾರರು ತಮಗೆ ಪೂರೈಸಿದ ಸಾಮಾನಿನ ಬೆಲೆಯನ್ನು ಚುಕ್ತಾ ಮಾಡಿ ಮುಂದರಿಯುತ್ತಿದ್ದರೂ, ಹಳ್ಳಿಗರು ಕೋಳಿಗಳನ್ನೂ, ತತ್ತಿಗಳನ್ನೂ, ಸ್ವಸಂತೋಷದಿಂದ ಕೊಡುವದಿಲ್ಲೆಂದು ನಾವು ಹೇಳಬಲ್ಲೆವು. ಇದ್ಯಾಕೆ? ಸಾಹೇಬರ ಬೆಲಿನ ಹಣವನ್ನು ತಕ್ಕೊಂಡವರ, ಇಲ್ಲವೇ, ಪಟೇಲರ, ಕೈಗಳು

ಜಾದುವಿದ್ಯೆಯನ್ನು

ಕಲಿತಿರುವವೋ, ಇಲ್ಲವೇ, ಇದೊಂದು ವೃಥಾ ಶಂಕೆಯೋ? ದುಡ್ಡು, ತುಪ್ಪದಂಥ ಪದಾರ್ಥವಿಲ್ಲದಿದ್ದರೂ, ಅದರೊಳಗೆ ಹೊರಗಿಂದ ಕಾಣದಂಥ ಸ್ನಿಗ್ಧತೆಯಿದೆ ಒಂದು ಕೈಯಿಂದ ಮತ್ತೊಂದು ಕೈಗೆ ಸಾಗುವಾಗ, ಅದರ ಸ್ನಿಗ್ಧತೆಯು ಅಚ್ಚ ಕೈಗಳಿಗೆ ಎಳ್ಳಷ್ಟೂ ಅಂಟಕೊಳ್ಳುವದಿಲ್ಲ ಹೊಲಸು ಕೈಗಳಿಗೆ ಎಷ್ಟು ಅಂಟಿಕೊಳ್ಳುವದೆಂಬ ಪ್ರಮಾಣವಿಲ್ಲ ಹೀಗಾಗಿ ಈ ವ್ಯಾಪಾರದೊಳಗೆ ಹೊಲಸು ಕೈಗಳಿದ್ದರೆ, ಒಂದಕ್ಕೊಂದಾಗುತ್ತದೆಂದು— ಅಲ್ಲ, ಅಲ್ಲ,

ಎರಡಕ್ಕೆ ಒಂದಾಗುತ್ತದೆಂದು

ಸಾಧಾರ, ಇಲ್ಲವೆ ನಿರಾಧಾರ ಶಂಕೆಗಳುಂಟಾಗಿವೆ, ಇಷ್ಟೊಂದು ಸ್ಥೂಲಮಾನದಿಂದ ಹೇಳಬಹುದು.

(ಮುಂದೆ ಸಾಗುವದು)

ಸ್ಫುಟ ಸೂಚನೆಗಳು.

೧ ಕಾಲಗತಿಯು ಅನುಕೂಲವಾದರೆ, ಅಶಕ್ಯವೆಂದು ಕಾಣಿಸುವ ಸಂಗತಿಗಳು ಶಕ್ಯವಾಗುತ್ತವೆ. ಉಚ್ಚ ಶಿಕ್ಷಣದೊಳಗೆ ದೇಶೀ ಭಾಷೆಗಳ ಸಮಾವೇಶವಾಗಬೇಕೆಂದು, ರಾಷ್ಟ್ರೀಯ ಶಿಕ್ಷಣದ ಸ್ವತಂತ್ರ ಮತವಾದಿಗಳ ಆಂದೋಲನವು ಬಹು ಕಾಲದಿಂದಿತ್ತು. ಈ ಮತವನ್ನು ನಮ್ಮ ಪುರಾಣಪ್ರಿಯ ಯುನಿವ್ಹರ್ಸಿಟಿಗಳು ಸ್ವೀಕರಿಸುವವೆಂದು, ನಾಲ್ಕೈದು ವರ್ಷಗಳ ಹಿಂದೆ ಹೇಳಿದರೆ, ಯಾರು ನಂಬುತ್ತಿದ್ದರು? ಆದರೆ, ನಮ್ಮ ಮುಂಬಯಿ ಯುನಿವ್ಹರ್ಸಿಟಿಯು ಹೋದ ಸಭೆಯಲ್ಲಿ ಬಿ. ಎ. ಪರೀಕ್ಷೆಯ ಐಚ್ಛಿಕ ವಿಷಯದೊಳಗೆ ದೇಶೀ ಭಾಷೆಗಳನ್ನು ಸೇರಿಸಬೇಕೆಂದು ನಿರ್ಣಯಿಸಿತು. ಇದೊಂದು ರಾಷ್ಟ್ರೀಯತನದ ಕಾಲಮಹಾತ್ಮ್ಯವೇ ಸರಿ. ಮುಂಬಯಿ ವಿಶ್ವವಿದ್ಯಾಲಯದ ಒಟ್ಟು ವ್ಯವಸ್ಥೆಯಲ್ಲಿ ದೇಶೀ ಭಾಷೆಗಳಿಗೆ ಈಗಿದ್ದಕೆ ಕೆಳಗೊಂದು ಮೇಲಿನ ದರ್ಜೆಯನ್ನು ಕೊಟ್ಟು ಅಸ್ಪೃಶ್ಯರಂತೆ ನಡೆಸುತ್ತಿದ್ದಿಲ್ಲ. ಮೊದಲು, ದಾನಶೂರರಾದ ಮಹಾನುಭಾವರು ಮರಾಠಿಯಿಂದಲೇ ಪದವೀಧರರಾಗಿದ್ದರು. ಮಧ್ಯದಲ್ಲಿ ಸಂಸ್ಕೃತ ಭಾಷೆಯು ಉಚ್ಚ ಶಿಕ್ಷಣದ ಮಂದಿರಾಂತಃಪ್ರವೇಶವನ್ನು ಮಾಡಲು, ಬ್ರಾಹ್ಮಣರ ವಸತಿಯಲ್ಲಿ ಅತಿ ಶೂದ್ರರಿದ್ದರೂ, ಶೂದ್ರರ ಗತಿಯು ಬರುವಂತೆ ದೇಶೀ ಭಾಷೆಗಳ ಹಣೆಬರಹದ ವೇಳೆ ಬಂತು. ಅಸ್ಪೃಶ್ಯತಾ ನಿವಾರಣೆಗಾಗಿ ದುಡಿಯುತ್ತಿರುವ, ಸರ ನಾರಾಯಣ ಚಂದಾವರಕರರ ಪ್ರಯತ್ನದಿಂದಲೂ, ನಾ. ಪರಾಂಜಪೆಯವರ ಪರಿಶ್ರಮದಿಂದಲೂ ದೇಶೀ ಭಾಷೆಗಳ ಅಸ್ಪೃಶ್ಯತೆಯು ಇನ್ನು ದೂರವಾದಂತಾಯಿತು. ಇದಕ್ಕಾಗಿಯ ಯುನಿವ್ಹರ್ಸಿಟಿಯನ್ನೂ, ಇಬ್ಬರೂ ಮಹಾನುಭಾವರನ್ನೂ, ಅಭಿನಂದಿಸುವೆವು. ಪ್ರಚಲಿತ ಪದ್ಧತಿಯಲ್ಲಿ ವಸ್ತುತಃ ಬಹಿಷ್ಕೃತವಾದಂತಿರುವ ದೇಶೀ ಭಾಷೆಗಳ ದುರವಸ್ಥೆಯು ಎಷ್ಟಾಗಿತ್ತೆಂದು ನಾವೆಂತು ಬಣ್ಣಿಸುವದು? ಕಾರವಾರದಲ್ಲಿ ನೆರೆದ ಮೊನ್ನಿನ ಪರಿಷತ್ತಿನಲ್ಲಿ "ಇಂಗ್ರೇಜಿಯಿಂದಲೇ ದಯಮಾಡಿ ಮಾತಾಡಿರಿ, ದೇಶೀ ಭಾಷೆಯಿಂದ ಮಾತಾಡಲಿಕ್ಕೆ ಏನೂ ಬರುವದಿಲ್ಲ" ಎಂದು ಅಧ್ಯಕ್ಷರಿಗೆ ಕೈಕಾಲು ಬಿದ್ದಂತೆ, ಬಿನ್ನೈಸುತ್ತಿದ್ದ ಕೆಲವರ ಮುಖದ ಭಂಗಿಗಳನ್ನು, ನೆರೆದ ೮೦೦ ಪ್ರತಿನಿಧಿಗಳು ಇನ್ನು ಮರೆತಿರಲಿಕ್ಕಿಲ್ಲ. ಬಹಳ ಪ್ರಯತ್ನದಿಂದ ಅಧ್ಯಕ್ಷರಿಂದ ಪರವಾನಿಗಿಯನ್ನು ಪಡೆದು, ಕಟ್ಟಕಡೆಗೆ ಅವರು ಇಂಗ್ರೇಜಿಯಿಂದಲೇ ಏನೋ ಮಾತಾಡಿ ಪಾರಾದರು. ದೇಶೀ ಭಾಷೆಯ ದುರವಸ್ಥೆಯ ಮೂರ್ತಿಮಂತ ಚಿತ್ರಗಳೇ ಇವರಾಗಿದ್ದರೆಂದು ಇನ್ನು ಹೇಳಬೇಕೇನು? ಇರಲಿ. ಇನ್ನು ಮುಂದಾದರೂ ದೇಶೀ ಭಾಷೆಗಳ ಇಂಥ ವಿಡಂಬನೆಯು ಯುನಿವ್ಹರ್ಸಿಟಿಯ ಹೊಸ ನಿರ್ಣಯದಿಂದ ದಿನೇ ದಿನೇ ಕಡಿಮೆಯಾಗಿ, ಅಲ್ಪಾವಧಿಯಲ್ಲಿ ಅದು ನಿಶ್ಶೇಷವಾಗುವದೆಂದರಿತು, ನಾವು ಅತ್ಯಾನಂದಪಡುವೆವು.

---

೨. ದೇಶೀ ಭಾಷೆಯ ಪಕ್ಷವಂತೂ ವಿಜಯಿಯಾಯಿತು. ಆದರೆ ಕಾನಡಾಜಿಲ್ಲೆಯ ವಿದ್ಯಾರ್ಥಿಗಳು ತಮ್ಮ ಬಿ. ಎ. ಪರೀಕ್ಷೆಗೆ, ಅವಮಾನಕವಾಗಿ ಸಹ ಮರಾಠಿಯನ್ನು ತಕ್ಕೊಳ್ಳಬಾರದೆಂದು ನಿರ್ಣಯವೇನಾಗಿಲ್ಲ. ಇದನ್ನು ನೋಡಿ, ನಮ್ಮಲ್ಲಿಯ ಹಿಟ್ಟಿ ವಿತಂಡವಾದಿಗಳಾದ, ರಾ. ಶ್ರೀನಿವಾಸರಾವ ಕಾಮತರವರಿಗೆ ದುಃಖವೆನಿಸುವದೆಂದು ಭಾವಿಸಿ, ಅವರಿಗೆ ನಮ್ಮ ಸಹಾನುಭೂತಿಯನ್ನು ತೋರಿಸುವೆವು. ಈ ವಿದ್ವಾಂಸರು "ಕಾನಡಾ ಜಿಲ್ಲೆಯೊಳಗೆ ಕನ್ನಡವೋ ಮರಾಠಿಯೋ?" ಎಂಬುದೊಂದು ನಿಷ್ಕಾರಣವಾದ ಕೋಲಾಹಲವನ್ನು ಎಬ್ಬಿಸಿರುವರೆಂದು ನಮ್ಮ ವಾಚಕರು ಅರಿತಿರಲಿಕ್ಕೆ ಸಾಕು. ಈ ವಿಷಯದ ಚರ್ಚೆಯನ್ನು ಅವರು ಕನ್ನಡದಿಂದಾಗಲಿ, ಮರಾಠಿಯಿಂದಾಗಲಿ ನಡೆಸದೇ, ಇಂಗ್ರೇಜಿಯಿಂದಲೇ ನಡೆಸಿರುವದು ಇದೇ ಇದರೊಳಗಿನ ಮೋಜು. ಕನ್ನಡ ಮುಲ್ಕೀ ಪರೀಕ್ಷೆಯ ತನಕ ಕಲಿತು, ಕನ್ನಡ ಭಾಷೆಯ ಕಾದಾಟವನ್ನು, ಬರೇ ವಿತಂಡೆಗೆಂದು ಯಾಕಾಗಲೊಲ್ಲದು, ಇಂಗ್ರೇಜಿಯಿಂದಲೇ ಇವರು ನಡೆಸಿದವನ್ನು ನೋಡಿ, ದೇಶೀ ಭಾಷೆಗಳ ದ್ವೇಷ ಮತ್ತು ಡಾಂಭಿಕ ಅಭಿಮಾನವನ್ನು ಇವರು ಪ್ರದರ್ಶಿಸುತ್ತಿರುವರೆಂದು ಹೇಳಿದರೆ ತಪ್ಪಾಗದು. ಮೊನ್ನಿನ ಪರಿಷತ್ತಿನಲ್ಲ್ಯಾದರೂ, ಈ ರಾಯರೇ ನಿಯಮಗಳನ್ನು ಮುರಿದು 'ಹುಶ್ ಹುಶ್' ಗೌರವದೊಡನೆ, ಒಮ್ಮೆ ಇಂಗ್ರೇಜಿಯಿಂದ ತಮ್ಮ ಭಾಷಣವನ್ನು ಪ್ರತಿಪಾದಿಸಿದರು. ಇಂಥವರಿಗೆ, ಕನ್ನಡದ ಕೊರಳಿಗೊಂದು, ಮರಾಠಿಯ ಕೊರಳಿಗೆ ಮತ್ತೊಂದು ದೊಡ್ಡ ಕಲ್ಲು ಕಟ್ಟಿ, ಅವೆರಡನ್ನೂ ಅರಬೀ ಸಮುದ್ರದಲ್ಲಿ ಮುಳುಗಿಸಿದರೆ, ದುಃಖವಾಗುವದಕ್ಕಿಂತ ತಮ್ಮ ಶಬ್ದಪ್ರಚುರ ಇಂಗ್ರಜಿ ವಿಸ್ತೀರ್ಣ ಮೈದಾನವು ತೆರವಾಯಿತೆಂದು, ಆನಂದವೇ ಆಗುವದೆಂದು ಹೇಳಬೇಕಲ್ಲವೆ!

---

೩ ಪ್ರಸ್ತುತ ವಿವಾದದೊಳಗೆ "ಮ ಖಮಸ್ತೀತಿ ಕರ್ತವ್ಯ" ಎಂಬಂತೆ ಇವರು ಬರೇ ಶಬ್ದಜಾಲವನ್ನಷ್ಟು ಹರಡಿಸುತ್ತಿರುವರು. ಕನ್ನಡ ನಾಡಿನೊಳಗಿನ ಅಲ್ಪ ಸಂಖ್ಯಾಕರಿಗೆ,— ಎಲ್ಲರಿಗೂ ಅಲ್ಲ— ಬೇಕಾದವರಿಗ ಮಾತ್ರ ಮರಾಠಿಯನ್ನು ಕಲಿಯಲಿಕ್ಕೆ ಹೆಚ್ಚು ಶಾಲೆಗಳನ್ನು ಸರಕಾರವು ತೆರೆದರೆ, ಇಲ್ಲವೇ ತೆರೆಯಿರೆಂದು ಯಾರಾದರೂ ಬೇಡಿದರೆ, ಅವರೆಲ್ಲರೂ ತಲೆತಿರುಕರು ಎಂದು ಹೇಳುವದ, ನಿಜವಾದ ತಲೆತಿರುಕತನವು. ಕನ್ನಡ ಶಾಲೆಗಳನ್ನು ಕಡಿಮೆ ಮಾಡಿರೆಂದು ಯಾರೂ ಹೇಳಿಲ್ಲ. ಅವುಗಳನ್ನಾದರೂ ಹೆಚ್ಚಿಸಬೇಕೆಂದು ಶಿಕ್ಷಣಾಧಿಕಾರಿಗಳು ಸರಕಾರದ ಬೆನ್ನು ಬಡಿಯುತ್ತಿರುವರು. ಕನ್ನಡವನ್ನು ಸುಲಿದು ಮರಾಠಿಯ ಮನೆಯನ್ನು ತುಂಬಿರಿ ಎಂದು ವಾದಿಗಳು ಎಲ್ಲಿ ಹೇಳಿರುವರು? ಎಂಬುದನ್ನು ಶ್ರೀನಿವಾಸರಾಯರು ಸೂಕ್ಷ್ಮದರ್ಶಕ ಯಂತ್ರದಿಂದ ಶೋಧಿಸಿ ಬೇಕಾದರೆ ತೋರಿಸಲಿ. ಬರೇ ಗುಲ್ಲು ನಿಷ್ಪ್ರಯೋಜಕವಾಗುವದು. ಬೇರೆ ಮಾತೃಭಾಷೆಯೆಂದು ಮರಾಠಿಯನ್ನು ಕಲಿಯಬಯಸುವ ಅಲ್ಪ ಸಂಖ್ಯಾಕರಿಗ (minority) ಕನ್ನಡ ಕಲಿಸುವ ಜುಲುಮನ್ನು ನಡೆಸುವದೆಂದರೆ, ಪೋಲಂಡದೊಳಗಿನ ಶಾಲೆಗಳೊಳಗೆ ಜರ್ಮನರು ಜರ್ಮನ ಭಾಷೆಯನ್ನೇ ಕಲಿಸುವ ಬಲಾತ್ಕಾರವನ್ನು ನಡೆಸಿದಂತಾಗುವದು. ಜರ್ಮನರಿಗೆ ಬೇರೆ ಅನ್ನರಾಗ, ನಮಗೂ ಬೇರೆ ಅನ್ನಿಸಿಕೊಂಡಂತಾಗುವದು. ಇದೇ ದೃಷ್ಟಿಯಿಂದ ಮರಾಠಿ ಬಹುಳ ಠಾಣಾ ಜಿಲ್ಲೆಯು, ಅದರ ಮೊನ್ನೆ ಜರುಗಿದ ಪರಿಷತ್ತಿನಲ್ಲಿ, ಗುಜರಾಥಿ ಜನರ ಸೌಕರ್ಯಕ್ಕೆಂದು ಹೆಚ್ಚು ಗುಜರಾಥಿ ಶಾಲೆಗಳನ್ನು ತೆರೆಯಬೇಕೆಂದು ಸರಕಾರಕ್ಕೆ ಬಿನ್ನೈಸಿದೆ. ಇದು ವ್ಯವಹಾರಿಕ ರಾಜಮಾರ್ಗವು. ಇದನ್ನು ತಿಳಿಯಲಿಕ್ಕೆ ಬರೇ ಪದವೀಧರರಾಗಿ ನಾಲ್ಕು ಪದಕ್ಕೆ ನಾರಾ, ಬಾರಾ, ಬಾರಾ, ಎಂದರೆ ಮೂವತ್ತಾರು ವರ್ಷದವರಿಗಿರುವ ಅನುಭವವು ಬೇಕು. ಇದನ್ನಷ್ಟು ಯಾವಾಗಲೂ ಎಚ್ಚರಿಕೆಂದು ರಾ. ಶ್ರೀನಿವಾಸರಾಯರಿಗೆ ಕಿವಿ ಹಿಡಿದು ಹೇಳುತ್ತೇವೆ. ಇದನ್ನು ಬೇಕಾದರೆ, ಅವರು ತಕ್ಕೊಳ್ಳಲಿ, ಬೇಡಾದರೆ, ಬಿಡಲಿ.

---

೪. ಪುಣೆಯೊಳಗಿನ ಹಿಂಗಣೆಯಲ್ಲಿ 'ಸ್ತ್ರೀ ವಿಶ್ವವಿದ್ಯಾಲಯ' ವನ್ನು ಪರಮವಿಖ್ಯಾತ ಪ್ರೊ. ಕರ್ವೆ ಮಹಾಶಯರು ಸ್ಥಾಪಿಸಿ, ಹುಡುಗಿಯರಿಗೆ ತಕ್ಕ ಅಭ್ಯಾಸ ಕ್ರಮವನ್ನು ಏರ್ಪಡಿಸಿ, ದೇಶೀ ಭಾಷೆಯಿಂದಲೇ ಅವರ ಶಿಕ್ಷಣವನ್ನು ಸಾಗಿಸುತ್ತಿರುವರು. ಶಾನಾದ ವಿದ್ಯಾರ್ಥಿನಿಗಳಿಗೆ ಪದವಿಗಳನ್ನು ಅರ್ಪಿಸುವ ಈ ವರುಷದ ಪದವೀ ದಾನವನ್ನು ಡಾ. ಚಿ. ನಾ. ಮುವಾರ ಪರಾಂಜಪೆಯವರು ಮಾಡಿದರು. ಪ್ರೊ. ಕರ್ವೆಯವರು ಕೈಕೊಂಡ ಇಂಥ ದೇಶಕಾರ್ಯವು ಪ್ರಶಸ್ತಿಯಾಗಿಲ್ಲ? ನಮ್ಮ ಸಮಾಜ ಸೇವಕರಲ್ಲಿ ಇವರಷ್ಟು ಕಾರ್ಯತತ್ಪರರು, ಉದ್ಯೋಗಶೀಲರು, ನಿಸ್ಪೃಹರು ಮತ್ಯಾರಿಲ್ಲ. ಈ ವಿದ್ಯಾಲಯದಂಥ ಮಹಾಸಂಸ್ಥೆಗೆ, ಇಷ್ಟರಿಂದಿಗೆ, ಅವರು ಎರಡು ಲಕ್ಷ ರೂಪಾಯಿಗಳಷ್ಟು ಪಂಕ್ತಿಗೆಯಿಂದ ಸಂಪಾದನೆಯನ್ನು ಮಾಡಿದ್ದರೂ, ಬೇಕಾದಷ್ಟು ಸಾಧನ ಸಾಮುಗ್ರಿಯು ಕೂಡಿಲ್ಲ. ಇದರ ಕಿಸ್ತಾರಿಗೆ ಸ್ವಾರ್ಥತ್ಯಾಗವನ್ನೇ ಅವಲಂಬಿಸಬೇಕಾಗಿದೆ. ಬಹಳೇ ಮಿತವ್ಯಯದಿಂದ ನಡೆಸಿದರೂ ವರ್ಷಕ್ಕೆ ೧೯ ಸಾವಿರ ರೂಪಾಯಿ ಖರ್ಚು ತಗಲುತ್ತದೆ. ಇದಕ್ಕೆಲ್ಲ ನೋಡಿ, ಮುಂಬಯಿಯ ಗುರ್ಜರ ಶೆಟ್ಟಿಗಳೆಂದ, ಶ್ರೀಮಂತ ಸರ ವಿಠಲದಾಸ ಠಾಕರ್ಸೇಯವರು ಅತಿ ಉದಾರತೆಯಿಂದ ಸಂಸ್ಥೆಗೆ ೧೫ ಲಕ್ಷದ ದಾನವನ್ನು ತಮ್ಮ ಒಂದೇ ಕೈಯಿಂದ ಮಾಡಿದರು. ಇಂಥ ದಾನಶೂರರಿಗೆ ಲಕ್ಷ್ಮೀ ದೇವಿಯು ಮೆಚ್ಚದರೆ, ಮತ್ಯಾರಿಗೆ ಮೆಚ್ಚುವದು? ಸ್ತ್ರೀಶಿಕ್ಷಣಕ್ಕೆ ಇಷ್ಟು ದೊಡ್ಡ ರಕಮನ್ನು ದಾನ ಮಾಡಿದವರೊಳಗೆ, ಇವರೇ ಅಗ್ರಗಣ್ಯರು. ಇವರ ೧೫ ಲಕ್ಷದೊಳಗಿಂದ ಮುಂಬಯಿಯಲ್ಲಿ, ಅಹಮ್ಮದನಗರದಲ್ಲಿ ಬರೆ ಹುಡುಗಿಯರಿಗೆಂದು ಶಾಲೆಗಳನ್ನು, ಒಂದು ಕಾಲೇಜನ್ನು, ನಡೆಸುವ ಯೋಜನೆಯಾಗುತ್ತಿದೆ. ಇದರ ಬಡ್ಡಿಯೊಳಗಿಂದ ಇಂಥ ಸಂಸ್ಥೆಗಳನ್ನು ನಡೆಸಬೇಕಾದಾಗ, ಚಾಲಕರಿಗೆ ಸ್ವಾರ್ಥತ್ಯಾಗವು ಇನ್ನೂ ತಪ್ಪದು. ನಮ್ಮಲ್ಲಿ ಇಂಥ ಒಬ್ಬೊಬ್ಬ ಧನಿಕರೂ, ಅಲ್ಲಿಯ ಶಿಕ್ಷಕರಂಥ ಸ್ವಾರ್ಥತ್ಯಾಗಿಗಳೂ ಮುಂದೆ ಬಂದರೆ, "ಹಿಂದುಳಿದ, ಹಿಂದುಳಿದ" ವೆಂಬ ನಮ್ಮ ಸಹವಾಸಿ ವಿಶೇಷಣವನ್ನು ಅಲ್ಪಾವಧಿಯಲ್ಲಿ ದಾನತ್ಯಾಗಗಳಿಂದ ತೊಳೆಯಲಿಕ್ಕಾಗುತ್ತಿತ್ತಲ್ಲವೇ! ಇರಲಿ. ದಾನಶೂರ ಸರ ವಿಠ್ಠಲದಾಸರನ್ನೂ, ಪ್ರೊ. ಕರ್ವೆ ಮಹಾಶಯರನ್ನೂ, ಅವರ ಅನಂತ ಉಪಕಾರಗಳಿಗಾಗಿ ನಾವು ನಿರಂತರ ಕೊಂಡಾಡುತ್ತಿರುವ, ಸತ್ಪುರುಷರ ಭಜನೆಯಿಂದಾದರೂ, ನಮ್ಮಲ್ಲಿ ದಾನಬುದ್ಧಿ, ತ್ಯಾಗಬುದ್ಧಿಗಳಂಥ ಸದ್ಗುಣಗಳು ಹುಟ್ಟಲಿ.

---

೫ ಹೊರಗಿಂದ ಹಿಂದುಸ್ಥಾನದೊಳಗೆ ಆಯಾತ ಮಾಡಲ್ಪಡುವ ಬೆಳ್ಳಿಗೂ, ಪರರಾಷ್ಟ್ರದ ನಾಣ್ಯಗಳಿಗೂ ಉತ್ತರಕ್ಕಿದ್ದ ಪ್ರತಿಬಂಧವು ಸರಕಾರದಿಂದ ಕಳೆದ ಜೂನ ತಾ ೩ನೇಯಿಂದ ತೆಗೆದು ಹಾಕಲ್ಪಟ್ಟಿರುವದು. ಇನ್ನು ಮುಂದೆ ಪವನುಗಳ ಕಿಮ್ಮತು ರೂಪಾಯಿ ೧೦ಕ್ಕೆ ಇಳಿಸುವದಿದ್ದವರಿಂದ, ತಾ ೩ನೇ ಜೂನದಿಂದ ಹೊಸ ಜಾಹೀರನಾಮೆ ತೆಗೆಯುವ

ವರೆಗೆ, ಬ್ರಿಟಿಷ ನಾಣ್ಯ (ಪವನು)ಗಳ ಇಲ್ಲಿ ಚಲನಿ ನಾಣ್ಯಗಳೆಂದು ಭಾವಿಸಬಾರದು. ಇದಲ್ಲದೆ, ಯಾವ್ಯಾರ ಹತ್ತರ [illegible] (ಪೌಂಡ, ಸಾವರಿನ ಅರ್ಧ ಪೌಂಡ) [illegible] ಗಳಿರುವವೋ ಅವರು ಅವುಗಳನ್ನು ಇದೇ [illegible] ಲ್ಯಾ ೧೨ ರೊಳಗಾಗಿ ಸರಕಾರಿ ಖಜಾನೆಗೆ ಕೊಟ್ಟು, ಅವುಗಳ ಬದಲಿಗೆ ಪವನಕ್ಕೆ ೧೫ ರೂಪಾಯಿಗಳಂತೆ ಬೆಳ್ಳಿಯ ನಾಣ್ಯಗಳನ್ನು [illegible] ಆ ನಂತರ [illegible] ಪವನಿಗೆ [illegible] ರೂಪಾಯಿ ೧೦ ರಂತೆ ಎಣಿಸಲ್ಪಡತಕ್ಕದ್ದು. ತಾ [illegible] ನಂತರ ಇಂಗ್ಲಂಡದಿಂದ [illegible] ಪವನುಗಳನ್ನು [illegible] ನಲ್ಲಿ [illegible] ಮಾಡಲಿಕ್ಕೆ ಪರವಾನಗಿ [illegible] ವದು [illegible] ಪವನಿಗೆ ೧೦ ರೂಪಾಯಿ ಕಿಮ್ಮತ್ತು [illegible] ಸುವ ಕಾಯಿದೆ [illegible] ಸುವ [illegible] ಅದು [illegible] ನ ತರ, ಪವನಿಗೆ ಹತ್ತು ರೂಪಾಯಿ ಕ್ರಯ ವೆಂದು ವ್ಯವಹಾರದೊಳಗೆ [illegible] ಈ [illegible] ನಗಳು [illegible] ಧಾರಣೆಯು ಇಳಿದ [illegible] ಯನೇ ಆದ [illegible]

[illegible] ಯ ರೊಪದ [illegible] ತ್ರಗಳಿಗಾಗಿದ್ದ [illegible] ವ್ರಿಸ್ತಿ ಪ್ರದೇಶಗಳಲ್ಲಿ [illegible] ತವಾಗಿದ್ದ [illegible] ದೇಶದಿಂದ [illegible] (ಅವರ [illegible]) [illegible] ಬಿಟ್ಟು ಬೆದರಿಸಹತ್ತಿದೆ. [illegible] ಪರಿಸ್ಥಿತಿಯಲ್ಲಿ ಅವರು ಯಾವ [illegible] ದವನ್ನು [illegible] ಈ ವರ್ಷ ಇಲ್ಲಿಯ [illegible] ದರೂ, ಗೋಧಿ [illegible] ಅದೇ ಕಾರಣದ [illegible] ಆಶೆ ತೋರದ್ದರಿಂದಲೂ [illegible] ಕೂಯ ನವ ಕಡಿಗೆ [illegible] ಅವರೆ ಆ ಸ್ವತಂತ್ರ [illegible] ದಿಯನ್ನು [illegible] ದಿಂದ ದಕ್ಷಿಣ [illegible] ಧಿಸ ಹವಣಿಸಲು [illegible] ಗಟ್ಟಿದಂತಾಗಿ, ಅಲ್ಲಿ [illegible] ಯವು ಏರೇರುತ್ತ ನಡೆದಿದೆ. ಇದಲ್ಲದ [illegible] ದಂಗೆಗಳಿಗಾಗಿದ್ದಲ್ಲದೆ [illegible] ಮಿತ್ರ ರಾಷ್ಟ್ರದವರಿಗೆ ಗೋಧಿಯು ಪೂರೈಕೆಗಾಗಿ [illegible] ವರು ಅಸ್ಟ್ರಿಯ [illegible] ಯಲ್ಲಿ '[illegible]' ಕಾರ್ಯವು ವಾಸ್ತವ್ಯ ಮಾಡಹತ್ತಿರುವದು. ಇಂಥ ಸ್ಥಿತಿಯಲ್ಲಿ ಭರತಖಂಡದ ತಮ್ಮ ಪ್ರಜೆಗಳ ಸೌಕರ್ಯಕ್ಕಿಂತ, ತಮ್ಮ ದೇಶದ ಸ್ವಕೀಯರ ಹಿತ್ತೆ [illegible] ಕನಿಕರ ಪಡುವ ನಮ್ಮ ಸರಕಾರವು ಗೋಧಿಯನ್ನು ಖರೇದಿ ಮಾಡಿ ಸೀಮೆಗೆ ಕಳಿಸುವದುಚಿತವೋ? ಉಚಿತವಾದರೆ, ಅದು ನಮಗೆ ಅವಶ್ಯವಿದ್ದಷ್ಟು ಕಾದಿಟ್ಟು, ಹೆಚ್ಚಿಗೆ ಇರುವಷ್ಟು ಮಾತ್ರ ನಿರ್ಗತ ಮಾಡಬಹುದು. ಅದೂ ಸಹ ಆರ್ಜೆಂಟೈನ ದೇಶದಲ್ಲಿ "ಜಾದಂ ಕರ" ವನ್ನು ಇಟ್ಟು ಧಾರಣೆಯ ಮಾಡಿಕೊಳ್ಳುವಂತೆ, ನಮ್ಮ ಸರಕಾರವು ಸಹ ಮಾಡಲು ಹಿಮ್ಮೆಟ್ಟಬಾರದು. ಅದರಿಂದ ಇಡೀ ಭರತಖಂಡದ ತಕ್ಕಮಟ್ಟಿಗೆ ಉದ್ಧಾರ ಮಾಡಿದಂತಾಗುವದು. ಹೀಗೆ ಮಾಡದೆ, ಸರಕಾರದವರೂ [illegible] ವರ್ತಕರೂ ಇದ್ದ ಗೋಧಿಯನ್ನು [illegible] ಸಿದರೆ ಅನರ್ಥವಾಗ ಬಹುದು, ಮತ್ತು ಇಲ್ಲಿಯ ವರ್ತಕರಾಗಲೀ ಗೋಧಿ ಬೆಳೆಸುವ ಒಕ್ಕಲಿಗರಾಗಲೀ ಬರೇ ಸ್ವಾರ್ಥಾಂಧರಾಗಿ ತಮ್ಮ ಗೋಧಿಯನ್ನು ಹೊರಗೆ ಚಲ್ಲಿದರೆ, ತಮ್ಮ [illegible] ಲಿನ ಮೇಲೆ ತಾವೇ ಕಲ್ಲು ಹಾಕಿಕೊಂಡಂತಾಗುವದು. ಇಷ್ಟೇ ಅಲ್ಲ, ಮಾತಿಕೆಯಂಗೀತ [illegible] ಗೋಧಿ ಮುಂತಾದ ಆಹಾರ ಧಾನ್ಯವು ಪರದೇಶಕ್ಕೆ ಹೋಗಹತ್ತಿದಾದರೆ, ಇಲ್ಲಿ ಈ ವರ್ಷ ಚಲೋ ಬೆಳೆ ಬಂದಿದ್ದರೂ ಧಾರಣೆ ಏನು ಇಳಿಯ [illegible] ತೋರುವದಿಲ್ಲ. ಯುರೋಪದ ಸಂಗಡ ಹಿಂದುಸ್ಥಾನವು ಎದ್ದಾದುದ [illegible] ಪ್ರಸಂಗವು ಬರಬಹುದು. ಆದ್ದರಿಂದ [illegible] ಆ ಬಗ್ಗೆ ನಮ್ಮ ವರಿಷ್ಠ [illegible] ನ್ಸಿಲಿನ [illegible] ಕೆಲವು ನಡಿಸುತ್ತಿರಬೇಕು. ಮತ್ತು ನಮ್ಮ ದಯಾಳು ಸರಕಾರದವರು ಹಿಂದಿ ಪ್ರಜೆಗಳ ಕಲ್ಯಾಣಕ್ಕಾಗಿ [illegible] ದೇಶದಲ್ಲಿ [illegible] ಸಹ ಹೊರಗೆ [illegible] ಮಾಡಬಾರದ [illegible] ಪ್ರತಿಬಂಧವನ್ನು ಹಾಕಲಿಕ್ಕೆ ಒತ್ತಾಯ ಪಡಿಸುವದು [illegible]

ಇಹವೃತ್ತ.

ಕುಮಟಾ— [illegible] ಪರಿಕಡೆಗೆ [illegible] ಬೀಳಲಿಕ್ಕೆ ಹತ್ತಿದರಿಂದ ಒಕ್ಕಲಿಗರು ನೆಟ್ಟಿಯ ಕೆಲಸಕ್ಕೆ ತೊಡಗಿರುವರು. ಇಷ್ಟರವರೆಗೆ ಮಳೆ [illegible] ಇಂಚು ಬಿದ್ದಿತು. [illegible] ಯೆಂಬಾಗಳ [illegible] ಳದ [illegible]

ದವಸುಮನ್ನುಗಳ [illegible] ದಾರ ನಡದ್ದೇ ಇದೆ.

[illegible] ಕಂಪನಿಗಳ [illegible] ಹುಗ್ಗತ್ತಿ [illegible] ಹೊಸ್ಟಾಪದಿಂದ [illegible] [illegible] ಒಟ್ಟು [illegible] ಗಳ ೧೦ ಪೆಟ್ಟಿಗೆ [illegible] ಇದು ಕೆಟ್ಟ [illegible] ಪ್ರಯತ್ನ [illegible] ಪೊಲೀಸರ [illegible]? [illegible] ಪ್ರಯೋಗಸ್ಥರ [illegible]

[illegible] ರಾ। ಸಾ। [illegible] ರವರ [illegible] ಗೆಂದು [illegible] ಪ್ರಸಂಗ [illegible] ದಿವಸ [illegible] ವಿವಾದಕರವು.

ಹೊನ್ನಾವರ— [illegible] ವ ಮೇಲುವದನು [illegible] ತ್ತಲಿದೆ.

[illegible] ದಿವಸ [illegible] ಒಂದು [illegible] ಸ್ಥಾಪಿಸ [illegible] ಕಲ್ಪನೆಗೆ [illegible] ತರ [illegible], ಹತ್ತತ್ತು ರೂಪಾಯಿಗಳ ಒಂದ [illegible] ಪ್ರಾಂತದ [illegible] ಎತ್ತುವ [illegible] ಯವು [illegible]

ಮುನಿಸಿಪಾಲಿಟಿಯಿಂದ [illegible] ಈ ವರ್ಷ ಪುನಃ ಮುತ್ತಿಷ್ಟು (ಒಂದಕ್ಕೆ ಎರಡು ಪಟ್ಟು) ಏರಿಸಲಿಕ್ಕೆ ನೋಟಿಸುಗಳು [illegible] ಜನರು [illegible] ಅದನ್ನು [illegible] ಪ್ರಯತ್ನ ನಡೆದದೆ.

ಹಳಿಯಾಳ— [illegible] ಬಹಳ [illegible] ಬಿಟ್ಟು ಹೊರಕಡೆ [illegible] ಯೂ [illegible] ಮಳೆಯು [illegible] ಕ್ರಮವನ್ನು [illegible] ಇಷ್ಟು [illegible] ಹೋದ [illegible] ವರ್ಷಗಳಿಂತಲೂ ಅಧಿಕವಾಗಿ ಸಂತಯು [illegible]

[illegible] ಇಟ್ಟಿದ್ದ [illegible] ಗಳು [illegible] ಮೆ॥ [illegible] ಇಂಜಿನಿಯರರ [illegible] ಬಂದುಹೋಗಿ [illegible]

ಸಹಕಾರಿ ಸೆಂಟ್ರಲ ಬೇಂಕು.

ಈ ಬೇಂಕು ಸ್ಥಾಪಿಸ [illegible] ಬರುವ ಜುಲೈ ೧೫ ನೇ [illegible] ಯಲ್ಲಿ [illegible] ಜನರು ಸಭೆಗೂಡ [illegible] ಈ ಬಗ್ಗೆ [illegible] ಹೊರ [illegible] ಅವರ ಪೂರ್ವಸಂಸ್ಕಾರಗಳು—ಸಭಾಧ್ಯಕ್ಷರ ಆರಿಸೋಣ, ಸಂಘದ ನೇಮುಗಳ ಸಮ್ಮತಿ, ಮೆಂಬರರ ಆವ್ಹಾಹನ, ಶೇರು ಧಾಂತ ವಲ ಗೊತಿಸೋಣ, ಡಾಲ್ ಬೋರ್ಡ್ [illegible] ಚುನಾವಣೆ, ವಾಲ-ರೇವುಗಳ ಪ್ರಮಾಣ, ಕಾರ್ಯಾಲಯದ ಸ್ಥಲವಿಚಾರ ವಗೈರೆ—ವಿಶಯಗಳು ಚರ್ಚಿಸಲ್ಪಡುವವು. ಈ ಸಭೆಗೆ ಧಾರವಾಡದಿಂದ ಮುದ್ದಾಂ ದಕ್ಷಿಣಭಾಗದ ಅಸಿ। ರಜಿಸ್ತ್ರಾರರವರ ಬರತಕ್ಕವರಿದ್ದಾರೆಂದು ತಿಳಿಯುತ್ತದೆ. ಆದ್ದರಿಂದ ಈ ಜಿಲ್ಲೆಯ ಎಲ್ಲ ಧನಿಕರು ಆ ಸಭೆಗೆ ದಯಮಾಡಿ ಚಿತ್ತೈಸಬೇಕಾಗಿ ತಿಳಿಯ ರಾ। ಸಾ। ಪಂಡಿತರು ಅಪೇಕ್ಷಿಸುತ್ತಾರೆ.

To,
The Editor Kanara News, Kumta
Sir

Pressed by my numerous friends, I have resoloved to stand as a Candidate for Kanara, in the ensuing election of the Bombay Legistative Council I belong to the advanced party and have accepted the Congress creed. I have always taken an active part in matters social and economical I solemnly pledge myself to discharge the sacred trust, the voters may repose on me

Sd/ Ramachandra Narayan Pala,
Sirsi

उत्तरादाखल जाहीरविनंती.

रा. रा. कानडावृत्तकर्ते यास —

सलाम वि वि. येत्या कौन्सिल निवडणुकींत दक्षिणभागच्या मुसलमानांतर्फे मेंबर होण्याकरिता मी उभे राहावे अशी सूचना आपल्या पत्राच्या ता. १७ जूनच्या अंकात 'एक मुसलमान नागरिक' या सहीनें प्रसिद्ध झालेली पाहिली. तशीच आग्रहाची सूचना खासगी रीतीनेहि माझ्या कित्येक मित्रांनी केल्यावरून, त्याप्रमाणे दक्षिणभागातर्फे तीनापैकीं एक मुसलमान मेंबर होण्याकरिता, उमेदवार ह्मणून उभें राहण्याचे मी ठरविले असल्याचे, परवाच्या 'विचारी' च्या अंकात मी जाहीर केलेंच आहे. तरी पण, मूळसूचना आपल्या पत्रातून प्रसिद्ध झाल्यामुळें, हे पत्र आपल्याकडे पाठवीत आहे. माझ्या अल्पशक्तीप्रमाणे माझ्या बांधवांची शक्य ती सेवा माझ्या हातून घडण्याची मला इष्ट अशी ही एक नवीन संधी मिळत आहे, या दृष्टीनेंच मी या जागेकरिता उभा राहतो आहे, हे लक्ष्यात घेऊन कानडा जिल्ह्यांतील व दक्षिणभागच्या इतर जिल्ह्यांतीलहि सर्व मुसलमान मतदारांनीं मला आपली मतें देऊन, मी निवडून येण्यास सहाय्य करावें अशी सविनय विनंती आहे.

कारवार
गुरुवार, ता. २४ ६-२०

सर्वांचा नम्र,—
शेक आदम शेक अबदुल करीम
संपादक 'विचारी'
डिस्ट्रिक्ट लोकलबोर्ड मेंबर वगैरे

ಇಂಗ್ಲೀಷ ಸರಕಾರದ ಕಾಯಿದೆಯು ಯಂತ್ರದಂತೆ ನಡಿಸಲ್ಪಡುತ್ತದೆಂಬಬಗ್ಗೆ ಒಂದು ಉದಾಹರಣೆ.

ರಾ. ರಾ. ಕಾನಡಾವೃತ್ತ ಕರ್ತರಿಗೆ,

ಮಧುಲಿಂಗ ವಿಶ್ವೇಶ್ವರ ಮತ್ತು ಸುಬ್ಬಾ ನಾರಾಯಣವರು ಇಬ್ಬರು. ಶಿರ್ಸಿಯಿಂದ ಎಲ್ಲಾಪುರಕ್ಕೆ ಹೋಗತಕ್ಕ ರಸ್ತೆಯ ಮೇಲೆ ಇರುವ ಕಾನಸೂರ ಹಳ್ಳದಮೇಲೆ ತಮ್ಮ ಗಾಡಿಗಳನ್ನು ಬಿಟ್ಟು, ಹಳ್ಳದ ದಂಡೆಯಮೇಲೆ ಅಡಿಗೆ ಮಾಡಿದರು. ಅಗ್ಗ ಫೋರೆಸ್ಟ ಖಾತೆಯವರು ಅವರು ಅಲ್ಲಿ ಅಡಿಗೇಮಾಡಿದ ಬಗ್ಗೆ ಪಂಚನಾಮೆ ಮಾಡಿ ಗಾಡಿಯೊಳಗಿನ ಸಾಧಾರಣ ೨೦ ಖಾಲಿ ಡಬ್ಬಿಗಳನ್ನು ಜಪ್ತಮಾಡಿದರು. ಆಮೇಲೆ ಸದ್ರಿ ಗಾಡಿಕಾರರಿಂದ ಒಬ್ಬರಿಂದ ೩, ಒಬ್ಬರಿಂದ ೪ ರೂಪಾಯಿ ಕಂಪನ್ಸೇಶನ್ನ ವಸೂಲಿಕರಿ ತ. ಒಡಪಿ ಸುಡಲಿಲ್ಲಾ ಹೀಗಿರುತ್ತಾ ದಂಡ ವಸೂಲ್ಪಟ್ಟಿತು. ಇವರು ಪರಸ್ಥಳದವರು. ಇವರಿಗೆ ಫಾರೆಸ್ಟ ಖಾತೆಯ ನೇಮ ಗೊತ್ತಿಲ್ಲಾದಮೇಲೆ, ಇವರಲ್ಲಿ ಆವರ ತಪ್ಪು ಯಾವದು? ಫೋರೆಸ್ಟಖಾತೆಯವರು ಜಾಗೆ ಗೊತ್ತುಮಾಡಿರಬಹುದು. ಬರೆ ಅದರೆ ಆವರು ಗೊತ್ತುಮಾಡಿದ ಜಾಗ್ಗೆ, ಈ ಪರಸ್ಥಳದವರು ಹ್ಯಾಗೆ ಗೊತ್ತಾಗಬೇಕು? ಹಳ್ಳದ ವತ್ತಿನ ಅಡಗಿ ಮಾಡಿದ್ದು ಫೋರೆಸ್ಟಖಾತೆಯವರ ನೇಮದ ವಿರುದ್ಧವಾಗಿಯೂ ಆಡವಿ ಸುಡಲಿಲ್ಲಾ ಹೀಗಿರುತ್ತ ದಂಡವಾದ ಮೇಲೆ, ಇದಕ್ಕೆ ಕಾಯಿದೆಯಂತ ಹೇಳಬೇಕೋ, ಯಾ ಇದಕ್ಕೆ ಯಂತ್ರವೆಂತ ಹೇಳಬೇಕೋ? ಇದರ ವಿಚಾರ ವಾಚಕರೇ, ಮಾಡಬೇಕು. ಆದರೆ ಇಂಥ ಕಾಯಿದ ಯಿಂದ ಪ್ರಜೆಗಳಿಗೆ ಹ್ಯಾಗೆ ತ್ರಾಸ ಆಗುತ್ತದೆಂಬುದು ತಿಳಿಯುವಂತೆ ಆದೆ ಮತ್ತು ಇದು ವಿಲಕ್ಷಣ ಶಿಸ್ತಿನ ಹ್ಯಾಗೆ ಹೊಂದುತ್ತದೆ, ನೋಡಿರಿ ಪಂಚನಾಮೆ ಮಾಡಿದರೂ, ಡಬ್ಬಿಗಳು ಜಪ್ತಮಾಡುವ ಕಾರಣ ಏನಿತ್ತು ಅವರು ಬೆಲ್ಲ ತರಲಿಕ್ಕೆ ಹೋಗತಕ್ಕವ ರಾಗಿದ್ದರು. ಅದು ಹರಕತ್ತು ಆಯಿತು ಮತ್ತು ಡಬ್ಬಿಗಳು ಪರತ ಸಿಗಲಿಲ್ಲ. ಡಬ್ಬಿ ಯಾವ ಆಧಾರದಿಂದ ಜಪ್ತಿಮಾಡಿದರು? ಗಾಡಿ ಯಾಕೆ ಜಪ್ತಿಮಾಡಲಿಲ್ಲ? ಡಬ್ಬಿ ಜಪ್ತಿ ಮಾಡದಿದ್ದರೆ, ಸದ್ರಿಯವರಮೇಲ ಕೆಲಸ ನಡಿಸಲಿಕ್ಕೆ ಏನು ಅಡ್ಡಿ ಬರುತ್ತಿತ್ತು? ಇದರ ಮೇಲಿಂದ ಫೋರೆಸ್ಟ ನೌಕರರ ಹೇತು ತಿಳಿಯುವಂತೆ ಆದೆ. ನೋಡಿರಿ ಕಾನಡಾ ಜಿಲ್ಲೆಯ ಪ್ರಜೆಗಳಿಗೆ ಫೋರೆಸ್ಟಖಾತೆಯಿಂದ ಹ್ಯಾಗೆ ತ್ರಾಸವಾಗುತ್ತದೆ

ತಾ ೨೮-೬-೨೦ ಒಬ್ಬ ರಯತ

[३ऱ्या पाना वरून पुढे चालू]

वाटण्याच्या पुस्तकावर देशील इंग्रजी चिठ्ठ्या लावण्यात आलेल्या अमल्यावरून, मुला-मुलींना काहीं बोध होण्याची भितीच नको. या सभेत श्रीयुत बाव यानीं लहानसे भाषण करून असें सुचविलें कीं, शाळेत स्मारका दाखल सा. व दाइाभ ई,ी व के 'शाताबाई. याच्या तसबिरी ठेवण्यात यावेत्या तसें होणे इष्ट आहे पण सदर बाईच्या स्मृत्यर्थ वाटण्यात येणाऱ्या या पुस्तकावर स्युनासि पालिटीकडून त्याच्या नावाचा निर्देशाहि कर ण्यात येत नाही, या प्रकाराला काय ह्मणावे? केवळ हा अनुदारपणा, किंवा गैरसावध पणाची चूक! बक्षिस पुस्तकावरील चिठ्ठी देशीभाषेत छापविण्यात..आल्यास त्याचा मुलाच्या मनावर किती इष्ट परिणाम होतो, याची कल्पना म्यु आविकाऱ्यास आहे काय? कन्या शाळेच्या बक्षिसाकरिता "शाताबाई विठ्ठलराव कायकिणी बक्षिस पुस्तक" असा निर्देशकरून मराठींत चिठ्ठ्या छापवून घेऊन त्या पुस्तकावर लावणें आवश्यक नव्हते काय? नाही ह्मणायाला, सदर पुस्तकावर लावलेल्या चिठ्ठ्यावर (देणगी देणाऱ्या बाईचें नाव नसल्यासाहि) म्यु प्रेसिडेंट दि ब. पद्मेमडो म्यू. चो चेरमन मि. बेंद्रकर यांचीं नांवें सुशोभित अक्षरात छापण्यात काहीं कमतरता यालेली नाहीं. ते कसेंहि असो, आपल्या मातुश्रींची पुण्यस्मृति मुलीच्या मनात जागृत राहून इष्ट हेतु साध्य होण्या करिता, श्रीयुत मंजुनाथराव कायकिणी तरी ह्या गोष्टीत लक्ष्य घालून, पुस्तकावर योमित स्मारकाचे नाव या पुढें राहील अशी व्यवस्था कारितील अशी आशा आहे

लिहावयाच्या गोष्टी पुष्कळ आहेत पण एवढ्यावरच आटोपतों. आपला

बातमीदार

Kanara News Security Fund.

(ಕಾನಡಾವೃತ್ತದ ಜಾಮಿನಾಕಿ ಫಂಡಿಗೆ ಮುಂಬಯಿಯಲ್ಲಿ ವರಗಣಿ ಕೊಟ್ಟವರ ಹೆಸರುಗಳು)

Names of Bombay subscribers to the Fund with the subscriptions.

Through M S G Warty M A (Bombay) —

Names	Rs.	A.	P.
R M Wagle	11	0	0
K Y Wagle	20	0	0
Gambhir Brothers	1	0	0
S G Faterpekar	1	0	0
Chitrapur Sarasvat	10	0	0
S P P	2	0	0
G S Prabhu	* 5	0	0
M S Kamat	1	0	0
R S Murdeshwar	1	0	0
G S Gudal	6	0	0
M. Shankarrao	1	0	0
P G Alwaris	1	0	0
P G Patnekar	1	0	0
S H Narhona	1	0	0
S N Prabhu	1	0	0
R V Balgi	5	0	0
T W Balgi	5	0	0
P S Goli	5	0	0
X Y Z	1	0	0
B M Nagarkatte	1	0	0
Louis Cotinho	1	0	0
M V Haldipur	* 7	0	0
B P Wagle	0	2	0
D S Wagle	0	2	0
V P Ramani	2	0	0
H L Rao	1	0	0
Justice (Y)	1	0	0
M A Wagh	1	0	0
D P Wagh	1	0	0
G Y Wagle	1	0	0
S S Kasbekar	0	8	0
B V Gaitonde	0	8	0
X Y Z	1	0	0
Mhabaleshwar Wagle	0	8	0
V R Kasbekar	1	0	0
A Sympathiser	1	0	0
A Sympathiser	0	4	0
S M Mitabandar	1	0	0
B S Mitabandar	1	0	0
S M Nadkarni	0	8	0
Y S Aras	0	8	0
S G Shirali	0	8	0
Suktankar	0	4	0
G B Sohoni	1	0	0
N S Nadkarni	1	0	0
M G Telang	0	8	0
A S Goli	5	0	0
Nagesh L Kamat	2	0	0
S V Shanbhag	2	0	0
V L Goli	1	0	0
B P Rabadia	1	0	0
N U Tengu	1	0	0
A S K	1	0	0
N R Naik	1	0	0
K M Naik	1	0	0
R S Kamat	1	0	0
D S Pai	1	0	0
H K S	10	0	0
N G S	* 10	0	0
A Kanarite	1	0	0
R D S	1	0	0
Chikarmane	1	0	0
Golikeri	1	0	0
Kagal	1	0	0
Mankikar	0	8	0
N P Nadkarni	1	0	0
D N Wagh	1	0	0
V R Muzumdar	0	8	0
S M Kulkarni	0	8	0
Y S Kasbekar	0	8	0
V M Gaitonde	1	0	0
D K Desai	0	8	0

Total
Donations 121-12-0, Loans 33-0-0 } 154-12-0

(*To be continued*)

ಕುಮಟೆ ಪೇಟೆ ಧಾರಣೆ.

ಜಿನಸು	ದರ
ರಂಗೂನ ಪೆ ಗೋಣಿ೧ಕ್ಕೆ	೧೩— –॥
ಕುಚ್ಚು ಗೆಅಕ್ಕಿ ಪಾನಗಿ ..	೮।
ರಾಗಿ ನಿಜಕ್ಕೆ .	೧೧।— ೨
ಗೋದಿ ಗೋಣಿ ೧ಕ್ಕೆ ..	೧ —೨೬
ಹುರುಳಿ ನಿಜ „	೧೬—೧೬।
ಕಡಲೆ ನಿಜ ೧ಕ್ಕೆ	೧೬—೬॥
ತೊಗರಿಬೇಳೆ ಗೋಣಿ ೧ಕ್ಕೆ	೨೨ —೨೦
ಹೆಸರು ಬೇಳೆ ,	೧೩—೩
ಮೋರಿಸ ಸಕ್ಕರೆ ಮಣ „	೧೦—೩॥
ಮೆಣಸಿನ ಕಾಯಿ ಮಣ ,	೪—೧೦
ಹಳೇಣ್ಣೆ ಮಣ	೧೦।
ಕೊಬ್ರಿ ಎಣ್ಣೆ ಮಣ .	೧೧।
ಕೊತ್ತಂಬರಿ ಗೋಣಿ „	೧೭ —೧೬
ಉಪ್ಪು ಗೋಣಿ „	೬ ೧೦
ಕೆರಸಿನ ಸೂರ್ಯ ,	೬ ೩
„ ಹಂಸ „	೨ ೨

ಮುಂಬೈಗಿಂತ, ಸೋಯಿ!

ತ್ವರೆಮಾಡಿರಿ! ಬಿಡಬೇಡಿರಿ!!

1 ರೋಡಿಯಂ ರಿಸ್ಟ್ ವಾಚ ಸಿಲಿಂಡರ ಗ್ಯಾರಂಟಿ ವರ್ಷ 2 ಕೈಗೆ ಕಟ್ಟುವ ಪಟ್ಟಿಸಹಿತ ಕಿಮ್ಮತ್ 1 ಕ್ಕೆ 6-0-0

2 ರೆಡಿಯಂ ರಿಸ್ಟ ವಾಚ ಲಿವ್ಹರ, ಸ್ಕ್ರೂಬೆಲನ್ಸ 15 ಜುವೆಲ್ಸ (ಕೆಂಪು) ಇಷ್ಟು ಗ್ಯಾರಂಟಿ 10 ವರ್ಷ ಪಟ್ಟಿ ಸಹಿತ, 1 ಕ್ಕೆ 20-0-0 ಪದ್ರಿ ಲೆ ಡಿಯಂ ಇದ್ದ ವಾಚುಗಳು ಹಗಲು ಕಾಣು ವಂತೆ ರಾತ್ರಿಯೂ ಕಾಣುವದು ಬಹಳ ಆಶ್ಚರ್ಯ ಕ

3 ಡಾಯಮ್ಮಂಡ ಪಾಕೆಟ, ಲಿವ್ಹರವಾಚ, ಗ್ಯಾರಂಟಿ, ವರ್ಷ 4 ಕಿಮ್ಮತ್ತು 1 ಕ್ಕೆ 9-8-0

4 ಕ ಹಿಂದಿ ರ್ ವಾಚ, ನಾವಪಾನು ಗಿಲ್ಟ ಲಿವ್ಹರ 10 ಜ ವೆಲ್ಸ, ಸ್ಕ್ರೂಬೆಲನ್ಸ ಗ್ಯಾರಂಟಿವರ್ಷ ೯ ಕಿಮ್ಮತ್ 1 ಕ್ಕೆ 12-8-0 ಕಿಮ್ಮತ್ತಿನ ಶಿವಾಯಿ ಇ. ಬೇರೆ ವ್ಯಾಪಾರಸ್ಥರಿಗೆ ಹೋ ಲಸೇಲ ದರ ಬೇರೆ ತಿಳಿಸುವೆವು

ವಿಳಾಸ:— ಜೋಶಿ, ವಾಚಕಂಪನಿ.

ಪೋಸ್ಟ— ಶಿರ್ಶಿ ಉತ್ತರ ಕಾನಡಾ.

ಜಗತ್ಪ್ರಸಿದ್ಧ ಮಿತ್ರ ದಾಸ ಕ!! ಬಹುವಸವಸಾರಕ

ಮುಖ ಜೀವನಾಮೃತ.

ಈ ಔಷಧವು ಹಲ್ಲು ಕಿಳತ, ಹಲ್ಲ ನೋವು ವ ಹಲ್ಲು ಒಳಗಾಡ ವ ಹ ಲ್ಲಿನಿಂದ ರಕ್ತ ವ ಕೀವು ಸೋ ರುವ ವೊದಲ್ಲಿ ಬೀಳುವ ದು ಗಳಿಂದ ಈ ಎಲ್ಲಾ ರೋಗಗಳಿಗೆ ರಾಮ ಬಾಣ ಔಷಧ ಇದಲ್ಲದೆ ಬಾಲಗ್ರಹ ಎಲ್ಲಾ ತರದ ಜ್ವರ ತಲೆನೋ ವು ಕಣ್ಣು ಜೊಟ್ಟೆಕಾಮಿಲೀ ನಳಗ ಳ ಪ್ಲೇಗ ಕಾಲರಾ, ಗಂಟಲ ಗ ಮತ್ತು ವಿಷಕಾರಕ ಪ್ರಾಣಿಗಳು ಕ ಚ್ಚಿದ ಕಿಳತ, ಬಾಳಂತಿಯರಿಗೆ ಉ ಪಯೋಗಿಸಿದರೆ ಪ ೨೦ ಪ್ರಕಾರ ವೇ ಕಡೆರೋಗಕ್ಕೆ ಗುಣ

ಕ್ರಯ ಬಾಟ್ಲಿ ೧ಕ್ಕೆ ಕ್ರಮ ೦-೧೨-೦

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದಿಕ ಕಂಪನಿ,

ಕುಮಟಾ (ಎಸ್ ಕೆನರಾ)

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ವಿಕ್ಟಾಂಜನ.— ಹಿಂದ ಸ್ಥಾನದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇಸೆ ಪಾರಿ ವಾಲಾಮು ಇದರ ಉಪಯೋಗದಿಂದ ತಲೆನೋವು ಶಿಡಿಕ, ಶಿರೋಭಾಗ ಗಂಟು ಗಂಟನೋವು, ಎದೆನೋವು, ಸೊಂಟದ ನೋವು ಜಕಂ, ಉಳುಕು ವಾತ, ಸಂಧಿವಾತ ಅರ್ಧಾಂಗವಾಯು ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮ ಬಾಣದಂತೆ ಗುಣಪಡಿಸುತ್ತದೆ. ಬಾಟ್ಲಿ 1 ಕ್ಕೆ 0 8 0 12 ಕ್ಕೆ 5-0-0

2 ಮಹಾಮದನ ಕಾಮೇಶ್ವರಿ ಲೇಹ — ಒಹು ಕ್ರಿಯ ಪಟ್ಟ ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ ಎದೆನೋವ ಮಲಬದ್ಧತೆ ಶರೀರಗಳ ಪಾತದಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ ಮತ ತುಷ್ಟಿ ಮತ್ತು ಮುಖದಲ್ಲಿ ಕಾಂತಿ ಹೊಳೆ ವದ 0 ಕಲ ಸೇವಿಸ ವ ಲೇಹ ಡಬ್ಬಿ 1 ಕ್ಕೆ 3-0-0

3 ಮಹಾಜ್ವರಾಂಕುಶ — (ಸ ತ್ರಿ ಗುಣ) ಇದ ಪ್ರಾಕ್ಸಾಂಜ ಸಿದ್ಧನಿಯಾ ದಿವಸಕ್ಕೊಮ್ಮೆ ದ್ವಿತೀಯ ತೃತೀಯ , ಚಾತುರ್ಥಿಕ ಜ್ವರಗಳು ಪಾಳಿ ರಾಜ ಎದ ಬಾಟ್ಲಿ 1 ಕ್ಕೆ 0-8-0

4 ಬಾಲಗ್ರಹ ಗುಟಿಕೆ — ಕೂಸು ಮಕ್ಕಳ ಅವಸ್ಥೆಗಳಿಗೆ ರಾಮಬಾಣ ಬಾಟ್ಲಿ 1 ಕ್ಕೆ 0 10 0

5 ಮಸಕುಟೀರ ಗುಟಿಕೆ ಇದು ಮಾಸಿ ಸಿದ್ಧ ಔಷದಿ ಒಂದೇ ಗಳಿಗೆಯಿಂದ ಕಫ ಉಬ್ಬಸ ಕೆಮ್ಮು ಇವು ಗುಣ ಬಾಟ್ಲಿ 1 ಕ್ಕೆ ಕ್ರಯ 0 10 0

6 ಮೇಹ ಕುಠಾರ — ಮಹಿಳ್ಳಕ್ಕಿ ಪ್ರೌಢ ಆಸ್ಫಲಿ ತ್ಯಾಣ ವರಹೋಗ ವಾಗ್ಯೆ ಉರಿಯ ನ್ನು ಕೀವನ್ನು ಕೂಡಲ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡ ವದ ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಕೊಡುತ್ತದೆ 14 ದಿವಸದ ಔಷದಿ ಕ್ರಯ ರೂ 2

7 ಅಶೋಕಾರಿಷ್ಟ ವ ತ್ತು ಮಾತ್ರೆ – ಇದರ ಸೇವನೆಯಿಂದ ಜ್ವರ, ರಕ್ತ ಪಿತ್ತ ಅರುಚಿ ಸೂತಕದ ಸಮಯದಲ್ಲಿ ಕಿಬ್ಬೊಟ್ಟೆನೋವು, ಸೊಂಟ ನೋವು ತಿಂಗಳಿಗೆ 2 ಸಲ ಮುಟ್ಟಾಗುವದು ಸೆರಗಿನ ರಕ್ತಸ್ರಾವ, ಬಿಳಿ ಹೋಗುವದು ಇದ ಲ್ಲದೆ ರೋಗಗಳನ್ನು ನಿವಾರಿಸಿ ಗರ್ಭಕೋಶವನ್ನು ಸರಿಪಡಿಸುತ್ತದೆ 1 ಬಾಟ್ಲಿ ಔಷಧಕ್ಕೆ 1 ಬಾಟ್ಲಿ ಮಾತ್ರೆಗಳಿಗೂ 2-0-0

8 ಶಿರಸ್ಸಿನ ಮತ್ತು ಕೂದಲಿನ ರೋಗ ಗಳನ್ನು ಪರಿಹರಿಸಿ, ಕೂದಲನ್ನು ಚನ್ನಾಗಿ ಬೆಳೆಯಿಸು ವದ ಸ್ಮರಣಶಕ್ತಿಯನ್ನ ಹೆಚ್ಚಿಸುವದು ಸುಖ ನಿದ್ರೆ ಕೊಡ ವದ ಶೀತಳವೂ ಸುವಾಸಿಕವೂ ಆಗಿದೆ. 10 ತೊಲೆ ಬಾಟ್ಲಿಗೆ, 0-12-0 3 ಬಾಟ್ಲಿಗಳಿಗೆ 2 0 0

9 ಕರ್ಣರೋಗಾಂತಕ ತೈಲ್ಯ ಕಿವಿಯ ಎಲ್ಲಾ ನಮೂನೆಯ ರೋಗಗಳ ಮೇಲಿನ ದಿವ್ಯ ಔಷದಿ ಬಾಟ್ಲಿ 1 ಕ್ಕೆ 0-12-0

10 ಗರ್ಭಕಾರದ ಮಲಾಮು ಹುಳಕ ಮೇ ಹ ಗಳು, ಗಜಕರ್ಣ ದದ್ದು, ಕಜ ಮೊದಲಾದ ಚರ್ಮರೋಗಗಳು ಒಂದರಿಂದ 3 ದಿವಸಗಳಲ್ಲಿ ಗುಣ ವಾಗುತ್ತವೆ ಬಾಟ್ಲಿ 1 ಕ್ಕೆ 0-6-0 3 ಬಾಟ್ಲಿಗಳಿಗೆ 1-0-0

11 ದಂತಮಂಜನ . ಡಬ್ಬಿ 1 ಕ್ಕೆ 0-3-0 6 ಡಬ್ಬಿಗಳಿಗೆ 1-0-0

ಎಮ್. ಗಣಪಯ್ಯಾ ಎಂಡ ಸನ್

ನೆಟಿವ ಡ್ರಗ್ಗಿಸ್ಟ್ ರಥಬೀದಿ

ಮಂಗಳೂರ ದ ಕ

ಹೊಸ ಶೋಧ! *ಓಂ* ಹೊಸ ಶೋಧ!

ಗುಣ ಬಾರದಿದ್ದರೆ ಹಣಮರಳು

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಜೊತೆ ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಸೂಚನೆ ಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ವಿಟ್ಲುತ್ತದ ಸ್ವಪ್ನಾವಸಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಸೆಲ್ಲ ವಿಕ ರಗಳು ಗುಣವಾಗುವವು ಮಲಶುದ್ಧಿಯಾಗಿ ಚ ನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದದೂಷಿತ ವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣಪ್ರಾ ಪ್ತವಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆಕೊಂಡುನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧ಳ ತೊಲೆಯ ಡಬ್ಬಿಗೆ ರೂ ೧ ೧೦೦ ಣೆ ೩ ಡಬ್ಬಿಗಳಿಗೆ ೪ ರೂ ೮ ಆಣೆ ೧೨ ಡ ಬ್ಬಿಗಳಿಗೆ ೧೫ ರು ಮೇಲ ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನಡದಿಂದ ಸ್ಪಷ್ಟವಾಗಿ ಶುದ್ಧ ಬರೆಯಬೇಕು.

ಪತ್ತೆ—ಸ್ಟ್ರಿಂಗರ್ ಬ್ರದರ್ಸ ಮತ್ತು ಕಂಪನಿ

ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವದೇ ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾ ಮದುವೆ ಸಮಾರಂಭಗಳ ಲ್ಲಿಯೂ ರಾತ್ರಿ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ, ಇದರಿಂದ ಬೆಳಕು ಹೆಚ್ಚು ಬಿದ್ದು ಖರ್ಚು ಸಹ ಕಡಿಮೆ ತಗಲುತ್ತದೆ ಈ ದಿವಸಾ ಅ ದೀಪಗಳು ತಾ, ಈ ದೀಪಗಳು ಹೆಚ್ಚು ಎಂಬ ತಾಪ ತ್ರಯಗಳು ಸಹ ಇಲ್ಲ.

ಬೇಕಾದವರು ಭಾಡಿಗೆಯ ದರವಾರ ವಗ್ಯೆರೆ ವಿಷಯ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಯ್ಯ ಶ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

Printed and published by Krishnarao Keshav Shenvi, at his Star of Kanara Press Kumta

Reg. No. B 1270.

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೮.

ಪತ್ರದ ವರ್ಗಣಿ:-

ಪಟ್ಟಿಯಲ್ಲಿ ಅಗಾವು ರೂಪಾಯಿ 2-0-0.

ಹಿಂದಿ ಅಂಚೆವೆಚ್ಚ ಸೇರಿ ರೂಪಾಯಿ 2-13-0

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ.-

ಕನ್ನಡ, ಇಂಗ್ಲಿಷ ಪ್ರಾಕಾಶ್ಯದ(೧೫ ಎಮ್‌ಗಳಷ್ಟು) ೫ ಸಾಲುಗಳ ವರೆಗೆ ರೂ. 1-0-0.

ಅನಂತರ ಪ್ರತಿ ಸಾಲಿಗೆ ೦-೩-೦.

ಪತ್ರಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೮ ಮಾಹೆ ಜುಲೈ ಸನ್ ೧೯೨೦ ನೇ ಇಸವಿ.

ಮನೋಲ್ಲಾಸಿನಿ ತೈಲ.

ನೋವು, ತಲೆ ತಿರುಗುವದು, ತಲೆಸೂರಿ, ಕಣ್ಣಿನಿಂದ ನೀರುಸೋರುವದು ಕಿವುಡುತನ, ನೋವು, ಅಪಸ್ಮಾರ, ನಿದ್ರೆಬಾರದಿರುವದು, ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಗುಣವಾಗುತ್ತದೆ, ಉದುರುವ ಕೂದಲ ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ತಲೆಗೆ ಸೌಂದರ್ಯವನ್ನೂ ಕೊಡುವದಲ್ಲದೆ ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆ 1ಕ್ಕೆ 0-12-0, 3 ಕ್ಕೆ 2-0 0

ದೊಡ್ಡ ಸೀಸಕ್ಕೆ 1-8-0.

ಚಂಧನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರವದು, ಸ್ವಪ್ನಾವಸ್ಥೆ, ಮೂಂತಾದ ಈ ಮೇಹ ರೋಗಗಳನ್ನು ಗುಣ ಮಾಡುತ್ತದೆ

ಬಾಟ್ಲೆ 1 ರ ಕ್ರಯ 1 8-0.

ಬಾಟ್ಲೆ 3 ರ ಕ್ರಯ 4 0 0.

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋದರ್ಶನದಲ್ಲಿ ಅತ್ಯಲ್ಪವಾಗಿ ಅತಿರೇಕವಾಗಲಿ ರಕ್ತ ಸ್ರಾವವಾಗುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃದ್ರೋಗ, ಬಿಳಿಪ್ರದರ ಬಿಳಿಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ. 2/-

ಚಿನ್ ಚಿನ್ ಬಾಮು.

ಎಲ್ಲಾ ತರದ ನೋವು, ತಲೆನೋವು, ಚಳಕು, ಗಾಯ ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಅಧಿಕ ಡಬ್ಬಿ ೧ ಕ್ಕೆ ೩ ಆಣೆ ೬ ೩. ಅಂಚಾಯದ.

ನಿಗೆ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7 ಕುಂಕನಾಡಿ, ದಕ್ಷಿಣ ಕಾನಡಾ.

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೆಜ್ವರ, ಚಳಿಜ್ವರ ಮತ್ತು ಇದರಿಂದುಂಟಾಗುವ ಜಾಢ್ಯಗಳು ಪೂರ್ಣ ಗುಣಪಡಿಸುವದ. 8 ಔನ್ಸಿನ ಬಾಟ್ಲಿ 1ಕ್ಕೆ ರೂ 1 8 ½ ಡಜನಿಗೆ ರೂ 8 8, 1 ಡಜನಿಗೆ ರೂ. 16 8

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರವು 25, 60 ಮತ್ತು 100 ಮಾತ್ರೆಗಳಿಗೆ ಆಣೆ 8, ರೂ 1 ಮತ್ತು ರೂ 8-1

ರೆವುಮೊ ಬಾಮು: ತಲೆಶೂಲ, ಕಟಿಶೂಲ, ಇತರ ಎಲ್ಲಾ ನೋವುಗಳಿಗೆ ಕ್ರಯ ಡಬ್ಬಿ 1ಕ್ಕೆ ಆ 3. 1 ಡಜನಿಗೆ ರೂ 5-4 0

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5, ½ ಡಜನಿಗೆ ರೂ 1-10 1ಡಜನಿಗೆ ರೂ 3

ಶುಲ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್1 2 4 ಔನ್ಸ್1 2. 4.
ಆ 2½ ಆ 3½ ಆ 6 ಆ 11 ರೂ 1-4 ರೂ 2-4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಹೊಕ್ಕರೊಡನೆ ಪಕ್ಕಾ ತರಬೇತಿಹೊಂದಿ ಪ್ರಾಯುಕ್ಕೂ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ ಇತರ ಎಲ್ಲಾ ಮಾಲುಗಳೂ ದೊರೆಯುವದು. ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ತಿಳಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಲಾಗುವದು.

ಪತ್ತೆ:—

ಮಲೇರಿಯಾನಾ ಕಂಪೆನಿ,
7. ಮಂಗಳೂರು.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೇಸ ಕೋಟಿಗೂ, ಕೋಟಿಗೂ, ಬಿಳುವಂಥವು, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂಥವು ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ. ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,
ದಾವಣಗೇರಿ, ಮೈಸೂರ ಪ್ರಾಂತ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವೆವು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ಸಾಧ್ಯ ಪೂರೈಸುವೆವು.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD,

Bombay.

ಸತ್ಯಾರ್ಥ ಪ್ರಕಾಶ.

೨ ಭಾಗಗಳ ಕಿಮ್ಮತು ೧-೪-೦.

ಎಸ್. ಎಲ್. ಧಾಕಪ್ಪ,
ಪೋಸ- ಶಿರಸಿ. (ಉತ್ತರ ಕಾನಡಾ)

ನೋಟೀಸಿಗೆ ಜವಾಬು.

ಪಾಂಡ್ರಂಗ ಮಂಜ ಪೈ ಇವನಿಗೆ—

ನೀನು ತಾರೀಕು ೨೯—೬—೧೯೩೦ ನೇ ಕೆನರಾ ಲಿಡರಿನಲ್ಲಿ ಕೊಟ್ಟ ನೋಟೀಸಿಗೆ ಉತ್ತರ —

ಅವಿಭಕ್ತ ಕುಟುಂಬದ ಮನೇಜರ ಮೃತ ಶೇಷಗಿರಿ ಪೈ ಇವರ ಮರಣದ ಪೂರ್ವದ ೧೫ ವರ್ಷದ ಲಾಗಾಯ್ತು ಈಹೊತ್ತಿನ ವರೆಗೆ ಪ್ರೈವಾಟ ನಾನೇ ನೋಡುತ್ತ ಬಂದಿದ್ದೇನೆ ನಂ ಕರ ಕಾ ಕೋ ನಂ. ೧೫೦೩ ನೇ ಇಸ್ತಿ ಡಿಕ್ರಿಯಲ್ಲಿ ನಮೋದಿಸಿದ ಆಸ್ತಿ ವಿನಹಾ ಬಾಕಿ ಉಳಿದ ಆಸ್ತಿಯು ನಿನಗೆ ಕೇಳಲಿಕ್ಕೆ ಹಕ್ಕು ಇಲ್ಲ ಈ ಆಸ್ತಿ ಪೈಕಿ ಆಸ್ತಿ ಲೈಲಾಂವು ಆಗಿ ಹೋದದ್ದು ನಿನಗೆ ಗೊತ್ತುಯಿರುತ್ತದೆ ಆದರ ಕುಟುಂಬಕ್ಕೆ ೫೦೦ ರೂಪಾಯಿ ವರೇಗೆ ಖರ್ಚ ಬೇಕಾಗುತ್ತದ ಕುಟುಂಬದ ಆಸ್ತಿ ಲೀಲಾವ ... ನಂಥ ವಜಾ ಜಾತಾಂ ಲಕ್ಕಿ ... ಸರಿ ... ರಂತೆ ದಾರಿಗೆ ಹಿಡಿದು ... ಕುಟುಂಬದ ಆಸ್ತಿಗೆ ... ಉಳಿಯುತ್ತದೆ ರೂಪಾಯಿ ೫೦೦ ರಲ್ಲಿ ... ರೂಪಾಯಿ ವಜಾ ಕಳೆದು, ಬಾಕಿ ಉಳಿಯುವ ರೂಪಾಯಿ ... ರಲ್ಲಿ ನನ್ನ ಸ್ವಂತ ಕಿಫಾಯತಿಯು ಉಳಿದ ಭಾಗ್ಯದಿಂದ ಜೀವನ ನಡಿಸಿದಲ್ಲಿ ಅದನ್ನು ಪುರ್ವದ ... ವರ್ಷ ೧೯೧೦—೧೯... ರೂಪಾಯಿವರೆಗೆ ಕುಟುಂಬದ ಜೀವನಕ್ಕೆ ... ಸಂಗತಿ ನಿನಗೆ ಪದೇ ಪದೇ ತಿಳಿಸುತ್ತೇನೆ ಆದರೆ ಈಗ ... ಕಳೆದು ೩೦೦ ರೂಪಾಯಿ ... ನೋಟಿಸಿನಲ್ಲಿ ನೀನು ನಮೋದ ಮಾಡಿ ... ನೋಟಿಸಿನ ... ನಿನಗೆ ... ಕುಟುಂಬದ ಖರ್ಚು ... ನಾನೇ ನೋಡುತ್ತಾ ಬಂದು, ಉತ್ಪನ್ನದ ... ಕಡಿಮೆ ... ನಿನ್ನ ಲಗ್ನಕ್ಕೆ ... ಹೊಸದಾಗಿ ಮನೆ ದುರುಸ್ತಿ ಮಾಡಿಸಿದ ... ರೂಪಾಯಿ ವರೇಗೆ ಸಾಲವಿರುತ್ತದೆ ಈ ಸಂಗತಿ ಪದೇ ಪದೇ ನಿನಗೆ ತಿಳಿಸಿರುತ್ತದೆ ನಿನ್ನ ... ನೋಟಿಸಿನಲ್ಲಿ ನಮೋದಿಸಿದ ... ಕೊಡದೇ, ಯಾ ನಿನ್ನ ಲಗ್ನದ ಕಾಲದಲ್ಲಿ ... ಗೃಹಸ್ಥರು ಕೇಳಿದ್ದಲ್ಲಿ ... ಜವಾಬ ಕೊಡದೇ ನಿನ್ನ ... ರೂಪಾಯಿ ... ಯೋಗ ಮಾಡಿ ಈಗ ನಿನ್ನ ... ತೀರಿಸಿ ಕೊಂಡು, ಕುಟುಂಬಕ್ಕೆ ೩೦೦ ರೂಪಾಯಿ ವರೇಗೆ ಸಾಲ ಇದೆ ವ ಸಂಗತಿ ನಿನಗೆ ಗೊತ್ತಿದ್ದು ... ಕೊಡುವ ... ನೀನು ಸುಳ್ಳು ನೋಟೀಸು ಕೊಟ್ಟಿದ್ದಾಗಿರುತ್ತದೆ. ಈ ... ನೀನು ಕೊಡದೆ ನಿನಗೆ ಎಂದೂ ತಪ್ಪಲಾರದು ... ಈ ಸಾಲವು ... ಹೊರಿಸಬೇಕೆಂಬ ನಿನ್ನ ... ನೋಟೀಸು ಸುಳ್ಳು ... ಕುಟುಂಬದ ಸಾಲದ ... ವಿನಹಾ ಅವಿಭಕ್ತ ಕುಟುಂಬದ ಮೃತ ಶೇಷಗಿರಿಪೈರ ಹೆಸರಿನಲ್ಲಿ ಇದ್ದ ಮಾಲ್ಕಿ ಮೂಲಗೇಣಿಯ ... ನನ್ನ ಹೆಸರಲ್ಲಿ ಇದ್ದ ... ಜಾತಿಯಾಗಿರುವ ಆಸ್ತಿ ... ನಿನ್ನ ಅಂಶವು ... ಜನರಿಗೆ ... ಯಾವದೇ ತರದಿಂದ ನೀನು ಮಾಡಿ ಕೊಟ್ಟಲ್ಲಿ ಯಾ

ಯಾಂಗಾದರೂ ಮಾಡಿಕೊಂಡಲ್ಲಿ, ಮೇಲೆ ಕಾಣಿಸಿದ ಕುಟುಂಬದ ಸಾಲದ ಬೋಜೆಯು ಆ ಆಸ್ತಿ ಮೇಲಿ ನದು ತಪ್ಪಲಾರದು

ಕುಟುಂಬದ ಸಾಲದ ಒತ್ತಿಯು ಜಾಸ್ತಿ ಆಗಿ, ಕುಟುಂಬಕ್ಕೆ ... ಆಗುವ ಸಂಭವ ತೋರಿದ್ದರಿಂದ ಈ ತಾರೀಖಿನಿಂದ ... ಳಗೆ ನೀನು ನಿನ್ನ ಅಂಶಕ್ಕೆ ಬರುವ ಸಾಲ ತೀರಿಸಿ ನಿನ್ನ ಆಸ್ತಿ ... ಮಾಡಿಕೊಳ್ಳತಕ್ಕದ್ದು ಯಾ ಆ ಪ್ರಕಾರ ಮಾಡದೆ ಇದ್ದಲ್ಲಿ ನಾನು ಕುಟುಂಬದ ... ಕುಟುಂಬದ ಆಸ್ತಿ ಆದವು ಮಾಡಿ ಸಾಲ ... ಇದು ... ತಿಳಿಸುತ್ತೇನೆ

ಹೆರವಟ್ಟಾ } ಉಪೇಂದ್ರ ಮಂಜ ಪೈ
ತಾ ... ೩೦ } ಹೆರವಟ್ಟೆಕರ

ಕ್ಷತ್ರಿಯ ಸಂಘ ಮಿರ್ಜಾನ.

ಕಾನಡಾವೃತ್ತ (...) ಪತ್ರಕರ್ತರ ಸನ್ನಿಧಿಗೆ—

... ಕೆಳಗಿನ ... ಪ್ರಕಟಿಸಬೇಕಾಗಿ ... ವಿನಂತಿ

ಈ ತಾಲೂಕಿನೊಳಗಿನ ... ಕ್ಷತ್ರಿಯ ... ಕ್ಷತ್ರಿಯ ಸಂಘ ಮಿರ್ಜಾನ ... ಸಂಸ್ಥೆ ...

... ಳು

(ಅ) ... ಕ್ಷತ್ರಿಯ ... ವಿದ್ಯಾಭ್ಯಾಸ ...

(ಬ) ... ಮಾಡಿ,

(ಕ) ... ಮಾಡುವದು

(ಡ) ... ಕ್ಷತ್ರಿಯ ... ಚೈತ್ರ ... (೨೦ ೩—೧೯೩೦) ... ಸಂಘವನ್ನು ... ಸಂವತ್ಸರದ ... ಆಯಿತು

ಮಹಾ ಸಭೆಗಳು.

... ವರ್ಷದಲ್ಲಿ ಈ ಸಂಘದ ಎರಡು ... ಮಹಾ ಸಭೆಗಳ ... ಸಂಘದ ಹಾಜರಿ ಪ್ರಮಾಣವು ... ೨೪ ಠರಾವುಗಳು ಪಾಸ ಮಾಡಲ್ಪಟ್ಟವು. ಅವುಗಳಲ್ಲಿ ಎಂಟು ದರ್ಮದ (ನೀತಿ ನಡಾವಳಿ) ವಿರುದ್ಧ ... ಸಂಬಂಧ ... ಮಾಡಿದವು ಇದೇ ವರ್ಷದಲ್ಲಿ ... ದ್ದರಿಂದ ಜಾತಿಯಿಂದ ಹೊರಗೆ ಹಾಕಲ್ಪಟ್ಟಳು

ಶ್ರೀ ಲಕ್ಷ್ಮೀನಾರಾಯಣ ದೇವರ ಜಾಟು ಹಿಂದಿನ ... ವಸೂಲಿ ... (ಸಂಘದ ... ಬುದ್ಧಿಯಿಂದ) ... ತಿಂಗಳು ... ಜನರಿಂದ ... ಗಳನ್ನು ವಸೂಲ ... ಸಂಘವನ್ನು ... ಲೆಕ್ಕಾಚಾರ ಮಾಡಲಿಕ್ಕೆ ... ದೇವರ ಮುಕ್ತೇಸ ರರು ಕುಮಟಾ ಸಬಜಜ್ಜ ಕೋರ್ಟ ಮೂಲ ನಂಬರ ೧೯೨೭, ೧೯೨೮ ಮತ್ತು ಅವುಗಳ ಮೇಲೆ ನಡಿಸಿದ ಅಮಲಜಾರಿಯಲ್ಲಿ ಖರ್ಚಾದ ಹಾಗು ಜಮಾ ಬಂದ ಹಣಗಳ ಸವಿಸ್ತಾರ ಜಮಾ ಖರ್ಚು ಕಳುಹಿಸಬೇಕಾಗಿ ಆ ನಂಬರಗಳಲ್ಲಿ ದೇವರ ತರ್ಫೆನ ವಕೀಲರಾದ ರಾ ಸಾ ಮಂಜನಾಥ ದೇವದಾವ ಕುಲಕರ್ಣಿ ಇವರಿಗೆ ಸಂಘವು ನಂಬರ ... ೧೯೩೦ ನೇ ಪತ್ರದ್ವಾರ ವಿನಂತಿ ಮಾಡಿತ್ತು. ಆದರಂತೆ ಲೆಕ್ಕ ಬಾರದ್ದರಿಂದ ವಸೂಲಿ ಕೆಲಸಕ್ಕೆ ತೊಂದರೆಯಾದದ್ದಲ್ಲದೆ, ಅವರ ಲೆಕ್ಕಾ ... ಸಹ ಹಾಗೆ ಉಳಿದದೆ ಇದರಿಂದ ಸಂಘಕ್ಕೆ ವ್ಯಸನವಾಗಿರ ವದು

ಮಿರ್ಜಾನ } ಸುಬ್ರಾಯ ಪೂರ್ಣಯ್ಯಾ ಶಾಲಿಸಗ್ಗಿ
ತಾ. ೪ ... ೩೦ } ಸಕ್ರೆಟರಿ, ಕ್ಷತ್ರಿಯ ಸಂಘ, ಮಿರ್ಜಾನ

"ಕಾನಡಾಜಿಲ್ಲೆಯ ಪ್ರಾ. ಶಿಕ್ಷಕರ ವರ್ಗಾವರ್ಗಿ"

ಸಧ್ಯಕ್ಕೆ ನಮ್ಮ ಕಾನಡಾಜಿಲ್ಲೆಯೊಳಗೆ ಘಟ್ಟದ ಮೇಲೆ ಹಾಗೂ ಕೆಳಗೆ ನಡೆಯುತ್ತಿರುವ ವರ್ಗಾವರ್ಗಿಯು ತೀರ ಅಸಮಾಧಾನಕರವಿರುತ್ತದೆ ಘಟ್ಟದ ಮೇಲಂತೂ ಕಾಯಂ ವಾಸಸ್ಥಳವಿರುವ ಮಾಸ್ತರ ಜನರು ಆ ಭಾಗದಲ್ಲಿರುವ ಶಾಲೆಗಳಿಗೆ ಸಾಲದಿರುವ ಮೂಲಕ, ಘಟ್ಟದ ಕೆಳಗಿನವರನ್ನು ಆ ಭಾಗಕ್ಕೆ ವರ್ಗಪಡಿಸಬೇಕಾಗುತ್ತದೆ. ಸಹೋದರ ಭಾವದಂತೆ ಹೀನ ಸ್ಥಿತಿಯಲ್ಲಿರುವ ಘಟ್ಟದ ಮೇಲಿನ ಜನರನ್ನು ಸುಶಿಕ್ಷಿತರನ್ನಾಗಿ ಮಾಡುವ ಜವಾಬುದಾರಿಯು ಘಟ್ಟದ ಕೆಳಗಿನ ಎಲ್ಲ ತಾಲೂಕುಗಳ ಮೇಲೆ ಇದ್ದಿರುವದರಿಂದ, ಕ್ರಮವಿಭಾಗ ಶಕ್ಯಕ್ಕನುಸರಿಸಿ ಕೆಳಗಿನ ಎಲ್ಲ ಮಾಸ್ತರ ಜನರಿಗೆ ಪಾಳಿಯಂತೆ ಘಟ್ಟದ ಮೇಲೆ ವರ್ಗಮಾಡುವದು ನ್ಯಾಯವು ಇದಲ್ಲದ ಸರಕಾರದವರು ಘಟ್ಟದಮೇಲಿನ ಸುಧಾರಣೆಗಾಗಿ ಎಷ್ಟೋ ಮಂದಿ ಶಿರ್ಶಿ ಸಿದ್ದಾಪುರ ತಾಲೂಕುಗಳೊಳಗಿನ ಉಮೇದವಾರರನ್ನು ಟ್ರೇಂಡರನ್ನಾಗಿ ಮಾಡಿರುವ ಮೂಲಕ ಅವರಾದರೂ ತಮ್ಮ ಭಾಗದ ಸಧಾರಣೆಯಲ್ಲಿ, ವಿಶೇಷವಾಗಿ ಯಲ್ಲಾಪುರ, ಹಳಿಯಾಳ ತಾಲೂಕುಗಳ ಸುಧಾರಣೆಯ ವಿಷಯದಲ್ಲಿ ನಾಲಾಗಾರರಾಗುವದೂ ನ್ಯಾಯವೇ ಸರಿ. ಹೀಗಿದ್ದರೂ ವರಿಷ್ಠರು ಇವರನ್ನು ಅವರ ತಾಲೂಕುಗಳಲ್ಲಿಯೇ ಹೆಚ್ಚಾಗಿ ಇಟ್ಟಿರುವರು ಇಷ್ಟೇ ಅಲ್ಲ ಅವರನ್ನು ಘಟ್ಟದ ಕೆಳಗೆ ಅನಾವಶ್ಯಕವಾಗಿ ವರ್ಗಪಡಿಸುವರು ಇದಲ್ಲಿ

ಇನ್ನು ಕೆಲವರಿಗೆ ಘಟ್ಟದ ಪಾಳಿಯು ಮುದ್ದತ್ತು ೨ ವರ್ಷಗಳಿಗಿಂತ ತುಸು ಕಡಿಮೆಯಿರುವ ಕಾರಣದಿಂದ, ಅವರನ್ನು ತಿರುಗಿ ಘಟ್ಟದಮೇಲೆ ವರ್ಗವಾದಿರುವರು ಉದಾ — 1 ಜಿ. ವ ಹೆಗಡೆ, 2 ಆ ಮ ಶೆಟ್ಟಿ, 3 ಗ ವಾ ನಾಯ್ಕ, 4 ಬೀಲೇಕೇರಿ, 5 ಗಿರಿಯನ್, ೬ ಅ ಅ ನಾಯ್ಕ, 7 ವೆ ಸಾ ಶ್ಯಾನಭಾಗ,

ಆದರೆ ಕೆಲವರು ವರ್ಷಾರುತಿಂಗಳು ಮಾತ್ರ ಘಟ್ಟದಮೇಲೆ ಕೆಲಸಮಾಡಿದವರಿಗೆ ತಿರುಗಿ ಹಾಕಲಿಲ್ಲ ಉದಾ — 1 ಕೇರಗಣಿ, 2 ವಾ ಸು ಪಂಡಿತ 3 ಬಿ ವಿ ದೇಸಾಯಿ, 4 ಪ ನಾ ಲೋಕೇಶ್ವರ, 5 ಮುಕ್ತೇಕೇರಿ, 6 ... ಶೆಟ್ಟಿ, 7 ಮಂಗೇಸ, 8 ಶಾ. ಗ ಹೆಗಡೆ, 9 ... ಗೋ ಹೆಗಡೆ, 10 ವ. ವ ಭಟ್ಕಳ, 11 ಲ ತಿ ಹೆಗಡೆ,

12 ಶಾ. ವಿ. ಯಾಜಿ, 13 ಸೀ. ರಾ. ಸಂಕೋಳ್ಳಿ, 14 ಶ. ತಿ. ಹೆಗಡೆ, 15 ಗೋ. ನ. ಶೇಟಿಯಾ, 16 ಪಿ. ವಿ. ಶೇಣವಿ.

ಇದರ ಹೊರತು ಕೆಲವರಿಗೆ ಮೂಲತಃ ಘಟ್ಟದ ಶಾಳೆಯೇ ಆಗಲಿಲ್ಲ. ಉದಾ.— 1 ಹೆಗಡೆ ಶ್ರೀಕಾಂತ, 2 ಗುಡಿನ್, 3 ವಿ. ಮಾ. ಪಾತಿಗೇರ, 4 ಗ. ರಾ. ಯಾಜಿ, 5 ವೆ. ರಾ. ಪ್ರಭು, 6 ಪಾ. ವಾ. ಶೆಟ್ಟಿ, 7 ನಾ. ಮ. ಶೆಟ್ಟಿ, 8 ವೆ. ಕೇ. ಶಿರೂರ, 9 ನಾ ಮಾ. ಶೆಟ್ಟಿ, 10 ದೇಸಾಯಿ, 11 ಪಟ್ಟಣಶೆಟ್ಟಿ, 12 ದೇವಳಿ, 13 ಗ ಪು. ಹೊನ್ನಾವರ, 14 ಗೋ ರಾ. ಭಟ್ಟ.

ಕೆಲವರು ಹೆಚ್ಚಿನ ಶಿಕ್ಷಣಕ್ಕೆಂತ ರಜೆ ತಕ್ಕೊಂಡು ಕಾಲೇಜಕ್ಕೆ ಹೋದ ಮೇಲೆ, ಅವರ ಹಕ್ಕನ್ನು ಖಾತೆಯ ಸೋಯಿಯ ದೆಸೆಯಿಂದ ಯಾವದೊಂದು ಘಟ್ಟದಮೇಲಿನ ಜಾಗೆಯಲ್ಲಿಟ್ಟು, ಆ ಮುದ್ದತ್ತನ್ನು ಘಟ್ಟದ ಶಾಳೆಯಲ್ಲಿ ಹಿಡಿದಂತೆ ಕಾಣುತ್ತದೆ. ಉದಾ.— 1 ಪಟ್ಟಣಶೆಟ್ಟಿ, 2 ದೇವಳಿ, 3 ಪಿ. ಪಿ. ಶೇಣವಿ, 4 ಯಾಜಿ.

ಕೆಲವರಿಗೆ ಯಾವದೊಂದು ಶಿಕ್ಷೆಯ ಕಾರಣ ಸಹ ಇಲ್ಲದೆ, ೩-೪ ಸಾರೆ ಘಟ್ಟದ ಶಾಳೆ ಬಂದಿರುತ್ತದೆ ಉದಾ.— 1 ಅಡಕೋಳಿ, 2 ಜೇಗವೆಕಟ್ಟೆ, 3 ಶು. ಮಾ. ಹೆಗಡೆ, 4 ಯಡರಮಕ್ಕಿ, 5 ಲೋಕೇಶ್ವರ.

ಇನ್ನೊಂದು ದೊಡ್ಡ ವಿಚಾರವೆಂದರೆ ಮ್ಯುನಿಸಿಪಾಲಿಟಿಯೊಳಗಿನ ಮಾಸ್ತರ ಜನರು ೨೫-೩೦ ವರ್ಷಗಳ ವರೆಗೆ ಒಂದೊಂದೇ ಜಾಗೆಯಲ್ಲಿ ಕೆಲಸ ಮಾಡುತ್ತಿರುವರು. ಅವರನ್ನು ಮ್ಯುನಿಸಿಪಾಲಿಟಿಯವರು ಬೇಡವೆಂದು ಅನ್ನುವವರೆಗೆ ಅಲ್ಲಿಯೇ ಇಡುವರು. ಬೇಡವೆಂದರೆ ಲೋ. ಬೋ. ನವರು ಸ್ಪೆಶಲ್ ಜಾಗೆಯನ್ನಾದರೂ ಮಾಡಿ ಅವರನ್ನು ತಕ್ಕೊಳ್ಳುವರು. ಆದರೆ ಲೋ. ಬೋ. ಮೆಂಬರರು ಅಥವಾ ಇತರ ಸಭ್ಯಗೃಹಸ್ಥರು ಇಂಥವನಿಗೆ ಇಂಥಲ್ಲಿಯೇ ಇಡಬೇಕೆಂದು ಹೇಳಿದರೆ ಮಾತ್ರ, ಕೇಳುವದಿಲ್ಲ. ಗವರ್ನಮೆಂಟಿನ ನಿಯಮಗಳಲ್ಲಿಯಾದರೂ ಇಂಥ ಅವ್ಯಾಧವ್ಯತಿಯಿರಲಿಕ್ಕಿಲ್ಲ ಲೋ. ಬೋ. ಮತ್ತು ಮ್ಯುನಿಸಿಪಾಲಿಟಿಗಳಲ್ಲಿರುವ ಎಲ್ಲ ಮಾಸ್ತರ ಜನರಿಗೆ ಟಾಯಿಮ್‌ಸ್ಕೇಲ್, ಪಾರ್ಟಲೆಮಾವ್ಸ್, ಸಿಲೆಕ್ಶನ್ ಗ್ರೇಡ್ ಮುಂತಾದವುಗಳಲ್ಲಿ ಸರಿಯಾಗಿಯೇ ಹಕ್ಕು ಇದ್ದು, ವರ್ಗಾವರ್ಗಿಯ ವಿಷಯದಲ್ಲಿ ಮಾತ್ರ ಪಂಕ್ತಿಪ್ರಪಂಚವೇಕೆ! "ಮ್ಯುನಿಸಿಪಾಲಿಟಿಯವರಿಗೆ ಬೇಕಾದವರನ್ನು ಆರಿಸಿಕೊಳ್ಳುವ ಅಧಿಕಾರವಿದೆ" ಎಂದು ಕೆಲವರು ಆಕ್ಷೇಪಿಸಬಹುದು ಆದರೆ ಹಿಂದೆ ರೀತ್ರೀಂದಿನ ಸಲುವಾಗಿ ೧ ವರ್ಷ ಇದ್ದಲ್ಲದೆ ಹೆಚ್ಚಿನ ಅಭ್ಯಾಸದ ಸಲುವಾಗಿ ಕಾಲೇಜಕ್ಕೆ ಹೋಗಬೇಕಾದ ಪ್ರಸಂಗಗಳಲ್ಲಿ, ಮ್ಯುನಿಸಿಪಾಲಿಟಿಯಿಂದ ಲೋ. ಬೋ. ನವರು ಕರಿಸಿಕೊಂಡಂತೆ, ಘಟ್ಟದ ಶಾಳೆಯ ದೆಸೆಯಿಂದ ಯಾಕೆ ತಕ್ಕೊಳ್ಳಬಾರದು! ಈಗ ನೋಡಿದರೆ ಮೂಲತಃ ಘಟ್ಟದ ಶಾಳೆಯನ್ನು ನೋಡದೆ ಇರುವ ಮಾಸ್ತರ ಜನರು ಕಾರವಾರ, ಕುಮಟಾ, ಹೊನ್ನಾವರ, ಭಟ್ಕಳ ಮ್ಯುನಿಸಿಪಾಲಿಟಿಗಳಲ್ಲಿ ಕೂಡಿ ಸುಮಾರು ೩೦-೩೫ ಮಂದಿ ಇರಬಹುದು. ಮತ್ತು ಅರ್ಧಮರ್ಧವಾಗ ೬-೮ ತಿಂಗಳು ಮಾತ್ರ ಮಾಡಿದವರು ಸಹ ಅನೇಕರಿರುವರು. ಆದಕಾರಣ ವರ್ಗಾವರ್ಗಿಯ ವಿಷಯದಲ್ಲಿ ಈ ಕೆಳಗಿನ ನಿಯಮಗಳನ್ನು ಅನುಸರಿಸಿದರೆ, ಎಲ್ಲರಿಗೂ ಪರಿಸ್ಥಿತಿವಾಸದ ಸುಖದುಃಖಗಳು ಸರಿಯಾಗಿ ಹಂಚಲ್ಪಡಬಹುದೆಂದು ತೋರುತ್ತದೆ.

೧ ಶಿರ್ಸಿ, ಸಿದ್ದಾಪುರ ತಾಲೂಕುಗಳೇ- ಜನ್ಮಸ್ಥಳವಾಗಿರುವ ಮಾಸ್ತರ ಜನರಿಗೆ, ಯಲ್ಲಾಪುರ, ಹಳಿಯಾಳ, ಸುಪೆಗಳಗೆ ಶಾಳೆಗಳನ್ನಿಟ್ಟು, ಉಳಿದ ಜಾಗೆಗಳಿಗೆ ಘಟ್ಟದ ಕೆಳಗಿನವರನ್ನು ಪಾಳಿ ಹುಂತೆ ಯೋಜಿಸುವದು.

೨ ಒಂದುವೇಳೆ ಕಾರವಾರ, ಅಂಕೋಲಾ ತಾಲೂಕಿನವರ ಕಟೂಲಿ ಇದ್ದಲ್ಲಿ, ಅವರನ್ನು ಹಳಿಯಾಳ, ಯಲ್ಲಾಪುರ ತಾಲೂಕುಗಳಿಗೆ ವರ್ಗಪಡಿಸುವದು.

೩ ಮ್ಯುನಿಸಿಪಾಲಿಟಿಯೊಳಗಿನ ಮಾಸ್ತರ ಜನರನ್ನು ಘಟ್ಟದ ಶಾಳೆಯ ದೆಸೆಯಿಂದ ತಕ್ಕೊಂಡು ಮೇಲಿನಂತೆ ವರ್ಗಪಡಿಸುವದು. ಒಂದು ವೇಳೆ ಮ್ಯುನಿಸಿಪಾಲಿಟಿಯವರು ಕೊಡದಿದ್ದರೆ, ಅವರನ್ನು ರಿಟಾಯರ ಆಗುವವರೆಗೆ ಮ್ಯುನಿಸಿಪಾಲಿಟಿಯಲ್ಲಿಯೇ ಇಟ್ಟುಕೊಳ್ಳುವ ಠರಾವು ಜಾಹೀರುಪಡಿಸಿಕೊಳ್ಳುವದು

೪ ಯಾವದೊಂದು ಜಾಗೆಯಲ್ಲಿ ಕೆಲಸ ಕಲಿಸಿದವರನ್ನು ಘಟ್ಟದಮೇಲಿನ ತೀರ ಕೆಟ್ಟ ಹವೆಯ ಪ್ರದೇಶಕ್ಕೆ ಶಿಕ್ಷಾರ್ಥವಾಗಿ ವರ್ಗಪಡಿಸುವದು.

೫ ಘಟ್ಟದ ಪ್ರತಿಯೊಂದು ಪಾಳಿಯ ಅವಧಿಯು ೨ ರಿಂದ ೩॥ ವರ್ಷಗಳ ವರೆಗೆ ಮಾತ್ರ ಇರತಕ್ಕದ್ದು

೬ ಹಿಂದೆ ಪಾಳೆ ಆಗದವರನ್ನು ಕ್ರಮದಿಂದ ಘಟ್ಟದಮೇಲೆ ವರ್ಗಪಡಿಸುವದು.

೭ ವರ್ಗಾವರ್ಗಿಯನ್ನು ವೃತ್ತಪತ್ರಗಳಲ್ಲಿ ಪ್ರಸಿದ್ಧಪಡಿಸುವದು.

೮ ವರ್ಗದ ಹುಕುಮು ಹೊರಡುವದಕ್ಕಿಂತ ಮುಂಚಿತವಾಗಿ ೧ ತಿಂಗಳು ಮೊದಲೇ ತಿಳಿಸುವದು ಇತ್ಯಾದಿ

ಓರ್ವ ಸುಧಾರಣಾಕಾಂಕ್ಷಿ.

ಪಾರ್ಲಮೆಂಟಿಗೆ ತಂತಿ.

“ವೆಸ್ಟರ್ನ ಇಂಡಿಯಾ ಲಿಬರಲ್” ಸಂಘದ ಪತಿಯಿಂದ ಸರ ದಿನಶಾ ವಾಚ್ಛಾರವರು ಕೊಟ್ಟ ತಂತಿಯ ಸಾರಾಂಶ —

ಪಂಜಾಬದಲ್ಲಿ ಕಳೆದ ವರ್ಷ ಆದ ದಂಗೆಯ ವೇಳೆ, ಅಧಿಕಾರಿಗಳು ಲಷ್ಕರಿ ಕಾಯಿದೆಯ ಅಮಲಿನಿಂದ ಹಿಂದಿ ಜನರು ನಿರಾಶೆಗಳಾಗಿರುವರು ಇದು ಲಕ್ಷಕ್ಕೆ ತಂದು ಪಾರ್ಲಮೆಂಟವು ಹಂಟರ ಕಮಿಟಿಯ ರಿಪೋರ್ಟಿನ ಶಾಂತ ವಿಚಾರಮಾಡಬೇಕು.

ಪಾರ್ಲಮೆಂಟಿನಲ್ಲಿ ಈ ಕುರಿತು ಚರ್ಚೆಯಾಗಬೇಕಿದ್ದು, ಹಿಂದುಸ್ಥಾನದಲ್ಲಿಯ ಕೆಲ ಯುರೋಪಿಯನ ಸಂಸ್ಥೆ ಮತ್ತು ಅವುಗಳ ಇಂಗ್ಲಂಡದ ಪ್ರತಿಪಾದಕರು ತೆಗೆದ ಉದ್ಗಾರಗಳಿಂದ ಈ ತಂತಿಯು ಅವಶ್ಯಕವಾಯಿತು ಆದರಿಂದ ಜ್ಞಾತಿ ಮತ್ಸರ ಬೆಳೆದು, ರಿಪೋರ್ಟಿನೊಳಗಿನ ಮುಖ್ಯ ಮುದ್ದೆಗಳು ಬದಿಗೊತ್ತುವ ಸಂಭವ ಉಂಟು. ಹಿಂದುಸ್ಥಾನದಲ್ಲಿ ದೊಡ್ಡ ದಂಗೆಯಾಗುತ್ತಿತ್ತೆಂದು ಈ ಜೋಡಕರು ಹೇಳಿದರೂ, ಹಂಟರ ಕಮಿಟಿಯು ಆ ತರದ ಅಭಿಪ್ರಾಯಪಡಲಿಲ್ಲ.

ಖರೇ ಬದಲಾಕ ಹಾಕುವ ಬಗ್ಗೆ ಬಾಂಬು ಮತ್ತು ವಿಮಾನಗಳ ಉಪಯೋಗ ಮಾಡಿದರಿಂದ ಉಂಟಾದ ಅತ್ಯಾಚಾರಗಳಿಂದ ಜಲೋ ಜಲೋ ನಾಗರಿಕರ ಮನಸ್ಸು ಚಂಚಲನಾದಗಿರುವದು. ಮತ್ತು ಅವುಗಳನ್ನು ಬೇಗನೆ ನಿಷ್ಟಂಕವಾಗಗೊಡದಿದ್ದರೆ, ಬ್ರಿಟಿಷ “ನ್ಯಾಯನೀತಿಯ” ವಿಶ್ವಾಸವು ಉಳಿಯಲಿಕ್ಕಿಲ್ಲ ಈ ಬಗ್ಗೆ ಪಾರ್ಲಮೆಂಟವು ಯೋಗ್ಯ ವಿಚಾರಮಾಡಬೇಕೆಂದು ಆಶೆ ಇದೆ.

ಪಂಜಾಬದೊಳಗಿನ ಅತ್ಯಾಚಾರಿಗಳ ಉತ್ತೇಜಕರಂತೆ, ಹಿಂದಿ ರಾಜ್ಯವನ್ನು “ಜಹಂಕರ್”—ದಾಯಿಯ ಮಾಡಿಸಬೇಕೆಂದೆನ್ನುವವರ ಮೇಲೆ ಬ್ರಿಟಿಷರು ವಿಶ್ವಾಸ ವಿಡಬಾರದು. ಸಹಾ ದಂಗೆಯ ವೇಳೆ, ಜವಾಬದಾರ ಅಧಿಕಾರಿಗಳು ಸಹ ಪ್ರತಿಯೊಬ್ಬ ಜನರಿಗೆ ಸಹ ಶಾಶ್ವತ ಹುಟ್ಟುವಂಥ ಕೃತ್ಯಗಳನ್ನು ಮಾಡಿರುವರು. ಅದ್ದರಿಂದಲೇ ಪಾರ್ಲಮೆಂಟವು ದೊಡ್ಡ ಮನಸ್ಸಿನಿಂದ, ಹಿಂದಿಯರಿಗೆ ನ್ಯಾಯ ಕೊಡಬೇಕು. ಹಿಂದಿ ಜನರು ಬೇಡುವ ನ್ಯಾಯವು ಮುಯ್ಯಿಗೆ ಮುಯ್ಯಿ ಎಂತಲ್ಲ. ಯಾಕೆಂದರೆ, ಮುಯ್ಯಿಗೆ ಮುಯ್ಯಿಯು ಹಿಂದು ಜನರ ಧಾರ್ಮಿಕ ಕಲ್ಪನೆಗೆ ವಿರೋಧಕವು. ಆದರೂ ಪಂಜಾಬದ ಅತ್ಯಾಚಾರಗಳಿಂದ ಉದ್ವಿಗ್ನವಾದ ಹಿಂದಿ ಜನರ ಮನಸ್ಸು ಪುನಃ ಶಾಂತಗೊಳಿಸುವ ಯೋಜನೆ ಪಾರ್ಲಮೆಂಟಿನಿಂದಾಗಬೇಕಾಗಿ ಸಂಘದ ಪರಿಯಿಂದ ನಮಗೆ ಹೇಳಬೇಕಾಗಿದೆ.

ಮಹಾತ್ಮಾ ಗಾಂಧಿಯವರು

ನಾ॥ ವ್ಹಾಯಿಸರಾಯರಿಗೆ ಬರೆದ ಪತ್ರ

ಖಿಲಾಫತ ಸಂಬಂಧ ಅಸಹಕಾರಿತೆಯ ಚಲವಳದ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ನಾ॥ ವ್ಹಾಯಿಸರಾಯರಿಗೆ ಬರೆದ ಪತ್ರದ ಸಾರಾಂಶ.—

ಯುದ್ಧಾರಂಭಕ್ಕೆ ನಾನು ಲಂಡನದಲ್ಲಿರುವಾಗಿನಿಂದ ಖಿಲಾಫತಿಯ ಪ್ರಶ್ನೆಯು ನನ್ನ ಲಕ್ಷದಲ್ಲಿದೆ. ತುರ್ಕಸ್ಥಾನವು ಜರ್ಮನಿಯ ಪಕ್ಷಕ್ಕೆ ಸೇರಿದಾಗ ಮುಸಲ್ಮಾನ ವರ್ಗಕ್ಕೆ ಎಷ್ಟು ಚಿಂತೆಯಾಗಿತ್ತೆಂಬುದು ನಾನು ಬಲ್ಲೆನು. ಅದರೊಳಗೂ ಗುಪ್ತ ಒಪ್ಪಂದದ ವಾರ್ತೆ ಬಂದೊಡನೆ, ಆ ಚಿಂತೆಯು ದ್ವಿಗುಣಿತವಾಯಿತು, ಮತ್ತು ಬ್ರಿಟಿಷರ ಹೇತುವಿನಿಂದ ಅವಿಶ್ವಾಸ ಹುಟ್ಟಿ ಅವರು ನಿರಾಶರಾದರು. ಆದರೂ, ಕಳೆದ ಐದು ವರ್ಷ ಹಿಂದಿ ಮುಸಲ್ಮಾನ ಸಮಾಜವು ದರ್ಶನಾತೀತ ಆತ್ಮಸಂಯಮನದಿಂದ ನಡೆದಿದ್ದಲ್ಲದೆ, ಪಂಜಾಬಿನೊಳಗಿನ ಅತ್ಯಾಚಾರ ಘಂಟರನ್ನು ಅಂಕೆಯಲ್ಲಿಟ್ಟುಕೊಂಡದ್ದು ಎಲ್ಲರಿಗೂ ಮಾನ್ಯವುಂಟು.

ಒಪ್ಪಂದದ ಕರಾರುಗಳು ಮತ್ತು ಅವುಗಳ ಬಗ್ಗೆ ತಮ್ಮ ಸಮರ್ಥನೆ ನೋಡಿ ಹಿಂದಿ ಮುಸಲ್ಮಾನರು ನಿರಾಶರಾಗಿರುವರು. ಈ ಕುರಿತು, ಪ್ರಧಾನರು ಕೊಟ್ಟ ಅಭಿವಚನವನ್ನು ಮುರಿದು ಮಹಮ್ಮದೀ ಧರ್ಮಭಾವನೆಯು ದುರ್ಲಕ್ಷ್ಯಮಾಡಲ್ಪಟ್ಟಿದೆ. ತಮ್ಮ ಖಲೀಫರನ್ನು ರಕ್ಷಿಸುವದಕ್ಕಾಗಿಯೂ ಆದರಿಂದ ಅವರ ದೇಶರಕ್ಷಣೆಯ ಮಾಡುವದಕ್ಕಾಗಿ ಮುಸಲ್ಮಾನ ಶಿಪಾಯರು ಯುದ್ಧಮಾಡಿಲ್ಲ. ಹಂಟರಕಮಿಟಿಯ ರಿಪೋರ್ಟ, ತಮ್ಮ ಖಲಿತೆ, ಮತ್ತು ಅದಕ್ಕೆ ಮಿ॥ ಮೊಂಟೆಗ್ಯೂರವರ ಉತ್ತರಗಳಿಂದ ಬ್ರಿಟಿಷ ನ್ಯಾಯದ ಬಗ್ಗೆ ಮತ್ತಷ್ಟು ಅವಿಶ್ವಾಸ ಉಂಟಾಗಿದೆ.

ಇಂಥ ಪರಿಸ್ಥಿತಿಯಲ್ಲಿ, ನಿರಾಶೆಯಿಂದ ಬ್ರಿಟಿಷ ರಾಜ್ಯದ ಸಂಬಂಧವನ್ನು ತೊರೆಯುವದು, ಯಾ ಬ್ರಿಟಿಷ ರಾಜ್ಯ ಘಟನೆಯ ಧೋರಣದಲ್ಲಿ ವಿಶ್ವಾಸವಿಟ್ಟು ಈಗಾದ ಅನ್ಯಾಯವನ್ನು ಅಳಿದು, ಬ್ರಿಟಿಷರ ಮೇಲಿನ ವಿಶ್ವಾಸವು ಪುನಃ ನೆಲೆಗೊಳಿಸುವ ಯೋಜನೆ, ಇವೆರಡೇ ಉಪಾಯಗಳು ನನಗೆ ಸೂಚಿಸುವವು. ಬ್ರಿಟಿಷ ಉದಾರತೆಯ ಬಗ್ಗೆ ನನಗೆ ವಿಶ್ವಾಸವುಂಟು, ಅನ್ಯಾಯ ಸಹನಶಕ್ತಿಯು ತಮ್ಮಲ್ಲಿದೆಂದು ತೋರಿಸಿದರೆ, ಒಂದಿಲ್ಲೊಂದು ಉಪಾಯದಿಂದ ನಮಗೆ ನ್ಯಾಯ ದೊರಕುವದೆಂದು ಆಶೆಯುಂಟು. ಯಾರು ಆತ್ಮಶಕ್ತಿಯಿಂದ ನಡೆಯುತ್ತಾರೋ ಅಂಥವರಿಗೇ ತಮ್ಮ ಸರಕಾರವು ಸಹಾಯ ಮಾಡುತ್ತದೆಂದು ನಾನು ತಿಳಿಯುತ್ತೇನೆ ದುರ್ಬಲರ ಸಂರಕ್ಷಣೆ ಅದರಿಂದಾದೀತಾಗಿ ನಾನು ತಿಳಿಯುವದಿಲ್ಲ ಸಹಕಾರಿಗೆ ತಮ್ಮ ನಾಮಮಾತ್ರದ ಉಪಯೋಗ ಮಾಡಲಿಕ್ಕೆ, ಅದನ್ನು ಚಿಕ ಕಾಯ್ದು, ಬೇರೆ ಸರಕಾರ ಬ್ರಿಟಿಷ ಸರಕಾರವು ಅನುಕರಿಸುತ್ತದೆ. ಆದರೆ ಅವರ ರಾಜ್ಯದಲ್ಲಿ ದುರ್ಬಲರು ಮತ್ತು ನಾಶಾಗುತ್ತಾರೆ, ಇದು ನಾನು ಬಲ್ಲೆನು.

(ಆರನೇ ಪುಟದಮೇಲೆ ಮುಂದುವರಿದ.)

ವಿನಂತಿ.

ನಮ್ಮ ಪತ್ರಿಕೆಗೆ ವರ್ಗಣಿದಾರರಾಗಲಿಚ್ಛಿಸುವವರಿಗೆ ಒಂದು ಸಂಗತಿ ಜ್ಞಾಪಿಸ ಮಾಡದಿರೆವು. ಈ ಪತ್ರದ ಪ್ರಕಾರ ರಂಭವು ಯಾವದು ? ಮುದ್ರಾಲಯ ದಿಂದಲೇ ತರಿಸುವದುತ್ತಮ, ಎಂದು ಅನುಭವಿಸುವ ಆಶ್ರಯದಾತರಿಗೆ ಅರಿಕೆ ಮಾಡುವದೇನಂದರೆ — ಈ ವರ್ಷ ಸುಧಾರಣಾ ಕಾಯಿದೆ ಗಂತೆ ಈ ಜಿಲ್ಲೆಯಿಂದ ಒಬ್ಬ ಯೋಗ್ಯ ಮೆಂಬರರನ್ನು ಆರಿಸಿ ಕಳುಹಿಸುವ ಮುಖ್ಯ ಕರ್ತವ್ಯವಿದೆ. ಈ ಜಿಲ್ಲೆಯ ತರ್ಫೆನಿಂದ ಉಮೇದವಾರರು ಯಾರ್ಯಾರು, ಅವರವರ ಯೋಗ್ಯತೆ ಏನು, ಯಾರು ಆರಿಸಲ್ಪಡಬೇಕು, ಚರ್ಚೆಯ ವಿಷಯವನ್ನೂ ಈ ಜಿಲ್ಲೆಗೆ ಸಂಬಂಧಿಸಿದ ಇತರ ವಿಷಯಗಳನ್ನೂ ಪ ಕಟಿಸುವ ಮುಂದಾಗಿ ತಿಳಿಕೊಂಡು ಪರೀಕ್ಷಿಸುವ ಪದ್ಧತಿಯವರಿಂದ ಹೊಸ ರೀತಿ ಯನ್ನು ನಡೆಯಿಸಲಿಚ್ಛಿಸುವವರಿಗೆ ಒಬ್ಬ ಶೀಘ್ರ [illegible] ಎಂತ ಹೇಳುವದು ಯಾವದೇ ಸೂಚಿಸುವ ಪತ್ರ ಚಾಲು ಮಾಡಿದರೂ, ಮುಂದೆ ಆ ಸೂಚನೆಯ ಒಂದು ವರ್ಷವೆಂದು ಎಣಿಸಲ್ಪಡುವದು ಕಾರಣ ಕಾಲ ಕಳೆಯ ಬಾರದೆಂದು ತಿಳಿಸುವೆವು [ಸ. ಕಾ. ವೃ.]

ಕಾನಡಾವೃತ್ತ.

ಗುರುವಾರ, ತಾರೀಖು ೮ ಮಾಹೆ ಜುಲೈ, ೧೯೨೦

ಗೋಡೆ ತೋಳೆದಷ್ಟು ಮಣ್ಣೇ ಮಣ್ಣು.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಹೀಗಾಗಿ ನಮ್ಮಲ್ಲಿಯ ಸರಬರಾಯಿಯು ನಿಃಶೇಷವಾಗದೆ, ನಾಮಶೇಷವಾಗಿರಬಹುದೆಂದು ಹೇಳಬಹುದು. ಒಟ್ಟಿಗೆ ರಸಯಿಯಿಂದ ರಾಜರೋಸ ಸರಬರಾಯಿ ನಮ್ಮಲ್ಲಿಲ್ಲೆಂದು ಖಂಡಿತವಾಗಿ ಹೇಳಬಹುದು. ನಮ್ಮಲ್ಲಿ ನಡಿಯುವ ಪ್ರತ್ಯಕ್ಷ ಪ್ರಕಾರವು ಗಾಡಿ ಮತ್ತು ಕೂಲಿಕಾರರ ಬಿಟ್ಟಿಗೆ ಸಂಬಂಧಿಸಿರುವದು. ಇದು ನಮ್ಮ ಚೀರಪು ನಮ್ಮ ಚೀರ ಪದ್ಧತಿಯಲ್ಲಿ ಗಾಡಿಗಳಿಗೆ ಬಾಡಿಗೆ ಸಿಗುತ್ತದೆ. ಕೂಲಿಕಾರರಿಗೆ ಮಜೂರಿ ಸಿಗುತ್ತದೆ, ಮಾಫಕ ದರದಿಂದ ಸಿಗುತ್ತದೆ ಹೀಗಿದ್ದು, ಜುಲುಮು ನಡಿಸಿದ ಹೊರತು, ಗಾಡಿಗಳೂ, ಕೂಲಿಕಾರರೂ ಸಿಗುವದು ಅಪವಾದಕವು. ಇದರೊಳಗೆ ಮುಳ್ಳು ಎಲ್ಲಿ ಹೆಟ್ಟುತ್ತದೆ, ಎಂಬುವದು ಬರೇ ಕಾಲಿಂದ ನಡೆಯುವವರು ಬಲ್ಲರು; ಮುಳ್ಳು ಚುಚ್ಚುವವರೂ ಬಲ್ಲರು. ತಮ್ಮ ಖಾಸಗಿ ವೆಚ್ಚದ ಬಿಲನ್ನು ವರಿಷ್ಠ ಅಮಲದಾರರು ಆಗಿಂದಾಗ ಕೊಟ್ಟುಬಿಡುತ್ತಾರೆ, ಅವರ ಕನಿಷ್ಠರು ಮಾತ್ರ ಹಾಗೆ ಮಾಡುವದಿಲ್ಲ ಎಂದು ಈ ಕಮಿಟಿಯ ಅಭಿಪ್ರಾಯವಾಗಿದೆ. ನಾಮದಾರ ಹರಿಶ್ಚಂದ್ರರಾಯರು ವರಿಷ್ಠ ಅಧಿಕಾರಿಗಳೆಲ್ಲರು ಪೂರ್ಣ ನಿರ್ದೋಷಿಗಳೆಂದು ಹೇಳಲಾಗದೆಂದು ಅನ್ನುವರು. ಯಾರ್ಯಾರು ಎಷ್ಟೆಷ್ಟು ಪಾಪಿಗಳೆಂದು ಇನ್ನು ನಿರ್ಣಯಿಸುವ ಮಾತಿರಲಿ. ಪಾಪಕ್ಕೆ ಅಲ್ಪ ಸಹ ಇಂಬು ದೊರೆಯದಂತೆ ಹೊಸ ಕಟ್ಟಳೆಗಳನ್ನು ವಿಧಿಸುವದೇ ಈಗಿನ ಕರ್ತವ್ಯವು. ಕಮಿಟಿಯ ಸೂಚನೆಗಳಿಂದ ಇದೆಷ್ಟು ಕೊನೆಗಾಣುವದೆಂಬದೇ ಮಹತ್ವದ ಪ್ರಶ್ನೆಯು. ಈಗಿದ್ದ ಗೋಡೆಯನ್ನು ಮತ್ತೂ ತೋಳೆದು ಪ್ರಯೋಜನವೇನು ?

ಅಕಂ ಕಿಸಂ, ಇನ್ನೇನು

ಎಂಬುದನ್ನು ವಿಚಾರಿಸಲು ರಸಯಿ ಕಮಿಟಿಯು ಮಾಡಿದ ಸೂಚನೆಗಳನ್ನು ಸಂದರ್ಶಿಸಬೇಕಾಗಿದೆ. ಸರ್ಕಾರಿ ಅಮಲದಾರರು ತಿರುಗುವ ಅವಧಿಯನ್ನು ಕಡಿಮೆ ಮಾಡಬೇಕೆಂದು ಒಂದು ಸೂಚನೆಯನ್ನು ಕಮಿಟಿಯು ಮಾಡಿದೆ. ಇದರಿಂದ ಬಿಟ್ಟಿಯ ತೊಂದರೆ ಸ್ವಲ್ಪ ಕಡಿಮೆಯಾಗುವದೆಂಬುದು ನಿಜವು. ಮುಕ್ಕಾಮಿನ ಸ್ಥಳಗಳನ್ನು ದೊಡ್ಡದೊಡ್ಡ ಊರುಗಳಲ್ಲಿಯೇ ಶಾಶ್ವತವಾಗಿ ನಿಶ್ಚಿತಮಾಡುವದು ಪತ್ರೊಂದು ಉಪಾಯವು. ಇದಾದರೂ ಹಿತಕರವೇ ಸರಿ. ಸ್ವಾರಿಯ ಸಂಗಡ ಹೆಚ್ಚು ಸಾಮಾನು ಮಾಲೇ ಇಟ್ಟುಕೊಂಡು ಮತ್ತೂ ಬೇಕಾದ ಜೀನಸುಗಳನ್ನು ಪೂರೈಸಲಿಕ್ಕೆ ಮುಕ್ತೆದಾರನನ್ನು ನೇಮಿಸುವ ಪದ್ಧತಿಯು ಸ್ತುತ್ಯವಾಗುವದು, ವ್ಯವಹಾರ್ಯವಾಗುವದು. ಅಮಲದಾರರಿಗೆ ಸರ್ಕಾರಿ ಪತ್ರೆಯನ್ನು ಏರಿಸಬೇಕೆಂತಲೂ ಕಮಿಟಿಯು ಸೂಚಿಸಿರುವದು. ಈ ಸೂಚನೆಯು ಇದೆ ಹೊಸ ಯೋಜನೆಯು ಮರ್ಮಸ್ಥಾನವಾಗಿರುವದು. ವರಿಷ್ಠ ಅಮಲದಾರರೇ ಬಹುಶಃ ಸರ್ಕಾರಿಯು ಹೊಡೆಯುವವರು. ಅವರ ತಲೆಬುನ್ನು ಮೊದಲೂ

ಏಕಂ, ದಹಂ, ಶತಂ,

ಹೀಗೆ ಮೂರು ಅಂಕೆಗಳಿಂದ ಎಣಿಸುವಷ್ಟಿರುವದು ಶತಂ ಕಳೆದು ಮೀರುವ ಸಂಬಳವನ್ನು ಪ್ರತಿ ತಿಂಗಳು ಸಂಪಾದಿಸುವ ಅಧಿಕಾರಿಗಳಿಗೆ ಮತ್ತೂ ಭತ್ತೆ ಬಹತ್ತಿ ಏತಕ್ಕೆ? ಭತ್ತೆಯು ಕಡಿಮೆಯಾಗಿ, ಮೋಘತ ಸಂಬಳಯಿಯನ್ನು ಅವರು ಇಷ್ಟು ದಿವಸ ಸ್ವೀಕರಿಸುತ್ತಿದ್ದರೆಂದು ನಾವೇನೂ ಹೇಳಲಾರೆವು. ಈಗಾದ ಬಿಟ್ಟಿಯ ಜುಲುಮಿನ ಬೊಬ್ಬಾಟದಿಂದ ಜೀನಸುಗಳ ಬೆಲೆಯನ್ನು ಹಳ್ಳಿಗರು ಬೇಕೆಂದು ಅಪರಿಮಿತವಾಗಿ ಏರಿಸುವರು, ಅದಕ್ಕಾಗಿ ಭತ್ತೆಯ ಪ್ರಮಾಣವನ್ನೇರಿಸುವದು ಅತ್ಯವಶ್ಯಕವದೆಂದು ಅಲ್ಲಿಯ ಒಬ್ಬ ಕಮಿಶನರರ ಮತವದೆ. ಇದೊಂದು ತೀರ ಕುಂಟ ಕಾರಣವೆಂದು ನಮಗೆ ಕಾಣುತ್ತದೆ. ದೊಡ್ಡದೊಡ್ಡ ಅಧಿಕಾರಿಗಳಿಗೆ ಪೂರೈಸಿದ ಜೀನಸುಗಳಿಗಾಗಿ, ಹಳ್ಳಿಗಳೊಳಗಿನ ವ್ಯಾಪಾರಿಗಳು ನಿಷ್ಕಾರಣ ಬೆಲೆ ಏರಿಸುವಷ್ಟು ಧಿಟ್ಟರು, ಅಪ್ರಮಾಣಿಕರು, ಎಂದು ನಾವೆಂದೂ ನಂಬಲಾರೆವು. ಭತ್ತೆಯನ್ನು ಏರಿಸುವದಿದ್ದರೆ, ಮತ್ಯಾವ ಕಾರಣದಿಂದೇರಿಸಿರಿ, ಸರಬರಾಯಿಯನ್ನು ನಿರ್ಮೂಲಿಸಲಿಕ್ಕೆಂದು ಬೇಡ, ಎಂಬುದೇ ನಮ್ಮ ನಿಶ್ಚಿತ ಮತವು. ಒಟ್ಟಿಗೆ ಕಮಿಟಿಯ ಸೂಚನೆಗಳು ಬಿಟ್ಟಿಯಂಥ ಅನ್ಯಾಯದ ವ್ಯಾಪಾರವನ್ನು ಕಿತ್ತುಹಾಕಲು

ಸಾಕಷ್ಟು ಬಿರುಸಾಗಿಲ್ಲ.

ಮುಕ್ತೆದಾರಿ ಪದ್ಧತಿಯನ್ನಷ್ಟು ಪ್ರಚಾರಿಸಿ, ಬೇಕಾದ ಜೀನಸುಗಳನ್ನೂ, ಗಾಡಿಗಳನ್ನೂ, ಕೂಲಿಕಾರರನ್ನೂ, ಪೂರೈಸಿಕೊಂಡು, ಒಬ್ಬರ ಮೇಲೆ ಸಹ ಜುಲುಮಾಗದಂತೆ, ಒಬ್ಬರಿಂದ ಸಹ ಸರಬರಾಯಿಯ ಲೆಕ್ಕಕ್ಕೆ ಒಂದು ಕಾಸೂ ಅನ್ಯಾಯದಿಂದ ಹಿಸಕೊಳ್ಳದಂತೆ, ಬಿರುಸು ನಿಯಮಗಳನ್ನು ಏರ್ಪಡಿಸಿದ ಹೊರತು ಈಗಿನ ಅನ್ಯಾಯದ ಪದ್ಧತಿಯು ಅಳಿಯದು. ಈ ವ್ಯಾಪಾರದೊಳಗೆ ಒಂದು ಕಾಸು ಹೆಚ್ಚುಕಡಿಮೆಯಾದದ್ದು ಕಂಡು ಬಂದರೆ, ಲಂಚ ತಿಂದವರಿಗೆ ಸಿಗುವ ಪ್ರಾಯಶ್ಚಿತ್ತವೇ ಇವರಿಗೆ ಸಿಗುವದೆಂದು ಕಟ್ಟಳೆಗಳನ್ನು ವಿಧಿಸೋಣಾಗಬೇಕು. ಇಂಥ ಕರ್ತವ್ಯವನ್ನು ಮಾಡಲಿಕ್ಕೆ ಸರಕಾರವು ಹಿಂಜರಿಯದೆಂದು ನಂಬಿ, ಬಿಟ್ಟಿಯ ಮಣ್ಣಿನ ಗೋಡೆಗಳನ್ನು ತೋಳೆದು ನೋಡಿ, ಅವುಗಳನ್ನು ಕಿತ್ತು ಒಗೆಯಲಿಕ್ಕೆ ಸರಕಾರಕ್ಕೆ ಪ್ರೇರೇಪಿಸಿದ ನಾಮದಾರ ಘುಗ್ರೀರವರಿಗೆ, ನಾವು ಮನಃಪೂರ್ವಕ ಕೊಂಡಾಡುವೆವು.

ಸ್ಫುಟ ಸೂಚನೆಗಳು.

೧ ನಮ್ಮ ಚಿರಸ್ಮರಣೀಯವಾದ ಒಂದು ಸಂಚಿಕೆಯೊಳಗೆ ಹಂದಿಗಳ ಹಾವಳಿ ಎಂಬ ವಿಷಯವನ್ನು ನಾವು ಚರ್ಚಿಸಿದ್ದೆವು. ಕಾಡು ಮೃಗಗಳ ಹಾವಳಿಯಿಂದ ನಮ್ಮಲ್ಲಿಯ ಒಕ್ಕಲಿಗರಿಗೆ ಅದರಿಂದ ಎಷ್ಟು ಅಪರಿಮಿತ ಹಾನಿಯಾಗುತ್ತದೆಂದು ಜನರೇ ಅಲ್ಲಾಕೆ, ಕಣ್ಣಾರೆ ನೋಡಿದ ಅಧಿಕಾರಿಗಳು ಸಹ, ವ ನಾನಾಣಾತ್ತಾರೆ ಕಿತಿತೆ ಖಾತೆಯ ಡಾಯರೆಕ್ಟರ ರಾವ ಸಾ. ಕಿಟಿಂಬ ಸಾಹೇಬರು ಇದನ್ನೆಲ್ಲ ಕಣ್ಣಾರೆ ನೋಡಿ, ಇಂಥ ಹಾವಳಿಯನ್ನು ಕಡಿಸಬೇಕೆಂದು ಸರಕಾರಕ್ಕೆ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ತಿಳಿಸಿದ್ದರು. ಇವರ ಪತ್ರವು, ಅದರ ಮೇಲಿನ ಕಲೆಕ್ಟರವೇತರ, ಜೀಫ ಕನ್ಸರವೇಟರ, ಕಮಿಶನರರಾಧ, ಬರ್ಡೆಬಡೇ ಅಧಿಕಾರಿಗಳ ಟೀಕೆಯೂ, ಸೂಚನೆಗಳೂ ಪೂರ್ತ ಕಮಿಟಿಗಳ ಮುಂದೆ ಬಂದು, ಅವುಗಳ ನಿರ್ಣಯಗಳ ಸಹಿತ ಸರಕಾರದ ಕೊನೆಯ ನಿರ್ಣಯಕ್ಕೆ ಕಳುಹಿಸಲ್ಪಟ್ಟಿದ್ದವು. ಕಾಡು ಮೃಗಗಳನ್ನು ನಾಶಪಡಿಸುವ ಸ್ವತಂತ್ರ ಯೋಜನೆಯನ್ನು ಇಡಬೇಕೆಂದು ಸರಕಾರಕ್ಕೂ ಮಾನ್ಯವಿತ್ತೆಂದು ನಾವು ಅರಿತಿದ್ದ

ವೆವು. ಆದರೆ ಇವೆಲ್ಲ ಕಾಗದಿ ಕುದುರೆಗಳು ಓಡಿಸಿ, ಅದರಿಂದ ನಿಶ್ಪನ್ನವೇನಾಯಿತೆಂದು ಇನ್ನು ತನಕ ಜನರಿಗೆ ತಿಳಿದಿಲ್ಲ. ಮೊನ್ನೆ ಪ್ರಕಟಿಸಲ್ಪಟ್ಟ ಶೇತಕಿ ಖಾತೆಯ ರಿಪೋರ್ಟಿನೊಳಗೆ ಎಕ್ಟಿಂಗ ಡಾಯರೆಕ್ಟರ ಡಾ. ಮನ ಸಾಹೇಬರು ಈ ವಿಷಯದ ಸ್ವಲ್ಪ ಮಾಹಿತಿಯನ್ನು ಕೊಟ್ಟಿರುವರು. "ಹಂದಿಗಳಿಗೆ ಮುರಿಯಲಿಕ್ಕಾಗದಂಥ ಬೇಲಿಗಳನ್ನು ಹೊಲಗಳಿಗೆ ಹಾಕಿ ನೋಡಲು, ಪ್ರಯೋಗವು ಯಶಸ್ವಿಯಾಗುವದೆಂದು ಕಾಣುತ್ತದೆ. ಆದರೆ ಅದರ ವೆಚ್ಚವು ಭಾರೀಯಾಗುತ್ತದೆ. ಬೇಟೆಗಾರರ ಮತ್ತು ಬೇಟೆ ನಾಯಿಗಳ ದಂಡೆತ್ತಿ, ಹಂದಿಗಳ ಮೇಲೆ ಸಾಗಿ, ಅವುಗಳನ್ನು ಕೊಲ್ಲುವ ಉಪಕ್ರಮವನ್ನು ನೀರಾ ಪರಿಯಲ್ಲಿ ಯಶಸ್ವಿಯಾಗಿ ನಡಿಸಿರುವರು. ಆದರೆ ಈ ದೌಡಿನ ವೆಚ್ಚವನ್ನು ಎಣಿಸಿದರೆ, ಸರಾಸರಿ ಒಂದೊಂದು ಹಂದಿಗೆ ಆರಾರು ರೂಪಾಯಿ ಖರ್ಚು ತಗಲುತ್ತದೆ. ಕಾನಡಾ ಜಿಲ್ಲೆಯಲ್ಲಿ ಸಹ ಕಲೆಕ್ಟರ ಸಾಹೇಬರ ಉದಾರ ಆಶ್ರಯದಿಂದ ಇಂಥ ಪ್ರಯೋಗವನ್ನು ನಡಿಸಲಿಕ್ಕೆ ಕೆಲವು ಬಂದೂಕುಗಳು ಜನರಿಗೆ ಪೂರೈಸಲ್ಪಟ್ಟಿರುವವು. ಅದರಿಂದ ನಿಷ್ಪತ್ತಿ ಏನಾಯಿತೆಂದು ನೋಡತಕ್ಕದ್ದಿದೆ.

---

೨ ಹಿಂದು ಬಹಿಯಿಂದ(?) ಆಸ್ತೇ ಆಸ್ತೇ ಇಂಥ ಯುದ್ಧವು ಹಂದಿಗಳ ಕೂಡ ನಡೆಯುತ್ತಿದ್ದಾಗ, ಕಾಡು ಮೃಗಗಳನ್ನೂ, ವಿಷಾರಿ ಪ್ರಾಣಿಗಳನ್ನೂ, ಹಾವುಗಳನ್ನೂ ಕೊಂದವರಿಗೆ, ಉತ್ತೇಜನಾರ್ಥವಾಗಿ ಕೊಡುವ ಇನಾಮು ರದ್ದು ಆದಂತೆ ತೋರುತ್ತದೆ. ಯುದ್ಧ ಕಾಲದಲ್ಲಿ ಹಣದ ಮಿತವ್ಯಯಕ್ಕೆಂದು ತಡಕೊಬ ಇಷ್ಟ ಪ್ರಚಾರವು ಇನ್ನು ಕಾಯಂವಾಗಿ ರದ್ದಾಯಿತೇನು? ಹಂದಿಗಳನ್ನು ಕೊಂದವರಿಗೆ ಮಾತ್ರ ಮುಂಚಿನಂತೆ ಇನಾಮು ಸಿಗುವದು. ಇತರರಿಗಿಲ್ಲ, ಎಂದು ಹೊಸ ಅಪ್ಪಣೆಯನ್ನು ಸಹ ಕೆಲವು ಬೇಸಾಯಗಾರರಿಗೆ ಗ್ರಾಮಸ್ಥರು ತಿಳಿಸಿರುವರು. ಇದರಿಂದ ಹಂದಿಗಳ ಕೂಡ ಮಾತ್ರ ಯುದ್ಧವು ನಡೆದದೆ, ಬೇರೆ ಕಾಡು ಮೃಗಗಳ ಕೂಡ ಮತ್ತು ಹಾವುಗಳ ಕೂಡ ಒಂದು ವಿಧದ ಒಪ್ಪಂದವಾಗಿದೆಂದು ಹೇಳದೆ ಕಾಣುವದಿಲ್ಲವೇ? ಬೆರ್ಚು ಹುಲಿಗಳಂಥ ಕ್ರೂರ ಮೃಗಗಳ ಕೂಡ, ಶಿಕಾರಿಗಾಗಿ ಆಟಕ್ಕೆಂದು ಕೆಲ ಅಧಿಕಾರಿಗಳ ಒಪ್ಪಂದವಾಗಬಹುದಿದ್ದರೂ, ಒಕ್ಕಲಿಗರ ಒಡಂಬಡಿಕೆಯಾಗದೆಂದು ಖಂಡಿತವಾಗಿ ನಾವು ಹೇಳಬಲ್ಲೆವು. ಅವರ ದನಕರುಗಳನ್ನ ಈ ನಿರ್ದಯ ಶತ್ರುಗಳು ಎಷ್ಟು ಸಂಹರಿಸುತ್ತವೆಂದು ಅವರು ಬಲ್ಲರು. ಪಟ್ಟ ಬೆಟ್ಟದೊಳಗಿನ ತಮ್ಮ ಸಾಮ್ರಾಜ್ಯದಲ್ಲೇ ಕೊಂದ ದನಗಳ ತಲೆಬುರುಡೆ ಸ್ಮಾರಕಗಳು ಹ್ಯಾಗೆ ಸಿಗುತ್ತವೆ, ಎಂದು ರಾ| ನಟವರ್ಧನರ ಭಾಷಣವನ್ನು ಓದಿದರೆ ತಿಳಿಯುವದು. ಇಂಥ ಕ್ರೂರ ಶ್ವಾಪದಗಳನ್ನು ಕೊಂದವರಿಗೆ ಇನಾಮು ಕೊಡುವದು, ಅದರ ಸಾಹಸದ ಮತ್ತು ಪರಿಶ್ರಮದ ಪ್ರತಿಫಲಕ್ಕೆಂದಲ್ಲ, ಉತ್ತೇಜನಾರ್ಥವಾಗಿ, ಹೊಗಳಿಕೆಗಾಗಿ, ಇಂಥ ಇನಾಮನ್ನು ಕೊಡುವದು ಅತ್ಯವಶ್ಯಕವದೆ. ಬೇಸಾಯಗಾರರ ಮತದಂತೆ ಇಂಥ ಯಾವದೇ ಕಾಡು ಮೃಗಗಳ ಕೂಡ ಒಡಂಬಡಿಕೆಯ ಸಂಧಾನವನ್ನು ಅತ್ಯಲ್ಪ ಸಹ ನಡಿಸಕೂಡದು. ಇಂಥ ಕ್ರೂರ ಪ್ರಾಣಿಗಳಿಗೆ ಡಾಯರ ಸಾಂಪ್ರದಾಯದ "ಬಡಿಬಡಿ ಬಡೆಯಿರಿ" ಎಂಬ ಪ್ರಾಮಾಣಿಕ ಕರ್ತವ್ಯ ಬುದ್ಧಿಯ ಸಾಧಾ ಶಸ್ತ್ರಗಳಿಂದಲೇ ಪರಾಮರ್ಶಿಸಬೇಕೆಂದು ನಮ್ಮದೂ ಮತವು. ಆದದರಿಂದ ಸದ್ಯಕ್ಕೆ ತಡಕೊಬ ಆಗಿದ್ದ ಇನಾಮಿನ ಪದ್ಧತಿಯನ್ನು ಪುನಃ ಪ್ರಚಾರಿಸಬೇಕೆಂದು ಸರಕಾರಕ್ಕೆ ಸೂಚಿಸುವೆವು. ಇನಾಮಿನ-ಪದ್ಧತಿಯಿಂದ ಅತ್ಯಲ್ಪ ಫಾಯಿದೆಯಾದರೂ ಆಗುದೇಕೆಂದು ಹೇಳುವಷ್ಟು ಕಾಡು ಮೃಗಗಳ ವಿನಾಶಕ ಹಾವಳಿಯು ಅಸಹ್ಯವಾಗಿದೆ.

---

೩. ಸರಕಾರಿ ಖಾತೆಗಳ ಕಾರಕೂನರ ಹೊಸ ಪಗಾರುವಾರಿ ಕ್ರಮವು ಜಾಹೀರಾಗಿದೆ. ಇಂಥ ಬಡತಿಯ ಪ್ರಾಪ್ತಿಯು ಬಡ ಕಾರಕೂನರಿಗೆ ಮೊದಲೇ ದೊರೆಯಬೇಕಾಗಿತ್ತು. ಈಗಿದ್ದ ಪಗಾರಿಗೂ, ಅವರ ವೆಚ್ಚಕ್ಕೂ, ಮೇಲಿಂದಮೇಲೆ ಅನುಗ್ರಹಿಸಿದ ಭತ್ತೆಯನ್ನು ಕೂಡಿಸಿದರೂ, ಏನೂ ಗಂಟು ಬೀಳುತ್ತಿದ್ದಿಲ್ಲ. ಎಲ್ಲರಕ್ಕಿಂತ ಮೊದಲು 'ಮಮ' ಎಂದು ಹೇಳುವ ಹೆಚ್ಚು ಪಗಾರದ ವರಿಷ್ಠರಿಗೆ, ಎಂದೋ ಬಡತಿ ದೊರೆತು, ಅವರ ಏರಿದ ಪಗಾರು ಭತ್ತೆಗಳ ಬೆಳೆಯಿಂದ ಸರಕಾರದ ತಿಜೋರಿಗೆ ವರ್ಷಕ್ಕೆ ೩|| ಕೋಟಿ ರೂಪಾಯಿಗಳ ಹೊಡತಬೀಳಹತ್ತಿದೆಂದು ಎಣಿಕೆಯು ಸಹ ಆಗಿಹೋಗಿದೆ ಆಗಲಿ. ವಿಲಂಬದಿಂದಾದರೂ ಕಾರಕೂನರ ಸುದೈವವು ಫಲಿಸಿತು. ಅದಕ್ಕಾಗಿ ಅವರನ್ನು ಅಭಿನಂದಿಸುವೆವು. ಇನ್ನು ಅವರಿಗೆ ಯುದ್ಧದ ಪೂರ್ವದಲ್ಲಿದ್ದ ಪಗಾರಿನಮೇಲೆ ಶೇಕಡಾ ೭೫ ರಿಂದ ಇಳಿಇಳಿದು ತೀರ ಕಡಿಮೆಯೆಂದರೆ ೩೦೦ ರೂ. ಯವರಿಗೆ ಶೇಕಡಾ ೩೦ ರ ಬಡತಿ ದೊರೆಯುವದು. ವರ್ಷವಾರಿ ಏರಿಕೆಯ ಕ್ರಮವೂ ಅವರಿಗೆ ಲಾಗುಮಾಡಲ್ಪಡುವದು. ಥಾಯನ್ ಪಾಸಾದವನಿಗೆ ಪ್ರಾರಂಭಕ್ಕೆ ೬೦ ರೂ ಸಂಬಳ ದೊರೆಯುವದು. ಗ್ರ್ಯಾಜುಏಟರಾದ ಮುನೀಮರಿಗೆ ೭೦ ರೂ ಸಿಗುವದು. ಮುನೀಮರಿಗೆ ಕೆಳ ದರ್ಜೆ, ಮೇಲ್ ದರ್ಜೆ, ಈ ರೀತಿ ಎರಡು ಶಾಖೆಗಳಿರುವವು. ಕೆಳದರ್ಜೆಯಲ್ಲಿ ಲಾಯಖಿರಿ, ಮತ್ತೊಂದು ಮೆಟ್ಟು ಏರಿದರೆ, ೧೦೦ ರ ತನಕ ಬಡತಿ, ಮತ್ತು ಆರಿಕೆಯ ಗ್ರೇಡಿನಲ್ಲಿ ಸೇರಿದರೆ, ೧೫೦ ರ ತನಕ ಮುಟ್ಟಲಿಕ್ಕಾಗುವದು. ಮೆಲ್ ತರಗತಿಯಲ್ಲಿ ೨೦೦, ಅನಂತರ ೩೦೦ ರ ಗುರಿ ಹೊಡೆಯಲಿಕ್ಕಾಗುವದು. ಒಟ್ಟಿಗೆ ಹೊಸ ತಳಪಿನ ಶಕ್ತಿಯೊಳಗೆ, ನ್ಯೂನತೆಯು ತೀರ ಕಡಿಮೆಯಿದೆ. ಪ್ರತಿ ಒಂದು ಆಫಿಸಿನೊಳಗಿನ ಜಾಗೆಗಳನ್ನು ನಿರ್ದಿಷ್ಟಮಾಡುವಾಗ, ಪಾತ್ರರಾದವರಿಗೆ ಬಡತಿಯಿಲ್ಲದೆ, ದೀರ್ಘಕಾಲ ಕಡಿಸಲಾಗದಂತೆ, ಯೋಜಿಸುವದು ಅವಶ್ಯಕವದೆ. ಇನ್ನು ಕಾರಕೂನರ ಕರ್ತವ್ಯವೇನೆಂದರೆ, 'ಹಿಂದಿ ನೌಕರರು ಸ್ವಭಾವತಃ ಪ್ರಮಾಣಿಕರು, ಅವರ ಕೈಗಳು ಹೊಲಸಾಗುವದು ಅಪರೂಪವು' ಎಂದು ವರಿಷ್ಠರಿಂದ ಹೊಗಳಲ್ಪಟ್ಟ ಪಟ್ಟು ತಮ್ಮ ಖ್ಯಾತಿಯನ್ನು ಸ್ವತಂತ್ರ ಮತದ ಜನರಿಂದಲೂ ಹೊಗಳಲ್ಪಡುವಷ್ಟು ಅಚ್ಚವಾಗಿ ಕಾಯ್ದು, ಎಲ್ಲ ನೌಕರರಿಗೆ ಆದರ್ಶವಾಗುವಂತೆ, ತಮ್ಮ ನೀತಿಮತ್ತೆಯಿಂದ ಅದನ್ನು ವರ್ಧಿಸಬೇಕೆಂದು ಪ್ರೇಮಪುರಃಸರ ಸೂಚಿಸುವೆವು.

---

೪. ಮೊಟ್ಟಮೊದಲು, ಗೋಚರಾವು ಫಿ ಮಾಫಿಯಾಗಿದ್ದರೂ, ಇತ್ತಿತ್ತ ಜಂಗಲಖಾತೆಯವರು ಅದರಿಂದಲೇ ಸಾವಿರು ಗಟ್ಟಲೆ ರೂಪಾಯಿಯ ಉತ್ಪನ್ನವನ್ನು ಮಾಡಹತ್ತಿರುವರು. ಈ ಹಣವು ಆಯಾಯ ಹಳ್ಳಿಯ ಗ್ರಾಮಸ್ಥರಿಂದ ವಸೂಲಾಗುತ್ತಿತ್ತು. ಅದರಿಂದ ರಯತರ ಅನುಕೂಲತೆಯ ಪ್ರಕಾರ ಜಮಾನ ಮಹಸೂಲು ವಸೂಲಿ ಕೊಡುವ ವೇಳೆಯೇ, ವಸೂಲಿಯ ಕ್ರಮ ನಡೆದು ತಿಜೋರಿಗೆ ಭರಣಾ ಆಗುತ್ತಿತ್ತು. ಮತ್ತು ಜಂಗಲಖಾತೆಗೆ ಇಂಥ ವಸೂಲಿಯ ಗೋಜು ಇದ್ದಿಲ್ಲ. ಆದರೆ, ಈಗೀಗ ಜಂಗಲಖಾತೆಯ ಫೋರೆಸ್ಟರರೇ, ಗಾರ್ಡರೇ, ತಮ್ಮ ತಮ್ಮ ಹದ್ದಿನಲ್ಲಿ ಸರ್ಕೀಟು ಪ್ರೋಗ್ರಾಮುಗಳನ್ನು ತಾಲೂಕು-ಗ್ರಾಮಸ್ಥರ ವಿದ್ಯಮಾನವೇ ಜಾಹೀರ ಪಡಿಸಿ, ೨-೩ ದಿವಸಗಳಲ್ಲಿಯೇ ವಸೂಲಿಯ ಕ್ರಮವನ್ನು ನಡಿಸಹತ್ತಿರುವರು. ಆ ಮುದ್ದತಿಯೊಳಗೆ ವಸೂಲಿ ಕೊಡದಿದ್ದವರು ಒಂದಕ್ಕೆ ಎರಡಷ್ಟು ಕೊಡಬೇಕೆಂಬ ಹುಕುಂ. ಈ ವಸೂಲಿಯ ಕ್ರಮವು, ಜಂಗಲಖಾತೆಯ ಇತರ ವಿಶಿಷ್ಟ ಕೆಲಸ ವಿಲ್ಲದಿದ್ದ ಕ್ರಾಯವೆಂದರೆ— ಬಹುಶಃ ಜೂನ ದಾರಭ್ಯ(?) ನಡಿಯುತ್ತದೆ. ಆಗಲೇ ರಯತರಿಗೆ ಬೇಸಾಯದ ವ್ಯವಸಾಯದ ಹಂಗಾಮು ಆಗಿ, ಫೋರೆಸ್ಟರರ ಸರ್ಕೀಟು ಜಾಹೀರು, ತಿಳಿದವರಿಗೆ ತಿಳಿಯಿತು, ಇಲ್ಲದವರಿಗೆ ಇಲ್ಲ. ಹೀಗಾಗಿ ಕೊಟ್ಟವರು, ಕೊಟ್ಟು ಹೋದರು. ಕೊಡದಿದ್ದವರಿಗೆ ಎರಡು ಪಾಲು ಭೂದಂಡ. ಅದರ ವಸೂಲಿಗೆ ಪುನಃ ಗ್ರಾಮಸ್ಥರೇ! ಮೊದಲಿನ ಗ್ರಾಮಸ್ಥರಿಂದಾಗುವ ವಸೂಲಿ ಪದ್ಧತಿಯಲ್ಲಿ ಯಾವ ದೋಷಗಳನ್ನು ಕಂಡು ಹಿಡಿದು, ಈ ಹೊಸ ಪದ್ಧತಿಯನ್ನು ಅಂಗೀಕೃತಮಾಡಿದೆಂಬುದು ತಿಳಿಯದು. ಬಹುಶಃ ಗ್ರಾಮಸ್ಥರಿಗೆ ಆ ಸಂಬಂಧ ಸಲುವ ಕ್ಷುಲ್ಲಕ ಇಜಾಫೆಯನ್ನು ಉಳಿಸುವದಕ್ಕೋಸ್ಕರ, ಈ ಉಪಾಯವನ್ನು ಯೋಜಿಸಿದ್ದರೆ, ಇದರಿಂದ ಬಡ ರಯತರು ಬಹಳ ಕಷ್ಟಗಳಿಗೆ ಗುರಿಯಾಗುವದಲ್ಲದೇ, ಒಂದಕ್ಕೆ ಎರಡಷ್ಟು ಭೂದಂಡ ತೆರಬೇಕಾಗುತ್ತದೆ. ಆಯಾಯ ಗ್ರಾಮಗಳ ದನಗಳ ಹಾಗೂ ಕಬ್ಬಿನ ಕ್ಷೇತ್ರದ ಯಾದಿಗಳು ತಯಾರಿಸುವ ಕೆಲಸಕ್ಕೆ ಗ್ರಾಮಸ್ಥರು ಬೇಕು. ವಸೂಲಿಯ ಕ್ರಮಕ್ಕೆ, ಇಜಾಫೆ ಕೊಡಬೇಕಾಗುತ್ತದೆಂಬದರಿಂದ(!), ಅವರು ಬೇಡ. ಏನಂದರೆ, ಗ್ರಾಮಸ್ಥರೆಂದರೆ, ಎಲ್ಲ ಖಾತೆಗಳಿಗೂ "ಎಡಗೈ" ಎಂಬಂತಾಗಿರುವರೋ? ಪಾಪ! ಅವರೊಂದಿಗೆ ಬಡ ರಯತರ ಅನಾವಶ್ಯಕ ಗೋಳಾಟ! ಅದ್ದರಿಂದಲೇ ಅದೊಂದು ವರಿಷ್ಠರಿಗೆ ವಿಚಾರಾರ್ಹ ಸಂಗತಿಯಾಗಿದೆ.

---

೫ ಈ ಮೊದಲು ನಿಶ್ಚಯವಾದ್ದಂತೆ, ನಿನ್ನೆ ತಾ. ೭ ನೇ ಯಿಂದ ಇಲ್ಲಿ ದನಗಳ ದವಾಖಾನೆ ಸ್ಥಾಪಿಸಲ್ಪಟ್ಟಿತೆಂಬುದು ಆನಂದಕರವು. ಸದ್ಯಕ್ಕೆ ಈ ದವಾಖಾನೆಯು ಇಲ್ಲಿಯ ಮುನಿಸಿಪಾಲಿಟಿಯ ಜಿತ್ರಿಗಿ(?) ಧರ್ಮಶಾಲೆ ಕಟ್ಟಡದಲ್ಲಿ ತೆರೆದರೂ, ಅದರ ಕಾಯಂ ಕಟ್ಟೋಣವು ಪೆಲ್ಲೇಕೇರಿಯ ಶೇತಕಿ ಫಾರ್ಮಿನಲ್ಲಿ ಆಗುವದದೆ. ಅದಕ್ಕಾಗಿ ನಮ್ಮಲ್ಲಿಯ ಗುಜರ ಭಾಟಿಯಾ ಶ್ರೀಯುತ ಶೇಟ ಹಂಸರಾಜ ಉದ್ಧಾರವರು ರೂಪಾಯಿ ೩,೦೦೦ ರ ದೇಣಿಗಿಯನ್ನು ವಾಗ್ದಾನ ಮಾಡಿದ್ದಂತೆ ಕೊಟ್ಟುಬಿಟ್ಟಿರುವರು. ಈಗ ಈ ದವಾಖಾನೆಯ ಸ್ಥಾಪನೆಯಿಂದ ಬಡ ಮೂಕಪ್ರಾಣಿಗಳ ರೋಗ-ಚಿಕಿತ್ಸೆಯು ಶಾಸ್ತ್ರೀಯ ರೀತಿಯಿಂದಾಗಿ, ರಯತರಿಗೆ ಒಂದು ಕಾಸು ಸಹ ಖರ್ಚಿಲ್ಲದೆ, ವಿಶೇಷವಾಗಿ ಈ ಶಹರದ ಮತ್ತು ನೆರೆ ಹಳ್ಳಿಗಳ ದನಗಳು ಸಾಯುವ ಪ್ರಮಾಣವು ಕಡಿಮೆಯಾಗಲೇಬೇಕು. ಈ ಬಗ್ಗೆ ಅವುಗಳ ಪಕ್ಷದಿಂದ ಸರಕಾರದವನ್ನೂ, ಅದರ ಉದ್ಘಾಪಕ-ಪ್ರೋತ್ಸಾಹಕರನ್ನೂ ಮನಃಪೂರ್ವಕ ಅಭಿನಂದಿಸುವೆವು. ಅದರೊಂದಿಗೆ ಈ ದವಾಖಾನೆಯ ಸ್ತುತ್ಯ ಉದ್ದೇಶಗಳಿಗಾಗಿ ಈ ಶಹರದ ಮತ್ತು ನೆರೆ ಹಳ್ಳಿಯ ಜನರು ವಂತಿಗೆಯಿಂದ ರೂಪಾಯಿ ಒಂದು ಸಾವಿರ

ಕೊಡಿಸಿ ಕೊಟ್ಟಬಗ್ಗೆ ಅವರನ್ನೂ ಹರಿಸುವೆವು ಈಗ ರಯತರು ಬೇಕಾದರೆ ತಮ್ಮ ರೋಗಗ್ರಸ್ತ ದನಗಳ ಸಲುವಾಗಿ ಔಷಧೋಪಚಾರ ಮಾಡಿಕೊಳ್ಳಬಹುದೆಂದು ಸೂಚಿಸುವೆವು ಆದರೂ, ಇದೊಂದು ದವಾಖಾನೆಯಿಂದ ಘಟ್ಟದ ಕೆಳಗಿನ ಎಲ್ಲ ತಾಲೂಕುಗಳ ಅಡಚಣಿ ದೂರಾದೀತೆಂದು ನಾವೇನು ಹೇಳಲಾರೆವು ಅಷ್ಟು ದೂರ ದೂರ ಅಂತರವಿದೆ ಪ್ರತಿ ತಾಲೂಕಿನಲ್ಲಿ ಒಂದೊಂದು ಇಟ್ಟರೆ ಮಾತ್ರ ಉಪಯೋಗವಾದೀತು

---

೬. ಪಂಜಾಬ ಪ್ರಕರಣದ ವಿಷಯವಾಗಿ ಮುಂಬಯಿಯ ಪ್ರೆಸಿಡೆನ್ಸಿ ಎಸೋಸಿಏಶನದ ತರ್ಫೆನಿಂದ, ಸಾರ್ವಜನಿಕ ಸಭೆಯು ಕೂಡಿ ಲೋಕಮತವನ್ನು ಪ್ರಕಟಿಸಿತು ಸಭಾಪತಿಗಳಾದ ಸರ ನಾರಾಯಣ ಚಂದಾವರಕರ ಮಹಾಶಯರು ಬಹಳೇ ಮನನೀಯವಾದ, ಅತ್ಯಂತ ವಿಚಾರಪರಿಪ್ಲುತವಾದ ಭಾಷಣವನ್ನು ಮಾಡಿ, ಪಂಜಾಬದೊಳಗಿನ ಅಸ್ವಸ್ಥತೆಗೆ ರೌಲೆಟ ಕಾಯಿದೆಯು ಹ್ಯಾಗೆ ಕಾರಣವಾಯಿತು, ಸರಕಾರವೇ ಈ ಅನರ್ಥಕ್ಕೆ ಎಷ್ಟು ಕಾರಣವಾಗಿದೆ, ಮುಂದಿನ ನಮ್ಮ ಸುರಕ್ಷಿತತೆಗೆ ಪಾರ್ಲಿಮೆಂಟು ಏನುಮಾಡಬೇಕಾಗಿದೆ, ಸರ್ವಾಧಿಕಾರಿ ಲಾರ್ಡ ಚೆಮ್ಸಫರ್ಡ ಸಾಹೇಬರಿಗೆ ಯಾಕೆ ಹಿಂಗರೆಯಬೇಕು, ಎಂಬುದನ್ನೆಲ್ಲ ಸಾಧಾರ ಪ್ರತಿಪಾದಿಸಿದರು ಪಂಡಿತ ಮಾಲವೀಯರು ಬಣ್ಣಿಸಿದ ಪಂಜಾಬದೊಳಗಿನ ಅತಿ ನಿರ್ದಯ ಅತ್ಯಾಚಾರಗಳನ್ನು ಶಾಂತಚಿತ್ತದಿಂದ ಕೇಳಿಕೊಂಡು, ನೆರೆದ ಜನರು ಹಳಹಳಿಸಿದರು ಈ ವಿಷಯದ ಮಂತ್ರಿಮಂಡಳದ ಮತ್ತು ಹಿಂದುಸ್ಥಾನ ಸರಕಾರದ ನಿರ್ಣಯಗಳು ಬಹಳೇ ನಿರಾಶಾಜನಕವಾಗಿರುತ್ತವೆಂದೂ, ಈ ಅನರ್ಥಕ್ಕೆ ಕಾರಣವಾದ ಅಪರಾಧಿಗಳನ್ನು ತಕ್ಕ ಶಿಕ್ಷೆಗಳಿಂದ ದಂಡಿಸಬೇಕೆಂದೂ, ಸರ ಓಡವಾಯರರಿಗೆ ಕೋರ್ಟಿನ ಮುಂದೆ ಎಳೆದು ತನಖಿ ನಡೆಸಬೇಕೆಂದೂ, ಗವರ್ನರ ಜನರಲ್ಲರಾದ ಲಾರ್ಡ ಚೆಮ್ಸಫರ್ಡರಿಗೆ ವಿಲಾಯತಿಗೆ ಕರೆದೊಯ್ದು ಅಧಿಕಾರದಿಂದ ಮುಕ್ತ ಮಾಡಬೇಕೆಂದೂ ಈ ಸಭೆಯಲ್ಲಿ ಠರಾವುಗಳು ನಿರ್ಧರಿಸಲ್ಪಟ್ಟವು ಠರಾವಿನ ಪ್ರತಿಗಳು ಮುಖ್ಯ ಪ್ರಧಾನರಿಗೂ, ಪಾರ್ಲಮೆಂಟಿನ ಸಭಾಪತಿಗೂ, ಮೊಂಟೆಗ್ಯೂ ಸಾಹೇಬರಿಗೂ, ತಂತಿಯಿಂದ ಕಳುಹಿಸಲ್ಪಟ್ಟವು ಈ ಪ್ರಕರಣವು ನಮ್ಮ ಭಾವಿ ಸುರಕ್ಷಿತತೆಗೆ, ನಮ್ಮ ಮತ್ತು ಬ್ರಿಟಿಷ ಸರಕಾರದ ಚಿರ ಸಂಬಂಧಕ್ಕೆ ನಮ್ಮ ರಾಜನಿಷ್ಠೆಯ ಭಾವನೆಗಳಿಗೆ ಇಷ್ಟು ಪ್ರಸಂಗಕವಾಗಿದೆ-ಅದರ ವಿಷಯವಾಗಿ ಎಲ್ಲ ಜಿಲ್ಲಾ ಕಮಿಟಿಗಳು ಈ ಠರಾವುಗಳಿಗಿರುವ ತಮ್ಮ ಪುಷ್ಟಿಯನ್ನು ಬೇಗನೇ ಪ್ರಕಟಿಸುವದು ಕರ್ತವ್ಯವಾಗಿದೆ ನಮ್ಮ ಮುಂಬಯಿಯ ಕಮಿಟಿಯು ಈ ವಿಷಯದ ನಮ್ಮ ಜಿಲ್ಲೆಯ ಮತವನ್ನು ಪರಿಷತ್ತಿನ ನಿರ್ಣಯದಂತೆ ಧ್ವನಿಸುವದೆಂದು ನಾವು ಕೋರುವೆವು.

---

೭. ಕಳೆದ ಮೇ ತಿಂಗಳ ತಾ ೧೪ ರಲ್ಲು, ಹೊನ್ನಾವರ ತಾಲೂಕ ನೀಲಕೋಡ ಎಂಬ ಹಳ್ಳಿಯಲ್ಲಿ ಆಕಸ್ಮಿಕ ಬೆಂಕಿಯಿಂದ ಹವೀಕ ಬ್ರಾಹ್ಮಣರ ೧೩ ಮನೆಗಳು ಸುಟ್ಟು, ರೂಪಾಯಿ ೩೨,೫೫೦ ದಷ್ಟು ಲುಕ್ಸಾನು ಆಗಿತ್ತು ಈ ಆಪತ್ತಿಗೆ ಬಲಿಬಿದ್ದ ಬಡ ಜನರ ಸಂಕಷ್ಟ ನಿವಾರಣೆಗಾಗಿ ಮುಂಬಯಿಯ ಹೆಸರುವಾಸಿ ಎನ್ ಎಸ್ ಕಾಡಿಯಾಧರ್ಮಫಂಡಿನಿಂದ ಒಂದು ಸಾವಿರ ರೂಪಾಯಿ ಬಂದಿರುವದಾಗಿಯೂ, ಅದು ಹೊನ್ನಾವರ ತಾಲೂಕ ಮಾಮಲೇದಾರರ ವಿದ್ಯಮಾನ ಆಯಾಯ ಜನರಿಗೆ ಹಂಚಲ್ಪಡುವದಾಗಿಯೂ ಕೆರ್ಸಿ ಡಿಸ್ಟ್ರಿಕ್ಟ ಡೆಪ್ಯುಟಿಗಳವರಿಂದ ತಿಳಿಯುತ್ತದೆ ಆಕಾರಣ, ಆ ಫಂಡಿನ ವ್ಯವಸ್ಥಾಪಕರನ್ನೂ ಪರಿಶ್ರಮ ಮಾಡಿ ಈ ವಂತಿಗೆಯನ್ನು ಗಳಿಸಿದವರನ್ನೂ ಹರಿಸಿ ಆ ಬಡ ಜನರನ್ನು ಅಭಿನಂದಿಸುವೆವು

---

೮. ಹಳಿಯಾಳದ ಪ್ರಖ್ಯಾತ ಮನೆತನದ ಶ್ರೀಯುತ ಕೃಷ್ಣರಾವ ಮಂಗೇಶ ದೇಶಪಾಂಡೆಯವರು ಈಗ ಒಂದು ಒಂದುವರೆ ವರ್ಷದಿಂದ ಅಸ್ವಸ್ಥರಾಗಿ ಸಾಂಗಲಿ ಮಿರಜ ಕಡೆಗೂ ಬೆಳಗಾಂವಿ ಕಡೆಗೂ, ಔಷಧೋಪಚಾರದ ಸಲುವಾಗಿ ಹೋಗಿ ಸದ್ಯಕ್ಕೆ ಬೆಳಗಾಂವಿ ಡಾ। ಹೇರೆಕರರವರ ಚಿಕಿತ್ಸೆಯಲ್ಲಿರುವವರು, ಇದೆ ಕಳೆದ ತಾ ೩ ರಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ಬಹು ವಿಷಾದವೆನಿಸುತ್ತದೆ ಇವರು ಚಲೋ ಶ್ರೀಮಂತರಾಗಿ, ಹಳಿಯಾಳದಲ್ಲಿ ಪ್ರಮುಖ ಜಮೀನದಾರರೂ ನಾಗರಿಕರೂ ಆಗಿದ್ದರು ಇವರ ಮಂದಿಯು ಫಾರೆಸ್ಟ ಕಂಟ್ರ್ಯಾಕ್ಟಿನದ್ದಾಗಿತ್ತು ಕಳೆದ ವರ್ಷವೇ ಇತರ ಕಂಟ್ರ್ಯಾಕ್ಟರರೊಡನೆ ಕಟ್ಟಿಗೆಗೆ ಬೆಂಕಿ ಬಿದ್ದ ಸಂಬಂಧ ಜಂಗಲ ಖಾತೆಯ ಅನೀತಿಯ ನೇಮಗಳಿಂದ ಇವರಿಗೂ ಭಾರಿ ದಂಡ ತೆರಬೇಕಾಯಿತು ಇವರು ಅಲ್ಲಿಯ ಮುನಿಸಿಪಾಲಿಟಿ ಲೋಕಲ ಬೋರ್ಡ ಸಹಕಾರಿ ಸಂಘ, ಜೀವ ಗ್ರೇನಡಿಪೊ ಗೋರಕ್ಷಣ ಸಂಸ್ಥೆ ತಾಲೂಕಾ ಸಭೆ ವಗೈರೆ ರಾಜಕೀಯ, ಧಾರ್ಮಿಕ ಸಾಮಾಜಿಕ ಸಂಸ್ಥೆಗಳ ಮುಖ್ಯ ಚಾಲಕರಿದ್ದು, ಇಡಿ ತಾಲೂಕಿನ ಹಿತದ ದೆಶೆಯಿಂದ ವಿಚಾರಪೂರ್ವಕ ನಡಿಯುವ ವಜನದಾರ ಮುಂದಾಳುಗಳಾಗಿದ್ದರು ಈಗಿನ ಕಾಲಕ್ಕನುರೂಪ, ದೇಶಾಭಿಮಾನ ಸ್ವಾರ್ಥತ್ಯಾಗ ನಿರ್ಭೀಡ ಕರ್ತವ್ಯತತ್ಪರತೆ ಸಾರ್ವಜನಿಕಹಿತದಕ್ಷತೆ, ಸಾಹಸಗಳೆಂಥ ಅಮೂಲ್ಯ ಗುಣಗಳಿಂದ ಇವರು ಲೋಕಪ್ರಿಯರೂ ಲೋಕಾದರಕ್ಕೆ ಪಾತ್ರರೂ ಆಗಿದ್ದರು ಇವರಿಗೆ ತಕ್ಕ ಶಿಕ್ಷಣವು ದೊರೆತಿದ್ದರೆ, ನಮ್ಮ ಜಿಲ್ಲೆಯ ಲೋಕಶಾಹೀ ಪ್ರತಿಷ್ಠೆ ಭೂಷಣವೇ ಆಗುತ್ತಿದ್ದರು ಇವರ ಅಕಾಲಿಕ ನಿಧನದಿಂದ ಹಳಿಯಾಳದ ಅಲ್ಲ, ಇಡೀ ಜಿಲ್ಲೆಯ ಕಾರ್ಯಸ್ಫೂರ್ತಿಗೂ ಸಾರ್ವಜನಿಕ ಹಿತಕ್ಕೂ ಬಹಳೇ ಹಾನಿಯುಂಟಾಗಿದೆ ಈ ಹಾನಿಯು ಸದ್ಯಕ್ಕೇನೂ ತುಂಬಿ ಬರುವಹಾಗಿಲ್ಲ, ಜಿಲ್ಲೆಯ ದುರ್ದೈವ! ಕಾಲಚಕ್ರದ ಮಹಾತ್ಮ್ಯದ ಕಡೆಗೆ ಲಕ್ಷ್ಯಗೊಟ್ಟು ನಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿ, ಮೃತರ ಆತ್ಮಕ್ಕೆ ಚಿರ ಶಾಂತಿ ದೊರೆಯಲೆಂದು ಬಯಸುವೆವು.

ಇಹವೃತ್ತ.

ಮುಂಬೈಗಿಂತ, ಸೋವಿ!

ಖರೀದಿಮಾಡಿರಿ! ಬಿಡಬೇಡಿರಿ!!

1 [illegible] 2 [illegible] ಸಹಿತ ಕಿಮ್ಮತ್ತು 1 [illegible] 8-0-0

2 [illegible] ರಿಸ್ಟವಾಚ [illegible] 10 [illegible] ([illegible]) ಇದ್ದು ಗ್ಯಾರಂಟಿ 10 [illegible] ಸಹಿತ 1ಕ್ಕೆ 20-0 0 ಸಪ್ರಿಂಗ [illegible] ಇದ್ದ ವಾಚ [illegible] ಕಾಣ [illegible] ಬಹಳ ಆಶ್ಚರ್ಯ

3 [illegible] ಗ್ಯಾರಂಟಿ, [illegible] 4 ಕಿಮ್ಮತ್ತು 1 ಕ್ಕೆ 9-8-0

4 [illegible] ವಾಚ, [illegible] ಗ್ಯಾರಂಟಿ 10 [illegible] ಗ್ಯಾರಂಟಿ ವರ್ಷ [illegible] ಕಿಮ್ಮತ್ತು 1 ಕ್ಕೆ 12-8 0 ಕಿಮ್ಮತ್ತಿನ [illegible] ಜೊತೆ [illegible] ವ್ಯಾಪಾರಸ್ಥರಿಗೆ ಹೋ [illegible]

ವಿಳಾಸ:— ಜ್ಯೋತಿ, ವಾಚಕಂಪನಿ.
ಪೋಷ್ಟ — ಶಿರ್ಸಿ ಉತ್ತರ ಕಾನಡಾ,

ಹೊಸ ಶೋಧ! "ಓಂ" ಹೊಸಶೋಧ
ಗುಣ ಬಾರದಿದ್ದರೆ ಹಣಪರತು
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ [illegible] ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯು ಸಿಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುತದೆ. ಉಷ್ಣದಿಂದದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಒದುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧ಳ ತೊಲೆಯ ಡಬ್ಬಿಗೆ ರು. ೧ ೧೨ ಆಣೆ ೩ ಡಬ್ಬಿಗಳಿಗೆ ೪ ರು ೮ ಆಣೆ ೬ ಡಬ್ಬಿಗಳಿಗೆ ೯ ರು [illegible] ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ—ಫಿಲ್ [illegible] ಆರ್ ಬ್ರದರ್ಸ ಮತ್ತು ಕಂಪನಿ
ಪೋಷ್ಟ ನಿಪ್ಪಾಣಿ, ಜಿ ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವ [illegible] ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾ ಮದುವೆ ಸಮಾರಂಭಗಳ [illegible] ರಾತ್ರಿ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ ಇದರಿಂದ ಬೆಳಕ ಹೆಚ್ಚು ಬಿದ್ದು ಖರ್ಚು ಸಹ ಕಡಿಮೆ ತಗಲುತ್ತದೆ ಈ ವಿನಹಾ [illegible] ದೀಪಗಳು ಹಾ, ಈ ದೀಪಗಳು ಹಚ್ಚು ಎಂಬಿ [illegible] ಕ್ರಯಗಳು ಸಹ ಇದ್ದ

ಬೇಕಾದವರು ಭಾಡಿಗೆಯ ದರವಾರ ಪ್ರತಿ [illegible] ಕೆಳಗಿನ ಪತ್ತೆಗೆ ಮುಂದಾಗಿ ತಿಳಿಸಬೇಕು.

ಪುರುಷೋತ್ತಮ ಲಕ್ಷ್ಮೀನಾರಾಯಣ ಶಾನಭಾಗ
ಹೆಗಡೇಕರ, ದುಕಾನ, ಕುಮುಟಾ.

Printed and published by Krishnarao Keshav Shenvi, at his Star of Kanara Press, Kumta

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೦.

ಪತ್ರದ ವರ್ಗಣಿ:-
ಕುಮಟೆಯಲ್ಲಿ ಅಗಾವು ರೂಪಾಯಿ 2-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-13-0
ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ:-
ಕನ್ನಡ, ಇಂಗ್ಲಿಷ ಪ್ರತ್ಯೇಕ ಪ್ರತಿ ಸಾಲಿಗೆ ...
ಬಹಳ ಸಲ ... ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ತಿಳಿಸಲ್ಪಡುವದು

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

-*[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೨ ಮಾಹೆ ಜುಲೈ ಸನ್ ೧೯೧೦ ನೇ ಇಸವಿ.]*—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆವುರಿ, ಕಣ್ಣುವುರಿ, ಕಿವಿಯಿಂದ ಕೀವುಸೋರುವದು ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ, ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆ 1ಕ್ಕೆ 0-12 0, 3 ಕ್ಕೆ 2-0 0
ದೊಡ್ಡ ಸೀಸೆಗೆ 1-8-0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗವನ್ನು ಗುಣ ಮಾಡುತ್ತದೆ
ಬಾಟ್ಲಿ 1 ರ ಕ್ರಯ 1-8-0.
ಬಾಟ್ಲಿ 3 ರ ಕ್ರಯ 4-0-0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಿ ಅತಿರೇಖವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳಿಪ್ರದರ ಬಿಳಿಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ ಬಾಟ್ಲಿಗೆ ರೂ 2/-

ಚಿನ್ ಚಿನ್ ಬಾಮು.

ಎಲ್ಲಾ ತರದ ನೋವು, ತಲೆನೋವು, ಜಕಂ, ಗಾಯು, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ ಕ್ಕೆ ೩ ಆಣೆ. ಔಷಧಾಲಯದ ಕೆಟಲಾಗಿಗೆ ಬರೆಯಿರಿ. ವಿಳಾಸ.—

ಮನೋಲ್ಲಾಸಿನಿ ಕಂಪನಿ.

7. ಕಂಕನಾಡಿ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE.

ಮಲೇರಿಯಾನ:— ಮಲೆಜ್ವರ, ಚಳಿಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು. 8 ಔನ್ಸಿನ ಬಾಟ್ಲಿ 1ಕ್ಕೆ ರೂ 1 8 ½ ಡಜನಿಗೆ ರೂ 8-8, 1 ಡಜನಿಗೆ ರೂ. 16 8.

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು 25 60 ಮತ್ತು 100 ಮಾತ್ರೆಗಳಿಗೆ ಆಣೆ 8 ರೂ. 1 ಮತ್ತು ರೂ 8-1.

ರೆವುಮೊ ಬಾಮು: ತಲೆಶೂಲೆ, ಕಟಿವಾತ, ಇತರ ಎಲ್ಲಾ ನೋವುಗಳಿಗೆ. ಕ್ರಯ. ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 5-4 0.

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ 1-10 1ಡಜನಿಗೆ ರೂ 3

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1 2 4 ಔನ್ಸ್ 1. 2. 4.
ಆ 2½ ಆ.3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಾವು ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಹೊಕ್ಸರೊಡನೆ ಪಕ್ಕಾ ಕಂಟ್ರೆಕ್ಟರಾಗಿ ಪ್ರಾಯಕ್ಕೂ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಪ್ಪಗೆ ಕಂಡಾಗುವ ಕನ್ನಡಕಗಳೂ ಇತರ ಎಲ್ಲಾ ಮಾಲುಗಳೂ ದೊರೆಯುವವು ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ, ಅವರ ನಂಬ್ರವನ್ನಾಗಲಿ ನಮಗೆ ತಿಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪೆನಿ,
7. ಮಂಗಳೂರು.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೇನ ಕೋಟಿಗೂ, ಕೋಟಿಗೂ, ಬರುವಂಥವು, ಮತ್ತು ಹಾಸುಕೊಳ್ಳಲಿಕ್ಕೂ, ಹೊದ್ದುಕೊಳ್ಳಲಿಕ್ಕೂ ಬರುವಂಥವು ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ. ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,
ದಾವಣಗೇರಿ, ಮೈಸೂರ ಪ್ರಾಂತ.

ಬಂದೂಕು ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವರು. ಮಾಹಿತಿಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ನಾವು ಪೂರೈಸುವೆವು.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD,

Bombay.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಗಾಯ, ಬಿದ್ದ ಜಖಮು, ಹೊಟ್ಟೆನೋವು, ಯಾವದೇ ತರದ ಜಖಮು ಯಾ ನೆಲಗುಮಾಂದಲ್ಲಿ ಸಹ ಇದನ್ನು ನೀರು ಹಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ ಕ್ರಯ. ಹೂಲಿ ೧ಕ್ಕೆ ೬ ಆಣೆ. ೧೨ ತೊ. ೧-೪-೦. ವ್ಯಾಪಾರಸ್ಥರಿಗೆ ಖರೇದಿ ಕಮಿಶನ್ ಪತ್ತೆ — ಮುಕ್ಯಾಜಿ ಹಿರಾಲಾಲ ದಲ್ಲಿ ಕರೀಮ, ಗುರಖರ ಹವೇಲಿ, ಕುಮಟಾ.

ನೋಟೀಸು

ಈ ಮುನಸಿಪಾಲಿಟಿ [illegible] ತಕ್ಕದ್ದವೆ [illegible] ಕೆಲಸ [illegible] ಕನ್ನಡ [illegible] ಬರ್ಲ್ಯಾಗವರು [illegible] ಆಫಿಸ [illegible]

V V Naik.

[illegible]

[illegible] ಈ ಕಾನಡ [illegible] ಈ ಮುನ್ಸ [illegible] ಅನ್ವು [illegible]

ತಿ ಪಸ್ [illegible] ವಸವದ ವಾನೆ ಅವ [illegible] ಮುವ ಸವಲತ್ ವಾ [illegible] ದಿಷತ ಜನ ಹೇಳ್ತೆ

ವಸವಾಲ ಕೊಟ್ಟ ಫ್ರ್ಸ್ [illegible] ಕೆಯಂದ ಒಗ್ಗೆ ಈ ಕಾನಡಾವೃತ್ತಯ ಒಡ ರಪತರು [illegible] ಬಾ॥ ರವರ ಅಪುರಿಯಾಗಿ ಹುಸುತ್ತಾ ಇದ್ದಾರೆ ಈ ಒಗ್ಗೆ ಒಡ [illegible] ಅಪುತೊ ಜಪ್ತೀ [illegible] ಕಸ್ತ ಬಡ ಜಮಿಖಾನ ದಾರರಿಗೆ ಆಗಿ ಅವ ಅನೇಸಂದರೆ, ಸ್ವ ವಾ ಮಯು ಜಮಿಖಾನದಾರರು ಹೊಪ್ಪುಗಳನ್ನ ಕೊಟ್ಟ ತಕ್ಷ್ಯಂಡ ಭೂಮಿ ಗಳು ಹಣದ ಒತ್ತಿ ಹಿಡಿದು [illegible] ಕಟ್ಟದ ಕೇಜಿಗೆ ಪೋರ್ಸ್ಪದ ತೀರ್ [illegible] ಪೂರ್ತ ಠತರು ಗೇಣಿ ಕೊಡಲಿಕ್ಕೆ ರೈತಾಗೆ ಪೋರ್ಕೆ ಸದೆ ಜಮಿಖಾನದಾರರ ಎಷ್ಟೋ ಭೂಮಿಗಳು ಒಂಜರ ಇರತ್ತಾಗೆ ಅವಕ್ಕೆ ಬಡ ಜಮಿಖಾ ನದಾರರು ರಾಜೀನಾಮೆ ಕೊಟ್ಟರೆ ಸರಕಾರಕ್ಕೆ ಹೋಗುತ್ತದೆ ಇಂದಲ್ಲ ನಾಳೆ, ಸಂಗ ಆಗುವದಾಗಿ ತಿಳಕೊಂಡು, ತೀರ್ವೆ ದಂಡ ಕೆರತ್ತಾ ಇದ್ದಾರೆ ಅಂಥಾ ಭೂಮಿಗಳು ರಾಜೀನಾಮೆಯಿಂದ ಸರಕಾ ರಕ್ಕೆ ದಾಖಲ ಆಗಿ ಪಡಪಲ್ಲಿ ಇರುವ ಭೂಮಿಗಳ ಸರಕಾರದಿಂದ ಮುಖತ ಜೇಸಿ ತಿಂಸಲಿಕ್ಕೆ ತಿಕ್ಕ ಸೋಳೆ, ಅಷ್ಟು ಸಾಗ ಆಗಿ, ಜಮಿಖಾನದಾರರ ಪೂರಾ ಭೂಮಿಗಳು ಒಂಜರ ಬೀಳಬೇಕಾಗ ಹು ಕ ದ ಇದಲ್ಲದೆ ಹಳೇಗಳ್ಳು, ಸೆ॥ ಕಲ್ಲೆಕ್ಟರ ಸಾಹೇಬ ರಾ। ರವರು ದಿಸ್ಟ್ರಿಕ್ಟ [illegible] ಇದರಂತೆ ಒಡ

ಜಮಿಖಾನದಾರರ ಒಂಜರ ಇರುವ ಭೂಮಿಗಳ ತೀರ್ವೆ [illegible] ವಾಡುವರಾಗಿ [illegible] ನಂಬುತ್ತೇವೆ ಇದರಂತೆ ಎಷ್ಟು ಭೂಮಿ [illegible] ಒಂಜರ ಇದ್ದ ಅದು ಈ [illegible] ಇನ್ನ ಮುಂದೆ ಆಕೆ ಇಲ್ಲಾದ್ದ [illegible] ತೀರ್ವೆ [illegible] ಆಗದ ವರ್ಷದು [illegible] ವಾಗಿ ಬೇಡುತ್ತೇವೆ

[illegible] ಇದರಂತೆ [illegible] ಕರರಿಂದ ಪ್ಯಾನಭಾಗ [illegible] ಗ್ರಾಮದಲ್ಲೇ ಇರದು ಕೆಲಸ [illegible] ವಾಡಿದ ಹುಕುಮುಗಳು [illegible] ರಿಯಾಗಿರತ್ತೇವೆ ಅದರಂತೆ ನಮ್ಮ [illegible] ಜಮಿಖಾನದಾರರಿಗೆ [illegible] ಸವಲತ [illegible] ರಿಯಾಗಿರತ್ತವೆ ಅದರೆ ವೇ [illegible] ವದಲ್ಲ [illegible] ರಹಿತರ ಸವಲತ್ತು [illegible] ಜಮಿಖಾನದಾರರ ಲುಕ್ಸಾನಿಗೆ ಕಾರಣವಾ [illegible] ಅದರಂತೆ ಇವರಲ್ಲಿ ಊರ ರೈತ ಜನರಿಗೆ [illegible] ಊರ ರೈತ ಜಮಿಖಾನದಾರರ ವ [illegible] ಜನರು ಬಹಳೇ ಕಷ್ಟ [illegible] ಹಣ್ಣಗಂದರೆ — ಉದಾ [illegible] ಜನರಿಗೆ ಮೇಲಿಂದಮೇಲೆ ಕ [illegible] ದಪ್ತರ ತಕ್ಕೊಂಡು [illegible] ದೂರ ದೂರ [illegible] ಸದರ ಸ್ಟೇಶ [illegible] ಹಚ್ಚುವದರಿಕ್ಕೆ ಅವರಿಗೆ [illegible] ಪ್ರತಿ [illegible] ಹೋಗಬೇಕಾಗು ತ್ತದೆ ಪ್ರತಿ [illegible] ಅದರ [illegible] ಅಂದರೆ, ೨೦ ೩೫ [illegible] ೧೦ ೩೫ [illegible] ಇವರು ನಡದ, [illegible] ದಪ್ತರ [illegible] ಇದು ಒಂದು ದೊಡ್ಡ [illegible] ಭತ್ತೆ [illegible] ಭತ್ತೆ [illegible] ಕೊಡುವದಿಲ್ಲ [illegible] ಇವರಿಗೆ [illegible] ಇವರಿಕ್ಕೆ ಮನೆ ಒಗ್ಗೆ ಯಾ [illegible] ಬಾಕಿ ಖಾತೆಯಲ್ಲಿ [illegible] ಕೊಡುವಂತೆ ಇವರಿಗೆ [illegible] ತಾಲೂಕಿನ [illegible] ಇರುವದಾಗಲಿ, ಇವರಿಗೆ ಸೋಯಿ [illegible] ಗಳಲ್ಲಿ ಇರುವದಾಗಲಿ ಸೋಯಿ ಇಲ್ಲಾ [illegible] ಸರ್ವಿಸದವರಿಗೆ ಇವರಂತೆ [illegible] ಪ್ರತೀಕ ಮಾಹೀತಿ [illegible] ಮಾಹಿತಿಯಿಂ [illegible] ಕೆಲಸ ವಾಡದೆ ಪಕ್ಕ ಮುಂದೆ ಒಂದ, ಯ [illegible] ಕೆಲಸ ವಾಡ [illegible] ಎಷ್ಟು [illegible] ಹೆಚ್ಚ ಇವರ [illegible] ನಂತರ [illegible] ಈ ಸಂಣ [illegible] ಸ್ಟೇಶನಕ್ಕೆ [illegible] ದಿವಸಕ್ಕೆ [illegible] ಪಟೇಲ [illegible] ಪ್ಯಾನಭಾಗ [illegible] ಪದ

ಊರ ರೈತರಿಗೆ ಯಾ ಜಮಿಖಾನದಾರರಿಗೆ ತೀರ್ವೆ ಒಗ್ಗೆ, ಮತ್ತು ಉತಾರ ವ ದಾಖ್ಲೆ ಒಗ್ಗೆ ಬಹಳ ದೂರಿಂದ ಶ್ಯಾನಭಾಗರಿಗೆ ಹುಡುಕುತ್ತಾ, ಗ್ರಾಮದಲ್ಲಿ ಹೋದರೆ, ಅವರು ದಪ್ತರ ತಕ್ಕೊಂಡು ಕಚೇರಿಗೆ ಹೋಗಿದ್ದಾರೆ ಎಂತ ಅವರ ಬಿಡಾರಕ್ಕೆ ಹೋಗಿ ಪುನಹಾ ಕಚೇರಿಗೆ ಬಂದರೆ, ಅಲ್ಲಿ ಅವರು ಕಚೇರಿ ಕೆಲಸಕ್ಕೆ ಎಷ್ಟು ಬೇಕು ಅಷ್ಟು ದಪ್ತರ ತಕ್ಕೊಂಡು ಹೋದ್ದರಿಂದ ಇವರಿಗೆ ಬೇಕಾದ ಕಾಗದ ಪತ್ರಗಳು ಅಲ್ಲಿ ತಿಗದೆ, ಪುನಹಾ ಶ್ಯಾನಭಾಗರ ಸಂಗಡ ತಿರುಗಿ ಗ್ರಾಮಕ್ಕೆ ಬರಬೇಕಾಗುತ್ತದೆ ಯಾವತ್ತ ಜಮಿಖಾನದಾರರ ಯಾ ರೈತರ ಕಾಗದ ಪತ್ರಗಳ ಮತ್ತು ದಾಖ್ಲೆಗಳ ಕೆಲಸ, ಸದರ ಸ್ಟೇಶನದಲ್ಲಿ ಆಗತಕ್ಕದ್ದಾದರಿಂದ ವಿನ್ಹಾಕಾರಣ ಸಂಣ ಸಂಣ ದಾಖ್ಲೆ ಒಗ್ಗೆ ದೂರ ದೂರದ ಹಳ್ಳಿಗ, ಒಂದೆರಡು ಮೂರು ಸರ್ತಿ ತಿರಗಾಟ ಬಿದ್ದು ರೈತರಿಗೆ ಬಹಳೇ ತ್ರಾಸವಾಗುತ್ತವೆ ಕಾರಣ ಮೆ॥ ಕಲ್ಲೆಕ್ಟರ ಸಾ॥ ಬ॥ ಗವರು ಇವಲ್ಲ ಸಂಗತಿಗಳ ಕುರಿತು ದಯಾಪಾಲಿಸಿ ಸೋಯಿ ಇರುವ ತಾಲುಕಗಳಲ್ಲಿ ವರ್ಗಮಾಡಿಸುವಂತೆ ಮತ್ತು ಅವರಿಗೆ ಸರಕಾರ ತರ್ಫೆನಿಂದ ಇಮಾರತು ಕಟ್ಟಿಸಿ ಕೊಡುವವರೆಗೆ

ಕೂಲತೆ ಪ್ರಕಾರ ಕೆಲಸವಾದ ಮಂದಿ ವ ಮುಖೇರಿಯರ ಸರ್ವಿಸದ ಯಾವತ್ತ ನೇಮುಗಳು ಇವರಿಗೆ ಲಾಗೂ ವಾಡಿಸುವಂತೆ ವ ಪ್ರತಿ ತಾಲೂಕಿನಲ್ಲಿ ಮುಲೇರಿಯಾ ಇದ್ದ ಊರಗಳಲ್ಲಿ ಮುಲೇರಿಯಾ ಅಲಾವನ್ಸ ಸಿಗುವಂತೆ, ವಾಡಿ, ಗದ್ದರ್ ಮೆಂಟ ಡ್ಯಾಪಟ್ಟೇಡ ಹಾಪೀಸರರಿಗೆ ಸ್ವತಂತ್ರ ಉಳ್ಳ ದೊಡ್ಡ ಅಧಿಕಾರ ಇದ್ದದರಿಂದ ಅವರ ಜಿಲ್ಲೆಯಲ್ಲಿ ಅವರಿಗೆ ಇಡಬೂದಾಗಿ ನೇಮ ಇದ್ದರೂ ಇವರ [illegible] ಪಕ್ಷಾಂತರಲೂ ವ ಅವರ ಸೋಯಿ ಪಕ್ಷಾಂತರಲೂ ವ ದುಷ್ಪ್ರಾಣ ಸಂಬಂಧ ದಿಂದಲೂ ಆ ನೇಮುಕ್ಕೆ ವಿರೂಧವಾಗಿ, ಇವರ ಸೋಯಿ ವಾಡಿ ಅವರನ್ನ [illegible] ಅವರಿಗೆ ಇರುತ್ತಿ [illegible] ಶ್ಯಾನಭಾಗ ಇವರಿಗೆ ಸಂಣ ಆಗದೇ [illegible] ಕೆಲಸದ ಸಂಣ ಅಧಿಕಾರ ಇರದದರಿಂದ ಅವರು ವಾಡುವ ಕೆಲಸಗಳು ಅವರ [illegible] ಪ್ರತಿ ಒಬ್ಬ ಅಧಿಕಾರಿಗಳು ಮುಖ್ಯ ವಾಡ [illegible] ಅವರಿಗೆ ಅವರ [illegible] ಇಟ್ಟರೆ ಊರ ಜನರಿಗೂ ವ [illegible] ಜಮಿಖಾನದಾರರಿಗೂ ವ ಸದರಿ [illegible] ಶ್ಯಾನಭಾಗ ಜನರಿಗೂ ಸೋಯಿಗಳಾಗಿ ಕೆಲಸದ [illegible] ತೀರಾಯುವ ಹಾಲ [illegible] ಅವರ [illegible] ಎಲ್ಲವರ [illegible] ವಾಡಲಿಕ್ಕೆ ಆಗದ ಪ್ರಸಂಗದಲ್ಲಿ, ಅವರ ವರ ಮನೆಗಳ ವ ತಾಲುಕಿನಲ್ಲಿ ಮುಖ್ಯ ಅವರವರ ವಸೆಗಳ [illegible] ಗ್ರಾಮಗಳಲ್ಲಿಯಾದರೂ ಅವರಿಗೆ ಇಷ್ಟ [illegible] ಸೋಯಿ ವಾಡುವಂತೆಯೂ ವ ಅದ ರಿಂದ [illegible] ಊರ ವ ಪರ ಊರ ಒಡ ರೈತ ಜಮಿಖಾನದಾರರ ಸಹ ಯಾವಾಡಿಸುವಂತೆಯೂ ದಯಮಾಡಬೇಕಾಗಿ ಬೇಡುತ್ತೇವೆ ಅಂದರೆ [illegible] ಬಾ॥ ರವರ ಒಗ್ಗೆ ಸರ್ತಿ ಶ್ಯಾನಭಾಗ ಜನರ ವ ಊರ ಪರಊರ ರೈತ ಜಮಿಖಾನದಾರರು ಕೂಡಾ ಜೋಗಳಿಕೆ ಒದಲಾ [illegible] ಚಿರಕಾಲ ಸುಖ ವೀ [illegible] ದಾರ್ಘ [illegible] ದುಸವ್ವ

ಅಂಕೋಲಾ ತಾ ೨–೫–೩೦ ತಮ್ಮ ವಿನೇಯ,

[illegible] ಪರ ಊರ ಜಮಿಖಾನದಾರರು

ಬಾಲವಿವಾಹವೋ ಬ್ರಹ್ಮಚರ್ಯ ಹಾನಿಯೋ?

(ಲೇಖಕ— [illegible])

ಉಪಕ್ರಮವು ೧

ಬಾಲಕರ ಮರಣದ ಪ್ರಮಾಣವು ಬೆಳೆಯುತ್ತ ನಡೆದರೆ, ಮುತ್ತಜ್ಜ–ಅಜ್ಜ–ತಂದೆ–ಮಕ್ಕಳಲ್ಲಿ ಶಾರೀರಿಕ ಸಾಮರ್ಥ್ಯವೂ, ಆ ದಯಾಸದಿಂದ ಅವರ ಆಯುಷ್ಯ ಶಕ್ತಿಯೂ ಕ್ರಮದಿಂದ ಕಡಿಮೆಯಾಗುತ್ತ ನಡೆದದ್ದು ಕಂಡುಬರುವದು. [illegible]

[illegible]

[illegible]

To

The Editor of the Kanara News,

Sir,

Kindly spare me some space in your highly esteemed paper

Subject— Mahomadan Members in the Reform Councils.

The Government is pleased to grant 3 members to our community in the Southern Division. The members elected must be conversant & sympathetic, not only with the public interests, but also fully informed and zealous for the protection of the special interests of the Mahomedans (religious and social) I have numerous friends and acquaintances not only in this district, but all over the Southern Division. I have been taking an active interest in all questions, specially Mahomedan so much so, that the enemies of Islam, have not spared any means, fair or foul, to blacken my name, in the eyes of Government, though I can conscientiously say, that I am ready to sacrifice any thing to maintain the rule of our good King George V. and our holy religion. I know Marathi, Hindustani, Canarese and English, and am in a position to understand thoroughly all questions of the day. In fact, I have been taking an active interest in them for many years. If you cannot find a man, with better knowledge and activity, to work whole heartedly in the interest of the public, and specially of the Mahomedans, I am ready to stand as a candidate

Yours faithfully,

Sirsi, 6-7-20.

Abdus Samad Mahomad Hasan, Soudagar, of Sirsi.

ಕಾನಡಾವೃತ್ತ

ಗುರುವಾರ ತಾರೀಖು ೨೨ ಮಾಹೆ ಜುಲೈ ೧೯೩೦

ಪಾರ್ಲಿಮೆಂಟಿನೊಳಗೆ

ಪಂಜಾಬವು.

ನಮ್ಮ ಗತ ಸಂಚಿಕೆಯಲ್ಲಿ ಬ್ರಿಟಿಷ ನ್ಯಾಯದೇವತೆಯ ಸತ್ವಪರೀಕ್ಷೆಯ ವಿಷಯವಾಗಿ ನಮ್ಮ ವಿಚಾರಗಳನ್ನು ಬರೆದು ಬಿಟ್ಟಿದ್ದಾಗಲು ವಷ್ಟರೊಳಗೆ, ಪಾರ್ಲಿಮೆಂಟಿನೊಳಗಿನ ಪಂಜಾಬ ಪ್ರಕರಣದ ವಾದವಿವಾದದ ಅಲ್ಪ ಪೂರ್ವ ವೃತ್ತವು ಬಂದು ತಲ್ಪಿತ್ತು. ವಿಲಾಯತಿ ತಂತಿಗಳ ಬಿಡೆಯರಾದ ರಾಯಿಟರ ಕಂಪನಿಯು ಇದರ ಮತ್ತಿಷ್ಟು ವೃತ್ತವನ್ನು ಹಿಂದಿನಿಂದ ಕಳುಹಿಸಿದೆ. ಇದನ್ನೆಲ್ಲ ಲಕ್ಷ್ಯಪೂರ್ವಕ ಓದಿ, ಬ್ರಿಟಿಷ ನ್ಯಾಯದೇವತೆಯು ಸತ್ವಪರೀಕ್ಷೆಯಲ್ಲಿ ಸೋತಿಯು ಆಗಿ ಹೋಯಿತು ಮತ್ತು ಅದರ ನಿರ್ಣಯವು ಹಿಂದೀ ಪ್ರಜೆಗಳಿಗೆ ತೀರ ನಿರಾಶಾಜನಕವಾಯಿತೆಂದು ನಮಗೆ ಅತಿ ವಿಷಾದದಿಂದ ಹೇಳಬೇಕಾಗಿದೆ. ರೂಪಾಯಿಗೆ ೧೬ ಆಣೆ ನ್ಯಾಯವನ್ನು ಸಂಪಾದಿಸಿ ಪಾರ್ಲಿಮೆಂಟ ಸಭೆಗೆ ಎಂದ ಪ್ರಸಂಶಿಸಿದ ವೇದಿಸಿದನೆಂಬ ಜವೆಂದ, ವಾದವಿವಾದವನ್ನು ಸರ್ವರೀತಿಯಿಂದ ನಿರೀಕ್ಷಿಸಿದರೆ, ಯೋಗ್ಯ ತಿಳಿಯುವದು.

ಈ ವಿವಾದದೊಳಗಿನ ಭಾಷಣಗಳನ್ನು ನೋಡಿದರೆ, ಒಂದು ಸಂಗತಿಯು ಸ್ಪಷ್ಟವಾಗಿ ಕಂಡುಬರುತ್ತದೆ. ಆದೇಶಂಗರ ಮೊಂಟೆಗ್ಯೂ ಸಾಹೇಬರು ಡಾಯರನ ಕೊಲೆಯ ವಿಷಯವಾಗಿ ಮಾತಾಡುವಾಗ, ಕಂಡದ್ದನ್ನಾಡಿದರು. ಅನ್ಯಾಯ ಮಾಡಲಿಕ್ಕೆಂದು ಟೊಂಕ ಕಟ್ಟಿ ಸಿದ್ಧರಾಗಿದ್ದಂತೆ ಎದ್ದು ನಿಂತ ಪ್ರತಿಪಕ್ಷಿಗಳು ಹುಶ್ ಹುಶ್ ಶಬ್ದಗಳನ್ನು ಕೂಗಿದರೂ, ಸತ್ವವೃತ್ತಿಯನ್ನು ವಿಕಲವಾಗಗೊಡದೆ, ಮೊಂಟೆಗ್ಯೂ ಸಾಹೇಬರು ಸ್ಪಷ್ಟವಾಗಿ ಹೇಳಿದ್ದೇನಂದರೆ— ಹಿಂದುಸ್ಥಾನದೊಳಗೆ ಬ್ರಿಟಿಷ ರಾಜ್ಯವು ಯಾವ ತತ್ವಗಳ ಅನುರೋಧದಿಂದ ನಡೆಸತಕ್ಕದ್ದೆಂಬುದೇ ಈ ಪ್ರಕರಣದೊಳಗಿನ ಮಹತ್ವದ ಮುದ್ದೆಯು. ತಮ್ಮನ್ನಕ್ಕೆ ತಾವೇ ವೃಥಾ ಬೆದರುವದು, ನಂತರ ಅಂಜುಬುರುಕುತನದಿಂದ, ಇಲ್ಲವೇ, ಮುಯ್ಯಿತೀರಿಸಬೇಕೆಂಬ ಇಚ್ಛೆಯಿಂದ ಭೀಕರವಾದ ಅತ್ಯಾಚಾರಗಳನ್ನು ಮಾಡುತ್ತ ನಡೆಯುವದು— ಇಂದ ಸಾಧನದಿಂದಲೇ ನೀವು ರಾಜ್ಯವನ್ನು ರಕ್ಷಿಸುವಿರೋ, ಇಲ್ಲವೇ ಹಿಂದೀ ಜನರ ಪ್ರೀತಿಯನ್ನು ದಿನೇ ದಿನೇ ಹೆಚ್ಚೆಚ್ಚು ಸಂಪಾದಿಸಿ, ನೀವು ರಾಜ್ಯವನ್ನು ಕಾಯುವಿರೋ? ದಹಶತ್ತಿನ ಹಾಕಿ ನಮಗೆ ಅಲ್ಲಿ ಎಷ್ಟು ಕಾಲ ರಾಜ್ಯವನ್ನು ನಡಿಸಲಿಕ್ಕಾಗುವದು? ಯುದ್ಧಮಂತ್ರಿಗಳಾದ ಚರ್ಚಿಲ ಸಾಹೇಬರಾದರೂ, ಡಾಯರನ ಕೃತ್ಯಗಳನ್ನು ಬಿರುಸು ಶಬ್ದಗಳಿಂದಲೇ ನಿಷೇಧಿಸಿದರು. ಮಜೂರ ಪಕ್ಷದವರು ಹಿಂದೀ ಪ್ರಜೆಗಳಿಗಾಗಿ ನ್ಯಾಯವನ್ನು ದೊರಕಿಸಲಿಕ್ಕೆ ವಿಶ್ವಪ್ರಯತ್ನಮಾಡಿದರು. ಕಟ್ಟಕಡೆಗೆ ಇವರೆಲ್ಲರ ಪ್ರಯತ್ನಗಳು ನಿಷ್ಫಲವಾಗಿ, ಎಲ್ಲರ ಅಪರಾಧಗಳನ್ನು ಡಾಯರನ ತಲೆಯ ಮೇಲೆ ಹೊರಿಸಿದಂತೆ ಈ ಅಜಾ ಪುತ್ರನಿಗೆ ತನ್ನ ಲಷ್ಕರ ಖಾತೆಯೊಳಗಿನ ನೌಕರಿಯನ್ನು ತ್ಯಜಿಸಿ ಕಡೆಕಡಿನ ಸಂಬಳವನ್ನು ತಕ್ಕೊಳ್ಳುತ್ತ ಉಳಿದ ಆಯುಷ್ಯವನ್ನು ಕಳೆಯಬೇಕೆಂಬ ಶಿಕ್ಷೆ ವಿಧಿಸಲ್ಪಟ್ಟಿತು. ಮತ್ತು ಪಂಜಾಬ ಪ್ರಕರಣದ ತುದಿಯ ನಿರ್ಣಯವನ್ನು ಪಾರ್ಲಿಮೆಂಟಿನ ಲೆಕ್ಕಕ್ಕೆ ಬ್ರಿಟಿಷ ನ್ಯಾಯದೇವತೆಯು ಕೊಟ್ಟಂತಾಯಿತು.

ಪಾರ್ಲಿಮೆಂಟಿನೊಳಗೆ ನಡೆದ ವಾಗ್ವಾದವನ್ನಷ್ಟು ನೋಡದೇ ಈ ವಿವಾದದೊಳಗಿನ ಪಕ್ಷ ಪ್ರತಿಪಕ್ಷಗಳ ಮತಗಳನ್ನು ಎಣಿಸಿದರೆ, ವಿಶೇಷತಃ ಈ ಪಂಜಾಬ ಪ್ರಕರಣದೊಳಗೆ ಸಮಾವಿಷ್ಟರಾದ ಎಲ್ಲ ಅಪರಾಧಿ ಅಧಿಕಾರಿಗಳನ್ನು ದಂಡಿಸಬೇಕೆಂಬ ಮಜೂರರ ಪಕ್ಷದ ಸೂಚನೆಗೆ ಅನುಕೂಲವಾದ ಬರೇ ೩೭ ಮತಗಳನ್ನು ಎಣಿಸಿದರೆ ವಿಲಾಯತಿಯ ನ್ಯಾಯಮಂದಿರದೊಳಗೆ ನ್ಯಾಯದ ಪುರಸ್ಕರ್ತರೂ, ಅನಾಥರ ನಾಥರೂ ಇದ್ದರೆ ತೀರ ಕಡಿಮೆಯಾಗಿರುವರೆಂದು ಅನುಮಾನಿಸಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ಹಿಂದ ಸ್ಥಾನಕ್ಕೆ ಈಗ ದೊರಕಿದ ನ್ಯಾಯದಿಂದ ತೃಪ್ತಿಯಾಗದು. ರೂಪಾಯಿಗೆ ೧೬ ಆಣೆ ನ್ಯಾಯವನ್ನು ಸಂಪಾದಿಸಲಿಕ್ಕೆ ಹಿಂದೀ ಪ್ರಜೆಗಳು ಯಾವ ಮಾರ್ಗವನ್ನು ಅವಲಂಬಿಸಬೇಕಾಗುವದೆಂದು ಹಿಂದೀ ರಾಷ್ಟ್ರೀಯ ಸಭೆಯ ಜಂದಾ ಅಧಿವೇಶನವೇ ನಿಶ್ಚಯಿಸಬೇಕಾಗುವದು. ನಾವು ಮೊದಲು ಹೇಳಿದಂತೆ, ಈ ಪ್ರಕರಣದ ಉದ್ದ ಬಾಲವು ಇನ್ನೂ ತೀರುವ ಲಕ್ಷಣಗಳೇನೂ ಕಾಣುವದಿಲ್ಲೆಂಬದು ಅತಿ ಶೋಚನೀಯವು. ಪಾರ್ಲಿಮೆಂಟಿನ ನಿರ್ಣಯದಿಂದ ಜೊಕ್ಕಹಿಂಯ ರಥದ ಬಳಮಂದಿರದೊಳಗೆ ಕೂತುಕೊಂಡು "ಲಗಾವ್, ಜೋರಸೇ ಲಗಾವ್" ಎಂಬ ಘೋರಣವನ್ನು ಹೊಳಿಸಲಿಕ್ಕೆ ಹುಕುಮು ಕೊಟ್ಟ ರಥಿಗಳಿಗೂ, ಅತಿರಥಿಗಳಿಗೂ, ದಂಡಿಸುವ ಮಾತಿರಲಿ, ಅವರಿಗೆ ಶಬ್ದಗಳಿಂದ ನಿಂದಿಸುವ ನ್ಯಾಯ್ಯ ಕರ್ತವ್ಯವನ್ನು ಸಹ ಪಾರ್ಲಿಮೆಂಟು ಮಾಡಿಲ್ಲ. ಗಾಡಿ ಹೊಡಿಯುವ ಗಾಡಿಗಾರನಂಥ, ಡಾಯರ ಸಾಹೇಬನನ್ನು ರಾಜೀನಾಮೆಯಂಥ ಶಿಕ್ಷೆಯಿಂದ ದಂಡಿಸಿದೆ. ಇಂಥ ನ್ಯಾಯದಿಂದ ಈ ಪ್ರಕರಣದ ಸಮಾಪ್ತಿಯಾಗುವದು ಅಶಕ್ಯವು. ವ್ಯಕ್ತಿಗಳಿಗೆ ಮನೋದೇವತೆಯು ಇರುವಂತೆ, ರಾಷ್ಟ್ರಗಳಿಗೂ ಇರುವದು. ಯಾವದೇ ಒಂದು ರಾಷ್ಟ್ರೀಯ ನಿರ್ಣಯದಿಂದ, ಅದರ ತೃಪ್ತಿಯಾಗಿದೆಂದು ಬಾಯಿಯಿಂದ ಹೇಳಿ ಸಾಲದು. ಈ ತೃಪ್ತಿಯು, ಈ ಸಂತೋಷವು, ವರ್ತನದೊಳಗೆ, ಕೃತಿಯೊಳಗೆ ತೋರಿಸಲಿಕ್ಕಾದರೆ ಮಾತ್ರ, ಅದು ನಿಜವಾಗಿ ಉಂಟಾಗಿದೆಂದು ಹೇಳಲಿಕ್ಕಾಗುವದು. ಇಲ್ಲದಿದ್ದರೆ, ಅದೊಂದು ಜಬರದಸ್ತಿಯ ಸಲಾಮು ಎಂದು ಕಂಡುಬರುವದು.

ಭಾರತಮಂತ್ರಿಗಳಂತೂ, ಮಂತ್ರಿಮಂಡಲವು ಕೊಟ್ಟ ನಿರ್ಣಯದೊಳಗಿನ ಅವಾಕ್ಷರವನ್ನು ಸಹ ತಿರುಗಿಸಲಿಕ್ಕಾಗದೆಂದು ತಿಳಿಸಿರುವರು. ನಮ್ಮ ಭಾವಿ ಸುರಕ್ಷಿತತೆಗೆ ಮತ್ತು ಸಾಮ್ರಾಜ್ಯದ ಪ್ರೀತಿಕರ ಸಹವಾಸಕ್ಕೆ, ಅದರ ಚಿರಂತನ ಬಾಳಿಕೆಗೆ, ನಮಗೂ, ಈ ನಿರ್ಣಯವನ್ನು ಸನದಶೀರ ಸಾಧನದಿಂದ ತಿದ್ದುಪಡಿಸಿಕೊಂಡ ಹೊರತು ನಿರ್ವಾಹವಿಲ್ಲೆಂದು, ಭಾರತಮಂತ್ರಿಗಳಿಗೆ ನಮ್ರತೆಯಿಂದ ತಿಳಿಸಬೇಕಾಗಿದೆ. ಇಂಥ ರಾಷ್ಟ್ರಕಾರ್ಯಕ್ಕಾಗಿ ದುಡಿಯುವದು, ಒಂದು ವಿಧದ ನಿಜವಾದ ರಾಜನಿಷ್ಠೆಯು. ಅದನ್ನು ಸದ್ಬುದ್ಧಿಯಿಂದ ಆಚರಿಸುವದು, ನಮ್ಮ ಕೈಯೊಳಗಿನ ಕೆಲಸವು. ಸದ್ಯದ ಹಿಂದಿ ರಾಜಕಾರಣದ ಗತಿಯೇ ಹಾಗಿದೆ. ಲೋಕಮತದ ಪೂರ್ಣ ವಿಜಯವಾದದ್ದನ್ನು ನೋಡುವದು, ಹಿಂದೀ ಪ್ರಜೆಗಳ ಸುದೈವದಲ್ಲಿ ಇಂದಿಗಿಲ್ಲ, ನಾಳೆಗಾದರೂ ಬರುವದು. ನಮ್ಮದು ಸತ್ಯಪಕ್ಷವಿದ್ದರೆ, ಸತ್ಯದ ವಿಜಯವಾಗಲೇ ಬೇಕು.

ಸ್ಫುಟ ಸೂಚನೆಗಳು.

೧ ನೊ ಕ್ಲಾಯಿಡ ಪರಿಯಾ ಕವಿತೆಗೆ ಕೇಂದರೆ, ಸರಕಾರದಿಂದ ನೇಮಿಸಲ್ಪಟ್ಟ ತೆರಿಗೆ ಕೊಡುವವರಿಂದ ಆರಿಸಲ್ಪಟ್ಟವರಲ್ಲ— ೪ ೫ ಮೆಂಬರರ ಬೋರ್ಡ ಮ್ಯುನಿಸಿಪಾಲಿಟಿಗಳನ್ನು ಸ್ಥಾಪಿಸಲಿಕ್ಕಾಗದಿರುವ ಶಹರುಗಳಲ್ಲಿ, ಈ ಪುರಾಣಾ ಕಮಿಟಿಗಳನ್ನು ಶಹರದ ಸುಖಸೋಯಿಗೆಂದು ಸ್ಥಾಪಿಸಲಿಕ್ಕೆ, ಹಳೆ ಕಾಯಿದೆಯಂತೆ ಸರಕಾರಕ್ಕೆ ಅಧಿಕಾರವಿದೆ. ಇಂಥ ಸ್ಥಾನಿಕ ಸರಕಾರವನ್ನು ಇಂಕೋಲೆಯಲ್ಲಿ, ಮತ್ತು ಯಲ್ಲಾಪೂರದಲ್ಲಿ ಸ್ಥಾಪಿಸಲಿಕ್ಕೆ ಸರಕಾರವು ಯೋಜಿಸಲು ಅಂಕೋಲೆಯ ಜನರು ಅದನ್ನು ನಿಷೇಧಿಸಿದರು. ಯಲ್ಲಾಪೂರದವರು, ಯಾರಿಗೆ ದಾರಿಲ್ಲೆಂಬಂತೆ, ಕೈ ಮುಗಿದು ಕುಳಿತರು. ಹೀಗಾಗಿ ಯಲ್ಲಾಪೂರಕ್ಕೆ ಬತ್ತಾಯದ ಸ್ಥಾ ಸ್ವರಾಜ್ಯವು ದೊರಕಿತು. ಸರಕಾರಿ ಗ್ಯಾಜಿಟಿನಲ್ಲಿ ಪ್ರಕಟಿಸಲ್ಪಟ್ಟ ಜಾಹೀರನಾಮೆಯಂತೆ, ಬೆಟ್ಟದೊಳಗಿನ ಈ ಪುಟ್ಟ 'ಪಟ್ಟಣ'ದಲ್ಲಿ ಒಂದು ದಿನ ಈ ವಿಧದ ಸ್ವರಾಜ್ಯೋದಯವಾಯಿತು. ಅಂದಿನಿಂದ ಇನ್ನು ತನಕ, ಈ ಉದಯವಾದ ಸೂರ್ಯನು ಕ್ಷಿತಿಜದಮೇಲೆ ಎಷ್ಟು ಏರಿದನೆಂದು

ಯಾರಿಗೂ ತಿಳಿಯದಿದ್ದಿಲ್ಲ ನೇಮಣೂಕಿಯ ಮೇಟ್ರಿಕೆಯ ಜುಲುಮಿನ ರಾಮರಾಜ್ಯವು ಕೊಡಿಯಲಿಕ್ಕೆ ಉಮೇದವಾರರು ಅಲ್ಲಿ ತೀರ ಕಡಿಮೆ. ಹೊಸ ಕಾನೂನುಗಳ ಜಾದಾ ತೆರಿಗೆಯನ್ನು ಕೊಡಲಿಕ್ಕೆ, ತಾವಾಗಿ ಮುಂದೆ ಬರುವವರಿಲ್ಲ. ಈ ಬಗೆಯಾಗಿ ಈ ಸಂಸ್ಥಾನದ ಸ್ವರಾಜ್ಯವು ಕಳೆಯಲಿಕ್ಕುತ್ತದೆಂದು ಕೇಳುತ್ತೇವೆ. ಇದೇನು ಆಶ್ಚರ್ಯಕರವಲ್ಲ. ಈ ಕಮೀಟಿಗಳು ಜನರಿಗೆ ತೀರ ಅಪ್ರಿಯವಿದ್ದಾವೆಂದು ಸ್ಪಷ್ಟವಾಗಿ ನಾವು ಸರಕಾರಕ್ಕೆ ತಿಳಿಸುವೆವು. ಅವುಗಳಿಗೆ ಅಪ್ರತ್ಯಕ್ಷ ಪ್ರತಿಕಾರವಾಗಿ ನಡೆದ ಸಾಹಸವು. ಯಲ್ಲಾಪುರವೆಂದರೆಷ್ಟು ದೊಡ್ಡ ಪಟ್ಟಣವು? ಅದರೊಳಗೆ ವಾಸಿಸುವ ಜನರೆಷ್ಟು? ಅವರಮೇಲೆ ಇಂಥ ಮುದಿಯಾಗಿ ಪಣ್ಣಾದ ಸ್ವರಾಜ್ಯವನ್ನು ಹೊರಿಸುವದೇತಕ್ಕೆ? ಅದರ ಉತ್ಪನ್ನವೆಷ್ಟಾಗುವದು? ಅದರ ವೆಚ್ಚಕ್ಕೇನು ಬೇಕು? ಜಿಲ್ಹಾ ಲೋಕಲ್ ಬೋರ್ಡಿನಿಂದ ಎಷ್ಟು ಹಣದ ಸಹಾಯವಾಗುವದು? ಇದನ್ನೆಲ್ಲ ಬಹಳೇ ಸೂಕ್ಷ್ಮ ದೃಷ್ಟಿಯಿಂದ ವಿಚಾರಿಸಿದ್ದರೆ, ಈ ಕಮಿಟಿಯ ಅವಶ್ಯಕತೆಯು ಮೊದಲೇ ತೋರುತ್ತಿದ್ದಿಲ್ಲೆಂದು ನಮಗೆ ಕಾಣುತ್ತದೆ. ಇರಲಿ. ಇನ್ನಾದರೂ, ಯಲ್ಲಾಪುರದ ನೋ. ಏ. ಕಮಿಟಿಯನ್ನು ಸರಕಾರವು ರದ್ದುಪಡಿಸಬೇಕೆಂದು, ನಮಗೆ ಸೂಚಿಸಬೇಕಾಗಿದೆ. ಅದರಿಂದ ಉದ್ದಿಷ್ಟದ ಪ್ರಾಪ್ತಿಯಾಗಲಿ ಏನೂ ಫಲಪ್ರಾಪ್ತಿಯಾಗದೆಂದು ನಾವು ನಿಶ್ಚಿತವಾಗಿ ಹೇಳುವೆವು.

---

೨ ರಿಫಾರ್ಮ್ ಕಾಯಿದೆಯ ಯಂತ್ರವು ಚಲಿಸಹತ್ತಿತು. ಶಾಸ್ತ್ರಜ್ಞರಿಂದ ನಿರ್ಮಿಸಲ್ಪಟ್ಟ ಈ ಯಂತ್ರದೊಳಗಿಂದ ಸ್ವರಾಜ್ಯದ ಸುಧಾರಣೆಗಳ ಎಣ್ಣೆಯು ತಟತಟಕಾಗಿ ಬೀಳಹತ್ತಿದೆ. ಪ್ರಾರಂಭವು ಹೀಗೆ ಇರುವದು ಸಹಜವು. ಮೊನ್ನೆ ಪಾರ್ಲಿಮೆಂಟಿನಲ್ಲಿ ಹೊಸ ಕಾಯಿದೆಯಂತೆ, ಹಿಂದುಸ್ಥಾನ ಖಾತೆಯ ಮಂತ್ರಿಗಳ ಸಂಬಳದ ಲೆಕ್ಕಕ್ಕೆ, ೫ ಲಕ್ಷ ೩೫ ಸಾವಿರ ರೂಪಾಯಿಗಳನ್ನು ವಿಲಾಯತ ಸರಕಾರದ ತಿಜೋರಿಯಿಂದ ಕೊಡುವ ಮಂಜೂರಿ ದೊರೆಯಿತು. ನಮ್ಮ ತಿಜೋರಿಗೆ ಇದೇ ವರುಷದಿಂದ ಅಷ್ಟೊಂದು ಲಾಭವಾಗುವದು. ಪಾರ್ಲಿಮೆಂಟಿನ ಎಲ್ಲ ಖಾತೆಯ ಮಂತ್ರಿಗಳಿಗೆ ಬ್ರಿಟಿಶ ಖಜಾನೆಯಿಂದಲೇ ಸಂಬಳ ಸಿಗುತ್ತಿದ್ದಾಗ, ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗಳಿಗೆ ಇಷ್ಟು ಕಾಲ ವರ್ಷಾನುವರ್ಷ ಹಿಂದುಸ್ಥಾನದ ಉತ್ಪನ್ನದೊಳಗಿಂದಲೇ ವೇತನ ಸಿಗುತ್ತಿತ್ತು. ಟಿಬ್ಬಿ(?) ನ್ಯಾಯವಂತ ಮೆಂಬರನು ಈ ಅನ್ಯಾಯವನ್ನು ದೂರಪಡಿಸಬೇಕೆಂದು, ಇಂಥ ಅದಾವೆಯ ವಿವಾದದ ಸಮಯ, ಪ್ರಮಾಣಿಕ ಮೋರ್ಲೇಯವರು ಮಂತ್ರಿಗಳಿದ್ದಾಗ ವಿವಾದಿಸಲು, ಮೋರ್ಲೇ ಸಾಹೇಬರು ತಮ್ಮ ಅಧಿಕಾರ ಸತ್ತೆಯ ಬಹುಮತದಿಂದ ಅನ್ಯಾಯವನ್ನು ಸಮರ್ಥಿಸಿ, ನ್ಯಾಯವಾದಿಗಳನ್ನು ಸುಮ್ಮಗೊಳಿಸಿದ್ದರು. ಅಧಿಕಾರ ತ್ಯಾಗಮಾಡಿದ ನಂತರ, ಅವರು ಬರೆದಿಟ್ಟ ಸ್ಮರಣ ಟಿಪ್ಪಣಿಗಳಲ್ಲಿ "ತಾನು ಈ ಸಮರ್ಥನೆಯನ್ನು ವಿತಂಡೆಯಿಂದ ಮಾಡಬೇಕಾಯಿತು. ಮನೋದೇವತೆಯನ್ನು ಧಿಕ್ಕರಿಸಿ ಮಾಡಬೇಕಾಯಿತು" ಎಂಬಂತೆ ಹೇಳಿರುವರು. ಈ ಅನ್ಯಾಯವು ಕಣ್ಮುಟ್ಟಿಗೆ ಈಗ ದೂರವಾದಂತಾಯಿತು. ಈ ವೆಚ್ಚ ಮಂಜೂರಿಯ ವಿವಾದದೊಳಗೆ 'ಡಾಯರನ ಕೃತಿಯ ಸಮ್ಮಾಪನವು(?)' ಸಹ ಮುಗಿಸಿಕೊಳ್ಳಲಾಯಿತು. ಒಂದು ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆದರೆ, ಒಂದು ಹಕ್ಕಿಯು ಅತ್ಯಲ್ಪ ಸ್ಪರ್ಶವಾಗಿ ಬಿದ್ದಾದರೆ, ಸೋಜಿಗವೇನು? ಇರಲಿ. ಈ ಸುಧಾರಣಾ ಕಾಯಿದೆಯ ಅಮಲು ತಿಜೋರಿಯೊಳಗೆ ಪ್ರತ್ಯಕ್ಷ ವಿಲಾಯತಿಯಲ್ಲಿ ಪ್ರಾರಂಭಿಸಲು, ಇಲ್ಲಿಯೂ ಹಿಂದುಸ್ಥಾನ ಸರಕಾರದ ಮನೆಯೊಳಗೆ ಸೇರಿ, ಹಕ್ಕು ನಡಿಸಹತ್ತಿತು. ಹಿಂದುಸ್ಥಾನ ಸರಕಾರದ ಮಂತ್ರಿಗಳಲ್ಲಿ, ಒಬ್ಬರೇ (ಈಗ, ನಾ. ಶಾಫಿ) ಹಿಂದಿ ಮಂತ್ರಿಗಳಿದ್ದರು. ಹೊಸ ಕಾಯದೆಯಂತೆ ಮೂವರಾಗಬೇಕೆಂದು, ಮದ್ರಾಸಿ ಮುಖಂಡರಾದ ನಾ. ಬಿ. ಎನ್. ಶರ್ಮಾರವರಿಗೆ ಮತ್ತೊಬ್ಬ ಮಂತ್ರಿಯ ಜಾಗಕ್ಕೆ ನೇಮಣೂಕಿ ಆಗಿದೆ. ನಾ. ಶಾಫಿ, ನಾ. ಶರ್ಮಾ ಇವರಿಬ್ಬರ ಜೊತೆಗೆ, ಮೂರನೆಯವರು ಯಾರು ಬರುವರೆಂದು ಇನ್ನೂ ತಿಳಿಯತಕ್ಕದ್ದಿದೆ. ಈ ಮೂವರ ಕರ್ತಬಗಾರಿಯ ಮೇಲೆ, ನಮ್ಮ ಭಾವಿ ಆಕಾಂಕ್ಷೆಗಳು ಬಹು ಅಂಶದಿಂದ ಅವಲಂಬಿಸಿರುವವು. ಅವರು ಸೋತರೆ, ನಮ್ಮ ಸ್ವರಾಜ್ಯವೇ ಸೋತಿತೆಂದು ಪ್ರತಿಪಕ್ಷಿಗಳೇ ಕೂಗುವರು.

---

೩ ಅಬ್ರಾಹ್ಮಣ್ಯದ ಬೇನೆಯು ಇತರ ದೇಶಗಳಂತೆ ಎಲ್ಲೆಲ್ಲಿ ಹಬ್ಬಿದೆಯೆಂದೂ, ಯಾರಿಗೂ ಹೇಳಲಿಕ್ಕಾಗದು. ಬ್ರಾಹ್ಮಣ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಸಾದರೆ, ನಾಪಾಸ ಆದವರಿಗೆ ಸಿಗುವಷ್ಟೇ ಹಕ್ಕು ಅವರಿಗೆ ಸಿಗಬಹುದೆಂದು ಹೇಳುವಷ್ಟು ಸೀಮೆಗೆ ಇದು ಮುಟ್ಟಿದೆ. ವಿದ್ಯೆಗೆ ಮತ್ಸರವಿಲ್ಲೆಂದು ಹೇಳುವ ತತ್ವವು ಇನ್ನು ನಿರುಪಯೋಗಿಯಾಗಹತ್ತಿದಲ್ಲವೋ? ನಮ್ಮ ಜಿಲ್ಲೆಯ ಕನ್ನಡ ಮುಲ್ಕೀಪರೀಕ್ಷೆಯಲ್ಲಿ ಪಾಸಾಗಿ, ಮೇಲ್ತರಗತಿಯಲ್ಲಿ ಉತ್ತೀರ್ಣರಾದವರಿಗೆ ಸಹ ಅನೇಕರಿಗೆ ಟ್ರೇನಿಂಗ ಕ್ಲಾಸದಲ್ಲಿ ಸ್ಥಲ ದೊರೆಯುವದು, ದಿನೇ ದಿನೇ ತೀರ ಅಶಕ್ಯವಾಗಹತ್ತಿದೆ. ಕಾರಣವೇನೆಂಬುದು ಶೋಧಿಸಿದರೆ, ಬ್ರಾಹ್ಮಣರೇ ಇದರ ತಾಯಿ ತಂದೆಗಳಿದ್ದದ್ದು! ಮತ್ತೇನಿಲ್ಲ. ಈ ಉಮೇದವಾರರಿಗೆ ಹೆಚ್ಚು ಲಾಯಕರು ಅಬ್ರಾಹ್ಮಣರು. ಪ್ರವೇಶ ಪರೀಕ್ಷೆಯನ್ನು ರದ್ದುಮಾಡಿ, ಸಿಲೆಕ್ಷನದ ಕತ್ತರಿಯನ್ನು ಹಚ್ಚಿದಂದಿನಿಂದ, ಈ ಅನ್ಯಾಯವು ಮಿತಿಮೀರಿ ಹೋಗಿದೆ. ಸಿಲೆಕ್ಶನು ಮಾಡುವ ಅಧಿಕಾರವು ಡೆ. ಇನ್ಸಪೆಕ್ಟರರ ಕೈಯಲ್ಲಿ. ಅವರು ಬ್ರಾಹ್ಮಣ ದ್ವೇಷ್ಟರು ಇದ್ದರಂತೂ, ಮತ್ತೇನು ಕೇಳುವದದೆ? ಇಂಥ ಯಾಂತ್ರಿಕ ಪದ್ಧತಿಯಿಂದ ೧೦೦ ರೊಳಗಿನ ೯೯ ಉತ್ತಮ ಉಮೇದವಾರರಿಗೆ ನಮ್ಮಲ್ಲಿ ಅನ್ಯಾಯವಾಗಹತ್ತಿ, "ಮುಲ್ಕಿ ಪರೀಕ್ಷೆಂದು ಮಡಿದು, ಬುದ್ಧಿಶಕ್ತಿಯನ್ನು ನಿರರ್ಥಕ ವೆಚ್ಚಮಾಡಿದೆನು. ಇಂಗ್ಲಿಷ ಕಲಿತರೆ, ಏನಾದರೂ ನಿರ್ವಾಹ ಮಾಡುತ್ತಿದ್ದೆ. ಈಗ ಹಾಗೂ ಕೆಟ್ಟೆನು, ಹೀಗೂ ಕೆಟ್ಟೆನು" ಎಂದು, ಅನೇಕ ಯುವಕರು ಈ ಮೂರು ವರ್ಷಗಳಿಂದ ಕಣ್ಣೀರು ಸುರಿಸುತ್ತಿರುವರು. ಇರಲಿ. ಬ್ರಾಹ್ಮಣ-ಅಬ್ರಾಹ್ಮಣ ಭೇದ ಬುದ್ಧಿಯ ಪ್ರಯೋಗವನ್ನು ಮಾಡಬೇಕಾದರೆ, ಶಿಕ್ಷಣ ಖಾತೆಯ ಕ್ಷೇತ್ರವು ಅದಕ್ಕೆ ಏನೂ ತಕ್ಕದ್ದಲ್ಲ. ಭಾವಿ ಪೀಳಿಗೆಯ ಶಿಕ್ಷಣವು ಉತ್ತಮ ಶಿಕ್ಷಕರಿಂದಾಗಬೇಕು. ಅವರು ಬ್ರಾಹ್ಮಣರಿರಲಿ, ಅಬ್ರಾಹ್ಮಣರಿರಲಿ. ಪರೀಕ್ಷೆಯ ಮೇಲಾಟದಲ್ಲಿ, ಮೇಲಿನ ದರ್ಜೆಯನ್ನು ಪಡೆದ ಉಮೇದವಾರರನ್ನೇ ಶಿಕ್ಷಕರಾಗಿ ತಯಾರಿಸಿರಿ. ವಿದ್ಯೆಯಲ್ಲಿ ನಿಪುಣರಿದ್ದವರೆಲ್ಲರೂ, ಈಗಿನ ಬ್ರಾಹ್ಮಣರು. ಇಂಥವರು ಬ್ರಾಹ್ಮಣ ಜಾತಿಗಳಲ್ಲಿ ಹುಟ್ಟಿದವರೆಂದು, ಅವರ ವಿದ್ಯೆಯ ಏಳಿಗೆಯನ್ನು ಅಧಿಕಾರದ ಸತ್ತೆಯಿಂದ ಗಲ್ಲಿಗೆ ಹಾಕಬೇಡಿರಿ. ಇಷ್ಟೇ ಸಂಬಂಧಿಕ ಅಧಿಕಾರಿಗಳಿಗೆ ನಮ್ಮ ಕೋರಿಕೆಯು.

---

೪ ಅಂಕೋಲೆಯ ಪ್ರಸಿದ್ಧ 'ಮುಜಾಲೆ ಕಾಮತ ಕಂಪನಿ'ಯ ಪ್ರಧಾನ ಮಾಲಕರಾದ, ಶ್ರೀಯುತ ಮುರಾರಿ ಗೋವಿಂದ ಮುಜಾಲೆ ಇವರು ೩ ತಿಂಗಳಿನಾಗಾಯಿತು ಯಕೃದ್ವಿಕಾರದಿಂದ ಅಸ್ವಸ್ಥರಿದ್ದು, ಕಳೆದ ಶುಕ್ರವಾರ ರಾತ್ರಿ ಅಕಸ್ಮಿಕರಾಗಿ ಪರಲೋಕಕ್ಕೆ ತೆರಳಿದರೆಂದು ತಿಳಿಸಲು, ಅತಿ ವಿಷಾದವಾಗುತ್ತದೆ. ಇವರು ಸಾಹಸಿ ವ್ಯಾಪಾರಿಗಳೂ ಸಾತ್ವಿಕ ವೃತ್ತಿಯವರೂ, ಧರ್ಮನಿಷ್ಠರೂ ಆಗಿದ್ದರು. ಅಂಕೋಲಾ, ಕುಮಟಾ, ಕಾರವಾರ, ತದಡಿ, ವಾಸ್ಕೋ ಮುಂತಾದ ಸ್ಥಳಗಳಲ್ಲಿ, ಇವರ ಪೇಢಿಗಳಿವೆ. ಇವರು ಮುಂಬಯಿಯ ಗೌಡಸಾರಸ್ವತ ಸ್ಕೋಲರಶಿಪ ಲೀಗದ, ಸಹಾಯಕ ಸಭಾಸದರಾಗಿದ್ದರು. ಇಂಥ ಸದ್ಗೃಹಸ್ಥರ ನಿಧನದಿಂದ ಅಂಕೋಲೆಗೆ ಬಹಳೇ ಹಾನಿಯಾಗಿದೆ. ಇವರ ಹಿಂದೆ, ಇವರ ವೃದ್ಧ ಮಾತೋಶ್ರೀಯವರೂ, ಅನುಜರಿರ್ವರೂ, ತಮ್ಮ ಅಸಹ್ಯ ದುಃಖದಲ್ಲಿ, ಅನೇಕರು ಸಹಭಾಗಿಗಳಿದ್ದಾರೆಂದು ತಿಳಿದು, ಕಾಲಚಕ್ರದ ಕಡೆಗೂ ಲಕ್ಷ್ಯಗೊಟ್ಟು, ತಮ್ಮ ದುಃಖವನ್ನು ಸಾಂತ್ವನಮಾಡಿಕೊಳ್ಳುವದು. ಇವರ ಪತಿಪರಾಯಣ ಪತ್ನಿಗಳಾದ ಸೌ. ಆನಂದೀಬಾಯಿ ಇವರು, ಕೊನೆಯ ತನಕ ಏಕನಿಷ್ಠೆಯಿಂದ ಪತಿಸೇವೆಮಾಡಿ, ತೀರ ಅಂತ್ಯಕಾಲಕ್ಕೆ, ಪತಿವಿಯೋಗವಾಗಬಾರದೆಂದು, ಈಶ ಸಂಕೇತಿಸಿದ್ದೆಂಬಂತೆ, ಯಾರಿಗೂ ತಿಳಿಸದೆ, ಬಾವಿಯಲ್ಲಿ ಹಾರಿ, ಅವರ ಪ್ರತೀಕ್ಷೆ ಮಾಡುತ್ತ, ಪರಲೋಕವನ್ನೈದಿದಳು. ಜಗದೀಶ್ವರನು ಈ ಉಭಯ ಪುಣ್ಯಾತ್ಮಗಳಿಗೆ ಪರಲೋಕದಲ್ಲಿ ಸುಖ-ಶಾಂತಿ ಕೊಡಲೆಂದು ಬಯಸುತ್ತೇವೆ —

ಇಹವೃತ್ತ.

ಕುಮಟಾ— ಈ ವರೆಗೆ ಮಳೆಯು ೬೦-೭೦ ಆಯಿತು. ಗಾಳಿಯಿಂದ ಮೋಡಗಳು ಘಟ್ಟಕ್ಕೆ ಸಾಗುತ್ತವೆ. ನೆಟ್ಟಿಯ ಕೆಲಸ ತೀರುತ್ತ ಬಂತು. ಆದರೂ ಅಕ್ಕಿ ರಾಗಿಯ ಧಾರಣೆ ಇಳಿಯಲಿಲ್ಲ. ಅಕ್ಕಿಯ ಸಿಲಕು ಉಂಟು.

ಅಧಿಕಮಾಸದ ಪ್ರೀತ್ಯರ್ಥ ಶ್ರೀ ವೆಂಕಟರಮಣ ದೇವರಲ್ಲಿ ಪ್ರತಿನಿತ್ಯ ಉತ್ಸವಪ್ರಿಯ ಭಕ್ತರು ಸೇರಿ, ತೋರಣ- ಪತಾಕೆ- ಹಂಡಿ- ದೀಪಗಳ ಮಾಲಿಕೆಗಳಿಂದ ಶೃಂಗರಿಸಿದ ಹೊರಗಿನ ಸಭಾ ಮಂಟಪದಲ್ಲಿ ಭಜನೆ-ಮಂಗಳಾರತಿ ಮಹೋತ್ಸವಗಳು ನಡೆಯುತ್ತಿವೆ.

ಮಳೆಗಾಲದಲ್ಲಿ ಯಾವಾಗಲೂ ಪಗಾರದ ನೋಟುಗಳ ಬರಗಾಲವಾಗುತ್ತದೆ. ವ್ಯಾಪಾರಿ ದರ್ಶನಿ ಹುಂಡಿಗಳು ಸಿಗುವದು ಅಪರೂಪ. ಏಲಿ(?) ಕಡೆಗೆ ಸ್ಥಾಪಿಸಲ್ಪಟ್ಟ ಶ್ಯಾಮರಾವ ವಿಠ್ಠಲ ಸೊಸ್ಯಾಟಿ ಶಾಖೆಯಿಂದ ಸಿಗುತ್ತಿದ್ದ ಹುಂಡಿಗಳು, ಈಗ ಕಾರವಾರಕ್ಕೆ ಹೋಗಿ ತರುವ ಪ್ರಸಂಗ ಇಲ್ಲಿಯ ವ್ಯಾಪಾರಿಗಳಿಗೊದಗಿದೆಯಂತೆ!

ಈ ಮೊದಲು ಹೆರವಟ್ಟೆಯ (ಗೋಕರ್ಣಸಮೀಪ) ನಾರಾಯಣಪೈರ ಮನೆ ಮಟ್ಟೆಯಲ್ಲಿ ಶ್ಯಾವಿಹಾಳ ಮಾಡಿ, ನಂತರ ಬಿಟ್ಟುಕೊಟ್ಟ, ಮುರೂರ ನಾಗು ಎಂಬುವನ ಮೇಲೆ ಘನ ಇ. ಪೀ. ಕೋ. ಕಲಂ ೫೦೧ ರಂತೆ ಖಟ್ಲೆ ದಾಖಲು ಆದದ್ದಾಗಿ ತಿಳಿಯುತ್ತದೆ. ಇದೊಂದು ಆ ಖಟ್ಲೆಯ ಪುಷ್ಪವೋ, "ಮುಸಲ"ವೋ, ನೋಡಬೇಕು.

ಶಿರಸಿ— ಆನಂದಾನ ಗಂಪತಿ... [illegible] ... ಪಂಚ ದಿ. ... ನವಾರನಾ ಸವೆಯ ... ವಕೀಲ ಇವರ ಅಧ್ಯಕ್ಷತೆ ... ಕೂಡಿ ... ಸಭೆಯಲ್ಲಿ ಮಾಸಾದ ರಾವರ... ಗಳ ... ರ ಮತ್ತು ಕಲೆಕ್ಟರ ಸಾಹೇಬರಿಂದ ಬಂದ ಉತ್ತರ ಗಳು ತಿಳಿಯಪಡಿಸಲ್ಪಟ್ಟವು ಮತ್ತು ಆ ಉತ್ತರಗಳು ನಿಷೇಧಿಸಲ್ಪಟ್ಟವು ಆ ನಂತರ ... ಗಣಪತಿ ಜೋಶಿ ಗಂಗಾಧರ ಪರಿವರ್ತನ ಮ ... ಹಾಗೆ ಬಂದವರ ... ಕುರುಕಲಿಮಿಂದ ಬಂದ ... ಇದ್ದ ... ಸ್ವಾರ ಸುಸ್ವಾಪ್ಯ ... ವಿ|| ... ಟಪ್ಪ ಸಾಹೇಬ ... ಘೋ ರೆಸ್ಸವ ... ನಾ ಜಿಲ್ಲೆ ... ನಂತಿ ... ವಾರನು ... ಈ ಬಗ್ಗೆ ... ಕೆಂತು ... [illegible]

ಜಂಟ ... [illegible] ... ಸರ್ವಾನು ಮತದಿಂದ ನಿಶ್ಚೈಸಲ್ಪಟ್ಟಿತು ... ಟ್ಟ ಮತ್ತು ... ಮೇರ ... ಪ್ರತಿನಿಧಿಗಳು ಬಂದಿದ್ದರು

ಮುನಿಸಿಪಾಲಿಟಿ ... ರ ಇವರ ಅಧ್ಯಕ್ಷತೆ ... ಟ್ರಲ್ ಬ್ಯಾಂಕಿನ ... ಕೂಡಿ ಅವರಲ್ಲಿ ... ನಾದ ... [illegible]

ಮಳೆ ... ಜ್ಜ ... ಬಸ್ಸಾಗಿ ... ಮೇಲೆ ... ಲ್ಲುಗಳನ್ನು ... ಲಿರು ... ತನ್ನ ... ಬೀರ ... [illegible]

ಹಳಿಯಾಳ— ... ರ ವರೆಗೆ ೧೨–೬೪ ಈ ತಿಂಗಳಲ್ಲಿ ... (ಹಿಕ್ಕ್ಯಾಡಿ) ಬಿದ್ದಿದೆ ... ಹವಾಮಾನ ... ಕೆಳಜ್ವರ ಸುರುವ ಗುತ್ತಿದೆ

ಮ್ಯುನಿಸಿಪಲ ... ಕಾರಕರ ... ಇವರಿಗೆ ... ಕಾಲದಿಂದ ... ಯಿತು ... ಇವರ ... ಲೋಕಿ ... ಮ್ಯುನಿಸಿಪಾಲಿಟಿಯಲ್ಲಿ ... ಬೇರೆಯವರನ್ನು ತರುವ ವಿಚಾರವದೆ ... ಕಾಲಿಯ ... ನೇ ಆಸಿ ಮಾಸ್ತರ ... ರನ್ನು ... ವಿದ್ಯಾರ್ಥಿಗಳ ಸಂಖ್ಯಾ ... ಜೇಯರವನರ ... ರಂತೆ ಇವರ ಮ್ಯುನಿಸಿಪಲ ನೌಕರರಿದ್ದು ... ಯಲ್ಲಿ ... ತಲಸವಾಡಿದ್ದರ ... ಮು ಈ ರೀತಿ ಕೂಡಿಯಿತು ... ದಲ್ಲಿ ಬಬ್ಬರನ್ನು ತೆಗಮಹಳಿತ್ತು ... ಗವಾಮಿ ಪತ್ತು ... ಇವರ ... ಕವಾರ ... ನಿಂದ ... [illegible]

सूपा— ता १८–७–१९३० रोजी सूपा येथे श्री रामलिंग देवस्थानात सुपा पेन्चातील खेड्यापाड्यातील लोक जमून श्रीयुत गोपाळराव यांनी यांचे अध्यक्षतेखाली जाहीर सभा भरविणेत येऊन, सभेत खालील प्रमाणे ठराव पास करण्यात आले

१ राजा व राणी यांचे अभीष्ट वादे चिंतन

२ सूपा येथे कायम काम करणेकरिता पेठा-सभा स्थापन केल्याने

३ फारेष्ट

अ) गाव सुधराई करिता गावचे वस्तीचे भोवार २०० यार्ड जगा लहान मोठी सर्व झाडे तोडून, त्या लाकडाचा उपयोग गावकऱ्यांनी आपल्या मर्जीप्रमाणे करून, त्यात पुन झाडे न वाढण्याबद्दल जाळून मोडून नांगरणी वगैरे पीक करणेस सरकार परवानगी असावी

(ब) सदर २०० यार्ड अंतरापुढे, सभोवार दोन मैल जागा मोकळे ठेवून, त्यात गुरे चरण्यास सप्पेल माफी असावी सिवाय मजुरी कामा करीता, व शेती कामा करीता त्यातील लाकूड आणणेस, गावकरी लोकांना मोकळीक असून, गुराचे वृद्धी करीता सदर जंगलातील काटेरी झाडें व ... वगैरे ... साफ करणेस मोकळीक असावी

(क) जनावरांच्या वाढीकरीता धनगर ... लोकांना अगर, तुळशी पेठ्यासारख्या ... देताना, विशेष सवलती देऊन ... सरकारने जाणून ठेवणे

(ड) फॉरेष्ट खात्याकडून नवीन कुमकी ... देणे आल्या आहेत त्या कुमकी लागेतो ... लाकूड पूर्वी दिलेल्या कुम्रीप्रमाणे, ... देऊन, दर एकरी ०–४–० प्रमाणे ... आकार घ्यावा

(ई) या पेठ्यातील काही गाव, न, हा पेठा ... फॉरेष्ट खात्याकडून, काढून रेव्हेन्यु ... त्या मध्ये ठराव पास होवून ... सदर ठराव डेप्युटेशन ... पाठविणे ठरले आहे याव ... पाऊस बराच पडत आहे शेती काम त्यांनी सुरू ... खेड्यागावात फॉरेष्ट ... जंगल तोडून त्यात नांगरणी, व साग ... गेल ... क्रम सुरू झाला ... शेतकरी लोकांची गुरे त्यात गेल्याने, ... चालला आहे ... अशाच प्रयोग करणेस, जंगल ... लोकांना लाकूड तोडून ... मागवानी रोप ... देण्याचे करारी दिल्याने ... करणे ... ... त्यात, ... जगताप होऊन, ... फार कठीण झाले आहे तरी, नवीन प्रयोग ... बंद होणे, अवश्य आहे.

ಅಂಕೋಲೆ— ... ಸುರಿವ ... ಉತ್ತಮ ... ಕೆಲಸ ... [illegible]

ಇಲ್ಲಿಯ ... ರಿಂದ ... ಮುದ್ರಿತ ... [illegible]

ಹೋದ ಕ ಕ್ರಮಾರ ರಾತ್ರೆ ದೈವಾಧೀನರಾದರೆಂದು ತಿಳಿಸಲು ಅತಿಶಯ ದುಃಖವೆನಿಸುತ್ತದೆ ಇವರ ಅಂತ್ಯಕಾಲವು ಸಮೀಪಿಸಿತೆಂದು ತಿಳಿದು, ಅವರ ಸೌಭಾಗ್ಯವತಿಗೆ ಅತಿ ಪತ್ನಿ ಆನಂದೀಬಾಯಿಯವರು, ಉತ್ತಮ ಲೋಕಕ್ಕೆ ಪತಿಗಳ ಸಹಿತ ಗಮನವಾಡಲಿಚ್ಛಿಸಿದಂತೆ ಯಾರಿಗೂ ತಿಳಿಸದೆ, ಬಾವಿಯಲ್ಲಿ ಹಾರಿ, ಆತ್ಮತ್ಯಾಗವಾಡಿದಳು ಈ ಧರ್ಮನಿಷ್ಠ ಪತಿ-ಪತ್ನಿಗಳಿಗೆ ಉತ್ತಮಲೋಕದ ಪ್ರಾಪ್ತಿಯಾಗಲೆಂದು ಬೇಡುವೆವು

ಹಳೆ ಎಪವರ್ಥ ಲಾಯಬ್ರರಿಯು ಈಗ ಪುನಃ ಚಲೋದಾಗಿ ನಡೆಯಹತ್ತಿದೆ ವೋಚನವೋಲೆ ಬರೆ ಬಸ್ತಾದಿದ್ದಲ್ಲಿ, ... ಉಪಯುಕ್ತ ಪತ್ರಗಳು ಕಾಣುತ್ತವೆ

ಇಲ್ಲಿ ಜಂಗಲ ಕಾಯಿದೆಯಂತೆ, ಇಬ್ಬರು ಬೇಸಾಯಗಾರರಮೇಲೆ ಖಟ್ಲೆ ನಡೆದವೆ ತೀರ್ಪು ಆದ ನಂತರ ಖುಲಾಸೆ ತಿಳಿಸುವೆವು

ಪತ್ರ ಸ್ವೀಕಾರ.

१ दिसेल तशें बोलणारा } ನಿಮ್ಮ ಪತ್ರಗಳನ್ನು
೨ ಕುಚೆ ಷ್ಟಯಿಂದ ಪ್ರತಿಷ್ಠೆ }

ಕಾದಿಟ್ಟಿರುವೆವು ಮತದಾರರೊಳಗಿನ ಅನೇಕರಿಗೆ ಮೆಂಬರಾಗಲಿಕ್ಕೆ ಬರುತ್ತದೆಂದು ಕುತೀರ್ಥಗೆಂದು, ಯಾರೊಬ್ಬರ ಹೆಸರನ್ನು ಮುಂದೆ ಮಾಡಿ, ಇಲ್ಲವೇ, ಅವರ ಸಹಿತ ... ವೃತ್ತಪತ್ರಗಳಲ್ಲಿ ಪ್ರಕಟಿಸುವದು ನಿಂದ್ಯವು, ಎಂದು ನೀವು ಹೇಳುವದು ನಿಜವು ಉಮೇದವಾರರ ಪಾತ್ರಾಪಾತ್ರತೆಯಬಗ್ಗೆ ಬರೆಯುವಾಗ ನಿಮ್ಮ ಪತ್ರಗಳ ಉಪಯೋಗವನ್ನು ನಾವು ಮಾಡುವೆವು

ನಾಡಗುಡ— ನಾ| ಪಟೇಲರ ಬೀಲು ಪೊಸ ಕೌನ್ಸಿಲದಲಿ ವಿಚಾರಕ್ಕೆ ಬರುವದುಂಟು ಸದ್ಯಕ್ಕೆ ಅದರ ವಿಷಯ ವಾದ-ವಿವಾದ ಬೇಡ

ಗ್ರಾಮ್ಯ ರಾ ದೇಶಪಾಂಡೆ— ಸ್ಥಳಾವಕಾಶವಿದ್ದಂತೆ ಪ್ರಕಟಿಸುವೆವು ... ಗೋರಕ್ಷಣದ ವಿಷಯವು ಮಹತ್ವದ್ದಿದೆ ಸ್ಥಳಾಭಾವದ ಮೂಲಕ ಬೇಗನೆ ಕೈಕೊಳ್ಳಲಿಕ್ಕಾಗದೆಂದು ವ್ಯಸನ ಪಡುವೆವು

ಮೊಚ್ಚಿದವರಿಗೆ ಮರಣವೇ ಸುಖ!

(ಲೇಖಕ — ಸತ್ಯವಾನ, ...)

ಈ ನಮ್ಮ ದೇಶೀಯರ ಪರದೇಶೀಯರಿಂದ ಕಲಿತುಕೊಂಡ ಅನೇಕ ವ್ಯಸನಗಳಲ್ಲಿ, ಚಹಾ-ಪಾನವು ಒಂದಾಗಿದ್ದು, ಅದರ ಪ್ರಸಾರವು ಇತ್ತಿತ್ತ ವಿಪರೀತ ನಡೆದಿರುತ್ತದೆ ... ಅಲ್ಲ ಈಗಿನ ಪರಿಸ್ಥಿತಿಯಲ್ಲಿ ಅದೊಂದು ಸುಧಾರಣೆಯ ಚಿಹ್ನವೆನಿಸುತ್ತಲಿದ್ದು ಚಹಾ ಅಂಗಡಿಗಳಿಲ್ಲದ ಊರುಗಳು ಎಷ್ಟು 'ಅಭಿವೃದ್ಧಿಯನ್ನು ಹೊಂದಿದ ಗ್ರಾಮ ಪೂರ್ಣತೆಯನ್ನು ಹೊಂದಲಾರವು' ಅದರಂತೆಯೇ ಚಹಾ ವಾಸವಿಲ್ಲದ ಮನೆಯು ಸುಖ- ಶಾಂತಿ ಸಮೃದ್ಧಿಗಳ ತವರಮನೆಯಾದಾಗ್ಯೂ ಚಹಾ ಭಕ್ತರ ದೃಷ್ಟಿಯಿಂದ ಶೂನ್ಯವೆನಿಸ ವದು! ಅದ್ದರಿಂದಲೇ, ಎಷ್ಟೋ ಜನರು ತಮ್ಮ ಹೆಣ್ಣುಮಕ್ಕಳಿಗೆ ಯೋಗ್ಯ ಸ್ಥಳವನ್ನು ಹುಡುಕ ಬೇಕಾದ ... ಸಂಗ್ರಹ ... ವಸತಿಯುಂಟೋ ಇಲ್ಲವೋ, ಎಂಬುದನ್ನು ಆ ತರಂಗದಿಂದ ಅರಿತುಕೊಳ್ಳುವರು ಹೀಗಾಗಿ ನಮ್ಮಲ್ಲಿಯ ಅಬಲೆಯರಂತೆಯೇ, ಚಹಾ ಪಾನದಿಂದ ತಮ್ಮ ಸೂಕ್ಷ್ಮವಾದ ಪ್ರಕೃತಿಯ ಮೇಲಾಗಬಹುದಾದಂಥ ಅಪಾಯವನ್ನು ಲೆಕ್ಕಿಸದೆ ಬತ್ತಿಟ್ಟಿಗರಲಿ, ತಮ್ಮ ವಪೋರು ತಿಂಗಳ ಚಿಕ್ಕ ಮಕ್ಕಳಿಗೂ, ಅದನ್ನು ಬಾಟಲಿ ... ಯಲ್ಲಿ ಅತ್ಯಾನಂದದಿಂದ ಕುಡಿಸಿ, ಅವುಗಳ ಪ್ರಕೃತಿಯನ್ನು ಕೆಡಿಸುವದಲ್ಲದೆ, ದುರ್ವ್ಯಸನದ ಬೀಜವನ್ನು ... ಬಿತ್ತುತ್ತಿರುವರು!

ವಾಚಕರೆ, ಇನ್ನು ನಮ್ಮಲ್ಲಿಯ ಚಹಾ ಅಂಗಡಿಗಳ ಸ್ಥಿತಿಯನ್ನು ತಿಳಿದ ಕೇಳ್ರಿ ... ಅವುಗಳೊಳಗಿನ ಸ್ವಚ್ಛತೆಯನ್ನು ಎಷ್ಟೆಂತ ವರ್ಣಿಸಲಿ! ಅಗೋ ನೋಡಿರಿ, ಜನರ ಚಿತ್ತಾಕರ್ಷಣಕ್ಕಾಗಿ, ಹೊರ ಬದಿಯಲ್ಲಿ ... ಹಾಕಿರುವ ತರತರದ ವಿಶಾಪಿಯು! ಅದು ... ಯಿಂದ ತನ್ನ ನಿಜ ಬಣ್ಣವನ್ನು ತೋರದಿರುವದು ಇಗೋ ನೋಡಿರಿ, ಅದರಮೇಲಿನ ದೊಡ್ಡ ದೊಡ್ಡ ಇರುವೆ

ಗಳು ಸದ್ದು ಮಾಡದೆ ಹರಿದಾಡುತ್ತಿರುವವು! ಇದೇ ಇಲ್ಲಿ ನೊಣಗಳು 'ಕ್ಷೌರ' ಎಂದು ಗವೆಗುಂಪಾಗಿ ಅದನ್ನು ಮುತ್ತುತ್ತಿರುವವು!" ಬಾಗಿಲಲ್ಲಿ ಎಷ್ಟು ಹೊಲಸಾಗಿದೆ! ಇರಲಿ ಇದೆಲ್ಲ ಹೊರ ಒಳಿದು ಸ್ವಚ್ಛತೆಯಾಯಿತು ಇನ್ನು ಒಳಬದಿಯ ಸ್ವಚ್ಛತೆಯನ್ನು ನೋಡುವಾ

ವಾಚಕರೇ, ಸ್ವಲ್ಪ ಸಾವಕಾಶವಾಗಿ ಬಗ್ಗಿ ಒಳಗೆ ಬರ್ರಿ ಒಹಹಾ ಇಲ್ಲಂತೂ ಬೆಳಕಿಗೂ ಗಾಳಿಗೂ ಬಹಳವೇ ಇಲ್ಲ. ಕಲಕತ್ತೆಯ ಕತ್ತಲೆಯ ಕೋಣೆಯೋ ಸರಿ! ಕಸ ಕಡ್ಡಿಗಳಂತೂ ಅಲ್ಲಲ್ಲಿ ತುಂಬಿಕೊಂಡಿವೆ! ಅಗೋ ನೋಡಿರಿ ಆ ಕುರ್ಚಿಗಳ ಗಿರಾಕಿಗಳು. ಖಾಲಿ ಮಾಡಿಟ್ಟಿರುವಂಥ ಕಪ್–ಸಾಸರುಗಳನ್ನು ಎಷ್ಟು ಒಗಟುಗೆಯಿಂದ ತೊಳೆಯುತ್ತಿರುವನು ಅವುಗಳಿಗೆ ಕೂಡಾ ನೀರು ತಾಗುವದಾದರೂ ಕಠಿಣವೇ ಸರಿ! ಚಹಾ ಅಂಗಡಿಗಳಲ್ಲಿ ತರತರದ ರೋಗಿಗಳು ತಮ್ಮ ಹಾಜರಿಯನ್ನು ತಪ್ಪದೆ ಕೊಡುತ್ತಿರುವದರಿಂದ, ಇಂಥ ಪಾತ್ರೆಗಳನ್ನು ಮುಟ್ಟುವದಾದರೂ ಯೋಗ್ಯವಲ್ಲವೇ? ಇಗೋ ನೋಡಿರಿ ಇದು ಚಹಾಕ್ಕಾಗಿ ನೀರನ್ನು ಸಂಗ್ರಹಿಸಿದ ದಂಥ ಹಂಡೆಯು ಇದನ್ನು ತಿಂಗಳಿಗೊಮ್ಮೆ ಯಾದರೂ, ಖಾಲಿ ಮಾಡಿ ತೊಳೆಯದೆ ಮೇಲಿಂದಮೇಲೆ ತುಂಬುತ್ತಿರುವದರಿಂದ, ಅದರೊಳಗಿನ ನೀರಿನ ಸ್ವಚ್ಛತೆಯನ್ನು ನೀವೇ ಊಹಿಸಿರಿ! ಅದಕ್ಕೆ ಮುಚ್ಚಳವಾದರೂ ಇರಬಾರದೇ ? ಮೈಲಿಗೆ ಹೊಲಸನ್ನು ನೋಡಿರಿ! ಒಮ್ಮೆ ಗಿರಾಕಿಗಳು ಕುಡಿಯುವಂಥ ಚಹಾದೊಳಗೆ ದೋಷವಾಗಿರುವ ಕಾರಣವನ್ನು ಅಂಗಡಿಕಾರನಿಗೆ ಕೇಳಲು ಸಂಶಯ ಬಂದು ಅವನು ಹಂಡೆಯಲ್ಲಿ ನೋಡಲಾಗಿ, ಒಂದು ಇಲಿಯು ಕೂಡಾ ಕೊಳೆತು ಹೋಗಿತ್ತು ಈ ಇಲಿಯು ಬಿದ್ದಂದಿನಿಂದ ಸಾವಿರಾರು ಜನರು ಅದೇ ನೀರಿನ ಚಹಾವನ್ನು ಕುಡಿದಿರುವದು ಸಹಜವಷ್ಟೆ! ಇನ್ನೊಮ್ಮೆ ನೀರು ಕಾಯಿಸುವ ಪಾತ್ರೆಯಲ್ಲಿ ಒಂದು ಹಾವು ಬೇಯಿಸಲ್ಪಟ್ಟು ಅದರಿಂದಾದ ಚಹಾ ಕುಡಿದಂಥ ಜನರು ವಿಷವೇರಿ ಸತ್ತುಹೋದರೆಂಬ ಸುದ್ದಿಯನ್ನು ನೀವಾದರೂ ಕೇಳಿರಬಹುದಲ್ಲವೇ? ಅಗೋ ಒಲ್ಲಿರ ಪಂಕ್ತಿಯಿಂದ ಬೇಸಿಗೆಯಲ್ಲಿ ಗಿರಾಕಿಗಳಿಗೆ ಅಸಹ್ಯ ಶಕೆಯಾಗುತ್ತಿದ್ದರೂ ಈಗ ಮಳೆಗಾಲದಲ್ಲಿ ಸ್ವಲ್ಪ ಬೆಚ್ಚಗೆಯೋ ಸರಿ ಆದರೆ ಕಣ್ಣುಗಳು ಮಾತ್ರ ಹೊಗೆಯಿಂದ ಹೋದವು! ಇನ್ನು ಹೆಚ್ಚು ಹೊತ್ತು ನಿಲ್ಲಲಾರೆವು ಏಳಿರಿ ಹೊರಗೆ ಹೋಗೋಣ

ವಾಚಕರೇ ವಸ್ತುಸ್ಥಿತಿಯು ಹೀಗಿರುತ್ತ, ಚಹಾ ಭಕ್ತರು 'ಮೆಚ್ಚಿದವರಿಗೆ ಮಸಣವೇ ಸಖ' ವೆಂಬಂತೆ, ಇಂಥ ವಿಶ್ರಾಂತಿಗೃಹ (?) ಗಳಲ್ಲಿ ತಮ್ಮ ಕೆಲಕಾಲವನ್ನು ಬಹು ಸಂತೋಷದಿಂದ ಕಳೆಯುತ್ತಿರುವದು ಎಂಥ ಆಶ್ಚರ್ಯವು! ಇವರಿಗೆ ಮನೆಯೊಳಗಿನ ಸ್ವಚ್ಛತೆಯು ತಿನಿಸುಗಳು ಎಷ್ಟು ಉತ್ತಮವಿದ್ದರೂ, ಸೇರುವದಿಲ್ಲ ಇಂಥ ಅಂಗಡಿಗಳೊಳಗಿನ ಅಗ್ಗ ಕಿಟ್ಟಿಯ ಮುಗ್ಗ ಜೋಳ'ದ ನ್ಯಾಯದಿಂದ ತಯಾರಾದಂಥ ಖವಟ್ಟೆಯ ಬುರುಕು ಗಟ್ಟಿದ ಮಿಠಾಯಿಯ ಮೇಲೆ ಇವರು ಯಥೇಚ್ಛವಾಗಿ ಕೈ ಹೊಡೆಯುವದರಿಂದ ಇವರಿಗೆ ಮನೆಯಲ್ಲಿ ಊಟವಾದರೂ ಸೇರುವದಿಲ್ಲ ಚಹಾದ ಕಷ್ಟವನ್ನು ಮೇಲಿಂದಮೇಲೆ ಎತ್ತಿದರೆ, ಇವರಿಗೆ ಹಸಿವೆ ಯಾವದರ ತ್ಯಾಗ ಆಗಬೇಕು? ಹೀಗಾಗಿ ನಮ್ಮ ಸಮಾಜವು ದಿನೇ ದಿನೇ ಕ್ಷೀಣವಾಗುತ್ತ ನಡೆದದೆ ಚಹಾ ಅಂಗಡಿಗಳ ಸಂಖ್ಯೆಯು ಉತ್ತರದಿಂದ ಹೆಚ್ಚುತ್ತಲಿದ್ದ ಮೂಲಕ, ಮನೆಯ ಬಾಗಿಲಲ್ಲಿಯೇ ನೋಯಿಯಿಂದ ಆಗುತ್ತಿದ್ದ ಹಾಲು ತುಟ್ಟಿಯಾಗಿ, ಹುಡುಕುತ್ತ ಹೋದರೂ, ಸಿಗುವದು ಕಠಿಣವಾಗಿದೆ ಎಷ್ಟೋ ಜನರಿಗೆ ಚಹಾದ ನೆನಪಾದ ಕೂಡಲೆ, ತಡವಾಗದಂತೆ ಒಂದು ಬದಿಯಲ್ಲಿ ನಿತು ಕುದಿಯುತ್ತಲೇ ಇರಬೇಕಾಗುತ್ತದೆ ಇಂಥವರಿಗೆ ಪ್ರವಾಸದಲ್ಲಿ ಬಹಳೇ ಪೇಚಾಟವಾಗುವದು. ಹಾಲು ಸಿಗದಿದ್ದರೂ, ಬರೇ ಚಹಾ ಸಪ್ಪಿನ ನೀರಿನ ಮೇಲೆಯೇ, ಇವರು ತಮ್ಮ ವ್ಯಸನವನ್ನು ಪೂರೈಸಿಕೊಳ್ಳುವರು! ಹಿಂಗಕ್ಕೊಮ್ಮೆ ಇಂಗ್ಲಂಡದಲ್ಲಿ ದೇಶಾಂತರ ಕ್ಷಿ ವಿಧಿಸಲ್ಪಟ್ಟ ಹಿಂದುಸ್ಥಾನಿಗೆ ನ್ಯಾಯಾಧೀಶನು ಯಾವ ರೀತಿಯಿಂದ ಅದನ್ನು ನೆರವೇರಿಸಬೇಕೆಂದು ಕೇಳಲು ಅವನು ತನ್ನನ್ನು ದಯಮಾಡಿ ಸರಾಯಿಯ ಪೀಪಾಯಿಯಲ್ಲಿಯೇ ಮುಳುಗಿಸಿ ಕೊಲ್ಲಬೇಕೆಂದು ಅರಿಕೆ ಮಾಡಿಕೊಂಡಿದ್ದನಂತೆ ಅದರಂತೆಯೇ ಪ್ರಸಂಗ ಬಂದಲ್ಲಿ ತಮ್ಮನ್ನು ಚಹಾದ ಹಂಡೆಯಲ್ಲಿಯೇ ಮುಳುಗಿಸಿ ಕೊಲ್ಲಬೇಕೆಂದು ಬೇಡಿಕೊಳ್ಳುವ ಅಪರಾಧಿಗಳೇನು ಸಿಗುವದು ನಮ್ಮಲ್ಲಿ ಅಪರೂಪವೆನಿಸಲಿಕ್ಕಿಲ್ಲ

ಒಟ್ಟಿನಮೇಲೆ ಹೇಳುವದೇನಂದರೆ — ಆರೋಗ್ಯ ರಕ್ಷಣೆಯ ಖಾತೆಯವರು (Sanitary Department) ಇಂಥ ಚಹಾ ಅಂಗಡಿಗಳನ್ನು ಮೇಲಿಂದಮೇಲೆ ತಪಾಸಿಸಿ, ಅವುಗಳನ್ನು ಸುಧಾರಿಸುವ ಕೆಲಸವನ್ನು, ಜನರು ತಮ್ಮ ಈ ದುರ್ವ್ಯಸನವನ್ನು ಆದಷ್ಟು ತಗ್ಗಿಸುವ ಪ್ರಯತ್ನವನ್ನು ಮನಸ್ಸಿನಿಂದ ಕೈಕೊಂಡರೆ, ನಮ್ಮಲ್ಲಿಯ ರೋಗಿಗಳ ಸಂಖ್ಯೆಯು ಕಡಿಮೆಯಾಗುವದಲ್ಲದೆ ಜನರ ಪ್ರಕೃತಿಯಾದರೂ ಬಹಳೇ ಸುಧಾರಿಸುವದೆಂಬುವದರಲ್ಲಿ ಏನೂ ಸಂಶಯವಿಲ್ಲ

ಹಕ ವಿದ್ಯಾವರ್ಧಕ ಫಂಡ.

(ಲೇಖಕ — ವೆ. ಪ. ಹೆಗಡೆ ಬಾಡ ಅಂಕೋಲಾ)

ಲೇಖಾಂಕ ೨

ಫಂಡಿನ ಪ್ರಕಾರಗಳೂ, ವಿನಿಯೋಗವೂ

ಅ ವರ್ಗಣಿಯು

೧ ಅನುಕೂಲವುಳ್ಳ ಶ್ರೀಮಂತರೂ, ದೊಡ್ಡ ಪಗಾರದ ನೌಕರರೂ, ನಿಯಮಿತವಾದ ವಾರ್ಷಿಕ ವರ್ಗಣಿಯನ್ನು ಒಂದೇ ಸಾರೆ ತುಂಬಬಹುದು.

೨ ಹವೀಕರು ಬಹಳ ಜಮೀನುದಾರರು ಇವರು ತಮ್ಮ ಅಡಿಕೆ, ಯಾಲಕ್ಕಿ, ಬೆಲ್ಲ, ಬತ್ತ, ತೆಂಗಿನಕಾಯಿ ಮುಂತಾದವುಗಳನ್ನು ಮಾರಾಟ ಮಾಡಿ ಇತರ ತಮ್ಮ ಆವಶ್ಯಕತೆಯನ್ನು ತೀರಿಸಿಕೊಳ್ಳುವರು ನಮ್ಮ ಫಂಡಿನ ವಿನಿಯೋಗವನ್ನು ವಿಚಾರಮಾಡಿ ನೋಡಿದರೆ ಅಕ್ಕಿ, ಬೆಲ್ಲ, ತೆಂಗಿನ ಕಾಯಿಗಳು ವಿದ್ಯಾರ್ಥಿಗಳ ಬೋರ್ಡಿಂಗ ಉಪಯೋಗಕ್ಕೆ ಕೊಳ್ಳಬೇಕಾಗುತ್ತಿದ್ದು, ಜಮೀನುದಾರರಿಗೆ ಹಂಗಾಮಿಯಲ್ಲಿ ತಮ್ಮ ಬೆಳೆಯನ್ನೇ ವರ್ಗಣಿರೂಪವಾಗಿ ದಾನ ಮಾಡುವದು ಸುಲಭ ಸಾಧ್ಯವಾಗುವದು ಅವೇ ಮಾರಾಟಮಾಡಿ ರೊಕ್ಕ ಹಣವನ್ನು ಕೊಡಬೇಕೆಂದರೆ ಸಮಯ ಕೊಡುವದು ಕಠಿಣವಾಗುತ್ತದೆ ಆದರಿಂದ ಹವೀಕರ ಕೆಲವು ಮಾರ್ಗಗಳೆಂಬ ಭಾಗಗಳನ್ನು ಮಾಡಿ, ಅಲ್ಲಲ್ಲಿ ಯೋಗ್ಯ ಸೆಕ್ರೆಟರಿಗಳಾಗಿದ್ದು, ಇಂಥ ವರ್ಗಣಿದಾರರಿಂದ ಅವರಿಗೆ ಅನುಕೂಲವುಳ್ಳ ಬೆಳೆಯನ್ನೇ ತೆಕ್ಕೊಂಡು ಒಟ್ಟುಮಾಡಿ ಉಪಯೋಗವಿಲ್ಲದ ಅಡಿಕೆ ಯಾಲಕ್ಕಿ ಮುಂತಾದವುಗಳನ್ನು ತಕ್ಕ ದರದಿಂದ ಆಯಾ ಶಹರದಲ್ಲಿ ಮಾರಿ ಜಮೆ ಮಾಡಬಹುದು

೩ ಸಣ್ಣ ಪಗಾರದ ನೌಕರರು ತಮ್ಮ ವಾರ್ಷಿಕ ವರ್ಗಣಿಯನ್ನು ತಿಂಗತಿಂಗಳಿಗೆ ಅನುಕೂಲವಾದಷ್ಟು ಕಂತುಗಳಿಂದ ವಸೂಲ ಕೊಡಬಹುದು ಸುಶಿಕ್ಷಿತರಾದ ಇವರಿಂದ ಈ ಫಂಡಿಗೆ ಏನೂ ಅಡ್ಡಿ ಬರಲಿಕ್ಕೆ ಕಾರಣವಿಲ್ಲ

೪ ದೊಡ್ಡ ದೊಡ್ಡ ಶ್ರೀಮಂತರೂ ವಕೀಲ ಮಾಮಲೇದಾರರೂ, ತಮ್ಮ ನಿಯಮಿತ ವಾರ್ಷಿಕ ವರ್ಗಣಿಯಲ್ಲದೆ ೫-೧೦ ಇತ್ಯಾದಿ ಬೇಕಷ್ಟು ರೂಪಾಯಿಗಳ ಕೇಅರು ಕೊಂಡು ಠೇವಿನ ರೂಪದಿಂದ ಅನುಕೂಲವಿದ್ದಷ್ಟು ದೊಡ್ಡ ಪ್ರಮಾಣದಿಂದ ಹಣವನ್ನು ಇಡಬಹುದು

೫ ಇದಲ್ಲದೆ ಅನಾಥ ಫಂಡು, ಧರ್ಮಾದಾಯ ಫಂಡು ಮುಂತಾದವುಗಳನ್ನು ಇದರ ಅಂಗಗಳಾಗಿ ತೆಗೆಯಬಹುದು

೬ ಧರ್ಮ ಸಂಸ್ಥಾಪಕರು ಎತ್ತಿದ ಧರ್ಮ ತೆರಿಗೆ (ಗುರುದಕ್ಷಿಣೆ) ಯ ರಕಮಿನಿಂದ ಜಾತಿ ಸಮಾಜ ಸುಧಾರಣೆಯ ಬಗ್ಗೆ ಎಂತಾ ಕೆಲವು ಫಂಡು ಇದಕ್ಕೆ ಬರಬಹುದು

೭ ಮದುವೆ, ಮುಂಜಿ ಮುಂತಾದ ಕಾರ್ಯಗಳಲ್ಲಿ, ಆಯಾ ಗ್ರಾಮದವರು ಗ್ರಾಮ ದಕ್ಷಿಣೆಯೆಂಬ ರಕಮನ್ನು ಕೊಳ್ಳುವದು ಮತ್ತು ಗ್ರಾಮ ಕಟ್ಟು ಮುಂತಾದವುಗಳ ಪರಿಹಾರ ಕಾಲಕ್ಕೆ ಏನಾದರೂ ದಂಡವನ್ನು ಕೊಳ್ಳುವ ರೂಢಿಯೂ ಉಂಟು ಈ ರಕಮನ್ನು ಈ ಫಂಡಿಗೆ ಕೂಡಿಸಬಹುದು

೮ ವಕೀಲರೂ, ವ್ಯಾಪಾರಸ್ಥರೂ, ಬೇರೆ ಬೇರೆ ಧರ್ಮಾದಾಯ ತೆಗೆದಿರುವಂತೆ, ವಕೀಲರೂ, ಇತರ ಸರಕಾರಿ ನೌಕರರೂ, ಈ ತರದ ವಿಶೇಷವಾದ ಫಂಡುಗಳನ್ನು ಕಾಯಾಂತರದಿಂದ ಜಮೆಯಾಗುವ ಹಣದಿಂದ ವೃದ್ಧಿಪಡಿಸಬಹುದ —

ಬ ವಿನಿಯೋಗವು

ಈ ಫಂಡಿನ ವ್ಯವಸ್ಥಾಪಕ ಮುಖ್ಯ ಆಫೀಸು ಕುಮಟೆಯಲ್ಲಿಯೇ ಇರಬಹುದು. ಅಲ್ಲಿಯ ಪ್ರಸಿದ್ಧ ಮತ್ತು ವಿಶ್ವಾಸಿಕ ವಕೀಲರು ಲೋಕೋಪಯೋಗಕ್ಕಾಗಿ, ಅಪ್ರತಿಮವಾದ ಉಜ್ವಲವೂ ಅಲೌಕಿಕವಾದ ಇತರ ಜಾತಿ (ಸಾರಸ್ವತ ಮುಂತಾದ) ಬಂಧುಗಳ ಸಹಾಯವೂ ಪ್ರೋತ್ಸಾಹವೂ ಸಿಗುತ್ತಿರುವ ಕಾಲದಲ್ಲಿ ಸಹ ಅವೇ ಮುಂದಾಗಬಹುದು ವ್ಯವಸ್ಥಾಪಕ ಕಮಿಟಿಯು ಸಾಧಾರಣ ಮಹಾಸಭೆಗಳ ಮೆಂಬರರು ಆರಿಸಿದ ಯೋಗ್ಯ ನಾಗರಿಕ ಶ್ರೀಮಂತ ಸುಶಿಕ್ಷಿತ ಜನರು ಬೇಕಾದವರು ಆಗಬಹುದು ಹೊನ್ನಾವರ ಶಿರಸಿ, ಸಿದ್ದಾಪುರ ತಾಲೂಕ ಮುಂತಾದವುಗಳಲ್ಲಿ ಇದರ ಶಾಖೆಗಳು ಇರಬೇಕು.

೧ ಊಟದ ಕೊರತೆಯು ದೂರಾಗುವಂತೆ ಯೋಗ್ಯ ವ್ಯವಸ್ಥೆಯುಳ್ಳ ಬೋರ್ಡಿಂಗ ಸ್ಥಾಪಿಸಬೇಕು

೨ ಬಡಹುಡುಗರಿಗೆ ಫೀ ಪುಸ್ತಕಗಳನ್ನು ಕೊಡಬೇಕು

೩ ತೀರ ಬಡ ಹುಡುಗರಾಗಿ ಊಟದ ಖರ್ಚು ಸಹ ತೆರಲಾರದ ಪ್ರಸಂಗವಿದ್ದು, ಕಲಿಯಲಿಕ್ಕೆ ಹುರುಪಿರುವವರಿಗೆ ಪುಕ್ಕಟೆಯಾಗಿ ಊಟವನ್ನು ಸಹ ಹಾಕಬೇಕು. ಈ ಸಂದರ್ಭದಲ್ಲಿ ಅವನು ಮುಂದೆ ನೌಕರ ಅಥವಾ ಸ್ವತಂತ್ರ ಉದ್ಯೋಗಿಯಾದಮೇಲೆ, ತನ್ನ ಉತ್ಪನ್ನದೊಳಗಿಂದ ಕಂತಿನಮೇಲೆ ಈ ಸಂಘಕ್ಕೆ ಅಸಲು ಹಣವನ್ನು ಸಂದಾಯ ಮಾಡುವಂತೆ ಕರಾರು ಮಾಡಿಕೊಳ್ಳಬಹುದು

೪ ಜಮೀನು ಇದ್ದು ಕಲಿಯಲಿಕ್ಕೆ ದುಡ್ಡು ಇಲ್ಲದ ಹುಡುಗರಿಗೆ, ಯೋಗ್ಯ ಕರಾರಿನಿಂದ ಬಡ್ಡಿಯು ವಿಶೇಷ ಹತ್ತದಂತೆ ಸಾಲವನ್ನು ಕೊಡಬಹುದು.

೫ ಗಣಿತ, ಇಂಗ್ಲಿಷು ಸಂಸ್ಕೃತ ಮುಂತಾದ ವಿಷಯಗಳಲ್ಲಿ ಪಾಸಾಗಿ ಬಂದವನಿಗೆ ತಕ್ಕ ವೇತನ (ಸ್ಕಾಲರಶಿಪ್) ಕೊಡಬಹುದು

೬ ಇಂಗ್ಲಿಷ ಕಾಲೇಜುಗಳಿಗೆ ಹೋಗುವ ಮತ್ತು ಅಲ್ಲಿ ಉತ್ತಮರೀತಿಯಿಂದ ಕಲಿಯುವ ಉಮೇದವಾರ ಬಡ ವಿದ್ಯಾರ್ಥಿಗಳಿಗೆ, ಅನುಕೂಲತೆಯ ಮೇರೆಗೆ ಪೂರಾ, ಇಲ್ಲವೆ, ತಕ್ಕಷ್ಟು ಹಣದ ಸಹಾಯ ಮಾಡಬಹುದು.

೭ ವಿಶೇಷವಾಗಿ ಹವ್ಯಕ ವಿದ್ಯಾರ್ಥಿಗಳನ್ನು ಇಂಗ್ಲಿಷ ಶಾಲೆಗೆ ಕಳಿಸಿದಂಥ ಅಥವಾ ಕನ್ನಡ ಟ್ರೇನಿಂಗ ಕಾಲೇಜಕ್ಕೆ ಕಳಿಸಿದಂಥ, ಹವ್ಯಕ ಮಾಸ್ತರನಿಗೆ ಯೋಗ್ಯ ಇನಾಮನ್ನು ಕೊಡುವದು ಅಥವಾ ಅವನ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ವಿಶೇಷ ಸಹಾಯವನ್ನು ಕೊಡುವದು

೮ ಜಾತಿಯ ಸುಧಾರಣೆಯ ವಿಷಯವಾಗಿ ಕೊಡುವ ಸಭೆಗೆ ಇಲ್ಲವೆ ಈ ಸಲುವಾಗಿ ಅವಶ್ಯವಾಗಿ ಮಾಡತಕ್ಕ ಪ್ರವಾಸವನ್ನು ಮಾಡುವವನಿಗೆ ಖರ್ಚಿನ ಅನುಕೂಲತೆಯನ್ನು ಮಾಡುವದು.

೯ ಹವೀಕ ಜಾತಿಯ ಕನ್ನಡ, ಇಂಗ್ಲಿಷ ಲೇಖಕರಿಗೂ, ಗ್ರಂಥಕಾರರಿಗೂ, ಉತ್ತೇಜನವಾಗುವಂತೆ ಅವರ ಲೇಖ-ಗ್ರಂಥಗಳನ್ನು ಮುದ್ರಿಸಿ, ಅವರಿಗೆ ತಕ್ಕ ಇನಾಮು ಕೊಡುವದು

೧೦ ವಿಶೇಷ ಕೈಗಾರಿಕೆ ಕೃಷಿ ವ್ಯಾಪಾರಗಳಲ್ಲಿ ಕುಶಲರಾದವರಿಗೆ ಬಹುಮಾನ ಸಹಾಯವನ್ನು ಮಾಡುವದು

೧೧ ಕಾಲಕಾಲಕ್ಕೆ ಬೇಕಾದ ಸಭೆಗಳನ್ನು ಸೇರಿಸಿ ಹಳ್ಳಿಹಳ್ಳಿಗಳನ್ನು ತಿರುಗಿ ವ್ಯಾಖ್ಯಾನಗಳನ್ನು ಕೊಡುವಂತೆ ವ್ಯವಸ್ಥೆ ಮಾಡುವದು

ಸೂಚನಾ ವಿನಂತಿ — ಇವು ಮೂರ್ತಿಮಂತವಾದ ವಿಚಾರಗಳಲ್ಲವೆಂಬದು ಸಹಜವೇ ಆದರೆ ಯೋಗ್ಯ ವಿಚಾರ ವಿನಿಮಯದಿಂದ ಸಾಧ್ಯವಾಗುವಂತ ಇವುಗಳಲ್ಲಿ ಬೇಕಾದ ಹೆಚ್ಚು ಕಡಿಮೆಗಳನ್ನು ಮಾಡಬಹುದು ಹೊರತು ಹಾಗೆ ಯಾಕೆ? ಹೀಗೆ ಯಾಕೆ ಈಗ ಯಾಕೆ? ಬೇಗ ಯಾಕೆ? ಮುಂತಾದ ವಾದ ವಿವಾದಗಳನ್ನು ಹಳ್ಳದ ಮುಂದಿನ ಕಸದಂತೆ ಮಾಡುವ ಕಾರಣವಿಲ್ಲ

ಅಂಕೋಲಾ ತಾರೀಖು ೩೧-೩-೨೦ } ನಮ್ರ ಲ್ಲರ ಎರೇಷ. ಹವ್ಯಕ ಸುಧಾರಣಾಕಾಂಕ್ಷಿ

ಕುಮಟೆ ಪೇಟೆ ಧಾರಣೆ.

ಜಿನಸು	ದರ
ರಂಗೂನ ಬಿ ಗೋಣಿಗೆ	೧೪।—೧೫
ಕೃಷ್ಣ ಶಾಲಿ ಪಾಗಿ	೬
ರಾಗಿ ನಿಜ	೧।—೧೨
ಗೋದಿ ಗೋಣಿಗೆ	೧೯—೨
ಹುರುಳಿ ನಿಜ ,	೧೫—೧೫
ಕಡಳೆ ನಿಜ ೧ಕ್ಕೆ	೧೬—೧೬॥
ತೊಗರಿಬೇಳೆ ಗೋಣಿಗೆ	೩೦—೩೨
ಹೆಸರು ಬೇಲ	೧೬—೧೮
ಮೋರಿಸ ಸಕ್ಕರೆ ಮಣ „	೧—೧
ಮೆಣಸಿನ ಕಾಯಿ ಮಣ	೨-೭
ಹರಳೆಣ್ಣೆ ಮಣ	೧॥।
ಕೊಬ್ರಿ ಎಣ್ಣೆ ಮಣ	೧೧
ಕೊತ್ತಂಬರಿ ಗೋಣಿ	೧೬
ಉಪ್ಪು ಗೋಣಿ	೪ ೭ ೦
ಕರೆಸಿನ ಸೂಯ ರ	೬ ೭
„ ಹಸ ,	೦

ಜಗತ್ಪ್ರಖ್ಯಾತ ಸೂತ್ರಧಾರಕ! ಬಹ ಮಾನಕಾರಕ

ಮುಖ ಜೀವನಾಮೃತ.

ಈ ಔಷಧವು ಹಲ್ಲು ಸಳಿತ ಹಲ್ಲು ನೋವು ಹಲ್ಲು ಅಲುಗಾಡುವ ಹಲ್ಲುಗಳಿಂದ ರಕ್ತ ವ ಕೀವು ಸೋರುವ ಮುಖದಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ ಇದಲ್ಲದೆ ಒಲಗ್ರಸ ಎಲ್ಲಾ ತರದ ಜ್ವರ ತಲೆಯು ಬಡತ ವಾಂತಿ, ಹೊಟ್ಟೆ ನೋವು ನೆಳಗು ಳು, ಪ್ಲೇಗ, ಕೊಲರಾ, ಗಂಟುಗಳಿಗೆ ಮತ್ತು ವಿಷಕಾರಕ ಪ್ರಾಣಿಗಳು ಕಚ್ಚಿದ ಸ್ಥಳ ತ ಬಾಳಂತಿಯರಿಗೆ ಸಂಬಂ ನೋಡಿದರೆ ವ ತಂ ಪ್ರಕಾರದ ಮೇಹರೋಗಕ್ಕೆ ಗುಣ

ಕ್ರಯ ಬಾಟ್ಲಿ ೧ಕ್ಕೆ ಕೇವಲ ೦-೧೨-೦

ಪತ್ತೆ:— ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದೀಕ ಕಂಪನಿ,
ಕುಮಟಾ (ಎಸ್ ಕೆನರಾ)

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಪಂಚಾಮೃತ ಲಕ್ಷ್ಮೀವಿಲಾಸ ರಸ ಲೇಹ — ಬಹಳ ಶ್ರಮ ಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ ಎದೆನೋವು ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ದಾತು ಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಗೊಳಿಸುವದು 40 ಸಲ ಸೇವಿಸುವ ಲೇಹ ಡಬ್ಬಿ 1ಕ್ಕೆ 1-12-0 ೩ ಡಬ್ಬಿಗೆ 4-12-0

2 ಮಹಾಜ್ವರಾಂಕುಶ — (ಖ ತ್ರಿ ಗುಣ) — ಇನ್‌ಫ್ಲುಯೆಂಜಾ ನಿಮೋನಿಯಾ, ದಿವಸಕ್ಕೊಮ್ಮೆ ದ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮ ಬಾಣ ಬಾಟ್ಲಿ 1 ಕ್ಕೆ 0-8-0

3 ಬಾಲಗ್ರಹ ಗುಟಿಕೆ — ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮ ಬಾಣ ಬಾಟ್ಲಿ 1ರ ಕ್ರಯ 0 10 0

4 ಶ್ವಾಸಕುಠಾರ ಗುಟಿಕೆ ಇದು ಶ್ವಾಸಕ್ಕೆ ಶ್ರೇಷ್ಠ ಔಷಧಿ ಒಂದೇ ಗುಳಿಗೆಯಿಂದ ಕಫ, ಉಬ್ಬಸ ಕೆಮ್ಮು ಇವು ಗುಣ ಬಾಟ್ಲಿ 1 ರ ಕ್ರಯ 0 10 0

5 ಮೇಹ ಕುಠಾರ — ಮೂತ್ರಕೃಚ್ಛ್ರ ಅತ್ಯುಷ್ಣ ವ ರಕ್ತಸೋಗುವಾಗ್ಯ ಉರಿಯನ್ನೂ ಕೀವನ್ನೂ ಕೂಡಲೆ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು ಕಠಿಣ ರೋಗಿಗಳಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ 14 ದಿವಸದ ಔಷಧಿ ಕ್ರಯ ರೂ 2

6 ಅಶೋಕಾರಿಷ್ಟ ಮತ್ತು ಮಾತ್ರೆ — ಇದರ ಸೇವನೆಯಿಂದ ಜ್ವರ, ರಕ್ತ ಪಿತ್ತ ಅರುಚಿ ಸೂತಕದ ಸಮಯದಲ್ಲಿ ಕಿಬ್ಬೊಟ್ಟೆನೋವು, ಸೊಂಟ ನೋವು ತಿಂಗಳಿಗೆ 2 ಸರ್ತಿ ಮುಟ್ಟಾಗುವದು, ಹೆಂಗಸರ ರಕ್ತಸ್ರಾವ ಬಿಳಿದು ಹೋಗುವದು ಇವೆಲ್ಲಾ ರೋಗಗಳನ್ನು ನಿವಾರಿಸಿ ಗರ್ಭಕೋಶವನ್ನು ಸರಿಪಡಿಸುತ್ತದೆ 1 ಬಾಟ್ಲಿ ಔಷಧಕ್ಕೂ 1 ಬಾಟ್ಲಿ ಮಾತ್ರೆಗಳಿಗೂ 2 0-0

ಎಸ್. ಗಣಪಯ್ಯಾ ಎಂಡ ಸನ್ಸ್
ನೇಟಿವ್ ಡೊಕ್ಟರ್ಸ್ ರಥಬೀದಿ
ಮಂಗಳೂರ ದ ಕ.

ಮುಂಬೈಗಿಂತ, ಸೋಯಿ!

ತ್ವರೆಮಾಡಿರಿ! ಬಿಡಬೇಡಿರಿ!!

1 ರೇಡಿಯಂ ರಿಷ್ಟವಾಚ ಸಿಲಿಂಡರ ಗ್ಯಾರಂಟಿ ವರ್ಷ 2 ಕೈಗೆ ಕಟ್ಟುವ ಪಟ್ಟಿ ಸಹಿತ ಕಿಮ್ಮತ್ತು 1ಕ್ಕೆ 8-0-0

2 ರೇಡಿಯಂ ರಿಷ್ಟ ವಾಚ ಲಿವ್ಹರ, ಸ್ಕ್ರೂ ಜೆಲನ್ಸ 15 ಜುವೆಲ್ಸ (ಕೇಸ) ಇದ್ದು ಗ್ಯಾರಂಟಿ 10 ವರ್ಷ ಪಟ್ಟಿ ಸಹಿತ 1ಕ್ಕ 20-0-0 ಸದ್ರಿ ರೇಡಿಯಂ ಇದ್ದ ವಾಚಗಳು ಹಗಲು ಕಾಣುವಂತೆ ರಾತ್ರಿಯೂ ಕಾಣುವದು ಬಹಳ ಆಶ್ಚರ್ಯ

3 ರೋಸ್ಕೋಪ ಪೆಂಡೆಂಟ ಲಿವ್ಹರವಾಚ, ಗ್ಯಾರಂಟಿ, ವರ್ಷ 4 ಕಿಮ್ಮತ್ತು 1 ಕ್ಕೆ 9-8-0

4 ಸುಪೀರಿಯರ ವಾಚ, ಸಾದಾ ಸಾನು ಗಿಲ್ಟ ಲಿವ್ಹರ 10 ಜುವೆಲ್ಸ, ಸ್ಕ್ರೂ ಜೆಲನ್ಸ ಗ್ಯಾರಂಟಿ ವರ್ಷ 6 ಕಿಮ್ಮತ್ತು 1 ಕ್ಕೆ 12-8-0 ಕಿಮ್ಮತ್ತಿನ ಶಿವಾಯಿ ಟ ಖ ಬೇರೆ ವ್ಯಾಪಾರಸ್ಥರಿಗೆ ಹೋಲ್‌ಸೇಲ ದರ ಬೇರೆ ತಿಳಿಸಲ್ಪ

ವಿಳಾಸ:— ಜೋಶಿ, ವಾಚಕಂಪನಿ.

ಪೋಸ್ಟ— ಶಿರ್ಸಿ ಉತ್ತರ ಕಾನಡಾ

ಹೊಸ ಶೋಧ "ಓಂ" ಹೊಸಶೋಧ!

ಗುಣ ಬಾರದಿದ್ದರೆ ಹಣಮರಳು

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಜೊತೆ ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಚೆನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೆ ಹಾಸಲು ಸಹ ೧ಳ ತೊಲೆಯ ಡಬ್ಬಿಗೆ ರು ೧ ೧೨ ಆಣೆ ೩ ಡಬ್ಬಿಗಳಿಗೆ ೪ ರು ೮ ಆಣೆ ೧೨ ಡಬ್ಬಿಗಳಿಗೆ ೧೫ ರು ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ:— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ—ಪ್ಟಿ ಆರ್ ಬ್ರದರ್ಸ ಮತ್ತು ಕಂಪನಿ
ಪೋಸ್ಟ ನಿಪ್ಪಾಣಿ, ಜಿ ಬೆಳಗಾಂ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವದೇ ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾ ಮದುವೆ ಸಮಾರಂಭಗಳಲ್ಲಿಯೂ ರಾತ್ರಿ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ, ಇದರಿಂದ ಬೆಳಕು ಹೆಚ್ಚು ಬಿದ್ದು ಖರ್ಚು ಸಹ ಕಡಿಮೆ ತಗಲುತ್ತದೆ ಈ ವಿನಹಾ ಆ ದೀಪಗಳು ತಾ, ಈ ದೀಪಗಳು ಹೆಚ್ಚು ಎಂಟಿ ತಾವ ಕ್ರಯಗಳು ಸಹ ಇಲ್ಲಿ

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ತಿಳಿಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಯ್ಯ ಜ್ಞಾನಭಾಗ.

ಹೆಗಡೇಕರ, ದುಕಾನ, ಕುಮಟಾ.

Printed and published by Krishnarao Keshav Shenvi, at his Star of Kanara Press, Kumta

N. Reg. B 1270?

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೧.

ಪತ್ರದ ವರ್ಗಣಿ.

ಕೌಟೆಯಲ್ಲಿ ಆಗಾವು ರೂಪಾಯಿ 2-0-0.

ವ್ಹಿಪಿ ಅಂಚೆವೆಚ್ಚ ಸೇರಿ ರೂಪಾಯಿ 2-13-0.

ಪ್ರತಿ ಸಂಚಿಕೆಗೆ 0-1-0.

सरघातिरिनिर्गतं हेषयतां याति लोके अनर्थाहितकर्तां त्यज्यते पार्थिवेन्द्रैः
इति महति विरोधे, वर्तमाने समाने, नृपतिजनपदानां दुर्लभ कार्यकर्ता

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ.

ಕನ್ನಡ, ಇಂಗ್ಲಿಷ ವ್ಯಾಕಾಪ್ಯಟಿನ(೧೫ ಎಮ್‌ಬ್ರ) ೫ ಸಾಲುಗಳ ವರೆಗೆ ರೂ. 1-0-0

ಅನಂತ, ಪ್ರತಿ ಸಾಲಿಗೆ 0-2-0.

ಹೆಚ್ಚಿಂಗಿನ ಸಾಲು ಎಷ್ಟು ದೊಡ್ಡದಿರುವದೋ ಅ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸರುಕ್ಷಿ ತಿಳಿಸಲ್ಪಡುವದು.

[ನಿಮುಟಾ— ಕಾನಡಾವೃತ್ತ ಗುರುವಾರ, ತಾರೀಖು ೨೯ ಮಾಹೆ ಜುಲ್ಯಾ ಸನ್ ೧೯೦೩ ನೇ ಇಸವಿ.]

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಸುರಿ, ಕಣ್ಣುರಿ, ಶಿರಸ್ಸಿನಿಂದ ಕೀವು ಸೋರುವದು ಕಿವುಡುತನ, ಕಣ್ಣು ನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ನಿಶ್ಚಿತ ಗುಣಪಡಿಸುತ್ತದೆ, ಉದುರುವ ಕೂದಲವನ್ನು ನಿಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿನ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲುಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದ. ಬೆಲೆ ಸೀಸೆ 1ಕ್ಕೆ 0-12-0; 3 ಕ್ಕೆ 2-0-0

ದೊಡ್ಡ ಸೀಸೆಗೆ 1-8-0

ಚಂದನಾಸವ.

ಮೂತ್ರ ಕೃಚ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗಗಳನ್ನು ಗುಣ ಮಾಡುತ್ತದೆ.

ಬಾಟ್ಲಿ 1 ರ ಕ್ರಯ 1-8-0.

ಬಾಟ್ಲಿ 3 ರ ಕ್ರಯ 4 0 0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮೈನೆರೆಯಾಗುವದು, ರಜೋಸಮಯದಲ್ಲಿ ಅಲ್ಪಲ್ಪವಾಗಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃದ್ರೋಗ, ಬಿಳಿಪ್ರದರ ಬಿಳಿಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ 2/-

ಚಿನ್ ಚಿನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಜಕಂ, ಘಾಯಿ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ ಕ್ಕೆ ೩ ಆಣೆ ಟ ಪಾ. ಅಲಾಯಿದ. ಕೆಟಲಾಗಿಗೆ ಬರೆಯಿರಿ ವಿಳಾಸ.—

ಮನೋಲ್ಲಾಸಿನಿ ಕಂಪನಿ.

7. ಕಂಕನಾಡಿ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೆಜ್ವರ, ಕೆಂಪುಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು 8 ಔನ್ಸಿನ ಬಾಟ್ಲಿ 1 ಕ್ಕೆ ರೂ 1 8 ½ ಡಜನಿಗೆ ರೂ. 8,8, 1 ಡಜನಿಗೆ ರೂ. 16 8

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು 20 60 ಮತ್ತು 100 ಮಾತ್ರೆಗಳಿಗೆ ಆಣೆ 8. ರೂ. 1 ಮತ್ತು ರೂ 8-1.

ರೆವುಮೊ ಬಾಮು: ತಲೆಶೂಲೆ, ಕಟಿವಾತ, ಇತರ ಎಲ್ಲಾ ನೋವುಗಳಿಗೆ ಕ್ರಯ. ಡಬ್ಬಿ 1 ಕ್ಕೆ ಆ 8 1 ಡಜನಿಗೆ ರೂ 5-4 0

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ.1-10 1 ಡಜನಿಗೆ ರೂ 3

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1 2 4. ಔನ್ಸ್ 1 2. 4.
ಆ 2½ ಆ 3½ ಆ 6. ಆ 11 ರೂ 1 4 ರೂ 2 4

ದೃಷ್ಟಿ ಚಕ್ರಗಳು

ನಮ್ಮ ದೃಷ್ಟಿ ಶಾಸ್ತ್ರಜ್ಞರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಡೊಕ್ಟರರೊಡನೆ ಪತ್ಯಾ ತರಬೇತರಾಗಿ ಪ್ರಾಯಃ ಎಲ್ಲ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೊಡು ಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕನ್ನಡಿಗೆ ಹಿಂಬಾಗುವ ಕನ್ನಡಕಗಳೂ ಇತರ ಎಲ್ಲಾ ಮ್ಯಾಲುಗಳೂ ದೊರೆಯುವದು. ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಬಾರುವ ಕನ್ನಡಕವನ್ನಾಗಲಿ, ಅವರ ನಂಬ್ರವನ್ನಾಗಲಿ ನಮಗೆ ಕಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪೆನಿ,

7. ಮಂಗಳೂರು.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೇನ ಕೋಟಿಗೂ, ಕೋಟಿಗೂ, ಬರುವದೇ ಧವ್ಯ, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂಥವು ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,

ದಾವಣಗೇರಿ, ಮೈಸೂರ ಪ್ರಾಂತ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರೆಕೊಂಡರೆ ಅಥವಾ ಭೆಟ್ಟಿಯಾದರ ತರಿಸಿಕೊಡುವೆವು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ಸಾಕಿ ಕೂಡ್ಸಿಸುವೆವು.

ಪತ್ತೆ— ಭಡತೀ ಭ್ರಾತೃಸಂಘ,

ಗೋಕರ್ಣ

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD,

Bombay.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯಿ, ಬಿದ್ದ ಜಕಮು, ಪೆಟ್ಟಿನ ನೋವು, ಯಾವದೇ ತರದ ಜಕಮು ಯಾ ಎಲಗು ಮುರಿದಲ್ಲಿ ಸಹ ಇದನ್ನು ನೀರು ತಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ ಕ್ರಯ ಬಾಟಲಿ ೧ಕ್ಕೆ ೩ ಆಣೆ. ೧೨ ಕ್ಕೆ ೧-೩-೦. ವ್ಯಾಪಾರಸ್ಥರಿಗೆ ಭರಪೂರ ಕಮಿಶನ್. ಪತ್ತೆ — ಮುಖ್ಯಾದಿ ರಾ ಗಲ್ಲಿ ಸರಾಫ, ಗುರುಪುರ ಪವೇಲಿ, ಕ ಪ ಟಾ.

AN APPEAL TO MANAGERS OF GRANT-IN-AID SCHOOLS.

Whereas the pecuniary [illegible] tion of the servants belonging to all Govt Departments as well as private establishments like mercantile [illegible] mills etc has been greatly improved by raising their salaries with a view to enable them to [illegible] the present abnormal [illegible] that of the teacher [illegible] Grant in Aid S[illegible] almost as pitiable as [illegible] reason [illegible] this. These [illegible] most cases financial [illegible] fees from [illegible] and the [illegible] Grant from the Govt [illegible] an increase in the teachers [illegible] means an increase [illegible] penditure which of course can [illegible] be met by a proportionate [illegible] income. But as I [illegible] already said, the sole source of income of the most of these schools [illegible] the fees and the Govt Grant. Of these two items the first can by no means be increased [illegible] the already high rate of fees, [illegible] come in the way of [illegible] thus prove disastrous to [illegible] of education [illegible] The only [illegible] remedy left, is therefore, [illegible] Govt Grant increased. But unfortunately the managers of these schools do not as yet seem to have bestirred themselves about this vital matter, with the result that when the poor teachers apply to them for a revision of their pay, these kind manager [illegible] sympathise with the miserable lot of the [illegible] but invariably plead their inability to redress their grievances on the ground of lack of funds. Under the circumstances the teachers can do no more suffer in silence.

I, therefore appeal to all these managers to take a concerted action at once, and strongly memorialise the Govt to raise the present scale of Grant, so as to bring it to at least [illegible] of the expenditure, or 3/4 of the [illegible] in the place of the present [illegible] the expenditure or ½ of the [illegible] which is quite inadequate to meet the growing needs of the schools. I also request them to induce some Honorable Member like Mr Paranjpe, who has done [illegible] to advocate and promote [illegible] education to bring this [illegible] question in the Council [illegible]

A Sufferer

* * *

We [illegible] this appeal from the [illegible] will not go in vain. The Government [illegible] realising the hard lot of its servants in all its Departments has come not a day too soon to their rescue, by sanctioning a decent scale of pay and promotion to them. It is only the field of secondary education, which is very largely under private management, that is still awaiting relief. The lot of "Sufferer" and others who belong to these private schools, is [illegible] unenviable and urgently [illegible] sympathetic treatment at the hands of both the managers of these schools, as well as the Government, but particularly of the latter. Because the present maximum Grant of 1/3 of the school expenditure allowed by the Government, is hopelessly inadequate to meet the growing demands of the secondary education entrusted to private management. The Grant in Aid Code itself needs early revision in the light of new developments of Secondary education, but the most urgent, imperative amendment called for by the stringent economical condition of the times is in the direction of raising the present scale of Grant from 1/3 to [illegible] of the expenditure. If this is not done early, the efficiency of this Department of education which is still of a plodding nature is bound to receive a fatal blow in the ensuing competition for services which offer more handsome emoluments. We earnestly hope that Societies, like the D E Society of Poona, will soon bestir themselves & see that a weighty memorial is early submitted to Government, to rescue secondary education from this imminent danger.

—*Editor, Kanara News*

ಬಾಲವಿವಾಹವೋ !

ಬ್ರಹ್ಮಚರ್ಯ ಹಾನಿಯೋ ?

(ಲೇಖಕ — ಶೌಕ)

ಪ್ರಚಾರದಲ್ಲಿರುವ ವಿವಾಹಗಳೂ, ಅವುಗಳಿಗೆ ಆಧಾರಗಳೂ (೨)

ಹಿಂದಿನ ಲೇಖದಲ್ಲಿ ವಿವಾಹದ ಉದ್ದೇಶಗಳನ್ನೂ ವಧೋವರರಿಗೆ ಅನುಸರಿಸಿ ಅದರಲ್ಲಿ ಆಗುವ ಪ್ರಕಾರಗಳನ್ನೂ ಹೇಳಿದೆವು. ಈಗ ನಮ್ಮ ರೂಢಿಯಲ್ಲಿ ನಡೆಯುತ್ತಿರುವ ವಿವಾಹ ಪ್ರಕಾರಗಳನ್ನೂ, ಅವುಗಳ ಆಧಾರಗಳನ್ನೂ ಕುರಿತು ವಿಚಾರಿಸುವ. ಬಾಲ್ಯದ ಸಂಬಂಧವುಳ್ಳ ಐದು ಪ್ರಕಾರಗಳಲ್ಲಿ ಶಾಸ್ತ್ರೀಯ ವಿಚಾರಗಳ ಪ್ರೇರಣೆಯು ಬಹುತರ ಕಡಿಮೆಯಿರುವದು. ಬಾಲ-ತರುಣೀ, ಬಾಲ ವೃದ್ಧಾ, ತರುಣ ವೃದ್ಧಾ ಮತ್ತು ವೃದ್ಧ ವೃದ್ಧಾ ಈ ವಿವಾಹಗಳು ನಮ್ಮಲ್ಲಿ ಬಹಳ ವ್ಯಾಪಿಸಿರುವದೇ ಇಲ್ಲ; ಮುಲತಃ ಸಂಭವನೀಯವೇ ಇಲ್ಲ. ಬಾಲಿಕಾ-ವೃದ್ಧ ವಿವಾಹವು ಕ್ವಚಿತ್ತಾಗಿ ನಡೆಯುವದು. ಶ್ರೀಮಂತರಾದ ವೃದ್ಧರೇ ಕೆಲವರು, ಇಂತಹ ವೃಕ್ಕೆ ಗುರಿಯಾಗುವರು. ಆದರೆ ಬಾಲ-ಬಾಲಿಕಾವಿವಾಹವು, ಬಾಲಿಕಾ-ತರುಣವಿವಾಹವು, ನಮ್ಮ ಸಮಾಜದಲ್ಲಿ ಅತ್ಯಂತ ವ್ಯಾಪಕವಾಗಿ ನಡೆಯುತ್ತಿರುವವು. ಈ ಪ್ರಕಾರ ಇವೆರಡೇ ತರದ ವಿವಾಹಗಳೇ ನಮ್ಮ ಹೆಚ್ಚು ಪ್ರಮಾಣದಿಂದ ನಡೆಯುತ್ತಿರಲಿಕ್ಕೆ ಕಾರಣವೇನಿರಬಹುದು? ಇಂದ, ತರುಣ-ತರುಣೀ ವಿವಾಹವು ವೃದ್ಧ-ತರುಣೀ ವಿವಾಹವು, ಮೊದಲಿನಿಂದ ನಮ್ಮ ಪ್ರಚಾರದಲ್ಲಿ ಏಕೆ ಬಂದಿರುವಿಲ್ಲ? ಯಾವದೊಂದು ವಸ್ತುವು, ಯಾ ಸಂಗತಿಯು ಎಷ್ಟು ಪ್ರಚಾರವಾಗಬೇಕಾದರೆ, ಅದರಲ್ಲಿ ಅಂತರ[illegible] ವಾದ ಉಪಯುಕ್ತತೆಯು ಇರತಕ್ಕದ್ದು ಇರಬಹುದಷ್ಟೇ? ಮೇಲಾಗಿ ಈ ವಿವಾಹ ಸಂಬಂಧದಲ್ಲಿಯು ಅಂತಿಂತಹ ಜನರಿಂದ ಪ್ರಚಾರಕ್ಕೆ ಬಂದುದಲ್ಲ. ಆರ್ಯಜನರ ಸಾಮಾಜಿಕ ಬಂಧನಾವರ್ತಗಳು ದರ್ಶನದ ವಿದ್ವತ್ತ್ವವೂ ಕೃಪಾ, ಸನಾತನವೂ, ಆದ ನೆಲಗಟ್ಟಿನ ಮೇಲೆ ಮತ್ತು ಆ ನೆಲಗಟ್ಟು ವಸುಧೈವ ಕುಟುಂಬವ ತ್ರಿಕಾಲದರ್ಶಿ ಮಹರ್ಷಿಗಳ ಸತ್ವಮಯ ಮನೋಭೂಮಿಯು ಮೇಲೆಯೂ, ಸಂಸ್ಥಾಪಿಸಿದುದು. ಇಂತಹ ಅಸ್ತಿ [illegible] ವಿಷಯ ಅನ್ನುವರು, ನೋಡಿರಿ —

ಷಡಬ್ದಮಧ್ಯೇ ನೋದ್ವಾಹ್ಯ
ಕನ್ಯಾ ವರ್ಷದ್ವಯಂ ಯತಃ ।
ಸೋಮೋ ಭುಂಕ್ತೇ ತತಸ್ತದ್ವದ್
ಗಂಧರ್ವಶ್ಚ ತಥಾನಲಃ ॥

([illegible])

ಜನ್ಮತೋ ಗರ್ಭಾಧಾನಾದ್ವಾ
ಪಂಚಮಾಬ್ದಾತ್ಪರಂ ಶುಭಮ್
ಕುಮಾರೀ ವರಣಂ ದಾನಮ್
ಮೇಖಲಾಬಂಧನಂ ತಥಾ ॥
(ಪರಾಶರ ಮಾಧವೀಯೇ)

ಈ ವುಕ್ತಿಗಳು ಐದು ವರ್ಷಗಳಿಗಿಂತ ಮೊದಲು ಹುಡಿಗೆಯರ ವಿವಾಹವನ್ನು ನಿಷೇಧಿಸುತ್ತವೆ

ಕನ್ಯಾ ದ್ವಾದಶವರ್ಷಾಣಿ
ಯಾಪ್ರದತ್ತಾ ವಸೇದ್ಗೃಹೇ ।
ಬ್ರಹ್ಮಹತ್ಯಾ ಪಿತುಸ್ತಸ್ಯಾಃ
ಸಾ ಕನ್ಯಾ ವರಯೇತ್ ಸ್ವಯಮ್ ॥
(ಯಮಃ)

ಈ ವಚನವು ಹನ್ನೆರಡು ವರ್ಷಗಳ ನಂತರ, ಹುಡಿಗೆಯ ಲಗ್ನವು ಆಗಕೂಡದೆಂದು ಸಾರುತ್ತವೆ

ತ್ರಿಂಶದ್ವರ್ಷೋ ವಹೇತ್ಕನ್ಯಾಮ್
ಹೃದ್ಯಾಂ ದ್ವಾದಶವಾರ್ಷಿಕೀಮ್ ।
ತ್ರ್ಯಷ್ಟವರ್ಷೋಷ್ಟವರ್ಷಾಂ ವಾ
ಧರ್ಮೇ ಸೀದತಿ ಸತ್ವರಃ ॥
(ಮನುಃ)

ತ್ರಿಂಶದ್ವರ್ಷಃ ಷೋಡಶಾಬ್ದಾಮ್
ಭಾರ್ಯಾಂ ವಿಂದೇತ ನಗ್ನಿಕಾಮ್ ।
ದ್ವ್ಯಷ್ಟವರ್ಷೋಷ್ಟವರ್ಷಾಂ ವಾ
ಧರ್ಮೇ ಸೀದತಿ ಸತ್ವರಃ ॥
ಅತೋಪ್ರವೃತ್ತೇ ರಜಸಿ
ಕನ್ಯಾಂ ದದ್ಯಾತ್ ಪಿತಾ ಸಕೃತ್ ॥
ಸಪ್ತಸಂವತ್ಸರಾದೂರ್ಧ್ವಮ್
ವಿವಾಹಃ ಸಾರ್ವವರ್ಣಿಕಃ ॥
ಕನ್ಯಾಯಾಃ ಶಸ್ಯತೇ ರಾಜನ್
ಅನ್ಯಥಾ ಧರ್ಮಗರ್ಹಿತಃ ॥
(ಭಾರತೇ)

ವಿವಾಹಸ್ತ್ವಷ್ಟವರ್ಷಾಯಾಃ
ಕನ್ಯಾಯಾಃ ಶಸ್ಯತೇ ಬುಧೈಃ ॥
(ಸಂವರ್ತಃ)

ವಿವಾಹಯೇದಷ್ಟವರ್ಷಾಮ್
ಏವಂ ಧರ್ಮೋ ನ ಹೀಯತೇ ॥
(ದಕ್ಷಃ)

ಈ ವಾಕ್ಯಗಳು ಹೆಣ್ಣುಮಕ್ಕಳಿಗೆ ಎಂಟುವರ್ಷದ ವಯಸ್ಸಿನಿಂದ ಹದಿನಾರನೆಯ ವರ್ಷದವರೆಗೂ ಮದುವೆಮಾಡಬಹುದೆಂದು ಹೇಳುತ್ತವೆ ಆದರೂ ಅವರು "ನಗ್ನಿಕೆಯರು" ಅಂದರೆ ರಜೋದರ್ಶನವಾಗದಿದ್ದವರು ಇರಬೇಕೆಂದು ಎಚ್ಚರಿಗೊಳಿಸುವವು. ನಗ್ನಿಕಾದಿ ಲಕ್ಷಣವನ್ನು "ಗೃಹ್ಯಸಂಗ್ರಹದಲ್ಲಿ" ಹೇಳಿಯದೆ.

ನಗ್ನಿಕಾಂ ತು ವದೇತ್ ಕನ್ಯಾಮ್
ಯಾವನ್ನರ್ತುಮತೀ ಭವೇತ್ ।
ಋತುಮತೀತ್ವನಗ್ನಿಕಾ
ತಾಂ ಪ್ರಯಚ್ಛೇತ್ತು ನಗ್ನಿಕಾಮ್ ॥
ಅಪ್ರಾಪ್ತೇ ರಜಸೋ ಗೌರೀ
ಪ್ರಾಪ್ತೇ ರಜಸಿ ರೋಹಿಣೀ ।
ಅವ್ಯಂಜಿತಾ ಭವೇತ್ ಕನ್ಯಾ
ಕುಚಹೀನಾ ಚ ನಗ್ನಿಕಾ ॥

ರಜೋ ದರ್ಶನದ ಮೊದಲೇ, ಏಕೆ ಲಗ್ನವನ್ನು ಮಾಡಬೇಕು, ಎಂಬುದನ್ನು ಅದೇ (ಗೃಹ್ಯಸಂಗ್ರಹ) ಗ್ರಂಥವು ಹೇಳುತ್ತದೆ, ಹೇಗಂದರೆ—

ವ್ಯಂಜನೈಸ್ತು ಸಮುತ್ಪನ್ನೈಃ
ಸೋಮೋ ಭುಂಜೀತ ಕನ್ಯಕಾಮ್ ॥
ಪಯೋಧರೈಸ್ತು ಗಂಧರ್ವಾ
ರಜಸಾಗ್ನಿಃ ಪ್ರಕೀರ್ತಿತಃ ॥
ತಸ್ಮಾದವ್ಯಂಜನೋಪೇತಾಮ್
ಅರಜಾಮಪಯೋಧರಾಮ್ ।
ಅಭುಕ್ತಾಂ ಚೈವ ಸೋಮಾದ್ಯೈಃ
ಕನ್ಯಕಾಂತು ಪ್ರಶಸ್ಯತೇ ॥

ಇದಲ್ಲದೆ,

ಅಪ್ರಯಚ್ಛನ್ ಸಮಾಪ್ನೋತಿ
ಭ್ರೂಣಹತ್ಯಾಮೃತಾವೃತೌ ॥
(ಯಾಜ್ಞವಲ್ಕ್ಯಃ)

ಈ ವಚನದಿಂದ ಕನ್ಯೆಯು ಋತುಮತಿಯಾಗುವವರೆಗೂ ಲಗ್ನಮಾಡಿ ಕೊಡದ ಪಾಲಕನಿಗೆ ದೋಷವೂ ಹೇಳಿರುತ್ತದೆ.

ಈ ಪ್ರಮಾಣಗಳಿಂದ ಹನ್ನೆರಡು ವರ್ಷಗಳವರೆಗೂ, ಹದಿನಾರು ವರ್ಷಗಳವರೆಗೂ, ಹುಡಿಗೆಯರ ಮದುವೆಯಾಗಬಹುದೆಂದು ತೋರಬಂದರೂ, ಅದು "ಅಷ್ಟವರ್ಷಾ ಭವೇದ್ಗೌರೀ, ನವವರ್ಷಾತು ರೋಹಿಣೀ। ದಶವರ್ಷಾ ಭವೇತ್ ಕನ್ಯಾ, ಅತ ಊರ್ಧ್ವಂ ರಜಸ್ವಲಾ॥" ಎಂಬ ವಚನದೊಳಗಿನ, "ಅತ ಊರ್ಧ್ವಂ ರಜಸ್ವಲಾ ಇತ್ಯಾದಿನಾ ದಶವರ್ಷಾದೂರ್ಧ್ವಂ ವಿವಾಹೋ ನಿಷಿದ್ಧಃ, ತಥಾಪಿ ದಾತುರಭಾವೇ ದ್ವಾದಶಷೋಡಶಾಬ್ದೌ ಜ್ಞೇಯೌ" ಎಂಬ ಉಕ್ತಿಯಿಂದ ಇದು-ಹನ್ನೆರಡು, ಹದಿನಾರು ವರ್ಷಗಳ ಅವಧಿಯು- ಆಪದ್ಧರ್ಮವೆಂದು ಕಮಲಾಕರಭಟ್ಟರು ನಿರ್ಣಯಿಸಿ, ಅದಕ್ಕೆ "ತ್ರೀಣಿವರ್ಷಾಣ್ಯೃತುಮತೀ ಕಾಂಕ್ಷೇತ ಪಿತೃಶಾಸನಮ್" ಎಂಬ ಬೌಧಾಯನೋಕ್ತಿಯನ್ನು ಪ್ರಮಾಣೀಕರಿಸಿರುವರು. ಮನುಸ್ಮೃತಿಯ ವ್ಯಾಖ್ಯಾನಕಾರರಾದ ಕುಲ್ಲೂಕಭಟ್ಟರಾದರೋ, "ಏತಚ್ಚ ಯೋಗ್ಯಕಾಲ ಪ್ರದರ್ಶನಪರಂ, ನತು ನಿಯಮಾರ್ಥಮ್" ಎಂದು ಹೇಳಿ, 'ತ್ರಿಭಾಗವಯಸ್ಕಾ ಕನ್ಯಾ ವೋಢುರ್ಯೋಗ್ಯಾ' ಎಂಬ ತಮ್ಮ ವಚನದಿಂದ ಮದುಮಕ್ಕಳ ಸಾಮಾನ್ಯವಾದ ವಯೋಮಾನವನ್ನು ತೋರ್ಪಡಿಸಿದ್ದಾರೆ

ಆದರೆ ಆಶ್ವಲಾಯನ ಗೃಹ್ಯ ಸೂತ್ರದಲ್ಲಿ (ಮದುಮಕ್ಕಳು) "ಅಕ್ಷಾರ ಲವಣಾಶಿನೌ ಬ್ರಹ್ಮಚಾರಿಣಾವಲಂಕುರ್ವಾಣಾವಧಃಶಾಯಿನೌ ಸ್ಯಾತಾಮತ ಊರ್ಧ್ವಂ ತ್ರಿರಾತ್ರಂ ದ್ವಾದಶರಾತ್ರಂ ಸಂವತ್ಸರಂ ವಾ" ಎಂದು ಹೇಳಿದ್ದರಿಂದ, "ಬ್ರಹ್ಮಚಾರಿಣೌ" ಎಂಬ ಪದದಿಂದ, ಪ್ರೌಢವಿವಾಹ-ವಧೂವರರಲ್ಲಿ ಸಂಭೋಗ ಕ್ಷಮತೆಯು ಪ್ರಾಪ್ತವಾದಮೇಲೆ ಮಾಡುವ ವಿವಾಹ-ವು ಸೂತ್ರಕಾರರಿಗೆ ಸಮ್ಮತವಿರುತ್ತದೆಂದು ಸ್ಪಷ್ಟವಾಗುತ್ತದೆ ಮತ್ತು ಈ ನಾತಿಗೆ-

ಕಾಮಮಾಮರಣಾತ್ತಿಷ್ಠೇದ್
ಗೃಹೇ ಕನ್ಯರ್ತುಮತ್ಯಪಿ ।
ನತ್ವೇನಾಂ ಗುಣಹೀನಾಯ
ಪ್ರದದ್ಯಾದಿತಿ ಕರ್ಹಿಚಿತ್ ॥
ತ್ರೀಣಿ ವರ್ಷಾಣ್ಯುದೀಕ್ಷೇತ
ಕುಮಾರ್ಯೃತುಮತೀ ಸತೀ ।
ಊರ್ಧ್ವಂತುಕಾಲಾದೇತಸ್ಮಾದ್
ವಿಂದೇತ ಸದೃಶಂ ಪತಿಮ್

ಎಂಬ ಮನು ವಚನಗಳೂ, ಇತರ ಉಕ್ತಿಗಳೂ, ಬಲವಾಗಿ ನವು ಅವರೆ ವಿವಾಹವನ್ನು ಪ್ರೌಢವಯಸ್ಸಿನಲ್ಲಿಯೇ ಮಾಡಬೇಕೆಂದು, ಯಾವ ಸ್ಮೃತಿಕಾರರಿಗಳೂ ಕಂಠರವದಿಂದ ಹೇಳುವದಿಲ್ಲ ಮೇಲಾಗಿ ಪ್ರೌಢವಿವಾಹಗಳು ಬ್ರಾಹ್ಮ್ಯಾದಿ ಕಾರ್ಯಗಳೆಂದೇ ಹೇಳುತ್ತವೆ. ಆದ್ದರಿಂದ ಈ ವಿವಾಹಗಳು ಶಾಸ್ತ್ರಸಮ್ಮತವಾದವುಗಳಲ್ಲವೆಂದು ವ್ಯಕ್ತವಾಗುತ್ತದೆ ಅಥವಾ ದಶವಿಧ ಪುತ್ರರಲ್ಲಿ ಕಾನೀನ, ಸಹೋಢಜ ಮೊದಲಾದ ಪುತ್ರರ ಪ್ರಕಾರಗಳು ಸಮಾಜದಲ್ಲಿ ಹೆಚ್ಚಾದರೆ, ಅದರಿಂದ ನೀತಿಮತ್ತೆಗೂ, ತದ್ವಾರಾ ಸಮಾಜ ವ್ಯವಸ್ಥೆಗೂ ಬಾಧೆ ಬರಬಹುದೆಂದು ತಿಳಿದು, ಪ್ರೌಢವಿವಾಹಕ್ಕೆ ಶಾಸ್ತ್ರದಿಂದಲೂ, ರೂಢಿಯಿಂದಲೂ, ನಮ್ಮ ಪೂರ್ವಜರು ಹೊರಗೆ ದೂಡಿರಬೇಕೆಂದು ಅನುಮಾನವಾಗುತ್ತದೆ ಮತ್ತು ಇದೇ ಅರ್ಥದಿಂದಲೇ, ಉತ್ಕೃಷ್ಟನಾದ ವರನು ಸಿಕ್ಕ ಪಕ್ಷದಲ್ಲಿ, ಹೆಣ್ಣುಮಕ್ಕಳಿಗೆ ವಿಧ್ಯುಕ್ತವಾದ ಕಾಲವು ಪ್ರಾಪ್ತವಾಗುವದಕ್ಕಿಂತ ಮೊದಲು ಸಹ ಮದುವೆಯನ್ನು ಶಾಸ್ತ್ರೋಕ್ತವಾಗಿ ಮಾಡತಕ್ಕದ್ದು ಎಂದು ಮನು ಮಹರ್ಷಿಗಳೇ "ಉತ್ಕೃಷ್ಟಾಯಾಭಿರೂಪಾಯ ವರಾಯ ಸದೃಶಾಯ ಚ। ಅಪ್ರಾಪ್ತಾಮಪಿ ತಾಂ ತಸ್ಮೈ ಕನ್ಯಾಂ ದದ್ಯಾದ್ಯಥಾವಿಧಿ" ಎಂಬ ವಚನದಲ್ಲಿ ಕಂಠರವದಿಂದ ಹೇಳುವರು "ಉತ್ಕೃಷ್ಟಾಯ" "ಅಭಿರೂಪಾಯ" 'ಸದೃಶಾಯ" ಈ ವಿಶೇಷಣಗಳಿಂದ, ಬಾಲವಿವಾಹವು, ಬಾಲ-ಬಾಲಿಕಾ ವಿವಾಹವೂ, ಕೂಡ- ಅವರಿಗೆ ಸಮ್ಮತವಾಗಿರುವದೆಂದು ಸ್ಪಷ್ಟವಾಗುವದಿಲ್ಲವೋ? ಮೇಲೆ ಹೇಳಿದ ಸೂತ್ರಕಾರರ ಉಕ್ತಿಯಲ್ಲಿ "ಬ್ರಹ್ಮಚಾರಿಣೌ" ಎಂಬ ಪದದಿಂದ, ವಧೂವರರಲ್ಲಿ ಸಂಭೋಗಕ್ಷಮತೆಯು ಬಂದಿರಬೇಕೆಂಬ ಅರ್ಥವಾದರೂ, ಎಲ್ಲಿ ಸ್ಪಷ್ಟವಾಗಿದೆ? "ಬ್ರಹ್ಮಚಾರಿ" ಶಬ್ದಕ್ಕೆ ಸಂಭೋಗಸುಖವನ್ನು ಅನುಭವಿಸದವನು, ಎಂಬದಿಷ್ಟೇ ಅರ್ಥವನ್ನು ಹೇಗೆ ಕಲ್ಪಿಸಬೇಕು? ವಿವಾಹ ಸಂಸ್ಕಾರವಾದರೂ, ಸ್ತ್ರೀಪುರುಷರು ಕೂಡಿ ಆಚರಿಸತಕ್ಕ ಒಂದು ವ್ರತವೇ ಸೈ. ಇತರ ವ್ರತಗಳಂತೆ ಬ್ರಹ್ಮಚರ್ಯದ-ಅಂದರೆ ಆಹಾರ ವಿಹಾರಗಳಲ್ಲಿ ಬ್ರಹ್ಮಚಾರಿಗಳು ಆಚರಿಸುವ-ನಿಯಮಗಳನ್ನು, ಇದರಲ್ಲಿಯೂ ಪಾಲಿಸಬೇಕೆಂದು. ಏಕೆ ತಿಳುಕೊಳ್ಳಬಾರದು? ಮನುಷ್ಯರು ಅನುಕೂಲ್ಯ ಪರಿಸ್ಥಿತಿಯೊಳಗಿದ್ದರೂ, ಕಾಮಾದಿ ವಿಕಾರಗಳಿಗೆ ವಶವಾಗಬಾರದು, ಆತ್ಮಸಂಯಮಿಗಳಾಗಿರಬೇಕು, ತಮ್ಮ ಆಹಾರ-ವಿಹಾರಗಳೆಲ್ಲ ಸಾತ್ವಿಕ ವೃತ್ತಿಯುಳ್ಳವಿರಬೇಕು, ಎಂಬದೇ ಸೂತ್ರಕಾರರ ತಾತ್ಪರ್ಯವು. ಇನ್ನು ವಿಕಾರವಶವಾದವರಿಗೆ, ಸಂಭೋಗ ಕ್ಷಮತೆಯು ವಿಚಾರವಾದರೂ ಎಲ್ಲಿರುತ್ತದೆ? ಕಾಮುಕರಾದ ಕೆಲವರೇ ವಧೂವರರಲ್ಲಿ ಸಂಭೋಗ ಕ್ಷಮತೆಯ ಅರ್ಥವನ್ನು ಕಲ್ಪಿಸಿ, ಹೀಗೆ ವಿಷಯಾಧೀನರಾದರೆ, ಅವರ ಕಾಮವಾಸನೆಯು ಮಾತ್ರ ದಿನೇ ದಿನೇ ಬೆಳೆಯುತ್ತ ನಡೆಯುವದೆಂಬದನ್ನು ಅವರು ಖಳಿತಾಗಿ ಲಕ್ಷದಲ್ಲಿಡತಕ್ಕದ್ದು

ಕೋಓಪರೇಟಿವ್ಹ ಬೇಂಕ.

ಕಾನಡಾವೃತ್ತದ ಎಡಿಟರರಿಗೆ—
ಸವಿನಯ ವಿನಂತಿ.

ತಮ್ಮ ಪತ್ರದಲ್ಲಿ ಹಾಂವು ಪ್ರಕಟಿಸಿದಂತೆ, ಈ ತಿಂಗಳ ತಾರೀಖು ೧೮ ನೇಗೆ ಧಿ ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ್ ಕೋಓಪರೇಟಿವ್ ಬ್ಯಾಂಕಿನ ೧ನೇ ಜನರಲ್ ಸಭೆ ಭರಾಯಿಸಿತು. ಶೇರಸಿ ಮತ್ತು ಅರಬನ ಸಂಘಗಳ ಪ್ರತಿನಿಧಿಗಳು ಕೆಲವರು ಹಾಜರ ಆಗಿದ್ದರು. ೧೧ ಕಡೆರಿನ

(ಮುಂದೆ ೬ನೇ ಪಾನು ನೋಡಿರಿ)

ಕಾನಡಾವೃತ್ತ.

ಗುರುವಾರ ತಾರೀಖು ೨೯ ಮಾಹೆ ಜುಲ್ಯಾ ೧೯೩೦

ಅಡಿಯ ಮುಂದಿಡಬೇಕು! ಹೊಡೆದು ಸಾಗಲಿಬೇಕು!!

ಕಾರವಾರದೊಳಗೆ ನೆರೆದ ಜಿಲ್ಲಾ ಪರಿಷತ್ತಿನ ಅಧಿವೇಶನವು ಮುಗಿದು ಎರಡನೆ ತಿಂಗಳಾಗುತ್ತ ಬಂತು. ಈ ರಾಜಕೀಯ ಪರಿಷತ್ತಿನೊಳಗೆ ನಮ್ಮ ಜಿಲ್ಲೆಯ ಸರ್ವಾಂಗೀಣ ಉನ್ನತಿಯನ್ನು ಸಾಧಿಸಲಿಕ್ಕೆ ನಾವು ಯಾವ ಯಾವ ಸಾಧನಗಳನ್ನು ಕೈಕೊಳ್ಳಬೇಕು, ಪರಿಷತ್ತಿನ ಕಾರ್ಯವು ದಿನಂಪ್ರತಿ ಅವ್ಯಾಹತ ಸಾಗಲಿಕ್ಕೆ ನಾವು ಎಂಥೆಂಥ ಸಂಸ್ಥೆಗಳನ್ನೂ ಉಪಸಂಸ್ಥೆಗಳನ್ನೂ ಸ್ಥಾಪಿಸಬೇಕು ಎಂಬೆಲ್ಲ ಸಂಗತಿಗಳನ್ನು ಲಕ್ಷಿಸಿ ಪರಿಷತ್ತು ಠರಾವುಗಳ ರೂಪದಿಂದ, ನಮಗೆ ದಾರಿಯನ್ನು ತೋರಿಸಿಕೊಟ್ಟಿರುವದು. ಇದೇ ದಾರಿಯಿಂದ ನಮಗೆ "ಅಡಿಯ ಮುಂದಿಡಬೇಕಾಗಿದೆ" ಸರ ನಾರಾಯಣರಾಯರು ತಮ್ಮ ನಗರಪ್ರವೇಶದ ಭಾಷಣದಲ್ಲಿ ಹೇಳಿದಂತೆ, ಹಿಂದೀ ರಾಷ್ಟ್ರದಲ್ಲಿ ಪುನರ್ಜನ್ಮ ಹೊಂದಿದ ಸ್ವಾತಂತ್ರ್ಯದ ಅಂಕುರವು ಬೆಳೆದು ಫಲಪ್ರಾಪ್ತಿಯಾಗುವ ತನಕ ಈ ಕಾರ್ಯದ ವೃಕ್ಷವನ್ನು ಜೋಪಾನದಿಂದ ಅದರ ಸೇವೆಯನ್ನು ಮಾಡುತ್ತಿರುವದು ನಮ್ಮ ಕರ್ತವ್ಯವು. ಪರಿಷತ್ತಿನ ಮೂರು ದಿವಸಗಳಿಂದ ನಮ್ಮ ಕರ್ತವ್ಯದ ಸಮಾಪ್ತಿಯಾಯಿತೆಂದು ನೆನಿಸಿದರೆ ದೊಡ್ಡ ತಪ್ಪಾಗುವದು. ಆದದರಿಂದ ಈ ರಾಷ್ಟ್ರಕಾರ್ಯದೊಳಗೆ ನಮ್ಮ ಜಿಲ್ಲೆಯನ್ನು ಮುಂದಿಡಲಿಕ್ಕೆ ಯಾವ ಕರ್ತವ್ಯಗಳನ್ನು ನಾವು ಶೀಘ್ರವಾಗಿ ಕೈಕೊಳ್ಳಬೇಕಾಗಿದೆ ಎಂದು ಅಲ್ಪಶಃ ನಮಗೆ ನಿವೇದಿಸಬೇಕಾಗಿದೆ.

ಜಿಲ್ಲೆಯ ಹಿತದ ಕಾರ್ಯವನ್ನು ಅವ್ಯಾಹತವಾಗಿ ನಡಿಸಲಿಕ್ಕೆ ಪರಿಷತ್ತು ಒಂದು ಠರಾವನ್ನು ಸ್ವೀಕರಿಸಿರುವದು. ಅದು ಆದರ ಪುದಿನೇ ನೇ ಠರಾವಿರುವದು. ಈ ಠರಾವಿನಂತೆ ತಾಲೂಕಿನ ಪ್ರತಿನಿಧಿಗಳಿಂದ ಕೂಡಿದ ಜಿಲ್ಲಾ ಕಮಿಟಿಯು ರಚಿಸಲ್ಪಟ್ಟಿದೆ. ಕಲವು ಕಾಯಿದೆ ಕಲಮುಗಳ ಭಾಷಾಂತರ ಈ ಠರಾವಿನ ಒಳಗೆಯು ಸ್ಪಷ್ಟವಾಗಿರುವದು. ಎಂದು ಬಂದರೂ ಕಮಿಟಿಯು ಕಾರ್ಯಕ್ರಮವು ಅದರೊಳಗೆ ತೋರಿಸಲ್ಪಟ್ಟಿದೆ. ಅದರ ದಿಗ್ದರ್ಶನವು ಅದರೊಳಗಾಗಿದೆ. ರಚನೆ ರಚಿಸುವ ತನಕ ಅದ ಕೆಲಸಯಲ್ಲಿಯೂ ಈ ಕಮಿಟಿಯು ಕರ್ತವ್ಯಗಳ ನಿರ್ವಹಿಸಬೇಕಾಗಿದೆ. ಇನ್ನೆಲ್ಲ ಸಂಗತಿಗಳ ಉದ್ದೇಶದಿಂದ ಪರಿಷತ್ತು ಆರಿಸಿದ ತಾಲೂಕಾ ಪ್ರತಿನಿಧಿಗಳು, ತಾಲೂಕಾ ಕಮಿಟಿಗಳನ್ನೂ ಹಳ್ಳಿಗಳ, ಇಲ್ಲವೆ ಸಣ್ಣ ಸಂಗಳ ಕಾರ ಕಮಿಟಿಗಳನ್ನೂ, (ಜಿಲ್ಲಾ ಕಮಿಟಿಯು, ಕಾಯಂ ಘಟನೆಯನ್ನು ತಯಾರಿಸಿ ಎರಡನೇ ಪರಿಷತ್ತಿನಿಂದ ಪಾಸು ಮಾಡಿಕೊಳ್ಳುವ ತನಕ) ಹಂಗಾಮಿಯಾಗಿ ಸ್ಥಾಪಿಸಿ, ಕಾರ್ಯವನ್ನು ನಡಿಸಬೇಕಾಗಿದೆ. ಹಳ್ಳಿ ಕಮಿಟಿಯಿಂದ ಜಿಲ್ಲಾ ಕಮಿಟಿಯ ತನಕ ಸರಪಣಿಯನ್ನು ತಯಾರಿಸಿ ವ್ಯವಸ್ಥಿತವಾಗಿ ಲೋಕಕಾರ್ಯವನ್ನು ಸಾಗಿಸಬೇಕಾಗಿದೆ. ಈ ಕಾರ್ಯವನ್ನು ತಾಲೂಕಾ ಪ್ರತಿನಿಧಿಗಳು ಕ್ಷಣ ಸಹ ವಿಲಂಬಮಾಡದೆ, ಇನ್ನು ಕೈಕೊಳ್ಳಬೇಕು. ಕೆಲವಡೆಯಲ್ಲಿ ಇದೇ ದಿಕ್ಕಿನಿಂದ, ಪ್ರಯತ್ನಗಳು ಉತ್ಸಾಹದಿಂದ ನಡೆದಿರುವವೆಂದು ಅರಿತು ನಾವು ಆನಂದ ಪಡುವೆವು. ಪರಿಷತ್ತಿನ ಕೆಲಸವು ಮುಗಿದ ಕೂಡಲೆ ಜಿಲ್ಲಾ ಕಮಿಟಿಯು ಕೂಡಿ, ತಮ್ಮ ಕಾರ್ಯಕ್ರಮವನ್ನು ಸಹ ತಯಾರಿಸಿದೆ. ಅದನ್ನು ಅದು ಬೇಗನೇ ಪ್ರಸಿದ್ಧಪಡಿಸುವದೆಂದು ನಂಬಿರುವೆವು. ಈ ಕಾರ್ಯಕ್ರಮವನ್ನು ಅನುಸರಿಸಿದರೆ ಜಿಲ್ಲಾ ಕಮಿಟಿಯೂ ತಾಲೂಕಾ ಕಮಿಟಿಗಳೂ ಹ್ಯಾಗೆ ಹ್ಯಾಗೆ ತಮ್ಮ ಅಡಿಯ ಮುಂದಿಡಬೇಕೆಂದು ವಾಚಕರಿಗೆ ಸ್ಪಷ್ಟವಾಗಿ ಕಂಡುಬರುವ ಹಾಗಿದೆ.

ಈ ವಿಧದ ದೇಶಕಾರ್ಯವನ್ನು ಸಾಗಿಸಲಿಕ್ಕೆ ದ್ರವ್ಯಸಹಾಯವು ಬೇಕೆಂದು ಜನರಿಗೆ ಹೇಳಬೇಕಾಗಿಲ್ಲ. ಸರ್ಕಾರದವರಿಗೆ ಬೇಕಾಗುವ ತೆರಿಗೆಯನ್ನು ಜನರೇ ಪೂರೈಸಬೇಕಾಗಿದೆ. ಹತ್ತರ ಹುಲ್ಲುಕಡ್ಡಿಯಿಂದ ಮೊದಲು ಹೊರೆಯಾಗಿರುವಂತೆ ತಲೆಹೊರೆ ಯನ್ನು ಕಟ್ಟುವ ಕೆಲಸವಿದ. ಸಾರ್ವಜನಿಕ ಕಾರ್ಯಕ್ಕೆ ಜನರು ಬಗೆಬಗೆಯಿಂದ ನೆರವಾಗಬೇಕಾಗುತ್ತದೆ. ಇಂಥ ಸಹಾಯದೊಳಗೆ ದ್ರವ್ಯಸಹಾಯವು ಒಂದು ಮಹತ್ವದ ಅಂಗವಾಗಿರುವದು. ಜಮೀನದಾರರು ತಮ್ಮ ಶ್ರೀಮಂತಿಕೆಯ ಒಂದಂಶವನ್ನು ಇಂಥ ಕಾರ್ಯಕ್ಕೆ ತೆಗೆದಿಟ್ಟರೆ ಇಡೀ ಜಿಲ್ಲೆಯೊಳಗೆ ಐವತ್ತು ಸಾವಿರ ರೂಪಾಯಿ ಸಹ ಜವಾಗಿ ಕೂಡುವದಾಗಿದೆ. ಇತರ ಉತ್ಪನ್ನದವರು ತಮ್ಮ ನೂರು ರೂಪಾಯಿಯ ಉತ್ಪನ್ನಕ್ಕೆ ಒಂದು ಆಣೆಯಂತೆ ಈ ಫಂಡಿಗೆ ಸಹಾಯ ಮಾಡಿದರೆ ಸಾಕಷ್ಟು ಹೆಚ್ಚು ರಕಮು ಕೂಡುವದು. ಇದೇ ವಿಧದಿಂದ ಹಣ ಕೂಡಿಸಬೇಕೆಂದು ಜಿಲ್ಲಾ ಕಮಿಟಿಯು ಯೋಚಿಸುತ್ತಿದೆ. ಸುದೈವ - ಅವಲಕ್ಕಿಯಿಂದ ದೇವರು ತೃಪ್ತಿಯಾದಂತೆ ಈ "ಪೈ" ಫಂಡಿನಿಂದ ಆದರೂ ನಮ್ಮ ರಾಷ್ಟ್ರದೇವತೆಯು ಬಹಳೇ ತೃಪ್ತಿ ಯಾಗುವಳೆಂದು, ನಮ್ಮದು ಭಾವನೆಯು. ಈ ಕೆಲಸವನ್ನು ತಾಲೂಕಾ ಕಮಿಟಿಗಳು ವಿಶೇಷ ಉತ್ಸಾಹದಿಂದ ಶ್ರದ್ಧೆಯಿಂದ, ನಡಿಸಬೇಕಾಗುವದು. ಆತರ ಪಂಚಾಯತ ಕೆಲಸವೆ ಎಲ್ಲ ಕಮಿಟಿಗಳ ಜೀವಿತವು ಅವಲಂಬಿಸುವದು. ಅದರಿಂದ ತಾಲೂಕಾ ಕಮಿಟಿಗಳನ್ನು ಸ್ಥಾಪಿಸಿ, ಇತರ ಕೆಲಸಗಳೊಡನೆ "ಪೈ" ಫಂಡನ್ನು ಕೂಡಿಸುವ ಕೆಲಸವನ್ನು ತಾಲೂಕಾ ಕಮಿಟಿಯು ಇನ್ನು ವಿಲಂಬಮಾಡದೆ ನಡಿಸಬೇಕು. "ಅಶುಭಸ್ಯ ಕಾಲಹರಣಂ" ಎಂಬ ಗಾದೆ ಮಾತನ್ನು ಬಾಲಕರು ಅರಿತಿರುವರು. ಅದಕ್ಕಾಗಿ ನಾವು ಬೇಡುವದೇನಂದರೆ— ಇನ್ನು ಕಾಲಹರಣಮಾಡಬೇಡಿರಿ, ಕರ್ತವ್ಯನಿಷ್ಠರಾಗಿ ಸುಸಂಘಟಿತ ದೇಶಕಾರ್ಯಕ್ಕೆ ಸಿದ್ಧರಾಗಿರಿ, ಹೊಡೆದು ಮುಂದೆ ಸಾಗಿರಿ "ಪ್ರಾರಬ್ಧಮುತ್ತಮಜನಾಃ ನ ಪರಿತ್ಯಜಂತಿ" ಎಂದು ನೀವು ಅರಿತಿರುವರಲ್ಲವೋ! ಅರಿತಿದ್ದರೆ, ಕೆಲಸವಾಯಿತು.

ಈ ಕಮೀಟಿಗಳಿಗೆ ಜಂಗಲಖಾತೆಯ ನಿರ್ಬಂಧನೆಗಳಿಂದ, ಒಕ್ಕಲಿಗರಿಗೆ ಉಂಟಾದ ತೊಂದರೆಗಳನ್ನೂ, ಅನ್ಯಾಯಗಳನ್ನೂ ದೃಷ್ಟಾಂತಗಳ ಸಹಿತ ಸಂಗ್ರಹಿಸಿ, ಜಿಲ್ಲಾ ಕಮೀಟಿಗೆ ಮೇಲಿಂದ ಮೇಲೆ ವರದಿಗಳಿಂದ ತಿಳಿಸಬೇಕಾಗಿದೆ. ಸದ್ಯಕ್ಕೆ ಇದು ತೀರ ಮಹತ್ವದ್ದಾಗಿರುವದು. ನಮ್ಮೆಡೆಗೆ ಬಂದ ದೂರುಗಳನ್ನು ನಾವು ಪ್ರಕಟಿಸುತ್ತಲಿರುವೆವು. ಜಂಗಲ ಖಾತೆಯ ವಿಷಯ ನಮ್ಮ ಬೇಡಿಕೆಗಳನ್ನು ಮುಂಬಯಿ ಸರಕಾರದ ಮುಂದಿಡಲಿಕ್ಕೆ ಅಗಸ್ಟ ತಿಂಗಳ ಒಳಗಾಗಿ ಜಿಲ್ಲೆಯ ಶಿಷ್ಟಮಂಡಲವು ಪುಣೆಗೆ ತೆರಳುವದದೆ. ಪ್ರತಿ ಒಂದು ತಾಲೂಕಾ ಕಮೀಟಿಯು ಸಭೆಸೇರಿ, ತಮ್ಮ ಹಳ್ಳಿಗಳೊಳಗಿನ ಬೇಸಾಯಗಾರರ ಕೊರತೆಗಳನ್ನು ಶೋಧಿಸಿ, ತನ್ನ ತಮ್ಮ ತಾಲೂಕಿನ ಶಿಷ್ಟ ಪ್ರತಿನಿಧಿಗಳಿಗೆ ಸೂಚನೆಗಳನ್ನೂ, ಮಾಹಿತಿಯನ್ನೂ, ಪೂರೈಸತಕ್ಕದ್ದು. ಈ ಕಾರ್ಯಕ್ಕೆ ಅವಧಿಯು ಹೆಚ್ಚಿಲ್ಲ. ಅದಕ್ಕಾಗಿ ತಾಲೂಕಾ ಕಮೀಟಿಗಳನ್ನು ಸ್ಥಾಪಿಸಲಿಕ್ಕೆ ತ್ವರೆ ಮಾಡಿರೆಂದು ನಮಗೆ ಹೇಳಬೇಕಾಗಿದೆ. ಜಿಲ್ಲಾ ಕಮೀಟಿಯೊಳಗೆ ನೇಮಿಸಲ್ಪಟ್ಟ ಪ್ರತಿ ಒಂದು ತಾಲೂಕಿನ ಇಬ್ಬಿಬ್ಬ ಮೆಂಬರರೇ, ಈ ಕೆಲಸದಲ್ಲಿ ಪ್ರವರ್ತಕರಾಗಬೇಕಾಗಿದೆ.

ಕಾಯಿದೆ ಕೌನ್ಸಿಲದ ಮೆಂಬರರನ್ನು ಆರಿಸುವ ಇಲೆಕ್ಷನದ ಸಮಯವು ಸಮೀಪಿಸುತ್ತಿದೆ. ಚುನಾವಣಿಯಂದ ಬಹಳೇ ಮಹತ್ವದ ಕೆಲಸದಲ್ಲಿ ಮತದಾರರಿಗೆ ರಾಜಕೀಯ ಶಿಕ್ಷಣವನ್ನು ಕೊಟ್ಟು, ಪ್ರತಿ ಒಬ್ಬ ಮತದಾರನು ತನ್ನ ವ್ಹೋಟನ್ನು ತೀರ ಪಾತ್ರರಾದ ಉಮೇದವಾರರಿಗೇ ಕೊಟ್ಟು ತನ್ನ ಮತದಾರಿಯ ಸಾರ್ಥಕತೆಯನ್ನು ವ್ಯಕ್ತಪಡಿಸುವಂತೆ ಮತದಾರರಿಗೆಲ್ಲ ದಾರಿ ತೋರಿಸಲಿಕ್ಕೆ, ಇಂಥ ಸುಸಂಘಟಿತ ಸಂಸ್ಥೆಗಳು ಬಹಳೇ ಉಪಯೋಗಿಯಾಗುವವು. ಪ್ರತಿ ಒಬ್ಬ ಉಮೇದವಾರನಿಗೆ ತನ್ನ ಮತಗಳನ್ನು ಜಾಹೀರಪಡಿಸಿ, ಜಿಲ್ಲೆಯಲ್ಲೆಲ್ಲ ತಿರುಗಿ ರಾಜಕೀಯ ಶಿಕ್ಷಣದ ಕಾರ್ಯವನ್ನು ನಡಿಸಲಿಕ್ಕೆ, ಇವೇ ಕಮಿಟಿಗಳಿಂದ ಬಹಳೇ ಸಹಾಯವಾಗುವದು. ಇದೆಲ್ಲ ಸಂಗತಿಗಳನ್ನು ನೆನಿಸಿ, ನಮ್ಮ ತಾಲೂಕಾ

...ಯಿತಿಗಳನ್ನೂ, ಹಳ್ಳಿ ಕಮಿಟಿಗಳನ್ನು ವೇಗನೇ ಸ್ಥಾಪಿಸಿ, ಪರಿಷತ್ತಿನ ಕಾರ್ಯವನ್ನು ನಿರಂತರ ನಡಿಸುತ್ತಿರುವರೆಂದು ನಾವು ನಂಬಿರುವೆವು. ಚಾಲಕರಿಗೂ, ಅನುಯಾಯಿಗಳಿಗೂ, ನಾವು ಹೇಳುವದು ಒಂದೇ —

ಅಡಿಯು ಮುಂದಿಡಬೇಕು।
ಹೊಡೆನು ಸಾಗಲಿಬೇಕು।
ಒಡಗೂಡಿ ನಾವೆಲ್ಲ ದುಡಿಯಬೇಕು॥
ನಿರುತದಲಿ ಈಗಿದ್ದ ರಾಜ್ಯಛತ್ರದ ಕೆಳಗೆ।
ವರಸ್ವರಾಜ್ಯದ ಮಹಿಮೆ ಮೆರೆಯಬೇಕು॥"

ಸ್ಫುಟ ಸೂಚನೆಗಳು.

೧ ಪಂಜಾಬ ಪ್ರಕರಣದ ಬಾಲವು ಪತ್ತೊಂದು...ಣ ಅಲ್ಲಿ, ಮತ್ತೊಂದು ಸಾರು ಉದ್ಭವಾಯಿತು. ಪಾರ್ಲಮೆಂಟಿನ (ಲಾರ್ಡ್ಸ್) ಉಮರಾವರ ಸಭೆಯಲ್ಲಿ ಲಾರ್ಡ ಫಿನಲೀ ಸಾಹೇಬರು, "ರಣಶೂರ ಡಾಯರ ಸೇನಾನಿಯು ಜಾಲಿಯನ ವಾಲಾ ಬಾಗಿನಲ್ಲಿ ಕೊಲೆ ಮಾಡಿಲ್ಲ, ಅವರ ವರ್ತನವು ನಿರ್ದೋಷವಾಗಿದೆ, ಅವರಿಗೆ ವಿಧಿಸಿದ ಶಿಕ್ಷೆಯು ಅನ್ಯಾಯವಾಗಿದೆ" ಎಂಬರ್ಥದ ಠರಾವನ್ನು ತರಲು ೪೩ ಹೆಚ್ಚಿನ ಮತಗಳಿಂದ ಠರಾವು ಪಾಸಾಯಿತು. ಇದರಿಂದ ಮಂತ್ರಿ ಮಂಡಲವೂ, ಹಿಂದುಸ್ತಾನ ಸರಕಾರವೂ, ಹಂಟರ ಕಮಿಟಿಯೂ ಕೊಟ್ಟ, ಅತ್ಯಲ್ಪ ನ್ಯಾಯ್ಯ ನಿರ್ಣಯವು ಸಹ, ವಿಲಾಯತಿಯೊಳಗಿನ ಉಮರಾವರಿಗೆ ಮಾನ್ಯವಾಗಿಲ್ಲೆಂದು ಸಿದ್ಧವಾದಂತಾಯಿತು. ಇಷ್ಟೇ ಅಲ್ಲ, ಮಂತ್ರಿಮಂಡಲದ ಕಾರಭಾರದಮೇಲೆ ಉಮರಾವರು ಒಂದು ನಿಂದಾತ್ಮಕ ಠರಾವನ್ನೇ ಪಾಸ ಮಾಡಿದರೆಂದು ಹೇಳಿದರೂ ಸಲ್ಲಬಹುದು. ಈ ನಿರ್ಣಯದೊಳಗೆ ಜಾಣತನವೂ ಇಲ್ಲ, ಮುತ್ಸದ್ದಿತನವೂ ಇಲ್ಲ, ಸತ್ಯದ ಲವಲೇಶವೂ ಇಲ್ಲ. ಸತ್ಯವನ್ನು ಬಿಗಿಯಾಗಿ ಅಂಟಿಕೊಂಡಿರುವ ಹಿಂದಿ ಲೋಕಮತಕ್ಕೆ ಮಾನ್ಯವಾಗುವ ಇಕ್ಕಣ್ಣಿನ ನ್ಯಾಯವನ್ನು ಬೇಡುವ ಹಿಂದೀ ಪ್ರಜೆಗಳಿಗೆ, ಇದ್ದ ಒಂದು ಕಣ್ಣನ್ನು-ಅದಕ್ಕೆ ಸಹ ಪರದೆಯಿಂದ ಸೂಕ್ಷ್ಮ ದೃಷ್ಟಿಯಾದಾಗ-ಒಡೆವು ಬಿಡಬೇಕೆಂಬಂತೆ, ಉಮರಾವರು ಬಗ್ಗಿ ಕಣ್ಣಿಯಮೇಲೆ ಹೊಡೆದಂತಾಯಿತಲ್ಲವೇ? ಇನ್ನು ಡಾಯರ ವೀರನಿಗೆ ಸ್ಮಾರಕದಿಂದ ಮನ್ನಿಸುವರಂತೆ! ವಿಲಾಯತಿಯಲ್ಲಿ ಅವನ ಪಕ್ಷಪಾತಿಗಳು ವಂತಿಗೆಯಿಂದ ೧,೩೦೦ ಪೌಂಡನ್ನು ಇಷ್ಟರೊಳಗೆ ಕೂಡಿಸಿರುವರು. ಹಿಂದುಸ್ಥಾನದೊಳಗಿನ ಅವನ ಪುರಸ್ಕರ್ತರ ಹೆಂಡಂದಿರು ಅವನಿಗೆ ತಲವಾರನ್ನು ಅರ್ಪಿಸಿ, ಮನ್ನಿಸುವರಿದ್ದಾರೆ. ಇಷ್ಟೆಲ್ಲ ಗೌರವದ ಸಂಭ್ರಮದೊಳಗೆ, ತಾನು ಮತ್ತಿಷ್ಟು ಕ್ರೂರತೆಯನ್ನು ತೋರಿಸಿದ್ದರೆ, ಮತ್ತೂ ಹೆಚ್ಚು ಪೌಂಡುಗಳ ಇನಾಮು ತನಗೆ ಸಿಗುತ್ತಿತ್ತಲ್ಲವೇ, ಎಂದು ನಿರ್ದಯ ಡಾಯರ ಬಹಾದ್ದೂರರಿಗೆ ಪಶ್ಚಾತ್ತಾಪಕ್ಕೆ ಕಾರಣವಾಗದಿದ್ದರೆ ಸಾಕು. ಇಷ್ಟಿಗೆ ವಿಲಾಯತಿಯೊಳಗಿನ ಬಹಳೇ ಅಮೀರ ಉಮರಾವರು, ಕೆಲ ಲಕ್ಷ್ಮೀ ಪುತ್ರರು, ರಾಜನಿಷ್ಠ ಹಿಂದೀಜನರಿಗೆ ಮಹದನ್ಯಾಯ ಮಾಡಿರುವರು ಮತ್ತು ಹಿಂದುಸ್ಥಾನದೊಳಗೆ ರಾಜ-ಪ್ರಜೆಗಳೊಳಗಿರುವ ಪ್ರೀತಿಭಾವವನ್ನೂ, ಪರಸ್ಪರ ವಿಶ್ವಾಸವನ್ನು, ಬರೆ ಪಕ್ಷಾಂಧತೆಯಿಂದ, ಕುಗ್ಗಿಸುವರೆಂದು ಶೋಕಿಸಲು ಅತ್ಯಂತ ವಿಷಾದವೆನಿಸುತ್ತದೆ.

೨ ಮೂರು ವರುಷಗಳ ಹಿಂದೆ ಸರಕಾರವು ಸ್ಥಾಪಿಸಿದ ಧಾರವಾಡದೊಳಗಿನ ಕರ್ನಾಟಕ ಕಾಲೇಜು ಇನ್ನು ಹೊಸ ವಿಶಾಲ ಮಂದಿರದಲ್ಲಿ ಒಯ್ದು ಬಿ. ಎ. ಪರೀಕ್ಷೆಯ ತನಕ ಶಿಕ್ಷಣ ಕೊಡುವಂತೆ ಅದನ್ನು ಇದೇ ಜೂನದಿಂದ ವೃದ್ಧಿಪಡಿಸಿರುವರು. ಹೊಸ ಇಮಾರತಿಯ ಪ್ರವೇಶ ಸಮಾರಂಭವು ನಾ। ಗವ್ಹರ್ನರ ದೊರೆಗಳ ಕೈಯಿಂದ ಸಾಂಗವಾಯಿತು. ಈ ಸಮಯ ನಾ। ಜಾರ್ಜ ಲಾಯ್ಡ ಅಧಿಪತಿಗಳು ಮಾಡಿದ ಉಪನ್ಯಾಸವು ಸುಶ್ರಾವ್ಯವಾಗಿತ್ತು. "ವಿದ್ಯಾರ್ಥಿಗಳು ಕಾಲೇಜಿನ ಮೆಟ್ಟಲುಗಳನ್ನು ಇಳಿದೊಡನೆ, ರಾಜಕೀಯ ವಿಷಯಗಳಲ್ಲಿ ತಾವು ಪಾರಂಗತರಾಗಿದ್ದೇವೆ, ಯಾವದೊಂದು ರಾಜಕೀಯ ಪ್ರಶ್ನೆಯಲ್ಲಿ, ತಾವು ಪಟ್ಟ ಗೋಖಲೆಯರಾಗಿದ್ದೇವೆಂದು ತಿಳಿಯುತ್ತಾರೆ. ಇದು ಭ್ರಾಮಕ ಕಲ್ಪನೆಯು. ಗೋಖಲೆಯವರು, ಎಷ್ಟು ಅಭ್ಯಾಸವನ್ನು ಮಾಡಿದ್ದಾರೆ, ಎಷ್ಟು ಸಾಧನೆಯನ್ನು ನಡಿಸಿದ್ದಾರೆ? ಹಾಗಿಲ್ಲದಿದ್ದರೆ, ಅವರಿಗೆ ಅಗತ್ಯವಿರುವ ಕರ್ತವ್ಯಜ್ಞಾನವು ಪ್ರಾಪ್ತವಾಗುತ್ತಿದ್ದಿಲ್ಲ" ಎಂದು ಗವ್ಹರ್ನರ ಸಾಹೇಬರು ಹೇಳಿದ ಮಾತುಗಳನ್ನು ಎಲ್ಲ ಪದವೀಧರರು ವಿಚಾರಿಸಬಹುದು. ವಿದ್ಯಾರ್ಥಿಗಳಿಗೆ ಇಂಥ ಉಪದೇಶವು ಹಿತಕರವಿದೆ. ಆದರೆ ರಾಜಕೀಯ ವಿಷಯಗಳ ಅಭ್ಯಾಸವನ್ನು ಮಾಡಲಿಕ್ಕೆ ಸುಗಮವಾಗುವಂತೆ ಪೂರ್ವ ಶಿಕ್ಷಣವು ಕಾಲೇಜಿನಲ್ಲಿ ದೊರೆಯುವದು ಅವಶ್ಯಕವಿದೆ. ರಾಜಕಾರಣದ ಆಟವನ್ನು ಇವರು ಸ್ವತಃ ಎಂದೂ ಆಡಬಾರದು ಎಂಬುದು ವಿಹಿತವೇ. ಆಟವನ್ನು ಪ್ರೇಕ್ಷಕರಾಗಿ ಸಹ ನೋಡಬಾರದೆಂದು ವಿಧಿಸುವದು ಮಾತ್ರ, ಸರ್ವಥಾ ವಿಹಿತವಲ್ಲ. ಈಗಿನ ವಿದ್ಯಾರ್ಥಿಗಳು ಭಾವಿ ಮುಂದಾಳುಗಳಾಗುವರು. ಒಂದು ದಿನ ರಾತ್ರಿ ಮಲಗಿ, ಮರುದಿನ ಬೆಳಗುಮುಂಜಾನೆ ಅವರು 'ಧುರೀಣ'ರಾಗಿ ಹಾಸಿಗೆಯಮೇಲಿಂದ ಎದ್ದು ನಿಲ್ಲುವದಿಲ್ಲ. ಶಿಕ್ಷಣದಿಂದಲೇ ಅವರು ಉತ್ಕ್ರಾಂತರಾಗುತ್ತಾರೆ. ಇವನ್ನಷ್ಟು ಶಿಕ್ಷಕರು ವಿಚಾರಿಸುವ ಮಾತು. ನಿಮ್ಮಲ್ಲಿ ಚಲೋ ಚಾಲಕರೇ ಇಲ್ಲೆಂದು ಹೇಳುವದೆಂದರೆ, ಹಿಂದಿನ ಶಿಕ್ಷಣದ ಪ್ರಯೋಗವೇ ಅಷ್ಟು ವಿಪರೀತವಾಗಿ ಕೃತ್ರಿಮವಾಗಿತ್ತೆಂದು ಒಪ್ಪಿಕೊಳ್ಳಬೇಕಾಗುವದು. ಇದು ಪೂರ್ಣ ಸತ್ಯವಲ್ಲದಿದ್ದರೂ, ಅರೆ-ಸತ್ಯವಿದೆಂದು ಹೇಳಿದ ಹೊರತು ಗತ್ಯಂತರವಿಲ್ಲ.

೩. ಈಗಿನ ಕಾಗದದ ಮಹರ್ಘತೆಯಾದಂತೆ ವೃತ್ತಪತ್ರಗಳು ಸಹ ಹೆಚ್ಚುತ್ತ ನಡೆದಿವೆ. ಇದೊಂದು ಶುಭ ಚಿನ್ಹವೇ ಸರಿ. ನಮ್ಮ ಕರ್ನಾಟಕದಲ್ಲಿ ಎರಡು ಪತ್ರಗಳು ತಟಸ್ಥವಾದರೆ, ಅವುಗಳ ಬದಲಿಗೆ ಮೂರು ಜನ್ಮ ತಾಳಿರುವವು. ಅವುಗಳ ಧೋರಣೆ ವಾದರೂ, ರಾಷ್ಟ್ರೀಯ ಪಕ್ಷವನ್ನೇ ಅಂಗೀಕರಿಸಿರುತ್ತವೆ. ಇದು ಕರ್ನಾಟಕದ ಜಾಗರೂಕತೆಯ ಸಾಕ್ಷಿ ಕೊಡುತ್ತದೆ. ಇರಲಿ. ಆದರೆ ಕಾಗದದ ಪೂರೈಕೆಗೆ ಗತಿ ಏನು? ನಮ್ಮ ಜಿಲ್ಲೆಯ ಬೆಟ್ಟಗಳಂತೂ ಗಳು (ಬಾಂಬು) ಗಳಿಂದ ತುಂಬಿರುವವು. ಶಾಸ್ತ್ರೀಯ ರೀತಿಯಿಂದ ಅವುಗಳನ್ನು ಕಡಿಸಿದರೆ, ಒಂದಕ್ಕೆ ಹತ್ತರಷ್ಟು ಸಹ ಕೊಂಬೆಗಳು ಹೊಡೆತು, ಮತ್ತಿಷ್ಟು ಸಮೃದ್ಧಿಯಾಗಲು ಅಡ್ಡಿಯಿಲ್ಲ. ಈ ಗಳುಗಳಲ್ಲಿ ಹಲವು ಜಾತಿಗಳಿರುವವು. ಇವರ ಉಪಯೋಗವು ಕಾಗದ ಮಾಡಲಿಕ್ಕೆ ಬರುತ್ತದೆಂದು ತಜ್ಞರು ಸಿದ್ಧಮಾಡಿದರಂತೆ! ಹಾಗಿದ್ದರೆ, ನಮ್ಮ ಜಂಗಲಖಾತೆಯು ಇನ್ನು ಸ್ವಸ್ಥವುಳಿಸಿಕೊಂಡು ಕೂಡ್ರುವ ದಿವಸಗಳಲ್ಲ. ನಮ್ಮ ಇದೇ ಜಿಲ್ಲೆಯಲ್ಲಿ ಇಂಥ ಯಾವದೇ ಕಾರಖಾನೆ ಈ ವರೆಗೆ ಆಗಿಲ್ಲ. ಇಂಥ ಕಾರಖಾನೆಗಳನ್ನು ತಜ್ಞರ ಸಲ್ಲೆಯಿಂದ ತೆರೆದು, ಜಂಗಲ ಉತ್ಪನ್ನವನ್ನು ಮತ್ತಿಷ್ಟು ಬೆಳೆಸಲಿಕ್ಕೂ, ಕಾಗದದ ಕೊರತೆಯನ್ನು ಪೂರೆ ಸಾರಲಿಕ್ಕೂ, ಇದೊಂದು ಸುಸಮಯವಾಗಿರುವದು. ಆದದರಿಂದ ನಮ್ಮ ಸರಕಾರವು ಈ ವಿಷಯದಲ್ಲಿ ಎಳ್ಳಷ್ಟು ವಿಲಂಬಮಾಡದೆ, ಇದರ ಪೂರ್ಣಸಿದ್ಧತೆ ಮಾಡಬೇಕಾಗಿ ಸೂಚಿಸುವೆವು.

೪ ಹಿಂದೂಸ್ಥಾನದಲ್ಲಿ ಈಗ ತಂದೆಯ ಆಸ್ತಿಯಲ್ಲಿ ಗಂಡು ಮಕ್ಕಳಿಗೆಲ್ಲಾ ಸರಿಪಾಲು ಇರುವದು. ಇದರಿಂದ ಹಿರಿಯರು ಸಂಪಾದನೆ ಮಾಡಿದ ಗ್ರಾಮ-ಭೂಮಿಗಳ ವಿಭಾಗಗಳು ಮಾಡಲ್ಪಡುತ್ತವೆ. ಈ ಕಾನೂನನ್ನು ರದ್ದುಮಾಡಬೇಕೆಂದೂ, ಸ್ಥಿರಸ್ವತ್ತೆಲ್ಲಾ ಹಿರಿಯ ಪುತ್ರನೊಬ್ಬನಿಗೇ ಬರುವಂತೆ ಆಗಬೇಕೆಂದೂ, ಹೀಗಾದರೆ ಆಸ್ತಿಯು ಛಿದ್ರವಾಗದೆ ಏಕರೂಪವಾಗಿ ಉಳಿಯಲು ಸಹಾಯವಾಗುವದೆಂದೂ, ಮಿ। ಕೆ ವಿ ಆರ್ ಐಯಂಗಾರರು ಒಂದು ಮಸೂದೆ ಕಾನೂನನು ರಚಿಸಿ, ಹಿಂದೂಸ್ಥಾನ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಇಡುವವರಾಗಿದ್ದಾರೆ. ಈ ಕಾನೂನು ಮಸೂದೆಯನ್ನು ಚರ್ಚಿಸಬಹುದೆಂದು ಇಂಡಿಯಾ ಸರಕಾರದ ಅನುಮತಿಯೂ ದೊರೆತಿರುವದಾಗಿ ತಿಳಿದುಬರುತ್ತದೆ.

ಇಹವೃತ್ತ.

ಕುಮಟಾ— ಮಳೆಯು ಬೀಳುತ್ತಿದೆ. ಈ ವರೆಗೆ ೬೫-೭೦ ಇಂಚು ಆಯಿತು. ಅಕ್ಕಿ ದಾಗಿ ಧಾರಣೆ ವಿಶಸವನೆ ಉಂಟು. ಬೆಳೆಯ ಸ್ಥಿತಿಯಾದರೂ ಸಧ್ಯಕ್ಕೆ ನೆಟ್ಟಗಿರುವದು.

ಇಲ್ಲಿ ವಾಸವಾಗಿದ್ದ ಪುರಾತನ ಮಾನ್ಯ ಕುಲದ ಆ ವಯಸ್ಸಿನ ಮುದುಕರಾದ ಹೆಗಡೆ ಕೇಶವ ಗೋವಿಂದ ವ್ಯಾಸಭಾಗರು ಇದೇ ಕಳೆದ ಮಂಗಳವಾರ ರಾತ್ರಿ ೪ ಘಂಟೆ ಸಮಯ ಸ್ವರ್ಗಸ್ಥರಾದರು. ಇವರ ಮೃತ್ಯುವು [illegible] ಸ್ಥಲಸಂಶೋಧಕರಿಗೆ [illegible].

ಇದೇ ಕಳೆದ ಮಂಗಳವಾರ ತಾಲೂಕಾ ಲೋಕಲ ಬೋರ್ಡ ಕಮಿಟಿಯು [illegible] 'ಧೋರ್ತಿಸ' ಸಾಹಿಬುಳ್ಳ ಪುರಸ್ಕರಿಸಲ್ಪಟ್ಟ ಹುಗ್ಗೋಣ ಲೋಕಲಬೋರ್ಡ ರಸ್ತೆ ಮಾಡುವ ಉದ್ದೇಶ್ಯ ಪ್ಲೇನವಷ್ಟು ಮೇಲು ತಯಾರಿಸುವ ಮುಂಜೂರ ಠರಾವು ಆದ್ದು ಅಭಿನಂದನೀಯವು. ಹಾಗೆಯೇ ಹೊನ್ನಗದ್ದೆ ಮೂರೂರ ರಸ್ತೆಗಳ ಸ್ಥಿತಿಯಾದರೂ ಸುಧಾರಣಾರ್ಹವಾಗಿರುವದು.

ಈ ತಾಲೂಕ ಹಳ್ಳಿ-ಹೆಗಡೆ-ಮೂರೂರ ವಗ್ಯರೆಗಳಲ್ಲಿ ಹುಲಿಯು ಹಾವಳಿಗೆ ಬಹಳೇ ನಾಯಿ-ದನಗಳು ಬಲಿಬಿದ್ದವು. ಇದಕ್ಕೆ ಸರಕಾರದಿಂದ ಯೋಗ್ಯ ನಿವಾರಣೆಯ ಉಪಾಯವು ಕೈಕೊಳ್ಳದಿದ್ದರೆ, ಬಹಳೇ ಅಪಾಯವಾಗುವ ಸಂಭವ ಉಂಟು.

ಹಳಿಯಾಳ— ಹವೆ ತಂಪು, ಮಲೇರಿಯಾ ಸುರು ಆಗಿದೆ. ಮಳೆಯು ಸುರಿಯುತ್ತಲೇ ಇದೆ.

ಲಾಯಸನದಾರರ ಬಗ್ಗೆ ಬಂದೋಬಸ್ತಗಳು ಠೀಕಾಂ ಆದವು. ಲಾಯಸನ್ಸಗಳು ಉದಾರತೆಯಿಂದ ಕೊಡಲ್ಪಟ್ಟವು. ಬಂದೂಕುಗಳಿಗಿಂತ ಲಾಯಸನದಾರರು ಹೆಚ್ಚಾದ್ದರಿಂದ, ಪರ ತಾಲೂಕಿನಿಂದ ಬಂದ ಜನರು ಶಿಕ್ಷೆಗಸ್ತರಿಂದ ಹೋದರು. ಈಕಡೆಗೆ ಸರಕಾರದ ಲಕ್ಷ ಸೆಳೆಯಲಿ.

ಗೋಗ್ರಾಸ ಭಿಕ್ಷಾ ಮಂಡಳದಲ್ಲಿ ಈ ವರೆಗೆ ಜಮಾ ಬಂದ ರುಪ್ಯಾ ೮೯೩-೧೩-೧೦ ರಲ್ಲಿ ರುಪ್ಯಾ ೯೪-೯-೬ ಹುಲ್ಲು, ದಾಣೆ ವಗೈರೆ ಬಗ್ಗೆ ಖರ್ಚು ಆಗಿ, ಬಾಕಿ ರುಪ್ಯಾ ೮೦೩-೪-೪ ಶಿಲ್ಕು ಉಳಿದಿರುವದು. ಇದರಲ್ಲಿ ರುಪ್ಯಾ ೬೩೧-೧೧-೧ ಕೋಓಪರೇಟಿವ ಸೊಸಾಯಿಟಿಯಲ್ಲಿಯೂ, ರುಪ್ಯಾ ೫೬-೯-೩ ಖಜಿನದಾರರ ಹಿಳಿಯಲ್ಲಿಯೂ, ರುಪ್ಯಾ ೩೫-೦-೨ ಕುಳಗಳ ಮೇಲೆಯೂ ಇರುವವು

ಯಲ್ಲಾಪುರ— ೧೫ ದಿವಸ ಲಾಗಾಯ್ತು ಭಯಂಕರ ಮಳೆ. ಸಟ್ಟೀ ಹಚ್ಚುವ ಕೆಲಸವು ಭರದಿಂದ ನಡೆದದೆ. ಅಕ್ಕಿಯ ಧಾರಣೆಯು ಇಳಿಯುವ ಸಂಭವ ಉಂಟು. ಇಲ್ಲಿಯ ವಿಕ್ಟೋರಿಯಾ ಜುಬಿಲಿ ಲಾಯಬ್ರರಿಯ ಪುನರ್ಘಟನೆಯನ್ನು ಮಾಡುವ ಠರಾವು ಸರ್ವಾನುಮತದಿಂದಾ ಪಾಸಾಯಿತು ಗಾಡಿಗಳ ಪಟ್ಟೀ ವಸೂಲಿಯಿಂದಾ ಊರಲ್ಲಿ ಪರಸ್ಥಳದ ಗಾಡಿಗಳು ಬರದಂತಾಗಿ ಕಾಯಿಪಲ್ಲೆಗಳು ಜನರಿಗೆ ಸಹಾ ದೊರಕುವದು ತುರಿಂಕ ವಾಗಿದೆ.

ಪತ್ರಸ್ವೀಕಾರ.

Wide-awake— ಸ್ವ ಭಾವನಾಶಕ್ತಿಪ್ರದಿಂದ ಹೊಂದಿನ ಸಂಚಿಕೆ

ಗೀತ ರತ್ನ—
ವಿಶ್ವೇಶ್ವರ ವೆಂಕಪ್ಪ ಹೆಗಡೆ ದೊಸನಮನ— ,,

Notice.

Wanted a Sanitary Inspector who has passed or studied upto Matric or School Final Pay Rs 25/ rising to 40/ The candidate selected will have to undergo training at Municipal expense in the Sanitary class Bombay. Applications should reach the undersigned before the 20th proximo.

Municipal Office Sirsi 27th July, 1920 } **S. N. Keshwain** *President, Sirsi Municipality*

ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ.

(ಒಬ್ಬ ಬಾತ್ಮಿದಾರನಿಂದ)

ಈ ಸಂಸ್ಥೆಯ ೭ನೇ ವಾರ್ಷಿಕ ಸಾಧಾರಣ ಸಭೆಯು ಈ ಮೊದಲು ಜಾಹೀರಾದಂತೆ ಮೋತಿಲಾಲ ಬೌನ ಸಂ ೨ ಎರಡನೇ ಮಾಳಿಗೆಯ ಠಿಕಾಣೆಯಲ್ಲಿ ಕಳೆದ ತಾರೀಖು ೨೫ ನೇ ರವಿವಾರ ದಿವಸ ಸಾಯಂಕಾಲ ೪ ಘಂಟೆಗೆ ಜರಗಿತು ರಾ|| ಬಾ|| ಅನಂತ ಕೃಷ್ಣಪ್ಪ ಬಿ. ಏ. ರವರು, ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಮೊದಲು ಸಂಸ್ಥೆಯ ಸನ್ಮಾನ್ಯ ಕಾರ್ಯದರ್ಶಿಗಳಾದ ರಾ| ಮುಕುಂದ ದುಗ್ಗಪ್ಪ ಗಾಢ ತೊಂಡೆ ಇವರು, ಕಳೆದ ವರ್ಷದ ರಿಪೋರ್ಟನ್ನು ಓದಿ ಹೇಳಿದರು. ಬಳಿಕ ಅಧ್ಯಕ್ಷರು, "೩|" ರೂಪಾಯಿಯಂಥ ಸಣ್ಣ ರಕಮಿನಿಂದ ಪ್ರಾರಂಭಿಸಿ, ಸುಮಾರು ೧,೨೦೦ ರೂಪಾಯಿ ವರ್ಗಣಿ, ೪,೫೦೦ ರೂಪಾಯಿ ರಿಝರ್ವ ಫಂಡು ಇಷ್ಟು ದೊಡ್ಡ ರಕಮನ್ನು ಅಲ್ಪಾವಧಿಯಲ್ಲಿ ಒಟ್ಟುಗೂಡಿಸಿ, ಸಂಸ್ಥೆಯನ್ನು ಊರ್ಜಿತಾವಸ್ಥೆಗೆ ತಂದಬಗ್ಗೆ ಚಾಲಕರನ್ನು ಅಭಿನಂದಿಸಿದರು ಆದರೂ ಸಂಸ್ಥೆಯ ಗರಜುಗಳು ಬೆಳೆಯುತ್ತಿದ್ದಾವೆ. ಇದನ್ನು ಲಕ್ಷಿಸಿ ಎಲ್ಲ ಸಭಾಸದರು ಹಸ್ತೆ ಪರಹಸ್ತೆ ಸಹಾಯ ಮಾಡಿ, ಸಂಸ್ಥೆಯ ಎಲ್ಲ ರೀತಿಯಿಂದ ಉತ್ಕರ್ಷವನ್ನು ಸಾಧಿಸಬೇಕಾಗಿ ವಿನಂತಿ ಮಾಡಿದರು ಆಮೇಲೆ ಕುಮಟೆಯ ಸಾವಕಾರ, ರಾವಸಾಹೇಬ ರಾಮಚಂದ್ರ ಅಣ್ಣಪ್ಪೈರವರು ಸಂಸ್ಥೆಯ ಮೊದಲನೇ ಪೇಟ್ರನರಾಗಿದ್ದಾರೆಂದು ಕಂತಿಯಿಂದ ಬಂದ ಆನಂದಕರವಾರ್ತೆಯನ್ನು ಅಧ್ಯಕ್ಷರು ಜಾಹೀರು ಮಾಡಿದರು. ಆ ನಂತರ ಅಧ್ಯಕ್ಷ, ಉಪಾಧ್ಯಕ್ಷ, ಸೆಕ್ರೆಟರಿ, ಟ್ರೆಜರರ, ವ್ಯವಸ್ಥಾಪಕ ಮಂಡಳ, ಲೆಕ್ಕತಪಾಸಕ, ಸ್ಥಾನಿಕ ಶಾಖೆಗಳ ಪ್ರತಿನಿಧಿ, ಸಲ್ಲಾಗಾರರ ಮಂಡಳ, ಇವುಗಳ ಚುನಾವಣೆಗಳಾದವು. ಕಡೆಗೆ ಅಧ್ಯಕ್ಷರ ಆಭಾರವನ್ನು ಮನ್ನಿಸಿದ ಮೇಲೆ ಸಭೆಯು ವಿಸರ್ಜನೆಯಾಯಿತು

ಕೋಓಪರೇಟಿವ್ಹ ಬೇಂಕ.

(ಮೂರನೇ ಪಾನಿನಿಂದ ಮುಂದರಿಸಿದ್ದು.)

ಪ್ರಮುಖ ಮಂಡಳಿಯವರು ಹಾಜರ ಇದ್ದರು. ಕುಮಟಾ ತಾಲೂಕಿನಿಂದ ರಾ| ಸಾ| ಮಾನೂರ, ಮತ್ತು ಆಸಿಸ್ಟಂಟ ಜನರ್ಲ ಮ್ಯಾನೇಜರ, ಪಿ| ಹೆಗಡೆ, ಕಾರವಾರದಿಂದ ಅಸಿಸ್ಟಂಟ ಜನರ್ಲ ಮ್ಯಾನೇಜರ ಮಿ|| ನಾಡಕರ್ಣೀ, ಮತ್ತು ಮಿ|| ಗಾಢ ತೊಂಡೆಯವರು ಸಹಾ ಹಾಜರ ಇದ್ದರು ರಾ|| ಸಾ|| ಮಾನೂರ ಇವರು ಅಧ್ಯಕ್ಷಸ್ಥಾನವನ್ನು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟ ನಂತರ, ಅತಿಶಯ ಮಳೆಯಲ್ಲಿ ಅನೇಕ ಕಷ್ಟಗಳನ್ನು ಸಹಿಸಿ ದೂರದಿಂದ ತಾವು ಕೊಟ್ಟ ಆಮಂತ್ರಣದ ಪ್ರಕಾರ ಸಭೆಗೆ ಬಂದ ಬಗ್ಗೆ, ರಾ|| ಸಾ| ಪುರ್ವಲಿಕರಾದ ಪಂಡಿತ ಇವರು ಅವರ ಉಪಕಾರ ಮನ್ನಿಸಿದರು ಮತ್ತು ಬ್ಯಾಂಕ ಸ್ಥಾಪನದ ಉದ್ದೇಶ ಸಹಾ ವಿವರಿಸಿ ಹೇಳಿದರು ನಂತರ ಬ್ಯಾಂಕಿಗೆ ಹೊಸದಾಗಿ ಸೇರಿಸಲ್ಪಡುವ ಸಂಘಗಳು ವ ಮೆಂಬರರ ಸಂಬಂಧದ ವಿಚಾರ ನಡೆದು ೮ ಜನರಿಗೆ ಮತ್ತು ೧೧ ಸೊಸಾಯಿಟಿಗಳಿಗೆ ಮೆಂಬರರಾಗಿ ಸರ್ವಾನುಮತದಿಂದ ಸೇರಿಸಲ್ಪಟ್ಟಿತು. ಸದ್ರಿ ಸಭೆಯಲ್ಲಿ ಒಟ್ಟು ೯೭ ಶೇರುಗಳು ತೆಗೆದುಕೊಳ್ಳಲ್ಪಟ್ಟವು ಕುಮಟಾ ಬ್ರೆಂಚ ತರ್ಫೆನಿಂದ ರಾ|| ಸಾ| ಎಮ್ ಡಿ. ಕುಳಕರ್ಣಿ ಮತ್ತು ರಾ| ಸಾ| ಮಾನೂರ ಇವರಿಗೆ, ಕಾರವಾರ ಬ್ರೆಂಚ ತರ್ಫೆನಿಂದ ಮಿ|| ನಾಡಕರ್ಣೀ ಮತ್ತು ಮಿ|| ಗಾಯತೊಂಡೆ ಇವರಿಗೆ, ೮೯ ತಾಲೂಕ ಸಂಘದವರ ತರ್ಫೆನಿಂದ ಮಿ| ಪಿ| ಎನ್ ಕೇಶವೈನ ಮತ್ತು ವಕೀಲ ಮಿ| ಪಿ| ಎಸ್ ಜಿ, ಇವರಿಗೆ, ಶೇರ ಹೋಲ್ಡರರ ತರ್ಫೆನಿಂದ ರಾ|| ಸಾ|| ಪಿ. ಎಸ್. ಪಂಡಿತ, ಮತ್ತು ವಿ|| ವಾಸುದೇವರಾವ ದಾಕಪ್ಪಾ, ಈ ರೀತಿ ೮ ಜನರು ಬೋರ್ಡ ಆಫ್ ಡೈರೆಕ್ಟರರಾಗಿ ನೇಮಿಸಲ್ಪಟ್ಟರು ೯ನೇ ಡೈರೆಕ್ಟರರ ನೇಮಣೂಕಿಯು ಮೊ|| ಕಲ್ಲೇಶ್ವರ ಸಾ|| ಬಾ|| ಕಾನಡಾವರ ಕಡೆಯಿಂದ ಆಗಬೇಕಾದ್ದರಿಂದ, ಆ ಬಗ್ಗೆ ಅವರಿಗೆ ಬರೆದು ಹೋಗಿದೆ. ಸದ್ರಿ ೮ ಜನ ಬೋರ್ಡ ಆಫ್ ಡೈರೆಕ್ಟರ್ಸ ಪೈಕಿ, ರಾ|| ಸಾ|| ಪಿ. ಎನ್. ಪಂಡಿತ ಇವರ, ಬೋರ್ಡಿನ ಚೇರಮನ್, ಮತ್ತು ಮೆನೆಜಿಂಗ ಡೈರೆಕ್ಟರರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು ಸಭೆಯು, ಕೆಲಸವು ಬಹಳೇ ಉತ್ಸಾಹತೆಯಿಂದ ನಡೆಯಿತು. ಈ ತಿಂಗಳ ಆಖೈರಿನೊಳಗೆ ೩೦,೦೦೦-೦-೦ ಮೂವತ್ತು ಸಾವಿರ ರೂಪಾಯಿ ವರೆಗೆ ಶೇರು ಭಾಂಡವಲು ಕೂಡುವದು ಎಂಬ ಅಂದಾಜ ಅದೆ. ಶೇರು ಭಾಂಡವಲಿನ ೮ ಪಟ್ಟು ವರೆಗೆ, ಠೇವು ವಗೈರೆದಿಂದ ಜಮಾಯಿಸಿ, ಬ್ಯಾಂಕಿನ ಕೆಲಸ ನಡಿಸುವದಕ್ಕೆ ಬ್ಯಾಲೋದ ಅನುಮತಿ ದೊರೆತ್ತದೆ. ೮ ಬೋರ್ಡ ಆಫ್ ಡೈರೆಕ್ಟರರು, ಕುಮಟಾ ಮತ್ತು ಕಾರವಾರದೊಳಗಿನ ಶಾಖೆಗಳ ಮೆಂಬರರು, ಬಹಳೇ ಉತ್ಸಾಹದಿಂದ ಕೆಲಸ ನಡಿಸಿ, ಈ ವರೆಗೆ ಜಿಲ್ಲೆಯಲ್ಲಿ ಇರುವ ಪರಸ್ಪರ ಸಹಕಾರಿ ಸಂಘಗಳ ಹಾನಿಯ ಅಡಚಣಿಯನ್ನು ದೂರ ಮಾಡುವರೆಂಬ ಭರವಸ, ಅದಕ್ಕೆ ನಮ್ಮ ಜಿಲ್ಲೆಯ ವರಿಷ್ಠರ, ಹಸ್ತೆ ಪರಹಸ್ತದಿಂದ ಸಹಾಯ ಮಾಡುವರೆಂಬ ನಂಬಿದ್ದೇನೆ.

ಶಿರಸಿ ತಾ ೨೩-೭-೧೯೨೦ } P N Pandit.

ಅಳಿಯನಿಗೆ ಉಂಬಳಿ.

ರಾ| ರಾ| ಕಾನಡಾವೃತ್ತ ಕರ್ತರಿಗೆ—
ಅಯ್ಯಾ ಪತ್ರಾಧಿಪರೇ,

ಮಾಜೀ ಕನ್ಸರವೇಟರರಿಗೂ, ನಮ್ಮ ಕಾನಡಾ ಜಿಲ್ಲೆಯ ಮಗಳಾದ ವನದೇವತೆಗೂ ಮದುವೆಯಾದಂದಿನಿಂದ ಈ ವನದೇವತೆಯ ಉನ್ನತಿಯು ಹ್ಯಾಗೆ ಆಯಿತು, ಅವಳ ಅಮಲು ಇಡೀ ಜಿಲ್ಲೆಯಲ್ಲಿ ಹ್ಯಾಗೆ ಹಬ್ಬಿತು, ಅವಳ ಉನ್ನತಿಗೆ ಪ್ರೋತ್ಸಾಹಕನಾದ ಆಕಾಂಕ್ಷೆಗಳನ್ನು ಹುಟ್ಟಿದ ಜಿಲ್ಲಾಧಿಪರಂಥ ದೊಡ್ಡ ದೊಡ್ಡ ಮುಲ್ಕೀ ಅಧಿಕಾರಸ್ಥರು ಹ್ಯಾಗೆ ಅಧಿಕಾರಗಳನ್ನು ತೊರೆದರು, ಬೇಸಾಯವು ದಿನೇ ದಿನೇ ಹ್ಯಾಗೆ ಕಳೆಗುಂದಿತು, ಬಡ ರಯತರ ಸ್ಥಿತಿಯು ಎಷ್ಟು ಕರುಣಾಸ್ಪದವಾಯಿತು, ಇವೆಲ್ಲ ಸಂಗತಿಗಳು ಈಗ ಆಬಾಲವೃದ್ಧರಿಗೆಲ್ಲ ವಿದಿತವಾದವುಗಳೇ. ಸದ್ಯ ಬೆಲ್ಲರು, ಈಗ, ಇಲ್ಲಿ ಪೆನಶನು ಅನುಭವಿಸುತ್ತಿದ್ದಾರೆ. ಇವರು ಸ್ವರ್ಗಕ್ಕೆ ಹೋಗುವಾಗ, ಯಾರೋ ಒಬ್ಬ ಚಂದಾವರನೆಂಬ ಪುಣ್ಯಾತ್ಮನು ಸ್ಮಾರಕ ರೂಪದಿಂದ ಉಂಬಳಿಯನ್ನು ಕೊಡುವ ದೇಶಸೇವೆಯನ್ನು ಗುಪ್ತ ರೀತಿಯಿಂದ ಮಾಡುತ್ತಾನೆಂದು ತಿಳಿಯುತ್ತೇನೆ! ಇಷ್ಟೇ ಅಲ್ಲ, ರೇಂಜರರಿಗೆಲ್ಲ ಸರಕ್ಯೂಲರಗಳನ್ನು ಕಳಿಸಿದ್ದಾನಂತೆ! ಹೀಗೆ, ಗುಪ್ತರೀತಿಯಿಂದ ಕೆಲಸ ಮಾಡುವದರ ಬದಲು, ಬೆಲ್ಲರ ಗುಣವನ್ನು ಬಣ್ಣಿಸುವ ಒಂದು ಲೇಖವನ್ನಾಗಲೀ, ಪತ್ರವನ್ನಾಗಲೀ, ಸಾರ್ವಜನಿಕ ರೀತಿಯಿಂದ ಜಾಹೀರ ಪಡಿಸಿದರೆ, ಬೆಲ್ಲರ ಗುಣಗಳು ಜನರಿಗೆ ತಿಳಿಯುತ್ತಿದ್ದವು. ಅವರು ಹೊರಿಸಿದ ಉಪಕಾರಗಳ ಹೊರೆಯೂ ಸಹ ತಿಳಿಯುತ್ತಿತ್ತು.

ಸದರಿ ಚಂದಾವರರು ಯಾರು? ಅವರ ಪೂರ್ವೇತಿಹಾಸವೇನು? ಅವರಿಗೂ ಬೆಲ್ಲರಿಗೂ ಸಂಬಂಧವೇನು? ಬೆಲ್ಲರ ಉಪಾಸಕರು ಎಂದಿನಿಂದ ಆದರು? ಸ್ಮಾರಕದ ಕಲ್ಪನೆಯು ಯಾವಾಗ ಹುಟ್ಟಿತು? ಜಿಲ್ಲಾ ಪರಿಷತ್ತಿನ ಮೊದಲೋ, ಅಥವಾ ಆ ಮೇಲೆ? ಬೆಲ್ಲರ ಸ್ಮಾರಕವು ಜಿಲ್ಲೆಯ ಮೇಲಿನ ಉಪಕಾರಗಳ ಹೊರೆಗಳ ದ್ಯೋತಕವೋ, ಅಥವಾ ಖಾಸಗಿ ಗೆಳೆತನದ ವ್ಯಕ್ತ ಸ್ವರೂಪವೋ? ಇವೆಲ್ಲ ಸಂಗತಿಗಳು ಹೊರಗೆಡಹುವದು, ಅವರ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ತಾವಾದರೂ ಈ ವಿಷಯ ವಿಶೇಷ ಚೌಕಶಿ ನಡಿಸಿ, ಇತ್ಥಂಭೂತ ಹಕೀಕತನ್ನು ಪ್ರಕಟಿಸಬೇಕೆಂದು ನನ್ನ ಸವಿನಯ ವಿನಂತಿಯಿದೆ. ಇರಲಿ.

ಅಪಶಿ, ರಾ| ಚಂದಾವರರು ನಿಜವಾಗಿ ಮೂರ್ಖರು ಈ ಬಗ್ಗೆ ಯಾರೂ ಏನೂ ಹೇಳಲಿ, ನನಗೇನೂ ಸಂಶಯವಿಲ್ಲ ಯಾಕಂದರೆ, ಇವರಿಗೆ, ಸ್ಮಾರಕ ಯಾರಿಗೆ, ಯಾವಾಗ ಮಾಡಬೇಕು, ಎಂಬ ತಾರತಮ್ಯ ಜ್ಞಾನವೆ ಸಹ ಇಲ್ಲ ಬೆಲ್ಲರಿಗೆ ಸ್ಮಾರಕವು? ಯಾಕೆ? ಯಾವ ಉಪಕಾರಗಳಿಗಾಗಿ? ಜಂಗಲಖಾತೆಯ ಉಪದ್ರವಗಳಿಂದ ರಯತರು ಬೇಸತ್ತು, ಸರಕಾರದ ಹತ್ತರ 'ನಮ್ಮನ್ನು ಹ್ಯಾಗೂ ಮಾಡಿ, ಕಾಪಾಡಿಕೊಳ್ಳಿರಿ' ಎಂದು ರಯತರು ಆರ್ತಸ್ವರದಿಂದ ಈಗ ಬೇಡಿಕೊಳ್ಳುತ್ತಿದ್ದಾರೆ. ಆಗ, ಅವರನ್ನು ಈ ಸ್ಥಿತಿಗೊಯ್ಯಲು ಪ್ರಾಮುಖ್ಯವಾಗಿ ಕಾರಣವಾದ ಬೆಲ್ಲರಿಗೆ, ಸ್ಮಾರಕ ಮಾಡುವ ಉದ್ಯೋಗ ಮಾಡುವದು ನಿಜವಾಗಿ ಮೂರ್ಖತನವಿಷ್ಟೇ ಅಲ್ಲ, ಮುಷ್ಟತನವು. ಈ ಚಳವಳಿಯನ್ನು ಈಗಲೇ ನಿಷೇಧಿಸದಿದ್ದರೆ, ಬೇಸಾಯದ ಶತ್ರುಗಳು ನಮ್ಮ ಮೌನದ ದುರುಪಯೋಗ ಮಾಡಿಕೊಳ್ಳುವರು, ಈ ಬಗ್ಗೆ ಸಂದೇಹವಿಲ್ಲ. ಇದನ್ನು ಚನ್ನಾಗಿ ಲಕ್ಷಿಸಿ, ಅಲ್ಲಲ್ಲಿಯ ನಾಗರಿಕರು ಸಭೆ ಸೇರಿ, ಈ ಚಳವಳಿಯು ಅವರ ಅಂಧಭಕ್ತಿಯದು, ಬಹುಜನ ಸಮಾಜದ ಅಂಗವು ಎಳ್ಳಷ್ಟು ಸಹ ಇಲ್ಲವೆಂದು, ಜಾಹೀರು ಪಡಿಸಬೇಕು

ತಮ್ಮ ವಿಧೇಯ,
ಒಬ್ಬ ನಾಗರಿಕ

ಕಲಿಯುಗದ ಕರ್ಣ.

ಮನುಷ್ಯನಿಗಾಗಿ ಅಡವಿಯೋ! ಅಡವಿಗಾಗಿ ಮನುಷ್ಯನೋ!

(ಕರ್ನಾಟಕ ಮಿತ್ರ, ಬೆಳಗಾಂವ.)

ಉತ್ತರ ಕಾನಡಾ ಜಿಲ್ಲೆಯ ಕೃಷ್ಣೆಯು ಅಡವಿಯ (ಜಂಗಲ್) ಖಾತೆಯಿಂದ ಕವಾಗಿಸ್ವದ ತೊಂದರೆಗ ಳನ್ನು ಮುಂಬಯಿ ಸರಕಾರದ ಕಿವಿಗೆ ಹಾಕಲು, ಅದಕ್ಕೆ ಸರಕಾರದವರು ಕೂಡಲೇ ಬಂತು “ಈ ವಿಷಯದಲ್ಲಿ ಸೂಕ್ಷ್ಮವಾದ ವಿಚಾರಣೆಯನ್ನು ನಡಿಸಿರುವ' ದಾಗಿ ಉತ್ತರಿಸಿ “ಸೂಕ್ಷ್ಮವಾದ' ಎಂಬ ವಿಶೇಷ ಶಬ್ದವನ್ನು ಜೋಡಿಸಿ ಸರಕಾರದವರು ತಮ್ಮ ವಿಶೇಷ ಜಾಗರೂಕತೆಯನ್ನು ತೋರಿಸಿದ್ದರೂ, ಈ ಜಾಗರೂಕತೆಯು ಪೂರಾ ಜಾಗೃತವಾಗುವದರೊಳಗಾಗಿ ಮತ್ತೆ ಎಷ್ಟು ಎಕರೆ ಭೂಮಿಯು ಅಡವಿಯ ಖಾತೆಗೆ ಸೇರುತ್ತದೋ! ಏನೋ! ಸಂಪ್ರತ, ಉತ್ತರಕಾನಡಾ ಜಿಲ್ಲೆಯ ಅತ್ಯಂತ ಹೀನ ಸ್ಥಿತಿಯನ್ನು ನೋಡಿದವನಿಗೆ, ಸ್ವಲ್ಪ ದಿವಸಗಳಲ್ಲಿ ಕಾನಡಾ ಜಿಲ್ಲೆಯಲ್ಲಿಯೂ ಅಡವಿಯ ಪಾಲಾಗಿ ಹೋಗುವ ಲಕ್ಷಣಗಳು ಕಾಣುತ್ತವೆ. ಜಿಲ್ಲೆಯಲ್ಲಿರುವ ಒಟ್ಟು ೩೫ ಲಕ್ಷ ಎಕರೆ ಭೂಮಿಯೊಳಗೆ, ೩೩ ಲಕ್ಷ ಎಕರೆ ಭೂಮಿಯು ಈಗ ಕಾಡಿನಲ್ಲಿ ಸೇರಿಸಲ್ಪಟ್ಟದ್ದು, ಇತ್ತಿತ್ತಲಾಗಿನ ಅಡವಿಯ ಖಾತೆಯವರ ವರ್ತನವನ್ನು ನೋಡಿದರೆ, ನಾಡು ಸೇರುತ್ತದೋ ಏನೋ!' ಎಂದು ಸಂಶಯಗೊಂಡ ವಿಧಾನವು ನಿಜವಾಗುವ ಹಾಗೆ ತೋರುತ್ತದೆ. ದಿನ ದಿನಕ್ಕೆ, ಅಡವಿಯ ಖಾತೆಯವರ ಈ ಹೊಟ್ಟೆಬಾಕತನವು ಹೆಚ್ಚುತ್ತಿದ್ದು, ಕೈಗೆ ಸಿಕ್ಕ ಜಮೀನುಗಳನ್ನು ಸಹ ಅವರು ವನಗಾವಲಿಗೆ ಸೇರಿಸಿಕೊಂಡು, ಸುಮ್ಮನೆ ಕೂತಿರುವರು. ಈಗಿನ ನಡವಳಿಕೆಯ ಮೇಲಿಂದಂತೂ, ಸರಕಾರದವರಿಗೆ ಮನುಷ್ಯನಿಗಿಂತ ಅಡವಿಯು ಮಹತ್ವದ್ದೇ ಹೆಚ್ಚು ಲಾಭದಾಯಕವಿರುವಂತೆ ಸ್ಪಷ್ಟವಾಗುತ್ತದೆ. ಸರಕಾರದವರು ಸಾಗವಾನಿಯಂಥ ಉತ್ತಮ ಕಟ್ಟಿಗೆಯ ಮರಗಳನ್ನು ಬೆಳಸಿ, ಖಾತೆಯ ಹುಟ್ಟುವಳಿಯನ್ನು ಹೆಚ್ಚಿಸುವದೇನೂ ತಪ್ಪಲ್ಲ; ಆದರೆ ಬೇಸಾಯಕ್ಕೂ ಒಕ್ಕಲಿತನಕ್ಕೂ ಅಡ್ಡಿ ಬರುವಂತೆ ಅಥವಾ ಅದನ್ನು ಹಾಳು ಮಾಡುವಂತೆ, ಅಡವಿಯನ್ನು ಬೆಳಸಬಾರದೆಂದೇ ನಮ್ಮ ದಾದರೂ ಅಭಿಪ್ರಾಯವು. ಸದ್ಯಕ್ಕೆ ಕಾನಡಾ ಜಿಲ್ಲೆಯಲ್ಲಿ ಜೀವರಿಂದ ಇರುವ ವ್ಯವಸಾಯವೆಂದರೆ, ಒಕ್ಕಲತನವೊಂದೇ ಅಲ್ಲಿಯ ಜನರ ಮುಖ್ಯ ಜೀವನೋಪಾಯವೇ ಒಕ್ಕಲತನವು. ಮಿಕ್ಕ ಜಿಲ್ಲೆಗಳಲ್ಲಿ ಒಂದುವೇಳೆ ಏನಾದರೂ ಒಂದೆರಡು ಉದ್ಯೋಗದ ಜಗಲಿ, ವ್ಯಾಪಾರದ ಜಗಲಿ, ವ್ಯವಸಾಯಗಳು ಇದ್ದಾವು. ಕಾನಡಾಜಿಲ್ಲೆಯಲ್ಲಿ ಮಾತ್ರ ಶೂನ್ಯ. ಅದರೊಳಗೆ, ಕಾನಡಾಜಿಲ್ಲೆಯಲ್ಲಿ ದಾರಿದ್ರ್ಯದ ಸುಗ್ಗಿಯು ಹಸ್ತಸಿದ್ಧಕಾಲ ಇರುವದರಿಂದ, ಅನೇಕ ಸಾರೆ ಅಲ್ಲಿಯ ಬಡವರಿಗೆ ‘ಹೊಟ್ಟೆ ತುಂಬ' ಹಿಟ್ಟನ್ನು ಮುಕ್ಕಿ, ಕೆಲಸಕ್ಕೆ ಹೋಗಬೇಕಾಗುತ್ತದಂತೆ! ಒಡವರ ದುರ್ಭಾಗ್ಯಕ್ಕೆ, ಆ ಚಕ್ಕೆಯೂ ಈಚೀಚೆಗೆ ಸಿಗದಂತಾಗಿರುವದಂತೆ!

ಇನ್ನು ಅಲ್ಲಿಯ ಅಡವಿಖಾತೆಯ ನಿಯಮಗಳನ್ನು ನೋಡಿದರೆ, ಅವು ಅಡವಿಯ ಮನುಷ್ಯರಿಗೆ ತಕ್ಕಂತೆ ಇರುವವು. ಸರಕಾರದವರು ಕಾದಿಟ್ಟ ವನಗಾವಲಿನಲ್ಲಿ ಒಕ್ಕಲಿಗರು ಯಾತಕ್ಕೂ ಕಾಲಿಡಲಿಕ್ಕಾಗದು. “ವನಗಾವಲಿ' ನಲ್ಲಿನ ಕಾಡುಮೃಗಗಳು ಸಮೀಪದಲ್ಲಿಯ ಹೊಲಗದ್ದೆಗಳಲ್ಲಿ ಅವನ್ನು ಹೊಕ್ಕು, ಹಾಳುಗೆಡಿಸಬಹುದು, ದನಕರುಗಳನ್ನು ಮುರಿದು ತಿನ್ನಬಹುದು, ಹೆಚ್ಚು ಕಡಿಮೆಯಾದರೆ, ಮನುಷ್ಯನ ಮಿದುಳನ್ನಿಂದಲೂ ತಮ್ಮ ಹಸಿವನ್ನು ಆರಿಸಬಹುದು. ಮನುಷ್ಯನು ಮಾತ್ರ ಸ್ವಸಂರಕ್ಷಣೆಗಾಗಿ ಅವುಗಳಮೇಲೆ ಗುಂಡು ಹಾರಿಸಕೂಡದು. ಹಾರಿಸಿದರೆ, ಅವನಿಗೆ ದಂಡವಾಗಲಿ, ಮ್ಯಾಜಿಸ್ಟ್ರೇಟನ ಮುಂದೆ ಎಳೆದು ನಿಲ್ಲಿಸುದಾಗಲಿ, ಈ ಶಿಕ್ಷೆಯು. ಇಷ್ಟಕ್ಕೇ ಮುಗಿಯಲಿಲ್ಲ. ವಿಚಾರಣೆಯಾದ ತರುವಾಯ ಆರೋಪಿಯು ತನ್ನ ಬೆಳೆಯನ್ನು, ದನಕರುಗಳನ್ನು, ಕಳೆದುಕೊಂಡದ್ದಲ್ಲದೆ ಸ್ವಂತ ಜೀವವನ್ನು ಕೂಡ ಕಳೆದುಕೊಳ್ಳಬೇಕಾಗುತ್ತದೆ. ಸರಕಾರದವರ ದಯೆಯ ರೀತಿಯೂ ವಿಚಿತ್ರವಾಗಿದೆ. ಬಾಯಿದ್ದ ಮನುಷ್ಯರಮೇಲೆ ಯಾರಾದರೂ ದಯಾತೋರಬಹುದು. ಮೂಕ ಪ್ರಾಣಿಗಳನ್ನು ಯಾರಾದರು ಈ ರೀತಿಯಾಗಿ ಮನುಷ್ಯರಗಿಂತ ಹೆಚ್ಚಾಗಿ ತಿಳಿಯುವರೋ? ಸರಕಾರದವರ ನಡತೆಯು ಲೋಕವಿಲಕ್ಷಣವಾದದ್ದೇ; ಇನ್ನೂ ಒಂದು ವೈಲಕ್ಷಣ್ಯವದೆ. ಅದೇನಂದರೆ, ಹಿಂದೆ ಹೇಳಿದಂತೆ ಸರಕಾರದವರು ಬಡಜನರ ಗಂಜಿಯನ್ನು ಕಸುಕೊಂಡು ಆ ಗಂಜಿಯ ಭೂಮಿಗಳನ್ನು ಅಡವಿಗೆ ಸೇರಿಸುತ್ತಾರಷ್ಟೆ!' ಇದಲ್ಲದೆ, ಅವರು ಜನರ ಗೋಳನ್ನು ಕೇಳಲಿಕ್ಕಾಗದೆ, ಯಥೇಚ್ಛವಾಗಿ ಸುಗಿ ಮಾಡಿಕೊಳ್ಳಲೆಂದು ರೈತರಿಗೆ ಆ ಭೂಮಿಗಳ ಬದಲಾಗಿ ಹುಲ್ಲು ಸಹ ನೆಟ್ಟಗೆ ಬೆಳೆಯದ ಕಲ್ಲು ಭೂಮಿಯನ್ನು ದಯಪಾಲಿಸಿರುವರು. ಎಂಥ ಔದಾರ್ಯವಿದು' ವೇದರು ಕೊಟ್ಟ ಗಂಜಿಯನ್ನು ಸುಲಿದುಕೊಂಡು ತುಪ್ಪ ಕೊಡುವರು ಒತ್ತಟ್ಟಿಗಿರಲಿ, ಜನರ ಬಾಯೊಳಗೆ ಕಲ್ಲು ಹಾಕುತ್ತಿರುವ ಈ ಕಲಿಯುಗದ ಕರ್ಣನಿಗೆ ಯಾವ ವಿಶೇಷಣಗಳಿಂದ ಸಂಬೋಧಿಸಬೇಕೋ ತಿಳಿಯದು! ಅಡವಿಯ ಖಾತೆಯವರಿಗೆ ಆ ಕಾಡನ್ನೆಲ್ಲ ತಮ್ಮ ಬಡಲಿಗೆ ತುಂಬಿಕೊಳ್ಳುವದಿದ್ದರೆ, ಅದರಂತೆ ಅಲ್ಲಿಯ ನಿವಾಸಿಗಳಿಗೆ ಆ ನಾಡಿನಿಂದ ಎರಡನೇ ನಾಡಿಗಾದರೂ ಗುಳೆ ಕಟ್ಟಿಕೊಂಡು ಹೋಗಲಿಕ್ಕೆ ಸೂಚಿಸಬೇಕು. ಮಾತ್ರ ವ್ಯರ್ಥವಾಗಿ ಅವರನ್ನು ಪೀಡಿಸಬಾರದು, ಮತ್ತು ಗೋಳಾಡಿಸಬಾರದು. ಅಡವಿಯ ಖಾತೆಯವರ ಈ ಹೊಸ ಹೊಸ ದುಷ್ಕೃತಿಗಳಿಂದ ದೇವರ ನಿಯಮವೇ ಅರದಾಳ ಹಾಕಿ, ಮನುಷ್ಯನನ್ನು ಕಾಡಿಗಿಂತ ಕೀಳೆಂದು ಎಣಿಸುತ್ತಿರುವದನ್ನು ಕಣ್ಣಾರೆ ನೋಡಿದರೆ, ಮನುಷ್ಯನಿಗಾಗಿ ಅಡವಿಯೋ, ಅಡವಿಗಾಗಿ ಮನುಷ್ಯನೋ, ಎಂಬದೊಂದು ದೊಡ್ಡ ಸಂಶಯವೇ ಉಂಟಾಗುತ್ತದೆ

ರಾ|| ರಾ|| ಕಾನಡಾವೃತ್ತ ಸಂಪಾದಕರ ಬಳಿಗೆ—

ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ತಮ್ಮ ವೃತ್ತದಲ್ಲಿ ಸ್ಥಳಕೊಡುವಿರಾಗಿ ಅಪೇಕ್ಷಿಸುತ್ತೇನೆ.

ಪ್ರತಿಯೊಂದು ಜನಾಂಗದವರ ಬುದ್ಧಿಯು ಈಗಿನ ಕಾಲದಲ್ಲಿ ವಿದ್ಯಾಖಾತೆ (ಶಾಲಾಖಾತೆ) ಯ ಮುಖಾಂತರವೇ ವಿಕಾಸಗೊಳ್ಳುವದು, ಯಾವತ್ತೂ ಜನರಿಗೆ ಗೊತ್ತಿದ್ದ ಸಂಗತಿಯೇ. ಒಂದು ಬದಿಯಿಂದ ಸುಧಾರಣೆಯಾಗಿ, ವಿದ್ಯಾಭಿವೃದ್ಧಿಗೆ ಉತ್ತೇಜನ ದೊರೆಯುತ್ತಿರಲು, ಮತ್ತೊಂದು ಪಕ್ಕದಿಂದ ಇಲಾ ಸ್ಥಿತಿಯಾದರೂ ಕಾಣುತ್ತಿರುವದು. ಕೆಲಕೆಲವು ಹಳ್ಳಿ ಶಾಲೆಗಳಲ್ಲಿ ಮಾಸ್ತರ ಜನರು, ಮನಸೋ ಇಚ್ಛೆ, ಶಾಲೆಗೆ ಬರುತ್ತಾ, ಶಿಕ್ಷಣದ ಕಡೆಗೆ ಲಕ್ಷ ಕೊಡದೆ, ಭಾವೀ ಪ್ರಜೆಗಳ ಉತ್ಥಾನ ಮಾಡುತ್ತಿರುವ ಸಂಗತಿ ನಿಜವಿದ್ದವಸ್ತಕ್ಕೂ, ಈ ಭಾಗದ ತಪಾಸಣಿ ಇನ್ಸಪೇಕ್ಟರ ಮಿ|| ಗಾಂವಕಾರರವರು ‘ಈ ಲಾ ಸ್ಥಿತಿಯು ಸಮಾಧಾನಕರವಷ್ಟೆ,' ಎಂಬರ್ಥದ ಶಿರಾ ಬರೆಯುತ್ತಿರುವರು. ಇದು ಅವರ ಭೋಳತನವೋ? ವಿದ್ಯಾರ್ಥಿಗಳ ಮಂದ ಭಾಗ್ಯವೋ? ಸುಜ್ಞರು ವಿಚಾರಿಸಲಿ.

ಶಿವಾಣಿ. ತಾ ೧೭–೭–೧೯೨೦.	ಸತ್ಯವಾದಿ.

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯರ ಸಚಿತ್ರ ಚರಿತ್ರೆ, ಲೇಖನ ಮತ್ತು ಭಾಷಣ, ೦-೧೨-೦, ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦, ರಾ|| ಬ|| ಶಾರದ ಮಲ್ಲಪ್ಪನವರ ಸಚಿತ ಚರಿತ್ರೆ ೦-೧೨-೦, ಸ್ವತಂತ್ರ್ಯ ಸಿದ್ಧಾಂತ ೦-೮-೦, ಬುದ್ಧಿಯ ಮಾತು ೦-೪-೦, ಅಧುನಿಕ ಜರ್ಮನಿ ೦-೪-೦, ಪತಿತೋದ್ಧಾರ, ೦-೪-೦.

ವಿಳಾಸ:— ಎಂ. ಎಂ. ಹರ್ಡೇಕರ.

ದಾವಣಗೇರಿ.

ಟ್ರೇನಿಂಗಕಾಲೇಜ್ ಬ್ರಾಹ್ಮಣೇತರ ಉಮೇದವಾರರ

ಬಹಳ ದೊಡ್ಡ ಚಿಂತೆ.

ಮುಂಬಯಿ ಸರಕಾರದವರು ಜಗತ್ತಿನ ಸರ್ವ ಧರ್ಮಗಳ ಮೂಲವಾದ ವಿದ್ಯಾಭ್ಯಾಸವನ್ನು ನಿರಂತರವಾಗಿ ಮಾಡುತ್ತಿರುವರು. ಆದರಿಂದಲೇ ವಿದ್ಯೆಯಲ್ಲಿ ಹಿಂದುಳಿದ ಇತರ ಹಿಂದು ಮುಂತಾದವರಿಗೆ ಉತ್ತೇಜನಾರ್ಥವಾಗಿ ಅನೇಕ ಮಾರ್ಗವನ್ನು ಇಟ್ಟಿರುವರು. ಉದಾಹರಣಾಗಿ, ಪ್ರಾಥಮಿಕ ಶಾಲೆಯ ಪರೀಕ್ಷೆಯ ಕಾಲದಲ್ಲಿಯೂ, ದಯೆ ಇಟ್ಟಿರುವರು. ಇಂಗ್ಲೀಷ ಶಾಲೆಯಲ್ಲಿಯೂ ಲಕ್ಷ್ಯಗೊಡುವರು, ಸ್ಕಾಲರಶಿಪ್ಪು, ಇನಾಮುಗಳನ್ನು ಕೊಡುವಾಗಲೂ, ಅವರ ಕಡೆಗೇ ಹೊರಳುವರು. ಬ್ರಾಹ್ಮಣೇತರ ಫಾಯನಲ್, ಧಾರವಾಡ ಇತ್ಯಾದಿ ಕಾಲೇಜುಗಳ ಪರೀಕ್ಷೆಯಲ್ಲಿಯೂ ತಕ್ಕಷ್ಟಕ್ಕಿಂತ ಹೆಚ್ಚು ದಯೆಯನ್ನು ತೋರಿಸುವರು.

ಸದ್ಯಕ್ಕೆ ಕಾಲೇಜ ೧ನೇ ವರ್ಷಕ್ಕೆ ಸೇರುವ ಪ್ರವೇಶ ಪರೀಕ್ಷೆಯು, ೧೯೦೮ನೇಯ ಇಸವಿಯ ವರೆಗೆ ಏಳೆಂಟು ವಿಷಯಗಳಲ್ಲಿಯೂ ಚನ್ನಾಗಿ ಪರೀಕ್ಷೆ ಮಾಡಿ ತಕ್ಕೊಳ್ಳುವ ರೂಢಿ ಇದ್ದು, ಅದು ಒಂದು ಮಾದಿನ ರೀತಿಯು ಸಂಕ್ಷೇಪವಾಗುತ್ತ ಬಂದು, ಈ ವರ್ಷ ಆ ಪರೀಕ್ಷೆಯು ಪೂರಾ ತೆಗೆಯಲ್ಪಟ್ಟು, ಈ ಇತರ ಹಿಂದು ವರ್ಗದ ಕಡೆಗೆ ಲಕ್ಷಗೊಟ್ಟು, ಎಷ್ಟೋ ಪಾಲು ಹೆಚ್ಚು ಯೋಗ್ಯತೆಯುಳ್ಳವರ ಮಾಸ್ತರನ ಶಿಕ್ಷಣ ಪ್ರಮಾಣವನ್ನು ಸಹ ನೋಡದೆ, ತಕ್ಕೊಳ್ಳುವ ಪ್ರಸಂಗ ಬಂತು ಇದರ ಪರಿಣಾಮದ ಚಿಂತೆಯೇ ದೊಡ್ಡದಾಗಿದೆ.

ವಾಚಕರೇ, ಸರಕಾರದ ದಯೆಗೆ ಭಂಗ ಬರಬೇಕೆನ್ನುವ ವಿಚಾರವಲ್ಲವೇ' ಹಾಗೆ ಯಾಕಾದೀತು ' ಅವರು ಈ ಇತರ ಹಿಂದುಗಳಿಗೆ ಯಾವ ವಿಷಯದಲ್ಲಿ ಮಹಜನರಿಗೆ ಮಾತ್ರ ನಿಜವಾಗಿ ಸುಧಾರಿಸಬೇಕೋ, ಅದು ಮಾತ್ರ ತಪ್ಪಿತೆಂದು ಕಾಣುವದು. ಯಾಕೆಂದರೆ ಸ್ವಾಭಾವಿಕ ವಿದ್ಯಾಪ್ರಿಯರೂ, ನಿಜವಾದ ವಿದ್ವಾಂಸರೂ ಆದ ಬ್ರಾಹ್ಮಣ ವರ್ಗದ ಶಿಕ್ಷಕರೇ, ಕಳೆದ ನೂರಾರು ವರ್ಷಗಳಿಂದ ತಮ್ಮ ಬ್ರಾಹ್ಮಣ ಹುಡುಗರ ಸಂಗಡ ಇತರರಿಗೆ ಶಿಕ್ಷಣವನ್ನು ಕೊಡುತ್ತಿದ್ದರೂ, ಈಗ ನೌಕರಿಯಲ್ಲಿ ಸೇರಿದ ಮತ್ತು ಸೇರುತ್ತಿರುವ, ಇತರ ಹಿಂದು ವರ್ಗದವರಲ್ಲಿ ಅನೇಕರು ಕುತ್ತಿಗೆ ಬಾಬ್ತಿನಿಂದ ಪಾಸಾದವರೇ ಸರಿ' ಈ ಮಾತು ಎಲ್ಲ ಪರೀಕ್ಷೆಯ ಪರೀಕ್ಷಕರಿಗೆ ಗೊತ್ತೇ ಇದೆ. ಈಗ ಇಂಥ ಉಮೇದವಾರರಿಗೆಲ್ಲ, ಬರೇ “ಜಾತಿವರ್ಗ” ಎಂಬ ನ್ಯಾಯದಿಂದ, ಟ್ರೇಂಡ ಶಿಕ್ಷಕರನ್ನು ಸಿದ್ಧಮಾಡಿ, ದೊಡ್ಡ ದೊಡ್ಡ ಶಹರದ ಅಥವಾ ಹಳ್ಳಿಯ ಶಾಲೆಯಲ್ಲಿ ನೇಮಿಸಿ ಬಿಟ್ಟುಬಿಟ್ಟರೆ, ಇವರಿಗೆ ಅನಾಯಾಸದಿಂದ ಸಿಕ್ಕ ಫಲದಿಂದ ಈ ವರ್ಗವೆಲ್ಲ ಸೋಮಾರಿಯಾಗಿ, ನಮ್ಮ ಬ್ರಾಹ್ಮಣ ವರ್ಗವೂ, ಈ ಇತರ ಹಿಂದು ವರ್ಗವೂ, ಈಗಿನಕಿಂತ ಅವನತಿಗೆ ಬಂದು ಆರಳಿನ ಗಜನಿಯಲ್ಲಿ ಮುಂದೆ ಮುಂದೆ ಹೋಗಬೇಕೆಂದು ಹಾರೈಸುವ ಮನುಷ್ಯನಂತೆ, ನಿಜವಾದ ವಿದ್ಯಾಭಿವೃದ್ಧಿಗೆ ವಿಘ್ನ ಬಂದೀತು. ಇದು ಆರಕ್ಕೂ ದೊಡ್ಡ ಚಿಂತೆಯು.

ಮಾನಸಿಕ ಕ್ರಮವೇ ಪ್ರಾಧಾನ್ಯವಾದ ಶಾಲಾಖಾತೆಯಲ್ಲಿ, ಇವರಿಗೆ ಈ ಪ್ರಕಾರ ಉದಾರ ಕೈಗೊಡುವದಕ್ಕಿಂತ, ಇತರ ಪೋಲೀಸ, ಪೋಸ್ಟ, ರೆವಿನ್ಯೂ, ದಿವಾಣಿ, ಫಾರೆಸ್ಟ ಮುಂತಾದ ಖಾತೆಯಲ್ಲಿ ನೌಕರಿ ಕೊಡುವಾಗ ಮಾತ್ರ, ದಯಮಾಡಿ, ಶಿಕ್ಷಣ ಖಾತೆಯಲ್ಲಿ ಹೆಚ್ಚು ಬುದ್ಧಿವಂತರೇ ಸೇರುವಂತೆ, ೧೯೦೮ ನೇ ಇಸವಿಯ ಹಿಂದಿನ ಮಾದರಿಯಂತೆ, ಎಲ್ಲಾ ವಿಷಯಗಳ ಪಕ್ಕಾ ಪ್ರವೇಶ ಪರೀಕ್ಷೆಯನ್ನು ಮಾಡಿದರೆ, ಎಲ್ಲ ಜಾತಿಯವರಿಗೂ ಹಟದಿಂದ ನಂಬರು ಮೇಲೆ ಮೇಲೆ ಪಡೆಯುವ ಶೀಲವು ಉತ್ಪನ್ನವಾಗಿ, ಸರಕಾರದ ಮುಖ್ಯ ಉದ್ದೇಶವು ಸಾಧ್ಯವಾದೀತು! ಅಂಥಾ ಕಾಲವು ಬಂದೀತೋ ಇಲ್ಲವೋ ಇದು ಮಹತ್ವದ ಚಿಂತೆಯು!

ಇನ್ನು ಬ್ರಾಹ್ಮಣ ವರ್ಗಕ್ಕೆ ಶೇಕಡಾ ೪೫ ರ ನಿರ್ಬಂಧವದೆ! ಈ ನಿಯಮ ೧೯೧೩ನೇ ಆಗಷ್ಟದಲ್ಲಿ ಪ್ರಕಟವಾಯಿತು. ಆ ವರ್ಷದಿಂದ ಮುಂದೂ ಹಿಂದುಗಳಲ್ಲಿ

ವಿಷಯಗಳಿಗಿನ್ನೂ ಗುಣಗಳು ಬಹಳ ಅಷ್ಟು ತರ ಅವೆ ಬರೇ ಗಣಿತ ವಿಷಯಕ್ಕೆ ೧೦೦ ಗುಣ ಕೊಡುತ್ತವೆ ಅಂದರೆ, ಮೊದಲು ೧೦೦ ಇದ್ದು ಆದಿನಿಂದ ೩೦೦ ಮಾಡಿದೆ! ಆದರಿಂದ ಶೇಕಡಾ ಪ್ರಮಾಣವು ೬೫ ರಂತೆ ಕೂಡಿ ಬರುವದು ಕಠಿಣವಾಗುತ್ತದೆ. ಹೇಗೂ ಇರಲಿ ಯಾವದೊಂದು ಹೊಸ ಕಾನೂನಿನಂತೆ ಜಾಗ್ರತೆಯಿಂದ ತಯಾರೀ ಮಾಡಲಿಕ್ಕೆ, ನಿದಾನ ೬ ತಿಂಗಳು ಮುಂಚೆ ತಿಳಿಯಬೇಕಾಗಿತ್ತು. ಆಗ ಸಪ್ಟಂಬರದಲ್ಲಿಯೇ ಮ್ಯಾ ಪರೀಕ್ಷೆ ಇತ್ತು. ಆಂದಮೇಲೆ ೧೯೧೭ ನೆ ಸಾಲಿನಿಂದ ಪೂರ್ವದಲ್ಲಿ ಪಾಸಾದ ಬ್ರಾಹ್ಮಣ ಹುಡುಗರಿಗೆ ಸಹ ಈ ನಿಬಂಧವನ್ನು ಲಾಗುಮಾಡುವದು [illegible] ಶಸ್ತ್ರ ಹಾಕಿದಂತಾಗುವದು. ೧೯೨೮ರ [illegible] ವೆಂಬ ನಿಯಮವಿದ್ದದರಿಂದ [illegible] ಕಾಲೇಜದ ಮುದ್ದತ್ತು [illegible] [illegible] ಹೊಂದಿದವರು [illegible] ತಾಗುವದು. [illegible] ಸಾಲು ವ ಆವರ ಹಿಂದೆ ಪಾಸಾದ [illegible] ವನ್ನು ತೆಗೆದು [illegible], ಆವರನ್ನು [illegible] ನೆ ರಿಗೆ ಕೊಳ್ಳಬೇಕು. ಇದು ಎಲ್ಲಿ ವಿದ್ಯಾರ್ಥಿ [illegible] ಪಾಲಿಗೆ [illegible] ತದೆ.

ಶ್ರೀನಿಂಗ ಕಾಲೇಜಿನಲ್ಲಿ [illegible] ತನ್ನಷ್ಟು [illegible] ಅನುಭವವನ್ನು [illegible] ಕೊಡುವಾಗ [illegible] ಆವರ [illegible] ಪ್ರಮಾಣವನ್ನು [illegible] ಕೊಡುವ [illegible] ನಾಯಮಾಗುವ [illegible] [illegible] ಇದ್ದ [illegible] ಬಂದವರು [illegible] [illegible] ವಾಗಿದ [illegible] ಇದೂ ಬಹಳ ದ ಖದ [illegible]

ಈ ಎಲ್ಲ [illegible] ದಾರಾಗುವ [illegible] ಗಳೂ [illegible] [illegible] ರಾಜದ ವಿದ್ಯಾಖಾತೆಯು [illegible] ಅಲಂಕೃತವಾಗು [illegible] ಅನುಗ್ರಹದಿಂದ ಸರಕಾರದ [illegible]

ತಪ್ತ ವಿದ್ಯಾರ್ಥಿ.

ಕುಮಟೆ ಪೇಟೆ ಧಾರಣೆ.

ಜಿನಸು	ದರ
[illegible]	೧೯೪—೧೩೩
[illegible]	೭೩
[illegible] ಸಿಜನ್ನ	೧೧—೧೨
[illegible] ಗೋಡಿ ೧ನೇ	೧೫—೨೩
ಹರಳೇಜ	೧೨—೧೨
[illegible] ನಿಜ ೧ನೇ	೧೬—೧೩
[illegible]	[illegible]
ಹೆಸರು ಜೋಳ ,,	೧೬—೨೦
[illegible] ,,	೧೨—೧೭
[illegible] ,	೨ ೭
ಹಳ್ಳೇಕ್ಕೆ ಮಣ	೧೭
ಕೊಬ್ಬರಿ ಎಣ್ಣೆ ಮಣ	೧೧
[illegible]	೧೬—೧೩
ಉಪ್ಪು ಗೋಣಿ	೪ ೮ ೦
ಕರೆಸಿನ ಆಯಿಲ್ ,	೪ ೮ ೦
, ಹಾಸ	೬ ೭ ೦

[illegible] ಗುಣಪಡಿಸುವ

ಔಷಧಗಳು.

1 ಮದಾಮುದನ ಕಾಮೇಶ್ವರಿ ಲೇಹ — ಬಹು ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ ಎದೆನೋವು ಮಲಬದ್ಧತೆ, ಶರೀರಗಳ ಘಳಿಕದಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ ದಾತು ಪುಷ್ಟಿ ಮತ್ತು ಮುಖದಲ್ಲಿ ಕಾಂತಿ [illegible]. 40 [illegible] ಸೇವಿಸುವ ಲೇಹ ಡಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-1-0

2 ಮಹಾಜ್ವರಾಂಕುಶ — (ಖ ತ್ರಿಗುಣ) — ಇನ್‌ಫ್ಲುಯೆಂಜಾ ನಿಮೋನಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ [illegible]. ಬಾಟ್ಲಿ 1 ಕ್ಕೆ 0-8-0

3 [illegible] ಗುಟಿಕೆ — ಕೂಸ ವ ಮಕ್ಕಳ [illegible] 1 ರ ಕ್ರಯ 0 10 0

4 [illegible] ಗುಟಿಕೆ — ಇದು ಖಾಸಕ್ಕೆ [illegible] ಒಂದೇ ಗುಟಿಕೆಯಿಂದ ಕಫ [illegible] ಗುಣ [illegible] 1 ರ ಕ್ರಯ 0 10 0

5 [illegible] — ಮೂತ್ರಕೃಚ್ಛ್ರ, ಅಶ್ಮರಿ, [illegible] ಪದ್ಮವಿಲ್ಲದೆ [illegible] ಗುಣಕೊಡುವದ [illegible] ರೋಗಿಗೂ ಕೂಡಾ 7 ದಿವಸದೊಳಗೆ ಗುಣ [illegible] 14 ದಿವಸದ ಔಷಧಿ ಕ್ರಯ [illegible]

6 [illegible] — ಇದರ [illegible] ಕಟ [illegible] ನೋವ, ಸೊಂಟ [illegible] ವ ಟ್ಟಾಗುವದು [illegible] ಹೋಗುವದು ಇದ [illegible] ಗರ್ಭಕೋಶವನ್ನು [illegible] 1 [illegible] ಔಷದಕ್ಕೆ 1 ಬಾಟ್ಲಿ [illegible] 2 0 0

ಎಸ್. ಗಣಪಯ್ಯಾ [illegible] ಸನ್ಸ್
[illegible] ರಥಬೀದಿ
[illegible]

[illegible]

ಮುಖ ಜೀವನಾಮೃತ.



ಈ ಔಷ ಧ [illegible] ಹಲ್ಲು [illegible] ಹಲ್ಲು ಅಲಗಾಡುವ ಹಲ್ಲುಗಳಿಂದ ರಕ್ತ ವ ಕೀವು ಸುರಿಯುವ ಮುಖವ್ರಣ ಉಂಟಾದ ದುರ್ಗಂಧ [illegible] ವಿಕಾರಗಳಿಗೆ ರಾಮಬಾಣ ಔಷದ ಇದಲ್ಲದೆ ಬಾಲಗ್ರಹ ಎಲ್ಲಾ ತರದ ಜ್ವರ [illegible] ವಾಂತಿ [illegible], ನಳಗು [illegible], [illegible], ಗುಂಟಗಳಿಗೆ ಮತ್ತು ವಿಷ [illegible] ಪ್ರಾಣಿಗಳು [illegible] ಬಾಲಾಂತಿ [illegible] ಪ್ರಕಾರದ [illegible]

[illegible] ಬಾಟ್ಲಿ ೧ಕ್ಕೆ ಕ್ರಯ ೦ ೧೨ ೦

ಪತ್ತೆ:- ಗೋವಿಂದ ಎಸ್. ಕೆರೇಕರ.
ಶ್ರೀ ಪಾಂಡುರಂಗ ಪ್ರಸಾದಿಕ ಕಂಪನಿ
ಕುಮಟಾ (ಎನ್ ಕೆನರಾ)

ಹೊಸ ಶೋಧ! "ಓಂ" ಹೊಸಶೋಧ
ಗುಣ ಬಾರದಿದ್ದರೆ ಹಣವಾಪಸು
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ [illegible] ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಸೊಡಲು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ದೇಹ ಉಷ್ಣ ಸಂಬಂಧಿಯ ಸಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಒದುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರೆಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧ಳ ತೊಲೆಯ ಡಬ್ಬಿಗೆ ರು ೧ ೧೨ ಆಣೆ ೩ ಡಬ್ಬಿಗಳಿಗೆ ೪ ರು ೮ ಆಣೆ, ೧೨ ಡಬ್ಬಿಗಳಿಗೆ ೧೫ ರು ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— [illegible] ಆರ್ ಬ್ರದರ್ಸ ಮತ್ತು ಕಂಪನಿ
ಪೋಸ್ಟ ನಿಪ್ಪಾಣಿ, ಜಿ ಬೆಳಗಾಂ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವತ್ತು ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾ ಮದುವೆ ಸಮಾರಂಭಗಳಲ್ಲಿಯೂ ರಾತ್ರೆ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ, ಇದರಿಂದ ಬೆಳಕು ಹೆಚ್ಚು ಬಿದ್ದು ಖರ್ಚು ಸಹ ಕಡಿಮೆ ತಗಲುತ್ತದೆ ಈ ದಿನಗಳ [illegible] ದೀಪಗಳು [illegible] ಈ ದೀಪಗಳು ಹಚ್ಚಲು [illegible] ತಾಪತ್ರಯಗಳು ಸಹ ಇಲ್ಲ

ಬೇಕಾದವರು ಬಾಡಿಗೆಯ ದರವಾದ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ [illegible] ತಿಳಿಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ.
ಹೆಗಡೇಕರ, ದುಕಾನ, ಕುಮಟಾ.

Printed and published by Krishnarao Keshav Shenvi at his Star of Kanara Press, Kumta

No. Reg. B 1270.

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೬೨.

ಪತ್ರದ ವರ್ಗಣಿ.-

ಕುಮಟೆಯಲ್ಲಿ ಅಗಾವು ರೂಪಾಯಿ 2-0-0.

ವ್ಹಿ ಪಿ ಅಂಚೆವೆಚ್ಚ ಸಹಿತ ರೂಪಾಯಿ 2-13-0

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ ಮ್ಯಾಟಾ ಕ್ಯಾಟಿನ(೧೫ ಎಮ್‌ಉದ್ದ) ೫ ಸಾಲುಗಳ ವರೆಗೆ ರೂ 1 0 0 ಅನಂತರ ಪ್ರತಿ ಸಾಲಿಗೆ 0-2-0

ಜೆಸ್ತಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿದಲಾಗುವವು.

ಬಹಳ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೫ ನೂಹ' ಅಗೋಸ್ಟ ಸನ್ ೧೯೨೦ ನೇ ಇಸವಿ.]—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಉರಿ, ಕಣ್ಣು ಉರಿ, ಕಿವಿಯಿಂದ ಕೀವು ಸೋರುವದು ಕಿವುಡುತನ, ಕಣ್ಣು ನೋವು, ಅಪಸ್ಮಾರ, ನಿದ್ದೆಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ, ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆ 1ಕ್ಕೆ 0-12 0, 3 ಕ್ಕೆ 2-0 0

ದೊಡ್ಡ ಸೀಸಗೆ 1-8-0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗವನ್ನು ಗುಣ ಮಾಡುತ್ತದೆ

ಬಾಟ್ಲಿ 1 ರ ಕ್ರಯ 1-8 0.
ಬಾಟ್ಲಿ 3 ರ ಕ್ರಯ 4 0 0

ನಾರೀಸಖಿ.

ಹೆಂಗಸರುಗಳ ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು ಸೊಂಟನೋವು, ಹೃತ್ಕಂಪ, ಬಳಿಪ್ರದರ ಬಿಳಿಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ ಬಾಟ್ಲಿಗೆ ರೂ. 2/-

ಚಿನ್ ಚಿನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಜಖಂ, ಘಾಯ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ ಗುಣ ಅಧಿಕ ಡಬ್ಬಿ ೧ ಕ್ಕೆ ೩ ಆಣೆ ಟ ೩ ಅಲಾಯದ ಕೆಟಲಾಗಿಗೆ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7 ಕಂಕನಾಡಿ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೆಜ್ವರ, ಕಂಪಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು 8 ಔನ್ಸಿನ ಬಾಟ್ಲಿ 1 ಕ್ಕೆ ರೂ 1 8 1 ಡಜನಿಗೆ ರೂ 8 8, 1 ಡಜನಿಗೆ ರೂ. 16 8

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು 25 60 ಮತ್ತು 100 ಮಾತ್ರೆಗಳಿಗೆ ಆಣೆ 8 ರೂ 1 ಮತ್ತು ರೂ 8-1

ರೆವುನೊ ಬಾಮು: ತಲೆಸಿಡಿತ, ಕಣಿವಾಯು ಇತರ ಎಲ್ಲಾ ನೋವುಗಳಿಗೆ ಕ್ರಯ ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 5-4 0

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. 1 ಡಜನಿಗೆ ರೂ 1 10 1 ಡಜನಿಗೆ ರೂ 3

ಶುಶ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1 2 4 ಔನ್ಸ್ 1 2. 4
ಆ 2½ ಆ 3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇ ಇಸವಿಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಡಾಕ್ಟರೊಡನೆ ಪಕ್ಕಾ ಸಂಬಂಧದಾಗಿ ಪ್ರಾಯಕ್ಕೂ ದೃಷ್ಟಿಗೂ ತಕ್ಕುದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ ಇತರ ಎಲ್ಲಾ ಸಾಮಾನುಗಳೂ ದೊರೆಯುವವು ಪರ ಊರಿನವರು ತಮ್ಮ ಪ್ರಾಯ ವನ್ನಾಗಲೀ, ದೃಷ್ಟಿಗೆ ಸರಿಕಾಣುವ ಕನ್ನಡಕದ ನಂಬ್ರವನ್ನಾಗಲಿ ನಮಗೆ ಕಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪೆನಿ,
7. ಮಂಗಳೂರು.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೆನ ಕೋ ಓಗೂ, ಕೋಟಿಗೂ, ಬರ ವಂಧವು, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರ ವಂಧವು. ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದವರೆ, ನಮಗೆ ಬರೆದು ತಿಳಿಸಿರಿ ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,
ದಾವಣಗೇರಿ, ಮೈಸೂರ ಪ್ರಾಂತ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರೆಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವರು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ನಾವು ಮಾರುವೆವು

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD,

Bombay.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯ ಬಿದ್ದ ಜಖಮು, ಪಟ್ಟಿನ ನೋವು, ಯಾವದೇ ತರದ ಜಖಮು ಯಾ ಎಲುಗು ಮುರಿದಲ್ಲಿ ಸಹ ಇದನ್ನು ನೀರು ಹಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ ಕ್ರಯ ತೊಲಿ ೧ ಕ್ಕೆ ೩ ಆಣೆ ೧೨ ತೊ. ೧-೨-೦. ವ್ಯಾಪಾರಸ್ಥರಿಗೆ ಬರಪೂರ ಕಮಿಶನ್ ಪತ್ತೆ — ಮುಖ್ಯಾಜಿ ಹಿರಾಲಾಲ ದಲ್ಪತರಾಮ, ಗುರಜರ ಹವೇಲಿ, ಕುಮಟಾ

Notice.

Wanted a Sanitary Inspector who has passed or studied upto Matric or School Final. Pay Rs 25/- rising to 40/. The candidate selected will have to undergo training at Municipal expense in the Sanitary class Bombay. Applications should reach the undersigned before the 20th proximo.

Municipal Office Sirsi, 27th July, 1920.

S. N. Keshwain
President,
Sirsi Municipality.

More Recommendations than Qualifications.

To

The Editor "Kanara News",
Kumta.

The truth of the above saying will come home to any reader of the "Kanara Leader." From its inception the "Kanara Leader" has a peculiar hankering for recommendations. Its idea seems to be "Have a sufficient number of recommendations, and the qualifications will naturally follow". Open the first issue of the very first year, and you will find so many recommendations; open the first issue of the second year and again there are recommendations. Even after a "very creditable" work of one year, the "Kanara Leader" should feel the necessity of publishing the certificates does not redound to the credit of the paper.

Now, turning to the quality of the work turned out. I am tempted to remark that it has a very great idea of itself. It is vain enough to say, that the bi-weekly service of the steamer communication was arranged on account of its articles. In this connection, let me remind the public, that the credit of the arrangement is largely due to the Hon'ble Mr. R. P. Paranjape, who ably advocated the cause of the poor, suffering passengers, in the Bombay Legislative Council last year, and brought pressure upon the Goverment. The holding of the District Conference, I may say, was entirely due to our Bombay and Karwar brethren, and not to any paper. If at all, a paper has played any part in educating the people regarding the same, I can say this much, and I hope the Kanara public will bear me out, that it is not the "Kanara Leader" at all. So much for its avowed work.

A few remarks on the salient features of the "K. L." will not be out of place here.

(1) The Kanara Leader rose out of the Salt agitation in Kanara, and hence this apparent messenger of love had its inception in hatred. It is also significant to note here that the K. L. has ignored this question of the Salt-Trust for the whole year.

(2) The Kanara Leader gave its security under the nefarious Press Act, secretly and without any protest. The fact was given out or leaked out to the public, obviously to appease the public indignation against the demand of the security from the "Kanara News".

(3) While giving an opinion on the recent gagging of the "Kanara News", it invented a very novel doctrine that a paper already suffering from an injustice, should not protest against the injustice inflicted upon others, so long as it does not exceed its own.

If this principle is consistently followed in every day life, I do not know what consequences it will lead to.

There remains one question of importance, and that is the Tupper Memorial Movement. The statement of the K. L. that its view was adopted in the Conference, reminds me of Goldsmith's village teacher, who, though vanquished, would argue still!

All those who have even cursorily followed the controversy know that the Tupper Memorial movement was decried as mischievous, because:

(1) it was organized just at the time of demanding of the security from the "Kanara News".

(2) it would carry an impression abroad, that the whole administration of Mr Tupper is approved. No one grudged him the credit he had attained by working for the people in connection with the forest grievances. Moreover, the movement was unacceptable to the people as some of the "Leaders" began to levy a Tupper Memorial Tax from indigent and ignorant ryats. It was these forces that were against the movement. None objected to offer him thanks for his strenuous services regarding the Forest Department.

My view is amply borne out by the fact that the resolution conveying thanks to the Collector was tacked on to the Forest resulution. No proposal for offering a memorial to Mr. Tupper was made by any memorialist in the Karwar Conference. As to the District Agricultural Conference, will the K. L. enlighten me as to how many delegates from the District attended it as the elected representatives of the Talukas?

In conclusion, I wish to say that misrepresentation of matters does not befit one who poses to lead the people. I may also say that the people also have become sufficiently discreet to know right from wrong. They know which is the service of the country, and which is not. Hence the publication of recommendations or certificates cannot dupe the people any longer.

SIRSI 27-7-1920.

I am, Yours, etc.
P.

ಫೋರೆಸ್ಟ ಖಾತೆಯುವರು ತಮ್ಮ ಮನಸ್ಸಿನ ವಿರುದ್ಧ ನಡೆದ ರೈತರಿಗೆ ಹ್ಯಾಗೆ ತ್ರಾಸ ಕೊಡುತ್ತಾರೆಂಬಬಗ್ಗೆ ಉದಾಹರಣ.

ರಾ। ರಾ। ಕಾನಡಾವೃತ್ತ ಕರ್ತರೀಗೆ:— ಕೆಳಗಿನ ಮಜಕೂರ ತಮ್ಮ ಪತ್ರದಲ್ಲಿ ಛಾಪಿಸಬೇಕಾಗಿ ಅಪೇಕ್ಷಿಸುತ್ತೇನೆ.

ಶಿರಸಿ ತಾಲೂಕ ಮುಟೇಕಲ್ಲದಲ್ಲಿರತಕ್ಕ ದುಗ್ಗಪ್ಪ ತಿಮ್ಮಪ್ಪ ದಾಸದ್ಯನ ಇವರಿಗೂ ರಾಮೊಂಡಯೆಂಬ ಕ್ರಿಸ್ತ್ನ ಗಾರ್ಡಗೂ ರೈತನ ಸಮ್ಮಂಧಾ ತಕ್ರಾರ ನಡದು, ಅದರ ಗಾರ್ಡನ ಮನಸ್ಸಿನಂತೆ ಕೆಲಸ ನಡಿಯಲಿಕ್ಕೆ ದುಗ್ಗಪ್ಪನಿಂದ ಅಡ್ಡಿಯೊದಬಗ್ಗೆ. ಸದ್ರಿ ಗಾರ್ಡಗೆ ಸಿಟ್ಟು ಬಂದು, ಏನಾದರೂ ಮಾಡಿ ದುಗ್ಗಪ್ಪನ ಮೇಲಿನ ಸಿಟ್ಟು ತೀರಿಸಿಕೊಳ್ಳುವಸಲುವಾಗಿ, ಸದ್ರಿ ಗಾರ್ಡನು ದುಗ್ಗಪ್ಪನವನು ಸುಬ್ರಾಯ ಆಚಾರಿ ಮನೆಯಲ್ಲಿ ಹೊಸತಾಗಿ ತಯಾರ ಮಾಡಿಸಿದ ಚಕಡಿ ಗಾಲಿಗಳನ್ನು ಜಪ್ತ ಮಾಡಿ ಪೋಲೀಸರ ತಾಬೆ ಕೊಟ್ಟನು. ದುಗ್ಗಪ್ಪನು ವಿನಾಕಾರಣ ತನ್ನ ಗಾಲಿಗಳನ್ನು ಜಪ್ತ ಮಾಡಿದಬಗ್ಗೆ, ಗಾರ್ಡಗೆ ನೋಟೀಸು ಕೊಟ್ಟನು. ಮುಂದೆ ರೇಂಜರನು ಬಂದು ಸ್ವತಃ ತಪಾಸ ಮಾಡಿದ್ದರಲ್ಲಿ, ಗುಸ್ತೆ ಸಂಗತಿ ಹೊರಬೀಳದಿದ್ದ ಮೇಲೆ, ಗಾಲಿಗಳು ಮಾಲಿಕನಿಗೆ ಬಿಟ್ಟುಕೊಡುವ ಪ್ರಸಂಗ ಬಂತು. ಆದರೆ ಮಾಲಿಕನು ತನ್ನ ಗಾಲಿಗಳು ಕೊಡುವ ಕೆಸ್ತಿ ಕೆಡಿಸಿದ್ದರಿಂದ, ತೆಗದುಕೊಳ್ಳಲಿಲ್ಲ. ಇದು ಇನ್ನೂ ತಕರಾರಿನಮೇಲೆ ಉಂಟು. ರಾಮೊಂಡ ಗಾರ್ಡನೆ ಗಾಲಿಗಳು ತಯಾರಾಗುವದರೆಗೆ ಸಾಧಾರಣ ೭-೮ ತಿಂಗಳು ಸದ್ರಿ ಗಾಲಿಗಳ ಬಗ್ಗೆ ಅನುಮಾನ ಬಂದಿದ್ದಿಲ್ಲ. ದುಗ್ಗಪ್ಪಗೆ ರಾಮೊಂಡ ಗಾರ್ಡಗ ತಕರಾರು ನಡೆದ ಮೇಲೆ ಮಾತ್ರ, ಗಾರ್ಡನೆ ಆ ಗಾಲಿಗಳ ಬಗ್ಗೆ (ಅನುಮಾನ ಬಂತು.) ಸ್ವಪ್ನ ಬಿತ್ತು. ಇವೆಲ್ಲಮೇಲ್ಲಿಂದ ದುಗ್ಗಪ್ಪ ವಾಸ್ತವಿಕವಾಗಿ ಅಡವಿಯಿಂದ ಕಟ್ಟಿಗೆಗಳು ಕದ್ದು ತಂದು ಮಾಡಿದ್ದರೂ, ಪೂರ್ಣ ರೂಪಾಂತರ ಆಗುವವರಿಗೆ ಬಿಟ್ಟದ್ದಾವರೂ, ಬಂದು ವಿಧದಿಂದ ತಪ್ಪಲ್ಲವೇ? ಇದನಸ ಹಾಗಿನ ಸಂಗತಿ ಅಲ್ಲ. ಹಳೇ ಕಟ್ಟಿಗೆಯಿಂದ ಮಾಡಿದ್ದು. ಹೀಗಿರುತ್ತಾ ಜಪ್ತ ಮಾಡಿದ್ದರ ಉದ್ದೇಶ ಪ್ರತಿಬುದ್ಧಿರಿಗೆ ತಿಳಿಯುವಂತ ಅದೆ. ರೈತರಿಗೆ ವಿನಾಕಾರಣ ತ್ರಾಸ ಕೊಡುವ ಇದುವೆಯಿಂದ, ಸದ್ರಿ ಗಾರ್ಡನು ಗಾಲಿಗಳನ್ನು ಜಪ್ತಮಾಡಿ. ಅವರ ಕೆಲಸಕ್ಕೆ ಹರಕತ್ತು ಮಾಡಿದಬಗ್ಗೆ ಫೋರೆಸ್ಟ ಖಾತೆಯ ಮೇಲ ಅಧಿಕಾರರು ಏನು ಕೆಲಸ ನಡಿಸಿದರು? ಇಂಥ ಸಂಗತಿ

"ಸ್ವರಾಜವು ನಮ್ಮ ಜನ್ಮಸಿದ್ಧ ಹಕ್ಕಾಗಿರುವದು."...ಟಿಳಕ.

ಮಹಾತ್ಮಾ ಟಿಳಕ.

ಲೋಕಮಾನ್ಯ— ಟಿಳಕರ ಆತ್ಮಕ್ಕೆ ಜಯಜಯಕಾರವಿರಲಿ.

ಯಾವ ಬಾಲನು ತನ್ನ ಜನ್ಮದಿಂದ ಪರಮಪ್ರಸಿದ್ಧ ಪಾರ್ವತೀ ತಾಯಿಯ ಗರ್ಭಾಶಯವನ್ನು ಧನ್ಯ ಮಾಡಿದನು, ಯಾವ ಸುಪುತ್ರನು ಪುಣ್ಯಶ್ಲೋಕ ಗಂಗಾಧರಪಂತರ ಟಿಳಕ ಕುಲವನ್ನು ಪಾವನ ಮಾಡಿದನು, ಯಾವ ಶಿಷ್ಯೋತ್ತಮನು ತನ್ನ ಸದ್ಗುಣದಿಂದ ಕೇರೋಪಂತ ಛತ್ರೆಯಂಥ ಅಂತಃಕರಣಪೂರಿತ ಸದ್ಗುರುವಿನ ಪ್ರೀತಿಯನ್ನು ಗಳಿಸಿದನು, ಯಾವ ತೇಜಸ್ವಿ ವಿದ್ಯಾರ್ಥಿಯು ವಿದ್ಯಾದೇವಿಯ ಆರಾಧನೆಯಲ್ಲಿರುವಾಗಲೇ ತನ್ನ ಮುಂದಿನ ಆಯುಷ್ಯಕ್ರಮವನ್ನು ನಿರ್ಧರಿಸಿ, ತನ್ನ ಧೋರಣವನ್ನು ನಿಶ್ಚಿತ ಮಾಡಿದನು, ಯಾವ ಪುರುಷೋತ್ತಮನು ತನ್ನ ಗೃಹಸ್ಥಾಶ್ರಮದ ಪ್ರಾರಂಭಕ್ಕೆ, ಸಾಧ್ವಿ ಸತ್ಯಭಾಮೆಯ ಪಾಣಿಗ್ರಹಣವನ್ನು ಮಾಡಿ, ರಾಷ್ಟ್ರಪುರುಷನ ಸಂಸಾರ ಹ್ಯಾಗಿರಬೇಕು, ಇದರ ಪ್ರತ್ಯಕ್ಷ ಉಜ್ವಲ ಉದಾಹರಣೆಯನ್ನು ರಾಷ್ಟ್ರದ ಮುಂದಿಟ್ಟನು, ಯಾವ ಬ್ರಾಹ್ಮಣವರ್ಯನು ತನ್ನ ಮುಖ್ಯ ತಾರುಣ್ಯದ ೧೧ ವರ್ಷ ಶಿಕ್ಷಣಕಾರ್ಯದಲ್ಲಿ ವೆಚ್ಚ ಮಾಡಿದನು, ಯಾವ ಸಾಲಗುರುವು ತನ್ನ ನಿಜಸ್ವಾಮಿಯಿಂದ ಶಿಕ್ಷಣಕೊಡುವ ಗುರುಗಳಲ್ಲಿ ನಿಷ್ಕಲಂಕ ಸ್ವಾರ್ಥತ್ಯಾಗದ ಜ್ಯೋತಿಯು ಹ್ಯಾಗೆ ಉರಿಯಬೇಕು, ಇದನ್ನಷ್ಟು ಸ್ವಾರ್ಥತ್ಯಾಗದಿಂದಲೇ ಸಿದ್ಧ ಮಾಡಿದನು, ಯಾವ ಜನತೆಯ ಪ್ರೇಮಿಯು ವಿಷ್ಣುಶಾಸ್ತ್ರಿ ಚಿಪಳೂಣಕರರಿಂದ ಜನತಾಸೇವೆಯ ಮಂತ್ರೋಪದೇಶವನ್ನು ಕೊಂಡನು, ಯಾವ ದೇಶಭಕ್ತನು "ಕೇಸರೀ–ಮರಾಠಾ" ಈ ವರ್ತಮಾನಪತ್ರಗಳನ್ನು ಕೈಕೊಂಡು, ದೇಶಹಿತದ ಮಾರ್ಗದರ್ಶಕ ಸಿಂಹಗರ್ಜನೆಯಿಂದ ಜನತೆಗೆ ಯೋಗ್ಯ ದಿಶೆ ತೋರಿಸಿದನು, ಯಾವ ಸತ್ಯಾಗ್ರಹಿ ವೀರನು ೧೦೧ ದಿವಸಗಳ ಡೋಂಗರಿಯ ಸೆರೆಗಾರ ವಾಸವನ್ನು ಸಹಿಸಿ, ಜನದಶೀರ ಯುದ್ಧಕ್ಕೆ ನಿತ್ತನು, ಯಾವ ರಾಷ್ಟ್ರಭಕ್ತನು ಬರೇ ಸಮಾಜ ಭಕ್ತಿ, ಯಾ, ಧರ್ಮ ಭಕ್ತಿಗಿಂತ ಶುದ್ಧ ರಾಷ್ಟ್ರಭಕ್ತಿಯೇ ಶ್ರೇಷ್ಠವೆಂಬ ವಿಶ್ವಾಸಾತ್ಮಕ ಜನರಿಗೆ ಬಿಂಬಿಸಿದನು, ಯಾವ ವಿಚಾರಶೀಲನು ರಾಷ್ಟ್ರ ಧರ್ಮದ ನಿಜ ವಿಚಾರಸರಣಿಯನ್ನು ಮಾಡಿ, ಆಗರಕರರಂಥ ಅಗ್ರಹದ ಸಾಮಾಜಿಕ ಸುಧಾರಕರನ್ನು ಹಿಮ್ಮೆಟ್ಟಿಸಿದನು, ಯಾವ ಧೈರ್ಯನಿಧಿಯು ಗ್ಲೋಬ–ಪತ್ರಕಾರನಿಗೆ ಸಮುಸ್ಕಾರ ಮಾಡಲಿಕ್ಕೆ ಹಚ್ಚಿ, ನ್ಯಾ॥ ರಾನಡೆರ ಕಡಿಯಿಂದ ಸಹ "ಶಬ್ಬಾಸು" ಗಳಿಸಿದನು, ಯಾವ ರಾಷ್ಟ್ರೀಯನು ರಾಷ್ಟ್ರೀಯ ಸಭೆಯ ನಿರಂತರ ಸೇವೆಯನ್ನು ಮಾಡಿ, ತನ್ನ ರಾಷ್ಟ್ರೀಯತ್ವದ ಬಾಯುವನ್ನು ಸ್ಥಿರವಡಿಸಿದನು, ಯಾವ ಬಹಾಲನು ರಾಷ್ಟ್ರೀಯ ಸಭೆಯನ್ನು ಶಕ್ತ್ಯಾದಷ್ಟು ರವರುಟ್ಟಿಗೆ ಅಧೀನದಲ್ಲಿಟ್ಟು, ಅದಕ್ಕೆ ಅತ್ತಿತ್ತ ಮಿಸುಕಾಡಲಿಕ್ಕೆ ಕೊಡಲಿಲ್ಲ, ಯಾವ ವೀರನು ೧೮೯೭ ನೇ ಮೊಕದ್ದಮೆಯಲ್ಲಿ ಮಾಫಿ ಬೇಡಿ, ತನ್ನ ವೀರ್ಯತೇಜಸ್ಸನ್ನು ಮಲಿನ ಮಾಡಗೊಡಲಿಲ್ಲ, ಯಾವ ಹಿಂದ ಭಕ್ತನು ಬಂಗಾಲದ ಸ್ವದೇಶಿ ಚಳವಳಿಕ್ಕೆ "ಎಲ್ಲ ಹಿಂದಿಯರು ಹಿಡಿಯಾಗಿದ್ದ"ವೆಂದು ಜಗತ್ತಿನ ನಿದರ್ಶನಕ್ಕೆ ತಂದನು. ಯಾವ ತೇಜಸ್ವಿಯು ತನ್ನ ವಚನದ ಪವಿತ್ರತೆಯ ರಕ್ಷಣಾರ್ಥ ೧೪ ವರ್ಷಗಳ ವರೆಗೆ ಪರಿಶ್ರಮ ಮಾಡಿ, ತಾಯಿ ಮಹಾರಾಜರ ಖಟ್ಲೆಯಲ್ಲಿ ಯಶವನ್ನೇ ಸಂಪಾದಿಸಿದನು, ಯಾವ ನರವೀರನು ಕುಡತದಲ್ಲಿ ನ್ಯಾಯದ ಹಟ ಹಿಡಿದು, ಸಮಸ್ತ ಪಕ್ಷಕ್ಕೆ ನಡುಗಿಸಿದನು, ಯಾವ ಲೋಕಸೇವಕನು ಐತ ಶಿಳಿಗೇರಿಗಳನ್ನು ಮದ್ಯಪಾನದ ವ್ಯಸನದಿಂದ ನಿವೃತ್ತ ಮಾಡಲಿಕ್ಕೆ, ತನ್ನ ಬಾಂಧವರಿಗೆ ಅಗ್ರಹದ ವಿನಂತಿ ಮಾಡಿ ತನ್ನ ಬಂಧುಪ್ರೇಮವನ್ನು ವ್ಯಕ್ತಮಾಡಿದನು, ಯಾವ ಲೋಕ-ಸಂಗ್ರಹದ ಕರ್ಮಯೋಗಿಯು ಶ್ರೀ ಗಣೇಶೋತ್ಸವಕ್ಕೆ ರಾಷ್ಟ್ರೀಯ ಸ್ವರೂಪ ಕೊಟ್ಟು, ಧೈರ್ಯ ಮತ್ತು ರಾಷ್ಟ್ರಭಕ್ತಿಯ ಸಂಯೋಗ ಮಾಡಿಸಿದನು, ಯಾವ ಮಹಾಮಹಾತನು ಶ್ರೀ ಶಿವರಾಜ್ಯಾಭಿಷೇಕೋತ್ಸವವನ್ನು ಪ್ರಾರಂಭ ಮಾಡಿ, ಶಿವಾಜಿಯ ಪುಣ್ಯ ಸ್ಮರಣವನ್ನು ಜಾಗ್ರತ ಮಾಡಿಸಿದನು, ಯಾವ ಲೋಕ-ಮಿತ್ರನು "ಜ್ಯಾತಿ ಭೇದಗಳು ರಾಷ್ಟ್ರಕಾರ್ಯದ ಅಡ್ಡ ಬರತಕ್ಕವಾಗಬಾರದು" ಎಂದು, ತನ್ನ ನೇತೃ ಉದಾಹರಣೆಯಿಂದ ಜ್ಯಾಹೀರ ಮಾಡಿದನು, ಯಾವ ತಪೋನಿಷ್ಠನು ಮಂಡಾಲೆಯ ಕಾರಾಗೃಹವಾಸ ಸಹನ ಮಾಡಿ, ದುಃಖ ಭೂಮಿಯನ್ನು ತಪೋಭೂಮಿಯನ್ನಾಗಿ ಮಾಡಿದನು, ಯಾವ ಹಿಂದ ಬಾಂಧವನು "ರಾಷ್ಟ್ರ" ವನ್ನು ಘೋಷಿಸಿ, ದೇಶದಲ್ಲಿ ಐಕ್ಯತ್ವವನ್ನುಂಟು ಮಾಡಿದನು, ಯಾರು ರಾಷ್ಟ್ರ-ಧ್ಯೇಯದ ಪ್ರಾಪ್ತಿಗಾಗಿ, ಸ್ವರಾಜ್ಯ ಸಂಘದ ಸ್ಥಾಪನೆ ಮಾಡಿದನು, ಆ ಕರ್ಮಯೋಗಿ, ಆ ಜ್ಞಾನವಂತ, ಆ ನೀತಿವಂತ, ಆ ಲೋಕಮಾನ್ಯ, ಆ ಆಚಾರ್ಯ, ಆ ಪುಣ್ಯಪುರುಷ, ಆ ರಾಷ್ಟ್ರಧಾರ, ಆ ಸಾಧುವರ್ಯ, ಮಹಾತ್ಮಾ ಟಿಳಕಶ್ರೀಯರ ಆತ್ಮಕ್ಕೆ ಸದಾ ಸರ್ವಕಾಲ ಜಯಜಯಕಾರವಿರಲಿ.

—ರಾಷ್ಟ್ರಪ್ರೇಮುವಮಾರಾ.

(೩ ನೇ ಪುಟದಿಂದ ಮುಂದರಿಸಿದ್ದು.)

ತಿಯಲ್ಲಿ ಅವನ ಮುಖ್ಯ ಹೇತುವಿನ ಬಗ್ಗೆ ಯೋಗ್ಯ ಕಾಸರ ಆಗರಿದ್ದರೆ ಪಯೋದಯರಿಂದ ಮೇಲಧಿಕಾರಿಗಳು ಅಂತವರಿಗೆ ಉತ್ತೇಜನ ಕೊಟ್ಟಂತಾಗುವದಿಲ್ಲವೋ? ಇದರಲ್ಲಿ ದುಗೇಪ್ಪ ವ್ಯವಹಾರಜ್ಞ, ವಿದ್ಯಾವಂತ ಮತ್ತು ಧನಿಕನಾದರಿಂದ, ಅವನಮೇಲೆ ಘೋರಪ್ಪ ಬಾಧೆಯು ಆಗಲಿಲ್ಲ. ಇದೇ ಒಕ್ಕಲಿಗನಿದ್ದರೆ, ಅವನು ಹೇಗೆ ನಮ್ಮ ಕಂಪನಕ್ಕೆ ಕೊಡಲಿಕ್ಕೆ ಪಾತ್ರನಾಗುತ್ತಿದ್ದ. ಈ ಪ್ರಕಾರದಲ್ಲಿ ಇನ್ನು ಬೇರೆ ಕಾರಣ ನಡೆಗಳುಂಟೆಂಬಾ ತಿಳಿಯುತ್ತದೆ. ಹ್ಯಾಗೆ ಅದರೊಳು ಬಗ್ಗೆ ಪ್ರಕಟ ಸೋದಿದರೆ ಚಾತ್ರಿ ಆದೀತು. ಇದರ ಬಗ್ಗೆ ಸರಕಾರದ ನಜರ ಹರ್ನಿಸಿ ಹೋರೆಮ್ಮಬಾಕಿಗೆ ಎಚ್ಚರ ಕೊಡುತ್ತದೋ ಇಲ್ಲವೋ ನೋಡಬೇಕು.

೧೯೯
ತಾ. ೧೯–೭–೨೦. } ಹಬ್ಬ ರಯತ.

[खिरि बातमीदाराकडून.]

महात्मा गांधींच्या आज्ञेप्रमाणे आजचा दिवस पूर्णपणे "हरताळ" पाळण्यांत आला. सकाळीच बहुतेक सर्व दुकाने बंद होती. १–२ किरकोळ दुकाने व "सुधाशांतिगृहें" तेवढीं उघडीं दिसत होतीं. इतक्यांत ७–७॥ च्या सुमारास लोकमान्य टिळक काल मध्यरात्री मुंबईत कैलासवासी झाल्याची दुःखकारक बातमी येऊन वज्राघाताप्रमाणे आदळतांच आधींच खिलाफतच्या हरताळामुळें उदास दिसत असलेल्या सर्व मंडळींच्या तोंडावरचें शिल्लक असलेलें पाणी पळाल्यास नवल काय? एकानें हि दुःखकारक बातमी दुसऱ्यास सांगावी आणि दुसऱ्यानें एकताच पहिल्याच्या तोंडाकडे दुःखाश्रुयुक्त विस्मयानें तटस्थ बाहुल्याप्रमाणे पाहात राहावें, हा देखावा पाहिला म्हणजे खरोखर त्या पुण्य पुरुषाच्या दैवी-अंशाबद्दलची साक्ष पटवीत होती. हा हृदयभेदक बातमी येताच उघडी असलेली एक दोन दुकाने सुद्धां बंद झाली. काय हा मानाचा प्रभाव! परमेश्वर त्यांच्या आत्म्यास शांती देवो.

याबद्दल, लवकरच येथें दुसऱ्याची १ जाहीर सभा होणार आहे. असो.

दुपारीं ४ वाजता होमरूल लीगतर्फे बोलाविलेली सभा भरून महात्मा गांधींच्या आज्ञेप्रमाणे ठराव पासकरून त्याबद्दल ना. व्हाइसरायांना व प्रेसिडेंट सेंट्रल खिलाफत कमिटी यांना कळविण्यांत आलें. सभेत लोकमान्यांच्या निधन वार्तेमुळें उत्सुकता दिसत नव्हती तरी, मुसलमान बंधूंचा भरणा (उशीरा कां होईना) बराच जमला होता.

वरील सभेचें काम होतांच सर्व सभासद लोकमान्यांचे गोडवे गात, पण जड अंतःकरणानें आपल्या घरी जाते झाले.

ಈ ಶಹರದ ಎಲ್ಲ ನಾಗರಿಕರು ಮಹಾತ್ಮಾ ಗಾಂಧಿಗಳ ಅಪೇಕ್ಷೆಯಂತೆ ಕಳೆದ ತಾ. ೧ ನೇಗೆ ಹರತಾಳ ಆಚರಣೆ ಮಾಡಿದರು. ಆ ದಿನ ಎಲ್ಲ ಅಂಗಡಿಗಳು ಬಂದಾಗಿದ್ದವು. ಮುಸಲ್ಮಾನರು ಉಪ್ಪವಾಸ ಮಾಡಿ ಮಸೀದಿಗಳಲ್ಲಿ ಪ್ರಾರ್ಥನೆ ಮಾಡಿದರು, ಮತ್ತು ಸಭೆಯ ಮೂಲಕ ಠರಾವುಗಳನ್ನು ಪಾಸು ಮಾಡಿ, ಸೆಂಟ್ರಲ ಖಿಲಾಫತ ಕಮಿಟಿಗೂ ಮತ್ತು ವೈಸರಾಯರವರಿಗೂ ಕಳುಹಿಸಲ್ಪಟ್ಟವು. ಆ ಮೇಲೆ ಹಿಂದೂ, ಮಹಮ್ಮದಿ ಬಾಂಧವರು ಹೋಮರೂಲ ಲೀಗಿನ ಅಧ್ಯಕ್ಷತೆಯ ಸಭೆಗೂಡಿ ಸದರಿ ಠರಾವುಗಳು ಪಾಸು ಮಾಡಲ್ಪಟ್ಟವು ಮತ್ತು ಮುಂದೆ ಕಳುಹಿಸಲ್ಪಟ್ಟವು. ಲೋಕಮಾನ್ಯರ ನಿಧನ ವಾರ್ತೆಯಿಂದ ಶಹರವು ಶೋಕಗ್ರಸ್ತವಾಗಿದೆ. ದುಃಖ ಪ್ರದರ್ಶನದ ಜ್ಯಾಹೀರ ಸಭೆಯು ನೆರೆಯುವದದೆ.

ವೈ॥ ವಾ॥ ಲೋಕಮಾನ್ಯ ಬಾಳ ಗಂಗಾಧರ ಟಿಳಕ.

यद्यद् विभूतिमत् सत्वं ममतेजोंश संभवम्. अ गीता

ಬಹು ರತ್ನಾ ವಸುಂಧರಾ ಎಂದು ನಮ್ಮ ಹಿರಿಯರು ಸಾರುತ್ತಿರುವರು. ವಸುಂಧರೆಯು ಉತ್ಪಾದಿಸಿರುವ ಈ ರತ್ನಗಳು ಯಾವವು? ಈ ರತ್ನಗಳೆಂದರೆ ಮುತ್ತು, ಹವಳ, ಮಾಣಿ ಕಗಳೇನು, ಚಿನ್ನ, ಬೆಳ್ಳಿ ಇವೇನು? ನರರತ್ನ ಗಳೇ ನಮ್ಮ ಹಿಂದುಸ್ಥಾನದ ಗರ್ಭದೊಳ ಗಿಂದ ಎಷ್ಟು ನರರತ್ನಗಳು ಹುಟ್ಟಿರುವೆಂದು ಪುರಾಣಕಾಲದಿಂದ ಇಂದಿನ ತನಕ ಅಖಂಡಿ ತವಾಗಿ ನಡೆದಿರುವ ಇತಿಹಾಸವನ್ನು ತೆರೆದು ನೋಡಿರಿ. ಮಾಲೆಯನ್ನು ಪೋಣಿಸಲಿಕ್ಕಾ ದಷ್ಟು ವಿಪುಲವಾಗಿದ್ದ ಅಮೋಘವಾದ ನರರತ್ನ ಗಳು ತಮ್ಮ ಪ್ರಭೆಯಿಂದ ನಮ್ಮ ಇತಿಹಾಸ ವನ್ನು ಶೃಂಗರಿಸುತ್ತಿರುವವು. ಕಾಲಶಕ್ತಿಯ ಪ್ರಭಾವದಿಂದ ಅವರುಗಳ ದೇಹವು ಅಸ್ತ ವಾದರೂ, ಅವರುಗಳ ಕೀರ್ತಿಶರೀರವು ಪ್ರಭೆ ಯಿಂದ ಇನ್ನೂ ಹೊಳೆಯುತ್ತದೆ, ಅಜರಾಮ ರವಾಗಿ ಸೂರ್ಯ-ಚಂದ್ರರಂತೆ ಈ ಪುರಾಣ ಭೂಮಿಯಲ್ಲಿ ಬಾಳಿದೆ. ಇದೇ ವಿಧದ ಒಂದು ಅತ್ಯುಜ್ವಲ ತೇಜಃಪುಂಜವಾದ

ಹಿಂದೀ ನರರತ್ನವು

ಮೊನ್ನೆ ತನ್ನ ಸ್ಥೂಲ ದೇಹವನ್ನು ತ್ಯಜಿಸಿ, ಪ್ರಭಾಶೇಷವಾಯಿತು, ಕೀರ್ತಿಶೇಷವಾಯಿತು. ಕಳೆದ ಶನಿವಾರದ ಮಧ್ಯರಾತ್ರಿಯ ಸಮಯದ ಲೋಕಮಾನ್ಯರೆಂಬ ಅದ್ವಿತೀಯ ಪದವಿ ಯಿಂದ ಪರಮವಿಖ್ಯಾತರಾದ ಬಾಳ ಗಂಗಾ ಧರ ಟಿಳಕ ಲೋಕಾಗ್ರಣಿಗಳು, ವೈಭವ ಸಂಪನ್ನ ಮುಂಬಾಪುರಿಗೆ ತಮ್ಮ ಲೋಕಸೇ ವೆಯ ವೈಭವದಿಂದ ಸುಸಂಪನ್ನವಾದ ಪುಣ್ಯ ದೇಹವನ್ನು ಅರ್ಪಿಸಿ, ಪುಣ್ಯಲೋಕಕ್ಕೆ ತೆರಳಿ ದರು. ಅಂದಿನ ಅತ್ಯುದಾತ್ತ ಚಾರಿತ್ರ್ಯದಿಂದ, ಅತ್ಯುಜ್ವಲ ಕೀರ್ತಿಯಿಂದ, ಅನುಪಮೇಯ ವಿದ್ವತ್ತೆಯಿಂದ, ಅದ್ವಿತೀಯ ಸ್ವಾರ್ಥತ್ಯಾಗ ದಿಂದ ಭರತಖಂಡದಲ್ಲೆಲ್ಲ ಮಿನುಮಿನುಗುತ್ತಿ ದ್ದ ಯಶಸ್ವಿ ನರಕೇಸರಿಯು ಪರಮಾತ್ಮನ ಗುಹೆಯೊಳಗೆ

ಅಂತರ್ಧಾನ ಹೊಂದಿತು.

ದೇಶಸೇವೆಯ ಕಠಿಣ ವ್ರತವನ್ನು ಆಚರಿಸುವ ಮಹಾಂತ ಕರ್ಮಯೋಗಿಗಳು ಧ್ಯಾನಸ್ಥರಾಗಿ, ನಿಜಧಾಮಕ್ಕೆ ಸಾಗಿದರು. ಅತಿ ನಿರ್ದಯ ಕಾಲಪುರುಷನಿಂದುಂಟಾದ ಇಂಥ ಘೋರ ವಿಯೋಗದಿಂದ, ಹಿಂದೀ ಜನತೆಯು ದುಃಖ ಸಾಗರದಲ್ಲಿ ಮುಳುಗಿದೆ. ಇಡೀ ಭರತಖಂಡ ವಲ್ಲ ದುಃಖದಿಂದ ಮ್ಲಾನವಾಗಿರುವ ಒಂದು ಮುಖವು ಇಂದಿಗಲ್ಲ ಇಷ್ಟು ಬಿರುಸಾದ ದುಃಖದ ಹಾಹಾಕಾರವು ಹೋದ ೫೦-೬೦ ವರ್ಷಗಳಲ್ಲಂತೂ ಎಂದೂ ಕೇಳಿ ಬಂದದ್ದಿಲ್ಲ. ಹಿಂದುಸ್ಥಾನದೊಳಗಿನ ಪ್ರತಿಯೊಂದು ಪಟ್ಟಣವೂ ಪ್ರತಿಯೊಂದು ಹಳ್ಳಿಯೂ, ಸೂತಕದಲ್ಲಿದೆ. ಲೋಕ ಮಾನ್ಯರ ದರ್ಶನವು ಎಂದೂ ಆಗದಿದ್ದ ಹಳ್ಳಿ ಗಳೊಳಗಿನ ಜನರ ಕಣ್ಣುಗಳೊಳಗಿಂದ ಅಶ್ರು ಧಾರೆಯು ಸುರಿಯುತ್ತಿದೆ. ಇಷ್ಟು ಬಲವತ್ತರ ವಾದ ದುಃಖದ ಆಘಾತವು ಜನತೆಗೆ ಯಾಕಾ ಗಿದೆ? ಶ್ರೀಮಂತರ, ಬಡವರ, ವ್ಯಾಪಾರಿಗಳ ಒಕ್ಕಲಿಗರ, ದೊಡ್ಡವರ, ಸಣ್ಣವರ, ಆರ್ತಸ್ವ ರವು ಇಂದಿಗೆ ಯಾಕೆ ಕೇಳಬರುತ್ತದೆ? ಲೋಕಮಾನ್ಯರೊಳಗೂ, ಜನತೆಯೊಳಗೂ ಬಿಗಿಯಾದ ಪ್ರೇಮಬಂಧನವು ಯಾವ ಕಾರಣ ದಿಂದುಂಟಾಗಿತ್ತು? « ವ್ಯತಿಷಜತಿ ಪದಾರ್ಥಾ ನಾಂತರಃ ಕೋಽಪಿ ಹೇತುಃ” ಎಂದು ನಮಗು

“ಅಂತರಃ ಕೋಽಪಿ ಹೇತುಃ”

ಅಂದರೆ, ಯಾವದೋ ಒಂದು ಅಂತಃಶಕ್ತಿಯ ಕಾರಣವು ಇದರೊಳಗೆ ಒಳಗೊಂಡಿದೆಂದ ಹೇಳಬೇಕಾಗಿದೆ. ಕಾರಣವು ಅಗಮ್ಯವದೆ ಇಷ್ಟು ಅತರ್ಕ್ಯವದೆ. ಅಷ್ಟು ಅಗಾಧವದೆ ಕವಿಗಳಿಗೆ ಸಹ “ಏನೊಂದು, ಏನೊಂದು' ಎಂತಲೇ ಅದನ್ನು ಬಣ್ಣಿಸಬೇಕಾಗಿದೆ. ಪ್ರೀತಿ ಪಾಶಗಳಿಂದ ಜನತೆಯು ಮತ್ತು ಈ ಪುಣ್ಯಾ ತ್ಮರ ಅಂತಃಕರಣಗಳು ಬಿಗಿಯಾಗಿ ಕಟ್ಟಲ್ಪ ಟ್ಟದ್ದವು. ನಿರ್ದಯವಾದ ಕಾಲನು ಹರನ ಬಾಣದ ಕತ್ತರಿಯಿಂದ ಪಾಶವನ್ನು ಒಮ್ಮೆಗೇ ಕತ್ತರಿಸಿದ ಕೂಡಲೇ, ಜನತೆಗೆ ಅಸಹ್ಯ ವೇದ ನೆಗಳಾಗದೆ ಹ್ಯಾಗಿರುವವು? ಲೋಕದ ಶರೀರಿ ಕರ ಮನೋಧರ್ಮವು ಅದಕ್ಕಾಗಿ ಅದು ನಮಗೆ ಇಂದಿಗೆ ಇಷ್ಟು ತೀವ್ರವಾಗಿ ಪೀಡಿ ಸುತ್ತದೆ. ಅಜ್ಞಾನಿ ಜನತೆಯು ಅಸಹಾಯತೆ ಯೊಳಗೆ ಅದನ್ನು ಸಹಿಸಲೇ ಬೇಕು

ಈ ರಾಷ್ಟ್ರೀಯ ದುಃಖದೊಳಗೆ

❋ ಸ್ವೈ॥ ವಾ॥ ಲೋಕಮಾನ್ಯ ಬಾಳ ಗಂಗಾಧರ ಟಿಳಕ. ❋

ನಮ್ಮ ಸಾಂತ್ವನನನ್ನು ನಾವೇ ಮಾಡಿಕೊಳ್ಳಬೇಕು. ನಮ್ಮ ಕೈಯಲ್ಲಿದ್ದ ಉಪಾಯಗಳನ್ನು ಶೋಧಿಸಿ ನೋಡುವದು, ಆ ಮಹಾಕರ್ಮಯೋಗಿಗಳ ಭಕ್ತರಾದ ನಮ್ಮೆಲ್ಲರ ಕರ್ತವ್ಯವದೆ. "ಧೀರಃ ತತ್ರ ನ ಮುಹ್ಯತಿ' ಎಂದ ಭಗವಂತನ ಹೇಳಿಕೆಯನಷ್ಟೇ ಎಲ್ಲ ಲೋಕಮಾನ್ಯರು ತಮ್ಮ ಐಹಿಕ ಚಾರಿತ್ರ್ಯದಿಂದ ಅದರ ಅನುಕರಣೆಯನ್ನು ಹ್ಯಾಗೆ ಮಾಡಬೇಕೆಂದು ನಮಗೆ ಆತ್ಮಶಕ್ತಿಯಿಂದ ತೋರಿಸಿದವರು. ಇನ್ನು ನಾವು ಶೋಕವನ್ನು ನಿಯಮಿಸಿ 'ಧೀರ' ವೃತ್ತಿಯನ್ನು ಸ್ವೀಕರಿಸಬೇಕಾಗಿದೆ ಇಂಥ ಸಂಯಮವು ನಮಗೆ ಅಸಾಧ್ಯವೆಂದು ಹೇಳಿದರೆ, ನಾವು ಅವರ ಅನುಯಾಯಿಗಳಾಗಲಿಕ್ಕೆ ಅಪಾತ್ರರಾಗುವೆವು ಅವರ ಧರ್ಮದ ಮರ್ಮವು, ನಮಗೆ ತಿಳಿಯಲಿಲ್ಲೆಂದು ಹೇಳಬೇಕಾಗುವದು.

ಇನ್ನು ಅವರ ಚಾರಿತ್ರ್ಯದ ಪಠಣದಿಂದ, ಅವರ ಮನನದಿಂದ, ಅದರ ಅನುಕರಣೆಯಿಂದ, ಅವರಿಗೆ ನಾವು ಕೊಡತಕ್ಕ ಸಾಲವನ್ನು ತೀರಿಸಬೇಕಾಗಿದೆ. ದುಃಖಸಾಂತ್ವನದ ನಿಜವಾದ ಉಪಾಯವು ಇದೇ. ಲೋಕಮಾನ್ಯ ಟಿಳಕರೆಂದರೆ, ಅವರೇನು

ಬರೆ ವ್ಯಕ್ತಿಯಾಗಿದ್ದಿಲ್ಲ.

ಅದೊಂದು ರಾಷ್ಟ್ರೀಯತನದ ಮೂರ್ತಿಮಂತ ಶಕ್ತಿಯಾಗಿತ್ತು. ಅದಕ್ಕಾಗಿಯೇ ಅವರಿಗೆ, ಅವರ ಚರಿತ್ರಕರ್ತರು, ರಾಷ್ಟ್ರೀಯತ್ವದ ಜನಕರು (*A nation builder, Father of nationalism*) ಎಂದು ಯಥಾರ್ಥವಾಗಿ ಬಣ್ಣಿಸಿರುವರು. ಅವರ ಚಾರಿತ್ರ್ಯದೊಳಗೆ ಅನೇಕ ಅಂಗಗಳಿವೆ. ಅವರ ಒಂದೊಂದೇ ಅಂಗವನ್ನು ನೋಡಿದರೆ, ಜಗತ್ತಿನೊಳಗಿನ ಮಹಾಪುರುಷರೊಳಗೆ ಎಂಥ ಉಚ್ಚ ಪದವಿಯನ್ನು ಅವರು ಅಲಂಕರಿಸಿದ್ದರೆಂದು ತಿಳಿದು ಬರುವದಾಗಿದೆ. ವಿದ್ವಾಂಸರೆಂಬ ನಾತೆಯಿಂದ ಅವರ ಚರಿತ್ರವನ್ನು ನೋಡಿದರೆ, ಅವರು

ಅಸಾಮಾನ್ಯ ಬುದ್ಧಿಶಕ್ತಿಯ

ಪುರುಷರಾಗಿದ್ದರೆಂದು ಕಂಡುಬರುವದು. ಅವರ "ಓರಾಯನ", "ಆರ್ಯರ ಮೂಲಸ್ಥಾನ", "ಗೀತಾರಹಸ್ಯ" ಈ ಮೂರು ಗ್ರಂಥಗಳನ್ನು ಅವಲೋಕಿಸಿದರೆ, ಇತಿಹಾಸ ಸಂಶೋಧನದಂಥ ಶಾಸ್ತ್ರದಲ್ಲಿ ಅವರು ಎಷ್ಟು ಪಾರಂಗತರಿದ್ದರು, ವೇದಾಂತ ಶಾಸ್ತ್ರದ, ಪುರಾಣ ಮತ್ತು ಆಧುನಿಕ ಸಿದ್ಧಾಂತಗಳ ಆಕಲನವನ್ನು ಅವರೆಷ್ಟು ಮಾಡಿದ್ದರೆಂದು, ಅವರ ಅತ್ಯುತ್ತಮ ಗ್ರಂಥಗಳೇ ಹೇಳುವವು ಇವರ ಗ್ರಂಥಗಳನ್ನು ನೋಡಿ ಪಾಶ್ಚಾತ್ಯ ವಿದ್ವಾಂಸರು ಚಕಿತರಾಗಿರುವರು. ಸಾರಾಂಶ ಇವರ ಬುದ್ಧಿಶಕ್ತಿಯು ಬಹಳ-ತೀಕ್ಷ್ಣವಾಗಿತ್ತು. ಅನುಪಮೇಯವಾಗಿತ್ತು. ಗಣಿತ ಶಾಸ್ತ್ರದಲ್ಲಿ ಇವರು ಪಾರಂಗತರಿದ್ದರೆಂದು, ಶಾಸ್ತ್ರಜ್ಞರು ಇವರನ್ನು ಯಾವಾಗಲೂ ಹೊಗಳುತ್ತಿದ್ದರು. ದೃಗ್ಗಣಿತದಂತೆ ಪಂಚಾಂಗಗಳನ್ನು ಶುದ್ಧಮಾಡಬೇಕೆಂದು ಇವರು ಅವ್ಯಾಹತ ದುಡಿಯುತ್ತಿದ್ದರು. ಮಂಡಲೆಯೊಳಗಿನ ಕಾರಾಗೃಹದಲ್ಲಿದ್ದಾಗ ಗಣಿತ ಶಾಸ್ತ್ರದೊಳಗಿನ ತೀರ ಕಠಿಣವಾದ ಪ್ರಮೇಯಗಳನ್ನು ಸ್ವತಂತ್ರ ಪದ್ಧತಿಯಿಂದ ಇವರು ಬಿಡಿಸಿದ್ದನ್ನು ನೋಡಿ, ಗಣಿತ ಶಾಸ್ತ್ರಜ್ಞರು ಬೆರಗಾಗಿರುವರು. ಅವರ ಬುದ್ಧಿಶಕ್ತಿಯೊಳಗೆ ಅಗಾಧವಾದ ವಿವಿಧತೆಯು ಇತ್ತು ಇಂಥ ಅದ್ವಿತೀಯರಾದ

ವಿದ್ವನ್ಮಣಿಗಳು,

ಶಾರದಾ ದೇವಿಯ ಸೇವೆಯೊಳಗೇ ಮಗ್ನರಾಗಿ ಉಳಿಯದೇ, ವ್ಯವಹಾರಿಕ ರಾಜಕಾರಣವನ್ನು ಕೈಕೊಂಡಿದ್ದರು. ಹಿಂದೀ ರಾಜಕಾರಣದ ಸ್ಥಿತಿಯು ಎಷ್ಟು ವಿಚಿತ್ರವದೆ, ಎಷ್ಟು ಕಂಟಕಮಯವದೆಂದು, ಹತಭಾಗಿ ಹಿಂದೀ ಮುಖಂಡರೆಲ್ಲರು ಬಲ್ಲರು. ರಾಜಕೀಯ ನಾಯಕರೆಂಬ ಇವರ ಚರಿತ್ರದ ವಿಭಾಗವು ಹಿಂದೀ ಲೋಕಶಾಹಿಯ ಕಾದಾಟದ, ಕಳೆದ

ಅರ್ಧ ಶತಕದ ಇತಿಹಾಸವೇ,

ಆಗಿರುವದು ಇಂಥ ಕಾದಾಟದೊಳಗೆ ಅವರ, ನಾಯಕತನದ ಸತ್ವಪರೀಕ್ಷೆಯು ಅನೇಕ ಸಾರೆ ಆಯಿತು. ನಿಜವಾದ ಲೋಕಾಗ್ರಣಿಗಳು, ಧೀರೋದಾತ್ತ ನಾಯಕರು, ಯಥಾರ್ಥತಃ ಲೋಕಮಾನ್ಯರೆಂದು ಇಂಥ ಸತ್ವಪರೀಕ್ಷಣಗಳಿಂದಲೇ ಇವರು ಖ್ಯಾತಿಹೊಂದಿದರು. ಇವರ ರಾಜಕೀಯ ಚರಿತ್ರದೊಳಗೆ, ಇವರೊಳಗಿದ್ದ ಅತ್ಯುಜ್ವಲ, ಅತ್ಯುದಾತ್ತ ಸದ್ಗುಣಗಳ ದೇದೀಪ್ಯಮಾನ ಪ್ರಭೆಯು ತೋರಬಿದ್ದಿತು.

ಅವರ ರಾಜಕೀಯ ಚಾರಿತ್ರ್ಯವನ್ನು ಅವರ್ಣನೀಯವಾಗಿ ಪ್ರಕಾಶಮಯಮಾಡಿದಂಥ ತೇಜೋರಾಶಿಯು. ಅವರ ಗುಣಕಿರಣ ಸಮುಚ್ಚಯವು, ಆಂಗ್ಲಕವಿ ಶಿರೋಮಣಿಗಳ,

'This is the man'

ಎಂಬ ನುಡಿಗಳಿಂದ ಬಣ್ಣಿಸಿದರೆ, ನೂರು ಗುಣಗಳೊಳಗಿನ ೯೦ ಗುಣಗಳ ಕಲ್ಪನೆಯನ್ನು ಕೊಟ್ಟಂತಾಗಿ, ಅವುಗಳ ಅಪೂರ್ಣತೆಯಿಂದ ಸತ್ಯದ ತೃಪ್ತಿಯಾಗದು. ೧೮೮೦ ನೇ ಇಸವಿಯಿಂದ ಇಂದಿನ ತನಕ ಈ ೪೦ ವರ್ಷಗಳಲ್ಲಿ, ಹಿಂದೀ ಲೋಕಮತದೊಳಗೆ, ಹಿಂದೀ ರಾಜಕಾರಣದೊಳಗೆ, ಎಷ್ಟು ಫಲದಾಯಕ ಸ್ಥಿತ್ಯಂತರವಾಗಿದೆ, ಸಜೀವತೆಯುಂಟಾಗಿದೆ, ಧೈರ್ಯವೂ, ಸ್ಥೈರ್ಯವೂ, ಎಷ್ಟು ಉತ್ಪನ್ನವಾಗಿದೆಂದು, ಸೂಕ್ಷ್ಮರೀತಿಯಿಂದ ನಿರೀಕ್ಷಣ ಮಾಡಿದರೆ, ಅವರ ಚಾರಿತ್ರ್ಯದ ಮಹಿಮೆಯು ಅವರ ರಾಷ್ಟ್ರೀಯತ್ವವು, ಅವರ ದಿವ್ಯಗುಣಗಳ ಪ್ರತಿಭಾಶಕ್ತಿಯು, ಮತ್ತಿಷ್ಟು ಯಥಾರ್ಥವಾಗಿ ಊಹಿಸಲಿಕ್ಕಾಗುವದು. ಅವರೊಳಗಿನ ಅತ್ಯುತ್ಕಟ ದೇಶಭಕ್ತಿಯು, ಅಕೃತ್ರಿಮ ಮಾತೃಭೂಮಿಯ ಪ್ರೀತಿಯು, ಅವರ ಅಸಾಮಾನ್ಯ ಕಾರ್ಯತತ್ಪರತೆಯು, ಅವರ ಅತಿ ವ್ಯಾಪಕ ಸ್ವಾರ್ಥತ್ಯಾಗವು, ಅವರ ಕರಾರೀ ಸ್ವಭಾವವು ದೃಢನಿಶ್ಚಯವು, ಅವರ 'ವಿಪದಿ ಧೈರ್ಯಮ್' ಎಂದು ಹೇಳುವ ಧೀರತೆಯು '*The man*' ಎಂಬ ಶಬ್ದದೊಳಗೆ ಗರ್ಭಿತವಾಗುವವೇನು! *Great men stamp their mind upon their age and nation*, ಎಂದು ವಿಖ್ಯಾತ ಗ್ರಂಥಕಾರ ಸ್ಮಾಯಿಲ್ಸರವರು ಹೇಳುವ ಸಿದ್ಧಾಂತದ ಪ್ರತ್ಯಯವು, ಇವರ ಜೀವನ ಚರಿತ್ರದಿಂದ ಹಿಂದೀಜನಕ್ಕೆ ಬಂದಿದೆ. ಇವರ ರಾಜಕೀಯ ತತ್ವಗಳೆಂದರೆ, ಒಂದು ಧರ್ಮವೇ ಆಗಿತ್ತು. ಅದಕ್ಕೆ ಇಂದಿನಿಂದ ನಾವು

'ಟಿಳಕ ಧರ್ಮ'

ವೆಂದು ಕರೆಯುವೆವು. ಕರ್ಮಯೋಗವೇ ಈ ಧರ್ಮದ ಮೂಲಾಧಾರವು. ಎಲ್ಲ ಮತಗಳಿಗೆ, ಎಲ್ಲ ಪಂಥಗಳಿಗಿರುವಂತೆ ಈ ಟಿಳಕ ಮತಕ್ಕೂ ಪ್ರತಿಪಕ್ಷವದೆ. ಎಲ್ಲ ಮತಸ್ಥಾಪಕರಂತೆ, ಟಿಳಕಮತವು ಅನ್ಯ ಮತಗಳನ್ನು ಖಂಡಿಸಿದೆ. ಒಟ್ಟಾರೆ, ಕರ್ಮಯೋಗ ಶಾಸ್ತ್ರದ ಜನಕರು ಒಂದು ವಿಧದ ರಾಜಕೀಯ ಧರ್ಮವನ್ನೇ ಸ್ಥಾಪಿಸಿರುವರು. ಅದೇ ಟಿಳಕಧರ್ಮವು. ಅದರ ಸ್ಥಾಪಕರು, ಪ್ರವರ್ತಕರು ಲೋಕಮಾನ್ಯ ಟಿಳಕರು. ಭಗವದ್ಗೀತೆಯೊಳಗೆ 'ಮಮ ತೇಜೋಂಶ ಸಂಭವಮ್' ಎಂದು ಭಗವಂತನು ಹೇಳಿದ ಸತ್ವಶಾಲಿ ವಿಭೂತಿಯು ಅವರಾಗಿದ್ದರು. ಅದರಿಂದಲೇ ಅವರ ಚರಿತ್ರವು ಅಷ್ಟು ಪುಣ್ಯಪ್ರದವಾಗಿದೆ, ಫಲಪ್ರದವಾಗಿದೆ, ಉದಾರವಾಗಿದೆ, ಗಹನವಾಗಿದೆ.

ಇನ್ನು ಲೋಕಮಾನ್ಯರ ಅವತಾರವು ಸಮಾಪ್ತಿಯಾಯಿತು. ಟಿಳಕ ಮೂರ್ತಿಯು ಅಂತರ್ಧಾನ ಹೊಂದಿತು, ಕರ್ಮಯೋಗಿಯು ಸಮಾಧಿಸ್ಥನಾದನು, ಅವರ ಸ್ಥೂಲ ದೇಹವು ಪಂಚಭೂತಗಳೊಳಗೆ ಸೇರಿತು. ಮೂರ್ತಿಯು ಅಳಿಯಲು, ಕೀರ್ತಿಯು ನಾಲ್ಕೂ ದಿಕ್ಕಿನಲ್ಲಿ ಪ್ರಜ್ವಲಿತವಾಗಿದೆ. ಟಿಳಕ ಧರ್ಮವು ಸೋಜ್ವಲವಾಗಿದೆ; ಅದಷ್ಟು ಅಜರಾಮರವದೆ; ಅದಕ್ಕೆ

❀ ಶ್ರೀ॥ ವಾ॥ ಲೋಕಮಾನ್ಯ ಬಾಳ ಗಂಗಾಧರ ಟಿಳಕ. ❀

ಎಂದೆಂದೂ [illegible] ರಾಷ್ಟ್ರ [illegible] ಗಿನ ಹೋಮಕುಂಡವು, [illegible] ಈ [illegible]

ಪ್ರತ್ಯೇಕ ವ್ಯಕ್ತಿ

ಅನಿರುದ್ಧ [illegible] ಹೆಸರನ್ನು [illegible] ಸಾರ್ವಜನಿಕ [illegible] ಮಾಡಿ. [illegible] ಬಿಸಿ, ಅವರ ಪರಿ [illegible] ವೇಕು. ಅದರಿಂದ [illegible] ಬಿಸಬೇಕು ಅವರ [illegible] ತಿಯನ್ನು ಪಡೆಯುವ [illegible] [illegible]

ಅದೇ ರಾಷ್ಟ್ರೀಯ ಘೋಷವು.

ಅವರ ಪ್ರೀತಿಯ ಸಾಮ್ರಾಜ್ಯದ ಸುಖಲೋಕವು ಈ ರಾಷ್ಟ್ರೀಯ ಧರ್ಮವನ್ನು ನಿರಂತರ ಆಚರಿಸುತ್ತಿರುವದೇ ಈಗಿನ ನಮ್ಮ ಕರ್ತವ್ಯವು. ಅವರ ಸ್ಫೂರ್ತಿಗಾಗಿ, ನಮ್ಮ ಲೋಕಮಾನ್ಯರ ಮನಸ್ಸಿನ ಉದ್ಧರಣೆಗಾಗಿ, ಇಂದಿನ 'ಟಿಳಕಮಹಾರಾಜಕೀ ಜಯ, ಹಿಂದಮಾತಾಕೀ ಜಯ' ಎಂಬ ಜಯಘೋಷವನ್ನು ಮಾಡುವ [illegible]

॥ ಲೋಕಮಾನ್ಯ ಟಿಳಕ ಮಹಾನುಭಾವರ ಚರಿತ್ರೆ ॥

ಲೋಕಮಾನ್ಯ [illegible] [illegible] ಕಾಲದಲ್ಲಿ [illegible] ಜಾತಿಯ [illegible] ಬಾಲ್ಯದಲ್ಲಿ [illegible] ಕು ಮೊದಲಿನ [illegible] ಉಂಟಾದಾಗಿನಿಂದ ತಮ್ಮ [illegible] ನೇ ವರ್ಷದಲ್ಲಿ, ಇವರು ಪಿತೃಸುಖಕ್ಕೆ ಎರವಾದರು. ಅದರೂ ಪ್ರವೇಶ ಪರೀಕ್ಷೆ [illegible] ಪುಣೆಯ ಡೆಕ್ಕನ್ ಕಾಲೇಜಿನಲ್ಲಿ [illegible] ತಮ್ಮ [illegible] ನೇ ವರ್ಷದ ವಯಸ್ಸಿನಲ್ಲಿ ಇವರು ಪ್ರಜ್ಞಾಯುಕ್ತರಾದರು. [illegible] ಯನ್ನೇ ಅಭ್ಯಾಸ ಮಾಡಿ, ೧೮೭೯ ರಲ್ಲಿ ಎಲ್. ಎಲ್. ಬಿ. ಡಿಗ್ರಿಯನ್ನು ಸಂಪಾದಿಸಿದರು. ಇದೇ ಪ್ರವೃತ್ತಿಕಾಲದ ವಯಸ್ಸಿನಲ್ಲಿ, ತರುಣ ಅಂತಃಕರಣಗಳಲ್ಲಿ ಭಾವೀ ಆಕಾಂಕ್ಷೆಗಳು ಮನೋರಾಜ್ಯವೆಬ್ಬಿಸುವಾಗ, ಇವರಿಗೆ ಶ್ರೀ॥ ಆಗರಕರರು ಕೂಡಿದರು. ಇವರಿಬ್ಬರೂ ಉತ್ಸಾಹಿ ತರುಣರು ಸರಕಾರೀ ನೌಕರಿಯ ಮೋಹವನ್ನು ಧಿಕ್ಕರಿಸಿ, ಅಗ್ಗ ಶಿಕ್ಷಣದ ಪ್ರಸಾರಕ್ಕಾಗಿ ಒಂದು ಹೈಸ್ಕೂಲ, ಮತ್ತು ಒಂದು ಕಾಲೇಜನ್ನು ಸ್ಥಾಪಿಸುವ ಉದ್ಯೋಗದಲ್ಲಿ ತೊಡಗಿದರು. ಮೊಟ್ಟಮೊದಲು ಇವರಿಗೆ ತಕ್ಕ ಉತ್ತೇಜನ ಸಿಗಲಿಲ್ಲ, ಆದರೆ ಮುಂದೆ ಪ್ರಸಿದ್ಧ ಮರಾಠೀ ಲೇಖಕರಾದ, ಶ್ರೀ ವಿಷ್ಣುಶಾಸ್ತ್ರಿ ಚಿಪಳೂಣಕರರು ಇವರಿಗೆ ಬಂದು ಕೂಡಲು, ಈ ಕಲ್ಪನೆಗೆ ಮೂರ್ತಸ್ವರೂಪ ಬಂದು ಪುಣೆಯ ಈಗಿನ ನ್ಯೂ ಇಂಗ್ಲಿಷ ಸ್ಕೂಲನೆಂಬ ಸಂಸ್ಥೆಯು ಸ್ಥಾಪನವಾಯಿತು. ಆ ಸಂಸ್ಥೆಯ ಆಗಿನ ಚಾಲಕರಾದ, ಟಿಳಕ, ಚಿಪಳೂಣಕರ, ನಾಮ-ಜೋಶಿ ಆಗರಕರ ಮತ್ತು ಆಪಟೆ ಇವರೈವರು [illegible] ಮರಾಠಾ ಪಾಂಡವರೆಂತ ಪ್ರಸಿದ್ಧರಾದರು. ಈ ಪಾಂಡವರ ತುಂಬಿ ತುಳುಕುವ ಉತ್ಸಾಹಕ್ಕೆ ಶಾಲೆಯ ಸಂಕುಚಿತ ಕಾರ್ಯಕ್ಷೇತ್ರವು [illegible], ಇವರು ೨ ವರ್ತಮಾನ ಪತ್ರಗಳನ್ನು [illegible] ಚಿಪಳೂಣಕರರ ಆರ್ಯಭೂಷಣ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಹತ್ತಿದರು. [illegible] ಈಗಿನ 'ಕೇಸರಿ' ಮತ್ತು ಮರಾಠಾ ಪತ್ರ [illegible] ಈ ಬಾಲ ಪತ್ರಗಳ ಚಾಲಕರಿಗೆ, ಆರಂಭದಲ್ಲೇ ತಮ್ಮ ನಿರ್ಭೀತ ಟೀಕೆಯ ಪರಿಣಾಮಗಳಿಗೆ ಎದುರಾಗಬೇಕಾಯಿತು. ಕೊಲ್ಹಾಪುರದ ಛತ್ರಪತಿ ಶಿವಾಜಿ ಮಹಾರಾಜರ ಕಷ್ಟ ವರ್ತನದ ಬಗ್ಗೆ, ಇವರು ಸಂಸ್ಥಾನದ ಕಾರಭಾರಿಗಳಮೇಲೆ ಧಿಟ್ಟತನದಿಂದ ಟೀಕೆ ಮಾಡಿದರು. ಇದರ ಬಗ್ಗೆ ಮುಂದೆ ಎದರಮೇಲೆ "ಅಬ್ರುನುಕ್ಸಾನಿ"ಯ ಖಟ್ಲೆಯಾಗಿ ಟಿಳಕ, ಆಗರಕರರಿಗೆ [illegible] ತಿಂಗಳ ಸಾಧಾ ಕೈದಿನ ಶಿಕ್ಷೆಯು ವಿಧಿಸಲ್ಪಟ್ಟಿತು. ಇದೇ ಟಿಳಕರ ಮೊದಲನೆಯ ಶಿಕ್ಷೆಯು.

ಡೆ. ಎ ಸೊಸೈಟಿ.

ಕೈದಖಾನೆಯಿಂದ ಹೊರಬಿದ್ದ ಮೇಲೂ, ಈ ವೀರರು ತಮ್ಮ ದೇಶಾಭಿಮಾನದ ಕಾರ್ಯವನ್ನು ಹಾಗೆಯೇ ಎಡೆಬಿಡದೆ ಮುಂದೆ ಸಾಗಿಸಿ, ೧೮೮೪ ರಲ್ಲಿ ಡೆಕ್ಕನ್. ಎ. ಸೊಸೈಟಿಯ ಸ್ಥಾಪನೆ ಮಾಡಿದರು. ಮುಂದೆ ಇವರಿಗೆ ಕೇಳಕರ, ಗೋಖಲೆ ಮೊದಲಾದ ಮಹತ್ಪ್ರೇಮಿಗಳವರು ಕೂಡಿದ ಬಳಿಕ, ೧೮೮೫ ರಲ್ಲಿ ಈಗಿನ ಫರ್ಗ್ಯೂಸನ ಕಾಲೇಜದ ವಿದ್ಯಾಮಂದಿರವು ಸ್ಥಾಪನೆಯಾಯಿತು. ಕೆಲ ಕಾಲದಮೇಲೆ ಈ ಪಾಂಡವರಲ್ಲಿ ಕೆಲ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಮೇಲೆ ಮತಭೇದವಾಗಿ, ಆಗರಕರ ಮೊದಲಾದವರು ವರ್ತಮಾನ ಪತ್ರಗಳ ಸಂಬಂಧವನ್ನು ಬಿಟ್ಟರು. ಹೀಗೆ ಟಿಳಕರೊಬ್ಬರೇ ಕೇಸರಿ, ಮರಾಠಾ ಪತ್ರಗಳ ಚಾಲಕರಾದರು.

ವೇದಾಧ್ಯಯನವು.

ಇದೇ ಸಮಯದಲ್ಲಿ ಈ ದೀರ್ಘೋದ್ಯೋಗಿಗಳು, ಎರಡು ವರ್ತಮಾನಪತ್ರಗಳ ಮತ್ತು ಒಂದು ಕಾಯಿದೇ ವರ್ಗದ ಚಾಲಕರಿದ್ದು, ಅವಸರ ಸಿಕ್ಕಿದಾಗ, ವೇದಾಧ್ಯಯನದ ಕಡೆಗೆ, ಶೋಧಕ ಬುದ್ಧಿಯಿಂದ ಲಕ್ಷ್ಯ ಕೊಡುತ್ತಿದ್ದರು. ಇವರು ಸ್ವತಂತ್ರ ವಿಚಾರದಿಂದ ವೇದಗಳ ಪರಿಶೀಲನೆ ಮಾಡಿ, ತಮ್ಮ ಶೋಧಗಳ ಸಾರವನ್ನು ೧೮೯೨ ರಲ್ಲಿ ಲಂಡನ ಶಹರದಲ್ಲಿ ಕೂಡಿದ ಪೌರ್ವಾತ್ಯ ಶಾಸ್ತ್ರಗಳ ಅಂತರ್‌ರಾಷ್ಟ್ರೀಯ ಪರಿಷದಿಗೆ ಕಳಿಸಿದರು. ಇದೇ ಸಾರವನ್ನು ಮುಂದೆ ಇವರು ಓರಾಯನ್ ಅಥವಾ ವೇದಕಾಲ ನಿರ್ಣಯವೆಂಬ ಹೆಸರಿನಿಂದ ಪ್ರಕಟಿಸಿದರು.

ರಾಜಕೀಯ ವಿಷಯಗಳ ಅಭಿರುಚಿ

ಆ ಮೇಲೆ ಅವರು ರಾಷ್ಟ್ರೀಯ ಸಭೆಗೆ ಕೂಡಿ, ೫ ವರ್ಷಗಳವರೆಗೆ ಡೆಕ್ಕನ್ ಸ್ಟ್ಯಾಂಡಿಂಗ ಕಮಿಟಿಯ ಸೆಕ್ರೆಟರಿಗಳಿದ್ದರು. ಶ್ರೀ ಎಮ್. ಮೆಹತಾರವರ ಅಧ್ಯಕ್ಷತೆಯು ಪುಣೆಯಲ್ಲಿ ಪೂರ್ಣ ಯಶಸ್ಸಿನಿಂದ ಕೂಡಿದ ಪ್ರಾಂತಿಕ ಸಭೆಯು, ಇವರ ಚಾಲಕತ್ವದಲ್ಲೇ ಜರಗಿತು. ೧೮೯೫ ರಲ್ಲಿ ಪುಣೆಯಲ್ಲಿ ಕೂಡಿದ ೧೧ ನೇ ರಾಷ್ಟ್ರೀಯ ಸಭೆಯ ಸೆಕ್ರೆಟರಿಗಳಿದ್ದರು. ಇದೇ ಸಮಯ ಸಾಮಾಜಿಕ ಪರಿಷದವನ್ನು ಕೊಂಗ್ರೆಸ್ ಮಂಟಪದಲ್ಲಿ ಕೂಡಿಸುವ ಬಗ್ಗೆ, ಚಾಲಕರಲ್ಲಿ ಮತಭೇದ ಹುಟ್ಟಿದ್ದರಿಂದ, ಟಿಳಕರು ರಾಜೀನಾಮೆ ಕೊಟ್ಟರೂ, ಮುಂದೆ ಪರಿಷದೆಯ ಅಧಿವೇಶನಗಳು ಯಶಸ್ವಿಯಾಗಲಿಕ್ಕೆ ಸಹಾಯ ಮಾಡುತ್ತಲೇ ಇದ್ದರು. ೧೮೯೬ ನೇ ಇಸ್ವಿಯು ಡೆಕ್ಕನ್‌ದಲ್ಲಿ ದುರ್ಭಿಕ್ಷದ ವರ್ಷವು. ಆ ವರ್ಷ ಇವರ ಉದ್ಯೋಗಕ್ಕೆ ವಿಸ್ತೃತವಾದ ಕಾರ್ಯಕ್ಷೇತ್ರವು ಸಿಕ್ಕಿತು. ಪುಣೆಯಲ್ಲಿ ಅಗ್ಗ ಧಾನ್ಯದ ದುಕಾನುಗಳನ್ನೂ, ಸೊಲ್ಲಾಪುರ, ನಾಗಪೂರಗಳಲ್ಲಿ ಸರಕಾರದ ಸಹಕಾರಿತೆಯಿಂದ ದುಷ್ಕಾಳ ನಿವಾರಣೆಯ ಕೆಲಸಗಳನ್ನೂ ಹೊರಡಿಸಿ, ತಮ್ಮ ದೇಶಬಾಂಧವರಲ್ಲಿದ್ದ ಅತ್ಯುತ್ಕಟ ಪ್ರೇಮವನ್ನು ವ್ಯಕ್ತಮಾಡಿದರು. ಪುಣೆಯಲ್ಲಿ ಪ್ಲೇಗದ ಸಾಮ್ರಾಜ್ಯ ನಡೆದಾಗ ಸಹಾ, ಟಿಳಕರು ಅನ್ಯ ಧೀರು ಪ್ರಕೃತಿಯ ದೇಶ ಭಕ್ತರಂತೆ ನಗರ ಬಿಟ್ಟು ಪಲಾಯನ ಮಾಡದೆ, ದವಾಖಾನೆಯನ್ನು ಸ್ಥಾಪಿಸಿ, ಬಡಬಗ್ಗರಿಗೆ ತಕ್ಕ ಶುಶ್ರೂಷೆಯ ಅನುಕೂಲತೆ ಮಾಡಿದರು. ವೀರಪೂಜೆಯಿಂದ ರಾಷ್ಟ್ರಕಾರ್ಯದ ಉತ್ಸಾಹವು ಬೆಳೆಯುತ್ತದೆಂಬ ತತ್ವವನ್ನು ಇವರು ಹುಣಚಿ ಮನಗಂಡಿದ್ದರು. ಅದಕ್ಕಾಗಿ ತಮ್ಮ ಮಹಾರಾಷ್ಟ್ರ ಬಾಂಧವರ ಅಂತಃಕರಣಗಳಲ್ಲಿ ಸುಪ್ತ ದೇಶಾಭಿಮಾನದ ಜ್ಯೋತಿಯನ್ನು ಚೇತಿಸಲು, ಶಿವಾಜೀ ಪೂಜನವೇ ತಕ್ಕದ್ದೆಂದು ನಿಶ್ಚಯಿಸಿ, ಕ್ಲೈವನ ಸ್ಮಾರಕವನ್ನೆಬ್ಬಿಸಲು ದ್ಯುಕ್ತರಾದ ಕರ್ಝನ ಸಾಹೇಬರೇ ಮೊದಲಾದಿಯಲ್ಲಿ ರಾಯಗಡದಲ್ಲಿ ಶಿವಾಜಿ ಮಂದಿರವನ್ನು ಸ್ಥಾಪಿಸಿ, ಪ್ರತಿವರ್ಷ ಆ ಮಹಾತ್ಮರ ಜನ್ಮ ತಿಥಿಯನ್ನು ಭಜಿಸುವ ಸಾಂಪ್ರದಾಯವನ್ನಿಟ್ಟರು.

ಆದರೆ ೧೮೯೭ ನೇ ಇಸ್ವಿಯಲ್ಲಿ ಪುಣೆಯಲ್ಲಿ ಪ್ಲೇಗದ ಹಾವಳಿ ನಡೆದದ್ದರಿಂದ, ಈ ಉತ್ಸವವು ಶಿವಾಜಿಯ ಜನ್ಮ ತಿಥಿಯಲ್ಲಿ ಜರಗಲಾರದೆ, ರಾಜ್ಯಾಭಿಷೇಕ

❀ ಕೈ॥ ವಾ॥ ಲೋಕಮಾನ್ಯ ಬಾಳ ಗಂಗಾಧರ ಟಿಳಕ. ❀

...ಯಲ್ಲಿ ಬಹು ಸಂಭ್ರಮದಿಂದ ಜರಗಿಸಲಾಯಿತು. ...ಕ್ಷಣದಲ್ಲಿ ಆದಿಶ ಉಪನ್ಯಾಸಗಳ ಮತ್ತು ಕೆ... ...ವ ಪದಗಳ ಸ್ವಾದ್ಯಂತ ರಿಪೋರ್ಟು ಅದೇ ವರ್ಷದ ಜೂನ ೧೮ ನೇ ತಾರೀಖಿನ ಕೇಸರಿಯಲ್ಲಿ ಪ್ರಕಟಿಸಲ್ಪಟ್ಟಿತು. ಕರ್ಮಧರ್ಮ ಸಂಯೋಗದಿಂದ, ಅದೇ ೨೧ ನೇ ತಾರೀಖಿಗೆ ರೇಂಡಸಾಹೇಬರ ಕೊಲೆಯಾಯಿತು. ಈ ಕೊಲೆಗೂ, ಕೇಸರಿಯೊಳಗಿನ ಮೇಲಿನ ಲೇಖನಕ್ಕೂ ಸಂಬಂಧ ಜೋಡಿಸಲ್ಪಟ್ಟು, ಟಿಳಕರೇ ಅಂತಃಕರಣಗಳನ್ನು ಚೇತಿಸುವ ತಮ್ಮ ಲೇಖಗಳಿಂದ ಶರ...ಇದ ಮನೋವೃತ್ತಿಗಳನ್ನು ಅತ್ಯಾಚಾರದ ಕಡೆಗೆ ...ಸುತ್ತಾರೆಂಬ ಭಾವನೆಯಿಂದ, ಅವರಮೇಲೆ ಖಟ್ಲೆ ನಡೆಸಲ್ಪಟ್ಟಿತು. ಇದೇ ಟಿಳಕರಮೇಲಿನ ೧ ನೇ ಖಟ್ಲೆಯು. ಇದರ ಮೂಲಕ ಜೂನ ೨೭ ನೇ ತಾರೀಖಿಗೆ ಇವರು ಮುಂಬಯಿಯಲ್ಲಿ ಕೈದುಮಾಡಲ್ಪಟ್ಟರು. ಚೀಫ ಪ್ರೆ ಮ್ಯಾಜಿಸ್ಟ್ರೇಟರೂ, ಹೈಕೋರ್ಟ ನ್ಯಾಯಾಧೀಶರೂ ಇವರಿಗೆ ಜಾಮೀನದಮೇಲೆ ಬಿಡಲಿಲ್ಲ. ಅಗಸ್ಟ ೨ ನೇ ತಾರೀಖಿಗೆ ಹೈಕೋರ್ಟಿನ ...ಡೆ ಖಟ್ಲೆಯ ಚುನಾವಣೆಗೆ ಪ್ರಾರಂಭವಾಯಿತು. ಆಗ ಟಿಳಕರ ತರ್ಫೆನ ವಕೀಲರು ಬೆ. ದಾವರರಾಗಿದ್ದರೆಂಬುದನು ನೆನಪಿನಲ್ಲಿಡತಕ್ಕ ಸಂಗತಿಯು. ತಿರಿಗಿ ಪುನಃ ಆರೋಪಿಯರಿಗೆ ಜಾಮೀನಿನ ಮೇಲೆ ಬಿಡಬೇಕೆಂತ ಅರ್ಜಿ ಸಾದರಮಾಡಲು, ಆಗಿನ ...ತಂಪ್ಯುಬಿಯವರು. ಇಂಗ್ಲಂಡದೊಳಗಿನ ಕ್ರಿಮಿನಲ ಕೋರ್ಟುಗಳ ತತ್ತ್ವದಮೇಲೆ, ಕಾಯಿದೆಯ ವಿವೇಚನೆಯನ್ನು ಬೆಳಸಿ, ಆರೋಪಿಯರಿಗೆ ಜಾಮೀನಿನ ಮೇಲೆ ಬಿಟ್ಟರು. ಮುಂದೆ, ಆರು ಯುರೋಪಿಯನ್ನರೂ ಮೂರು ಹಿಂದೀ ಗೃಹಸ್ಥರೂ, ಹೀಗೆ ಜ್ಯೂರಿ ...ಮುಖವಾಗಿ, ಆ ಆರೂ ಯುರೋಪಿಯನ್ನರ ಬಹುಮತದಮೇಲೆ ಟಿಳಕರಿಗೆ ೧೮ ತಿಂಗಳ ಸಕ್ತ ಮಜೂರಿ ಶಿಕ್ಷೆ ವಿಧಿಸಲ್ಪಟ್ಟಿತು. ಫುಲ್ ಬೆಂಚಿನ ಕಡೆಗೂ ಪ್ರಿವ್ಹೀ ಕೌನ್ಸಿಲದ ಕಡೆಗೂ, ಅಪೀಲ ಮಾಡಿದರೂ, ಏನೂ ಫಲನಿಷ್ಪತ್ತಿಯಾಗಲಿಲ್ಲ. ಮುಂದೆ ವಿಲಾಯತಿಯಲ್ಲಿ ಈ ವಿಷಯ ಚಲವಲ ನಡೆದು, ಟಿಳಕರ ಮಿತ್ರ ಮೆಕ್ಸ ಮುಲ್ಲರ ಪ್ರಮುಖರು ಮಹಾರಾಣಿಯವರ ಹತ್ತರ ಅವರ ವಿದ್ವತ್ತೆಯ ಕಡೆಗೆ ನೋಡಿ ಸಾಮ್ರಾಜ್ಞಿಯವರ ಸಮಯ... ತಕ್ಕಿನ ನ್ಯಾಯ... ಕೂಡಬೇಕಾಗಿ ...ಪ್ಪಿಸಿ ಬೇಡಿಕೊಳ್ಳಲು, ೧೮೯೮ ನೇ ಇಸ್ವಿಯ ಸಪ್ಟಂಬರ ೬ ನೇ ತಾರೀಖಿಗೆ ಇವರಿಗೆ ಬಂಧ ವಿಮೋಚನವಾಯಿತು. ಈ ಎಲ್ಲಾ ಸಾರ್ವಜನಿಕ ಚಲವಲದ ದೀರ್ಘ ಅವಧಿಯಲ್ಲಿ, ಅವರು ತಮ್ಮ ಪ್ರಿಯ ವೇದಕಾಲ ಶೋಧನೆಯ ವ್ಯಾಸಂಗವನ್ನು ಎಂದೂ ಬಿಟ್ಟುಕೊಡಲಿಲ್ಲ. ಹತ್ತು ವರ್ಷಗಳೊಳಗೆ ವೇದಗಳ ಮೂಲಗ್ರಂಥಗಳನ್ನಷ್ಟೇ - ಅಲ್ಲ, ಅವುಗಳಮೇಲಿನ ಎಲ್ಲ ವಾರ್ತಿಕಮಾತ್ರ ಭಾಷ್ಯಗಳನ್ನು ಸಹ ಪೂರ್ಣವಾಗಿ ಮನನಮಾಡಿದಮೇಲೆ, ಆರ್ಯರ ಮೂಲಸ್ಥಾನವು ಆರ್ಕಟಿಕ್ ಮಹಾಸಾಗರದ ಪ್ರದೇಶವಲ್ಲೆಂತಲೂ, ಹಿಂದೆ ಇಂಟರಗ್ಲೇಶನ್ ಕಾಲದವರೆಗೆ ವೇದಗಳ ಉತ್ಪತ್ತಿ ಹಚ್ಚಬಹುದೆಂತಲೂ, ಕಂಡು ಹಿಡಿದರು.

ಈ ಬಗ್ಗೆ ಭೂಗರ್ಭ ಶಾಸ್ತ್ರದ ಮತ್ತು ಉತ್ಕ್ರಾಂತಿ ತತ್ವದ ಅತಿ ಅರ್ವಾಚೀನ ಶೋಧಗಳ ಆಧಾರಗಳನ್ನು ಕೊಟ್ಟು, "ದಿ ಆರ್ಕಟಿಕ್ ಹೋಮ ಇನ್ ದಿ ವೇದಾಸ್" ಎಂಬ ಹೊಸ ಗ್ರಂಥವನ್ನು ಬರೆದರು. ಈ ಗ್ರಂಥವೆಂದರೆ, ಟಿಳಕರ ವಿದ್ವತ್ತೆಯ ಮತ್ತು ಶೋಧಕ ಬುದ್ಧಿಯ ಜೀವಂತ ಸ್ಮೃತಿಯು. ಇಂಥ ಅಸಾಧಾರಣ ಶೋಧಕರಾದ ಟಿಳಕರೆಲ್ಲಿ! ಹಿಂದುಸ್ಥಾನದಲ್ಲಿ ರಾಜದ್ರೋಹದ ಆರೋಪದ ವಿರುದ್ಧ ಬಡಿದಾಡುವ ಟಿಳಕರೆಲ್ಲಿ! ನಿಜವಾಗಿ ಇದು ಹಿಂದುಸ್ಥಾನದ ದುರ್ದೈವವೇ ಸರಿ. ಮುಂದ ಭಾಗ್ಯದಿಂದ ಹಿಂದುಸ್ಥಾನದಲ್ಲಿ ಜನ್ಮ ತಾಳದೆ, ಬೇರೆ ಸ್ವತಂತ್ರ ರಾಷ್ಟ್ರಗಳಲ್ಲಿ ಜನಿಸಿದ್ದಾದರೆ, ಈ ಪ್ರಭಾಶಾಲಿಯು ಇಡೀ ಜಗತ್ತೆಲ್ಲಾ ಬೆಳಗಿಸುತ್ತಿದ್ದನು. ಈ ಮುಂದಿನ ಇವರ ಆಯುಷ್ಯವೆಂದರೆ, ಪ್ರಸಿದ್ಧ ತಾಯೀ ಮಹಾರಾಜರ ದತ್ತಕ ಪ್ರಕರಣದ ಇತಿಹಾಸವು. ಬಾಬಾ ಮಹಾರಾಜರೆಂದರೆ, ಪುಣೆಯ ೧ ನೇ ವರ್ಗದ ಒಬ್ಬ ಸರದಾರರು, ದಕ್ಷಿಣದ ಅತಿ ಪ್ರಾಚೀನ ಮನೆತನದಲ್ಲೊಂದರ ವಂಶಜರು. ಇವರು ಮೃತ್ಯು ಶಯ್ಯೆಯಮೇಲೆ ಬಿದ್ದಾಗ, ತಮ್ಮ ಜೀವಶ್ಚ ಕಂಠಸ್ಥ ಮಿತ್ರರಾದ ಟಿಳಕರಿಗೆ ಕರೆಸಿದ್ದು, ತಮ್ಮ ಹಿಂದೆ ಆಸ್ತಿಯ ವ್ಯವಸ್ಥೆ ಮಾಡಲು ಪಂಚರನ್ನಾಗಿ ನೇಮಿಸಿದರು.

(ಮುಂದುವರಿಯುವದು.)

ಇಹವೃತ್ತ.

ಕುಮಟಾ— ಮಳೆಯು ವಿಶೇಷವಿಲ್ಲ. ಇಷ್ಟರಿಂದಿಗೆ ೬೭.೨೧ ಇಂಚು ಆಯಿತು. ಬೆಳೆಯ ಸ್ಥಿತಿಯು ತತ್ಕಾಲಕ್ಕೆ ನೆಟ್ಟಗಿದೆ. ಘಟ್ಟದಿಂದ ಅಕ್ಕಿ ಬರಹತ್ತಿದೆ. ಧಾರಣೆ ಮಾತ್ರ ಏರಿದ್ದೇ ಉಂಟು.

ಮಹಾತ್ಮಾ ಗಾಂಧಿಗಳ ಅಪೇಕ್ಷೆಯಂತೆ "ಹರತಾಳ"ವು ಮುಹಮ್ಮದೀಯರು ಆಚರಿಸಿದರು. ಬತ್ತಾಯ ಹಿಂದ್ಯಾಕಾಗಲೊಲ್ಲದು, ಹಿಂದುಗಳೂ ಸಹ ಕಟ್ಟಕಡೆಗೆ ಅದನ್ನು ಆಚರಿಸಿದರು.

ಲೋಕಮಾನ್ಯರ ನಿಧನದ ವಾರ್ತೆಯು ಸೋಮವಾರವೇ ತಂತಿಯಿಂದ ಬಂದು, ಶೋಕಾಗ್ರಸ್ತರಾದ ಕೆಲ ಮುಂದಾಳುಗಳು ಎಲ್ಲ ದುಕಾನದಾರರಿಗೆ ಪೂರ್ವ ಸೂಚನೆಯನ್ನು ಕೊಟ್ಟು ತಾ. ೩ ನೇ ದಿವಸ ಇಡೀ ಬಾಜಾರು ದುಃಖ ಪ್ರದರ್ಶನಕ್ಕಾಗಿ ಬಂದ ಇಡಲ್ಪಟ್ಟಿತು. ಅದೇ ದಿವಸ ಸಾಯಂಕಾಲಕ್ಕೆ ಹೆಡ್ ಬಂದರದ ಧರ್ಮಶಾಲೆಯಲ್ಲಿ ರಾ॥ ರಾ॥ ವಕೀಲ ಶ್ರೀಪಾದರಾವ ಕಲ್ಯಾಣಪೂರಕರ ಬಿ. ಎ., ಎಲ್ ಎಲ್ ಬಿ ರವರ ಅಧ್ಯಕ್ಷತೆಯಲ್ಲಿ ನಾಗರಿಕರು ಕೂಡಿ ಅಧ್ಯಕ್ಷ, ರಾ॥ ರಾ॥ ಶೇಷಗಿರಿ ಕಾಮತ್ತ, ನಾರಾಯಣರಾವ ಕಾಮತ್ತರವರ ಸಮಯೋಚಿತ ಭಾಷಣಗಳಾಗಿ, ದುಃಖಪ್ರದರ್ಶನದ ಠರಾವು ಸರ್ವಾನುಮತದಿಂದ ಪಾಸುಮಾಡಿದ್ದಲ್ಲದೆ, ೮ ಪುಣ್ಯಾತ್ಮರ ಸಪಿಂಡೀಕರಣದ ದಿವಸ, ಇಲ್ಲಿಯ ಬಡಬಗ್ಗರಿಗೆ ಅವರ ಪ್ರೀತ್ಯರ್ಥ ಧರ್ಮ ಕೊಡಬೇಕೆಂಬ ನಿಶ್ಚಯ ಮಾಗಿ, ಆ ಕುರಿತು ವಂತಿಗೆ ಕೂಡಿಸುವ ಬಗ್ಗೆ ಒಂದು ಕಮಿಟಿಯೂ ಸಹ ನೇಮಕವಾಗಿದೆ.

ಈ ತಾಲೂಕ ಹೆಗಡೆಯಲ್ಲಿ ಸಹ ಲೋಕಮಾನ್ಯರ ನಿಧನದ ದುಃಖ ದುಃಖ ಪ್ರದರ್ಶನಕ್ಕಾಗಿ ಅಂಗಡಿಗಳು ಬಂದಮಾಡಿ, ಸಾಯಂಕಾಲಕ್ಕೆ ಸಭೆಸೇರಿ ಅವರ ಚರಿತ್ರವನ್ನು ಓದಿ, ಲೋಕಮಾನ್ಯರ ಹೆಸರಿನಿಂದ ಒಂದು ವಾಚನಾಲಯವು ತೆರೆಯುವ ಬಗ್ಗೆ ವಂತಿಗೆ ಕೂಡಿಸುತ್ತಿರುವದು ತಿಳಿಯುತ್ತದೆ. ಅದೇ ದಿವಸ ೮ ನಾಗರಿಕರು ವಂತಿಗೆಯಿಂದ ಒಟ್ಟುಗೂಡಿಸಿದ ೫೦. ಮಾಣಗಿ ಅಕ್ಕಿಯನ್ನು ಸಹ ಬಡಬಗ್ಗರಿಗೆ ಧರ್ಮ ಕೊಟ್ಟರು.

ಈ ತಾಲೂಕ ಗೋಕರ್ಣ ಕ್ಷೇತ್ರದಲ್ಲಿ ಈ ಮೊದಲು ಪ್ರತಿ ಜನವರಿ ೧ ರಿಂದ ಮಾರ್ಚ ಅಖೈರ ವರೆಗೆ ಮೂರು ತಿಂಗಳ ಫೋರ್ ಹಂಗಾಮಿಯಾಗಿ ಮುನ್ಸಿಪಾಲಿಟಿ ಕಾರಭಾರವು ನಡೆಯುತ್ತಿತ್ತು. ಆ ಮುದ್ದತ್ತು ಈಗ ವಾಢ್ಯಾಸಿ, ಇದೇ ಬರುವ ೧೯೨೦ ನೇ ಇಸವಿ ಲಾಗಾಯ್ತು, ಪ್ರತಿ ಅಕಟೋಬರ ೧ ರಿಂದ ಮೇ ಅಖೈರ ವರೆಗೆ ೮ ತಿಂಗಳ ಮುದ್ದತ್ತು ಮಾಡಿಯದೆ. ಇದರಿಂದ ಕ್ಷೇತ್ರದ ಸ್ವಚ್ಛತೆ, ಆರೋಗ್ಯಸ್ಥಿತಿಯ ಹೆಚ್ಚಿನ ಜವಾಬದಾರಿ ಆ ಸ್ವರಾಜ್ಯದ ಮೇಲೆ ಬಂತು.

(ಅಂಕೋಲೆಯ ಖಾತ್ರಿದಾರರಿಂದ)

ಹವಾಮಾನ ನೆಟ್ಟಗಿದೆ. ಮಳೆಯು ಈ ವರೆಗೆ ಚಲೋದಾಗಿ ನಡೆದಿದೆ. ಇನ್ನೂ ಸ್ವಲ್ಪ ಹೆಚ್ಚಿನ ಅವಶ್ಯಕತೆಯುಂಟು.

ಕಳೆದ ಸೋಮವಾರ ಸಾಯಂಕಾಲ ೨ ಘಂಟೆಗೆ ಮುಂಬಯಿಯಿಂದ ಲೋಕಮಾನ್ಯರ ನಿಧನದ ದುಃಖಕರ ವಾರ್ತೆಯು ತಂತಿದ್ವಾರಾ ಬಂದು ಮುಟ್ಟಿತು. ಕೂಡಲೇ ಊರೊಳಗೆ ನಾಲ್ಕು ದಿಕ್ಕಿಗೆ ಅದು ಹಬ್ಬಿ, ಪ್ರತಿ ಒಬ್ಬರು ಶೋಕಾಕುಲರಾದರು. ಒಂದು ಕ್ಷಣ ಸಹ ವಿಲಂಬ ಮಾಡದೇ, ಅಂಗಡಿಕಾರರು ಅಂಗಡಿಗಳನ್ನು ಮುಚ್ಚಿದರು. ಕಮ್ಮಾರರು, ಚಮಗಾರರು ಸಹ ತಮ್ಮ ತಮ್ಮ ಕೆಲಸಗಳನ್ನು ಅಲ್ಲಿಂದಲ್ಲೇ ಬಿಡಿಸಿ, ಲೋಕಮಾನ್ಯರ ದಂತೆ ರಹದಾರಿಯೊಳಗೆ ಗುಂಪುಗುಂಪಾಗಿ ನೆರೆದ ಜನ ಸ್ತೋಮದೊಳಗೆ ಸೇರಿದರು. ಸರ್ವತ್ರ ಹಾಹಾಕಾರ ವುಂಟಾಯಿತು.

ವ್ಯಾಪಾರವು ಪೂರ್ಣವಾಗಿ ಬಂದವಾದ ಮೂಲಕ, ಬಡಬಗ್ಗರು ತಮ್ಮ ಕೈವಾರಿಗಳೇ ದಿವಂಗತರಾದರೆಂದು ಶೋಕಾವಿಷ್ಟರಾಗಿ ತಾವಾಗಿ ಉಪೋಷಣ ಮಾಡಿದರು. ಪ್ರತಿ ಒಬ್ಬರ ಮುಖದಮೇಲೆ ದುಃಖದ ಕಳೆಯು ಕಾಣುತ್ತಿತ್ತು. ಮರುದಿವಸ ಜನರು ತಮ್ಮಷ್ಟಕ್ಕೇ ಕೂಡಿ ಲೋಕಮಾನ್ಯರ ಪುಣ್ಯಾತ್ಮಕ್ಕೆ ಸದ್ಗತಿ ದೊರೆಯಲೆಂದು ಅನ್ನದಾನ ಮಾಡಬೇಕೆಂಬ ಉದ್ದೇಶದಿಂದ ವಂತಿಗೆಯನ್ನು ಕೂಡಿಸ ಹತ್ತಿದರು. ಇಷ್ಟರಲ್ಲಿಗೆ ೧೦೦ ರೂಪಾಯಿ ಮೀರಿ ವಂತಿಗೆ ಕೂಡಿಯದೆ. ಎಲ್ಲರೂ ಅತ್ಯಂತ ಸಂತೋಷದಿಂದ ಸ್ವಯಂಸೇವಕರು ಬಾಗಿಲಲ್ಲಿ ಬಂದಕೂಡಲೇ, ವಂತಿಗೆಯನ್ನು ಕೊಡುತ್ತಿರುವರು. ಲೋಕಮಾನ್ಯರ ನಿಧನದ ೧೨ ನೇ ದಿವಸ ಬಡಬಗ್ಗರಿಗೆ ಅನ್ನದಾನ ಮಾಡುವದದೆ. ಈ ರಾಷ್ಟ್ರವೀರರ ನಿಧನದಿಂದುಂಟಾದ ಶೋಕದಂಥ ಶೋಕವು ಇಲ್ಲಿಯ ಜನರಿಗೆ ಈವರೆಗೆ ಉಂಟಾಗಿದ್ದಿಲ್ಲ.

ವಿವಿಧ ವರ್ತಮಾನ

ಆಯರ್ಲಂಡದ ಸುದ್ದಿಯು ಸಮಾಧಾನಕಾರಕವಿಲ್ಲ. ಬೆಲ್‌ಫಾಸ್ಟದಲ್ಲಿ ಮತ್ತೆ ದಂಗೆಗಳು ನಡೆಯುತ್ತಿರುವವು. ಗುಂಡುಗಳು ಹಾರಾಡುತ್ತಿರುವವು. ಮರಣ ಹೊಂದಿದ ಜನರ ಸಂಖ್ಯೆಯು ಕಡಿಮೆಯಿದ್ದರೂ ಘಾಯವಾದ ಜನರ ಸಂಖ್ಯೆಯು, ನೂರರ ಕಿಂತ ಹೆಚ್ಚಾಗಿರುವದೆಂದು ತಿಳಿಯುತ್ತದೆ. ಲಷ್ಕರೀ ಅಧಿಕಾರಿಗಳು ಶಾಂತತೆಯನ್ನು ತರುವದಕ್ಕೆ ಬಲವಾಗಿ ಮಶಿನಗನ್ನ ಉಪಯೋಗಿಸಹತ್ತಿರುವರಂತೆ!

ಲೋಕಮಾನ್ಯ ಟಿಳಕರ ಸ್ವರ್ಗಾರೋಹಣ !

ಅಲೌಕಿಕ, ಅನುಪಮೇಯ ಸ್ಮಶಾನಯಾತ್ರೆ !

(ನಮ್ಮ ಬಾತ್ಮೀದಾರರಿಂದ)

ಕಳೆದ ೧೦-೧೨ ದಿವಸಗಳಿಂದ ಇಡೀ ಮುಂಬಯಿ ಶಹರದಲ್ಲಿ ವಿಷಯವು ಒಂದೇ. ಎಲ್ಲಿಯೂ ಹೋಗಿರಿ, ಯಾರಿಗೂ ನೋಡಿರಿ, 'ಲೋಕಮಾನ್ಯರ ಪ್ರಕೃತಿ ಹೇಗೆ? ಜ್ವರ ಹ್ಯಾಗೆ? ನಾಡಿಮಾನ ಹ್ಯಾಗೆ?' ಹೀಗೆ ಪ್ರತಿಯೊಬ್ಬನು ಸರದಾರ ಗೃಹದಿಂದ ಬರ ಹೋಗುವವರಿಗೆ ಕೇಳುವವನೇ. ಲೋಕಮಾನ್ಯರು ತೀರ ಅಸ್ವಸ್ಥರಿದ್ದಾರೆಂದು ಕೇಳಿದ ದಿವಸದಿಂದಂತೂ ಘಳಿಗೆ ಘಳಿಗೆಗೆ ಅವರ ಪ್ರಕೃತಿಮಾನವನ್ನು ತಿಳಿದುಕೊಳ್ಳಲಿಕ್ಕೆ ಆತುರರಿದ್ದ ಜನಸ್ತೋಮವು ಬೆಳೆಯುತ್ತ ನಡೆದಿತ್ತು. ಬೆಳಗಿನ ೪ ಘಂಟೆಯಿಂದ ರಾತ್ರಿ ೧-೨ ಘಂಟೆ ವರೆಗೆ ಸರದಾರ ಗೃಹದ ಹತ್ತರ ಬರ ಹೋಗುವ ಟಿಳಕ ಭಕ್ತರ ಸಂದಣಿಯನ್ನು ನೋಡಿದರೆ, ಮುಂಬಾನಗರಿಯ ಆತ್ಮನೇ ಸರದಾರ ಗೃಹದಲ್ಲಿ ಅಸ್ವಸ್ಥನಿದ್ದಾನೆಂಬಂತೆ ಕಾಣುತ್ತಿತ್ತು. ಕಳೆದ ಗುರುವಾರದಿಂದ ಲೋಕಮಾನ್ಯರಿಗೆ ಸ್ವಲ್ಪ ಸ್ವಸ್ಥತೆಯಾಗಿತ್ತು. ಡಾಕ್ಟರರು, 'ಚಿಂತಾಜನಕ ಸ್ಥಿತಿಯು ಇನ್ನೂ ಇದ್ದರೂ ಸುಧಾರಣೆಯಾಗುತ್ತಿದೆ' ಎಂಬ ಪತ್ರಕವನ್ನು ಹಚ್ಚಿದ್ದರು. ಅವರ ಜನ್ಮ ಪತ್ರಿಕೆಯನ್ನು ಪರೀಕ್ಷಿಸಿ, 'ಈ ಬೇನೆಯಿಂದ ಲೋಕಮಾನ್ಯರಿಗೆ ಬಾಧೆಯಾಗುವದಿಲ್ಲ, ಅವರಿಗೆ [illegible] ಬೇಕು, ಅವರ ಕೈಯಿಂದ ಉಪಕಾರ ಕಾರ್ಯವು ಇನ್ನೂ ಆಗುವದಿದೆ' ಎಂಬ ಭವಿಷ್ಯವನ್ನು [illegible] ವರ್ತಿಸಿದ್ದರು. ಲೋಕಮಾನ್ಯರ ಆತ್ಮವಿಶ್ವಾಸವಂತೂ, ಅನೇಕಸಾರೆ 'ತಾನು ಈ ಬೇನೆಯಿಂದ ಸ್ವಸ್ಥನಾಗುವೆನು' ಎಂದು ಅವರ ಸ್ಮೃತಿ ಇದ್ದಾಗ ಉದ್ಗರಿಸುತ್ತಿದ್ದರು. ಟಿಳಕ ಭಕ್ತರಂತೂ ಜಗಚ್ಚಾಲಕನ ಹತ್ತರ ಹಗಲಿರುಳು ಟಿಳಕರ ಆರೋಗ್ಯದ ಸಂಬಂಧ ಪ್ರಾರ್ಥನೆ ನಡಿಸಿದ್ದರು. ಈ ಎಲ್ಲ ಪರಿಸ್ಥಿತಿಯ ಮೇಲಿಂದ, ಗುರುವಾರ ರಾತ್ರಿ ಶುಕ್ರವಾರ ಉದಯವಾದಂದಿನಿಂದ ಟಿಳಕ ಭಕ್ತರಿಗೆ ಸ್ವಲ್ಪ ಆಶಾಂಕುರ ಹುಟ್ಟಿತ್ತು. ಆದರೆ ಮೊನ್ನೆ (ಶನಿವಾರ) ರಾತ್ರಿ ೯ ಘಂಟೆಗೆ ಥಟ್ಟನೆ ಪ್ರಕೃತಿ ಕೆಟ್ಟು, ಸರಿಯಾಗಿ ೧೨ ಘಂಟೆ ೪೦ ಮಿನಿಟುಗಳಿಗೆ ಮೇಲೆ, ಲೋಕಮಾನ್ಯ ಬಾಳಗಂಗಾಧರ ಟಿಳಕರವರು, ಭಾರತಪುತ್ರರನ್ನು ಶೋಕಸಾಗರದಲ್ಲಿ ಕೆಡವಿ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿ, ಪರಲೋಕಕ್ಕೆ ತೆರಳಿದರು.

ಈ ದುಃಖದ ವಾರ್ತೆಯು ಇಡೀ ಊರೊಳಗೆ ವಿದ್ಯುದ್ವೇಗದಿಂದ ಹಬ್ಬಿತು. ಒಬ್ಬೊಬ್ಬರೂ ತಮ್ಮ ತಮ್ಮ ವ್ಯವಸಾಯವನ್ನು ಬಿಟ್ಟು, ಲೋಕಮಾನ್ಯರ ಅಂತ್ಯದ ದರ್ಶನೋತ್ಸುಕರಾಗಿ, ಸರದಾರ ಗೃಹಕ್ಕೆ ಓಡುತ್ತ ನಡೆದರು. ಪುಣೆಗೆ ಈ ಸುದ್ದಿ ತಿಳಿಸಲಾಗಿ ಅಲ್ಲಿಯ ಜನರು ಬಹಳ ಸ್ಪೆಶಲ ಗಾಡಿಗಳಿಂದ ಮುಂಬಯಿಗೆ ಬಂದರು.

ರವಿವಾರ ಸರದಾರ ಗೃಹದ ಮೊದಲನೆ ಮಾಳಿಗೆಯ ಮುಂಭಾಗದಲ್ಲಿ ಲೋಕಮಾನ್ಯರ ನಶ್ವರವಾದ ಮಾನುಷ ಮೂರ್ತಿಯನ್ನು, ಅವರ ವಾಡಿಕೆಯ ಪೋಷಾಕು ಮಾಡಿ, ಹೂವಿನ ಮಾಲೆಗಳಿಂದ ಅಲಂಕರಿಸಿ ಅವರ ಅಸಂಖ್ಯ ಭಕ್ತರ ದರ್ಶನಕ್ಕಾಗಿ ಕೂಡ್ರಿಸಿದ್ದರು. ಸತ್ಪುರುಷರ ಅಂತ್ಯದರ್ಶನಕ್ಕಾಗಿ ಬರುವ ಜನಸಂದಣಿಯನ್ನು ವರ್ಣಿಸುವದು ತೀರ ಅಶಕ್ಯವು. ಆ ನೋಟವನ್ನು ನೋಡಿದವರಿಗೆ 'ಹಿಂದಮಾತೆಯೇ ಪುತ್ರಶೋಕದಿಂದ ಮರುಗುತ್ತಿದ್ದಾಳೆ' ಎಂಬ ಭಾಸವಾಗುತ್ತಿತ್ತು. ಎಲ್ಲಿ ನೋಡಿದಲ್ಲಿ ಜನರೇ, ಜನರು, ಗಂಡಸರು, ಹೆಂಗಸರು, ಹಿಂದೂಗಳು, ಮುಸಲ್ಮಾನರು, ಪಾರಸೀಯರು, ಕ್ರಿಸ್ತರು, ಬಡವರು, ದೊಡ್ಡವರು, ಮುದುಕರು, ಯುವಕರು, ಹುಡುಗರು ಎಲ್ಲರೂ ತಮ್ಮ ತಮ್ಮೊಳಗಿನ ಸ್ಪರ್ಧೆ, ಜಾತಿ ದರ್ಜೆ ಮುಂತಾದ ಕ್ಷುಲ್ಲಕ ಭೇದಗಳನ್ನು ಮರೆತು ಟಿಳಕ ದರ್ಶನಕ್ಕಾಗಿ ಧಾವಿಸುತ್ತಿದ್ದರು. ಮುಂಬಯಿಯ [illegible] ಬಹಳೇ ದೊಡ್ಡವು. ಅವು ಅರ್ಧ ಮೈಲಿನ ಸುತ್ತಮುತ್ತ ತುಂಬಿ ಹೋಗಿ ರಹದಾರಿಯು ಬಂದಾಗಿ ಹೋಗಿತ್ತು. ಹೊತ್ತು ಏರಿದ ಹಾಗೆ ಜನರ ಸಂದಣಿಯು, ಸಮುದ್ರಕ್ಕೆ ಭರತಿ ಬಂದಂತೆ, ಬೆಳೆಯುತ್ತ ಹೋಯಿತು. ಸ್ಮಶಾನಯಾತ್ರೆಗೆ ಹೊರಡುವ ಸಮಯವು ಕಳೆದರೂ ಟಿಳಕ ಭಕ್ತರ ದರ್ಶನದ ಇಚ್ಛೆಯು ಕಳೆಯಲಿಲ್ಲ. ಕಟ್ಟಕಡೆಗೆ ಸುಮಾರು ೨। ಘಂಟೆಗೆ ಟಿಳಕ ಮೂರ್ತಿಯನ್ನು ಬಹು ಪ್ರಯಾಸದಿಂದ ಕೆಳಗಿಳಿಸಿ, ಶೋಕಮಯವಾದ ರಸ್ತೆಯ ಮೇಲಿಂದ ಸ್ಮಶಾನಯಾತ್ರೆಗೆ ಪ್ರಾರಂಭಿಸಿದರು.

ಆ ವಿಶಾಲಚಿತ್ತ ಮಹಾತ್ಮನ ಅಂತ್ಯದ ದರ್ಶನವಾಗಬೇಕೆಂದು, ಟಿಳಕ ಮೂರ್ತಿಯನ್ನು ಉಚ್ಚಾಸನದ ಮೇಲೆ ಕೂಡ್ರಿಸಿದ್ದರು. ಯಾತ್ರೆಯ ಮಾರ್ಗಗಳ ಎರಡೂ ಬದಿಯ ಇಮಾರತುಗಳೆಲ್ಲ ಮನುಷ್ಯಮಯವಾಗಿದ್ದವು! ಎತ್ತ ನೋಡಿದರೆ ಜನ! ಜನರು ತಮ್ಮ ತಮ್ಮ ಕ್ಷುಲ್ಲಕ ಭೇದಗಳನ್ನು ಮರೆತು, ಲೋಕಮಾನ್ಯರಿಗೆ ಮನಃಪೂರ್ವಕ ಪ್ರಣಾಮ ಮಾಡುವದನ್ನು ನೋಡಿ, ಯಾರಿಗೆ ಕಣ್ಣೀರು ಬರಲಿಕ್ಕಿಲ್ಲ! ಇಂಥ ಹೃದಯದ್ರಾವಕ ನೋಟವು ಇದೇ! ಮಹಾತ್ಮಾ ಗಾಂಧಿ, ಮೌಲಾನಾ ಶೌಕತಅಲ್ಲಿ, ಡಾ। ಜಮ್ನಾದಾಸ, ಡಾ। ಸಾವರೇ, ಡಾ। ಕಿಚಲೂ, ಡಾ। [illegible]ಲಕರ, ಶಿವರಾಮಪಂತ ಪರಾಂಜಪೆ, ಮೊದಲಾದ ದೇಶಭಕ್ತರು ದೇಶಭಕ್ತರ ಶಿರೋಮಣಿಯನ್ನು ಹೊರುತ್ತಿದ್ದರು. ಮೊದಲಿನ ಠರಾವಿನ ಕ್ರಮದಂತೆ ಈ ಯಾತ್ರೆಯು ಶೇಕ ಮೇಮನ ರಸ್ತೆ, ಮೋತಿಬಾಜಾರ, ಬಲೇಶ್ವರ ಸಿ. ಪಿ. ಟ್ಯಾಂಕ, ಗಿರಗಾಂವ ಬ್ಯಾಕ ರೋಡ, ಚರ್ನಿರೋಡ ಗಿರಗಾಂವ, ಪ್ರಿನ್ಸೆಸ ಸ್ಟ್ರೀಟ ಮೇಲಿಂದ, ಸೋನಾಪುರಕ್ಕೆ ಹೋಗುವದೆಂದು ಠರಾಯಿಸಿತ್ತು. ಆದರೆ, ಗಿರಗಾಂವ ಬ್ಯಾಕರೋಡಿನಮೇಲೆ ಬಂದಮೇಲೆ, ಜನಸಮೂಹವು ಇನ್ನು ಬೆಳೆಯ ಹತ್ತಿ, ಸೋನಾಪುರವು ತೀರ ಸಂಕುಚಿತವೆಂದು ಕಂಡು, ಅಲ್ಲಿಂದ ನೇರವಾಗಿ ಚೌಪಾಟಿ ಮೈದಾನಿನಮೇಲೆ ಟಿಳಕ ಮೂರ್ತಿಯ ಅಂತ್ಯಸಂಸ್ಕಾರ ಮಾಡುವ ನಿಶ್ಚಯವಾಯಿತು. ಚೌಪಾಟಿಯ ಮೈದಾನಿನಮೇಲೆ ಸಹ, ೧೦-೨೦ ಸಾವಿರ ಜನ ಸಮೂಹವು ಸತ್ಪುರುಷರ ಅಂತ್ಯದರ್ಶನ ಪಡೆಯಲು ಉತ್ಸುಕರಾಗಿ ನೆರೆದಿತ್ತು. ಹಿಂದಭೂಮಿಯೇ ಶೋಕಸಾಗರದಲ್ಲಿ ಮುಣುಗಿದೆಂಬದನ್ನು ತೋರಿಸಲಿಕ್ಕೆ ಮಳೆಯು ಏಕಸಮನೆ ಬೀಳುತ್ತಿತ್ತು. ನೆರೆದ ಜನರೆಲ್ಲರೂ, ಕೊಡೆಯನ್ನು ಮಡಿಚಿಕೊಂಡು ಸ್ತಬ್ಧರಾಗಿ, ೩ ಘಂಟೆಯಿಂದ ಕುಳಿತುಕೊಂಡಿದ್ದರು. ಸುಮಾರು ೬ ಘಂಟೆಗೆ ಟಿಳಕ ಮೂರ್ತಿಯು ಅಂತ್ಯಸಂಸ್ಕಾರಾರ್ಥವಾಗಿ ನೇಮಿಸಿದ ಸ್ಥಳಕ್ಕೆ ಬಂತು. ಆಗಂತೂ, ಮಳೆಯು ಅಪರಿಮಿತ ಸುರಿಯಿತು. ಸ್ಮಶಾನ ವ್ಯಾಖ್ಯಾನಗಳು [illegible] ಮಾಡುವದು ಅಸಾಧ್ಯವಾದ್ದರಿಂದ, ಅಂತ್ಯಸಂಸ್ಕಾರಗಳನ್ನು ಕೊಟ್ಟು ಟಿಳಕ ಮೂರ್ತಿಯನ್ನು ಅಗ್ನಿನಾರಾಯಣನ ವಶಕ್ಕೆ ಕೊಟ್ಟರು. ಜನರೆಲ್ಲರೂ ಮರಮರನೆ ಮರುಗಿದರು. 'ದೇವರೇ, ಈ ಸಂಕಟದೊಳಗಿಂದ ನಮ್ಮನ್ನು ಕಾಪಾಡು, ಟಿಳಕರ ಮುಖ್ಯ ಧ್ಯೇಯವಾದ ಸ್ವರಾಜ್ಯವನ್ನು ಹಿಂದಪುತ್ರರಿಗೆ ಸಂಪಾದಿಸುವ ಸಾಮರ್ಥ್ಯವನ್ನು ಅವರಿಗೆ ದಯಪಾಲಿಸು; ಮತ್ತು ಅವರ ಆತ್ಮಕ್ಕೆ ಶಾಂತಿ ಕೊಡು' ಎಂದು ಶ್ರೀ ದೇವರ ಹತ್ತರ ಪ್ರಾರ್ಥಿಸುತ್ತ ಜನರೆಲ್ಲರು ತಮ್ಮ ತಮ್ಮ ಮನೆಯ ಹಾದಿ ಹಿಡಿದರು.

(ಕಾರವಾರ ಬಾತ್ಮೀದಾರರಿಂದ)

ಖಿಲಾಫತ ವಿಷಯ ಮತ್ತು ಪಂಜಾಬ ಪ್ರಕರಣದ ವಿಷಯವಾಗಿ ಮ॥ ಗಾಂಧಿಯವರು ಯೋಚಿಸಿದ ಹರತಾಳ ದಿನದ ಆಚರಣೆ ಬಗ್ಗೆ ಕಳೆದ ರವಿವಾರ (ತಾ. ೧ ದಿವಸ) ಇಲ್ಲಿಯ ಬಹುತೇಕ ಎಲ್ಲ ದುಕಾನಗಳು ತೆರೆಯಲ್ಪಡಲಿಲ್ಲ. ಈ ಸಂಗತಿ ಕಾರವಾರದಲ್ಲಿ ನೂತನವಾದ್ದರಿಂದ ಕೆಲ ಸ್ಥಾನಿಕ ಅಧಿಕಾರಿಗಳಿಗೆ ಮತ್ತು ಕೆಲ ಬಹಾದ್ದೂರ ವರ್ಗದವರಿಗೆ ವಿಚಿತ್ರವಾಗಿ ಕಂಡು, ಅವರು ದುಕಾನದಾರರಿಗೆ ಅಂಗಡಿಗಳನ್ನು ತೆರೆಯಲಿಕ್ಕೆ ಹೇಳಿದರು. ಆದರೆ ಅವರು ಸಮ್ಮತಿಸಲಿಲ್ಲ. ಕಡೆಗೆ, ರವಿವಾರವು ಇಲ್ಲಿಯ ಸಂತೆ ದಿನವಾದ್ದರಿಂದ, ಹಳ್ಳಿಹಳ್ಳಿಗಳ ಜನರಿಗೆ ವಿಶೇಷ ಅನಾನುಕೂಲತೆಯಾದೀತಾಗಿ ಅವರು ಹೇಳಿದದರಮೇಲೆ, ಮುಸಲ್ಮಾನರು ಸಮ್ಮತಿಸಿದರಿಂದ, ಹಿಂದೂ ಜನರ ದುಕಾನುಗಳು ಮಾತ್ರ ಸಂಧ್ಯಾಕಾಲಕ್ಕೆ ತೆರೆಯಲ್ಪಟ್ಟವು. ಮುಸಲ್ಮಾನರ ದುಕಾನಗಳು ಇಡಿ ದಿವಸ ಬಂದ ಇದ್ದವು.

—ಲೋಕಮಾನ್ಯರ ಶೋಚನೀಯ ನಿಧನದ ವಾರ್ತೆ ಮಂಗಳವಾರ ಬೆಳಿಗ್ಗೆ ಇಲ್ಲಿ ತಿಳಿದ ಕೂಡಲೇ, ಸರ್ವತ್ರ ಹಾಹಾಕಾರ ಉಂಟಾಯಿತು ಮತ್ತು ಎಲ್ಲ ದುಕಾನಗಳು— ಇಡಿ ಬಾಜಾರು— ದುಃಖಪ್ರದರ್ಶನಾರ್ಥ ಬಂದ ಮಾಡಲ್ಪಟ್ಟವು. ಪಠಾಣರ ಅಂಗಡಿಗಳು, ಹಾಗೂ ಬೀಡಿಯ ಅಂಗಡಿಗಳು ಸಹ, ತೆರೆಯಲಿಲ್ಲ. ಎಲ್ಲ ದುಕಾನುಗಳು ಬಂದ ಮಾಡಿದ್ದ ಪ್ರಸಂಗವು, ಇದೇ ಮೊದಲನೇದು— ಇದರಿಂದಲೇ ಅವರು— ಲೋಕಮಾನ್ಯರು'!

—ಮಂಗಳವಾರ ದಿವಸ ಸಂಧ್ಯಾಕಾಲಕ್ಕೇನೇ ಕಾರವಾರ ರಹಿವಾಸಿಯರ ಜಾಹೀರಸಭೆಯು ದುಃಖಪ್ರದರ್ಶನಕ್ಕಾಗಿ, ಇಲ್ಲಿಯ ರಾಧಾಕೃಷ್ಣ ದೇವಾಲಯದಲ್ಲಿ ರಾ। ಮಂಗೇಶರಾವ ತೇಲಂಗರ ಅಧ್ಯಕ್ಷತೆಯಲ್ಲಿ ಕೂಡಿತು. ಎಲ್ಲ ಜ್ಞಾತಿಯ, ಎಲ್ಲ ಧರ್ಮದ, ಎಲ್ಲ ಪಂಥಗಳ, ವಕೀಲ, ವ್ಯಾಪಾರಿ ವಗೈರೆ ಎಲ್ಲ ದರ್ಜೆಯವರು ಕೂಡಿ ದೊಡ್ಡ ಸಮೂಹವು ನೆರೆದಿತ್ತು. ಲೋಕಮಾನ್ಯರ ಚರಿತ್ರವು ಸಂಕ್ಷಿಪ್ತ ಹೇಳಿದರವರಲ್ಲಿ, ಬೇರೆ ಬೇರೆ ಗೃಹಸ್ಥರ ಸಮಯೋಚಿತ ಭಾಷಣಗಳಾಗಿ, ದುಃಖದ ಠರಾವು ಎಲ್ಲರೂ ಎದ್ದುನಿಂತು ಪಾಸಾಯಿತು. ಜನರಿಗೆ ಆದ ದುಃಖದ ಮುಖದ ಸಾಕ್ಷಿಯು ಅವರ ಮೋರೆಗಳಿಂದಲೇ ಕಾಣುತ್ತಿತ್ತು. ಹಿಂದುಸ್ಥಾನದ ಚಕ್ರವರ್ತಿ—ಹಿಂದದೇವಿಯ ಸುಪುತ್ರನು—ಮಡಿದನು ನಿಜ!

ಬಾಲವಿವಾಹವೋ

ಬ್ರಹ್ಮಚರ್ಯ ಹಾನಿಯೋ?

(ಲೇಖಕ — ಕೌಶಿಕ)

ಇನ್ನೂ ಕೆಲವು ಆಕ್ಷೇಪಗಳೂ, ಸಮಾಧಾನವೂ (೩)

ಹಿಂದಿನ ಲೇಖದಲ್ಲಿ ವಧೂವರರಲ್ಲಿ ಪ್ರತಿಯೊಬ್ಬರ ವಯೋಮಾನವನ್ನೂ, ಆ ಸಂಬಂಧದ ಪ್ರಮಾಣಗಳನ್ನೂ ಕೊಟ್ಟು, ಅವುಗಳ ಮೇಲೆ ಬರಬಹುದಾದ ಒಂದೆರಡು ಆಕ್ಷೇಪಗಳನ್ನು ತೆಗೆದುಕೊಂಡು, ಅದಕ್ಕೆ ತಕ್ಕ ಸಮಾಧಾನವನ್ನು ಹೇಳಿದೆವು. ಆದರೂ, ಈ ವಿಷಯದಲ್ಲಿ ಮತ್ತೂ ಎಷ್ಟೋ ಶಂಕೆಗಳು ಹೊರಡತಕ್ಕವಿದ್ದದರಿಂದ ಅವುಗಳ ವಿಚಾರವನ್ನು ಈ ಲೇಖದಲ್ಲಿ ಮಾಡಿರುತ್ತದೆ.

ವಿವಾಹದ ಕಾಲಕ್ಕೆ ವಧುವು ವರನ ಕಡೆಗೂ, ವರನು ವಧುವಿನ ಕಡೆಗೂ, ಹೇಳುವ ಕೆಲವು ವಚನಗಳೂ, ಮಂತ್ರಗಳೂ ಇರುವವು. ಆ ವಾಕ್ಯಗಳ ಅರ್ಥವನ್ನು ತಿಳಿಯುವಷ್ಟು ಪ್ರೌಢತ್ವವು ಅವರಿಬ್ಬರಲ್ಲಿ ಇರಬೇಕು. ಇಲ್ಲದಿದ್ದರೆ, ಅವಕ್ಕೆ ಚಾರಿತಾರ್ಥ್ಯವೂ, ಸಾರ್ಥಕ್ಯವೂ, ಪ್ರಾಪ್ತವಾಗುವದಿಲ್ಲ. ಆದಕಾರಣ ಪ್ರೌಢವಿವಾಹವೇ ಆವಶ್ಯಕವೂ, ಸಶಾಸ್ತ್ರವೂ, ಆಗಿರುವದು. ಎಂದು ಕೆಲ ಸುಧಾರಕರ ಅಭಿಮತವಿರುವದು. ಇಲ್ಲಿ ಪ್ರೌಢತ್ವವೆಂದರೇನು? ವಯಸ್ಸಿನ ಪ್ರೌಢತ್ವವೋ, ಬುದ್ಧಿಯ ಇಲ್ಲವೆ ನೀತಿಯ ಪ್ರೌಢತ್ವವೋ? ಬೌದ್ಧಿಕ, ನೈತಿಕ ಪ್ರೌಢತ್ವವು ಎಲ್ಲರಿಗೂ, ಶಕ್ಯವಿಲ್ಲ. ಒಂದು ವೇಳೆ ವರನಿಗೆ ಯಾ ವಧುವಿಗೆ ಶಕ್ಯವಿದ್ದರೂ, ವಧುವಿಗೆ ಯಾ ವರನಿಗೆ ಶಕ್ಯವಿರುವದಿಲ್ಲ. ಬ್ರಹ್ಮಚರ್ಯಾದಿ ಪ್ರತಿಬಂಧಗಳಿಂದ ಇವರ ಶೀಲವು ದೃಢವಾಗಿರುವದೋ? ವಿವಾಹ ಸಂಸ್ಕಾರದ ನಿಜವಾದ ಉದ್ದೇಶಗಳೂ ಮಹತ್ವವೂ, ಅವರಿಗೆ ಮನದಟ್ಟಾಗಿ, ಅವುಗಳಂತೆ ಮೊದಲಿಂದಲೇ ಅವರ ಆಚರಣೆಯು ಇರುವದೋ? ಪ್ರೌಢ ವಿವಾಹವನ್ನು ಮೆರೆಸುವ ಇತರ ಧರ್ಮದವರ ದಾಂಪತ್ಯಸುಖದ ಡಿಗ್ರಿಯಾದರೂ ಎಷ್ಟು ಅಂಶಗಳ ವರೆಗೆ ಏರಿರುವದು? ಪಾಶ್ಚಾತ್ಯರಾಷ್ಟ್ರಗಳಿಗೆ ಈ ದಾಂಪತ್ಯಸುಖದ ಪ್ರಾಪ್ತಿಗಾಗಿ, ಧಾರ್ಮಿಕ ಬಂಧನಗಳು ಸಾಲದೆ, ರಾಜಕೀಯ ಬಂಧನಗಳಿಗೆ ಸಹ ಶರಣುಹೋಗಬೇಕಾಗಿರುವದು! ನಮ್ಮ ಮಹಮ್ಮದೀಯ ಬಂಧುಗಳಾದರೋ, ಈ ಪ್ರೌಢ ವಿವಾಹದ ದುಷ್ಪರಿಣಾಮವನ್ನು ಪಡದೆಗಳಿಂದಲೂ, ಆವರಣಗಳಿಂದಲೂ ನಿಸ್ತರಿಸಿಕೊಳ್ಳುವರು. ಇನ್ನು ಪ್ರೌಢತ್ವವೆಂದರೆ, ಬರೆ ವಯಸ್ಸಿನಿಂದ ಬೆಳೆದು ಯಾವ ಶೀಲವೂ ಬೆಳೆಗೊಳ್ಳದಿದ್ದರೆ, ಇಂತಹವರು ಪಶ್ವಾದಿಗಳಿಗೆ ಸದೃಶರಾದ ಕಾರಣ, ಈ ಮಾತು ಮೂಲತಃ ಉಪೇಕ್ಷಣೀಯವಾಗಿರುವದು ಒಳ್ಳೇದು. ಈ ಮಂತ್ರಗಳಾದರೂ ಏನು ಹೇಳುತ್ತವೆ? ಯಾರಿಂದ ಹೇಳಲ್ಪಡುತ್ತವೆ? ಅಕ್ಷತಾರೋಪಣದ ಕಾಲದಲ್ಲಿ ವಧೂವರರು ಹೇಳತಕ್ಕ ಕೆಲವು ಮಾತುಗಳಿರುವವು. ಭಗವು (ಸುದೈವವು), ಶ್ರೀಯಸ್ಸು, ಪ್ರಜೆಗಳು ಇವುಗಳ ಅಭಿವೃದ್ಧಿಯಾಗಲೆಂದು ವಧುವೂ, ಯಜ್ಞ-ಧರ್ಮ-ಯಶಸ್ಸು ಇವುಗಳ ಸಮೃದ್ಧಿಯಾಗಲೆಂದು ವರನೂ ಹೇಳತಕ್ಕದ್ದಿರುತ್ತದೆ. ಈ "ಭಗೋ ಮೇ ಕಾಮಃ ಸಮೃಧ್ಯತಾಮ್" ಮೊದಲಾದ ವಾಕ್ಯಗಳು ಸಂಸ್ಕೃತ ಭಾಷೆಯವಾಗಿರುವದರಿಂದ ಅವುಗಳ ಅರ್ಥವು ವಧೂವರರು ವಯಸ್ಸಿಗೆ ಬಂದವರಿದ್ದರೂ, ಅವರಿಗೆ ತಿಳಿಯುವದು ಶಕ್ಯವಿಲ್ಲ. ನೇರಾಗಿ ಈ ಮದುಮಕ್ಕಳು ಆಗ ಪರಸ್ಪರರ ಪರಿಚಯದಿಂದ ತಮ್ಮ ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಮಾತಾಡಿ ತೋರಿಸಲಾರದಷ್ಟು ಸಂಕೋಚವುಳ್ಳವರಿರುವರು. ಪುನರ್ವಿವಾಹಕ್ಕೆ ಉತ್ಸುಕರಾದವರಲ್ಲಿಯೂ ಕೂಡ ಈ ಸಂಕೋಚವು ಈಗಲೂ ಅನಿವಾರ್ಯವಾಗಿದೆ. ಪ್ರಾಚೀನಕಾಲದಲ್ಲಿ ಎಲ್ಲರಿಗೂ ಸಂಸ್ಕೃತ ಭಾಷೆಯು ಬರುತ್ತಿತ್ತು ಎಂದು ಕಲ್ಪಿಸಿದರೂ, ಭಗ, ಶ್ರೀಯ, ಪ್ರಜಾ ಮೊದಲಾದ ಶಬ್ದಗಳ ಯೋಗ್ಯವಾದ ಅರ್ಥವನ್ನು ಹೇತುಪುರಸ್ಸರವಾಗಿ ಲಕ್ಷ್ಯದಲ್ಲಿ ತಂದು ಇವುಗಳ ಪ್ರಯೋಗವು ಸಾತ್ವಿಕ ಬುದ್ಧಿಯಿಂದಲೇ ಆಗುತ್ತಿತ್ತು ಎಂಬುದಕ್ಕೆ ಪ್ರಮಾಣವೇನು? ವಸ್ತುತಃ ಇವು ಲಗ್ನವಿಧಿಯ ನಿಯಮಗಳು, ಪರಮೋದಾತ್ತವೂ, ಪವಿತ್ರವೂ, ಆದ ಉದ್ದೇಶಗಳು. ಇಂತಹ ಉದ್ದೇಶಗಳನ್ನು ಮುಂದಿಟ್ಟು ಬಹು ಶಿಷ್ಟಸಮ್ಮತವಾದ ನಿಯಮಗಳನ್ನು ಸರಿಯಾಗಿ ಪಾಲಿಸತಕ್ಕ, ಶಾಸ್ತ್ರೀಯ ವಯೋಮರ್ಯಾದೆಯ ಒಳಗಿರುವ ವಧೂವರರು ಆ ಕಾಲದಲ್ಲಿ ಇದ್ದರೂ, ಎಲ್ಲರೂ ಈ ಪ್ರಕಾರದವರೇ ಇದ್ದರೆಂದು ಮಾತ್ರ ನಿಶ್ಚಯವಾಗಿ ಹೇಳುವದಾಗಲಿಕ್ಕಿಲ್ಲ. ಆಕಾಲದ ವಿವಾಹಗಳು ವಧೂವರರಿಬ್ಬರಲ್ಲೇ ನಡೆಯುತ್ತಿದ್ದ ಪಕ್ಷದಲ್ಲಿ ಪುರೋಹಿತರ ಆವಶ್ಯಕತೆಯೇ ಬೀಳುತ್ತಿರಲಿಲ್ಲ. ಹಿರಿಯರಾದ ಆಪ್ತರು, ವೃದ್ಧಸುವಾಸಿನಿಯರು ಇವರ ಗರಜೂ ಇರುತ್ತಿರಲಿಲ್ಲ. ಇದರಿಂದ ಈ ಮಾತು ನಿಶ್ಚಿತವಾಗುವದಲ್ಲ,— ವಿವಾಹದಲ್ಲಿ ವಧೂವರರಿಂದ ಹೇಳಲ್ಪಡತಕ್ಕ ವಚನಗಳನ್ನು ಪ್ರಾಚೀನಕಾಲದಲ್ಲಿ ಸಹ ವಿಶೇಷವಾಗಿ ಪುರೋಹಿತರಿಂದಲೇ ಸಾಗಿಸುತ್ತಿರುವದು ಅನಿವಾರ್ಯವಾಗಿತ್ತು. ಈ ಉದ್ದೇಶಗಳೂ ನಿಯಮಗಳೂ, ಗುರುಹಿರಿಯರಿಂದ ವಧೂವರರೊಳಗೆ ಕ್ರಮದಿಂದ ಆಚರಣೆಯಲ್ಲಿ ತರಿಸಲ್ಪಡತಕ್ಕವುಗಳೇ ಹೊರತು, ಸ್ವತಃ ಅವರಿಂದಲೇ ಕೂಡಲೇ ಆಚರಿಸಲ್ಪಡುವವಲ್ಲ.

ಇನ್ನೂ ಕೆಲವು ಮಂತ್ರಗಳು ವಿವಾಹ ಹೋಮಕಾಲದಲ್ಲಿಯೂ, ಸಪ್ತಪದಿಯ ಕಾಲದಲ್ಲಿಯೂ, ವಧೂಗೃಹಪ್ರವೇಶದ ಕಾಲದಲ್ಲಿಯೂ, ಅಗ್ನಿಗೂ, ವಧುವಿಗೂ, ಉದ್ದೇಶಿಸಿ ವರನಿಂದಲೇ ಹೇಳಲ್ಪಡತಕ್ಕವಿರುವವು. ಈ ಕಾಲದಲ್ಲಿ ವರನು ಒಂದೆರಡು ವೇದಗಳ ವರೆಗೂ, ಶಾಸ್ತ್ರಾಧ್ಯಯನಗಳಿಂದಲೂ, ತಪಶ್ಚರ್ಯೆಯಿಂದಲೂ, ಸುಸಂಸ್ಕೃತನಾಗಿರುವನು ಆದ್ದರಿಂದ ಅವುಗಳ ಅರ್ಥವನ್ನೂ, ಉದ್ದೇಶಗಳನ್ನೂ, ಮನಸ್ಸಿನಲ್ಲಿ ತಂದು, ಅವನ್ನು ಹೇಳಲು ತಾನು ಸಮರ್ಥನಿರಬಹುದು ಆದರೆ ವಧುವು ಈ ಕೆಲಸದಲ್ಲಿ ಅಸಮರ್ಥಳಿರುವಳೆಂದು ಹೇಳುವ ಅವಶ್ಯವಿಲ್ಲ. ಆಗ ಹೆಣ್ಣುಮಕ್ಕಳಿಗೆ ವಿದ್ಯಾರ್ಜನೆಯ ಸಲುವಾಗಿ ಸಾಕಷ್ಟು ಅವಕಾಶವೇ ಸಿಗುತ್ತಿರಲಿಲ್ಲ. ಈ ಮಾತು ಹಿಂದೆ ಹೆಣ್ಣುಮಕ್ಕಳ ಮದುವೆಯ ವಯೋಮಾನವನ್ನು ನಿರ್ಣಯಿಸುವಾಗ ವ್ಯಕ್ತಮಾಡಿರುತ್ತದೆ.

ಮೇಲಿನ ವಿವರಣದಿಂದ ಬಾಲ-ಬಾಲಿಕಾ ವಿವಾಹವೂ, ಬಾಲಿಕಾ-ತರುಣ ವಿವಾಹವೂ ನಮ್ಮಲ್ಲಿ ಪ್ರಾಚೀನಕಾಲದಿಂದ ಸಮ್ಮತವಾಗಿದ್ದರೂ, ಬ್ರಾಹ್ಮಣವರ್ಗದಲ್ಲಿ ಬಾಲಿಕಾ-ತರುಣ ವಿವಾಹವೇ ವಿಶೇಷವಾಗಿ ರೂಢಿಯಾಗಿದ್ದುಂಟು. ಪ್ರಾಚೀನ ಋಷಿಗಳ ಮತದಂತೆ, ವರನು ಹದಿನಾರು, ಇಪ್ಪತ್ತನಾಲ್ಕು, ಮೂವತ್ತು, ಮೂವತ್ತಾರು, ನಾಲ್ವತ್ತೆಂಟು ವರ್ಷಗಳ ವಯಸ್ಸುಳ್ಳವನೂ (ಅಂದರೆ ಹದಿನಾರರಿಂದ ನಾಲ್ವತ್ತೆಂಟು ವರ್ಷಗಳ ಒಳಗಿನವನೂ), ವಧುವು ಎಂಟರಿಂದ ಹದಿನಾರು (ನಗ್ನಿಕಾ-ಋತುಮತಿಯಾಗದವಳು) ವರ್ಷಗಳ ಒಳಗಿನವಳೂ, ಇರಬೇಕಾಗುವದು. ಈ ವಯೋಮಾನದಲ್ಲಿ ಗಂಡಸು ಹದಿನಾರು ವರ್ಷಕ್ಕಿಂತ ಮೊದಲೂ, ಹೆಂಗಸು ಹದಿನಾರು ವರ್ಷಕ್ಕಿಂತ ಕತೆಗೂ, ಮದುವೆಯಾಗಲು ಅರ್ಹರಲ್ಲ. ಇಷ್ಟೇ ಅಲ್ಲ, ಹೆಣ್ಣು ಎಂಟಕ್ಕಿಂತ ಹೆಚ್ಚು ವರ್ಷದವಳಿದ್ದ ಹಾಗೆ, ಹುಡುಗನೂ ಹದಿನಾರಕ್ಕಿಂತ ಹೆಚ್ಚು ಹೆಚ್ಚು ವರ್ಷದವನು ಇರಬೇಕೆಂತಲೂ, ಇದರಿಂದ ವ್ಯಕ್ತವಾಗುತ್ತದೆ. ಆದರೆ ಸುಧಾರಣಾವಾದಿಗಳು ಈ ಬಾಲಿಕಾ-ತರುಣವಿವಾಹಕ್ಕೂ, ಬಾಲವಿವಾಹದಲ್ಲಿ ಸೇರಿಸಿ, ಇದೂ ಸಮಾಜಕ್ಕೆ ಹಾನಿಕಾರಕವೆಂದು ವಾದಿಸುವರು. ಹಿಂದೆ ಹೇಳಿದಂತೆ ತರುಣೀ-ತರುಣ ವಿವಾಹವೇ ಇವರಿಗೆ ಸಮ್ಮತವು. ಒಮ್ಮೊಮ್ಮೆ ಇವರು ವರನ ವಯೋಮಾನವನ್ನು ಕೆಳಗೆ ಇಳಿಸುತ್ತ ಬಂದ ಹಾಗೆ, ವಧುವಿನ ವಯಸ್ಸನ್ನು ಹೆಚ್ಚು ಹೆಚ್ಚು ಏರಿಸುತ್ತ ಹೋಗಬೇಕೆಂದೂ ಹೇಳುವರು. ಇದು ವಿರುದ್ಧವಾದ ಮಾತು. ಇಂತಹ ವಧೂವರರಲ್ಲಿ ಸಾತ್ವಿಕವಾದ ಪ್ರೇಮವು ಎಂದೂ ಉಂಟಾಗಲಾರದು, ಇವರಿಂದ ತೇಜಸ್ವಿಯೂ ಸಾತ್ವಿಕವೂ ಆದ ಸಂತತಿಯೂ ಹುಟ್ಟಲಾರದು. ಸತ್ವಪ್ರಧಾನವಾದ ಬ್ರಹ್ಮವರ್ಗವು ಈ ರಜಸ್ಸಿನ ಭೂಮಿಯಲ್ಲಿ ಏಕೆ ಕಾಲುಳಾಡಬೇಕು? ಮನುಷ್ಯನ ಸತ್ವಾಚರಣೆಯು ಅವನ ಶೀಲಕ್ಕೆ ಕಾರಣವೂ, ಪೋಷಕವೂ ಆಗಿರಬೇಕಲ್ಲವೇ? ಆದ್ದರಿಂದ ಬ್ರಾಹ್ಮಣ್ಯದ ಉನ್ನತಿಯಾಗುವದರ ಬದಲು ಅವನತಿಯು ಮಾತ್ರ ನಿಶ್ಚಯವಾಗಿ ಆಗುವದು. ದ್ವಿಜೇತರ ವರ್ಗಗಳಲ್ಲಿ ಪ್ರೌಢವಿವಾಹಕ್ಕೂ ಪುನರ್ವಿವಾಹಕ್ಕೂ ಯಾವ ಪ್ರಕಾರದ ಆತಂಕವೂ ಇರುವದಿಲ್ಲೆಂದು. ಇಲ್ಲಿ ಬೇರೆಯಾಗಿ ಹೇಳಬೇಕಾಗಿಲ್ಲ.

ಇದರಮೇಲಿಂದ ಬಾಲವಿವಾಹದ ಸದರಿನಲ್ಲಿ ಸೇರುವ ಬಾಲಿಕಾ-ತರುಣವಿವಾಹವು ನಿರ್ದೋಷವೂ, ಸಮಾಜಕ್ಕೆ ಹಿತಕಾರಕವೂ, ಆವಶ್ಯಕವೂ ಎಂದು ಸಿದ್ಧವಾಗುವದು. ಇದರಂತೆ ಬಾಲ-ಬಾಲಿಕಾ ವಿವಾಹವಾದರೂ ದೋಷಗ್ರಸ್ತವಲ್ಲ. ವಧೂವರರು ಆಗ ಕಾಮವ್ಯಾಮೋಹಕ್ಕೆ ಎಂದೂ ಸಿಕ್ಕಿರುವದಿಲ್ಲ. ಅವರಲ್ಲಿ ಸಾಹಚರ್ಯದಿಂದ ವಾಸಮಾಡಿಕೊಳ್ಳುವ ಬಂಧುಪ್ರೇಮವು ಮುಂದೆ ದಾಂಪತ್ಯಾನುರಾಗದಲ್ಲಿ ಪರಿಣಮಿಸಿ, ಕಡೆಯವರೆಗೂ ಅಖಂಡವಾಗಿ ನೆಲೆಗೊಳ್ಳುವ ಸಂಭವವು ವಿಶೇಷವುಂಟು. ಕಾರಣಾಂತರದಿಂದ ಅದರಲ್ಲಿ ವ್ಯತ್ಯಯ ಬಂದರೂ, ತಾರುಣ್ಯ ವಿವಾಹದ ಸಂಬಂಧವುಳ್ಳ ದಂಪತಿಗಳಿಗಿಂತ ಅದು ಸೌಮ್ಯವೂ, ಅಲ್ಪವೂ ಆಗುವದು. ಗಂಡನ ಆಕಸ್ಮಿಕ ಮರಣದ ದುಃಖವು ಬಾಲವಿವಾಹಿತಳಿಗೇ ವಿಶೇಷವಾಗಿ ಸಂಭವಿಸುತ್ತದೆಂಬದಕ್ಕೂ ಆಧಾರವಿಲ್ಲ. ಇಂತಹ ಅಪಮೃತ್ಯುಗಳ ನಿಜವಾದ ಕಾರಣವು ಮುಂದೆ ಪ್ರತಿಪಾದಿಸಲ್ಪಡುವದು. ಇರಲಿ ಆದ್ದರಿಂದ "ಬಾಲವಿವಾಹವು" ಈಗ ವಿಶೇಷವಾಗಿ ರೂಢಿಯಲ್ಲಿರುವ ಬಾಲವಿವಾಹವು ಸಮಾಜಕ್ಕೆ ಘಾತಕವಲ್ಲ, ಮೇಲಾಗಿ ಹಿತಕಾರಕವಾಗಿರುವದರಿಂದ ಅತ್ಯಾವಶ್ಯಕವೆಂದೂ ಸ್ಪಷ್ಟವಾಗುವದು.

ಕುಮಟೆ ಪೇಟೆ ಧಾರಣೆ.

ಜಿನಸು	ರೂ
ರಂಗೂನ ಬೆ ಗೂಣಿ ೧ಕ್ಕೆ	೧೯—೧೩
ಹುಚ್ಚೆಳ್ಳು ನೆ ಖಂಡೆ ಕ್ಕೆ	೬
ರಾಗಿ ಖಂಡಿಕ್ಕೆ	೧೧—॥
ಗೋದಿ ಗೋಣಿ ೧ಕ್ಕೆ	೧೯—೩
ಹುರುಳಿ ಖಂಡಿ	೯—೧
ಕಡಲೆ ಖಂಡಿ ೧ಕ್ಕೆ	೧೩—೧೦
ತೊಗರಿಬೇಳೆ ಗೋಣಿ ೧ಕ್ಕೆ	೨೨——
ಹೆಸರು ಖಂಡಿ	೧೩—೧೦
ವೆ ಮಣಿ ಕಪ್ಪುರಿ ಮ ...	—
ನೆಲಕಡಲೆ ಕಾಯಿ ಮಣ	——
ಹರಳೆಣ್ಣೆ ಮಣ	೧
ಕೊಬ್ರಿ ಎಣ್ಣೆ ಮಣ	೧
ಕೊತ್ತಂಬರಿ ಗೋಣಿ	—೬
ಉಪ್ಪು ಗೋಣಿ	೬
ಜೀರಿಗೆ ...	೬
...	೬

ಒನೆ ವರೆಗೆ ... ...

... ...

ರಕ್ತಶುದ್ಧಿ ಧಾತುವೃದ್ಧಿ ... ...

... ...

... ...

ಧಾತುಪೌಷ್ಟಿಕ ಗುಳಿಗೆ

ಇದರಿಂದ ... ... ಸ್ವಪ್ನಾವಸ್ಥೆ ರಕ್ತದೋಷಿತರೋಗ ... ನರಗಳ ಅಶಕ್ತಿ ಅಂಗೋತ್ತೇಜಕ ಧಾತು ... ಗು ವದು ತಲೆತಿರುಗುವದು ಜೀರ್ಣಜ್ವರ ಒಗಿವ ... ... ಪರಂಶವಿಕಾರ ಮತ್ತು ... ... ವಿಕಾರಗಳು ... ... ರೂ ೧ ೦

(೧) ಬಾಲಾಮೃತ ... ... ರೋಗಗಳಿಗೆ ... ರೂ ೧ ೦ ೦ (೨) ಸ್ವಪ್ನಸ್ಥಂಭಿ ... ೧೧ ದಿವಸದ ಔಷದಕ್ಕೆ ರೂ ೨—೦—೦ (೩) ಗಜಕರ್ಣ ನಾಶಕ ಮಲಾಮು— ಡಬ್ಬಿ ... ೦—೮—೦ (೪) ಮೂಲವ್ಯಾದಿ ನಾಶಕ ... ... ರೂ ೨ ೦ ೦

ಅನುಪಾನಪತ್ರ ಔಷದದ ... ಜೋತ

ವಿಳಾಸ— ವೈದ್ಯ ಬಿ. ಎಸ್. ಮೂಡಕೆ ಮತ್ತು ಕಂಪನಿ, ಪೋಸ್ಟ ಶಿರಸಿ. ಜಿಲ್ಲಾ ಉತ್ತರಕಾನಡಾ

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯವರ ಸಚಿತ್ರ ಚರಿತ್ರೆ ಜೀವನ ಮತ್ತು ... ೦—೧೨—೦ ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ... ೦ ೮ ೦ ... ... ೦ ೧೨ ೦, ... ೦ ... ... ೦—೪—೦

ವಿಳಾಸ:— ಎಂ. ಎಂ. ಹವೇಲಿಕರ. ದಾವಣಗೇರಿ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾ ಮದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮುಂತಾದ್ದರಿಂದ ಶರೀರಗಳ ಪಳಿತದಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಗೊಳಿಸುವದ 10 ಸಲ ಸೇವಿಸುವ ಲೇಹ ಡಬ್ಬಿ 1ಕ್ಕೆ 1-1 -0 ಡಬ್ಬಿಗಳಿಗೆ 4 12-0

2 ವಿಷಮಜ್ವರಾಂಕುಶ — (ಖಾತ್ರಿ ಗುಣ) — ಇನ್‌ಪ್ಲುಯೆಂಜಾ ನಿಮೋನಿಯಾ, ದಿವಸಕ್ಕೊಮ್ಮೆ ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ... ಬಾಟ್ಲಿ 1 ಕ್ಕೆ 0-8-0

3 ... ಗ್ರಹಣಿ ಗುಳಿಗೆ — ಕೂಸುಗಳ ಮತ್ತು ... ... ಬಾಟ್ಲಿ 1ಕ್ಕೆ 0 10 0

4 ... ಗುಳಿಗೆ ಇದು ಮಾಸಕ್ಕೆ ... ಒಂದೇಗುಳಿಗೆಯಿಂದ ... ಬಾಟ್ಲಿ 1 ಕ್ಕೆ 0 10 0

5 ... — ಮೂತ್ರಕೃಚ್ಛ್ರ ಉಷ್ಣ ... ... ಗುಣಕೊಡ ... ರೋಗಿಗಳು ... 2 ದಿವಸದೊಳಗೆ ... 14 ದಿವಸದ ಔಷದಿ ಕ್ರಯ ರೂ ...

6 ... ಮತ್ತು ... — ಇದರ ... ... ಹೋಗುವದು ಇದ ... ... 1 ಬಾಟ್ಲಿ ... 2 0 0

ಎನ್. ಗಣಪಯ್ಯಾ ಎಂಡ ಸನ್ಸ್ ಮೆಡಿಕಲ್ ಡೊಕ್ಟರ್ಸ್ ರಥಬೀದಿ ... ...

ಜಗತ್ಪ್ರಖ್ಯಾತ ... ಪ್ರಮುಖ! ಹೊಸದು ... ...

ಮುಖ ಜೀವನಾಮೃತ.

ಈ ಔಷಧವು ಹಲ್ಲು ಕೆಳತ ... ನೋಯುವ ಹಲ್ಲು, ... ಲ್ಲೊಳಗಿಂದ ರಕ್ತ ವ ... ... ಯುವ ಮುಖದಲ್ಲಿ ಉಂಟಾದ ... ಗಳಿಂದ ಈ ಎಲ್ಲಾ ವಿಕಾರಗಳಿಗೆ ರಾಮ ಬಾಣ ಔಷಧ ಇದ್ದಲ್ಲದೆ ... ಎಲ್ಲಾ ತರದ ಜ್ವರ ತಲೆಯ ... ವಾಂತಿ ಹೊಟ್ಟೆಬ್ಯಾನೆ ... ಳು, ಪ್ಲೇಗ ಕೋಲೆರಾ ... ಮತ್ತು ವಿಷಕಾರಕ ಪ್ರಾಣಿಗಳು ... ... ಮೋಹರೋಗಕ್ಕೆ ಗುಣ

ಕ್ರಯ ಬಾಟ್ಲಿ ೧ಕ್ಕೆ ಛತ್ತಂ—೧—೦

ಪತ್ತೆ:- ಗೋವಿಂದ ಎಸ್. ಕೆರೇಕರ. ಶ್ರೀ ಪಾಂಡುರಂಗ ಪ್ರಾವಿಡೆಂಟ ಕಂಪನಿ, ಕುಮಟಾ (... ...)

ಹೊಸ ಶೋಧ! "ಓಂ" ಹೊಸಶೋಧ! ಗುಣ ಬಾರದಿದ್ದರೆ ಹಣಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ.)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರಕವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ... ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ವ ಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಒದವುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲನವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಜೀನ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿವೊನ ಒಂದು ಸಾರಿಯದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರು ೧ ೧೨ ಆಣೆ ೩ ಡಬ್ಬಿಗಳಿಗೆ ರು ೪ ಆಣೆ ೧೨ ಡಬ್ಬಿಗಳಿಗೆ ರೂ. ... ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ಶ್ಹಿ ಆರ್ ಬ್ರದರ್ಸ ಮತ್ತು ಕಂಪನಿ ಪೋಸ್ಟ ಚಿಪ್ಪಾಣಿ, ಜಿ ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವಾವ ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾವ ಮದೆ ಸಮಾರಂಭಗಳಲ್ಲಿಯೂ ರಾತ್ರೆ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ, ಇದರಿಂದ ಬೇಕು ಹಚ್ಚು ಹೆಚ್ಚು ಖರ್ಚು ಸಹ ಕಡಿಮೆ ತಗಲುತ್ತದೆ ಈ ದೀಪಕಾಗಿ ... ... ಕ್ರಿಯೆಗಳು ಸಹ ಇವೆ

... ... ಬರೆಯಬೇಕು

ಪುರುಷೋತ್ತಮ ಲಕ್ಷ್ಮಣಯ್ಯ ... ಹೆಗಡೇಕರ, ದುಕಾನ, ಕುಮಟಾ.

Printed and published by Krishnarao Keshav Shenvi at his Sri ... Kanara Press Kumta

No. Reg. B 1270.

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೩.

ಪತ್ರದ ವರ್ಗಣಿ –

ಆ ಮುಂಗಡ ಅಗಾವು ರೂಪಾಯಿ 2–0–0.

ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ 2–13–0

ಬಿಡಿ ಸಂಚಿಕೆಗೆ 0–1–0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ –

ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಿನ(೧೧ ಎಪ್ ಉದ್ದ) ೫ ಸಾಲುಗಳ ವರೆಗೆ ರೂ. 1 0-0

ಆಮೇಲೆ ಪ್ರತಿ ಸಾಲಿಗೆ 0-2-0.

ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಹೊಂ ಸಮಕ್ಷ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೨ ಮಾಹೆ ಅಗೋಸ್ಟ ಸನ್ ೧೯೨೦ ನೇ ಇಸವಿ.]—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಹುರಿ, ಕಣ್ಣಿನ ಕ್ಷೀಣಿಯಿಂದ ತೀವ್ರನೋಯುವದು ಕಿವಿಮುಚ್ಚು, ಕಣ್ಣುನೋವು, ಅಪಸ್ಮಾರ, ನಿದ್ರೆಬಾರದಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಚಿತ ಗುಣಮಾಡುತ್ತದೆ, ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆ 1ಕ್ಕೆ 1 0 0, 3 ಕ್ಕೆ 2 10 0 ದೊಡ್ಡ ಸೀಸೆ1ಕ್ಕೆ 2-0 0 3ಕ್ಕೆ 5 4 0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಯೆ ಉರಿ ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ವೇಹರೋಗವನ್ನು ಗುಣ ಮಾಡುತ್ತದೆ

ಬಾಟ್ಲಿ 1 ರ ಕ್ರಯ 1 8 0

ಬಾಟ್ಲಿ 3 ರ ಕ್ರಯ 4 0 0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಕಾಲಯದಲ್ಲಿ ಅತ್ಯಲ್ಪವಾಗಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃದ್ಕಂಪ, ಬಿಳಿಪ್ರದರ ಬಿಳಿಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ 2/-

ಚೀನ್ ಚೀನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಬಿಕಂ, ಘಾಯ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ ಗುಣ ಅಧಿಕ ಡಬ್ಬಿ ೧ ಕ್ಕೆ 8 ಆಣೆ ಟ ಪ. ಅಲಾಯದ ಕೆಟಲಾಗಿಗೆ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7 ಕಂಕನಾಡಿ, ದಕ್ಷಿಣ ಕಾನಡಾ.

MALARIANA COMPANY.

RAMPANKATTA, MANGALORE

ಮಲೇರಿಯಾನಾ:— ಮಲೆಜ್ವರ, ಕಂಪಜ್ವರ ಮತ್ತು ಇದರಿಂದ ಉಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು 8 ಔನ್ಸಿನ ಬಾಟ್ಲಿ 1ಕ್ಕೆ ರೂ 1 8 ½ ಡಜನಿಗೆ ರೂ 8 8, 1 ಡಜನಿಗೆ ರೂ 16 8

ಮಲೇರಿನ್:— ಮಲೆಜ್ವರದ ಮಾತ್ರೆಗಳು ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು 25 60 ಮತ್ತು 100 ಮಾತ್ರೆಗಳಿಗೆ ಆಣೆ 8 ರೂ 1 ಮತ್ತು ರೂ 8–1

ರೆವ್ಯುಮೊ ಬಾಮು: ತಲೆಸಿಡಿತ, ಕರಿಣವಾತ ಇತರ ಎಲ್ಲಾ ನೋವುಗಳಿಗೆ ಕ್ರಯ ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 5-4 0

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ 1 10 1 ಡಜನಿಗೆ ರೂ 3

ಮುಲ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1 2 4 ಔನ್ಸ 1 2 4

ಆ 2½ ಆ 3½ ಆ 6 ಆ 11 ರೂ 1 1 ರೂ 2 4

ದೃಷ್ಟಿ ಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಡಾಕ್ಟರರೊಡನೆ ಪಕ್ಕಾ ಸಂಬಂಧವಾಗಿ ಪ್ರಾಯಶಃ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ ಇತರ ಎಲ್ಲಾ ಮಾಲುಗಳೂ ದೊರೆಯುವದು ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ಕಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪೆನಿ,

7. ಮಂಗಳೂರು.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೇನ ಕೋಟಿಗೂ, ಕೋಟಿಗೂ, ಬರುವಂಥವು, ಮತ್ತು ಹಾಸಿಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂಥವು ದಾವಣಗೆರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,

ದಾವಣಗೇರಿ, ಮೈಸೂರ ಪ್ರಾಂತ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅದವಾ ಬೆಟಿಯಾದರೆ ತರಿಸಿಕೊಡುವರು. ಮಾಹಿತಿಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ

ಶೇ ಷಗಿರಿರಾವ ಧಾಕಪ್ಪನವರ, ಶಿರ್ಶಿ

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ನಾವು ಪೂರೈಸುವೆವು

ಪತ್ತೆ— ಭಡತೀ ಭ್ರಾತೃಸಂಘ,

ಗೋಕರ್ಣ.

WAGLE NADKARNI & CO.

CHEMISTS, DRUGGISTS & GENERAL MERCHANTS.

SANDHURST ROAD,

Bombay.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯ, ಬಿದ್ದ ಜಖಮು, ಹಟ್ಟಿನ ನೋವು, ಯಾವದೇ ತರದ ಜಖಮು ಯಾ ಎಲುಬು ಮುರಿದಲ್ಲಿ ಸಹ ಇದನ್ನು ನೀರು ತಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ ಕ್ರಯ ಬಾಟ್ಲಿ ೧ಕ್ಕೆ ಆರೆಸೆ ೧೨ ಡಜ. ೧–೩–೦ ವ್ಯಾಪಾರಸ್ಥರಿಗೆ ಬರಪೂರ ಕಮಿಶನ್ ಪತ್ತೆ — ಮುಖ್ಯಾಫೀಸ ಹಿರೇಲಾಲ ದಲ್ಪತರಾಮ, ಗುರ್ಜರ ಹವೇಲಿ, ಕುಮಟಾ

॥ ಲೋಕಮಾನ್ಯ ಟಿಳಕ ಮಹಾನುಭಾವರ ಚರಿತ್ರ. ॥

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಇದೇ ಕಾರಣ ಮುಂದೆ [illegible] ಮಹಾರಾಜರ ಪತ್ರಕ ಪ್ರಕರಣದಲ್ಲಿ ಇವರಿಗೆ ಭಾಗ ತಕ್ಕೊಳ್ಳಬೇಕಾಯಿತು. ವಸ್ತುತಃ ಈ ಪ್ರಕರಣದ ಇತಿಹಾಸವನ್ನು ಕೊಡಲು ಇದು ಸ್ಥಳವಲ್ಲ. ಅವರೆ ೧೯೦೧ ರಿಂದ ೧೯೦೪ ರ ವರೆಗೆ ನಿರುಪ್ಪತ್ತ [illegible] ದಿಂದ ಈ ಪ್ರಕರಣದಲ್ಲಿಯು ಅವರ ವರ್ತನದ ಬಗ್ಗೆ [illegible] ವಿಚಾರವನ್ನು ಸಹಿಸಿದ್ದರೂ ಅದು ಕೇವಲ ಇವರ ಮಿತ್ರಪ್ರೇಮದ ದ್ಯೋತಕವೇ. ಇಷ್ಟೊಂದೇ ಹೇಳುವದು ಸದ್ಯಕ್ಕೆ ಅವಶ್ಯವು. ಅಸ್ತು.

೧೯೦೫ ರಿಂದ ಟಿಳಕರ ಜೀವನ ಚರಿತ್ರವು ವಿವಿಧದ ರಾಜಕೀಯ ಚಳವಳಿಗಳಲ್ಲೇ ಅಂತರ್ಭೂತವಾಗಿಯದೆ. ೧೯೦೫ ನೇ ಇಸವಿಯು ಹಿಂದುಸ್ತಾನದ ಬ್ರಿಟಿಶ ಆಳಿಕೆಯ ಇತಿಹಾಸದಲ್ಲಿ ಚಿರಸ್ಮರಣೀಯವು. ಇದೇ ವರ್ಷ ಕರ್ಝನ ಸಾಹೇಬರು ಜನರಿಯ ನಿಷೇಧಕ್ಕೆ ಕಿವಿಗೊಡದೆ, ಬಂಗಾಲವನ್ನು ಇಬ್ಭಾಗಿಸಿದರು. ಗೋಖಲೆಯವರ ಅಧ್ಯಕ್ಷತೆಯಲ್ಲಿ ಕೂಡಿದ ಆ ವರ್ಷದ ರಾಷ್ಟ್ರೀಯ ಸಭೆಯಲ್ಲಿ ಬಹಿಷ್ಕಾರದ ಠರಾವಿಗೆ ನಿಷೇಧ ಪ್ರದರ್ಶನದ ಸ್ವರೂಪದ ಮಾ[illegible]ವೇ! ಅದಕ್ಕೆ ಮಾನ್ಯತೆ ಕೊಡಲ್ಪಟ್ಟಿತು. [illegible] ವರ್ಷದ ಕಲಕತ್ತೆಯ ಅಧಿವೇಶನದಲ್ಲಂತೂ ದಾದಾಭಾಯಿ ಸ್ವರಾಜ್ಯ, ಬಹಿಷ್ಕಾರ, ಸ್ವದೇಶೀ, ರಾಷ್ಟ್ರೀಯ ಶಿಕ್ಷಣ ಮುಂತಾದ ವಿಷಯಗಳಮೇಲಿನ ಠರಾವುಗಳು ಪ್ರಸಿದ್ಧವಿರುವವು. ಆದರೆ ೧೯೦೭ ರಲ್ಲಿ ಸುರತ ಪಟ್ಟಣದಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ತಿರುಗಿ [illegible] ಧೋರಣವು ಅಂಗೀಕರಿಸಲ್ಪಟ್ಟಿತು. ಆದರೆ ಟಿಳಕರ ನೇತೃತ್ವದ ಕೆಳಗೆ ಎಲ್ಲ ರಾಷ್ಟ್ರೀಯ ಪಕ್ಷದವರು ಈ ಧೋರಣವನ್ನು ನಿಷೇಧಿಸಲು, ಅದರ ಪರಿಣಾಮವು ಸುರತದ ಅಧಿವೇಶನವು ಭಂಗವಾಗುವದರಲ್ಲಿ ಆಯಿತು.

ಟಿಳಕರಮೇಲಿನ ೩ ನೇ ಖಟ್ಲೆಯು.

ಈ ಬಂಗವಿಭಜನದ ತುಫಾನವು ಶಾಂತವಾಗುವಷ್ಟರಲ್ಲಿ ಮುಜಫರಪೂರದ ಬಾಂಬುಗಳ ಅತ್ಯಾಚಾರಗಳು ಹಿಂದೀ ಜನರ [illegible] ಕರಣಗಳನ್ನು ಹಾರಿಸಿದವು. ಡಂಕ್ಕಡ ಜಿಲ್ಲಾ ಮೆಜಿಸ್ಟ್ರೇಟರು [illegible] ಕೊಲ್ಲಲ್ಪಟ್ಟರು. ಇವೆಲ್ಲ ಅತ್ಯಾಚಾರಗಳ ಮೂಲಕ ಸರಕಾರವು [illegible] ದಡಪಶಾಹಿಯ ರಾಜನೀತಿಯನ್ನು ಸ್ವೀಕರಿಸಿತು.

ಯಾವನೊಬ್ಬ ವರ್ತಮಾನ ಪತ್ರದ ಸಂಪಾದಕನಮೇಲೆಯೂ, ಸಾರ್ವಜನಿಕ ವಕ್ತೃನ ಮೇಲೆಯೂ, ರಾಜದ್ರೋಹದ ಖಟ್ಲೆಯಾಗದೆ ಒಂದು ದಿನವೂ ಕಳೆಯುತ್ತಿದ್ದಿಲ್ಲ. ೧೯೦೮ ನೇ ಇಸ್ವಿಯ ಜೂನ ತಿಂಗಳಲ್ಲಿ ಪುಣೆಯಲ್ಲಿ ಕೂಡಿದ ಕಾಯಿದೇ ಕೌನ್ಸಿಲದ ಅಧಿವೇಶನದಲ್ಲಿ ಯೇನಕೇನ ಪ್ರಕಾರೇಣ ದೇಶದಲ್ಲಿಯ ಅಶಾಂತತೆಯನ್ನು ಅಡಗಿಸಲು ಸರಕಾರವು ನಿಶ್ಚಯಿಸಿರುವದೆಂತ ಗವರ್ನರ ಸಾಹೇಬರು ತಮ್ಮ ಧೋರಣವನ್ನು ಜಾಹೀರ ಪಡಿಸಿದರು. ಕೂಡಲೇ ವರ್ತಮಾನ ಪತ್ರಗಳ ಸತ್ರಕ್ಕೆ ಆರಂಭವಾಯಿತು.

[illegible] ಮತ ಭಾಲಾ, ಕಾಳ ಮೊದಲಾದ ಪತ್ರಗಳು ಈ ಧೋರಣಕ್ಕೆ ಬಲಿಯಾದವು. ಟಿಳಕರು ದಕ್ಷಿಣದ ಸಂಪಾದಕರಲ್ಲಿ ಅಗ್ರಗಣ್ಯರು. ಈ ಸರ್ವಭಕ್ಷಕ ಸತ್ರದಿಂದ ಅವರಾದರೂ ಹ್ಯಾಗೆ ತಪ್ಪಿ ಉಳಿದಾರು? ಜೂನ [illegible] ನೇ ತಾರೀಖಿನ ದಿವಸ ಟಿಳಕರಮೇಲೆ [illegible] ಆ ದಿವಸ ಮುಂಬಯಿಯ ಸರದಾರ ಗೃಹದಲ್ಲಿ ಅವರು ಕೈದು ಮಾಡಲ್ಪಟ್ಟರು. ಮುಂದೆ [illegible] ಲೇಖಗಳ ಬಗ್ಗೆ ಇಂಡಿಯನ್ ಪಿನಲ್ ಕೋಡ ಕಲಮ ೧೨೪ ಅ ಮತ್ತು ೧೫೩ ಅ ಇವೆರಡರ ಆರೋಪುಗಳ ಸಹಿತ ಖಟ್ಲೆಯು ಹೈಕೋರ್ಟಿಗೆ ಹೋಯಿತು. ಟಿಳಕರ ತರ್ಫಿನಿಂದ [illegible] ಜಿನ್ನಾ ಅವರು [illegible] ಮುಂದೆ [illegible] ಅರ್ಜಿ [illegible] ಮಾಡಿದರ [illegible] ಮೊದಲು ಟಿಳಕರ [illegible] ಲ್ಲಿ, ಟಿಳಕರ ತರ್ಫಿನ ಬೇರಿಸ್ಟರರಾಗಿದ್ದರು. ಆದರೆ ಈ ಪ್ರಸಂಗದಲ್ಲಿ [illegible] ವಿವೇಚನವು ಈಗ ಸರಿಯೋ ತಪ್ಪೋ ಜಾಮೀನ ಅರ್ಜಿಯ [illegible] ಒಪ್ಪಿಕೊಳ್ಳಲ್ಪಟ್ಟಿತು. [illegible] ಯಿಂದ ರಚಿಸಲ್ಪಟ್ಟ ಜೂರಿಯು ನಿರ್ಮಿಸಲ್ಪಟ್ಟು [illegible] ಗಳ ಸುನಾವಣಿಯು [illegible] ಆಯಿತು.

ಇಲ್ಲಿ ಸಂಗತಿಗಳನ್ನು [illegible] ಟಿಳಕರಿಗೆ ಶಿಕ್ಷೆ [illegible] ಸ್ವದೇಶಿಸ್ವಂ ದಾಗಿತ್ತೆಂ [illegible] ಕ್ಕೆ ಸ್ವತಃ [illegible] ನಮ್ಮ [illegible] ಬರುತ್ತ [illegible] ಸರಕಾರದ [illegible] ಯು [illegible] ಮುಕದ್ದಮೆಯ ಪರಿಣಾಮವು ಟಿಳಕರಿಗೆ [illegible] ಯಿತು. ಹವ್ವು ದಿವಸ [illegible] ವಿಚಾರ ನಡೆದು, ಕೊನೆಯಲ್ಲಿ [illegible] ವರ್ಷದ [illegible] ರಿಂದ [illegible] ಹಿಂದು [illegible] ಶಿಕ್ಷೆಯು [illegible] ಈ ಖಟ್ಲೆಯಲ್ಲಿ [illegible] ಟಿಳಕರು ಸ್ವತಃ [illegible] ವಾಗಿ [illegible] ಮಾಡಿದ ಭಾಷಣವು [illegible] ಸ್ವಾತಂತ್ರ್ಯದ [illegible] ಇತಿಹಾಸದಲ್ಲಿ ಅಜರಾಮರವಾಗಿರುವದು. ಮುಂದೆ [illegible] ರೀತಿಯಿಂದ ಕೋರ್ಟಿಗೆ [illegible] ಹೇಳುವದು ಬೋ [illegible] ಟಿಳಕರು ಉಚ್ಚರಿಸಿದ ನೇಕಾಭಿಮಾನಸ್ಫೂರಿತ ಶಬ್ದಗಳನ್ನು ಪ್ರತಿ [illegible] ಗೃಹಸ್ಥನು ನೆನೆಸಿಕೊಳ್ಳತಕ್ಕದು —

"ಜ್ಯೂರಿಯು ನನ್ನ ವಿರುದ್ಧ [illegible] ನಾನು ಸ್ವತಃ ನಿರಪರಾಧಿ ಇದ್ದೇನೆಂದು, ನನ್ನ ಖಾತ್ರಿಯುಂಟು. ಮಾನವರ ಪ್ರಾರಬ್ಧವನ್ನಾಳುವ ಉಚ್ಚತರವಾದ ಶಕ್ತಿಗಳಿವೆ. ನಾನು ಸ್ವತಂತ್ರತೆಯಲ್ಲಿರುವದಕ್ಕಿಂತ ನನ್ನ [illegible] ನಾನು ಅಂಗೀಕರಿಸಿದ ಕಾರ್ಯವು ಏಳಿಗೆಹೊಂದಬೇಕೆಂತ ಪರಮೇಶ್ವರನ ಇಚ್ಛೆ ಇದ್ದೀತು."

ಗೀತಾರಹಸ್ಯ

ಒಮ್ಮೊಮ್ಮೆ ಅನಿಷ್ಟದೊಳಗಿಂದ ಸಹ, ಇಷ್ಟವು ಉದ್ಭವಿಸುತ್ತದೆ. ಉಸುಬಿನ ಕಣದಿಂದುಂಟಾಗುವ ಕ್ಲೇಶವನ್ನು ನಿವಾರಿಸುವದಕ್ಕಾಗಿ ಮೌಕ್ತಿಕವನ್ನುಂಟು ಮಾಡುವ ಭೌತಿಕ ಕೀಟದೋಪಾದಿಯಲ್ಲಿ, ಟಿಳಕರು ಕಾರಾಗೃಹದ ಬೇಸರವನ್ನು ಹೋಗಲಾಡಿಸಲಿಕ್ಕೆ ಮಾಡಿದ ಪ್ರಯತ್ನದಿಂದ, ಜಗತ್ತಿಗೆ ಗೀತಾರಹಸ್ಯದಂಥ ಅಮೂಲ್ಯ ಜ್ಞಾನ ಭಾಂಡಾರದ ಲಾಭವಾಯಿತು. ಟಿಳಕರಂಥ ಉದ್ಯೋಗ ಪ್ರಕೃತಿಗಳಿಗೆ ಈ ಆರು ವರ್ಷಗಳ ಅನುದ್ಯಮತೆಯೆಂದರೆ, ಪ್ರಾಣಹರಕವೇ. ಆದರೆ ಈ ಸಮಯದಲ್ಲಿ ಅವರ ಇಚ್ಛಾಶಕ್ತಿಯೇ ಅವರಿಗೆ ಕೈಕೊಟ್ಟಿತು. ಕ್ಲಿಷ್ಟಾತ್ಮಕ್ಕೆ ಶಾಂತಿಯನ್ನು ಕೊಡಲಿಕ್ಕೆ ಭಗವದ್ಗೀತೆಯಂಥ ಮತ್ತೊಂದಿಲ್ಲ. ಟಿಳಕರು ಕಾರಾಗೃಹದಲ್ಲಿ ಆ ಪುಣ್ಯ ಗ್ರಂಥದ ಪಾರಾಯಣ ಮಾಡಹತ್ತಿದ್ದರು. ಆ ಗ್ರಂಥಮೇಲಿನ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಎಲ್ಲ ಭಾಷ್ಯಕಾರರ ಮತಗಳನ್ನು ಪರಿಶೀಲಿಸಲು, ಅವರದಂಥ ಸ್ವತಂತ್ರ ಬುದ್ಧಿಯು ಈ ಮತಗಳಲ್ಲೊಂದನ್ನಾದರೂ ಸ್ವೀಕರಿಸಲಿಕ್ಕೆ ಆತುರವಾಗಲಿಲ್ಲ. ಮೂಲ ದೃಷ್ಟಿಯಿಂದಲೂ, ಸ್ವತಂತ್ರ ಬುದ್ಧಿಯಿಂದಲೂ, ಗ್ರಂಥವನ್ನು ಪರಿಶೋಧಿಸಿ, ಮೊದಲಿನ ಎಲ್ಲ ಭಾಷ್ಯಕಾರರ ಮತಗಳನ್ನು ಖಂಡಿಸಿ ತಮ್ಮದೊಂದು ಸ್ವತಂತ್ರ ಪ್ರವೃತ್ತಿಕಾರಕ ಮತವನ್ನು ಪ್ರತಿಪಾದಿಸಿದರು. ಇದೇ ಗೀತಾರಹಸ್ಯವು. ಇದರಮೇಲೆ ಬಹಳ ಅನುಕೂಲ ಪ್ರತಿಕೂಲ ಟೀಕೆಗಳಾಗಿದ್ದಾವೆ ಖರೇ. (ಯಾರು ತಾವೇ ಈ ಟೀಕೆಗಳೊಳಗಿಂದ ತಪ್ಪಿರುವರು? ಕ್ರಾಯಿಸ್ತ, ಮಹಮ್ಮದ, ಗೌತಮ ಬುದ್ಧ, ಶಂಕರಾಚಾರ್ಯ ಮುಂತಾದ ವಿಭೂತಿಗಳು ತಪ್ಪದಿದ್ದಲ್ಲಿ ಟಿಳಕರಾದರೂ ಹ್ಯಾಗೆ ತಪ್ಪಿ ಉಳಿದಾರು? ಆದರೂ, ವ್ಯವಹಾರಿಕ ದೃಷ್ಟಿಯಿಂದ ವಿಚಾರಮಾಡಿದರೂ, ನಿವೃತ್ತಿ ಮಾರ್ಗವು ಈ ವರೆಗೆ ಹಿಂದುಸ್ತಾನಕ್ಕೆ ಮಾಡಿದ ಹಾನಿಯನ್ನು ನೆನಿಸಿದರೆ ಟಿಳಕರು ಬೋಧಿಸಿದ ಪ್ರವೃತ್ತಿ ಮಾರ್ಗವು ಪ್ರಸ್ತುತ ಕಾಲದಲ್ಲಿ ಹಿತಾವಹವೆಂದು ಕಂಡುಬರುವದು.

ಮುಂದೆ ೧೯೧೪ ನೇ ಇಸ್ವಿಯಲ್ಲಿ ಟಿಳಕರು ಈ ಅಜ್ಞಾತವಾಸದಿಂದ ಹೊರಬಿದ್ದು ನೋಡಲು, ಜಗತ್ತಿನ ರಂಗವೇ ಬದಲಾಗಿತ್ತು. ಜರ್ಮನಿಯು ಮಹಾಯುದ್ಧದ [illegible] ಹೊತ್ತಿಸಿತ್ತು. ಇಂಗ್ಲಂಡವು ದುರ್ಬಲ ರಾಷ್ಟ್ರಗಳ ಕೈವಾರವನ್ನು ತಕ್ಕೊಂಡು, ಯುದ್ಧರಂಗದಲ್ಲಿ ಇಳಿದಿತ್ತು. ಇದರಿಂದ ಹಿಂದುಸ್ತಾನದಲ್ಲಿ ಹೊಸ ಮಹತ್ವಾಕಾಂಕ್ಷೆಗಳು ಉದಯವಾಗಿದ್ದವು. ಮವಾಳ ಬಹಾಲ ಇವೆರಡೂ ಪಕ್ಷದವರು ಜಗತ್ತಿನ ರಾಷ್ಟ್ರಗಳಲ್ಲಿ ಹಿಂದುಸ್ತಾನಕ್ಕೆ ಸನ್ಮಾನಸ್ಥಾನವನ್ನು ಸಂಪಾದಿಸುವದರಲ್ಲಿ [illegible] ಟಿಳಕರೆ ಹಿಂದುಸ್ಥಾನದ ಉನ್ನತಿ ಮಾಡಿಕೊಳ್ಳಲಿಕ್ಕೆ [illegible] ನಿರ್ಮಾಣದ [illegible] ಕಂಡು ಆ ದಿಕ್ಕಿನಿಂದ ಪ್ರಯತ್ನಮಾಡಲು ಆರಂಭಿಸಿದರು.

ಮುಂದಾಳುಗಳ ಕಣ್ಣೀರು

ಹಿಂದ ಮಾತೆಯ ಪ್ರಸಿದ್ಧ ಮಗನೊಬ್ಬನು [illegible] ತಾದನು. [illegible] ಎಲ್ಲ [illegible] ಗಳನ್ನೂ ಆಚಾರಗಳನ್ನೂ ಹೆಜ್ಜೆಜ್ಜೆಗೆ ಎತ್ತಿ ಹಿಡಿದ ಆ ಉಚ್ಚಭಾವನೆಯುಳ್ಳ [illegible] ತ್ಮ ದೇಶಭಕ್ತ [illegible] ಧೀಯವಂಥ [illegible] ಆತ

ಘಿಷೆಯಲ್ಲಿರಲಿಲ್ಲ, ಸ್ವಾರ್ಥದ ಜ್ಞಾನ ಆತನ ಜೀವನದ ಲಕ್ಷಣವಾಗಿತ್ತು. ಆತನು ಹಿಂದ ಮಾತೆಗಾಗಿಯೇ ಜನಿಸಿದನು. ಅವಳಿಗಾಗಿಯೇ ಬದುಕಿದನು, ಅವಳಿಗಾಗಿಯೇ ಹೋಗಿದನು, ಅವಳಂತೆ ಅವಳ ಸೇವೆಗಾಗಿಯೇ ದೇಹವಿಟ್ಟನು. ಕಠಿಣನೆಯ ಪ್ರಖರವಾದ ವಾಸದಿಂದ ಅವನ ದೇಹವು ಸವೆದುಗ್ಯ್ಯಾ, ಶಕ್ತಿಯು ಸವೆದುಗ್ಯ್ಯಾ, ಎಲ್ಲರಿಗಿಂತ ತಾನು ಗಟ್ಟಿಗನೂ, ದಾಂಡಿಗನೂ ಎಂದು ತೋರಿಸಿ ಸಂತ ಕಳ್ಳದಿಯಿಂದ ಕೆಲಸ ಮಾಡಿ ಪರಮಾತ್ಮನಲ್ಲಿ ಲೀನನಾದನು, ಮಾತ್ರ ಹಿಂದ ಪುತ್ರರಿಗೆ ಅವನ ತೇಜವು ಎಂದೆಂದಿಗೂ ಸ್ಫೂರ್ತಿಗೊಳಿಸದೆ ಇರದು

—ಶ್ಯಾವಿ ಬಿಝುಂಟಿ

"ಭಕ್ತಿಯ ಭಾಂಡಾರ"

ದೇಶಭಕ್ತಿಯೇ ಲೋಕಮಾನ್ಯರ ಜೀವನದ ಆಧಾರವಾಗಿತ್ತು, ಅವರು ನಮಗೆ ಬಿಟ್ಟ ಭಕ್ತಿಯೂ ಅದೇ ಮಾತ್ರ ನಾವು ಅದನ್ನು ಪ್ರಯತ್ನದಿಂದ ಬೆಳಿಸಲಿಕ್ಕೆ ಬೇಕು ನಿನ್ನೆ ಕೂಡಿದ ಅಸಂಖ್ಯ ಜನರ ದಟ್ಟಣೆಯೇ ಅವರ ಲೋಕಪ್ರೀತಿಯ ದ್ಯೋತಕವಾಗಿದೆ

—ಮಹಾತ್ಮಾ ಗಾಂಧಿ

ಲೋ| ಬಾಳ ಗಂಗಾಧರ ಟಿಳಕರವರು ಆಜಾರಿಯಿದ್ದಾಗ್ಗೆ ಅವರಿಗೆ—

ಆಯುರಾರೋಗ್ಯ ಚಿಂತನೆ ಮಾಡಿ, ರಚಿಸಿದ ಪದ್ಯವು (ಜಗದೀಶಾ ನೀನೆ ಕಾಯಬೇಕು ಬಾಲರಾ| ಎಂಬಂತೆ)

ಜಗದೀಶಾ ಕಾಯಬೇಕು ಬಾಲ ತಿಲಕನಾ| ಪಲ್ಲ||
ಜಗದ ವಂದ್ಯ ಲೋಕಮಾನ್ಯ ಧೈರ್ಯಶಾಲಿಯಾ|
ಅನುಪಲ್ಲ||
ಹಿಂದೆ ಉಳಿದ ಹಿಂದುಭೂಮಿ ಬಂಧು ವೃಂದವಾ|
ಆನಂದದಿಂದ ವಂದನಮಾಡಿ ತಂದ ಶ್ರೇಯವಾ||೧||
ಕಾಲಕರ್ಮದಿಂದ ಕೂಡಿ ಬಂದ ಸಂಕಟಾ|
ಕಾಲಹರನೆ ದೂರ ಮಾಡಿ ತೋರು ಮೋದವಾ||೨||
ನಮ್ಮ ಆಯು, ನಮ್ಮ ಪುಣ್ಯ, ನಮ್ಮ ಕೀರ್ತಿಯಾ|
ಕಮ್ಮಿಯಾಗಿ ಮಾಡಿ ಕೊಡು ದೀರ್ಘ ಆಯುವಾ||೩||

ಲೋಕಮಾನ್ಯರು ತಾ ೩೧-೭-೧೯೨೦ ನೇ ಶನಿವಾರ ರಾತ್ರಿ ೧೨|| ಘಂಟೆಗೆ ತೀರಿದರೆಂಬ ದುಃಖ ವಾರ್ತೆಯನ್ನು ಕೇಳಿ, ರಚಿಸಿದ ದುಃಖೋದ್ಗಾರದ ಪದ್ಯವು

||ಚಂಪಕಮಾಲಾವೃತ್ತ||

ಭಾರತಭೂಮಿಯಲ್ಲಿ ಸತಿ ಜನಿಸಿದ ದಾಲದ
ಲೋಕದ ತಿಲಕನೂ|
ಅರುಹುತಲೀರ್ದ ನಾತನವ ದೇಶಹಿತಾರ್ಥದ
ಕರ್ಮಕಾಂಡವ||
ಅರಿಯದೆ ಬಂದುದಲ್ಲ ಘನ ದುಸ್ತರವಾದ ಈ
ಕಾಲಮೃತ್ಯುವು|
ನಿಕಟದ ದುಃಖದಿಂದ ಜನ ಕಂದಿತು ಕುಂದಿತು
ಹಿಂದು ರಾಷ್ಟ್ರದೊಳ್ | ೧||

||ಕಂದಪದ್ಯ||

ದೇಶದ ದಿನ ಮಣಿ ಪೋದನು|
ಪಾಶದಿ ಎಳೆದೊಯ್ದು ನಕಟ ಜವದಿಂ ಜವನೂ||
ಕ್ಲೇಶದಿ ಮುಳುಗಿಹರೆಲ್ಲರು|
ಲೇಸನು ನಾವ್ ಕಾಣೆವೆಂದು ಶೋಕಂಗೆಯ್ವರ್||೧||

ಲೋಕಮಾನ್ಯನೆಂಬ ಭೂಮಾತೆಯ ತಿಲಕನು ಅಸ್ತಂಗತನಾದನು!! ಭಾರತಮಾತೆಯ ಬಾಲಸೂರ್ಯನು ಕಾಣದಂತಾದನು!!! ಕಾಲಾಯ ತಸ್ಮೈನಮಃ!

करुणा विमुखेन मृत्युना हरता त्वां वद किं न मे हृतम्. । — **कालिदास.**

ಲೋಕಬಂಧು ಬಾಳಗಂಗಾಧರ ಟಿಲಕರವರು. ಈ ಗೆಂಟು ದಿವಸದಿಂದ ಆಜಾರಿಯಾಗಿದ್ದ ಸಂಗತಿಯು ಮಾತ್ರ, ಹಿಂದುಸ್ಥಾನದ ಜನರಿಗೆ ದೊಡ್ಡ ವಿವಂಚನೆಯು ಗಿತ್ತು. ಆದರೆ ಯಾವತ್ತು ಹಿಂದೂ ರಾಷ್ಟ್ರದ ಸಾತ್ವಿಕ ಜನರ ವಿನಂತಿಯನ್ನು ಬದಿಗೊತ್ತಿ, ಕಳೆದ ಶನಿವಾರ ರಾತ್ರಿ ೧೨|| ಘಂಟೆಗೆ- ನಿಷ್ಠುರ- ಕಾಲನ್ನು - ಕನಿಕರವಿಲ್ಲದೆ, ಲೋಕಮಾನ್ಯರ ಪಂಚಪ್ರಾಣವನ್ನು ಎಳೆದೊಯ್ದನು

ನಾರಾಯಣ ಜಗನ್ನಾಥ ಗೋಖಲೆ ಮುಂಡಗೋಡ

ರಸ್ತೆಯ ಗೋಳಾಟದ ಸ್ವಾನುಭವದ ಮಾಹಿತಿ.

ಕೆಲವಂಶದಿಂದಾದರೂ ಲೋಕಲಬೋರ್ಡ ಖಾತೆಯು ಜನರ ಕೈಯಲ್ಲಿ ಸಿಕ್ಕಿ, ಒಂದು ವರ್ಷವು ತುಂಬುತ್ತಾ ಬಂತು ಆದರೂ ರಸ್ತೆಗಳಲ್ಲಿ ಜನರಿಗೆ ಆಗುವ ತ್ರಾಸವು ಸ್ವಲ್ಪವೂ ಕಡಿಮೆ ಆದದ್ದು ಕಂಡುಬರುವದಿಲ್ಲ ಬೇಸಿಗೆ ಕಾಲದಲ್ಲಿ ಕಸಾವಿಳ್ಳ ಎತ್ತುಗಳು ಹ್ಯಾಗಾದರು ಬಂಡಿ ಎಳದು, ಮಳೆಗಾಲದ ಕುರುವಿಗೆ ಶಾಶ್ವತ ವಿಶ್ರಾಂತಿಯ ದೆಸೆಯಿಂದ ಪರಲೋಕದ ರಸ್ತೆ ನಿರೀಕ್ಷಣೆಯಲ್ಲೇ ತೊಡಗುವವು ಮಳೆಗಾಲದಲ್ಲಿ ಎತ್ತುಗಳು ಬಂಡಿ ಎಳೆಯುವದು ಹಾಗಿರಲಿ, ಮನುಷ್ಯಪ್ರಾಣಿಯು ಇಂಥಾ ರಸ್ತೆಯಲ್ಲಿ ಜೀವಾ ಯಹಸ್ತ್ಯೆಯಲ್ಲಿ ಹಿಡಕೊಳ್ಳಬೇಕಾಗುತ್ತದೆ ಖುದ್ದು ನಡುಹಗಲಿನಲ್ಲಿ ಮನುಷ್ಯನು ತನ್ನ ಪಾದದಲ್ಲೇ ದೃಷ್ಟಿಯಿಟ್ಟು ಪಾದ ಮುಂದಿಡಬೇಕು ಒಂದು ವೇಳೆ ದೇವರು ನಿರ್ಮಿಸಿದ ಸೃಷ್ಟಿ ಸೌಂದರ್ಯದ ಕಡೆ ಇವನ ಮನಸ್ಸು ಹೋಗಿ ಬಿಟ್ಟರೆ, ಇವನು ಕೊರಕಲದಲ್ಲಿ ಬಿದ್ದು ಚಟಪಟಿಸುವದೇ ಹೇಗಾದರು ಒಂದು ಕೊರಕಲದಿಂದ ಬಿದ್ದವನು ಎದ್ದು, ಮತ್ತೊಂದು ಹೆಜ್ಜೆ ಇಡುವಷ್ಟರಲ್ಲಿ ಮತ್ತೊಂದು ಇದಕ್ಕೂ ಉನ್ನತವಾದ ಗುಂಡಿಯು ಸಿದ್ಧವಾಗಿಯೇ ಇರುವದು ಆಜು ಗುಡ್ಡಗಳಿಂದ ಬರುವ ನೀರಿಗೆ ನಿಬಂಧವಿಲ್ಲದೆ ಇರುವದರಿಂದ, ಅವು ತಮ್ಮ ಸಂಗಡ-ಕಸ-ಕಲ್ಲು ಮುಳ್ಳುಗಳನ್ನು ತಂದು ರಸ್ತೆಯಲ್ಲಿ ಹಾಕುವವು. ಈ ಮುಳ್ಳುಗಳ ಭಯಕ್ಕಂತ ಜೋಡುಗಳನ್ನು ಉಪಯೋಗಿಸುವದೂ ಅಸಾಧ್ಯವೇ. ರಸ್ತೆಯಲ್ಲಿ ಮೊಳಕಾಲ ಮಟ್ಟ ಹುಗಿಯುವ ಅಲೀನಲ್ಲಿ ಕಾಲಿಟ್ಟು ತಿರುಗಿ ಆ ಕಾಲು ತೆಗೆಯುವಷ್ಟರಲ್ಲಿ, ಜೋಡು ಒಳಗೇ ಎಳಕೊಂಡು ಕಾಲು ಮಾತ್ರ ಹೊರಗೆ ಬರುತ್ತದೆ ಇಂಥಾ ಕಷ್ಟಕ್ಕೆ ಒಳವಾಗಬಾರದೆಂತಿದ್ದರೆ, ಪಾದರಕ್ಷೆಯನ್ನು ಮನೆಗೆ ತರಬೇಕೆಂತ ಇದ್ದರೆ, ಕಿರಸ್ತಿನವರಿಗೆ ಬರುವ ಪ್ರಸಂಗ ತಿಳ್ಳಾ ಅನ್ಯ ಮಾರ್ಗವಿರುವದಿಲ್ಲ ಕೆಲವೊಂದು ಘಟ್ಟ-ಮಟ್ಟ ಜಾಗವೆಂತ ಪಾದರ ಧಾರಣ ಮಾಡಿಕೊಂಡು, ಒಳ್ಳೇ ದುಸ್ತರದಿಂದ ಒಂದು ಹೆಜ್ಜೆ ಇಡುವದೇ ತಡ, ಕಾಲು ಮೇಲಾಯಿತಂತಲೇ ತಿಳಿಯಬೇಕು ರಸ್ತೆಯಲ್ಲಿ ಇಂಥಾ ದುಃಸ್ಥಿತಿಯು ಬರಲಿಕ್ಕೆ ಕಾರಣವೇನು? ನಮ್ಮ ಗುಡ್ಡಗಾಡು ಪ್ರದೇಶದಲ್ಲಿ ಮಳೆ ಹೆಚ್ಚು ಇದ್ದು, ಗುಡ್ಡಗಳ ಬಿರೆಯಿಂದ ಬರುವ ನೀರಿನ ಪ್ರವಾಹಕ್ಕೆ ಯೋಗ್ಯ ಪ್ರತಿಬಂಧವಿಲ್ಲದಿರುವದರಿಂದ, ಇಂಥಾ ಅನರ್ಥಗಳಾಗುತ್ತವೆ. ನೀರಿನ ಪ್ರವಾಹಕ್ಕೆ ತಕ್ಕ ದಾರಿಯನ್ನು ನಿರ್ಮಿಸಿಕೊಟ್ಟ ಹೊರತು ನಮ್ಮ ದಾರಿಯು ಸುಗಮವಾಗಲಾರದು. ಈ ತನಕ ಲೋಕಲ್‌ಬೋರ್ಡ ಮೆಂಬರರ ದೃಷ್ಟಿಯು ಯಾಕೆ ಹೋಗಲಿಲ್ಲವೆನ್ನುವದು ತಿಳಿಯಲಿಲ್ಲ. ಪಾಸಿ[illegible]ದರೆ, ನಮ್ಮ ದೇಶದ ಸ್ವಸಾರಿಕ ಸ್ಥಿತಿಗೆ ತಕ್ಕಂತ ರಸ್ತೆಗೆ ಗಟಾರ, ಮೋರಿ ಗಟಾರ, ಇವುಗಳ ಮಹತ್ವವು ಬಹಳ ಇರುತ್ತದೆ. ಮೊದಲು ಇವುಗಳನ್ನು ಸುಧಾರಿಸಿಕೊಂಡ, ಆಮೇಲೆ ರಸ್ತೆಯು ಸಹಜ ಸುಧಾರಿಸಲಿಕ್ಕೆ ಬಂದೀತು. ಈ ಪ್ರಗತಿಯ ಕಾಲದಲ್ಲಿ ರಸ್ತೆಯು ಒಳ್ಳೇ ಸುಸ್ಥಿತಿಯಲ್ಲಿ ಇರುವದು ಒಂದು ಅಗತ್ಯದ ಸಂಗತಿಯಾಗಿರುತ್ತದೆ. ನಮ್ಮಲ್ಲಿ ಪ್ರವಾಸಕ್ಕೆ ಅನುಕೂಲವಾದ ಸೈಕಲ-ಮೋಟಾರ-ಟಾಂಗಾ-ಗಾಡಿಗಳು ಏಕೂ ಇಲ್ಲದ ಮೂಲಕ, ರಸ್ತೆಗಳು ಸುಸ್ಥಿತಿಯಲ್ಲಿದ್ದರೆ, ಈ ಜನರ ಹಾನಿಗಳು ಪರಿಗಣಿಸಿ ತೀರದು. ಆದ್ದರಿಂದ ಬೋರ್ಡ ಮೆಂಬರರು, ಖರೇ ಖುಚೀ ಮೆಂಬರರಾಗಿದ್ದ, ಇಂಥಾ ಸ್ಥಿತಿಗಳನ್ನು ಸ್ವಂತ ನಜರಿಗೆ ತಂದುಕೊಂಡು, ಸುಧಾರಿಸಿದರೆ ಮಾತ್ರ ತಮ್ಮ ಮೆಂಬರಿಯು ಸ್ವಾರ್ಥಕವಾಗುವದೆಂತ ತಿಳಿಯುತ್ತೇನೆ

ತಾರೀಖು ೧೯-೭-೨೦.
ಮುಕ್ಕಾಂ ಪಕ್ಕಿಗದ್ದೆ ತಾಲೂಕ ಸಿದ್ದಾಪೂರ } ವಿಶ್ವೇಶ್ವರ ವೆಂಕಪ್ಪ ಹೆಗಡೆ ಹೂವಿನಮನೆ

ಬಾಲವಿವಾಹವೋ ಬ್ರಹ್ಮಚರ್ಯ ಹಾನಿಯೋ?

(ಲೇಖಕ— ಕಾಳಿ)

ಬ್ರಹ್ಮಚರ್ಯವೂ ಅದರ ನಿಯಮಗಳೂ (೪)

ಹಿಂದೆ ಬಾಲವಿವಾಹವು ಶಾಸ್ತ್ರಸಮ್ಮತವೂ ನಿರ್ದುಷ್ಟವೂ ಆಗಿರುವದರಿಂದ, ಸಮಾಜಕ್ಕೆ ಹಾನಿಯನ್ನು ಮಾಡುವದಿಲ್ಲ, ಮೇಲಾಗಿ ಉಪಕಾರವನ್ನೇ ಮಾಡುತ್ತದೆ ಎಂಬ ವಿಷಯ ಸಿದ್ಧವಾಯಿತು ಆದರೆ ಇದರಿಂದ ಈಗ ಸಮಾಜಕ್ಕೆ ಆಗುತ್ತದೆಂದು ತಿಳಕೊಳ್ಳುವ ಹಾನಿಯನ್ನು ಬ್ರಹ್ಮಚರ್ಯದ ಅಧಃಪಾತಕ್ಕೆ-ಪ್ರಧ್ವಂಸಕ್ಕೆ- ಸರಿ ಹಚ್ಚಿ ನೋಡಿದರೆ, ಆ ಹಾನಿಯು ಏನೂ ಇಲ್ಲೆಂದು ಕಂಡುಬರುವದು ಬ್ರಹ್ಮಚರ್ಯವೆಂದರೇನು, ಅದರ ಅಧಃಪಾತವೆಂದರೆ ಹೇಗೆ, ಅದರಿಂದ ನಮ್ಮ ಸಮಾಜವಕ್ಕೇ ಅಲ್ಲ ರಾಷ್ಟ್ರದ ಮೇಲೆ-ಮನುಷ್ಯಜಾತಿಯ ಮೇಲೆ ಸಹ-ಆದ್ದ, ಆಗುವ ಪರಿಣಾಮಗಳು ಅವವು ಎಂಬದನ್ನ ವಿವರಿಸುವೆವು

ಧರ್ಮ, ಅರ್ಥ, ಕಾಮ, ಮೋಕ್ಷ ಇವು ಪುರುಷಾರ್ಥಗಳು- ಮನುಷ್ಯನು ಬಯಸತಕ್ಕ ಪ್ರಯೋಜನಗಳು ಇತರ ಪ್ರಾಣಿಗಳಿಗೆ ಇವುಗಳ ಕಲ್ಪನೆಯಿರುವದಿಲ್ಲ ಅದ್ದರಿಂದಲೇ ಈ ವಿಶೇಷವಾದ ಧರ್ಮದ ಮೂಲಕ ಮನುಷ್ಯಜಾತಿಯು ಇತರ ಜಾತಿಗಳಿಂದ ವ್ಯಾವರ್ತಿಸಲ್ಪಡುವದೆಂದು ಹೇಳಬಹುದು ಮನುಷ್ಯನು ಮೊದಲು ಧರ್ಮದಂತೆ ಆಚರಿಸಬೇಕು ಬಳಿಕ ಧರ್ಮದ್ವಾರಾ ಅರ್ಥ (ಸಂಪತ್ತು) ವನ್ನು ಗಳಿಸಬೇಕು, ಆಮೇಲೆ ಧರ್ಮಾರ್ಥಗಳ ಸಹಾಯದಿಂದ ಕಾಮವನ್ನು (ಬಯಕೆ) ಪೂರಯಿಸಿಕೊಳ್ಳಬೇಕು, ಮತ್ತು ಇವೆಲ್ಲವುಗಳ ಸಾಹಾಯ್ಯದಿಂದಲೇ ಮೋಕ್ಷವನ್ನು ಪಡೆಯಬೇಕು. ಆದರೆ ಈ ಪ್ರಯೋಜನವನ್ನು ಮನುಷ್ಯನು ಹೇಗೆ ಪಡೆಯಬೇಕು, ಈ ಶಾಶ್ವತ ಜ್ಞಾನದ ಆಚರಣೆಯು ವ್ಯವಹಾರದಲ್ಲಿ ಆಗುವ ಬಗೆ ಹೇಗೆ? ಈ ವಿಷಯವು ಸಕ್ಕದ್ದರ್ಶನದಲ್ಲಿ ಬಿಗಿಯಾಗಿ ಕಂಡರೂ, ಸಾಧಕರಿಗೆ ಇದನ್ನಿದ ಎಂದೂ, ಎಂದೂ ಆಶಾಭಂಗವಾಗುವದಿಲ್ಲ. ಪ್ರಾಚೀನಕಾಲದ ವರ್ಣಾಶ್ರಮ ವ್ಯವಸ್ಥೆಗಳು ಇದನ್ನು ಸುಲಭಸಾಧ್ಯವಾಗಿ ಮಾಡುತ್ತವೆ. ಬ್ರಹ್ಮಚರ್ಯವು ಈ ಪುರುಷಾರ್ಥಗಳ ಇಮಾರತಿಗೆ ನೆಲಗಟ್ಟಾಗಿರುವದು.

ಬ್ರಹ್ಮವೆಂದರೆ, ವೇದ ಅಥವಾ ವಿದ್ಯೆಯು, ಚರ್ಯವೆಂದು ಆಚಾರವು ವೇದಾಧ್ಯಯನಕ್ಕಾಗಿ, ಇಲ್ಲವೆ ವಿದ್ಯಾರ್ಜನೆಗಾಗಿ ಅವಶ್ಯವಿರುವ ಆಚರಣೆಗೆ ಬ್ರಹ್ಮಚರ್ಯವೆನ್ನುವರು. ವಿದ್ಯೆ ಕಲಿಯಬೇಕಾದರೆ, ಶರೀರವು ಸಶಕ್ತನಾಗಿಯೂ, ಮನಸ್ಸು ಸ್ಥಿರವಾಗಿಯೂ ಇರತಕ್ಕದ್ದು. ಆದರೆ, ಈ ಕೆಲಸವು ಇಂದ್ರಿಯ ದಮನದ ಹೊರತು ಸಾಧ್ಯವಲ್ಲ. ಈ ವಿಷಯದಲ್ಲಿ ಮನು ಮಹರ್ಷಿಗಳು—

ವಶೇಕೃತ್ವೇಂದ್ರಿಯಗ್ರಾಮಂ
ಸಂಯಮ್ಯ ಚ ಮನಸ್ತಥಾ|
ಸರ್ವಾನ್ ಸಂಸಾಧಯೇದರ್ಥಾನ್
ಅಕ್ಷಿಣ್ವನ್ ಯೋಗತಸ್ತನುಮ್ ||

(ಮುಂದೆ ೩ನೇ ಪಾನಿನಮೇಲೆ)

ಕಾನಡಾವೃತ್ತ.

ಗುರುವಾರ, ತಾರೀಖು ೧೪ ಮಾಹೆ ಆಗೋಸ್ಟ, ೧೯೩೦.

ಸ್ಮಾರಕದ ವಿಡಂಬನೆ.

ಸ್ಮಾರಕವೆಂದರೇನು, ಅದಕ್ಕೆ ಸಾರ್ವಜನಿಕ ಸ್ವರೂಪವು ಹ್ಯಾಗೆ ಪ್ರಾಪ್ತವಾಗುತ್ತದೆ? ಲೋಕಮತಕ್ಕೆ ವಿರುದ್ಧವಾಗಿ ಕೆಲ ವ್ಯಕ್ತಿಗಳಿಗೆ ಸ್ಮಾರಕದ ಸನ್ಮಾನವು ಹ್ಯಾಗೆ ದೊರಕುತ್ತದೆ? ಇದಕ್ಕಾಗಿ ಸ್ಮಾರಕದ ಕಲ್ಪನೆಯು ಎಷ್ಟು ದೂಷಿತವಾಗಿದೆ? ಎಂಬುದರ ವಿಷಯವಾಗಿ, ನಾವು ಹಿಂದೊಮ್ಮೆ ತಾತ್ವಿಕ ವಿವೇಚನೆಯನ್ನು ಮಾಡಿದ್ದೆವು. ತಾತ್ವಿಕ ವಿವೇಚನೆಯೊಂದಿಗೆ ದೃಷ್ಟಾಂತಗಳನ್ನೂ, ಉದಾಹರಣೆಗಳನ್ನೂ ಮುಂದಿಟ್ಟ ಹೊರತು ವಿಷಯಜ್ಞಾನವು ಸರ್ವಸಾಧಾರಣ ಜನರಿಗೆ ಪೂರ್ಣವಾಗಿ ಆಗುವದಿಲ್ಲೆಂತಲೋ ಏನೋ, ಸ್ಮಾರಕಭಕ್ತರು ಉದಾಹರಣೆಗಳನ್ನು ತಮ್ಮ ಅಂಧಭಕ್ತಿಯೊಳಗೆ ನಿರ್ಮಿಸುತ್ತಿರುವರು. ಅಪಾತ್ರರಿಗೆ ಸ್ಮಾರಕದಿಂದ ಮನ್ನಿಸುವ ಉಪದ್ವ್ಯಾಪದ ಒಂದು ತಾಜಾ ಉದಾಹರಣೆಯು, ನಾಟಿಪ್ರತ್ಯಕ್ಷವನ್ನು ನಟಿಸುತ್ತ, ಪರದೆಯೊಳಗಿಂದ ಹೊರಬೀಳುವ ವಾರಾಂಗನೆಯಂತೆ ರಂಗಸ್ಥಳದೊಳಗೆ ಬರಹತ್ತಿದೆ. ಇದರ ನಾಟ್ಯವು, ಇದರ ನರ್ತನವು, ಇದರ ಮಂಜುಳ ಗಾಯನವು, ಇಷ್ಟು ಸೂಕ್ಷ್ಮವಾಗಿದಲ್ಲ,-ಅವುಗಳ ಧ್ವನಿಯೂ, ಸ್ವರಸ್ಪರ್ಶ, ಬಹುಜನ ಸಮಾಜದ ಕಿವಿಗಳಿಗೆ ಕೇಳಬಂದಿಲ್ಲ. ನಾವು ಅದರ ಅಂಪಾದ ಸ್ವರವನ್ನು ಅತ್ಯಲ್ಪ ಕೇಳಿರುವೆವು ಜನರಿಗೆ ಇಂಥ ಸ್ಮಾರಕದ ನಾಟಕವನ್ನು ಯಾರ ದೆಸೆಯಿಂದ ನಡಿಸುವರು, ಅದರ ಸೂತ್ರಧಾರರು ಯಾರು, ಎಂಬುದನ್ನು ತಿಳಿಯದೆ, ದೀರ್ಘಕಾಲ ಗೊಂದಲವಾಗಬಹುದೆಂದು ನಾವು ಒಮ್ಮೆಲೇ ಹೇಳಿಬಿಡುತ್ತೇವೆ. ಸ್ಮಾರಕದ ಶಾಸ್ತ್ರದೊಳಗಿನ ದೋಷಗಳ ಉದಾಹರಣೆಯನ್ನು ಎತ್ತಿ ತೋರಿಸುವದು ಅವಶ್ಯಕವಾಗಿದೆಂತಲೂ, ನಮಗೆ ಅದನ್ನು ತೋರಿಸಬೇಕಾಗಿದೆ ಈ ಉದಾಹರಣೆಯು:, ಈ ನಾಟಕವು ಬೆಲ್ ಸಾಹೇಬರ ಮನ್ನಣೆಗೆಂದು, ಅವರ ಕೆಲ ಅಂಕಿತರೂ, ದೋಸ್ತ ಭಕ್ತರೂ, ನಡಿಸಿದ "ಬೆಲ್ ಸ್ಮಾರಕ' ಯೋಜನೆಯೊಳಗಿದೆ. ಒಳಗಿಂದೊಳಗೆ ಅದರ ಸಿದ್ಧತೆಯು ನಡೆದಿದೆಂದು ಕೇಳಿ, ಈ ವಿಷಯವಾಗಿ ನಮಗೆರಡು ಮಾತುಗಳನ್ನು ಬರೆಯಬೇಕಾಗಿದೆ ●

ಈ ಸ್ಮಾರಕದ ನಾಟಕದ ಸೂತ್ರಧಾರರು ಪುಣೆಯೊಳಗಿದ್ದ ರಾ| ಚಂದಾವರಕರರೆಂಬ ಬೆಲ್ ಸಾಹೇಬರ ಅತಿ ಪ್ರೀತಿಯ ಒಬ್ಬ ಜಂಗಲ ಅಧಿಕಾರಿಗಳಾಗಿರುವರು ಜಂಗಲಖಾತೆಯೊಳಗೆ ಇಪತ್ತು ಇಪ್ಪತ್ತೈದು ರೂಪಾಯಿಯ ಕಾರಕೂನಿಯಮೇಲಿಂದ, ಎಕ್ಸ್ಟ್ರಾ ಅಸಿಸ್ಟಂಟ ಕನ್ಸರವೇಟರರಾಗಿ, ೫೦೦—೬೦೦ ರೂಪಾಯಿ ಸಂಬಳವನ್ನು ದೊರಕಿಸುತ್ತಿರುವ ಭಾಗ್ಯವಂತ ಅಧಿಕಾರಿಗಳಲ್ಲಿ, ಇವರೊಬ್ಬರಾಗಿರುವರು ಇವರು ಬೆಲ್ ಸಾಹೇಬರ ಪರ್ಸನಲ ಅಸಿಸ್ಟಂಟ, ಅಂದರೆ ಹಸ್ತಕರಾಗಿದ್ದರು ಸಾಹೇಬರದೂ, ಇವರದೂ, ಸಹವಾಸವು ದೀರ್ಘಕಾಲವಾಗಿತ್ತು. ಅದೊಂದು ಅಪೂರ್ವ ಯೋಗಾಯೋಗವಾಗಿತ್ತೆಂತಲೂ ಹೇಳಬಹುದು ಇಷ್ಟು ಋಣಾನುಬಂಧಿಯಾದ ಸೇವಕರಿಗೆ ತಮ್ಮ ಒಡೆಯರ ಬಗ್ಗೆ ಕೃತಜ್ಞತೆಯುಂಟಾಗುವದೂ, ಇಂಥ ಕೃತಜ್ಞತೆಯ ಸಾಲವನ್ನು ತೀರಿಸಲಿಕ್ಕೆ ಅವರು ಯತ್ನಿಸುವದೂ, ಸ್ವಾಮಿಭಕ್ತರ ಧರ್ಮವೇ ಸರಿ. ತಮ್ಮ ಆರಾಧ್ಯದೇವತೆಯನ್ನು ಯಾವ ರೀತಿಯಿಂದ, ಎಷ್ಟು ಪ್ರಮಾಣದಿಂದ, ಭಜಿಸಬೇಕೆಂದು ತಿಳಿಯದೆ ಇವರು ಸ್ಮಾರಕದಂಥ ಮಹಾಪೂಜೆಯ ಕಲ್ಪನೆಯನ್ನು ಯೋಜಿಸಿರಲಿಕ್ಕೆ ಸಾಕು. ಹೀಗಾಗಿ ಈ ಮಹಾಪೂಜೆಯು ಸ್ಮಾರಕದ ರೂಪವನ್ನು ಧರಿಸಿ, ಸಾರ್ವಜನಿಕ ಮಹತ್ವವನ್ನೂ ಸನ್ಮಾನವನ್ನೂ ಪಡೆಯಬಹುದೆಂದು ಶಂಕಿಸಿ, ಸಾರ್ವಜನಿಕ ರೀತಿಯಿಂದ ಅದರ ನಿವೇದನವನ್ನು ಮಾಡಿದ ಹೊರತು ನಮಗೆ ಗತ್ಯಂತರವಿಲ್ಲ. ಸ್ಮಾರಕ ಪಕ್ಷಪಾತಿಗಳಿಗೆ ತಾವು ಮಾಡಿದ ಸ್ಮಾರಕಗಳಿಗೆ ಐತಿಹಾಸಿಕ ಬೆಲೆ ಇದೆ, ಸಾರ್ವಜನಿಕ ಸನ್ಮಾನದ ಮಹತ್ವವಿದೆ ಎಂಬ ಸಂಗತಿಯು ತಮ್ಮ ಅಂಧ ಭಕ್ತಿಯಲ್ಲಿ ತಿಳಿಯದೆ, ಲೋಕ ಮತದ ಅಪಮಾನವಾಗುತ್ತದೆ ಲೋಕಮತದ ಬೆಲೆಯನ್ನು, ಅದರ ಹೆಸರನ್ನು, ಅದರ ಕೀರ್ತಿಯನ್ನು ಕಾಪಾಡುವದು ನಮ್ಮ ಕರ್ತವ್ಯವು. ಅದಕ್ಕಾಗಿ ಎಷ್ಟು ಅಪ್ರಿಯ ಕೆಲಸವನ್ನಾದರೂ, ಅನಿವಾರ್ಯವಾಗಿ ನಮಗೆ ಮಾಡಬೇಕಾಗುತ್ತದೆ

ಬೆಲ್ ಸಾಹೇಬರ ಜಂಗಲಖಾತೆಯ ಆಳಿಕೆಯು ಕಾನಡಾ ಜಿಲ್ಲೆಯ ಲೋಕಮತಕ್ಕೆ ತೀರ ಅಪ್ರಿಯವಾಗಿದೆ ಕಾನಡಾ ಜಿಲ್ಲೆಯ ಉದರನಿರ್ವಾಹದ ಒಂದೇ ಸಾಧನೆಯಾದ ಬೇಸಾಯವು ಈಗಿದ್ದಷ್ಟು ವಿಪನ್ನ ಸ್ಥಿತಿಗೆ ಬರಲಿಕ್ಕೆ ಬೆಲ್ ಶಾಹಿಯ ಧೋರಣವೇ ಬಹು ಅಂಶದಿಂದ ಕಾರಣವಾಗಿದೆಂದು, ಈ ಜಿಲ್ಲೆಯ ಲೋಕಮತವಾಗಿದೆ 'ಒಕ್ಕಲಿಗರಂದರೆ, ದುಷ್ಟ ಬುದ್ಧಿಯವರು, "ಬೆಟ್ಟದೊಳಗೆ ಸೇರಿದ ಕಾಡಕೀ ಸುಲಿಗೆ ಮಾಡುವದೊಂದೇ ಕೆಲಸವನ್ನು ಇವರು ನಡಿಸುತ್ತಾರೆ, ಇವರು ಬೆಟ್ಟದ ಕೊಳೆಗಾರರು,' ಎಂಬ ಸಿದ್ಧಾಂತಗಳು ಅಬಾಧಿತವಾಗಿ ಸ್ಥಾಪಿತವಾದಂತೆ ಇವರು ತಮ್ಮ ಜಂಗಲ ಧೋರಣವನ್ನು ರಚಿಸಿದ್ದರಿಂದ, ನಮ್ಮ ಬೇಸಾಯವು ತೀರ ಕೆಂಗೆಟ್ಟು ಹೋಗಿದೆಂದು ಹೇಳಿದರೆ ತಪ್ಪಾಗದು. ಇದಕ್ಕಾಗಿ ಅವರು ಬೇಸಾಯದ ವೈರಿಗಳೆಂದು ಸಕಾರಣವಾಗಿ ಜನರ ಭಾವನೆಯಾಗಿತ್ತು. ಇಷ್ಟು ಅಪ್ರಿಯ ಅಧಿಕಾರಿಗಳನ್ನು ಸ್ಮಾರಕದಿಂದ ಮನ್ನಿಸುವದೆಂದರೆ, ಅದೊಂದು ಸ್ಮಾರಕದ ವಿಡಂಬನೆಯಾಗುವದಲ್ಲವೇ? ಈ ಸ್ಮಾರಕ ಭಕ್ತರಿಗೆ ಸ್ಪಷ್ಟವಾಗಿ ನಮಗೆ ಹೇಳಬೇಕಾಗಿದೇನಂದರೆ— ಬೆಲ್ ಸಾಹೇಬರ ಸ್ಮಾರಕದ ಯೋಜನೆಯನ್ನು ನೀವು ಮುಂದರಿಸಿದರೆ, ಕಾನಡಾ ಜಿಲ್ಲೆಯೊಳಗೆ ಈ ಸ್ಮಾರಕವನ್ನು ಸ್ಥಾಪಿಸಲಿಕ್ಕೆ ನೀವು ಇಚ್ಛಿಸಿದರೆ, ಈ ಸ್ಮಾರಕದ ನಿಷೇಧವನ್ನು ಸಾರ್ವಜನಿಕ ರೀತಿಯಿಂದ ಜನರಿಗೆ ಮಾಡಬೇಕಾಗುವದು. ಕರವಾ ನಾಟಕದೊಳಗಿನ ಭುಜಂಗನ ಅಗ್ನಿದ ಹಾಡು ಈ ಸ್ಮಾರಕದ್ದಾದರೆ, ಅದಕ್ಕೆ ಅದರ ನಂಟರು ಬಂಟರೇ ಜವಾಬದಾರರಾಗುವರೆಂದು ಅರಿತಿರಿರಿ ಈಗಿನ ಲೋಕಶಾಹಿಯೊಳಗೆ ಸತ್ಪಾತ್ರರಾದವರಿಗೆ ಮಾತ್ರ ಮನ್ನಣೆಯು ದೊರಕುವದು ಅಪಾತ್ರರಿಗೆ ಎಂದೂ ದೊರಕದು. ಒತ್ತಾಯದಿಂದ ಅದನ್ನು ದೊರಕಿಸಲಿಕ್ಕೆ ಯಾರಾದರೂ ಪ್ರಯತ್ನಿಸಿದರೆ, ಅವರಿಗೆ ತೀವ್ರವಾದ ಪ್ರತೀಕಾರವಾಗುವದು. ಈ ಯೋಜನೆಗೆ ಸಾರ್ವಜನಿಕ ಸ್ವರೂಪವಿಲ್ಲದಿದ್ದರೆ, ನಮ್ಮದೇನೂ ವಾದವಿಲ್ಲ. ಖುಶಿಯಾದ ಜನರು ತಮ್ಮ ಸಾಲವನ್ನು ತಮಗೆ ಬೇಕಾದಂತೆ ತೀರಿಸಲು ಅವರಿಗೆ ಸ್ವಾತಂತ್ರ್ಯವಿದೆ ಸಾರ್ವಜನಿಕ ಮಾನ್ಯತೆಯನ್ನು ತಮ್ಮ ಪೂಜಾ ಸತ್ಕಾರಗಳಿಗೆ ದೊರಕಿಸಲಿಕ್ಕೆ ಯತ್ನಿಸದಿದ್ದರಾಯಿತು ಬೆಲ್ ಸಾಹೇಬರು ಬಹುಲೋಕಪ್ರಿಯ ಅಧಿಕಾರಿಗಳಿದ್ದರೆಂದು ಪಾರ್ಲಮೆಂಟಿನಲ್ಲಿ ಯಾರೊಬ್ಬ ಮೆಂಬರನು ಪ್ರಶ್ನೆ ಕೇಳುವಾಗ ಸೂಚಿಸದಿದ್ದರಾಯಿತು. ಇದು ಎಚ್ಚರಿಕೆಯನ್ನು ತಾಳಿ, ಬೆಲ್ ಭಕ್ತರು ತ[ಮ್ಮ] ಸ್ವಾಮಿಭಕ್ತಿಯನ್ನು ಯಥೇಷ್ಟವಾದ ಬಗೆಯಿ[ಂದ] ತೋರಿಸಲಿ ಹಿಟ್ಟಿಗೆ ಸಾರ್ವಜನಿಕ ಸ[ನ್ಮಾನ]ಕಗಳ ವಿಡಂಬನೆಯಾಗದಿರಲಿ. ಇದೆ ಇಂದಿಗೆ ನಮ್ಮ ಹೇಳಿಕೆಯು •

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಯಾದರೆ ತರಿಸಿಕೊಡುವರು. ಮಾಸ್ಕೆಟ್ ಅಗಿರಿ, ಅಥವಾ ಪತ್ರವ್ಯವಹಾರವ

ಶೇಷಗಿರಿರಾವ ಧಾಕಪ್ಪನವರ,

ಸ್ಫುಟ ಸೂಚನೆಗಳು.

೧. ಕೈ ವಾ. ಲೋಕಮಾನ್ಯ ಟಿಳಕರ ಸಾಹಸದ ಕರ್ತವ್ಯವನ್ನು ಜನರು ಎಲ್ಲ ಕಡೆಯಲ್ಲಿ ಎಷ್ಟು ಭಕ್ತಿಯಿಂದ, ಎಷ್ಟು ಆದರದಿಂದ ಜರಗಿಸಿದರೆಂಬುದು ಎಲ್ಲ ವೃತ್ತಪತ್ರಗಳನ್ನು ತೆರೆದು ನೋಡಿದರೆ ತಿಳಿಯುವದು. ನಮ್ಮ ಪ್ರಾಂತದಲ್ಲಿ ಸಹ ಬಡವರಿಗೆ ಅನ್ನದಾನ, ಸಾರ್ವಜನಿಕ ಸಭೆ, ಚರಿತ್ರ ಕಥನವೇ ಮುಂತಾದ ಸಾಧನಗಳಿಂದ, ಕಾನಡಿಗರು ತಮ್ಮ ಅಶ್ರುಸೇವೆಯನ್ನು ಪುಣ್ಯಾತ್ಮರಿಗೆ ಅರ್ಪಿಸಿದರೆಂದು ನಮ್ಮ ಬಾತಮೀದಾರರ ಪತ್ರಗಳಿಂದ ತಿಳಿದು ಬರುತ್ತದೆ. ಈ ಪ್ರಕಾಶದೊಳಗೆ ಜನತೆಗೆ ಒಂದೇ ವಿಷಯವಾದ ಲೋ। ಟಿಳಕರ ನಿಧನದಮೇಲಿನ ಲೋಕಮತವನ್ನು ನಿರೀಕ್ಷಿಸಿದರೆ, ಸರ್ವಸಮ್ಮತವಾದ ಅಭಿಪ್ರಾಯಗಳು ಹೊರಬೀಳುತ್ತವೆ (೧) ಅವರ ಶೀಲವು ಅತಿ ನಿರ್ಮಲವಾಗಿತ್ತು (೨) ಅವರ ದೇಶಪ್ರೀತಿಯು ಅತ್ಯುತ್ಕಟವಿತ್ತು. (೩) ಅವರ ಸ್ವಾರ್ಥತ್ಯಾಗವು ಅದ್ವಿತೀಯವಿತ್ತು (೪) ಅವರ ವಿದ್ವತ್ತೆಯು ಅಸಾಮಾನ್ಯವಿತ್ತು. (೫) ಅವರ ಚಾರಿತ್ರ್ಯವೂ, ದೇಶಸೇವೆಯೂ, ರಾಷ್ಟ್ರೀಯವಾಗಿದ್ದವು. (೬) ಅವರ ಕೀರ್ತಿಯು ಐತಿಹಾಸಿಕವಾಗಿ ಬಾಳುವದು. ಹಿಂದೀ ಲೋಕಮತದ ಸರ್ವಸಮ್ಮತ ನಿರ್ಣಯವಿದು; ಹಿಂದೀ ಪ್ರತಿಪಕ್ಷದವರಿಗೆ ಸಹ ಮಾನ್ಯವಾದ ಅಭಿಪ್ರಾಯಗಳಿವು. ಟಾಯಿಮ್ಸಕಾರರಂಥ ಒಬ್ಬಿಬ್ಬ ವೃತ್ತಕಾರರಿಗೆ ಅವರ ದೇಶಸೇವೆಯೊಳಗೆ ಗುಣಲೇಶವೂ ಕಾಣದೆ, ಬರೇ ದೋಷಗಳೇ ಕಂಡು ಬಂದರೆ, ಅದು ಲೇಖಕರ ಅನುದಾರ ಅಂತಃಕರಣದ ದೋಷವು, ಅವರ ಸ್ವಭಾವದೊಳಗಿನ ದ್ವೇಷಬುದ್ಧಿಯ ಭ್ರಾಂತಿಯು; ಅನೇಕ ಮಹಾತ್ಮರ ಚರಿತ್ರದೊಳಗಿನ ಎಳ್ಳಷ್ಟು ದೋಷವಲ್ಲೆಂದು ತಿಳಿಯುವಷ್ಟು, ಹಿಂದೀ ಲೋಕಮತವು ಜಾಗ್ರತವದೆ. ಈ ದೊಡ್ಡಾಚಾರ್ಯರ ದಿಟ್ಟತನವು, ಅವರ ದ್ವೇಷಬುದ್ಧಿಯ ಭಾವಕ್ಕೆ ಶೋಭಿಸುವಂತಿದೆ. ಆದರೆ, ವೃತ್ತವ್ಯವಸಾಯದ ಧರ್ಮವನ್ನು ಅವರು ತಮ್ಮ ಲೇಖದಿಂದ ಕಲಂಕಿಸಿದ್ದಾರೆ, ಇಷ್ಟೇ ಅಲ್ಲ, ಅಸತ್ಯವನ್ನು ನುಡಿದಿದ್ದಾರೆಂದು ಅವರ ಲೇಖದ ಜಾಹೀರ ನಿಷೇಧವನ್ನು ನಾವು ಕರ್ತವ್ಯವೆಂದು ಮಾಡುವೆವು. ಕೈಲಾಸವಾಸಿಗಳ ಕೀರ್ತಿಯು ವಿಶಾಲವದೆ. ಇಂಥ ಅಪಶಬ್ದಗಳಿಂದ ಅದರ ಕೊಲೆ ಮಾಡಲಿಕ್ಕಾಗುವದೆಂದು ತಿಳಿಯುವವರೇ ಮೂರ್ಖರು. ತಿಳಿಗೇಡಿಗಳ ಕೂಡ ವಿವಾದ ವೇಕೆ?

---

೨. ಲೋಕಮಾನ್ಯ ಟಿಳಕರು ತಮ್ಮ ಆಯುಷ್ಯದಲ್ಲಿ ವೆಚ್ಚಮಾಡಿ, ಸಂಪಾದಿಸಲಿಕ್ಕೆ ದುಡಿದ ಸ್ವರಾಜ್ಯ ಕಾಯಿದೆಯು ಅಮಲು ಪ್ರಾರಂಭಿಸಿದೆಂದು ಇದೇ ಮುಹೂರ್ತಕ್ಕೆ ಡಂಗುರದಿಂದ ಹಳ್ಳಿಹಳ್ಳಿಗಳಲ್ಲಿ ಜಾಹೀರಿಯಾಗಿದೆ. ಮೊನ್ನೆ ಸೋಮವಾರ ದಿವಸ, ಹೊಸ ಕಾಯಿದೆಯಂತೆ, ತನ್ನ ಪ್ರಾಂತದ ಮೆಂಬರರನ್ನಾರಿಸಲಿಕ್ಕೆ ಮತದಾರಿಯ ಹಕ್ಕು ಯಾರ್ಯಾರಿಗೆ ಪ್ರಾಪ್ತವಾಗಿದೆಂದು ಜನರಿಗೆ ತಿಳಿಸಲಿಕ್ಕೆ ಗ್ರಾಮಸ್ಥರ ಮುಖಾಂತರ ಸರಕಾರವು, ಮತದಾರರ ಹೆಸರಿನ ಪತ್ರಿಕೆಗಳನ್ನು ಪ್ರಕಟಿಸಿದೆ. ಅದನ್ನು ಪ್ರತಿ ಒಬ್ಬ ಹಕ್ಕುದಾರರು ಲಕ್ಷಪೂರ್ವಕ ನೋಡಿಕೊಳ್ಳಬೇಕು. ಇನಕಮಟೆಕ್ಸ ಕೊಡುವವರೂ, ೩೨ ರೂ., ಯಾ, ಅದಕ್ಕಿಂತ ಹೆಚ್ಚಿನ ತೀರ್ವೆ ಕೊಡುವವರೂ, ಅಷ್ಟು ತೀರ್ವೆಯ ಭೂಮಿಯ ರೈತರೂ ಈ ಹಕ್ಕನ್ನು ಪಡೆದಿದ್ದಾರೋ, ಇಲ್ಲವೋ, ಎಂಬುದನ್ನು ತಾವಾಗಿ ನೋಡಿಕೊಳ್ಳಬೇಕಾಗಿದೆ. (೧೦) ಹತ್ತು ದಿವಸಗಳೊಳಗೆ ಸಬಜಡ್ಜ ಕೋರ್ಟಿಗೆ ಅರ್ಜಿಮಾಡಿ ಈ ಮತದಾರ ಪತ್ರಿಕೆಯೊಳಗೆ ತಮ್ಮ ಹೆಸರು ತಪ್ಪಿದರೆ, ಹಾಕಿಕೊಳ್ಳುವ ಅಧಿಕಾರವು ಮತದಾರರಿಗಿದೆ. ಅವಧಿಯು ತೀರಿದರೆ, ಹಕ್ಕು ತಪ್ಪುವದು. ತಮ್ಮ ಹಕ್ಕು ಕಾಯಿದುಕೊಳ್ಳಲಿಕ್ಕೆ ತಾವೇ ಸಿದ್ಧರಾಗಿರುವ ದಿವಸಗಳಿವು. ಪತ್ರಿಕೆಗಳನ್ನು ಲಕ್ಷಪೂರ್ವಕ ನೋಡಿ, ಬೇಕಾದ ಮಾಹಿತಿಯನ್ನು ಸರಕಾರಿ ಅಧಿಕಾರಸ್ಥರಿಂದ, ವಕೀಲರಿಂದ, ಮುಂದಾಳುಗಳಿಂದ ಕೇಳಿಕೊಂಡು, ತಕರಾರು ಮಾಡುವದಿದ್ದರೆ, ೨೦ ನೇ ತಾರೀಖಿನ ಒಳಗಾಗಿ ಕೋರ್ಟಿಗೆ ಅರ್ಜಿಗಳನ್ನು ಸಾದರ ಪಡಿಸಿರಿ. ಈ ವಿಷಯದ ನಿಯಮಾವಳಿಗಳನ್ನು ದೇಶಿ ಭಾಷೆಗಳಲ್ಲಿ ಪ್ರಕಟಿಸದೆ, ಜನರಿಗೆ ಬಹಳೇ ಗೊಂದಲವಾಗಿದೆ. ಇನ್ನಾದರೂ ಅವುಗಳನ್ನು ಪ್ರಕಟಿಸಬೇಕೆಂದು ನಮ್ಮ ಸೂಚನೆಯಿದೆ.

---

೩. ಖಾಸಗೀ ಶಿಕ್ಷಕರೊಳಗಿನೊಬ್ಬನು, ಬಿನ್ ಸರಕಾರಿ ಶಾಲೆಗಳೊಳಗಿನ ಶಿಕ್ಷಕರ ಪಾಡು ಈಗಿನ ಮಹರ್ಘತೆಯೊಳಗೆ ಎಷ್ಟು ಕರುಣಾಸ್ಪದವಾಗಿದೆ, ಎಲ್ಲ ಜಾತಿಗಳ ಮತ್ತು ಪ್ರಾಥಮಿಕ ಶಿಕ್ಷಕರ ಸಂಬಳವು ತಕ್ಕಮಟ್ಟಿಗೆ ಏರುತ್ತಿದ್ದರೂ, ತಮ್ಮ ಸಂಬಳದ ವಿಚಾರವನ್ನು ಖಾಸಗೀ ಶಾಲೆಗಳ ಚಾಲಕರಾಗಲಿ, ಸರಕಾರವಾಗಲಿ, ಇನ್ನೂ ಏನೂ, ಯೋಚನೆ ಮಾಡಿಲ್ಲ ಎಂದು ತಮ್ಮ ಬಿನ್ನಹ ಪತ್ರವನ್ನೊಂದು ನಮಗೆ ಕಳಿಸಿದ್ದು ನಾವು ಪ್ರಕಟಿಸುತ್ತೇವಷ್ಟೇ. ಖಾಸಗೀ ಶಾಲೆಗಳು ಬಹುತರವಾಗಿ ಇಂಗ್ರಜೀ ಶಾಲೆಗಳು. ಇಂಗ್ರಜೀ ಶಾಲೆಗಳೊಳಗಿನ ೩/೪ ಶಾಲೆಗಳಷ್ಟು, ಸರಕಾರಿ ಶಾಲೆಗಳ, ಉಳಿದವೆಲ್ಲ ಖಾಸಗಿ ಸಂಸ್ಥೆಗಳು. ಮೇಲ್ತರಗತಿಯ, ಇಂಗ್ರಜೀಯಂಥ ಶಿಕ್ಷಣವನ್ನು ನಡಿಸುವ ಹೆಚ್ಚಿನ ಭಾರವನ್ನು ಜನರೇ ಹೆಚ್ಚಾಗಿ ಹೊತ್ತುಕೊಳ್ಳಬೇಕೆಂದು ಸರಕಾರಿ ಧೋರಣವೇ ಇದೆ. ಇಂಥ ಶಿಕ್ಷಣದ ಶಾಲೆಗಳಿಗೆ ಸರಕಾರವು ಗ್ರಾಂಟವೆಂದರೆ, ವಾರ್ಷಿಕ ವೇತನವನ್ನು, ಸಹಾಯಾರ್ಥವಾಗಿ ಕೊಡುವದು. ಈ ಗ್ರಾಂಟು ಶಾಲೆಯ ವಾರ್ಷಿಕ ಖರ್ಚಿನ ಮೂರರೊಳಗೆ ಒಂದು ಪಾಲಿಗಿಂತ ಹೆಚ್ಚಿಗಿರುವದಿಲ್ಲ. ೩೦೦ ರೂ ಖರ್ಚಾದರೆ, ೧೦೦ ರೂ. ಗ್ರಾಂಟು ಸರಕಾರದಿಂದ ಸಿಗುತ್ತದೆ. ಹುಡುಗರ ಫೀ ಹಣ ಈಗಿದ್ದದರಂತೆ ಪಾಲಕರಿಗೆ ಮೊದಲೇ ಭಾರಿಯಾಗಿದ್ದಾಗ, ಅವನ್ನು ಮತ್ತೇನು ಏರಿಸಲಿಕ್ಕಾಗದು. ಫೀ ಉತ್ಪನ್ನವು ಏರದಿದ್ದ ಮೇಲೆ, ಸರಕಾರಿ ಗ್ರಾಂಟವಾದರೂ ಏರಿದ ಹೊರತು, ಈ ಶಾಲೆಗಳ ಉತ್ಪನ್ನವು ಏರುವ ಬಗೆ ಹೇಗೆ? ಉತ್ಪನ್ನವು ಏರದ ಹೊರ್ತು, ಶಿಕ್ಷಕರ ಸಂಬಳ ಏರಿಸಿ, ಖರ್ಚು ಬೆಳಿಸುವದು ಅಶಕ್ಯವು. ‘ಅಂತೂ ಇಂತೂ ಕುಂತಿ ಮಕ್ಕಳಿಗೆ ಗಂಜಿಯಿಲ್ಲ’ ಎಂಬಂತೆ ಈ ದುರ್ದೈವಿ ಶಿಕ್ಷಕರ ಪಾಡಾಗಿದೆ. ಸರಕಾರಿ ಗ್ರಾಂಟಿನ ೩/೪ ದ ಪ್ರಮಾಣವನ್ನು ೧/೨ ಕ್ಕಾದರೂ ಏರಿಸುವದೇ ತೀರ ಸಾಧ್ಯತರ ಉಪಾಯವು ಎಂದು ನಮ್ಮದೂ ಮತವು. ಅದಕ್ಕಾಗಿ ಸಂಸ್ಥೆಗಳ ಚಾಲಕರು, ಕೆನರಾ ಎ. ಸೊ॥, ಕರ್ನಾಟಕ ಎ. ಸೊ॥, ಡಿ. ಎ. ಸೊಸಾಯಿಟಿಗಳ ಕಮಿಟಿಗಳು ಎಚ್ಚರರಾಗಿ, ಸರಕಾರಕ್ಕೆ ಒಂದು ಮನವಿಯನ್ನು ಸಾದರ ಪಡಿಸಬೇಕೆಂದು ನಾವು ಸೂಚಿಸುವೆವು. ಇಲ್ಲದಿದ್ದರೆ, ಈ ಹತಭಾಗಿ ಶಿಕ್ಷಕರು ಕಂಗೆಟ್ಟು ಹೋಗುವರು. ಖಾಸಗೀ ಇಂಗ್ರಜಿ ಶಾಲೆಗಳಲ್ಲಿ ಶಿಕ್ಷಕರ ದಂಧೆಯು ಹಕ್ಕಿಯ ಹಾರಾಟದಂತಿದೆ. ತಮ್ಮ ದರ್ಜೆಗೆ, ಯೋಗ್ಯತೆಗೆ, ತಕ್ಕ ಸಂಬಳ ಸಿಗದಿದ್ದರೂ ಹೊಟ್ಟೆ ಹೊರೆಕೊಳ್ಳುವಷ್ಟು ಪಗಾರಾದರೂ, ಅವರಿಗೆ ದೊರೆಯದಿದ್ದರೆ, ಅವರಿಗಾದರೂ ಈ ಹಣ್ಣಿಲ್ಲದ ಆಲದ ಮರದಮೇಲೆ ಗೂಡು ಕಟ್ಟಿ ಉಪೋಷಣ ಮಾಡಬೇಕೆಂದು ಗರಜೇನು? ಹೊಟ್ಟೆಗೆ ಮಧ್ಯಮ ಶಿಕ್ಷಣದ ಭವಿತವ್ಯವು ನಿರಾಶಾಜನಕವಾಗುತ್ತಿದೆ. ಉತ್ತಮ ಶಿಕ್ಷಕರಿಲ್ಲದೇ ಸಂಸ್ಥೆಗಳು ಬರೆ ವ್ಯಾಪಾರವನ್ನು ನಡಿಸುವರೋ, ಯಾ ನಿಜವಾದ ಶಿಕ್ಷಣವನ್ನು ಕೊಡುವರೋ, ಇದೇ ಪ್ರಶ್ನೆಯನ್ನು ಸಂಸ್ಥೆಗಳು ಬಿಡಿಸಬೇಕಾಗುವದು, ಆದದರಿಂದ ಚಾಲಕರು ಈಗಿಂದಲೇ ಜಾಗ್ರತರಾಗಲೆಂದು ಬಯಸುವೆವು.

---

೪. ಕಳೆದ ಶನಿವಾರದ ಮುಂಬಯಿ ಕ್ರಾನಿಕಲದಲ್ಲಿ ಇಲ್ಲಿಯ ರಾ॥ ಎಸ್. ಜಿ. ಹರ್ಡೀಕರರವರ ಒಂದು ಪತ್ರ ಪ್ರಸಿದ್ಧವಾಗಿದೆ. ಅದರಲ್ಲಿ ಅವರು ಸಧ್ಯದ ಜಂಗಲ ಧೋರಣವು ದೇಸಾಯಿಯವನ್ನು ಎಷ್ಟು ನಿರ್ದಯದಿಂದ ಕೊಲ್ಲುತ್ತದೆಂಬ ಸಂಗತಿಯನ್ನು ಉದಾಹರಣೆಯಿಂದ ಸಿದ್ಧಪಡಿಸಿರುತ್ತಾರೆ. ಇದೇ ತಾಲೂಕಿನ ಮಾಳವಳ್ಳಿ ಹಳ್ಳಿಯಲ್ಲಿ ಅಡವಿಯೊಳಗಿಂದ ನಾಟು, ಕಟ್ಟಿಗೆ ವಗೈರೆ ಒಯ್ಯುವಿಕ್ಕೆ ಜಂಗಲಖಾತೆಯ ಬೇರೆ ರಸ್ತೆ ಇದ್ದಾಗ್ಯೂ, ಅದರ ದುರುಸ್ತಿ ಖರ್ಚು ಉಳಿಸಬೇಕೆಂದು, ಜಂಗಲದೊಳಗಿನ ಸಾಮಾನನ್ನು ರಯತರು ಕಟ್ಟಿದ ಅಘನಾಶಿನಿ ನದಿಯ ಕಟ್ಟಿನಮೇಲಿಂದ ಗಾಡಿಗಳನ್ನು ಹೊಡೆಯುತ್ತಾರೆ. ಆದರಿಂದ, ಮಳೆಗಾಲದಲ್ಲಿ ಹೊಳೆಯ ನೀರಿನ ಹೊಡೆತವನ್ನು ತಾಳಲಾರದೆ, ಕಟ್ಟು ಕುಸಿದು, ಇಡೀ ಹಳ್ಳಿಯೊಳಗಿನ ಗದ್ದೆಗಳೆಲ್ಲ ಬಳದು ಹೋದವು. ಈ ಸಂಗತಿಯನ್ನು ಜಂಗಲ ಅಧಿಕಾರಿಗಳಿಗೆ ನಿವೇದಿಸಿ, ‘ನಿಮ್ಮ ರಸ್ತೆಯಿಂದ ನಿಮ್ಮ ಸಾಮಾನು ಒಯ್ಯಿರಿ’ ಎಂದು ಅರಿಕೆ ಮಾಡಿದರೆ, ‘ನಿಮ್ಮ ಭೂಮಿಯನ್ನು ಸರಕಾರ ಜಪ್ತಾ ಮಾಡುತ್ತೇವೆ’ಂದು ರಯತರಿಗೆ ಧಮಕಿ ಕೊಡುತ್ತಾರಂತೆ! ಜಂಗಲಖಾತೆಯ ಉತ್ಪನ್ನವು ಹೆಚ್ಚೆಂದು ತೋರಿಸಿ, “ಶಾಬಾಸು” ಪಡೆಯಲಿಕ್ಕೆ ಆತುರರಾದ ಜಂಗಲಖಾತೆಯ ರಾಕ್ಷಸರು ಇಡೀ ಹಳ್ಳಿಯನ್ನೇ ಹಾಳುಹಾಕಿ, ಮೇಲೆ ಬಡ ರಯತರಿಗೆ ಬೆದರಿಸುವದನ್ನು ನೋಡಿದರೆ, ಜಿಲ್ಲೆಯಲ್ಲಿ ಒಡೆಯರ್ಯಾರು? ಮುಲ್ಕಿಖಾತೆಯೋ? ಜಂಗಲಖಾತೆಯೋ? ಎಂಬದೊಂದು ಸಂಶಯ ಉಂಟಾಗುತ್ತದೆ. ಸರಕಾರವು ಇತ್ತ ಕಡೆಗೆ ಲಕ್ಷಗೊಟ್ಟು, ರಯತರ ಸಂಶಯವನ್ನು ದೂರಪಡಿಸುವದೇನು?

---

೫. ನಮ್ಮ ಕಳೆದ ಜುಲೈ ೨೨ ನೇ ಸಂಚಿಕೆಯ ಇಹವೃತ್ತದಂತೆ, ಸೂರಾ ಪೇಟೆಯ ಮತ್ತು ಹಳ್ಳಿಹಳ್ಳಿಯ ಜನರು ಜುಲೈ ೧೮ ರಲ್ಲಿ ಶ್ರೀಯುತ ಗೋಪಾಳರಾವ ಯಾರ್ದಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಪೇಟಾ ಸಭೆ ಸ್ಥಾಪಿಸಿ, ರಯತರಿಗೊದಗುವ ಜಂಗಲಖಾತೆಯ ಕಷ್ಟಗಳನ್ನು ನಿವಾರಿಸಿ, ತಮಗೆ ಕೆಲವು ಸವಲತುಗಳ ಅವಶ್ಯಕತೆಯನ್ನು ತೋರಿಸಿ, ಪಾಸು ಮಾಡಿದ ಠರಾವುಗಳನ್ನು ಡೆಪ್ಯುಟೇಶನ ಪ್ರತಿನಿಧಿಗಳ ಮುಖಾಂತರ ಸರಕಾರಕ್ಕೆ ಸಾದರ ಮಾಡುವ ವ್ಯವಸ್ಥೆ ಮಾಡಿದ್ದು ತೋರುತ್ತದೆ. ಇದು ಬಹು ಅಭಿನಂದನೀಯವು. ಆ ಠರಾವುಗಳು:— (೧) ಊರ ಸುಧಾರಣೆಯ ಬಗ್ಗೆ ಜನರ ವಸ್ತಿಯ ಸುತ್ತುಮುತ್ತು ೨೦೦ ಯಾರ್ಡು ಜಂಗಲದ ದೊಡ್ಡ ಸಣ್ಣ ಗಿಡಗಳನ್ನು ಕಡಿದು ಆ ಕಟ್ಟಿಗೆಯ ಉಪಯೋಗ ರಯತರ ಮರ್ಜಿಯಂತೆ ಮಾಡಲಿಕ್ಕೂ, ಆ ಭಾಗದಲ್ಲಿ ಪುನಃ

ಕಾನಡಾವೃತ್ತ.

ಗುರುವಾರ, ತಾರೀಖು ೧೨ ನೂಹೆ ಅಗೋಸ್ಟ ೧೯೨೦

ಸ್ಮಾರಕದ ವಿಡಂಬನೆ.

ಸ್ಮಾರಕವೆಂದರೇನು, ಅದಕ್ಕೆ ಸಾರ್ವಜನಿಕ ಸ್ವರೂಪವು ಹ್ಯಾಗೆ ಪ್ರಾಪ್ತವಾಗುತ್ತದೆ? ಲೋಕಮತಕ್ಕೆ ವಿರುದ್ಧವಾಗಿ ಕೆಲ ವ್ಯಕ್ತಿಗಳಿಗೆ ಸ್ಮಾರಕದ ಸನ್ಮಾನವು ಹ್ಯಾಗೆ ದೊರಕುತ್ತದೆ? ಇದಕ್ಕಾಗಿ ಸ್ಮಾರಕದ ಕಲ್ಪನೆಯು ಎಷ್ಟು ದೂಷಿತವಾಗಿದೆ? ಎಂಬುದರ ವಿಷಯವಾಗಿ ನಾವು ಹಿಂದೊಮ್ಮೆ ತಾತ್ವಿಕ ವಿವೇಚನೆಯನ್ನು ಮಾಡಿದ್ದೆವು. ತಾತ್ವಿಕ ವಿವೇಚನೆಯೊಂದಿಗೆ ವೃತ್ತಾಂತಗಳನ್ನೂ, ಉದಾಹರಣೆಗಳನ್ನು ಮುಂದಿಟ್ಟ ಹೊರತು ವಿಷಯಜ್ಞಾನವು ಸರ್ವಸಾಧಾರಣ ಜನರಿಗೆ ಪೂರ್ಣವಾಗಿ ಆಗುವದಿಲ್ಲೆಂತಲೋ ಏನೋ, ಸ್ಮಾರಕವೀರರು ಉದಾಹರಣೆಗಳನ್ನು ತಮ್ಮ ಅಂದಜಸ್ತಿಯೊಳಗೆ ನಿರ್ಮಿಸುತ್ತಿರುವರು. ಅಪಾತ್ರರಿಗೆ ಸ್ಮಾರಕದಿಂದ ಮನ್ನಿಸುವ ಉಪದ್ವ್ಯಾಪದ ಒಂದು ತಾಜಾ ಉದಾಹರಣೆಯು, ಪಾತಿವ್ರತ್ಯವನ್ನು ನಟಿಸುತ್ತ, ಪರದೆಯೊಳಗಿಂದ ಹೊರಬೀಳುವ ವಾರಾಂಗನೆಯಂತೆ ರಂಗಸ್ಥಳದೊಳಗೆ ಬರಹತ್ತಿವೆ. ಇದರ ನಾಟ್ಯವು, ಇದರ ವರ್ತನವು, ಇದರ ಮಂಜುಳ ಗಾಯನವು, ಇನ್ನು ಸೂಕ್ಷ್ಮವಾಗಿದಲ್ಲ,-ಅವುಗಳ ಧ್ವನಿಯೂ, ಸ್ಪರ್ಶವೂ, ಬಹುಜನ ಸಮಾಜದ ಕಿವಿಗಳಿಗೆ ಕೇಳಬಂದಿಲ್ಲ. ನಾವು ಅದರ ಇಂಪಾದ ಸ್ವರವನ್ನು ಅತ್ಯಲ್ಪ ಕೇಳಿರುವೆವು. ಜನರಿಗೆ ಇಂಥ ಸ್ಮಾರಕದ ನಾಟಕವನ್ನು ಯಾರದೆಶೆಯಿಂದ ನಡೆಸುವರು, ಅದರ ಸೂತ್ರಧಾರರು ಯಾರು, ಎಂಬುದನ್ನು ತಿಳಿಯದೆ, ದೀರ್ಘಕಾಲ ಗೊಂದಲವಾಗಬಾರದೆಂದು ನಾವು ಮುನ್ನಿಗಳೇ ಹೇಳಿಬಿಡುತ್ತೇವೆ. ಸ್ಮಾರಕದ ಶಾಸ್ತ್ರದೊಳಗಿನ ದೋಷಗಳ ಉದಾಹರಣೆಯನ್ನು ಎತ್ತಿ ತೋರಿಸುವದು ಅವಶ್ಯಕವಾಗಿದೆಂದಲ್ಲೂ, ನಮಗೆ ಅದನ್ನು ತೋರಿಸಬೇಕಾಗಿದೆ. ಈ ಉದಾಹರಣೆಯು, ಈ ನಾಟಕವು ಬೆಲ್ ಸಾಹೇಬರ ಮನ್ನಣೆಗೆಂದು, ಅವರ ಕೆಲ ಅಂಕಿತರೂ, ದೋಸ್ತ ಭಕ್ತರೂ, ನಡಿಸಿದ "ಬೆಲ್ ಸ್ಮಾರಕ" ಯೋಜನೆಯೊಳಗಿದೆ. ಒಳಗಿಂದೊಳಗೆ ಅದರ ಸಿದ್ಧತೆಯು ನಡೆದಿದೆಂದು ಕೇಳಿ, ಈ ವಿಷಯವಾಗಿ ನಮಗರಡು ಮಾತುಗಳನ್ನು ಬರೆಯಬೇಕಾಗಿದೆ.

ಈ ಸ್ಮಾರಕದ ನಾಟಕದ ಸೂತ್ರಧಾರರು ಪ್ರಜೆಯೊಳಗಿದ್ದ ರಾ। ಚಂದಾವರಕರರೆಂಬ ಬೆಲ್ ಸಾಹೇಬರ ಅತಿ ಪ್ರೀತಿಯ ಒಬ್ಬ ಜಂಗಲ ಅಧಿಕಾರಿಗಳಾಗಿರುವರು. ಜಂಗಲಖಾತೆಯೊಳಗೆ ಇಪತ್ತು ಇಪ್ಪತ್ತೈದು ರೂಪಾಯಿಯ ಕಾರಕೂನಿಯಮೇಲಿಂದ, ಎಕ್ಸ್ಟ್ರ ಅಸಿಸ್ಟಂಟ ಕನ್ಸರವೇಟರರಾಗಿ, ೫೦೦—೬೦೦ ರೂಪಾಯಿ ಸಂಬಳವನ್ನು ದೊರಕಿಸುತ್ತಿರುವ ಭಾಗ್ಯವಂತ ಅಧಿಕಾರಿಗಳಲ್ಲಿ ಇವರೊಬ್ಬರಾಗಿರುವರು. ಇವರು ಬೆಲ್ ಸಾಹೇಬರ ಪರ್ಸನಲ್ ಅಸಿಸ್ಟಂಟ, ಅಂದರೆ ಹಸ್ತಕರಾಗಿದ್ದರು. ಸಾಹೇಬರ ಇವರದೂ ಸಹವಾಸವು ದೀರ್ಘಕಾಲದಾಗಿತ್ತು. ಅದೊಂದು ಅಪೂರ್ವ ಯೋಗಾಯೋಗವಾಗಿತ್ತೆಂತಲೂ ಹೇಳಬಹುದು. ಇಷ್ಟು ಋಣಾನುಬಂಧಿಯಾದ ಸೇವಕರಿಗೆ ತಮ್ಮ ಒಡೆಯರ ಬಗ್ಗೆ ಕೃತಜ್ಞತೆಯುಂಟಾಗುವದು. ಇಂಥ ಕೃತಜ್ಞತೆಯ ಸಾಲವನ್ನು ತೀರಿಸಲಿಕ್ಕೆ ಅವರು ಯತ್ನಿಸುವದೂ, ಸ್ವಾಮಿಪ್ರೇಮದ ಧರ್ಮವೇ ಸರಿ. ತಮ್ಮ ಆರಾಧ್ಯದೇವತೆಯನ್ನು ಯಾವ ರೀತಿಯಿಂದ, ಎಷ್ಟು ಪ್ರಮಾಣದಿಂದ, ಪೂಜಿಸಬೇಕೆಂಬುದು ತಿಳಿಯದೆ, ಇವರು ಸ್ಮಾರಕದಂಥ ಮಹಾಪೂಜೆಯ ಕಲ್ಪನೆಯನ್ನು ಯೋಜಿಸಿರಲಿಕ್ಕೆ ಸಾಕು. ಹೀಗಾಗಿ ಈ ಮಹಾಪೂಜೆಯು ಸ್ಮಾರಕದ ರೂಪವನ್ನು ತಾಳಿಸಿ, ಸಾರ್ವಜನಿಕ ಮಹತ್ವವನ್ನೂ, ಸನ್ಮಾನವನ್ನೂ ಪಡೆಯಬೇಕಾಗುವದೆಂದು ಕಂಡಿಸಿ, ಸಾರ್ವಜನಿಕ ರೀತಿಯಿಂದ ಅದರ ನಿಕ್ಷೇಪವನ್ನು ಮಾಡುವ ಹೊರತು ನಮಗೆ ಗತ್ಯಂತರವಿಲ್ಲ. ಸ್ಮಾರಕ ಪಕ್ಷಪಾತಿಗಳಿಗೆ ತಾವು ಮಾಡಿದ ಸ್ಮಾರಕಗಳಿಗೆ ಐತಿಹಾಸಿಕ ಬೆಲೆ ಇದೆ, ಸಾರ್ವಜನಿಕ ಸನ್ಮಾನದ ಮಹತ್ವವಿದೆ, ಎಂಬ ಸಂಗತಿಯು ತಮ್ಮ ಅಂಧ ಭಕ್ತಿಯಲ್ಲಿ ತಿಳಿಯದೆ ಲೋಕಮತದ ಅಪಮಾನವಾಗುತ್ತದೆ. ಲೋಕಮತದ ಬೆಲೆಯನ್ನು, ಅದರ ಹೆಸರನ್ನು, ಅದರ ಕೀರ್ತಿಯನ್ನು ಕಾಯುವದು ನಮ್ಮ ಕರ್ತವ್ಯವು. ಇದಕ್ಕಾಗಿ ಎಷ್ಟು ಅಪ್ರಿಯ ಕೆಲಸವನ್ನಾದರೂ ಅನಿವಾರ್ಯವಾಗಿ ನಮಗೆ ಮಾಡಬೇಕಾಗುತ್ತದೆ.

ಬೆಲ್ ಸಾಹೇಬರ ಜಂಗಲಖಾತೆಯ ಆಳಿಕೆಯು ಕಾನಡಾ ಜಿಲ್ಲೆಯ ಲೋಕಮತಕ್ಕೆ ತೀರ ಅಪ್ರಿಯವಾಗಿದೆ. ಕಾನಡಾ ಜಿಲ್ಲೆಯ ಉಪಜೀವನದ ಒಂದೇ ಸಾಧನೆಯಾದ ಬೇಸಾಯವು, ಈಗಿದ್ದಷ್ಟು ವಿಪನ್ನ ಸ್ಥಿತಿಗೆ ಬರಲಿಕ್ಕೆ ಬೆಲ್ ಸಾಹೆಬರ ಧೋರಣವೇ ಬಹು ಅಂಶದಿಂದ ಕಾರಣವಾಗಿದೆಂದು, ಈ ಜಿಲ್ಲೆಯ ಲೋಕಮತವಾಗಿದೆ. 'ಬಿಕ್ಕಲಿಗರಂದರೆ, ದುಷ್ಟ ಬುದ್ಧಿಯವರು, ಬೆಟ್ಟದೊಳಗೆ ಸೇರಿದ ಕೂಡಲೇ ಸುಲಿಗೆ ಮಾಡುವದೊಂದೇ ಕೆಲಸವನ್ನು ಇವರು ನಡೆಸುತ್ತಾರೆ, ಇವರು ಬೆಟ್ಟದ ಕೊಳೆಗಾರರು,' ಎಂಬ ಸಿದ್ಧಾಂತಗಳು ಅಬಾಧಿತವಾಗಿ ಸ್ಥಾಪಿತವಾದಂತೆ ಇವರು ತಮ್ಮ ಜಂಗಲ ಧೋರಣವನ್ನು ರಚಿಸಿದ್ದರಿಂದ, ನಮ್ಮ ಬೇಸಾಯವು ತೀರ ಕಂಗೆಟ್ಟು ಹೋಗಿದೆಂದು ಹೇಳಿದರೆ ತಪ್ಪಾಗದು. ಇದಕ್ಕಾಗಿ ಅವರು ಬೇಸಾಯದ ವೈರಿಗಳೆಂದು ಸಕಾರಣವಾಗಿ ಜನರ ಭಾವನೆಯಾಗಿತ್ತು. ಇಷ್ಟು ಅಪ್ರಿಯ ಅಧಿಕಾರಿಗಳನ್ನು ಸ್ಮಾರಕದಿಂದ ಮನ್ನಿಸುವದೆಂದರೆ, ಅದೊಂದು ಸ್ಮಾರಕದ ವಿಡಂಬನೆಯಾಗುವದಲ್ಲವೇ? ಈ ಸ್ಮಾರಕ ಭಕ್ತರಿಗೆ ಸ್ಪಷ್ಟವಾಗಿ ನಮಗೆ ಹೇಳಬೇಕಾಗಿದೇನಂದರೆ— ಬೆಲ್ ಸಾಹೇಬರ ಸ್ಮಾರಕದ ಯೋಜನೆಯನ್ನು ನೀವು ಮುಂದರಿಸಿದರೆ, ಕಾನಡಾ ಜಿಲ್ಲೆಯೊಳಗೆ ಈ ಸ್ಮಾರಕವನ್ನು ಸ್ಥಾಪಿಸಲಿಕ್ಕೆ ನೀವು ಇಚ್ಛಿಸಿದರೆ, ಈ ಸ್ಮಾರಕದ ನಿಷೇಧವನ್ನು ಸಾರ್ವಜನಿಕ ರೀತಿಯಿಂದ ಜನರಿಗೆ ಮಾಡಬೇಕಾಗುವದು. ಶಾರದಾ ನಾಟಕದೊಳಗಿನ ಭುಜಂಗನ ಲಗ್ನದ ಹಾಡು ಈ ಸ್ಮಾರಕದ್ದಾದರೆ, ಅದಕ್ಕೆ ಅದರ ನೆಂಟರು ಬಂಟರೇ ಜವಾಬದಾರರಾಗುವರೆಂದು ಅರಿತಿರಿರಿ. ಇಗಿನ ಲೋಕಶಾಹಿಯೊಳಗೆ ಸತ್ಪಾತ್ರರಾದವರಿಗೆ ಮಾತ್ರ ಮನ್ನಣೆಯು ದೊರಕುವದು. ಅಪಾತ್ರರಿಗೆ ಎಂದೂ ದೊರಕದು. ಒತ್ತಾಯದಿಂದ ಅದನ್ನು ದೊರಕಿಸಲಿಕ್ಕೆ ಯಾರಾದರೂ ಪ್ರಯತ್ನಿಸಿದರೆ, ಅವರಿಗೆ ತೀವ್ರವಾದ ಪ್ರತೀಕಾರವಾಗುವದು. ಈ ಯೋಜನೆಗೆ ಸಾರ್ವಜನಿಕ ಸ್ವರೂಪವಿಲ್ಲದಿದ್ದರೆ, ನಮ್ಮದೇನೂ ವಾದವಿಲ್ಲ. ಋಣಿಯಾದ ಜನರು ತಮ್ಮ ಸಾಲವನ್ನು ತಮಗೆ ಬೇಕಾದಂತೆ ತೀರಿಸಲು ಅವರಿಗೆ ಸ್ವಾತಂತ್ರ್ಯವಿದೆ. ಸಾರ್ವಜನಿಕ ಮಾನ್ಯತೆಯನ್ನು ತಮ್ಮ ಪೂಜಾ ಸತ್ಕಾರಗಳಿಗೆ ದೊರಕಿಸಲಿಕ್ಕೆ ಯತ್ನಿಸಿದ್ದರಾಯಿತು. ಬೆಲ್ ಸಾಹೇಬರು ಬಹು ಲೋಕಪ್ರಿಯ ಅಧಿಕಾರಿಗಳಿದ್ದರೆಂದು ಸಾಕ್ಷೇಪಕ್ಕೆ ಮೆಂಬರನು ಪ್ರಶ್ನೆ ಕೇಳುವಾಗ ಸೂಚಿಸದಿದ್ದರಾಯಿತು. ಇದು ಎಚ್ಚರಿಕೆಯನ್ನು ತಾಳಿ, ಬೆಲ್ ಭಕ್ತರು ತಮ್ಮ ಸ್ವಾಮಿಭಕ್ತಿಯನ್ನು ಯಾವದೇ ಬಗೆಯಿಂದ ತೋರಿಸಲಿ. ಹಿಟ್ಟಿಗೆ ಸಾರ್ವಜನಿಕ ಸನ್ಮಾನಗಳ ವಿಡಂಬನೆಯಾಗದಿರಲಿ ಇದೆ ಇಂದಿನ ನಮ್ಮ ಹೇಳಿಕೆಯು.

ಬಂದೂಕ ಯಾ ಸಾಮಾನು

ನಿಮಗೆ ಹೊಸ ಕಾಯಿದೆಯಂತೆ ದೂಕು ಅಥವಾ ಬೇಕಾದ ಸಾಮಾನು ಕೆಳಗಿನ ಪತ್ತೆಗೆ ಬರೆಕೊಂಡರೆ ಅಥವಾ ಯೊಬರೆ ತರಿಸಿಕೊಡುವರು. ಮಾಹಿತಿ ಛೆಟ್ಟ ಅಗಿರಿ, ಅಥವಾ ಪತ್ರವ್ಯವಹಾರವ ಶೇಷಗಿರಿರಾವ ಧಾಕಪ್ಪನವರು!

ಸ್ಫುಟ ಸೂಚನೆಗಳು.

೧. ಶ್ರೀ ವಾ. ಲೋಕಮಾನ್ಯ ಟಿಳಕರ ದಹನ ಕರ್ತವ್ಯವನ್ನು ಜನರು ಎಲ್ಲಿ ಕಡೆಯಲ್ಲಿ ಎಷ್ಟು ಭಕ್ತಿಯಿಂದ, ಎಷ್ಟು ಆದರದಿಂದ ಜರಗಿಸಿದರೆಂಬು ಎಲ್ಲ ವೃತ್ತ ಪತ್ರಗಳನ್ನು ತೆರೆದು ನೋಡಿದರೆ ತಿಳಿಯುವದು. ನಮ್ಮ ಪ್ರಾಂತದಲ್ಲಿ ಸಹ ಬಡವರಿಗೆ ಅನ್ನದಾನ, ಸಾರ್ವಜನಿಕ ಸಭೆ, ಚರಿತ್ರ ಕಥನವೇ ಮುಂತಾದ ಸಾಧನಗಳಿಂದ, ಕಾನಡಿಗರು ತಮ್ಮ ಅಲ್ಪ ಸೇವೆಯನ್ನು ಪುಣ್ಯಾತ್ಮರಿಗೆ ಅರ್ಪಿಸಿದರೆಂದು ನಮ್ಮ ಬಾತಮೀದಾರರ ಪತ್ರಗಳಿಂದ ತಿಳಿದು ಬರುತ್ತದೆ. ಈ ಪ್ರಕಾಶದೊಳಗೆ ಜನತೆಗೆ ಹಿಂದೀ ವಿಷಯವಾದ ಲೋ| ಟಿಳಕರ ನಿಧನದಮೇಲಿನ ಲೋಕ ಮತವನ್ನು ನಿರೀಕ್ಷಿಸಿದರೆ, ಸರ್ವ ಸಮ್ಮತವಾದ ಅಭಿಪ್ರಾಯಗಳು ಹೊರಬೀಳುತ್ತವೆ (೧) ಅವರ ಶೀಲವು ಅತಿ ನಿರ್ಮಲವಾಗಿತ್ತು. (೨) ಅವರ ದೇಶಪ್ರೀತಿಯು ಅತ್ಯುತ್ಕಟವಿತ್ತು (೩) ಅವರ ಸ್ವಾರ್ಥತ್ಯಾಗವು ಅದ್ವಿತೀಯವಿತ್ತು (೪) ಅವರ ವಿದ್ವತ್ತೆಯು ಅಸಾಮಾನ್ಯವಿತ್ತು. (೫) ಅವರ ಚಾರಿತ್ರ್ಯವೂ, ದೇಶಸೇವೆಯೂ, ರಾಷ್ಟ್ರೀಯವಾಗಿದ್ದವು (೬) ಅವರ ಕೀರ್ತಿಯು ಐತಿಹಾಸಿಕವಾಗಿ ಬಾಳುವದು. ಹಿಂದೀ ಲೋಕಮತದ ಸರ್ವಸಮ್ಮತ ನಿರ್ಣಯವಿದು, ಹಿಂದೀ ಪ್ರತಿಪಕ್ಷದವರಿಗೆ ಸಹ ಮಾನ್ಯವಾದ ಅಭಿಪ್ರಾಯಗಳಿವು. ಟಾಯಿಮ್ಸ ಕಾರರಂಥ ಒಬ್ಬಿಬ್ಬ ವೃತ್ತಕಾರರಿಗೆ ಅವರ ದೇಶ ಸೇವೆಯೊಳಗೆ ಗುಣಲೇಶವೂ ಕಾಣದೆ, ಬರೇ ದೋಷಗಳೇ ಕಂಡು ಬಂದರೆ, ಅದು ಲೇಖಕರ ಅನುದಾರ ಅಂತಃಕರಣದ ದೋಷವು, ಅವರ ಸ್ವಭಾವದೊಳಗಿನ ದ್ವೇಷಬುದ್ಧಿಯ ವಾಂತಿಯು, ಅದೇನು ಮಹಾತ್ಮರ ಚರಿತ್ರದೊಳಗಿನ ಎಳ್ಳಷ್ಟು ದೋಷವಲ್ಲೆಂದು ತಿಳಿಯುವಷ್ಟು, ಹಿಂದೀ ಲೋಕಮತವು ಜಾಗ್ರತವದೆ. ಈ ದೊಡ್ಡ ಟಾಯಿಮ್ಸರ ದಿಟ್ಟತನವು, ಅವರ ದ್ವೇಷಬುದ್ಧಿಯ ಎಷ್ಟಕ್ಕೆ ಶೋಭಿಸುವಂತಿದೆ ಅಂದರೆ, ವೃತ್ತವ್ಯವಸಾಯದ ಧರ್ಮವನ್ನು ಅವರು ತಮ್ಮ ಲೇಖದಿಂದ ಕಲಂಕಿಸಿದ್ದಾರೆ, ಇಷ್ಟೇ ಅಲ್ಲ, ಅಸತ್ಯವನ್ನು ನುಡಿದಿದ್ದಾರೆಂಬ ಅವರ ಲೇಖದ ಜಾಹೀರ ನಿಷೇಧವನ್ನು ನಾವು ಕರ್ತವ್ಯವೆಂದು ಮಾಡುವೆವು. ಕೈಲಾಸವಾಸಿಗಳ ಕೀರ್ತಿಯು ವಿಶಾಲವದೆ. ಇಂಥ ಅವಶಬ್ದಗಳಿಂದ ಅದರ ಕೊಲೆ ಮಾಡಲಿಕ್ಕಾಗುವದೆಂದು ತಿಳಿಯುವವರೇ ಮೂರ್ಖರು. ತಿಳಿಗೇಡಿಗಳ ಕೂಡ ವಿವಾದ ವೇಕೆ !

---

೨ ಲೋಕಮಾನ್ಯ ಟಿಳಕರು ತಮ್ಮ ಆಯುಷ್ಯವನ್ನೆಲ್ಲ ವೆಚ್ಚಮಾಡಿ, ಸಂಪಾದಿಸಲಿಕ್ಕೆ ಪಡಿದ ಸ್ವರಾಜ್ಯ ಕಾಯಿದೆಯ ಅಮಲು ಪ್ರಾರಂಭಿಸಿದೆಂದು ಇದೇ ಮುಹೂರ್ತಕ್ಕೆ ಡಂಗುರದಿಂದ ಹಳ್ಳಿಹಳ್ಳಿಗಳಲ್ಲಿ ಜಾಹೀರಿಯಾಗಿದೆ. ಮೊನ್ನೆ ಸೋಮವಾರ ದಿವಸ, ಹೊಸ ಕಾಯಿದೆಯಂತೆ, ತಮ್ಮ ಪ್ರಾಂತದ ಮೆಂಬರರನ್ನಾರಿಸಲಿಕ್ಕೆ ಮತದಾರಿಯ ಹಕ್ಕು ಯಾರ್ಯಾರಿಗೆ ಪ್ರಾಪ್ತವಾಗಿದೆಂಬು ಜನರಿಗೆ ತಿಳಿಸಲಿಕ್ಕೆ ಗ್ರಾಮಸ್ಥರ ಮುಖಾಂತರ ಸರಕಾರವು, ಮತದಾರರ ಹೆಸರಿನ ಪತ್ರಿಕೆಗಳನ್ನು ಪ್ರಕಟಿಸಿದೆ. ಅದನ್ನು ಪ್ರತಿ ಒಬ್ಬ ಹಕ್ಕುದಾರರು ಲಕ್ಷಪೂರ್ವಕ ನೋಡಿಕೊಳ್ಳಬೇಕು. ಇನಕಮಟೆಕ್ಸ ಕೊಡುವವರೂ, ೩೨ ರೂ., ಯಾ, ಅದಕ್ಕಿಂತ ಹೆಚ್ಚಿನ ತೀರ್ವೆ ಕೊಡುವವರೂ, ಅಷ್ಟು ತೀರ್ವೆಯ ಭೂಮಿಯ ರೈತರೂ ಈ ಹಕ್ಕನ್ನು ಪಡೆದಿದ್ದಾರೋ, ಇಲ್ಲವೋ, ಎಂಬುದನ್ನು ಖಾಸಾಗಿ ನೋಡಿಕೊಳ್ಳಬೇಕಾಗಿದೆ. (೧೦) ಹತ್ತು ದಿವಸಗಳೊಳಗೆ ಸಬಜಜ್ಜ ಕೋರ್ಟಿಗೆ ಅರ್ಜಿಮಾಡಿ ಈ ಮತದಾರ ಪತ್ರಿಕೆಯೊಳಗೆ ತಮ್ಮ ಹೆಸರು ತಪ್ಪಿದರೆ, ಹಾಕಿಕೊಳ್ಳುವ ಅಧಿಕಾರವು ಮತದಾರರಿಗಿದೆ. ಅವಧಿಯು ತೀರಿದರೆ, ಹಕ್ಕು ತಪ್ಪುವದು. ತಮ್ಮ ಹಕ್ಕು ಕಾಪಾಡಿಕೊಳ್ಳಲಿಕ್ಕೆ ತಾವೇ ಸಿದ್ಧರಾಗಿರುವ ದಿವಸಗಳಿವು. ಪತ್ರಿಕೆಗಳನ್ನು ಲಕ್ಷಪೂರ್ವಕ ನೋಡಿ, ಬೇಕಾದ ಮಾಹಿತಿಯನ್ನು ಸರಕಾರಿ ಅಧಿಕಾರಸ್ಥರಿಂದ, ವಕೀಲರಿಂದ, ಮುಂದಾಳುಗಳಿಂದ ಕೇಳಿಕೊಂಡು, ತಕ್ರಾರು ಮಾಡುವದಿದ್ದರೆ, ೨೦ ನೇ ತಾರೀಖಿನ ಒಳಗಾಗಿ ಕೋರ್ಟಿಗೆ ಅರ್ಜಿಗಳನ್ನು ಸಾದರ ಪಡಿಸಿರಿ. ಈ ವಿಷಯದ ನಿಯಮಾವಲಿಗಳನ್ನು ದೇಶಿ ಭಾಷೆಗಳಲ್ಲಿ ಪ್ರಕಟಿಸದೆ, ಜನರಿಗೆ ಬಹಳೇ ಗೊಂದಲವಾಗಿದೆ. ಇನ್ನಾದರೂ ಅವುಗಳನ್ನು ಪ್ರಕಟಿಸಬೇಕೆಂಬ ನಮ್ಮ ಸೂಚನೆಯಿದೆ.

---

೩. ಖಾಸಗೀ ಶಿಕ್ಷಕರೊಳಗಿನೊಬ್ಬನು, ಬಿನ್ ಸರಕಾರಿ ಶಾಲೆಗಳೊಳಗಿನ ಶಿಕ್ಷಕರ ಹಾಡು ಈಗಿನ ಮಹರ್ಘತೆಯೊಳಗೆ ಎಷ್ಟು ಕರುಣಾಸ್ಪದವಾಗಿದೆ, ಎಲ್ಲ ಖಾತೆಗಳ ಮತ್ತು ಪ್ರಾಥಮಿಕ ಶಿಕ್ಷಕರ ಸಂಬಳವು ತಕ್ಕಮಟ್ಟಿಗೆ ಏರುತ್ತಿದ್ದರೂ, ತಮ್ಮ ಸಂಬಳದ ವಿಚಾರವನ್ನು ಖಾಸಗೀ ಶಾಲೆಗಳ ಚಾಲಕರಾಗಲಿ, ಸರಕಾರವಾಗಲಿ, ಇನ್ನೂ ಏನೂ, ಯಾತ ಮಾಡಿಲ್ಲ ಎಂದು ತಮ್ಮ ಬಿನ್ನಹ ಪತ್ರವನ್ನೊಂದು ನಮಗೆ ಕಳಿಸಿದ್ದು ನಾವು ಪ್ರಕಟಿಸಿರುತ್ತೇವಷ್ಟೆ. ಖಾಸಗೀ ಶಾಲೆಗಳು ಬಹುತರವಾಗಿ ಇಂಗ್ರಜೀ ಶಾಲೆಗಳು. ಇಂಗ್ರಜೀ ಶಾಲೆಗಳೊಳಗಿನ ೧/೩ ಶಾಲೆಗಳಷ್ಟು, ಸರಕಾರಿ ಶಾಲೆಗಳ; ಉಳಿದವೆಲ್ಲ ಖಾಸಗಿ ಸಂಸ್ಥೆಗಳು. ಮೇಲ್ತರಗತಿಯ, ಇಂಗ್ರಜೀಯಂಥ ಶಿಕ್ಷಣವನ್ನು ಪಡೆಯುವ ಹೆಚ್ಚಿನ ಭಾರವನ್ನು ಜನರೇ ಹೆಚ್ಚಾಗಿ ಹೊತ್ತುಕೊಳ್ಳಬೇಕೆಂದು ಸರಕಾರಿ ಧೋರಣವೇ ಇದೆ. ಇಂಥ ಶಿಕ್ಷಣದ ಶಾಲೆಗಳಿಗೆ ಸರಕಾರವು ಗ್ರಾಂಟವೆಂದರೆ, ವಾರ್ಷಿಕ ವೇತನವನ್ನು, ಸಹಾಯಾರ್ಥವಾಗಿ ಕೊಡುವದು. ಈ ಗ್ರಾಂಟು ಶಾಲೆಯ ವಾರ್ಷಿಕ ಖರ್ಚಿನ ಮೂರೊಳಗೆ ಒಂದು ಪಾಲಿಗಿಂತ ಹೆಚ್ಚಿಗಿರುವದಿಲ್ಲ. ೩೦೦ ರೂ ಖರ್ಚಾದರೆ, ೧೦೦ ರೂ. ಗ್ರಾಂಟು ಸರಕಾರದಿಂದ ಸಿಗುತ್ತದೆ. ಹುಡುಗರ ಫೀ ಹಣ ಈಗಿದ್ದದರಂತೆ ಪಾಲಕರಿಗೆ ನೂಬಲೇ ಭಾರಿಯಾಗಿದ್ದಾಗ, ಅದನ್ನು ಮತ್ತೇನು ಏರಿಸಲಿಕ್ಕಾಗದು. ಫೀ ಉತ್ಪನ್ನವು ಏರದಿದ್ದಮೇಲೆ, ಸರಕಾರಿ ಗ್ರಾಂಟವಾದರೂ ಏರಿದ ಹೊರತು, ಈ ಶಾಲೆಗಳ ಉತ್ಪನ್ನವು ಏರುವ ಬಗೆ ಹೇಗೆ? ಉತ್ಪನ್ನವು ಏರದ ಹೊರತು ಶಿಕ್ಷಕರ ಸಂಬಳ ಏರಿಸಿ, ಖರ್ಚು ಬೆಳಿಸುವದು ಅಶಕ್ಯವು. 'ಅಂತೂ ಇಂತೂ ಕುಂಬಿ ಮಕ್ಕಳಿಗೆ ಗಂಜಿಯಿಲ್ಲ' ಎಂಬಂತೆ ಈ ದುರ್ದೈವಿ ಶಿಕ್ಷಕರ ಹಾಡಾಗಿದೆ. ಸರಕಾರಿ ಗ್ರಾಂಟಿನ ೧/೩ ದ ಪ್ರಮಾಣವನ್ನು ೧/೨ ಕ್ಕಾದರೂ ಏರಿಸುವದೇ ತೀರ ಸಾಧ್ಯತರ ಉಪಾಯವು ಎಂದು ನಮ್ಮದೂ ಮತವು. ಅದಕ್ಕಾಗಿ ಸಂಸ್ಥೆಗಳ ಚಾಲಕರು, ಕೆನರಾ ಎ ಸೊ||, ಕರ್ನಾಟಕ ಎ. ಸೊ||, ಡಿ. ಎ ಸೊಸಾಯಿಟಿಗಳ ಕಮಿಟಿಗಳು ಎಚ್ಚರಾಗಿ, ಸರಕಾರಕ್ಕೆ ಒಂದು ಮನವಿಯನ್ನು ಸಾದರ ಪಡಿಸಬೇಕೆಂದು ನಾವು ಸೂಚಿಸುವೆವು ಇಲ್ಲದಿದ್ದರೆ, ಈ ಹತಭಾಗಿ ಶಿಕ್ಷಕರು ಕಂಗೆಟ್ಟು ಹೋಗುವರು. ಖಾಸಗೀ ಇಂಗ್ರಜಿ ಶಾಲೆಗಳಲ್ಲಿ ಶಿಕ್ಷಕರ ದಂಧೆಯು ಹಕ್ಕಿಯ ಹಾರಾಟದಂತಿದೆ. ತಮ್ಮ ದರ್ಜೆಗೆ, ಯೋಗ್ಯತೆಗೆ, ತಕ್ಕ ಸಂಬಳ ಸಿಗದಿದ್ದರೂ ಹೊಟ್ಟೆ ಹೊರಕೊಳ್ಳುವಷ್ಟು ಪಗಾರಾದರೂ, ಅವರಿಗೆ ದೊರೆಯದಿದ್ದರೆ, ಅವರಿಗಾದರೂ ಈ ಹಣ್ಣಿಲ್ಲದ ಆಲದ ಮರದಮೇಲೆ ಗೂಡು ಕಟ್ಟಿ ಉಪೋಷಣ ಮಾಡಬೇಕೆಂಬು ನರಹೇನು? ಹೊಟ್ಟೆಗೆ ದುಃಖ್ಯವು ಶಿಕ್ಷಣದ ಭವಿತವ್ಯವು ನಿರಾಶಾಜನಕವಾಗುತ್ತಿದೆ. ಉತ್ತಮ ಶಿಕ್ಷಕರಿಲ್ಲದೇ ಸಂಸ್ಥೆಗಳು ಬರೆ ವ್ಯಾಪಾರವನ್ನು ನಡೆಸುವರೋ, ಯಾ ನಿಜವಾದ ಶಿಕ್ಷಣವನ್ನು ಕೊಡುವರೋ, ಇದೇ ಪ್ರಶ್ನೆಯನ್ನು ಸಂಸ್ಥೆಗಳು ಬಿಡಿಸಬೇಕಾಗುವದು. ಅದಬರಿಂದ ಚಾಲಕರು ಈಗಿಂದಲೇ ಜಾಗ್ರತರಾಗಲೆಂದು ಬಯಸುವೆವು.

---

೪. ಕಳೆದ ಶನಿವಾರದ ಮುಂಬಯಿ ಕ್ರಾನಿಕಲದಲ್ಲಿ ಇಲ್ಲಿಯ ರಾ| ಎಸ್ ಜಿ. ಹರೀಟೆಯವರ ಒಂದು ಪತ್ರ ಪ್ರಸಿದ್ಧವಾಗಿದೆ. ಅದರಲ್ಲಿ ಅವರು ಸದ್ಯದ ಜಂಗಲ ಧೋರಣವು ಬೇಸಾಯವನ್ನು ಎಷ್ಟು ನಿರ್ದಯದಿಂದ ಕೊಲ್ಲುತ್ತದೆಂಬ ಸಂಗತಿಯನ್ನು ಉದಾಹರಣೆಯಿಂದ ಸಿದ್ಧಪಡಿಸಿರುತ್ತಾರೆ. ಇದೇ ತಾಲೂಕಿನ ಮಾಣಿನಳ್ಳಿ ಹಳ್ಳಿಯಲ್ಲಿ ಅನಾದಿಯೊಳಗಿಂದ ನಾಡು, ಕಟ್ಟಿಗೆ ವಗೈರೆ ಒಯ್ಯುವಲಿಕ್ಕೆ ಜಂಗಲಖಾತೆಯ ಖೇರ ರಸ್ತೆ ಇದ್ದಾಗ್ಯೂ, ಅದರ ದುರುಸ್ತಿ ಖರ್ಚು ಉಳಿಸಬೇಕೆಂದು, ಜಂಗಲದೊಳಗಿನ ಸಾಮಾನನ್ನು ರಯತರು ಕಟ್ಟಿದ ಅಘನಾಶಿನಿ ನದಿಯ ಕಟ್ಟಿನಮೇಲಿಂದ ಗಾಡಿಗಳನ್ನು ಹೊಡೆಯುತ್ತಾರೆ. ಇದರಿಂದ, ಮಳೆಗಾಲದಲ್ಲಿ ಹೊಳೆಯ ನೀರಿನ ಹೊಡೆತವನ್ನು ತಾಳಲಾರದ, ಕಟ್ಟು ಕುಸಿದು, ಇಡೀ ಹಳ್ಳಿಯೊಳಗಿನ ಗದ್ದೆಗಳೆಲ್ಲ ಬರಡು ಹೋದವು. ಈ ಸಂಗತಿಯನ್ನು ಜಂಗಲ ಅಧಿಕಾರಿಗಳಿಗೆ ನಿವೇದಿಸಿ, 'ನಿಮ್ಮ ರಸ್ತೆಯಿಂದ ನಿಮ್ಮ ಸಾಮಾನು ಒಯ್ಯಿರಿ' ಎಂದು ಅರಿಕೆ ಮಾಡಿದರೆ, 'ನಿಮ್ಮ ಭೂಮಿಯನ್ನು ಸರಕಾರ ಜಪ್ತಾ ಮಾಡುತ್ತೇವೆಂದು ರಯತರಿಗೆ ಧಮಕಿ ಕೊಡುತ್ತಾರಂತೆ! ಜಂಗಲಖಾತೆಯ ಉತ್ಪನ್ನವು ಹೆಚ್ಚೆಂದು ತೋರಿಸಿ, "ಶಾಬಾಸು" ಪಡೆಯಲಿಕ್ಕೆ ಆತುರರಾದ ಜಂಗಲಖಾತೆಯ ರಾಕ್ಷಸರು ಇಡೀ ಹಳ್ಳಿಯನ್ನೇ ಹಾಳುಹಾಕಿ, ಮೇಲೆ ಬಡ ರಯತರಿಗೆ ಬೆದರಿಸುವದನ್ನು ನೋಡಿದರೆ, ಜಿಲ್ಲೆಯಲ್ಲಿ ಒಡೆಯರ್ಯಾರು? ಮುಲ್ಕಿಖಾತೆಯೋ? ಜಂಗಲಖಾತೆಯೋ? ಎಂಬದೊಂದು ಸಂಶಯ ಉಂಟಾಗುತ್ತದೆ ಸರಕಾರವು ಇತ್ತ ಕಡೆಗೆ ಲಕ್ಷಗೊಟ್ಟು, ರಯತರ ಸಂಶಯವನ್ನು ದೂರಪಡಿಸುವದೇನ?

---

೫ ನಮ್ಮ ಕಳೆದ ಜುಲೈ ೨೨ನೇ ಸಂಚಿಕೆಯ ಇತವೃತ್ತದಂತೆ, ಸೂಪಾ ಪೇಟೆಯ ಮತ್ತು ಹಳ್ಳಿಹಳ್ಳಿಯ ಜನರು ಜುಲೈ ೧೮ ರಲ್ಲಿ ಶ್ರೀಯುತ ಗೋಪಾಳರಾವ ಯಾರ್ದಿಯರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಪೇಟಾ ಸಭೆ ಸ್ಥಾಪಿಸಿ, ರಯತರಿಗೊದಗುವ ಜಂಗಲಖಾತೆಯ ಕಷ್ಟಗಳನ್ನು ನಿವಾರಿಸಿ, ತಮಗೆ ಕೆಲವು ಸವಲತುಗಳ ಅವಶ್ಯಕತೆಯನ್ನು ತೋರಿಸಿ, ಪಾಸು ಮಾಡಿದ ಠರಾವುಗಳನ್ನು ಡೆಪ್ಯುಟೇಶನ ಪ್ರತಿನಿಧಿಗಳ ಮುಖಾಂತರ ಸರಕಾರಕ್ಕೆ ಸಾದರ ಮಾಡುವ ವ್ಯವಸ್ಥೆಯಾದದ್ದು ತೋರುತ್ತದೆ. ಇದು ಬಹು ಅಭಿನಂದನೀಯವು. ಆ ಠರಾವುಗಳು:— (೧) ಊರ ಸುಧಾರಣೆಯ ಬಗ್ಗೆ ಜನರ ವಸ್ತಿಯ ಸುತ್ತುಮುತ್ತು ೨೦೦ ಯಾರ್ಡು ಜಂಗಲದ ದೊಡ್ಡ ಸಣ್ಣ ಗಿಡಗಳನ್ನು ಕಡಿದು ಆ ಕಟ್ಟಿಗೆಯು ಉಪಯೋಗ ರಯತರ ಮರ್ಜಿಯಂತೆ ಮಾಡಲಿಕ್ಕೂ, ಆ ಭಾಗದಲ್ಲಿ ಪುನಃ

ಕುಮಟೆ ಪೇಟೆ ಧಾರಣೆ.

ಜಿನಸು	ದರ
ರಂಗೂನ ಬೆ ಗೋಣಿ ೧ಕ್ಕೆ	೧೫।—೧೬
ಮ್ಯುಟ್ಟಗೆ ಅಕ್ಕಿ ಮಾನಗಿ	೮।
ರಾಗಿ ನಿಜಕ್ಕೆ	೧೧।—೧೨॥।
ಗೋದಿ ಗೋಣಿ ೧ಕ್ಕೆ	೧೯—೨೬
ಹುರುಳಿ ನಿಜ	೧೫।—೧೫।।
ಕಡಳೆ ನಿಜ ೧ಕ್ಕೆ	೧೬—೧೬।
ತೊಗರಿಬೆಳೆ ಗೋಣಿ ೧ಕ್ಕೆ	೨೭—೨೨
ಹೆಸರು ಬೇಲ ,	೧೬—೨೮
ಮಾರಿಶಸ ಸಕ್ಕರೆ ಮಣ ,,	೧೨॥—೧೨॥
ಮೆಣಸಿನ ಕಾಯಿ ಮಣ ,	೨—2
ಹಳ್ಳೆಣ್ಣೆ ಮಣ	೧೦
ಕೊಬ್ರಿ ಎಣ್ಣೆ ಮಣ ..	೧೯
ಕೊತ್ತಂಬರಿ ಗೋಣಿ	೧೨—೧೪
ಉಪ್ಪು ಗೋಣಿ ,	೬ ೨
ಕೆರೆಸಿನ ಸೂರ್ಯ	೬ ೪
, ಹಂಸ ,	೨ ೮

ಅನುಭವಸಿದ್ಧವಾದ ವೈದ್ಯರಿಗೆ
ನಿಸ್ಪೃಹಸ್ಯ ತೃಣಂ ಜಗತ್ ।
ರಕ್ತಶುದ್ಧಿ ಧಾತುವೃದ್ಧಿಯಮಾಡುವ ಅತಿ ಉತ್ತಮ
ಪ್ರವಾಳ ಕೇಶರ ಅಮರಸತ್ವ ಚಾಜಿತು
ಮತ್ತು ವನಸ್ಪತಿ ವಿಕೃತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ ಮುಖಕಾಂತಿ ನಪುಂಸಕತ್ವ ಸ್ವಪ್ನಾವಸ್ಥೆ ರಕ್ತದೂಷಿತರೋಗ ಮೇಂದುವಿಕಾರ ನರಗಳ ಅಶಕ್ತತೆ ಅಂಗನಿಸ್ತೇಜತ ವಾತ ಶೋಕು ಪದು ತಲೆತಿರುಗ ವದು ಜೀರ್ಣಜ್ವರ ಅಗ್ನಿಮಾಂದ್ಯ ಉಪದಂಶವಿಕಾರ ವ ಸ್ತ್ರಶೂಲಿ ಮುಂತಾದ ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ ಶರೀರಕ್ಕೆ ದೃಢತ್ವವು ಕಾಂತಿಯೂ ಸ್ಮರಣಶಕ್ತಿಯೂ ಕೂಡ ವೃದ್ಧಿಯಾಗಿ ರತಿಸುಖಕ್ಕ ಎಯಂಕ್ತ್ವನನ್ನು ಕೊಡುತ್ತದೆ ಉತ್ತಮ ಗುಣಕ್ಕೆ ೪೦ ದಿವಸ ಸೇವಿಸ ಗುಳಿಗೆ ೪೦ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ — ಒಕ್ಕಲ ವ ಳ ಎಲ್ಲ ರೋಗಗಳಮೇಲೆ ಅತಿ ಉತ್ತಮ ವಾದ್ದು ಗುಳಿಗೆ ೩೦ ಕ್ಕೆ ರೂ ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ— ೧೪ ದಿವಸದ ಔಷಧಕ್ಕೆ ರೂ ೨-೦-೦ (೩) ಅಜೀರ್ಣ ನಾಶಕ ಮಲಮು— ಡಬ್ಬಿಗೆ ಆಣೆ ೦-೮-೦ (೪) ಮೂಲವ್ಯಾಧಿ ನಾಶಕಗುಳಿಗೆ— ಬಿಸು ಒಗೆದ ಜಗ ವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಮಾನಪತ್ರ ಔಷದಿಯ ಸಂಗಡ ಅಂಚೆ ಖರ್ಚು ಬೇರೆ

ವಿಳಾಸ— **ವೈದ್ಯ ವ್ಹಿ. ಎಸ್. ಮೋದಕ ಮತ್ತು ಕಂಪನಿ, ಪೋಸ್ಟ ವಿರಸಿ.**

ಜಿಲ್ಲಾ ಉತ್ತರಕಾನಡಾ

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯರ ಸಚಿತ್ರ ಚರಿತ್ರೆ ಲೇಖನ ಮತ್ತು ಭಾಷಣ ೦-೧೨-೦, ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦ ದಾದಾಬಾಯಿ ನವರೋಜಿ ಜಿಲ್ಲನವರ ಸಚಿತ್ರ ಚರಿತ್ರೆ ೦-೧೨-೦ ಕರ್ತವ್ಯ ಸಿದ್ಧಾಂತ ೦-೮-೦ ಬುದ್ಧಿಯ ಮಾತು ೦-೪-೦ ಆದುನಿಕ ಜಗತ್ತು ೦-೪-೦ ಪತಿತೋದ್ಧಾರ ೦-೪-೦

ವಿಳಾಸ:— **ಎಂ. ಎಂ. ಹರ್ಡೇಕರ.**

ಧಾರವಾಡ

ಪ್ರಕೃತಿಯಿಂದ ಗುಣಪಡಿಸುವ

ಔಷದಗಳು.

1 ಮಹಾಮದನ ಕಾಮೇಶ್ವರಿ ಲೇಹ — ಬಹು ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ ಎದೆನೋವು ಮಲಬದ್ಧತೆ ಶರೀರಗಳ ಪಳಿಕದಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಹೊಳೆಸುವದು 10 ದಿನ ಸೇವಿಸುವ ಲೇಹ ಡಬ್ಬಿ 1ಕ್ಕೆ 1 1- 0 3 ಡಬ್ಬಿಗೆ 4 12 0

2 ಮಹಾಜ್ವರಾಂಕುಶ — (ಖಾತ್ರಿ ಗುಣ) — ಇನ್‌ಫ್ಲುಯೆಂಜಾ ನಿಮೋನಿಯಾ ದಿವಸಕ್ಕೊಮ್ಮೆ ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1 ಕ್ಕೆ 0-8-0

3 ಬಾಲಗ್ರಹ ಗುಟಿಕೆ — ಕೂಸುಗಳ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಬಾಟ್ಲಿ 1ಕ್ಕೆ 0 10 0

4 ಖಾಂಸಿ ಕೆಮ್ಮಿನ ಗುಳಿಗೆ ಇದು ಖಾಸ ಸಿದ್ಧ ಔಷದಿ ಒಂದೇ ಗುಳಿಗೆಯಿಂದ ಕಫ ಬಿಟ್ಟು ಕೆಮ್ಮು ಇಲ್ಲದಾಗುವದು ಬಾಟ್ಲಿ 1 ಕ್ಕೆ 0 10 0

5 ... — ... ಹೋಗುವಾಗ್ಯೆ ... ಕೊಡಲಿಕ್ಕೆ ... ಕಾಲರಾ ರೋಗಿಗೂ ... 2 ದಿವಸದೊಳಗೆ ... 1 ... ಔಷದಿ ...

6 ... — ಇದರ ... ಕೆಂಪು ... ಮುಟ್ಟಾಗುವದು ... ರಕ್ತಸ್ರಾವ, ... ಹೋಗ ... ರೋಗಗಳನ್ನು ನಿವಾರಿಸಿ ಗರ್ಭಕೋಶವನ್ನು ... 1 ಬಾಟ್ಲಿ ... 1 ಬಾಟ್ಲಿ ... 2 0

ಎಸ್. ಗಣಪಯ್ಯಾ ಎಂ ಸನ್ಸ.

ನೆಟಿವ್ ಪೋಸ್ಟ, ರಥಬೀದಿ

ಮಂಗಳೂರ ದ. ಕ.

ಜಗದ್ವಿಖ್ಯಾತ ... ಬಹು ...

ಮುಖಜೀವನಾಮೃತ.

ಈ ಔಷದವು ಹಚ್ಚಿ ... ನೋಡಿ ವ ಹಲ್ಲು ... ಹಲ್ಲುಗಳಿಂದ ರಕ್ತ ... ಯುವ ... ದಲ್ಲಿ ... ಗಳಿಂದ ಈ ಎಲ್ಲಾ ವಿಕಾರಗಳಿಗೆ ... ಬಾಣ ಔಷದ ... ಬಾಲಗ್ರಹ ಎಲ್ಲಾ ತರದ ... ಶಾಂತಿ ... ಳಗ ... ಹಿಂಗೆ ... ಗುಂಯಗಳಿಗೆ ಮತ್ತು ವಿಷಕಾರಕ ಪ್ರಾಣಿಗಳು ... ಕಡಿತ ... ಮೇಹರೋಗ ...

ಪ್ರತಿ ಬಾಟ್ಲಿ ೧ಕ್ಕೆ ಕ್ರಯ ೦-೧೨-೦

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದಿ ಔಷಧಶಾಲೆ

ಕುಮಟಾ (ಎನ್ ಕೆನರಾ)

ಹಣ ಒಪ್ಪೋತ್ತಾ! "ಓಂ" ಹೊಸಔಷಧ
ಗುಣ ಬಾರದಿದ್ದರೆ ಹಣವಾಪಸು
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರಕವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು ಬಹುದಿವಸದಿಂದ ವನಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯವದು. ಉಷ್ಣದಿಂದದೂಷಿಕವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಕಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ, ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದ ಹಾ, ಬಹು ದಿನಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ

ಬೆಲೆ ಅಂಚೆ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರು ೧ ೧೨ಆಣೆ ೩ ಡಬ್ಬಿಗಳಿಗೆ ೪ ರು ೮ ಆಣೆ ೧೨ ಡಬ್ಬಿಗಳಿಗೆ ೧೫ ರು ... ೧೦ ಡಬ್ಬಿ ... ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲೀಷ ಅಥವಾ ಕನ್ನಡದಲ್ಲಿ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ—ಪ್ಹಿ ಆರ್. ಬ್ರದರ್ಸ ಮತ್ತು ಕಂಪನಿ

ಪೋಸ್ಟ, ಪ್ಯಾಟಿ, ಜಿ ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವ ... ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾವ ಮನೆ ಸಮಾರಂಭ ದಲ್ಲಿಯೂ ರಾತ್ರಿ ಹೊತ್ತಿನಲ್ಲಿ ಸಹಾಯ ... ಹಚ್ಚಿದರೆ ಇದರಿಂದ ... ಸಹ ಕಡಿಮೆ ... ಈ ... ದೀಪಗಳು ... ಈ ದೀಪ ... ಹಚ್ಚು ... ಕ್ರಯಗಳು ಸಹ ಇಲ್ಲ

ಬೇಕಾದವರು ಭಾಡಿಗೆಯ ದರದ ... ಕೆಳಗಿನ ... ಕಳಿಸು ...

ಪುರುಷೋತ್ತಮ ಲಕ್ಷ್ಮಣ ... ಕ್ಯಾನಡೀ

ಹೆಗಡೇಕರ, ದುಕಾನ, ಕುಮಟಾ

No. Reg. B. 1270.

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೪.

ಪತ್ರದ ವರ್ಗಣಿ -
ಮುಂಚಿಯಲ್ಲಿ ಅಗಾವು
ರೂಪಾಯಿ 2-0-0.
ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 2-13-0
ಬಿಡಿ ಸಂಚಿಕೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ.-
ಕನ್ನಡ, ಇಂಗ್ಲಿಷ ಯಾವ ಭಾಷೆಯ(೧೫ ಎಮ್ ಅಗಲ)ದ ಸಾಲುಗಳ ವರೆಗೆ ರೂ.3-0-0
ಅನಂತ್ರ ಪ್ರತಿ ಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೯ ನೇ ಅಗೋಸ್ಟ ಸನ್ ೧೯೨೦ ನೇ ಇಸವಿ.]—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆವುರಿ, ಕಣ್ಣಿನ ದೃಷ್ಟಿ ಕಡಿಮೆಯಿಂದ ಕೀವುಸೋರುವದು ಶೀತ್ರುತನ, ಕಣ್ಣುನೋವು, ಅಪಸ್ಮಾರ, ನಿದ್ದೆಬಾರದಿರುವದು, ನರವು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಚಿತ ಗುಣಮಾಡುತ್ತದೆ, ಉದುರುವ ಕೂದಲವನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ತಲೆಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆ 1ಕ್ಕೆ 1 0 0, 3 ಕ್ಕೆ 2 10 0 ದೊಡ್ಡ ಸೀಸೆ1ಕ್ಕೆ 2-0-0 3ಕ್ಕೆ 5 4 0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರ ನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗವನ್ನು ಗುಣ ಮಾಡುತ್ತದೆ

ಬಾಟ್ಲಿ 1 ರ ಕ್ರಯ 1-8 0
ಬಾಟ್ಲಿ 3 ರ ಕ್ರಯ 4 0 0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಮಯದಲ್ಲಿ ಅತ್ಯಲ್ಪವಾಗಿ ಅತಿರೇಖವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳಿಪ್ರದರ (ಬಿಳಿಸೆರಗು) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ ಬಾಟ್ಲಿಗೆ ರೂ 2/-

ಚಿನ್ ಚಿನ್ ಬಾಮು.

ಎಲ್ಲಾ ತರದ ನೋವು, ತಲೆನೋವು, ಜ್ವರ, ಗಾಯ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ ಗುಣ ಅಧಿಕ ಡಬ್ಬಿ ೧ ಕ್ಕೆ 8ಆಣೆ ಟ ಖ. ಅಲಾಯದ ಕೆಟಲಾಗಿಗೆ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7. ಕಂಕನಾಡಿ, ದಕ್ಷಿಣ ಕಾನಡಾ,

MALARIANA COMPANY.

HAMPANKATTA, MANGALORE.

ಮಲೇರಿಯಾನ:— ಮಲೆಜ್ವರ, ಕಂಪಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು 8ಔನ್ಸಿನ ಬಾಟ್ಲಿ 1ಕ್ಕೆ ರೂ 1 8 ½ ಡಜನಿಗೆ ರೂ 8 8, 1 ಡಜನಿಗೆ ರೂ. 16 8

ಮಲೇರಿನ್:— ಮಲೆಜ್ವರದ ಟ್ಯಾಬ್ಲೆಟ್‌ಗಳು ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು 25 60 ಮತ್ತು 100 ಮಾತ್ರೆಗಳಿಗೆ ಆಣೆ 8 ರೂ 1 ಮತ್ತು ರೂ 8-1.

ರೆವುಮೊ ಬಾಮು: ತಲೆಶೂಲೆ, ಕಟಿವಾತ ಇತರ ಎಲ್ಲಾ ನೋವುಗಳಿಗೆ ಕ್ರಯ. ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 5 4 0

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ 1 10 1ಡಜನಿಗೆ ರೂ 3

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್1 2 4 ಔನ್ಸ್1 2. 4.
ಆ 2½ ಆ 3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಹೊಳ್ಳರೊಡನೆ ಪಳ್ಳ ತಂಬತರಾಗಿ ಪ್ರಾಯಕ್ಕೂ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೊಲ್ಡ ನಿಕ್ಕಲ ಗೂಡುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕನ್ನಡಕ ತಂಪಾಗುವ ಕನ್ನಡಕಗಳೂ ಇತರ ಎಲ್ಲಾ ಮಾಲುಗಳೂ ದೊರೆಯುವವು ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಕಾಣುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ಕಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪೆನಿ,
ಮಂಗಳೂರು.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೇನ ಕೋಟಿಗೂ, ಕೋಟಿಗೂ, ಬಹುವಂದವು, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂಥವು. ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶ್ರೀ ಶ್ರೀನಿವಾಸರಾವ,
ದಾವಣಗೇರಿ, ಮೈಸೂರ ಪ್ರಾಂತ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟಿಯಾದರೆ ತರಿಸಿಕೊಡುವರು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ನಾವು ಪೂರೈಸುವೆವು

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

WAGLE NADKARNI & CO.

CHEMISTS, DRUGGISTS
& GENERAL
MERCHANTS.
SANDHURST ROAD,
Bombay.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಗಾಯ ಬಿದ್ದ ಜಖಮು, ಪೆಟ್ಟಿನ ನೋವು, ಯಾವದೇ ತರದ ಜಖಮು ಯಾ ಎಲುಬು ಮುರಿದಲ್ಲಿ ಸಹ ಇದನ್ನು ನೀರು ತಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ ಕ್ರಯ ಬೊಡ್ಲಿಗೆ ೧ಕ್ಕೆ ೨ ಆಣೆ. ೧ ಡ ರೊ ೧-೨-೦. ವ್ಯಾಪಾರಸ್ಥರಿಗೆ ಖರೀದಿ ಕಮಿಶನ್ ಪತ್ತೆ — ಮುಖ್ಯಾಜೆ ಹಿರಾಲಾಲ ದೇವಜಯು, ಗುರಜರ ಹವೇಲಿ, ಕುಮಟಾ.

THE LOKAMANYA.

Kanara Union Mourns

(From a Correspondent)

The following resolution regarding the death of Lokamanya Bal Gangadher Tilak was passed Mr S V Paleker, B A LL B High Court Pleader presiding - ' This meeting of the Kanara Union of Bombay held in the Maratha High School, on the 8th August 1920, expresses its deep sorrow at the demise of Lokamanya Bal Gangadhar Tilak whose intense patriotism great schoolarship pure private life and self sacrfice have been of eminent services to our Country

++++++++++++++++ +++++++ + +

Conference & Elections

(By Vigilance)

' Every voter should remember that his vote should make him careful as to how he disposes of it If he gives it to a man merely because he belongs to his caste or his race if he gives it to a man, merely because he expects some favour for himself or his family from that man if he gives it to a man who has riches or other power, but no other qualifications, intelligent or moral to entitle him to vote, then the voter sells his country and prostitutes his vote The voter should take an intelligent interest in the affairs of the Government of his country should hear the parties, should not be carried away by the mere flattery or the sweet words of the candidates who ask for his votes - *P c le it K P C* 1920

Mr M V Kalgeri in inviting the delegates to the first Political Conference, said " It has been the unfortunate lot of the District to be neglected by the powers that be no less than its own children While every other District has advanced in matters political, social, economic and industrial, Kanara stands where it was, and has thus been so out distanced by the other Districts, that it will be some years before it can even hope to come into a line with them The 15th of May 1920 is a *Red Letter Day* in the political History of our District for this day marks the remarkable awakening of the District to the new light, the dawn of Kanaras unity and what is more Kanaras ardent desire for sustained and systematic efforts in the direction of securing the wel being of the District as a whole in asmuch as it for the first time, ushored in the New Era and new mode of concerted action, not only in the interest of the District but also in the interest of our Nation Yet we find ourselves in infancy in our political life If anything has been brought to light in the last Conference it is this that the people of Kanara have hitherto politically lagged far behind most of the other Districts in the Presidency, and has not been sufficiently forward in bearing its share of national responsibility in accordance with the pulsating aspirations of the new life of India which we witness in a variety of ways all around us However a beginning has been made in good time to rouse the people to the right and responsibilities both as the citizens of Kanara and members of the Indian Nation and we entertain every hope of seeing brighter days of enlightenment and prosperity dawn upon our District in the near future

But the course cannot be so easy as one might suppose How are we to ensure the redress of our manifold grievances and at the same time further our national ends? The new legislation & the Reforms have opened a New Era in our political life inasmuch as much as they have made the ryots & the agriculturists masters of their legislators to some extent at least by the power of vote that they possess Whatever the merits & defects of the new reforms however inadequate they may be we think there can be no two opinions as to its advance over the existing system of Goverment as far as it affords to our masses a voice in the administrative machinery thus laying down the first step towards the attainment of that cherished ideal - *Self Government for India* It must be remembered that upon the proper use of this power rests to a large extent, not only the destinies of our benighted District but even those of our oppressed nation If we strive to ensure this right & proper use of this voting power by educating our electorate and bringing home to them their rights and responsibilities it may be possible to return the right man to the reformed Council We do not want men to decorate the chairs in the Council Hall but we want honest, intelligent hardworking men to work & work hard for the emancipation of our nation and for the redress of the just grievances of our isolated and most neglected District, and thus act as our true spokesman

The Readers will say "It is all well to write, but, how to educate the electorate by what means and through what channel ?

Sir Narayen Chandavarkar pointed out in his Presidential address that ' It is our duty especially the duty of the educated classes, to guide the voters and other brothren of ours, not blessed with light of education so as to enable them to realise their own true worth and exercise their power of vote with intelligence, discretion and judgment and not to be mere tools, in the hands of either official place hunters or popular demagogues " The last Conference provided for the organisation of District and Taluka Committees, with a view to strengthen the political life of our District and we are informed that these Committees are being formed in several places We hope we shall not be wrong if we say that these Committees are the guides of the illeterate masses since the majority of the members form the educated classes Hence the problem solves itself The District Committee together with the Taluka Committees form the proper authority, proper channel the best guide and the responsible body to educate their brothren as to their rights and responsibilities under the Reforms Act and point them out how they might be responsible for betraying the sacred trust that Mother India reposes in her sons if they fail to use the power of vote in the right manner

Now how to educate? For this purpose we suggest for the early consideration of the District Committee that it should issue three or four leaflets (as is often done by the Home Rule Leagues and other Political Associations) pointing out

1 The rights and responsiblities laid upon the voters under the Reforms Act with a brief explanation of the Reforms and the duties of the voters

2 How to exercise these responsiblities and the consquences attending upon the improper use of vote

3 The qualities and qualifications of a true representative of a Corporate Body and

4 The duties of the representative towards those whom he re

presents

These leaflets can best be published in the vernacular (Marathi and Kanarese) and it is estimated that the total expense for printing and distributing may come to Rs. 150/- at the most. Thus they may realise what they mean by a vote and how to discharge the sacred trust in order to return the right and best man to represent them in the New Reformed Councils.

We have been prompted to suggest this course for the immediate consideration of the District Commitee, in view of the fact, that several candidates, of various qualifications, have stood forth for the election and the voters are likely to be carried away by personal or communal considerations, since a large number of our voters are still ignorant of the Reforms and their responsibilities under them. This is the first time, that we have the honour of returning a representative of our own to the Council and thus our task has been doubly difficult, first because, our electors have never before known the responsibilities of a vote, and secondly because, we have to choose the best and the ablest man, to redress our past wrongs boldly and sternly. If the District Committee should ignore this important responsibility, it will not only fail to serve their District, at this critical moment, but will betray the trust, the people repose in them. Will the Committee rise to the occasion, and bestir themselves to the important task?

The work must be begun by the beginning of September and end by the end of October, so that, the leaflets may be distributed within an interval of a fortnight to most of the villages throughout the District, also at the Polling Stations big posters giving the purport of the leaflet already issued, might be posted so as to attract the attention of the voters, to their rights and responsibilities. We trust (perhaps not in vain) that the members of the Committee will give their early consideration to this problem.

॥ ಲೋಕಮಾನ್ಯ ಟಿಳಕ ಮಹಾನುಭಾವರ ಚರಿತ್ರ. ॥

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಕೂಡಲೇ ಕೇಸರೀ–ಮರಾಠಾ ಪತ್ರಗಳು ಸ್ವರಾಜ್ಯ ಸಂಘದ ಡಂಗುರ ಸಾರಿಸಿದವು ದೇಶದೇಶಗಳಲ್ಲಿಲ್ಲಿ ಸ್ವರಾಜ್ಯ ಸಂಘಗಳು ಸ್ಥಾಪಿಸಲ್ಪಟ್ಟವು ಟಿಳಕರು ಸ್ವರಾಜ್ಯ ವಿಷಯಕ ವ್ಯಾಖ್ಯಾನ ಕೊಡುತ್ತ ಸಂಚಾರ ಮಾಡಹತ್ತಿದರು. ಇವೆಲ್ಲ ಚಳವಳಗಳು ನೌಕರಶಾಹಿಯ 'ಪಾಪಬೀರು' ಮನೋವೃತ್ತಿಗಳಿಗೆ ಸಹನವಾಗುವಂತಿದ್ದಿಲ್ಲ. ಇವರಲ್ಲಿ ಅವರಿಗೆ ಸಂಕಟದ ಮುಂಗಾಳಿ ಸಿಕ್ಕಿತು ತಿರುಗಿ ದಡಪಶಾಹಿಯ ಆಟ ನಡೆಕ್ಕೆ ಆರಂಭವಾಯಿತು.

ಜ್ಯೂಬಿಲಿಯೂ ಲೋಕಮಾನ್ಯ ಪದವಿಯೂ.

ಇಷ್ಟೊತ್ತಿಗೆ ೧೯೧೬ ನೇ ಇಸ್ವಿಯಲ್ಲಿ ಟಿಳಕರು ತಮ್ಮ ಅರವತ್ತೊಂದನೇ ಜನ್ಮ ದಿವಸವನ್ನು ಕಂಡರು ಈ ವರ್ಷದ ಜ್ಯೂಲೈ ೨೩ ನೇ ತಾರಿಖು ಇಡೀ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಉತ್ಸವದಂತೆ ನೆರವೇರಿಸಲಾಯಿತು. ಪುಣೆಯಲ್ಲಿ ಪ್ರಚಂಡ ಸಭೆಗೂಡಿ, ಅವರು ಈ ವರೆಗೆ ಮಾಡಿದ ದೇಶಕಾರ್ಯದ ಪಸಂತಿಯನ್ನು ದರ್ಶಿಸುವದಕ್ಕಾಗಿ, ಒಂದು ಲಕ್ಷ ರೂಪಾಯಿಯ ಕಾಣಿಕೆಯೂ, "ಲೋಕಮಾನ್ಯ" ಪದವಿಯೂ, ಅವರಿಗೆ ಅರ್ಪಿಸಲ್ಪಟ್ಟಿತು. ಇನ್ನು ಶ್ರೀಯುತ ಟಿಳಕರು ಲೋಕಮಾನ್ಯ ಟಿಳಕರಾದರು.

ಲೊ ಟಿಳಕರಮೇಲಿನ ಜಾಮೀನ ಖಟ್ಲೆಯು

ಹೀಗೆ, ಇಡೀ ಹಿಂದುಸ್ಥಾನವು ಈ ರಾಷ್ಟ್ರಭಕ್ತರಲ್ಲಿ ತನ್ನ ಪ್ರೇಮವನ್ನು ದರ್ಶಿಸುವಾಗ, ನಮ್ಮ ಸ್ವಕಾರ್ಯತತ್ಪರ ನೌಕರಶಾಹಿಯವರಾದರೂ, ತನ್ನ ಪರಿಯಲ್ಲಿ, ತನ್ನ ಪ್ರೇಮವನ್ನು ವ್ಯಕ್ತಪಡಿಸುವದರಲ್ಲಿ ಹ್ಯಾಗೆ ತಪ್ಪೀತು? ಅಹಮ್ಮದ ನಗರದಲ್ಲಿಯೂ, ಬೆಳಗಾವಿಯಲ್ಲಿಯೂ, ಕೊಟ್ಟ ಮೂರು ವ್ಯಾಖ್ಯಾನಗಳ ಬಗ್ಗೆ, 'ನಿಮ್ಮ ಕಡೆಯಿಂದ ಹತ್ತು ಸಾವಿರ ರೂಪಾಯಿಯ ದೋಖ ಜಾಮೀನ, ಮತ್ತು ನಾಲ್ವತ್ತು ಸಾವಿರದ ಜಾಮೀನು ಯಾಕೆ ತಕ್ಕೊಳ್ಳಬಾರದೆಂಬವಕ್ಕೆ ಕಾರಣ ಕೊಡಿರೆಂದು,' ಲೋ. ಟಿಳಕರಿಗೆ ಆಮಂತ್ರಣ ಕಳಿಸಲಾಯಿತು ಲೋ. ಟಿಳಕರು ಆಮಂತ್ರಣವನ್ನು ಸ್ವೀಕರಿಸಿ, ಬೇಡಿದ ಜಾಮೀನನ್ನು ತುಂಬಿ, ಹ್ಯಾಕೋರ್ಟಿಗೆ ಅಪೀಲು ಮಾಡಿದರು. ಈ ಸಮಯಕ್ಕೆ ೧೯೧೪ ನೇ ಇಸ್ವಿಯ ಯುರೋಪದ ಮಹಾಯುದ್ಧದ ಛಾಯೆಯು ಈ ಖಟ್ಲೆಯಮೇಲೆ ಬಿತ್ತು. ಹ್ಯಾಕೋರ್ಟಿಗೆ ಈ ವ್ಯಾಖ್ಯಾನಗಳಲ್ಲಿ ರಾಜದ್ರೋಹವೇನೂ ಕಾಣದೆ, ಲೋಕಮಾನ್ಯರು ನಿರ್ದೋಷಿಗಳೆಂದು ನಿರ್ಣಯವಾಗಿ, ತುಂಬಿದ ಜಾಮೀನ ರಕಮು ಹಿಂದೆ ಕೊಡಲ್ಪಟ್ಟಿತು. ಮುಂದೆ, ಅದೇ ವರ್ಷ ಲಕ್ನೌ ಸಂಯುಕ್ತ ರಾಷ್ಟ್ರೀಯ ಸಭೆಯಲ್ಲಿ, ಇವರು ಸ್ವರಾಜ್ಯವಾದಿಗಳ ಸರ್ವಮಾನ್ಯ ಪುಢಾರಿಗಳೆಂದು ಮುಂದೆ ಬಂದರು. ಇವರ ಚಳವಳವನ್ನು ಕುಂದಿಸಲಿಕ್ಕೆ, ವಿರುದ್ಧ ಪಕ್ಷದವರ ಕಷ್ಟಗಳು ಎಂದಿಗೂ ಸಿದ್ಧವಿದ್ದವು. ಆದರೆ, ಲೋಕಮಾನ್ಯರಲ್ಲಿ ಹಿಂದುಸ್ಥಾನದ ಪೂರ್ಣ ವಿಶ್ವಾಸವಿದ್ದುದರಿಂದ, ಕೊನೆಯಲ್ಲಿ ಅವರದೇ ಜಯವಾಯಿತು.

ಈ ಮುಂದಿನ ಟಿಳಕರ ಚರಿತ್ರವು ವೃತ್ತಪತ್ರಗಳ ವಾಚಕರಿಗೆ ತಿಳಿಸಿ ಹೇಳುವ ಅಗತ್ಯವಿಲ್ಲ. ರಾಷ್ಟ್ರೀಯ ಸಭೆಯ ಶಿಷ್ಟಮಂಡಳದಲ್ಲಿ ಕೂಡಿ, ಇವರು ಇಂಗ್ಲಂಡದಲ್ಲಿ ಸಾಧಿಸಿದ ದೇಶಕಾರ್ಯವು ಸರ್ವವಿಶ್ರುತವುಂಟು. ಇವರ ಅಂತ್ಯಕಾಲದ ದಿವಸಗಳಲ್ಲಿ ರೌಲೆಟ ಎಕ್ಟ, ಸತ್ಯಾಗ್ರಹ, ಪಂಜಾಬ ಪ್ರಕರಣ, ಖಿಲಾಫತ, ಅಸಹಕಾರಿತೆಗಳೇ ಮೊದಲಾದ ಕಲ್ಲು ಬಂಡೆಗಳೊಳಗಿಂದ ಸ್ವರಾಜ್ಯದ ನಾವೆಯನ್ನು ನಡಿಸಿಕೊಂಡು ಹೋಗುವ ಕರ್ಣಧಾರತನವು ಇವರ ಕೈಯಲ್ಲಿತ್ತು. ಮ॥ ಗಾಂಧೀರವರಿಗೆ ವ್ಯಾವಹಾರಿಕ ಅನುಭವದ ಒದ್ದಿಮಾಡಗಳನ್ನು ಕಲಿಸಿ, ಅವರ ಉತ್ಕಟತೆಯ ವೇಗದ ಮನದಾಡುವ ಮಹತ್ವದ ಜವಾಬದಾರಿಯು ಇವರಮೇಲಿತ್ತು. ಈ ನಿರ್ವಾಣದ ಸಮಯದಲ್ಲೇ, ಹಿಂದೀ ರಾಷ್ಟ್ರಕ್ಕೆ ಅವರ ಅನುಭವಸಿದ್ಧ ಉಪದೇಶದ ಅತ್ಯಂತ ಗರಜವಿದ್ದಾಗ, ಕಳೆದ ತಾ ೧ ನೇ ದಿವಸ ಬೆಳಗ್ಗಿನ ೧ ಘಂಟೆಗೆ ಇವರು ಮುಂಬಯಿಯಲ್ಲಿ ತಮ್ಮ ಅವತಾರವನ್ನು ಮುಗಿಸಿ, ಈ ನಶ್ವರ ಜಡ ದೇಹವನ್ನು ಬಿಟ್ಟು, ದಿವ್ಯ ಲೋಕಕ್ಕೆ ತೆರಳಿದರು. ಪರಮೇಶ್ವರನು ಇವರ ಪುಣ್ಯಾತ್ಮಕ್ಕೆ ಚಿರಕಾಲ ಶಾಂತಿಯನ್ನು ಕೊಡಲಿ.

"ವಂದೇ ಮಾತರಮ್"

ಕೌನ್ಸಿಲದೊಳಗಿನ ನೇಮಣೂಕಿ.

(ಲೇಖಕ — ಶಿಷಗಿರಿ ವಾಸುದೇವ ಕಾಮತ.)

ಬರುವ ನವ್ಹಂಬರ–ಡಿಶೆಂಬರದಲ್ಲಿ ನೂತನ ಕೌನ್ಸಿಲದ ನಿವಡಣೂಕಿಯಾಗುವದಿರುವದರಿಂದ, ಈಗಿನಿಂದಲೇ ಕೆಲವರು ಉಮೇದವಾರರಾಗಿ ನಿಲ್ಲಲಿಕ್ಕೆ ಪ್ರಯತ್ನಿಸುವರು. ಸದ್ಯಕ್ಕೆ ಮತದಾರರ ಯಾದಿಗಳು ಪ್ರಸಿದ್ಧವಾಗಿದ್ದು, ಇನ್ನೂ ಉಮೇದವಾರರ ಓಡಾಟವು ಮತದಾರರ ಬಾಗಿಲತನಕ ತಿರುವಿಲ್ಲ ತಾನು ಮೆಂಬರನಾಗಿ ನಿವಡಾಯಿಸಿ ಬಂದರೆ, ಯಾವ್ಯಾವ ಲೋಕಹಿತದ ಕೆಲಸಗಳನ್ನು ಕೈಕೊಳ್ಳುವೆನು, ವ ಇದರ ಪೂರ್ವದಲ್ಲಿ ತಾನು ಯಾವ್ಯಾವ ಕೆಲಸಗಳನ್ನು ಮಾಡಿರುವೆನು ವಗೈರೆ, ರಸಭರಿತ ವರ್ಣನೆಗಳು ವರ್ತಮಾನ ಪತ್ರದ್ವಾರ ಪ್ರಸಿದ್ಧಪಡಿಸುತ್ತಿರುವರು. ಯಾವ ಉಮೇದವಾರನಿಗೆ ಕಾಂಗ್ರೆಸದ ಧೋರಣವು ಮಾನ್ಯವದೆಯೋ, ಅಂಥವರಿಗನೇ ನಿವಡಾಯಿಸ ಕೊಡಬೇಕಾಗಿ ರಾಷ್ಟ್ರೀಯ ಪಕ್ಷದವರ ಅಭಿಪ್ರಾಯ ಪ್ರಸಿದ್ಧವಾಗಿದೆ. ಅದಕ್ಕನುಸಾರ, ಕೆಲ ಉಮೇದವಾರರು ತಾನು ರಾಷ್ಟ್ರೀಯ ಪಕ್ಷದವನಿದ್ದು, ಕಾಂಗ್ರೆಸ ಡೆಮೊಕ್ರಟಿಕ ಪಕ್ಷದ ಧೋರಣವು ತನಗೆ ಮಾನ್ಯವದೆ ಎಂತಾ ಜಾಹೀರ ಪಡಿಸಿ, ತನಗೆ ಮತ ಕೊಡುವರೆ ಮತದಾರರಿಗೆ ವಿನಂತಿಸುತ್ತಿರುವರು. ಕೆಲವರು ತನ್ನ ಇಷ್ಟಮಿತ್ರರದ್ವಾರ ತನ್ನ ಲಾಯಕಿ, ಪ್ರಸಿದ್ಧಿಸಿ, ಮುಂದಕ್ಕೆ ಬರಲಿಚ್ಛಿಸುತ್ತಿದ್ದರೆ, ಇನ್ನು ಕೆಲವರು, ತನ್ನ ಲಾಯಕಿ ತಾನೇ, ಆತ್ಮಸ್ತುತಿಪರ ವರ್ಣನೆಯಿಂದ ಪ್ರಸಿದ್ಧಪಡಿಸಿ, ಮುಂದಕ್ಕೆ ಬಂದಿರುವರು ಈ ಪ್ರಕಾರ ಉಮೇದವಾರರೊಳಗಿನ ಮೇಲಾಟದ ಗಡಬಡಿಯು ಚಾಲುವಾಗಿರುವದು. ಕೌನ್ಸಿಲದ ನಿವಡಣೂಕಿ ಸಮಯವು ಹ್ಯಾಗಾಗೆ ಸಮೀಪಿಸಿ ಬರುವದೋ, ಹಾಗೆ ಹಾಗೆ ಉಮೇದವಾರರ ಹೆಸರುಗಳು ಭರದಿಂದ ಪ್ರಸಿದ್ಧವಾಗುತ್ತಾ ಇರುವವು

ಆದರೆ, ಈ ಬಗ್ಗೆ ಯಾವ ಉಮೇದವಾರನಿಗೆ ಮತದಾರರು ಆರಿಸಿ ಕೊಡಬೇಕೆಂಬುವದು ಮಹತ್ವದ ಜವಾಬದಾರ ಸಂಗತಿಯಾಗಿರುತ್ತದೆ. ನಮ್ಮ ಜಿಲ್ಲೆಯು ಪಾಲಿಗೆ ಬಂದ ಕೌನ್ಸಿಲದೊಳಗಿನ ಒಂದು ಖುರ್ಚಿಯು ನಾಲ್ಕು

(೬ ನೇ ಪಾನಿನಮೇಲೆ ಮುಂದರಿಸಿದೆ)

ಕಾನಡಾವೃತ್ತ.

ಗುರುವಾರ, ತಾರೀಖು ೧೯ ಮಾಹೆ ಅಗೋಸ್ಟ ೧೯೨೦

ಸ್ವರಾಜ್ಯದ ಶ್ರೀಗಣೇಶಾಯ ನಮಃ.

ಸ್ವರಾಜ್ಯದ ಕಾಯಿದೆಯ ಅಮಲು ಪ್ರಾರಂಭಿಸಿತು. ಮೊನ್ನೆ ೧೦ ನೇ ತಾರೀಖಿನ ದಿವಸ ಈ ಕಾಯಿದೆಯ ಅನುರೋಧದಿಂದ ಹೊಸ ಸರಕಾರದ ಘಟನೆಯೊಳಗೆ ಲೋಕಮತವನ್ನು ಪ್ರತಿಬಿಂಬಿಸುವ ಜನರ ಪ್ರತಿನಿಧಿಗಳನ್ನು, ಕಾಯಿದೆಯ ಭಾಷೆಯಂತೆ ನಾಮದಾರ ಮೆಂಬರರನ್ನು ಆರಿಸಲಿಕ್ಕೆ ಪಾತ್ರರಾದ ಜನರೊಳಗಿನ ಮತದಾರರ ನಾಮಾವಲಿಯ ಪತ್ರಿಕೆಗಳನ್ನು ಸರಕಾರವು ಪ್ರಕಟಿಸಿರುವದು. ಇದೇ ಹಿಂದೀ ಸ್ವರಾಜ್ಯದ ಗಣೇಶ ಪೂಜೆಯೆಂದು ನಾವು ತಿಳಿಯುವೆವು. ಈ ಸ್ವರಾಜ್ಯದ ಧ್ಯೇಯವು ಇಷ್ಟು ಮಹತ್ವದ ವಿಷಯವಾಗಿದೆ. ಅದರ ಪೂರ್ಣತೆಯು ನಮ್ಮ ಜವಿತವ್ಯತೆಗೆ ಇಷ್ಟು ಫಲಪ್ರದವದೆ. ಅದಕ್ಕಾಗಿ ಸದ್ಯದ ಕಾಯಿದೆಯ ಪ್ರಯೋಗವು ನಮಗೆ ಇಷ್ಟು ಪರಿಣಾಮಕರವದೆ. ಅದರ ವಿಷಯವಾಗಿ ನಾವು ಸದೈವ ಎಚ್ಚರದಾಗಿರಬೇಕಾಗಿದೆ. ನಮ್ಮಲ್ಲಿ ರಾಜಕೀಯ ಕೊರತೆಗಳು ಒಪ್ಪಿಷ್ಟಿಲ್ಲ. ಸಾಮಾಜಿಕ ಕುಂದುಗಳು ಕಡಿಮೆಯಿಲ್ಲ. ಔದ್ಯೋಗಿಕ ನ್ಯೂನತೆಗಳು ಹಲವಾರು ವಿರುವವು. ಶಿಕ್ಷಣ ವಿಷಯಕ ನಿಕೃಷ್ಟತೆಯು ಅಪರಿಮಿತವದೆ. ಇವೆಲ್ಲ ಕುಂದುಗಳನ್ನು, ಕೊರತೆಗಳನ್ನು, ನಿಕೃಷ್ಟತೆಯನ್ನು ದೂರ ಪಡಿಸಲಿಕ್ಕೆ ತುಣುಕು ತುಣುಕು ಹಕ್ಕುಗಳನ್ನು ಬೇಡಿ ನಮ್ಮ ಏಳಿಗೆಯಾಗದು. ನಮ್ಮ ದೇಶದ ಉದ್ಧಾರವಾಗದು,

೩೩ ಕೋಟಿ ಪ್ರಜೆಗಳ

ಸರ್ವಾಂಗಿಣ ಉನ್ನತಿಯು ಸಾಧ್ಯವಾಗದು, ಎಂದು ನಮ್ಮ ಭೂತಕಾಲದ ಪ್ರಯತ್ನಗಳೇ ಸಿದ್ಧಪಡಿಸಿರುವವು. ವೇದಾಂತದೊಳಗೆ "ಯ ಸ್ಮಿನ್ ವಿಜ್ಞಾತೇನ ಸರ್ವಂ ವಿಜ್ಞಾತಂ ಭವತಿ" ಎಂದು ಪರಮಾತ್ಮನ ವಿಷಯವಾಗಿ ಋಷಿಗಳು ಹೇಳಿದಂತೆ, ಒಂದು ಸ್ವರಾಜ್ಯವು ಪ್ರಾಪ್ತವಾದರೆ, ಎಲ್ಲವೂ ಪ್ರಾಪ್ತವಾಗುವದೆಂದು ಹೇಳುವಷ್ಟು ಈ ಸ್ವರಾಜ್ಯದ ಪರಮಾತ್ಮನ ಶಕ್ತಿಯು ಇರುವದು. ನಮ್ಮ ಕೊರತೆಗಳು, ಕುಂದುಗಳು ಈ ಸಾಧನದಿಂದಲೇ ಪರಿಹರಿಸಲ್ಪಡುವವು. ಇಂಥ ನಮ್ಮ ಭಾಗ್ಯೋದಯಕ್ಕೆ ಕಾರಣವಾಗುವ ಸ್ವರಾಜ್ಯದ ಭವಿಷ್ಯಕಾಲದ ಇತಿಹಾಸಕ್ಕೆ

ಇನ್ನು ಪ್ರಸ್ತಾವನೆ

ಯಾಗಿದೆಂದು ನಿಶ್ಚಿತವಾಗಿ ನಾವು ತಿಳಿಯಬಹುದು. ಬಿಟ್ಟಿಗೆ ಸ್ವರಾಜ್ಯದ "ಅದ"ವು ಅದರ "ಸೂತ ಉವಾಚವು" ಇಂದಿಗಾಯಿತು. "ಇತಿ" ಯಾಗುವ ತನಕ ಅದರ ಪೂರ್ಣತೆಯಾಗುವ ತನಕ, ತಾಳ್ಮೆಯಿಂದ ಧಿಟ್ಟತನದಿಂದ, ಜಾಣ್ಮೆಯಿಂದ ಜಾಗರೂಕತೆಯಿಂದ, ನಾವು ನಮ್ಮ ಹೆಜ್ಜೆಯನ್ನು ಮುಂದಿಡುತ್ತ ಹೋಗಬೇಕಾಗಿದೆ. ಇಂಥ ರಾಷ್ಟ್ರಕಾರ್ಯದಲ್ಲಿ ವಿಘ್ನವನ್ನುಂಟುಮಾಡುವ ವಿಧವಿಧದ ಪ್ರತಿಪಕ್ಷಿಗಳಿರುವರು. ಮಿತಶತ್ರುಗಳಿರುವರು, ವೈರಿಗಳಿರುವರು. ಅವರ ವಿರೋಧವನ್ನು ಅವರ ಬಲವತ್ತರ ಪ್ರತಿಕಾರವನ್ನು ಎಡೆಬಿಡದೆ ಖಂಡಿಸಿ, ಗುರಿಸಾರಿ ನಮ್ಮ ಧ್ಯೇಯದ ಕಡೆಗೆ, ದಿಕ್ಕು ತಪ್ಪದೆ ಕಾಲಹರಣವಾಗಗೊಡದೆ, ನಾವು ಹೋಗುವದು ಸಾಧ್ಯವೇಕಾಗಿದೆ. ನಮ್ಮ ಪರಿಶ್ರಮದ ಅನುರೂಪವಾಗಿ ನಮಗೆ ಫಲಪ್ರಾಪ್ತಿ ದೊರೆಯುವದೆಂಬ ನಂಬಿಗೆಯ ಮೇಲೂ ನಡೆಸತಕ್ಕದ್ದು.

ಈ ನವಯುಗದ ಉದಯ ಕಾಲದಲ್ಲಿ, ಹಿಂದಿನ ಶತಕ-ಅರೆ ಶತಕದ ಇತಿಹಾಸವನ್ನು ತೆರೆದು ನೋಡಿದರೆ, ಬಹಳೇ ಸಂಗತಿಗಳು ಕಣ್ಣಿಗೆ ಬೀಳುವವು. ೧೭೫೭ ನೇ ಇಸವಿಯಲ್ಲಿ ಕ್ಲೈವ್ಹ ಸಾಹೇಬರು ಪ್ಲಾಸೀ ಕಾಳಗವನ್ನು ಗೆದ್ದು ಹಿಂದುಸ್ತಾನದೊಳಗೆ ಬ್ರಿಟಿಷ ರಾಜ್ಯವನ್ನು ಸ್ಥಾಪಿಸಿದಂದಿನಿಂದ ನೂರು ವರ್ಷಗಳ ವರೆಗೆ ೧೮೫೭ ನೇ ಇಸ್ವಿಯ ಶಿಪಾಯಿಗಳ ಬಂಡಾಯದ ತನಕ ಕಂಪನಿ ಸರಕಾರವೂ, ಅದರ ನಂತರ ೬೦ ವರ್ಷಗಳ ಅವಧಿಯೊಳಗೆ ಅಂದರೆ ೧೯೧೭ ನೇ ಇಸ್ವಿಯ ತನಕ ಮಹಾರಾಣಿಯವರ ಸರಕಾರವೂ, ಮಹಾರಾಜರ ಸರಕಾರವೂ

ಪ್ರಜಾಸ್ವಾತಂತ್ರ್ಯದ

ಅಲ್ಪಸ್ವಲ್ಪ ಹಕ್ಕುಗಳನ್ನು ಹಿಂದೀ ಪ್ರಜೆಗಳಿಗ ದಯಪಾಲಿಸಿರುವವು, ಅರಸರ ಜಾಹೀರನಾಮೆಯಿಂದ ಮತ್ತು ಸನದಿನ ಕಾಯಿದೆಗಳೊಳಗೆ ಆಶ್ವಾಸನೆಗಳನ್ನು ಸಹ ಕೊಟ್ಟಿರುವವು. ನಮ್ಮ ರಾಷ್ಟ್ರದ ದುರ್ದೈವದ ವಿಚಿತ್ರಗತಿಯಿಂದ ಇಂಥ ಅನೇಕ ಆಶ್ವಾಸನೆಗಳ ಪಾಡು "ವಚನೇ ಕಿಂ ದರಿದ್ರತಾ" ಎಂಬಂತೆಯೇ ಆಗಿ ಹೋಯಿತು. ಅದಕ್ಕಾಗಿ ನಮ್ಮ ರಾಷ್ಟ್ರೀಯ ಪ್ರಗತಿಯು ಬ್ರಿಟಿಷರಂಥ ಸುಧಾರಿಸಿದ ಜನಾಂಗದವರ ಆಳಿಕೆಯಲ್ಲಿ, ಅದು ಇದ್ದರೂ

ಇರುವೆಯ ಗತಿಯಿಂದಲೇ

ಸಾಗಿದೆಂದು ಹೇಳಬೇಕಾಗಿದೆ. ಇಷ್ಟು ದಿವಸಗಳೊಳಗಿನ ರಾಜಕೀಯ ವ್ಯವಹಾರದೊಳಗೆ ನಾವು ಯಾವ ದಿಕ್ಕಿನಿಂದ ನಡೆದಿದ್ದೇವೆ, ನಮ್ಮ ಸರಕಾರದ ಅಂತಿಮ ಧ್ಯೇಯವೇನು, ಎಂಬುದು ಹಿಂದೀ ಪ್ರಜೆಗಳಿಗಷ್ಟೇ ಅಲ್ಲ, ರಾಜ್ಯಕರ್ತರೊಳಗಿನ ಮುಖಂಡರಿಗೆ ಅಸಂದಿಗ್ಧವಾಗಿ ಸ್ಪಷ್ಟವಾಗಿ ತಿಳಿದಿದ್ದಿಲ್ಲ. ಬ್ರಿಟಿಷ ಆಳಿಕೆಯ ಅಂತಿಮಸಾಧ್ಯವು ಸುಸ್ಪಷ್ಟವಾಗಿ ರಾಜ್ಯಕರ್ತರ ಜಾಹೀರನಾಮೆಯಿಂದಾಗಲೀ, ಪಾರ್ಲಿಮೆಂಟಿನ ಕಾಯಿದೆಯಿಂದಾಗಲೀ, ಮೊನ್ನಿನ ತನಕ ಜಾಹೀರಾಗಿದ್ದಿಲ್ಲೆಂಬುದೇ ಇದರ ಕಾರಣವು. ಇದೇ ಕಾರಣದಿಂದ ಮುಂಚಿನ ಸರದಾರ ಮತ್ತು ಈಗಿನ

ಲೊರ್ಡ ಸಿಂಹ ಮಹಾಶಯರು,

ರಾಷ್ಟ್ರೀಯ ಸಭೆಯ ಅಧ್ಯಕ್ಷ ನಾತೆಯಿಂದ ಮುಂಬಯಿಯಲ್ಲಿ ಮಾಡಿದ ಭಾಷಣದಲ್ಲಿ "ಬ್ರಿಟಿಶ ಆಳಿಕೆಯ ಧೋರಣದ ಧ್ಯೇಯವನ್ನು ಸ್ಪಷ್ಟವಾಗಿ ಜಾಹೀರುಪಡಿಸಿರಿ," ಎಂದು ಸರಕಾರಕ್ಕೆ ಆಗ್ರಹಪೂರ್ವಕವಾಗಿ ಬಿನ್ನೈಸಬೇಕಾಯಿತು. ಕಟ್ಟಕಡೆಗೆ ೧೯೧೭ ನೇ ಇಸ್ವಿಯ ಆಗಸ್ಟ ತಿಂಗಳಲ್ಲಿ ಪಾರ್ಲಿಮೆಂಟಿನ ಐತಿಹಾಸಿಕ ಬೆಲೆಯ ಪ್ರಕಟನೆಯು ಹೊರಬಿತ್ತು. ಪ್ರಕಟನೆಯಿಂದ ಬ್ರಿಟಿಶ ಪಾರ್ಲಿಮೆಂಟು ಹಿಂದೀ ಪ್ರಜೆಗಳಿಗೆ ಬ್ರಿಟಿಶ ಆಳಿಕೆಯ ಧ್ಯೇಯವನ್ನು ಸ್ಪಷ್ಟ ಶಬ್ದಗಳಿಂದ ತಿಳಿಸಿ, ಕ್ರಮಶಃ ಸ್ವರಾಜ್ಯವನ್ನು ನಮಗೆ ಅರ್ಪಿಸಿ, ಪೂರ್ಣ ಜವಾಬದಾರ ರಾಜ್ಯಪದ್ಧತಿಯನ್ನು ಇಲ್ಲಿಗೆ ಪ್ರಚಾರಿಸುವದೆಂದೂ, ಈ ಸ್ವರಾಜ್ಯದ ಮೊದಲನೇ ಹಪ್ತೆಯೆಂದು ಭಾರವಾದ ಕೆಲವು ಹಕ್ಕುಗಳನ್ನು, ಹಿಂದೀ ಪ್ರಜೆಗಳಿಗೆ ಅನುಗ್ರಹಿಸುವದೆಂದೂ, ಸನದಶೀರ ಪದ್ಧತಿಯಿಂದ ಜಾಹೀರಪಡಿಸಿತು. ೧೯೧೭ ನೇ ಇಸ್ವಿಯ

ಅಗಸ್ಟ ಪ್ರಕಟನೆಯು

ಪ್ರಜಾಸ್ವಾತಂತ್ರ್ಯದ ದೃಷ್ಟಿಯಿಂದ ಹಿಂದೀ ಪ್ರಜೆಗಳ ಮಹತ್ವದ ಸನದಾಗಿರುವದು. ಈ ಸನದಿನೊಳಗೆ ಮುತ್ಸದ್ದಿತನದ ಗೆಣ್ಣುಗಳಿಲ್ಲದಿರುವದು ಅಶಕ್ಯವು. ಲೋಕಜಾಗ್ರತಿಯ ಶಕ್ತಿಯಿಂದ ಇಂಥ ಗೆಣ್ಣುಗಳು ತನ್ನಿಂದ ತಾನೇ ಸಡಿಲಾಗುತ್ತವೆ. ಇವುಗಳ ಮಾತಿರಲಿ. ಈ ಪ್ರಕಟನೆಯು ನಮ್ಮ ಭಾವೀ ಸ್ವರಾಜ್ಯದ ಇತಿಹಾಸದ ಮುಖಪೃಷ್ಟವಾಗಿ ಬಾಳುವದು. ಇದರೊಳಗಿನ ಸ್ಪಷ್ಟವಾದ ಅಭಿವಚನಗಳಿಂದಲೇ ಸ್ವರಾಜ್ಯಕ್ಕೆ ಮೂರ್ತಸ್ವರೂಪವು ಪ್ರಾಪ್ತವಾಗಲಿಕ್ಕೆ ದಿಕ್ಕು ತೋರಿಸಿಕೊಟ್ಟಂತಾಗಿದೆ. ಇದಕ್ಕಾಗಿ ರಾಜ್ಯಕರ್ತರ ಮುತ್ಸದ್ದಿತನವನ್ನು ಹೊಗಳಬೇಕಲ್ಲವೇ? ಬಿಟ್ಟಿಗೆ ನಮ್ಮ ಭವಿಷ್ಯಕಾಲವು ಭಾಗ್ಯೋನ್ಮುಖವದೆ. ನಮ್ಮ ರಾಷ್ಟ್ರೀಯ ಆಕಾಂಕ್ಷೆಗಳು ಫಲಿಸಲು, ಕಾಲಗತಿಯು ಅನುಕೂಲವಾಗಿದೆ. ಇಷ್ಟೇ ಇಂದಿಗೆ ಹೇಳುವೆವು. ಈ ವಿಷಯದ ಚರ್ಚೆಯನ್ನು ಮುಂದೆ ನಡಿಸಲಿಕ್ಕೆ ಇಂದಿಗೆ ಇಷ್ಟೇ ಪ್ರಸ್ತಾವನೆಯು ಸಾಕು.

ಸ್ಫುಟ ಸೂಚನೆಗಳು.

೧. ಪಾರ್ಲಮೆಂಟಿನೊಳಗೆ ಮೊನ್ನೆ ಒಂದು ಅಪೂರ್ವ ಸಮಾರಂಭವು ಕೊನೆಗಂಡಿತು. ಜೋಸೆಫ ಚೆಂಬರಲೇನರೆಂಬ ಒಬ್ಬ ವಿಖ್ಯಾತ ಮಂತ್ರಿಗಳು ೬-೭ ವರ್ಷಗಳ ಹಿಂದೆ ಕೈಲಾಸವಾಸಿಗಳಾಗಿದ್ದರು ಬ್ರಿಟಿಷ ಮುತ್ಸದ್ಧಿಗಳೊಳಗೆ ಸಮಕಾಲೀನ ಪುರೀಣ

ಧಾರವಾಡದ ಮ್ಯುನಿಸಿಪಾಲಿಟಿಗೆ ಬರೆದ ಪತ್ರದಲ್ಲಿವೆ ಲೋ. ಟಿಳಕರ ನಿಧನದಿಂದುಂಟಾದ ಶೋಕವನ್ನು ವ್ಯಕ್ತಪಡಿಸಲಿಕ್ಕೆ, ಮಹಾನುಭಾವರ ಬಗ್ಗೆ ತಮಗಿರುವ ಅಭಿಮಾನವನ್ನೂ, ಅವರಿಗೆ ತೋರಿಸಬೇಕಾದ ಸಾರ್ವಜನಿಕ ಸನ್ಮಾನವನ್ನೂ ಪ್ರದರ್ಶಿಸಲಿಕ್ಕೆ, ಧಾರವಾಡ ಶಹರದೊಳಗಿನ ಶಾಲೆಗಳನ್ನು ಮ್ಯುನಿಸಿಪಾಲಿಟಿಯು ಒಂದು ದಿವಸ ತೆರೆಯಲಿಲ್ಲೆಂದು ತಿಳಿಸಕೂಡದೆ, ಈ ಕಲೆಕ್ಟರ ಸಾಹೇಬರು ಲೋ

ಮ ಸಂಸ್ಥೆಗಳಿಗೆ, ಸಣ್ಣ ಸಣ್ಣ ರಕಮುಗಳ ದಾವೆಗಳನ್ನೂ, ಜಗ್ಗೆಗಳನ್ನೂ, ತನಿಖಿ ನಡಿಸಿ, ತೀರ್ಪು ಕೊಡುವ ನ್ಯಾಯಾಧಿಕಾರಗಳನ್ನು ಕೊಡಬೇಕೆಂದು ಅತ್ಯಾಗ್ರಹದಿಂದ ಲೋಕಮತವು ಬೇಡಿದರೂ, ಅಂಥ ಅಧಿಕಾರಗಳನ್ನು ಕೊಡತಕ್ಕದ್ದಲ್ಲವೆಂದು ಸರಕಾರವು ನಿರ್ಣಯಿಸಿತು. ಹಳ್ಳಿಯ ಪಟ್ಟಣಗಳ ಕಾರಭಾರವನ್ನೂ, ದೇವಸ್ಥಾನಗಳ ದೇವಸ್ವದ ಆಡಳಿತವನ್ನೂ ನಡಿಸುವ ಅಧಿಕಾರವು ಪಂಚಾಯತುಗಳಿಗೆ ದೊರಕಿಲ್ಲ ಇದೇ

ದವು ಠರಾವುಗಳಮೇಲೆ ಮಿ ಎಸ್ ಎಸ್ ಹುಣಸವಾಡಕರ, ಮಿ ಕೇ ವಿ ದೇಶಪಾಂಡೆ, ಮಿ ಎ ಜೀ ಗಿರಿ, ಮಿ. ವಾಲಿ ಹಾಗೂ ಮಿ ಎನ್, ಬೀ ಪೇಠಕರ ಇವರ ಭಾಷಣಗಳಾದಕೂಡಲೆ ಸದರಿ ಠರಾವುಗಳು ಸಂತಿದ್ದಾರ ಕಳಿಸಲ್ಪಟ್ಟವು ಸದರಿ ಸೋಮವಾರ ದಿವಸ ಶಹರದೊಳಗಿನ ಎಲ್ಲ ಅಂಗಡಿಗಳು (ಚಹಾ ಹಾಟೇಲು, ಬೀಡಿ ಅಂಗಡಿ ಸಹಿತ) ಪೂರಾ ಬಂದ ಇಡಲ್ಪಟ್ಟಿದ್ದವು

ಶಹರ ಮಾರ್ಕೇಟದಲ್ಲಿ ರಾ. ಬ್ರ. ಗೋಪಾಳಗಿರಿಯವರ ಅಧ್ಯಕ್ಷತೆ ಕೆಳಗ ಸಭೆಗೂಡಿ, ಲೋಕಮಾನ್ಯರ ಆತ್ಮಕ್ಕೆ ಶಾಂತಿ ದೊರೆಯಲಿ ಎಂಬ ಠರಾವು ಜಯಜಯಕಾರದಲ್ಲಿ ಎಲ್ಲರೂ ಎದ್ದು ನಿಂತು ಪಾಸ ಮಾಡಿದ ಬಳಿಕ, ರಾ ಸಾ ಪುಂಡಲೀಕರಾವ ಪಂಡಿತರವರ 'ರಿಫಾರ್ಮ ಆಕ್ಟ' ಹಾಗೂ ಅದರಿಂದ ನಮ್ಮಮೇಲೆ ಬಂದು ಬಿದ್ದಿರುವ ಜವಾಬದಾರಿ, ಅದನ್ನು ನೀಗುವ ಬಗೆ' ಈ ವಿಷಯದಮೇಲೆ ಕನ್ನಡದಲ್ಲಿ ಭಾಷಣವಾಯಿತು. ಹಾಗೂ ಮಿ ಬೀಮರಾವ ರಿತ್ತಿ ವಕೀಲ ಇವರ ಪರಿಚಯ ಸಭೆಗೆ ಮಾಡಿಕೊಟ್ಟು, ಅವರಿಗೆ ಮತ ಕೊಡುವದರಿಂದ ಕಾರ್ಯ ಒಳ್ಳೇದಾಗಬಹುದಾಗಿ ಸೂಚಿಸಿದರು. ತದನಂತರ ಮಿ ಎಸ್, ಜೀ ಭದ್ರಿ ವಕೀಲ, ಮಿ ಡಿ ಆರ್, ಕೇಳಕರ ಮಿ ಎ ಎ ಮಣಿಯೂರರವರು ತಾಲೂಕಾ ಸಭೆಯ ಪತಿಯಿಂದಲೂ, ಗೋರಕ್ಷಣ ಪತಿಯಿಂದಲೂ, ಬೇರೆ ಬೇರೆ ಆಕ್ಷೇಪಗಳ ಬಗ್ಗೆ ಪ್ರಶ್ನೆಗಳು ಕೇಳಲ್ಪಟ್ಟವು ಅದಕ್ಕೆ ಮಿ ರಿತ್ತಿ ವಕೀಲರು ತಮ್ಮ ಮತವನ್ನೂ, ತಮ್ಮ ಪಕ್ಷವನ್ನೂ, ಈ ವರೆಗಿನ ತಮ್ಮ ಕಾಮಗಿರಿಯನ್ನೂ ಹೇಳಿ, ತಮ್ಮನ್ನು ಆರಿಸಿಕೊಟ್ಟರೆ, ನಿಮ್ಮ ಕಲ್ಯಾಣದ ಬಗ್ಗೆ ಮನಃಪೂರ್ವಕವಾಗಿ ಖಟಪಟ ಮಾಡುವೆನಾಗಿ ಆಶ್ವಾಸನ ಕೊಟ್ಟರು ಈ ನಂತರ ನಿವಡಣೂಕಿ ಮುಂದಕ ಇನ್ನೂ ದೂರಿರುವದಾಗಿಯೂ, ಬೇರೆ ಬೇರೆ ಎಲ್ಲಾ ಉಮೇದವಾರರ ಮತಗಳನ್ನು ತಿಳಕೊಂಡು, ಹೆಚ್ಚು ಯೋಗ್ಯರಾದವರಿಗೇನೇ ಮತ ಕೊಡಬೇಕಾಗಿಯೂ, ತಾಲೂಕ ಸಭೆ ಪತಿಯಿಂದ ಸೂಚನೆ ಬಂದದ್ದಕ್ಕೆ, ರಾ ಬ ಗಿರಿಯವರು ಪುಷ್ಟಿ ಕೊಟ್ಟ ಬಳಿಕ, ಸಭೆ ವಿಸರ್ಜನವಾಯಿತು.

ಅದೇ ಸ್ಥಳದಲ್ಲಿ ಕೋ ಆ ಸೊಸಾಯಟಿಯ ಸಭೆಗೂಡಿ, ಮಿ. ಜಾಯಪ್ಪ ಅಪ್ಪಾಜಿ ದೇಸಾಯಿ ಇವರು ಚೇರಮನ್ನರಾಗಿ ಆರಿಸಲ್ಪಟ್ಟರು ಆ ನಂತರ ಕ್ಯಾಪಿಟಲ ಬ್ಯಾಂಕದ ಬಗ್ಗೆ ಶೇರುಗಳನ್ನು ತಕ್ಕೊಳ್ಳುವ ಕೆಲಸ ನಡೆದು, ಸಭೆ ವಿಸರ್ಜನವಾಯಿತು

ತಾಲೂಕಾ ಸಭೆ ಪತಿಯಿಂದ ಮಾರ್ಕೇಟದಲ್ಲಿ ಮಿ। ಎಸ್ ಜೀ. ಬದ್ರಿ ವಕೀಲ ಇವರ ಅಧ್ಯಕ್ಷತೆ ಕೆಳಗ ಸಭೆಗೂಡಿ, ಮಿ. ಕೇ. ಎಚ್, ದೇಶಪಾಂಡೆರವರ ನಿಧನದ ಬಗ್ಗ ದುಃಖಪ್ರದರ್ಶನ ಮತ್ತು ಕಾರ್ಯಕಾರಿ ಮಂಡಳದ ನಿವಡಣೂಕಿ ಆದವು. ಮಿ। ಭೀಮರಾವ ರಿತ್ತಿ ವಕೀಲರು, ನಾ. ಬೆಳವಿ ಇವರು ಮುಂಬಯಿ ಕಾಯಿದೆ ಕೌನ್ಸಿಲದ ಬೈಟಕಿಯಲ್ಲಿ ಲೋಕಮಾನ್ಯರ ನಿಧನದ ಬಗ್ಗೆ ಶೋಕ ದುಃಖಪ್ರದರ್ಶಕ ಠರಾವು ಕ್ಷುಲ್ಲಕ ಕಾರಣದಮೇಲಿಂದ ಇಡಲಿಕ್ಕೆ ಪರವಾನಗಿ ಕೊಡದೇ ಇದ್ದ ಬಗ್ಗೆ, ನಿಷೇಧಪರ ಭಾಷಣಮಾಡಿದರು. ಈ ವಿಷಯದ ಬಗ್ಗೆ ಬಹಳೇ

ಇವರ ...

ಕರೆಯುತ್ತಿದ್ದರು ಇವರ ಸಂರಕ್ಷಕ ಜಕಾತಿಯ ತತ್ವಗಳು, ಇವರ ಪಕ್ಷದವರಿಗೇ, ಪೂರ್ಣವಾಗ ಮಾನ್ಯವಿದ್ದಿಲ್ಲ ಮಹಾಯುದ್ಧದ ನಂತರ, ಇವರ ತತ್ವಗಳ ಸತ್ಯತೆಯ ವಿಷಯವಾಗಿ ಎಲ್ಲರೂ ಮನಗಂಡರು ಆದರೆ ಸತ್ಯ ಮತಗಳನ್ನು ಪ್ರತಿಪಾದಿಸುವ, ಲೋಕನಾಯಕರಿಗಾಗುವ ನಿಂದೆಯೂ, ವಿಡಂಬನೆಯೂ, ಇವರಿಗೆ ಬಹಳೇ ಸಹಿಸಬೇಕಾಯಿತು. ಸ್ವಾತಂತ್ರ್ಯದ ತವರಮನೆಯಲ್ಲಿ ಜನಿಸಿ, ಅಲ್ಲಿಯೇ ದೇಶಸೇವೆಯನ್ನು ಮಾಡುವ ಸುದೈವವು ದೊರೆತದ್ದರಿಂದ, ಶೆರೆಮನೆಯ ಸುಖವು ಅವರಿಗೆ ದೊರೆಯಲಿಲ್ಲ. ದೇಶಪ್ರೀತಿಯ ಗೋಸುಗ, ಶಾರೀರಿಕ ಕಷ್ಟಗಳ ದಕ್ಷಿಣೆಯು ಅವರಿಗೆ ಲಭಿಸಲಿಲ್ಲ. ಲೋಕಮಾನ್ಯ ಟಿಳಕರ ಕಾರ್ಯದಲ್ಲಿಯೂ, ಅವರ ಕಾರ್ಯದಲ್ಲಿಯೂ, ಕೆಲಮಟ್ಟಿಗೆ ಸಾಮ್ಯತೆಯಿತ್ತು. ಇಬ್ಬರ ಸ್ವಭಾವವೂ, ಧೃಡನಿಶ್ಚಯಿಯದಾಗಿತ್ತು. ಇಬ್ಬರಲ್ಲೂ ಉತ್ಕಟ ದೇಶಪ್ರೀತಿಯಿತ್ತು. ಇಬ್ಬರಿಗೂ, ಜಹಾಲರು, ಬಿರುಸು ಮುತ್ಸದ್ದಿಗಳು, ವಿಧ್ವಂಸಕರು, ಎಂದು ಪ್ರತಿಪಕ್ಷಗಳು ದೂಷಿಸುತ್ತಿದ್ದರು. ಆದರೆ, ಚೆಂಬರಲೇನ ಸಾಹೇಬರಿಗೆ ಸಾಮ್ರಾಜ್ಯದ ಸೇವಕರೆಂದು, ಪಾರ್ಲಮೆಂಟಿನ ಪುತ್ಥಳಿಯ ಅಸಾಮಾನ್ಯ ಸನ್ಮಾನವು ದೊರೆಯುತ್ತದೆ ಲೋ. ಟಿಳಕರಿಗೆ ಬ್ರಿಟಿಷ ಸಾಮ್ರಾಜ್ಯದೊಳಗಿನ ಒಬ್ಬ ಸುಶಿಕ್ಷಿತ ನಾಗರಿಕರಾದ ಧಾರವಾಡದ ಕಲೆಕ್ಟರ ಮಿ. ಇಮೆನ್ಯುಯಲ್ ಸಾಹೇಬರು ಎಂಥ ಅಪಶಬ್ದಗಳಿಂದ ನಿಂದಿಸುತ್ತಾರೆ, ನೋಡಿರಿ! ದೇಶಭೇದದಿಂದ, ಅಧಿಕಾರ ಭೇದದಿಂದ, ದೃಷ್ಟಿ ಭೇದವೂ, ಬುದ್ಧಿ ಭೇದವೂ ಎಷ್ಟಾಗುತ್ತದೆಂದು ಹೇಳಲಿಕ್ಕೆ, ಇದೊಂದು ದೃಷ್ಟಾಂತವು.

೨.] [ಮಿ. ಇಮೆನ್ಯುಯಲ್ ಸಾಹೇಬರ ಮುಕ್ತಾಫಲಗಳು, ಅವರು, ಕಲೆಕ್ಟರರೆಂಬ! ನಾತೆಯಿಂದ,

ಮಾತ್ರ ಸರ್ವಸಾಮಾನ್ಯ ... ಗವೆಂದು, ಇಮೆನ್ಯುಯಲ್ ಸಾಹೇಬರು ತಮ್ಮ ವರ್ತನದಿಂದಲೇ ಹೇಳಿದಂತಾಗಿದೆ ಇನ್ನು ಲೋಕಮತ ದೃಷ್ಟಿಯಿಂದ, ಸಾಹೇಬರ ಈ ವರ್ತನವು, ಅವರ ದೇಶಬಾಂಧವರ ಚೆಂಬರಲೇನ ಸ್ಮಾರಕ ವಿಷಯದ ಘನತೆಗೆ, ಉದಾರತೆಗೆ, ಎಷ್ಟು ವಿಸಂಗತವದೆ, ಎಷ್ಟು ನಿಂದ್ಯವದೆಂದು, ಅವರೇ ವಿಚಾರಿಸಲಿ. ಅವರಲ್ಲ್ಯಾದರೂ ಪಶ್ಚಾತ್ತಾಪ ಬುದ್ಧಿಯದೆಯೋ, ಇಲ್ಲವೋ ಎಂಬುದು ಕಡೆಗೆ ನಿಜವಾಗಿ ಕಂಡು ಬರುವದು. ಇಲ್ಲದಿದ್ದರೆ, 'ತನ್ನಂತೆ ಪರರು' ಎಂಬ ಸ್ವಾಭಾವಿಕ ಭಾವನೆಯಿಂದ ಈ ದೊರೆಗಳು, ನೈತಿಕ ಗುನ್ಹೆಯನ್ನು ಮಾಡಲುದ್ಯುಕ್ತರಾದರೆಂದು ಅವರಿಗಾದರೂ ತಿಳಿಯಲಿ

---

೩ ಮುಂಬಯಿ ಕಾಯಿದೆ ಕೌನ್ಸಿಲದ ಅಗಸ್ಟ ಅಧಿವೇಶನದೊಳಗೆ ಪಂಚಾಯತು ಕಾಯಿದೆಯು ಪಾಸಾಯಿತು ಕಮೀಟಿಯು ತಯಾರಿಸಿದ ಮಸೂದೆಯೇ ತುದಿಯಲ್ಲಿ ಕೌನ್ಸಿಲ ಸಭೆಗೆ ಮಾನ್ಯವಾದಂತಾಯಿತು ಈ ಮಸೂದೆಯ ಸವಿಸ್ತರ ವಿವೇಚನೆಯನ್ನು ನಾವು ಮೊದಲೇ ಮಾಡಿದ್ದೇವೆ ಈ ಕಾಯಿದೆಯು ಅಮಲಿನಲ್ಲಿ ಬಂತೆಂದರೆ, ಅಂಕೋಲಾ, ಯಲ್ಲಾಪೂರ, ಸಿದ್ದಾಪೂರದಂಥ ಶಹರುಗಳಿಗೂ, ದೊಡ್ಡ ದೊಡ್ಡ ಹಳ್ಳಿಗಳಿಗೂ, ಸಣ್ಣ ಮ್ಯೂನಿಸಿಪಾಲಿಟಿಗಳಂಥ ಲೋಕನಿಯುಕ್ತ ಸಂಸ್ಥೆಗಳು ದೊರಕುವವು ಪಂಚಾಯತುಗಳೆಂದರೆ, ನೆಲಗಟ್ಟಿನ ಸ್ವರಾಜ್ಯವು ಇದರೊಳಗೆ ಪ್ರಾಯಸ್ಥರಾದ ಎಲ್ಲ ಗಂಡಸರು, ಪಂಚರನ್ನು ಆರಿಸುವ ಮತದಾರರಾಗುವರು. ಪಂಚಾಯತುಗಳಿಗೆ ಹಳ್ಳಿಗಳ ಆರೋಗ್ಯರಕ್ಷಣೆ ಮತ್ತು ಇದೇ ವಿಧದ ಸುಖಸೋಯಿಗಳ ಕೊರತೆಗಳನ್ನು ಮನೆಪಟ್ಟಿಗೆಯಂಥ ಕಂದಾಯದಿಂದ ಪೂರೈಸಿಕೊಳ್ಳುವ ಅಧಿಕಾರಗಳಿವೆ. ಈ ಗ್ರಾ

... ತಿಯ ಅವಶ್ಯಕತೆಯಿದೆಂದು ಅದು ಮನಗಂಡಿರುವದೆಂದು ತಿಳಿದು, ನೌಕರರು ಆಭಾರಿಯಾಗಿರುವರು. ಆದರೆ ವೇನಶನದಾರರ ಪಾಲಿಗೆ ಈ ಸಹಾನುಭೂತಿಯು ಏನೂ ಬಂದಿಲ್ಲೆಂದು ನೋಡಿ, ಮನಸ್ಸಿಗೆ ಬಹಳೇ ವಿಷಾದವೆನಿಸುತ್ತದೆ. ೩೦-೩೫ ವರ್ಷ ಸರಕಾರಿ ನೌಕರಿಯಲ್ಲಿ ಹಣಗಿ, ಕಟ್ಟಕಡೆಗೆ ತಿಂಗಳಿಗೆ ೪-೮ ರೂಪಾಯಿ ವೇನಶನು ಪಡೆದು, ಮುದಿತನದ ಕಾಲವನ್ನು ಕಷ್ಟದಿಂದ ಕಳೆಯುತ್ತಿರುವ ಮುದ್ಯೋವಿಗಳ ಹಾಹಾಂಕರವೂ, ತೀರ ಕರುಣಾಸ್ಪದವಾಗಿರುವದು ಇವರ ಕಷ್ಟಗಳನ್ನು ಪರಿಹರಿಸಲಿಕ್ಕೆ ಏನಾದರೂ ಉಪಾಯ ಯೋಜನೆಯನ್ನು ಮಾಡುವ ಎಂದು, ಖಾನದೇಶದ ನಾ। ಗರುಡರವರು, ಈ ಕಾರ್ಯಕ್ಕಾಗಿ ಒಂದು ಕಮಿಟಿಯನ್ನು ನೇಮಿಸುವ ಸೂಚನೆಯನ್ನು ಕೌನ್ಸಿಲದೊಳಗೆ ತರಲು, ಸರಕಾರದ ತರ್ಫೆನಿಂದ ಕಂದಾಯದ ಮಂತ್ರಿಗಳು ಅದನ್ನು ವಿರೋಧಿಸಿದರು. ಈಗಿದ್ದ ನೌಕರರ ಸಂಬಳದ ಏರಿಕೆಗೆ, ೪೭ ಲಕ್ಷ ರೂಪಾಯಿ ಮೊದಲೇ ಕಡಿಮೆಯಾಗಿ ಬಾಯಿಗೂಡಿಸಲಿಕ್ಕಾಗದಿದ್ದಾಗ, ವೇನಶನದರಿಗೆ ಮತ್ತೂ ಬಡಿಸುವದೆಲ್ಲಿಂದ? ಎಂಬಂತೆ ಸರಕಾರದ ಸವಾಲಿದೆ. ಒಟ್ಟಿಗೆ, ವೇನಶನದಾರರಿಗೆ ಇನ್ನು ವೇನಶನವನ್ನೇ ಏರಿಸಿ, ಏನೂ ಸಹಾಯ ಮಾಡಲಾಗದೆಂದು ಸರಕಾರವು ಹೇಳಿದಂತಾಯಿತು. ಮಾಜೀ ನೌಕರರಿಗೆ ಈ ಬಗೆಯಾಗಿ ನಡಿಸುವದು ಕೃತಜ್ಞತೆಯಾಗದು. ಇನ್ನು ಈ ಮುದುಕರು 'ರಾಮ-ಕೃಷ್ಣ-ಗೋವಿಂದ' ಎಂದು, ದೇವರ ನಾಮ ಸ್ಮರಣೆಯನ್ನು ಮಾಡುತ್ತ ಅರೆಹೊಟ್ಟೆ ಬಾರಲಿಕ್ಕಾಗುವಷ್ಟು ಇಹಲೋಕದ ಯಾತ್ರೆಯನ್ನು ಸಾಗಿಸುತ್ತಿರಬೇಕಾಗಿದೆ ದೊಡ್ಡ ದೊಡ್ಡ ವೇನಶನದರು ಸ್ಟೇಟಸೆಕ್ರೆಟರಿಗಳಿಗೆ, ತಮ್ಮ ವೇನಶನ ಏರಿಸಬೇಕೆಂದು ಅರ್ಜಿಮಾಡಿ ನಡಿಸಿದ ಪ್ರಯತ್ನದಿಂದ, ಇವರ ಸುದೈವವು ಫಲಿಸಿದರೆ ಮಾತ್ರ, ಇವರಿಗೆ ತರಣೋಪಾ

ಕಾನಡಾವೃತ್ತ.

ಗುರುವಾರ, ತಾರೀಖು ೧೯ ಮಾಹೆ ಆಗೋಸ್ಟ ೧೯೨೦

ಇನ್ನು ಪ್ರಸ್ತಾವನೆ

ಯಾಗಿದೆಂದು ನಿಶ್ಚಿತವಾಗಿ ನಾವು ತಿಳಿಯಬ ಹುದು ಒಟ್ಟಿಗೆ ಸ್ವರಾಜ್ಯದ "ಅದ"ವು ಅದರ "ಸೂತ ಉವಾಚವು ಇಂದಿಗಾಯಿತು "ಇತಿ ಯಾಗುವ ತನಕ, ಅದರ ಪೂರ್ಣತೆಯಾಗುವ ತನಕ, ತಾಳ್ಮೆಯಿಂದ, ಧಿಟ್ಟತನದಿಂದ ಜಾಣ್ಮೆ ಯಿಂದ, ಜಾಗರೂಕತೆಯಿಂದ, ನಾವು ಸಮ

ಕರ್ತರೊಳಗಿನ ಮುಖಂಡರಿಗೆ ಅಸಂದಿಗ್ಧ ವಾಗಿ ಸ್ಪಷ್ಟವಾಗಿ ತಿಳಿದಿದ್ದಿಲ್ಲ ಬ್ರಿಟಿಷ ಆಳಿಕೆಯ ಅಂತಿಮಸಾಧ್ಯವು ಸುಸ್ಪಷ್ಟವಾಗಿ ರಾಜ್ಯಕರ್ತರ ಜಾಹೀರನಾಮೆಯಿಂದಾಗಲೀ, ಪಾರ್ಲಿಮೆಂಟನ ಕಾಯಿದೆಯಿಂದಾಗಲೀ, ಮೊನ್ನಿನ ತನಕ ಜಾಹೀರಾಗಿದ್ದಿಲ್ಲೆಂಬುದೇ ಇದರ ಕಾರಣವ ಇಗೇ ಕಾಗಣಗಿಂದ ...

ಕ್ಯಾದ ದ್ಯೇಯವು ಇಷ್ಟು ಮಹತ್ವದ ವಿಷಯ ವಾಗಿದೆ ಅದರ ಪೂರ್ಣತೆಯು ನಮ್ಮ ಜೀವಿತ ವ್ಯಕ್ತಿಗೆ ಇಷ್ಟು ಫಲಪ್ರದವದೆ ಅದಕ್ಕಾಗಿ ಸನ್ನದ ಕಾಯಿದೆಯ ಪ್ರಯೋಗವು ನಮಗೆ ಇಷ್ಟು ಪರಿಣಾಮಕಾರವದೆ ಅದರ ವಿಷಯ ವಾಗಿ ನಾವು ಸದೈವ ಎಚ್ಚರಾಗಿರಬೇಕಾಗಿದೆ ನಮ್ಮಲ್ಲಿ ರಾಜಕೀಯ ಕೊರತೆಗಳು ಒಪ್ಪಿಟ್ಟಿಲ್ಲ ಸಾಮಾಜಿಕ ಕುಂದುಗಳು ಕಡಿಮೆ ಇಲ್ಲ. ಔದ್ಯೋಗಿಕ ನ್ಯೂನತೆಗಳು ನಾನಾಳ ವಿರುವವು. ಶಿಕ್ಷಣ ವಿಷಯಕ ನಿಕೃಷ್ಟತೆಯು ಅಪರಿಮಿತವದೆ. ಇವೆಲ್ಲ ಕುಂದುಗಳನ್ನು, ಕೊರತೆಗಳನ್ನು, ನಿಕೃಷ್ಟತೆಯನ್ನು ದೂರ ಪಡಿಸಲಿಕ್ಕೆ ತುಣುಕು ತುಣುಕು ಹಕ್ಕುಗಳನ್ನು ಬೇಡಿ ನಮ್ಮ ಪಳಿಗೆಯಾಗದು, ನಮ್ಮ ದೇಶದ ಉದ್ಧಾರವಾಗದು,

೩೩ ಕೋಟಿ ಪ್ರಜೆಗಳ

ಸರ್ವಾಂಗಿತ ಉನ್ನತಿಯು ಸಾಧ್ಯವಾಗದು, ಎಂದು ನಮ್ಮ ಭೂತಕಾಲದ ಪ್ರಯತ್ನಗಳೇ ಸಿದ್ಧಪಡಿಸಿರುವವು ವೇದಾಂತದೊ, ... ಕೇನ ವಿಜ್ಞಾತೇನ ಸರ್ವಂ ವಿಜ್ಞಾತಂ ಭವತಿ ಎಂದು ಪರಮಾತ್ಮನ ವಿಷಯವಾಗಿ ಋಷಿಗಳು ಹೇಳಿದಂತೆ ಹಿಂದುಸ್ವರಾಜ್ಯವು ಪ್ರಾಪ್ತವಾದರೆ, ಎಲ್ಲವೂ ಪ್ರಾಪ್ತವಾಗುವದೆಂದು ಹೇಳುವಷ್ಟು ಈ ಸ್ವರಾಜ್ಯದ ಪರಮಾತ್ಮನ ಶಕ್ತಿಯು ಇರುವದು ನಮ್ಮ ಕೊರತೆಗಳು, ಕುಂದುಗಳು ಈ ಸಾಧನದಿಂದಲೇ ಪರಿಹರಿಸಲ್ಪಡುವವು. ಇಂದ ನಮ್ಮ ಭಾಗ್ಯೋದಯಕ್ಕೆ ಕಾರಣವಾಗುವ ಸ್ವರಾಜ್ಯದ ಭವಿಷ್ಯಕಾಲದ ಇತಿಹಾಸಕ್ಕೆ

ಕಣ್ಣಿಗೆ ಬೀಳುವವು ೧೬೫ ನೇ ಇಸವಿಯಲ್ಲಿ ಕ್ಲಾಯ್ವ ಸಾಹೇಬರು ಪ್ಲಾಸೀ ಕಾಳಗವನ್ನು ಗೆದ್ದು ಹಿಂದುಸ್ಥಾನದೊಳಗೆ ಬ್ರಿಟಿಷ ರಾಜ್ಯವನ್ನು ಸ್ಥಾಪಿಸಿದಂದಿನಿಂದ ನೂರು ವರ್ಷಗಳ ಮೇಲೆ ೧೮೫೭ ನೇ ಇಸ್ವಿಯ ಶಿಪಾಯಿಗಳ ಬಂಡಾಯದ ತನಕ ಕಂಪನಿ ಸರಕಾರವೂ ಅದರ ನಂತರ ೬೦ ವರ್ಷಗಳ ಅವಧಿಯೊಳಗೆ ಮೊನ್ನಿನ ೧೯೧೭ ನೇ ಇಸ್ವಿಯ ತನಕ, ಮಹಾರಾಣಿಯರ ಸರಕಾರವೂ ಮಹಾರಾಜರ ಸರಕಾರವೂ

ಪ್ರಜಾ ಸ್ವಾತಂತ್ರ್ಯದ

ಅಲ್ಪಸ್ವಲ್ಪ ಹಕ್ಕುಗಳನ್ನು ಹಿಂದೀ ಪ್ರಜೆಗಳಿಗೆ ಪಯಪಾಲಿಸಿರುವವು ಅರಸರ ಜಾಹೀರನಾಮೆಯೊಳಗೆ ಮತ್ತು ಸನದಿನ ಕಾಯಿದೆಗಳೊಳಗೆ ಆಶ್ವಾಸನೆಗಳನ್ನು ಸಹ ಕೊಟ್ಟಿರುವವು ನಮ್ಮ ರಾಷ್ಟ್ರದ ದುರ್ದೈವದ ವಿಚಿತ್ರ ಗತಿಯಿಂದ ಇಂದ ಅನೇಕ ಆಶ್ವಾಸನೆಗಳ ಪಾಡು 'ವಚನೇ ಕಿಂ ದರಿದ್ರತಾ' ಎಂಬಂತೆಯೇ ಆಗಿ ಹೋಯಿತು. ಅದಕ್ಕಾಗಿ ನಮ್ಮ ರಾಷ್ಟ್ರೀಯ ಪ್ರಗತಿಯು ಬ್ರಿಟಿಷರಂದ ಸುಧಾರಿಸಿದ ಜನಾಂಗದವರ ಆಳಿಕೆಯಲ್ಲಿ, ಅದು ಇದ್ದರೂ,

ಇರುವೆಯ ಗತಿಯಿಂದಲೇ

ಸಾಗಿದೆಂದು ಹೇಳಬೇಕಾಗಿದೆ ಇಷ್ಟು ಅವಧಿಯೊಳಗಿನ ರಾಜಕೀಯ ವ್ಯವಹಾರದೊಳಗೆ ನಾವು ಯಾವ ದಿಕ್ಕಿನಿಂದ ನಡೆದಿದ್ದೇವೆ, ನಮ್ಮ ಸರಕಾರದ ಅಂತಿಮ ಧ್ಯೇಯವೇನು, ಎಂಬುದು ಹಿಂದೀ ಪ್ರಜೆಗಳಿಗಷ್ಟೇ ಅಲ್ಲ, ರಾಜ್ಯ

... ಜವಾಬುದಾರ ರಾಜ್ಯಪದ್ಧತಿಯನ್ನು ಇಲ್ಲಿಗೆ ಪ್ರಚಾರಿಸುವದೆಂದೂ ಈ ಸ್ವರಾಜ್ಯದ ಮೊದಲನೇ ಹಪ್ತೆಯೆಂದು ಭಾರವಾದ ಕೆಲವು ಹಕ್ಕುಗಳನ್ನು ಹಿಂದೀ ಪ್ರಜೆಗಳಿಗೆ ಅನುಗ್ರಹಿಸುವದೆಂದೂ, ಸನದಶೀರ ಪದ್ಧತಿಯಿಂದ ಜಾಹೀರ ಪಡಿಸಿತು ೧೯೧೭ ನೇ ಇಸ್ವಿಯ

ಅಗಸ್ಟ ಪ್ರಕಟನೆಯು

ಪ್ರಜಾಸ್ವಾತಂತ್ರ್ಯದ ದೃಷ್ಟಿಯಿಂದ ಹಿಂದೀ ಪ್ರಜೆಗಳ ಮಹತ್ವದ ಸನದಾಗಿರುವದು ಈ ಸನದಿನೊಳಗೆ ಮುತ್ಸದ್ದಿತನದ ಗೆಣ್ಣುಗಳಿಲ್ಲದಿರುವದು ಅಶಕ್ಯವು. ಲೋಕಜಾಗ್ರತಿಯ ಶಕ್ತಿಯಿಂದ ಇಂದ ಗೆಣ್ಣುಗಳು ತನ್ನಿಂದ ತಾನೇ ಸಡಿಲಾಗುತ್ತವೆ. ಇವುಗಳ ಮಾತಿರಲಿ. ಈ ಪ್ರಕಟನೆಯು ನಮ್ಮ ಭಾವೀ ಸ್ವರಾಜ್ಯದ ಇತಿಹಾಸದ ಮುಖಪೃಷ್ಠವಾಗಿ ಬಾಳುವದು. ಇದರೊಳಗಿನ ಸ್ಪಷ್ಟವಾದ ಅಭಿವಚನಗಳಿಂದಲೇ ಸ್ವರಾಜ್ಯಕ್ಕೆ ಮೂರ್ತಸ್ವರೂಪವು ಪ್ರಾಪ್ತವಾಗಲಿಕ್ಕೆ ದಿಶಾ ತೋರಿಸಿಕೊಟ್ಟಂತಾಗಿದೆ ಇದಕ್ಕಾಗಿ ರಾಜ್ಯಕರ್ತರ ಮುತ್ಸದ್ದಿತನವನ್ನು ಹೊಗಳಬೇಕಲ್ಲವೇ? ಒಟ್ಟಿಗೆ ನಮ್ಮ ಭವಿಷ್ಯಕಾಲವು ಉಜ್ವಲವಿರುವದೆ ನಮ್ಮ ರಾಷ್ಟ್ರೀಯ ಆಕಾಂಕ್ಷೆಗಳು ಫಲಿಸಲು, ಕಾಲಗತಿಯು ಅನುಕೂಲವಾಗಿದೆ. ಇಷ್ಟೇ ಇಂದಿಗೆ ಹೇಳುವೆವು ಈ ವಿಷಯದ ಚರ್ಚೆಯನ್ನು ಮುಂದೆ ನಡಿಸಲಿಕ್ಕೆ ಇಂದಿಗೆ ಇಷ್ಟೇ ಪ್ರಸ್ತಾವನೆಯು ಸಾಕು.

ಸ್ಫುಟ ಸೂಚನೆಗಳು.

೧. ಪಾರ್ಲಮೆಂಟಿನೊಳಗೆ ಮೊನ್ನೆ ಒಂದು ಅಪೂರ್ವ ಸಮಾರಂಭವು ಕೊನೆಗಂಡಿತು. ಜೋಸೆಫ ಚೆಂಬರಲೇನರೆಂಬ ಒಬ್ಬ ವಿಖ್ಯಾತ ಮಂತ್ರಿಗಳು ೬-೭ ವರ್ಷಗಳ ಹಿಂದೆ ಕೈಲಾಸವಾಸಿಗಳಾಗಿದ್ದರು. ಬ್ರಿಟಿಷ ಮುತ್ಸದ್ದಿಗಳೊಳಗೆ ಸಮಕಾಲೀನ ಪ್ರವೀಣರಲ್ಲಿ ಅವರು ಉಚ್ಚ ಪದವಿಯನ್ನು ಧರಿಸಿದ್ದರು. ಇವರು ಮಾಡಿದ ಸಾಮ್ರಾಜ್ಯ ಸೇವೆಯನ್ನು ಬಣ್ಣಿಸಿ, ಮುಖ್ಯ ಪ್ರಧಾನರಾದ ಲ್ಯಾಡ ಜಾರ್ಜ ಸಾಹೇಬರು, ಪಾರ್ಲಮೆಂಟಿನ ಖರ್ಚಿನಿಂದ ಅವರದೊಂದು ಸ್ಮಾರಕ ಮಾಡಬೇಕೆಂದು ಸೂಚಿಸಿದರು. ಸ್ಮಾರಕಕ್ಕಾಗಿ ಚೆಂಬರಲೇನ ಸಾಹೇಬರ ಪುತ್ತಳಿಯನ್ನು ಮಾಡಿ, ಬಾದಶಹರ ಅರಮನೆಯ ಅಂಗಳದಲ್ಲಿ ಸ್ಥಾಪಿಸಬೇಕೆಂದು ಸರ್ವಾನುಮತದಿಂದ ಪಾರ್ಲಮೆಂಟ ಸಭೆಯು ನಿಶ್ಚಯಿಸಿತು. ಈ ಸಭೆಯ ಇತಿಹಾಸದೊಳಗೆ ಇಂಥ ಪ್ರಚಾರವು ಅಪೂರ್ವವದೆ. ತಮ್ಮೊಳಗಿನ ವಿಖ್ಯಾತ ಪುರುಷರಿಗೆ ಬ್ರಿಟಿಷರು ಎಷ್ಟು ಗೌರವದಿಂದ ಮನ್ನಿಸುತ್ತಾರೆ, ನೋಡಿರಿ! ಇಂಗ್ಲಿಷರ ದೇಶಭಕ್ತಿಯ ಔದಾರ್ಯದ ಮಾದರಿಯಿದು. ಹೆಸರುವಾಸಿಯಾದ ಚೆಂಬರಲೇನ ಸಾಹೇಬರು, ಉದಾರಮತವಾದಿಗಳ ಬಿರುಸು ಪ್ರತಿಪಕ್ಷಿಗಳಾಗಿದ್ದರು. ಇವರೊಬ್ಬ ಜಹಾಲ ಮುತ್ಸದ್ದಿಗಳಾಗಿದ್ದರು. ಇವರಿಗೆ ಇವರ ವೈರಿಗಳು, 'ದಂಕಿನಬಾಬ'ರೆಂದು, ಸಹ ಕರೆಯುತ್ತಿದ್ದರು. ಇವರ ಸಂರಕ್ಷಕ ಜಕಾತಿಯ ತತ್ವಗಳು, ಇವರ ಪಕ್ಷದವರಿಗೇ, ಪೂರ್ಣವಾಗಿ ಮಾನ್ಯವಿದ್ದಿಲ್ಲ. ಮಹಾಯುದ್ಧದ ನಂತರ, ಇವರ ತತ್ವಗಳ ಸತ್ಯತೆಯ ವಿಷಯವಾಗಿ ಎಲ್ಲರೂ ಮನಗಂಡರು. ಆದರೆ ಸತ್ಯ ಮತಗಳನ್ನು ಪ್ರತಿಪಾದಿಸುವ, ಲೋಕನಾಯಕರಿಗಾಗುವ ನಿಂದೆಯೂ, ವಿಡಂಬನೆಯೂ, ಇವರಿಗೆ ಬಹಳೇ ಸಹಿಸಬೇಕಾಯಿತು. ಸ್ವಾತಂತ್ರ್ಯದ ತವರಮನೆಯಲ್ಲಿ ಜನಿಸಿ, ಅಲ್ಲಿಯೇ ದೇಶಸೇವೆಯನ್ನು ಮಾಡುವ ಸುದೈವವು ದೊರೆತದ್ದರಿಂದ, ಸೆರೆಮನೆಯ ಸುಖವು ಅವರಿಗೆ ದೊರೆಯಲಿಲ್ಲ. ದೇಶಪ್ರೀತಿಯ ಓಸುಗ, ಶಾರೀರಿಕ ಕಷ್ಟಗಳ ದಕ್ಷಿಣೆಯು ಅವರಿಗೆ ಲಭಿಸಲಿಲ್ಲ. ಲೋಕಮಾನ್ಯ ಟಿಳಕರ ಕಾರ್ಯದಲ್ಲಿಯೂ, ಅವರ ಕಾರ್ಯದಲ್ಲಿಯೂ, ಕೆಲಮಟ್ಟಿಗೆ ಸಾಮ್ಯತೆಯಿತ್ತು. ಇಬ್ಬರ ಸ್ವಭಾವವೂ, ದೃಢನಿಶ್ಚಯಿಯಾಗಿತ್ತು. ಇಬ್ಬರಲ್ಲಿಯೂ ಉತ್ಕಟ ದೇಶಪ್ರೀತಿಯಿತ್ತು. ಇಬ್ಬರಿಗೂ, ಜಹಾಲರು, ಬಿರುಸು ಮುತ್ಸದ್ದಿಗಳು, ವಿಧ್ವಂಸಕರು, ಎಂದು ಪ್ರತಿಪಕ್ಷಗಳು ದೂಷಿಸುತ್ತಿದ್ದರು. ಆದರೆ, ಚೆಂಬರಲೇನ ಸಾಹೇಬರಿಗೆ ಸಾಮ್ರಾಜ್ಯದ ಸೇವಕರೆಂದು, ಪಾರ್ಲಮೆಂಟಿನ ಪುತ್ತಳಿಯ ಅಸಾಮಾನ್ಯ ಸನ್ಮಾನವು ದೊರೆಯುತ್ತದೆ. ಲೋ. ಟಿಳಕರಿಗೆ ಬ್ರಿಟಿಷ ಸಾಮ್ರಾಜ್ಯದೊಳಗಿನ ಒಬ್ಬ ಸುಶಿಕ್ಷಿತ ನಾಗರಿಕರಾದ, ಧಾರವಾಡದ ಕಲೆಕ್ಟರ ಮಿ. ಇಮೆನ್ಯೂಯಲ್ ಸಾಹೇಬರು ಎಂಥ ಅಪಶಬ್ದಗಳಿಂದ ನಿಂದಿಸುತ್ತಾರೆ, ನೋಡಿರಿ! ದೇಶಭೇದದಿಂದ, ಅಧಿಕಾರ ಭೇದದಿಂದ, ದೃಷ್ಟಿ ಭೇದವೂ, ಬುದ್ಧಿ ಭೇದವೂ ಎಷ್ಟಾಗುತ್ತದೆಂದು ಹೇಳಲಿಕ್ಕೆ, ಇದೊಂದು ದೃಷ್ಟಾಂತವು.

---

೨ [ಮಿ. ಇಮೆನ್ಯೂಯಲ್ ಸಾಹೇಬರ ಮುಕ್ತಾಫಲಗಳು, ಅವರು, ಕಲೆಕ್ಟರರೆಂಬ ನಾತೆಯಿಂದ, ಧಾರವಾಡದ ಮ್ಯುನಿಸಿಪಾಲಿಟಿಗೆ ಬರೆದ ಪತ್ರದಲ್ಲಿವೆ. ಲೋ. ಟಿಳಕರ ನಿಧನದಿಂದುಂಟಾದ ಶೋಕವನ್ನು ವ್ಯಕ್ತಪಡಿಸಲಿಕ್ಕೆ, ಮಹಾನುಭಾವರ ಬಗ್ಗೆ ತಮಗಿರುವ ಅಭಿಮಾನವನ್ನೂ, ಅವರಿಗೆ ತೋರಿಸಬೇಕಾದ ಸಾರ್ವಜನಿಕ ಸನ್ಮಾನವನ್ನೂ, ಪ್ರದರ್ಶಿಸಲಿಕ್ಕೆ, ಧಾರವಾಡ ಶಹರದೊಳಗಿನ ಶಾಲೆಗಳನ್ನು ಮ್ಯುನಿಸಿಪಾಲಿಟಿಯು ಒಂದು ದಿವಸ ತೆರೆಯಲಿಲ್ಲೆಂದು ತಿಳಿದಕೂಡಲೆ, ಈ ಕಲೆಕ್ಟರ ಸಾಹೇಬರು ಕೋಪಿಷ್ಟರಾಗಿ, ಅಕ್ಷಣ ಒಂದು ಹುಕುಮು ಬರೆದು, ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಜವಾಬು ಕೇಳಿರುವರು. ಇದೇ ಹುಕುಮಿನಲ್ಲಿ ಲೋ. ಟಿಳಕರು, '*unrepentant criminal*' ಪಶ್ಚಾತ್ತಾಪ ಬುದ್ಧಿಯಿಲ್ಲದ ಗುನ್ಹೆಗಾರರು ಎಂದ, ನಮ್ಮ ಅತಿವಿಖ್ಯಾತ ದೇಶಭಕ್ತರಿಗೆ, ಅವರು ತಮ್ಮದೊಂದು ಬಿರುದನ್ನು ಕೊಡಮಾಡಿರುವರು. ಇಂಥ ಅಪಶಬ್ದಗಳಿಂದ ಲೋಕಮಾನ್ಯರ ಕೀರ್ತಿಗೆ ಎಳ್ಳಷ್ಟು ಬಾಧೆಯಿಲ್ಲ. ಅದಕ್ಕೂ ಉಜ್ವಲವದೆ. ಆದರೆ, ದೇಶಾಭಿಮಾನವೆಂಬ ಸದ್ಗುಣವು ಕರೆಬಿಣ್ಣದ ಜನರೊಳಗೆ, ದೇಶಭಕ್ತರಿಗೆ ಮನ್ನಿಸುವ ಕರ್ತವ್ಯದಲ್ಲಿ ಸಹ ತಲೆದೋರಬಾರದೆಂದು ಈ ಸಾಹೇಬರ ಹುಕುಮಿನ ಇತ್ಯರ್ಥವಿದೆಂದು ಜನರು ಸಕಾರಣ ಭಾವಿಸುವರು. ಸಾಹೇಬರ ಇದೇ ಪತ್ರವು ಅವರ ಅಧಿಕಾರಮತ್ತತೆಯ ಸ್ಮಾರಕವಾಗಿದೆ. ಕಲೆಕ್ಟರರು 'ಅಧಿಕಾರವಂತ'ರೆಂದು ಜನರೆಲ್ಲರು ಬಲ್ಲರು. ಅವರು 'ಬುದ್ಧಿವಂತ'ರೆಂದು ಮಾತ್ರ ಸರ್ವಸಾಮಾನ್ಯ ಸಿದ್ಧಾಂತವನ್ನು ಕಟ್ಟಲಾಗದೆಂದು, ಇಮೆನ್ಯೂಯಲ್ ಸಾಹೇಬರು ತಮ್ಮ ವರ್ತನದಿಂದಲೇ ಹೇಳಿದಂತಾಗಿದೆ. ಇನ್ನು ಲೋಕಮತ ದೃಷ್ಟಿಯಿಂದ, ಸಾಹೇಬರ ಈ ವರ್ತನವು, ಅವರ ದೇಶಬಾಂಧವರ ಚೆಂಬರಲೇನ ಸ್ಮಾರಕ ವಿಷಯದ ಘನತೆಗೆ, ಉದಾರತೆಗೆ ಎಷ್ಟು ವಿಸಂಗತವದೆ, ಎಷ್ಟು ನಿಂದ್ಯವದೆಂದು, ಅವರೇ ವಿಚಾರಿಸಲಿ. ಅವರಲ್ಲ್ಯಾದರೂ ಪಶ್ಚಾತ್ತಾಪ ಬುದ್ಧಿಯದೆಯೋ, ಇಲ್ಲವೋ, ಎಂಬುದು ಕಡೆಗೆ ನಿಜವಾಗಿ ಕಂಡುಬರುವದು. ಇಲ್ಲದಿದ್ದರೆ, 'ತನ್ನಂತೆ ಪರರು' ಎಂಬ ಸ್ವಾಭಾವಿಕ ಭಾವನೆಯಿಂದ ಈ ದೊರೆಗಳು, ನೈತಿಕ ಗುನ್ಹೆಯನ್ನು ಮಾಡಲುದ್ಯುಕ್ತರಾದರೆಂದು ಜನರಿಗಾದರೂ ತಿಳಿಯಲಿ.

---

೩ ಮುಂಬಯಿ ಕಾಯಿದೆ ಕೌನ್ಸಿಲದ ಅಗಸ್ಟ ಅಧಿವೇಶನದೊಳಗೆ ಪಂಚಾಯತು ಕಾಯಿದೆಯು ಪಾಸಾಯಿತು. ಕಮೀಟಿಯು ತಯಾರಿಸಿದ ಮಸೂದೆಯೇ ತುದಿಯಲ್ಲಿ ಕೌನ್ಸಿಲ ಸಭೆಗೆ ಮಾನ್ಯವಾದಂತಾಯಿತು. ಈ ಮಸೂದೆಯ ಸವಿಸ್ತರ ವಿವೇಚನೆಯನ್ನು ನಾವು ಮೊದಲೇ ಮಾಡಿದ್ದೇವೆ. ಈ ಕಾಯಿದೆಯು ಅಮಲಿನಲ್ಲಿ ಬಂತೆಂದರೆ, ಅಂಕೋಲಾ, ಯಲ್ಲಾಪೂರ, ಸಿದ್ದಾಪೂರದಂಥ ಶಹರುಗಳಿಗೂ, ದೊಡ್ಡ ದೊಡ್ಡ ಹಳ್ಳಿಗಳಿಗೂ, ಸಣ್ಣ ಮ್ಯೂನಸಿಪಾಲಿಟಿಗಳಂಥ ಲೋಕನಿಯುಕ್ತ ಸಂಸ್ಥೆಗಳು ದೊರಕುವವು. ಪಂಚಾಯತುಗಳೆಂದರೆ, ನೆಲಗಟ್ಟಿನ ಸ್ವರಾಜ್ಯವು. ಇದರೊಳಗೆ ಪ್ರಾಯಸ್ಥರಾದ ಎಲ್ಲ ಗಂಡಸರು, ಪಂಚರನ್ನು ಆರಿಸುವ ಮತದಾರರಾಗುವರು. ಪಂಚಾಯತುಗಳಿಗೆ ಹಳ್ಳಿಗಳ ಆರೋಗ್ಯ ರಕ್ಷಣೆ ಮತ್ತು ಇದೇ ವಿಧದ ಸುಖಸೋಯಿಗಳ ಕೊರತೆಗಳನ್ನು ಮನೆತೆರಿಗೆಯಂಥ ಕಂದಾಯದಿಂದ ಪೂರೈಸಿಕೊಳ್ಳುವ ಅಧಿಕಾರಗಳಿವೆ. ಈ ಗ್ರಾಮ ಸಂಸ್ಥೆಗಳಿಗೆ, ಸಣ್ಣ ಸಣ್ಣ ರಕಮುಗಳ ದಾವೆಗಳನ್ನೂ, ಒಟ್ಲೆಗಳನ್ನೂ, ತನಿಖಿ ನಡಿಸಿ, ತೀರ್ಪು ಕೊಡುವ ನ್ಯಾಯಾಧಿಕಾರಗಳನ್ನು ಕೊಡಬೇಕೆಂದು ಅತ್ಯಾಗ್ರಹದಿಂದ ಲೋಕಮತವು ಬೇಡಿದರೂ, ಅಂಥ ಅಧಿಕಾರಗಳನ್ನು ಕೊಡಲಾಗದೆಂದು ಸರಕಾರವು ನಿರ್ಣಯಿಸಿತು. ಹಳ್ಳಿಯ ಬೆಟ್ಟಗಳ ಕಾರಭಾರವನ್ನೂ, ದೇವಸ್ಥಾನಗಳ ದೇವಸ್ವದ ಆಡಳಿತವನ್ನೂ ನಡಿಸುವ ಅಧಿಕಾರವು ಪಂಚಾಯತುಗಳಿಗೆ ದಕ್ಕಿಲ್ಲ. ಇದೇ ಕಾರಣಗಳ ಮೂಲಕ, ಈ ಕಾಯಿದೆಯು, ಘಟನೆಯ ದೃಷ್ಟಿಯಿಂದ ಉದಾರವಾಗಿದ್ದರೂ, ಕಾರ್ಯಕ್ಷೇತ್ರದ ದೃಷ್ಟಿಯಿಂದ ಸಂಕುಚಿತವಾಗಿದೆ. ಇದಕ್ಕಾಗಿ ಪಂಚಾಯತುಗಳ ಉಪಯುಕ್ತತೆಯು, ಈಗಿರುವ ಬೋರ್ಡುಗಳಷ್ಟೇ ಯಾಂತ್ರಿಕವಾಗಿರುವದು. ಅವುಗಳ ಕಾರಭಾರದೊಳಗೆ ವಿಶಿಷ್ಟ ಸಜೀವತೆಯು ಕಂಡುಬರದಿದ್ದರೆ ಕಾಯಿದೆಯ ಕುಂದುಗಳೇ ಅದಕ್ಕೆ ಕಾರಣವಾಗುವವು. ಪಂಚರಾಗಲಿಕ್ಕೆ ಪಾತ್ರರಾದ ಉಮೇದವಾರರು ಸಹ ಮುಂದೆ ಬರುವದಿಲ್ಲ, ಜನರು ಈ ಗ್ರಾಮ ಸಂಸ್ಥೆಗಳಲ್ಲಿ, ಉತ್ಸುಕತೆಯಿಂದ ಸೇವೆ ಮಾಡುವದಿಲ್ಲ, ಎಂಬ ಅಪವಾದಗಳು ವಾರ್ಷಿಕ ವರದಿಗಳಲ್ಲಿ ಪರಿಸ್ತಾಧಿಕಾರಿಗಳಿಂದ ಬರೆಯಲ್ಪಟ್ಟರೆ, ಲೋ. ಬೋರ್ಡುಗಳ ಹಾಗೇ, ಬೇರೊಂದು ರಾಗದಿಂದ ಹಾಡುವಂತಾಗುವದು, ಮತ್ತೇನು?

---

೪ ಬಡನೌಕರರ ಸಂಬಳ-ಬಡತಿಗಳಂಥ ಪ್ರಶ್ನೆಗಳನ್ನು ಸಹಾನುಭೂತಿಯಿಂದ ಸರಕಾರವು ಬಿಡಿಸುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಇಂಥ ಸಹಾನುಭೂತಿಯ ಅವಶ್ಯಕತೆಯಿದೆಂದು ಅದು ಮನಗಂಡಿರುವದೆಂದು ತಿಳಿದು, ನೌಕರರು ಆಭಾರಿಯಾಗಿರುವರು. ಆದರೆ ಪೆನಶನದಾರರ ಪಾಲಿಗೆ ಈ ಸಹಾನುಭೂತಿಯು ಏನೂ ಬಂದಿಲ್ಲೆಂದು ನೋಡಿ, ಮನಸ್ಸಿಗೆ ಬಹಳೇ ವಿಷಾದವೆನಿಸುತ್ತದೆ. ೩೦-೩೫ ವರ್ಷ ಸರಕಾರಿ ನೌಕರಿಯಲ್ಲಿ ಹಣಗಿ, ಕಟ್ಟಕಡೆಗೆ ತಿಂಗಳಿಗೆ ೪-೮ ರೂಪಾಯಿ ಪೆನಶನು ಪಡೆದು, ಮುದಿತನದ ಕಾಲವನ್ನು ಕಷ್ಟದಿಂದ ಕಳೆಯುತ್ತಿರುವ ಮುದ್ಕೇವಿಗಳ ಹಾಡಂತೂ ತೀರ ಕರುಣಾಸ್ಪದವಾಗಿರುವದು. ಇವರ ಕಷ್ಟಗಳನ್ನು ಪರಿಹರಿಸಲಿಕ್ಕೆ ಏನಾದರೂ ಉಪಾಯ ಯೋಜನೆಯನ್ನು ಮಾಡುವ ಎಂದು, ಖಾನದೇಶದ ನಾ। ಗರುಡರವರು, ಈ ಕಾರ್ಯಕ್ಕಾಗಿ ಒಂದು ಕಮಿಟಿಯನ್ನು ನೇಮಿಸುವ ಸೂಚನೆಯನ್ನು ಕೌನ್ಸಿಲದೊಳಗೆ ತರಲು, ಸರಕಾರದ ಪಕ್ಷದಿಂದ ಕಂದಾಯದ ಮಂತ್ರಿಗಳು ಅದನ್ನು ವಿರೋಧಿಸಿದರು. ಈಗಿದ್ದ ನೌಕರರ ಸಂಬಳದ ಏರಿಕೆಗೆ, ೪೭ ಲಕ್ಷ ರೂಪಾಯಿ ಮೊದಲೇ ಕಡಿಮೆಯಾಗಿ ಬಾಯಿಗೂಡಿಸಲಿಕ್ಕಾಗದಿದ್ದಾಗ, ಪೆನಶನದಾರರಿಗೆ ಮತ್ತೂ ಬಡಿಸುವದೆಲ್ಲಿಂದ? ಎಂಬಂತೆ ಸರಕಾರದ ಸವಾಲಿದೆ. ಒಟ್ಟಿಗೆ, ಪೆನಶನದಾರರಿಗೆ ಇನ್ನು ಪೆನಶನವನ್ನೇ ಏರಿಸಿ, ಏನೂ ಸಹಾಯ ಮಾಡಲಾಗದೆಂದು ಸರಕಾರವು ಹೇಳಿದಂತಾಯಿತು. ಮಾಜೀ ನೌಕರರಿಗೆ ಈ ಬಗೆಯಾಗಿ ನಡಿಸುವದು ಕೃತಘ್ನತೆಯಾಗದು. ಇನ್ನು ಈ ಮುದುಕರು 'ರಾಮ-ಕೃಷ್ಣ-ಗೋವಿಂದ' ಎಂದು, ದೇವರ ನಾಮ ಸ್ಮರಣೆಯನ್ನು ಮಾಡುತ್ತ ಅರೆ-ಹೊಟ್ಟೆ ಬಾರಲಿಕ್ಕಾಗುವಷ್ಟು ಇಹಲೋಕದ ಯಾತ್ರೆಯನ್ನು ಸಾಗಿಸುತ್ತಿರಬೇಕಾಗಿದೆ. ದೊಡ್ಡ ದೊಡ್ಡ ಪೆನಶನದಾರರು ಸ್ಟೇ। ಸಕ್ರೆಟರಿಗಳಿಗೆ, ತಮ್ಮ ಪೆನಶನ ಏರಿಸಬೇಕೆಂದು ಅರ್ಜಿ ಮಾಡಿ ನಡಿಸಿದ ಪ್ರಯತ್ನದಿಂದ, ಇವರ ಸುದೈವವು ಫಲಿಸಿದರೆ ಮಾತ್ರ, ಇವರಿಗೆ ಪರಲೋಕಾ

ಯಸಿದೆ ಇಲ್ಲದಿದ್ದರೆ, ಏನಿಲ್ಲೆಂದು ನಿಶ್ಚಿತ ತಿಳಿದಂತಾಯಿತು. ಸ್ವಾರ್ಥದ ಸಂಸಾರದೊಳಗೆ ರೋಗವು ತೀರಿದ ಕೂಡಲೇ, ವೈದ್ಯರಾದರೂ ತೀರಿಕೊಂಡರೇನು, ಎಂಬ ಮಾತಿನ ಅನುಭವವೇ ಹೆಚ್ಚಾಗಿ ಬರುವದು. ಇರಲಿ. ಬಡ ಪೆನಶನರರ ಕರುಣಾಸ್ಪದ ಸ್ಥಿತಿಯನ್ನು ನಿವಾರಿಸಲಿಕ್ಕೆ ಸರಕಾರವು ಪುನರ್ವಿಚಾರಣೆಯನ್ನು ಮಾಡಿ ನಮ್ಮ ಹಳೆ ನವಕರರಿಗೆ ಶಕ್ಯವಿದ್ದಷ್ಟು ಸಕ್ರಿಯ ಕೃತಜ್ಞತೆಯನ್ನು ತೋರಿಸಲೆಂದು ಅತ್ಯಾಗ್ರಹಪೂರ್ವಕ ಸೂಚಿಸುವೆವು.

ತಾಜಾ ಬಾತ್ಮಿ.

ಧಾರವಾಡದ ಕಲ್ಲೆಕ್ಟರ ಮಿ॥ ಇವ್ಯೂನ್ಸ(?) ಸಾಹೇಬರು, ಧಾರವಾಡ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರಿಗೆ, ಲೋ॥ ಟಿಳಕರ ನಿಧನದ ಪ್ರಿತ್ಯರ್ಥ ಶಾಲೆಗಳನ್ನು ಬಂದ ಮಾಡಿದ ಕುರಿತು ಬರೆದ ಪತ್ರವನ್ನು ವರಿಷ್ಠಾಧಿಕಾರಿಗಳ ಹುಕುಮಿನ ಮೇರೆಗೆ, ರದ್ದು ಮಾಡಿದ್ದೇವೆಂತಲೂ, ಮ್ಯುನಿಸಿಪಾಲಟಿಯು ಪೂರ್ಣ ಅಧಿನವಲ್ಲದ್ದು ಮತ್ತು ತನಗೆ ಸಂಬಂಧವಿಲ್ಲದ, ಈ ವಿಷಯದಲ್ಲಿ ತಾನು ನಡಿಸಿದ ಅಧಿಕಪ್ರಸಂಗದ ಬಗ್ಗೆ ಪಶ್ಚಾತ್ತಾಪ ಪ್ರದರ್ಶಿಸುತ್ತೇವೆಂತಲೂ ಪತ್ರ ಬರೆದು ಜಾಹೀರಮಾಡಿರುತ್ತಾರೆ. ಇದಾದರೂ ಕೇವಲ ಲೋಕಮಾನ್ಯರಿಗೂ ಮತ್ತು ಸಾಹೇಬ ಬಹಾದ್ದೂರರಿಗೂ ಒಂದು ಬಹುಮಾನವು

ಜಿಲ್ಹಾವೃತ್ತ.

ಕುಮಟೆ— ಮಳೆಯು ಸಾಧಾರಣ. ಇಷ್ಟರವರೆಗೆ ೭೫-೫೨ ಇಂಚು ಆಯಿತು. ಪೈರಿ, ... ಉಂಟು. ಮಾಸು ಧಾನ್ಯ ಧಾರಣೆ ಇದ್ದ ಹಾಗೇ.

ಹೆಗಡೆಯಲ್ಲಿ ಪೋಲಿಸರು ಹಿಡಿದ ಜೂಗಾರದ ದಂಡದ ೧೦ ಆರೋಪಿತರಿಗೆ, ಮೂರು ದಿನದ ... ಲ್ಪಟ್ಟರು. ಮನೆಯಜಮಾನನಿಗೆ ರೂಪಾಯಿ ..., ಇತರರಿಗೆ ರೂಪಾಯಿ ೧ರಂತೆ ದಂಡದ ಶಿಕ್ಷೆ ವಿಧಿಸಲ್ಪಟ್ಟಿತು. ಈ ಕುರಿತು ಬಾತ್ಮಿ ಕೊಟ್ಟವರಿಗೆ ೧೫ ರೂಪಾಯಿ ಇನಾಮು ಕೊಡಲ್ಪಟ್ಟಿತು.

ಪೊಕ್ಕಾನವಕ್ಕಿ ನಾರಾಯಣ ಪೈರ ... ಬಾಲವಾಡ ನಾಗು ಮೇಲಣ ಇಷ್ಟೆಯಲ್ಲಿ, ಶ್ಯಾಮರು— ಹಮ್ಮು, ತಾಟುರವರ ಜಮಾಯಿತಿಯಾಗಿ, ಅದು ಬರುವ ೨೫ನೇ ತಾರೀಕಿಗೆ ಇಟ್ಟಿರುವರು.

ಲೋ॥ ಟಿಳಕರ ದಹಾವವು(?), ಏನೂ ಚಲನವಿಲ್ಲದೆ, ಇಲ್ಲಿ ಅಧಿಕಮಾಸದ ಉತ್ಸವಗಳ ಚಕಚಕಾಟದೊಳಗೆ ಅಡಗಿ ಹೋಯಿತು!

ಈ ಹೊತ್ತಿನ ಮ್ಯುನಿಸಿಪಾಲಿಟಿ ಜನರಲ್ ಕಮಿಟಿಯಲ್ಲಿ ಲೋಕಮಾನ್ಯರ ನಿಧನದ ದುಃಖಪ್ರದರ್ಶಕ ಠರಾವಿನ ಪ್ರಸ್ತಾಪವು ಬಂದು, ಅದು ಅಲ್ಲೇ ಅಸ್ತವಾಯಿತು. ವಿಷಾದಕರವು!

ಈ ವರ್ಷ ಕೆರೆ-ಬಾವಿಗಳಲ್ಲಿ ಕೊಂಡು ಸಾಯಿಸಿ, ಆತ್ಮತ್ಯಾಗ ಮಾಡುವವರ ಹಾವಳಿಯೇ ಹೆಚ್ಚಾಗಿದೆ. ಇಲ್ಲಿ ಒಂದು ಬಾವಿಯಲ್ಲಿ ಒಬ್ಬ ಮುದುಕಿಯು ಸತ್ತು ಬಿದ್ದವಳು ೨-೪ ದಿವಸಗಳ ಮೇಲೆ ತಿಳಿದರೆ, ಗೋಕರ್ಣ ಚಾಂದಗೇರಿ ಕೆರೆಯಲ್ಲಿ ಒಬ್ಬ ೨೧ ವರ್ಷದ ತರುಣ ಹೆಂಗಸು ಸತ್ತು ಬಿದ್ದಿರುವಳಂತೆ! ಇಂಥ ಗುನ್ಹೆಗಳ ನಿಜ ಕಾರಣವನ್ನು ಶೋಧಿಸಲು ಪೋಲೀಸರು ಅಸಮರ್ಥರಾದರೆ, ಗುಪ್ತ ಪೋಲೀಸರನ್ನಾದರೂ ಕರೆಯಿಸುವದುತ್ತಮ.

ಅಂಕೋಲಾ— ಮಳೆಯು ಕಡಿಮೆಯಾಗುತ್ತದೆ. ಬೆಳೆ ಯಷ್ಟು ಕೀಡವಿದ್ದರಾಯಿತು. ರೋಗರಾಯಿ ವಿಶೇಷವಿಲ್ಲ.

ಕಳೆದ ತಾರೀಕ ೮ ನೇ ದಿವಸ ಲೋಕಮಾನ್ಯರ ನಿಧನದ ಶ್ರಾದ್ಧವು ಭಕ್ತಿಪುರಃಸರ ನೆರವೇರಿಸಲ್ಪಟ್ಟಿತು. ಪ್ರಾತಃಕಾಲಕ್ಕೆ ಘಂಟೆ ೮ ರಿಂದ ಮಧ್ಯಾಹ್ನ ೧ ಘಂಟೆ ವರೆಗೆ ದೊಡ್ಡ ಬಾಜಾರದಲ್ಲಿ ಶ್ರೀ ಗಣಪತಿ ದೇವಸ್ಥಾನದ ಸಾನ್ನಿಧ್ಯದಲ್ಲಿ ಬಡಬಗ್ಗರಿಗೆ ಅನ್ನದಾನಾರ್ಥವಾಗಿ ಪ್ರತಿ ಒಬ್ಬನಿಗೆ ೧ ಸೇರಿಯಂತೆ ಅಕ್ಕಿ ಹಂಚಲ್ಪಟ್ಟಿತು. ಭಿಕ್ಷುಕರ ಸಂಖ್ಯೆ ಎರಡುವರೆ ಸಾವಿರಕ್ಕೆ ಮುಟ್ಟಿತ್ತು. ಧರ್ಮ ನಡೆಯುವಾಗ ಲೋಕಮಾನ್ಯ ಟಿಳಕರ ಭಾವಚಿತ್ರವನ್ನು ಹೂವಮಾಲೆಗಳಿಂದ ಅಲಂಕರಿಸಿ ಮುಂದಿಟ್ಟಿದ್ದರು. ಸಾಯಂಕಾಲ ೫ ಘಂಟೆಗೆ, ಅದೇ ಮೂರ್ತಿಯನ್ನು ದೊಡ್ಡ ಬಾಜಾರದಿಂದ ಭಜನೆ ಮೇಳಗಳ ಸಹಿತ ಮೆರವಣಿಗೆಯ ಸಮಾರಂಭದಿಂದ ಬೆಂಡಿ ಬಾಜಾರದೊಳಗೆ ಒಯ್ದು ಸಂತೆಪೇಟೆಯ ಪಟಾಂಗಣದೊಳಗೆ ಉಚ್ಚಾಸನದ ಮೇಲೆ ಕುಳ್ಳಿರಿಸಿ ಸಭೆಗೂಡಿತು. ಮಿ। ಸೈದ ಭಡೆಸ್ರೀ ದಿನ ಸಾಹೇಬ ಶಾಸ್ತ್ರಿ ಪೀರಜಾದೆ, ಇನಾಮದಾರರವರು ಅಧ್ಯಕ್ಷರಾಗಿದ್ದರು. ಶ್ರೀಯುತ ಪ್ರಭುಗಳು ಲೋಕಮಾನ್ಯ ಟಿಳಕರ ಸಮಗ್ರ ಚರಿತ್ರವನ್ನು ನಿವೇದಿಸಿದರು. ಅಧ್ಯಕ್ಷರು ಲೋಕಮಾನ್ಯರ ಗುಣಾನುವಾದಗಳನ್ನು ಯಥೋಚಿತ ಶಬ್ದಗಳಿಂದ ಬಣ್ಣಿಸಿದರು, ಮತ್ತು ಅವರು ಮಹಮ್ಮದೀಯರ ಹಿತದೃಷ್ಟಿಯ ಮುಂದಾಳುಗಳಿದ್ದರೆಂದು ಪ್ರತಿಪಾದಿಸಿದರು. ಸಂಕರ ರಾ॥ ಶ್ರೀನಿವಾಸಪೈರು ದಹಾತು ಕಾರ್ಯದ ಆದಾಯ-ವೆಚ್ಚವನ್ನು ಓದಿ ಹೇಳಿದಮೇಲೆ, 'ಟಿಳಕ ಮಹಾರಾಜಕೀ ಜಯ' ಘೋಷದೊಡನೆ ಸಭೆ ವಿಸರ್ಜನವಾಯಿತು. ಆಮೇಲೆ ಭಾವಚಿತ್ರದ ಸಹಿತ ಮೆರವಣಿಗೆಯು ಬೆಂಡಿ ಬಾಜಾರದಿಂದ ಮತ್ತೆ ಬಾಜಾರ ಮಾರ್ಗವಾಗಿ ದೊಡ್ಡ ಬಾಜಾರಕ್ಕೆ ಹೋಗಿ ಗಣಪತಿ ದೇವಸ್ಥಾನದಲ್ಲಿ ಸಮಾರಂಭದ ಮುಕ್ತಾಯವಾಯಿತು. ಜನಸ್ತೋಮವು ಬಹಳೇ ನೆರೆದಿತ್ತು.

ಊರಲ್ಲಿ ತೋಳಿಯದು ದನಗಳಿಗೆ ವಿಷಹಾಕಿ ಕೊಲ್ಲುತ್ತಿದ್ದಾರೆಂತ ಬೊಬ್ಬೆಯಿದೆ. ಪೋಲೀಸರು ಕಾವಲಿಟ್ಟರೆ, ಸತ್ಯವು ತಿಳಿಯುವದಾಗಿದೆ. ಒಂದೆರಡು ದನಗಳು ಮೇಯಲಿಕ್ಕೆ ಹೋಗಲ್ಲೇ, ಸತ್ತುಬಿದ್ದವೆಂಬದು ನಿಜವು.

ಶಿವಾನಂದ ಸ್ವಾಮಿಗಳವರ ಸ್ವಾರಿಯು ಕಳೆದ ರವಿವಾರ ದಿವಸ ರಾತ್ರೆ, ಇಲ್ಲಿಂದ ಕಾರವಾರಕ್ಕೆ ತೆರಳಿತು. ಭಕ್ತಜನರು ಭಜನೆಯ ಸಮಾರಂಭದಿಂದ ಊರ ಹೊರಗೆ ತನಕ ಮುಟ್ಟಿಸಿ ಬಂದರು.

ಮೋಟರ ಲೀಸ್ಟವು ಗ್ರಾಮದೊಳಗೆ ಎಲ್ಲೆಲ್ಲಿ ಹುಟ್ಟಿದ್ದಾರೆಂದು ನೋಡಿ ಜನರು ಇಲೆಕ್ಷನದ ಕೆಲಸಕ್ಕೆ ಸಿದ್ಧರಾಗಿರಬೇಕು. ಮುಲಗಿ ... ಬಿದ್ದವರಿಗೆ, ಹೆಣ್ಣು ಕೂಸು ಹುಟ್ಟುವದು, ಎಷ್ಟತ್ತಿದ್ದವರಿಗೆ, ಗಂಡು ಕೂಸು ಹುಟ್ಟುವದು.

ಹಳಿಯಾಳ— ಹವಾಮಾನ ಪಥ್ಯವು ಮಳೆ ತೀರದದೆ ಜಕ್ಕಲ ಪೈರು ಇಲ್ಲ ... ಆದೆ ಡುಲಿಗಳ ಹಾವಳಿ ವಿಪರೀತ' ಭತ್ತಕ್ಕೆ ಬೆಂಕಿ ರೋಗವು ಹತ್ತುತ್ತಿದೆ.

ಠಳೆ ರಾಮಕೃಷ್ಣಬುವಾ ಡಿಗ್ರಜಕರವರ ಭಾಗವತ ಪುರಾಣ, ಭಜನಗಳು ನಡೆದವು.

ತಾಲೂಕಸಭೆ ವತಿಯಿಂದ ಶಹರ ಮಾರ್ಕೆಟದಲ್ಲಿ ಮಿ ಮಹಮ್ಮದ ಆಜಿಜರ ಮಿ॥ ಮಹಮ್ಮದ ಗೌಸ ಮೌಲ್ವಿ ಇವರ ಅಧ್ಯಕ್ಷತೆ ಕೆಳಗೆ ಸಭೆ ಕೂಡಿ, ಮಿ. ಶಾಮರಾವ ಧರ್ಮಿ ಪಟೇಲ, ಮಿ ಡಿ. ಆರ್. ಜೋಶಕರ ನಾಗೇ ಮಿ ಎ. ಎ. ಮಣಿಯಾರವರ ಲೋಕಮಾನ್ಯರ ಚರಿತ್ರ ಹಾಗೂ ಅವರ ಕಾಮಗಿರಿಗಳ ಬಗ್ಗೆ ಭಾಷಣಗಳಾದವು. ಮಿ. ಮಣಿಯಾರರವರು ಹಿಂದೂ-ಮುಸಲ್ಮಾನರಲ್ಲಿ ಒಡಕು (ಮನಸ್ತಾಪ) ಹುಟ್ಟಿಸುವ ಕೆಲಸವನ್ನು ಲೋಕಮಾನ್ಯರು, ಮಾಡದೆ, ಭದ್ರತೆಯನ್ನೇ ಹುಟ್ಟಿಸುವ ಪ್ರಯತ್ನಮಾಡಿರುವರಾಗಿಯೂ, ಅವರು ಮುಸಲ್ಮಾನ ಸಮಾಜದ ನಂಬಿಗೆಗೆ, ಗೌರವಕ್ಕೆ ಪಾತ್ರರಿದ್ದರಾಗಿಯೂ, ಮುದ್ದೆಸೂದ ಭಾಷಣಮಾಡಿದರು. ಆ ನಂತರ ಲೋಕಮಾನ್ಯರ ಫೋ॥ ಗೆ ಸಾಂತ್ವನದ ಠರಾವು ಹಾಗೂ ಲೋಕಮಾನ್ಯರ ದಹನ ವಿಧಿಯಾದ ಪವಿತ್ರ ಸ್ಥಳವನ್ನು ಅವರ ಸ್ಮಾರಕಕ್ಕಾಗಿ ಕೊಡಬೇಕೆಂದು ನೇ. ನಾ. ಗವ್ಹರ್ನರರಿಗೆ ವಿನಂತಿ ಮಾಡಿದ್ದರ ಠರಾವುಗಳು ಏಕಮತದಿಂದ ಪಾಸಾ

(ಪುರವಣಿ ನೋಡಿರಿ.)

(೩ ನೇ ಪಾನಿನಮೇಲಿಂದ ಮುಂದರಿಸಿದ್ದು.)

ಹುದ್ದಾರ ವಿಚಾರದಿಂದ ಯೋಗ್ಯ ಉಮೇದವಾರರನ್ನು, ಆರಿಸಿ ಕಳುಹಿದ್ದರೆ ಮುಂದಿನ ಇಲೆಕ್ಷನದವೇಳೆಗೆ ತನಗೆ ಪಶ್ಚಾತ್ತಾಪ ಪಟ್ಟು, ಸುಮ್ಮನೇ ಕೂಡ್ರಬೇಕಾದೀತು.

ಕೌನ್ಸಿಲದಲ್ಲಿ ಮುಖ್ಯತಃ ಲೋಕನಿಯುಕ್ತ ಸಾಮದಾರರ ಪಾಲಿಗೆ ಬರುವ ಸಂಗತಿ ಏನೆಂದರೆ— ಪ್ರಶ್ನೆಗಳನ್ನು ಕೇಳುವದು, ಮತ್ತು ವಾದ-ವಿವಾದದಗೋಸ್ಕರ ಬಂದ ರಾಜಕಾರಭಾರದ ಸಂಗತಿಗಳ ಬಗ್ಗೆ ಚರ್ಚೆ ನಡಿಸುವದು ವ ಸರಕಾರದ ಮಾರ್ಫತ್ತು ಹೊಸ ಕಾಯದೆ ಕಾನೂನುಗಳು ಮಾಡಲಿಕ್ಕೆ ಬರುವ ಬಿಲುಗಳ ಬಗ್ಗೆ ಲೋಕಪಕ್ಷದ ಮತವನ್ನು, ನಿರ್ಭೀಡ ರೀತಿಯಿಂದ ತಿಳಿಸಿ, ಯೋಗ್ಯ ಮತ ಕೊಡುವದು. ಇವೇ ಮುಖ್ಯ ಕಾಮಗಿರಿಯು ಲೋಕಪಕ್ಷದ ಸಾಮದಾರರು ನಡಿಸುವದಾಗಿರುತ್ತದೆ.

ಕೌನ್ಸಿಲ ಅಂದರೇನು? ಕೌನ್ಸಿಲದಲ್ಲಿ ಸೇರಿ ಮಾಡತಕ್ಕದ್ದೇನು? ವಗೈರೆ ಇದರ ಪೂರ್ವ ಜ್ಞಾನವಿಲ್ಲದ ಒಬ್ಬನು ಭಾವೀ ಉಮೇದವಾರನಾಗಿ ನಿಲ್ಲುವದಕ್ಕಿಂತ ನಿಲ್ಲದಿರುವದೇ ಉತ್ತಮ. ಕೌನ್ಸಿಲವೆಂದರೆ, ಗ್ರಾಮಪಂಚಾಯತಿಯಾ ಲಗ್ನಮಂಟಪವಲ್ಲ. ಕೌನ್ಸಿಲದಲ್ಲಿ ಸೇರಿ ಲೋಕಹಿತದ ಕಾಮಗಿರಿ ಮಾಡಬಿಚ್ಛಿಸುವ ಉಮೇದವಾರರಲ್ಲಿ ಎಷ್ಟು ಜನರು ತಮ್ಮ ಗತ ಆಯುಷ್ಯದಲ್ಲಿ ಸೌಕರ ಸಾಹೇಬರ ಧನಿಕರಿಗಾಗಿ, ಭಿಡೆಗಾಗಿ, ಬಲಿಬೀಳದೆ, ಲೋಕಹಿತದ ಕಾಮಗಿರಿಯನ್ನು ಏನೇನು ಮಾಡಿರುತ್ತಾರೆಂಬುದನ್ನು ತಿಳಕೊಂಡು, ನಿಧಾನ, ನಿರ್ಭೀಡ, ನಿಸ್ಪೃಹ, ಸ್ವಾರ್ಥತ್ಯಾಗ, ವಿತ್ಪತ್ತ, ಚಿಕಾಟಿ, ಇವೇ ಮುಖ್ಯ ಗುಣಗಳುಳ್ಳ ಉಮೇದವಾರರನ್ನು ಮತದಾರರು ಆರಿಸಿ, ಕೊಡಬೇಕಾಗಿರುತ್ತದೆ. ನ್ಯಾಯ ಉಮೇದವಾರರ ಬಾಹ್ಯ ಥಪಕೆಗೂ, ಅವರ ಇಷ್ಟಮಿತ್ರರ ಭಿಡೆಗೂ ಗಬ್ಬುಪಟ್ಟಿಕ ಸವಿನಯ ಮಾತಿಗೂ ಭುಲಿಬಿದ್ದು, ನಾಲಾಯಕ ಉಮೇದವಾರರನ್ನು ಆರಿಸುವದುಚಿತವಲ್ಲ.

ಸರಕಾರದವರು ರಾಜ್ಯಕಾರಭಾರದ ದೃಷ್ಟಿಯಿಂದ, ಮತಕೊಡುವ ರಾಜಕೀಯ ಹಕ್ಕನ್ನು ನಮಗೆಲ್ಲರಿಗೆ ಕೊಟ್ಟಿರುವರು. ಅದರ ಯೋಗ್ಯ ಉಪಯೋಗ ನಾವು ಮಾಡಿಕೊಳ್ಳದೆ ದುರುಪಯೋಗ ಮಾಡಿಕೊಂಡರೆ ಅದು ಸುಮಾರು ಯೋಗ್ಯತೆಯು ನಮ್ಮಲ್ಲಿಲ್ಲೆಂಬುದು ಜಗತ್ತಿಗೆ ಸ್ಪಷ್ಟವಾಗಿ ತೋರಿಸಿದಂತಾಗುವದಲ್ಲದೆ, ಇಂಥ ನಾಲಾಯಕ ಸಾಮದಾರರ ಆರಿಸುವಿಕೆಯಿಂದ ಕೌನ್ಸಿಲದ ದೇಖಾವೆಯು ಕೇವಲ ವಿಲಕ್ಷಣ ರೀತಿಯಿಂದ ಕಂಡು ಬಂದೀತು.

ಉಮೇದವಾರನು ಮುನ್ಸಿಪಲ್ಲ ಯಾ ಲೋಕಲಬೋರ್ಡ ಮೆಂಬರನಿದ್ದಾನೆ, ಇಲ್ಲವೇ ಸರಕಾರದಿಂದ ರಾವಸಾಹೇಬ, ರಾವಬಹಾದ್ದೂರ ಪದವಿಯನ್ನು ಯಾ ಆನರರೀ ಮೇಜಿಸ್ಟ್ರೇಟ ಎಂಬ ಹುದ್ದೆಯನ್ನು ಅಲಂಕರಿಸಿರುತ್ತಾನೆಂತ ಇಷ್ಟರಿಂದಲೇ ಅವನು ಭಾವಿ ಸಾಮದಾರನಾಗುವಷ್ಟು ಪಾತ್ರತೆಯು ಅವನಲ್ಲಿರುತ್ತದೆಂತ ವೃಥಾ ಸಮಜೂತಿ ಮಾಡಿಕೊಳ್ಳದೆ, ಮತದಾರರು ತಮ್ಮ ಮೇಲಿನ ಜವಾಬದಾರಿಯನ್ನು ಮೇಲಿನ ಸಂಗತಿಗಳನ್ನು ಲಕ್ಷದಲ್ಲಿಟ್ಟು, ಮುಂದೆ ಬಂದ

...ಮೇದವಾರರಲ್ಲಿ ಮುಖಿದುರ್ಭರರನ್ನು, ನೌಕರ ಶಾಹಿಯ ಸರಕಾರನಿಗೆ ಜೀ ಹುಜೂರಗೆ ಬರಿಬೀಳುವವರನ್ನು ಬಿಸವೆ, ಸಾಮಾಜಿಕ ವಿಚಾರದಿಂದ ಕಾಂಗ್ರೇಸದ ಧೋರಣೆಗೆ ಒಪ್ಪಿದ, ರಾಷ್ಟ್ರೀಯ ಪಕ್ಷದ ಯೋಗ್ಯ ಉಮೇದವಾರರನ್ನೇ ಆರಿಸುವರಾಗಿ ನಂಬುವೆವು.

ಎಂಥಿ ನಾಯಕದಾರರಾಗಲಿಚ್ಛಿಸುವ ಉಮೇದವಾರರಾದ ರು ತಾವು ಇಪ್ಪತ್ತು ಸಾವಿರ ಮತದಾರರ ಲೋಕಪ್ರತಿನಿಧಿಗಳಾಗಿ ನೂತನ ಕೌನ್ಸಿಲದ ಖುರ್ಚಿಯಮೇಲೆ ಪ್ರತಿಷ್ಠಿತರಾಗುವವರಿದ್ದವರಿಂದ, ಮೇಲೆ ವರ್ಣಿಸಿದ ಗುಣಗಳು ತಮ್ಮಲ್ಲಿ ಎಷ್ಟರಮಟ್ಟಿಗೆ ಇರುತ್ತವೆಂಬುವದು ತಮ್ಮ ಅಂತಃಕರಣದೇವತೆಗೆ ಸ್ಮರಿಸಿ ಖಾತ್ರಿಮಾಡಿಕೊಂಡು, ಮುಂದಕ್ಕೆ ಹೆಜ್ಜೆ ಇಡುವದು ಉತ್ತಮ ಹಾಗೇ ಮಾಡದೆ ಸಾಂಪೀಕ ಬಹುಮಾನದ ಮೋಹಕ್ಕೆ ಬಿದ್ದರೆ, ತನ್ನ ಅಪಾತ್ರತೆಯನ್ನು ತಾನೇ ತೋರಿಸಿದಂತಾಗಿ, ಜನರ ಹಾಸ್ಯಪದಕ್ಕೆ ಕಾರಣವಾದೀತು.

ಲೋಕಮಾನ್ಯರ ಕೈಲಾಸವಾಸ.

(ನಮ್ಮ ಬಾತ್ಮೀದಾರರಿಂದ ೯-೮-೨೦)

ಲೋಕಮಾನ್ಯರ ನಿಧನದಿಂದುಂಟಾದ ಹಾನಿಯು ಈ ಕಾಲದ ವರೆಗೆ ತುಂಬಿ ಬರಲಿಕ್ಕಿಲ್ಲ, ಅವರೊಬ್ಬರು ಐತಿಹಾಸಿಕ ಪುರುಷರು, ಅವರೇ ಸ್ವಾಭಿಮಾನವನ್ನು ಕಲಿಸಿದರು; ಇಂಥ ದೈವಿಕ ವಿಭೂತಿಯು ಶತಕದಲ್ಲಿ ಒಬ್ಬರು ಹುಟ್ಟಿದರೆ, ಹುಟ್ಟಬಹುದು."

ಹೀಗೆ ಭರತಪುತ್ರರು ಮತಭೇದ, ಜಾತಿಭೇದ, ವರ್ಣಭೇದ ಇವುಗಳನ್ನೆಲ್ಲ ಮರೆತು, ಲೋಕಮಾನ್ಯರಿಗಾಗಿ ಮರುಗುತ್ತಿದ್ದಾರೆ. ಮುಂಬಯಿಯಲ್ಲಂತೂ, ಕಳೆದ ವಾರದಲ್ಲಿ ಸಾವಿರಾರು ಮಂದಿ ಲೋಕಮಾನ್ಯರ ಚೌಪಾಟ ಮೇಲಿನ ಸಮಾಧಿಸ್ಥಾನವನ್ನು ಭಕ್ತಿಪೂರ್ಣ ಚಿತ್ತದಿಂದ ಭಜಿಸಿ, ಯಥಾಶಕ್ತಿ ಕಾಣಿಕೆಯನ್ನು ಇಟ್ಟು ಹಳಹಳಿಸುವದನ್ನು ನೋಡಿದರೆ, ಈ ಮಹಾಪುರುಷನು ಜನತೆಯ ಮನಸ್ಸನ್ನು ಉಚ್ಚ ಗುಣಗಳಿಂದಲೂ, ದೇಶಸೇವೆಯಿಂದಲೂ ತನ್ನ ಮುಷ್ಟಿಯಲ್ಲಿಟ್ಟುಕೊಂಡಿದ್ದನೆಂಬದು ಸಿದ್ಧವಾಗುತ್ತದೆ ಇಂಥ ಜನತಾತ್ಮನು ಹಿಂದಭೂಮಿಯು ಸಾಂಕ್ರಾಮಿಕ ಅವಸ್ಥೆಯಲ್ಲಿ ಪರಲೋಕಕ್ಕೆ ತೆರಳಿದ್ದು ನಮ್ಮ ದೇಶದ ದುರ್ದೈವವು! ಈ ಹೊತ್ತು ಲೋಕಮಾನ್ಯರ ಹತ್ತನೇ ದಿನ ಎಲ್ಲರೂ ಚೌಪಾಟಿಯ ಮೇಲೆ ಮುಂಜಾನೆ ಸಮುದ್ರಸ್ನಾನದಿಂದ ಶುಚೀರ್ಭೂತರಾಗಿ, ಲೋಕಮಾನ್ಯರಿಗೆ ಉದಕಾಂಜಲಿಯನ್ನು ಭಕ್ತಿಯಿಂದ ನೀಡಿ, ಮಾಧವಬಾಗಕ್ಕೆ ಹೋಗಿ, ಅಲ್ಲಿ ಈಶಪ್ರಾರ್ಥನೆ ಮಾಡಿದರು ಎಲ್ಲ ಹಿಂದು ಮುಸಲ್ಮಾನರ ಅಂಗಡಿಗಳು ಬಂದ ಇದ್ದವು ಈ ಹೊತ್ತು ಇಡೀ ಹಿಂದುಸ್ಥಾನದಲ್ಲಿ ಲೋಕಮಾನ್ಯರ ನಿಧನದಿಂದುಂಟಾದ ದುಃಖವನ್ನು ವ್ಯಕ್ತಪಡಿಸಲು, ಜಾಹೀರು ಸಭೆಗಳು ಜರುಗುವವೆಂದು ಜಾಹೀರಾಗಿದೆ. ನಮ್ಮ ಜಿಲ್ಲೆಯೊಳಗಿನ ಮುಖ್ಯ ಮುಖ್ಯ ಶಹರುಗಳಾದರೂ ಸಭೆಸೇರಿ, ತಮ್ಮ ದುಃಖವನ್ನು ವ್ಯಕ್ತಪಡಿಸುವರೆಂದು ತುಂಬಾ ಕೋರುತ್ತೇನೆ ಇಲ್ಲಿಯ ಸಣ್ಣ ದೊಡ್ಡ ಸಂಸ್ಥೆಗಳೆಲ್ಲ, ರಾಜಕೀಯವಿರಲಿ, ಅರಾಜಕೀಯವಿರಲಿ, ತಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದಾರೆ. ರಾಜಕೀಯ ವಿಷಯಗಳಿಗೆ ಬಹಿಷ್ಕಾರ ಹಾಕಿದ 'ಕೆನರಾ ಯೂನಿಯನ' ಸಂಸ್ಥೆಯು ಸಹ, ನಿನ್ನೆ ಸಭೆಸೇರಿ, ಲೋಕಮಾನ್ಯರ ಕುಟುಂಬಕ್ಕೆ ಶೋಕಪ್ರದರ್ಶಕ ಠರಾವನ್ನು ಕಳಿಸಿತು ಈ ಪ್ರಸಂಗದಲ್ಲಿ ಅಧ್ಯಕ್ಷರಾದ ರಾ॥ ಎಸ್ ವಿ. ಪಾಲೇಕರ, ಬಿ. ಎ, ಎಲ್ ಎಲ್. ಬಿ ಹೈಕೋರ್ಟ ವಕೀಲ, ಇವರು, 'ಲೋಕಮಾನ್ಯರು ದೊಡ್ಡವರು ಯಾಕೆ? ರಾಷ್ಟ್ರೀಯತ್ವದ ಆದ್ಯ ಜನಕರೆಂಬದು ಹೇಗೆ?' ಎಂಬದನ್ನು ವಿಶದವಾಗಿ ನಿವೇದಿಸಿದರು

× × × × × ×

ಕಳೆದ ರವಿವಾರ ಮುಂಜಾನೆ ಲೋಕಮಾನ್ಯರ ಅಸ್ಥಿಗಳನ್ನು ಪ್ರಯಾಗಕ್ಕೆ ಒಯ್ದು, ಒಹು ಸಮಾರಂಭದಿಂದ ಭಾಗೀರಥಿ ನದಿಗೆ ಸಮರ್ಪಿಸಿದರು.

ಯಕೃತಯಾನೆ ಕೂರ್ಮವ್ಯಾಧಿ.

ತಮ್ಮ ಪತ್ರದಲ್ಲಿ ಕೆಳಗೆ ನಮೂದಾದ ವಿಷಯವನ್ನು ಒಂದಾವರ್ತಿ ಪ್ರಸಿದ್ಧಮಾಡೋಣಾದರೆ, ಬಾಲಕರ ಜೀವವನ್ನು ಉಳಿಸಿದ ಪುಣ್ಯವು ಪತ್ರಿಕೆಯವರು ಸಂಪಾದಿಸಿದಂತಾಗುತ್ತದೆ. ಮತ್ತು ಈ ವಿಷಯವು ನನ್ನ ಸ್ವಂತ ಅನುಭವ ಮತ್ತು ಬೇರೆ ಕಡೆಯ ಅನುಭವ ಕೂಡಾ ಖಾತ್ರಿ ಕಂಡಿರುವದರಿಂದ ಇಂಥಾ ವಿಷಯವು ಜನರಿಗೆ ಮಾಹಿತಿಯಾದರೆ ಅಂಥಾ ವ್ಯಾಧಿಯನ್ನು ಹೋಗಲಾಡಿಸಿಕೊಳ್ಳುವದಕ್ಕೆ ಅನುಕೂಲವಾಗುತ್ತದೆಂದು ತಿಳಿದು, ತಮ್ಮ ಕಡೆಗೆ ಕಳುಹಿಸಿರುತ್ತನೆ.

ಚಿಕ್ಕ ಬಾಲಕರಿಗೆ ಉದ್ಭವಿಸುವ ಯಕೃತ ಯಾನೆ ಕೂರ್ಮವ್ಯಾಧಿ (ಲಿವ್ಹರ) ಈ ರೋಗವು ಬಾಲಕರಿಗೆ ಉತ್ಪವಿಸಿದರೆ, ಅದೇ ರೋಗದಿಂದಲೇ ಅವರ ಮರಣ ಉಂಟಾಗುತ್ತದೆ ಈ ರೋಗವು ಅತಿ ಕಠಿಣವಿದ್ದು ಈ ರೋಗದ ನಿವಾರಣೆಗಾಗಿ ಅನೇಕರು ಅನೇಕ ಉಪಾಯಗಳನ್ನು ಮಾಡುತ್ತಾರೆ ಆದರೆ ಸಾಧ್ಯವಾದದ್ದು ಕಂಡುಬರುವದೇ ಅಪರೂಪವಾಗಿರುತ್ತದೆ.

ನಮ್ಮಲ್ಲಿ ನನ್ನ ಮಗನಿಗೆ ಈ ರೋಗವು ಪ್ರಾಪ್ತವಾಗಿ ಅತಿ ಕಠಿಣ ಪ್ರಸಂಗವಾಗಿದ್ದು, ಅನೇಕ ಉಪಾಯಗಳು ಮಾಡಿದಾಗ್ಯೂ ಏನು ಫಾಯದೆಯಾಗದೆ, ಅಷ್ಟರಿಗೆ ಇಲ್ಲಿಯ ಒಬ್ಬ ವೈದ್ಯರಾದ ಆರ್. ಎಸ್ ಪಯ್ ಇವರ ಔಷಧ ನಡಿಸಿದ್ದರಿಂದ, ಆ ರೋಗವು ನಿರ್ಮೂಲವಾಗಿ ಈಗ ಆ ಹುಡುಗನು ಉತ್ತಮ ರೀತಿಯಿಂದ ಆರೋಗ್ಯವಂತನಾಗಿರುತ್ತಾನೆ. ಇದೇ ಪ್ರಕಾರ ಬೇರೆ ೨-೩ ಮಕ್ಕಳಿಗೆ ಆದ ಸದರಿ ರೋಗವು ಇವರ ಔಷಧದಿಂದಲೇ ಖಾತ್ರಿಯಾಗಿ ಗುಣ ಹೊಂದಿ ಆರೋಗ್ಯವಂತರಾಗಿರುತ್ತಾರೆ ಇವರ ಔಷಧವು ಸೌಮ್ಯವಾಗಿದ್ದು, ಸಾವಕಾಶದಿಂದ ಗುಣವಾಗತಕ್ಕದ್ದಾಗಿರುತ್ತದೆ ಮತ್ತು ಇನ್ನೊಂದು ಸಂಗತಿ ಯಾವದೆಂದರೆ, ಗರ್ಭದಲ್ಲೇ ಇವರ ಔಷಧ ನಡಸಿದರೆ, ಗರ್ಭಿಣಿಗೆ ಏನೊಂದು ಉಪದ್ರವಿಯಾಗದೇ, ಮಕ್ಕಳು ದಷ್ಟಪುಷ್ಟರಾಗಿ ಜನಿಸುತ್ತಾರೆ. ನಂತರ ಜನಿಸಿದ ಶಿಶುಗಳಿಗೆ ಕೆಲವು ಕಾಲ ಔಷಧಕೊಡುವ ನೇಮ ನಡಸಿದರೆ, ಅಂಥಾ ಕೆಟ್ಟ ರೋಗವು ಆಗುವದೇ ಇಲ್ಲ. ಇದು ನನಗೆ ಖಾತ್ರಿ ಮನಗಂಡದ್ದಾಗಿರುತ್ತದೆ ಪತ್ರ ವಿಸ್ತಾರವಾಗಬಾರದೆಂದು ಸಂಕ್ಷೇಪವಾಗಿ ನನ್ನ ಅನುಭವವನ್ನು ವ್ಯಕ್ತಪಡಿಸಿದ್ದಾಗಿರುತ್ತದೆ. ಕೃಪಾ ಇರಬೇಕು.

ತಾರೀಖು ೨೨-೬-೧೯೨೦

ಬಾಲಕರ ಹಿತಚಿಂತಕ.

ಕುಮಟೆ ಪೇಟೆ ಧಾರಣೆ.

ಜಿನಸು		ದರ
ರಂಗೂನ ಬಿ. ಗೋಣಿ ೧ಕ್ಕೆ	...	೧೫।—೧೬
ವೃಷ್ಟಿ ಗೆಲಕ್ಕೆ ಮಾನಗಿ	...	೮।
ರಾಗಿ ನಿಬಕ್ಕೆ	..	೧೧॥—೧೨॥
ಗೋಧಿ ಗೋಣಿ ೧ಕ್ಕೆ	...	೧೯—೨೬॥
ಹುರುಳಿ ನಿಬ „	...	೧೪।—೧೫॥
ಕಡಲೆ ನಿಬ ೧ಕ್ಕೆ	...	೧೬—೧೬॥
ತೊಗರಿಬೇಳೆ ಗೋಣಿ ೧ಕ್ಕೆ	..	೨೩—೨೨
ಹೆಸರು ಬೇಲ „	...	೧೬—೨೮
ಮೋರಿಸ ಸಕ್ಕರೆ ಮಣ „	...	೧೩॥—೧೩
ಮೆಣಸಿನ ಕಾಯಿ ಮಣ „	...	೨—೭
ಹಳ್ಳೆಣ್ಣೆ ಮಣ	...	೧೦
ಕೊಬ್ರಿ ಎಣ್ಣೆ ಮಣ	...	೧೧।
ಕೊತ್ತಂಬರಿ ಗೋಣಿ „	...	೧೩—೧೪
ಉಪ್ಪು ಗೋಣಿ „	...	೪-೫೦
ಕಡೆಸಿನ ಸೂರ್ಯ „	...	೪೭-೦
„ ಹಂಸ „	...	೩-೮೦

ಅನುಭವಸಿದ್ಧ ರಾಜ ಔಷದಗಳು !!

ನಿಶ್ಪೃಹಸ್ಯ ತೃಣಂ ಜಗತ್ ॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ

ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು,

ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಜೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉದರಂತವಿಕಾರ, ಮಸ್ತಕಶೂಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ, ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦.

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದದ್ದು. ಗುಳಿಗೆ ೩೦ ಕ್ಕೆ ರೂ ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ— ೧೪ ದಿವಸದ ಔಷಧಕ್ಕೆ ರೂ. ೨-೦-೦ (೩) ಗಜಕರ್ಣನಾಶಕ ಮಲಮು — ಡಬ್ಬಿಗೆ ಆಣೆ ೦-೮-೦ (೪) ಮೂಲವ್ಯಾಧಿ ನಾಶಕಗುಳಿಗೆ — ಏಳು ಬಿಗೆದು ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ. ೨-೦-೦.

ಅನುಪಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ!

ವಿಳಾಸ— **ವೈದ್ಯ ವ್ಹಿ. ಎಸ್. ನಾಡಕರ್ಣಿ ಮತ್ತು ಕಂಪನಿ, ಪೋಸ್ಟ ಶಿರಸಿ.**

ಜಿಲ್ಲಾ ಉತ್ತರಕಾನಡಾ.

ಜಗತ್ಪ್ರಖ್ಯಾತ' ಖಾತ್ರಿದಾಯಕ!! ಬಹುಮಾನಕಾರಕ'

ಮುಖ ಜೀವನಾಮೃತ.

ಈ ಔಷಧವು ಹಲ್ಲು ಕೆಳತ, ಹಲ್ಲು ನೋಯುವ, ಹಲ್ಲು ಅಲುಗಾಡುವ, ಹಲ್ಲೊಳಗಿಂದ ರಕ್ತವ ಕೀವು ಸುರಿಯುವ, ಮುಖದಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ ಇದಲ್ಲದೆ ಬಾಲಗ್ರಹ, ಎಲ್ಲಾ ತರದ ಜ್ವರ, ತಲೆಯ ಬಡಿತ, ವಾಂತಿ, ಹೊಟ್ಟೆಕಚ್ಚೋಣ, ಸಳಸುಳು, ಪ್ಲೇಗ, ಕೊಲರಾ, ಗುಂಟುಗಳಿಗೆ, ಮತ್ತು ವಿಷಕಾರಕ ಪ್ರಾಣಿಗಳು ಕಚ್ಚಿದ ಕಳತ, ಬಾಳಂತಿಯರಿಗೆ ನಂಜು ಏರಿದರೆ, ಈ ೨೦ ಪ್ರಕಾರದ ಮೇಹರೋಗಕ್ಕೆ ಗುಣ.

ಕ್ರಯ ಬಾಟ್ಲಿ ೧ಕ್ಕೆ ಫಕ್ತ ೦-೧೨-೦

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ವ್ಯಾಪಾರೀಕ ಕಂಪನಿ,

ಕುಮಟಾ (ಎನ್. ಕೆನರಾ)

ಜಗತ್ಪ್ರಸಿದ್ಧನಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ ಸ ೧೮೭೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನಸರಿಕೆಯಾಗಿ ತಾ ೧೦-೮ ೧೯೦೮ನೇ ... ದ ತಾ| ... ನೇ ಇಸ್ವಿಯವರಿಗೆ ... ಸಾವಿರ ಬಾಟ್ಲಿಗಳ ಖರ್ಚಾದವು ಮತ್ತು ... ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಬತ್ತು ಸಾವಿರ ಬಾಟಲಿಗಳು ಖರ್ಚಾದವು ಆಂತ ಈವತ್ತಿನವರೆಗೆ ... ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ... ಮೌಲ್ಯವಾದ ಇದೆ ಇದು ಯಾವಕರು ... ಪಕ್ಕೆ ಕಂಡು ಪ್ರತಿಯೊಬ್ಬರ ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ... ಸ್ವೀಕಾರಮಾಡಬೇಕು ಈ ಆರೋಗ್ಯಬಿಂದು ಕರ್ನಾಟಕದ ತಕ್ಕಲ್ಲ ಹೋಗಿ ರೋಗಗಳು ಈ ಅರ್ಕುಶಫಾದಿಂದಲೇ ... ಬಗ್ಗೆ ... ಯಾವತ್ತು ... ಉಪಯೋಗ ... ಸರಟಿಫಿಕೇಟುಗಳು ಸಹ ... ರುತ್ತವೆ ... ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ... ರೋಗರಹಿತರಾಗುವರೆಂಬ ... ರೋಗದ ಪರೀಕ್ಷೆಯ ಸಲುವಾಗಿ ... ಮತ್ತು ... ಬೀಳುವದಿಲ್ಲ ... ಈ ಆರೋಗ್ಯಬಿಂದುವಿನ ಮೇಲೆ ... ರೋಗಗಳ ಮೇಲೆ ಉಪಯೋಗವಾಗಿ ... ಮಾಡಿಕೊಳ್ಳಬೇಕ

ರೋಗದ ನಾಮಗಳು

ಕ್ಷಯರೋಗ ಹವದರೋಗ ಪಾಂಡುರೋಗ ... ಗ ಮಲಬದ್ಧ ಮಹಾಮಾರಿ(ಕಾಲರಾ), ಪ್ಲೇಗ ... ಜ್ವರ ವಿಷಮಜ್ವರ ಇನ್‌ಫ್ಲುಯೆಂಜಾಜ್ವರ ... ರಥಜ್ವರ ಗಂಟಾವಾತ ... ಮೂಗಿನೊಳಗಿನ ಪಿನಸಿ ... ರೋಗವು ... ಹುಣ್ಣು ... ಮತ್ತು ... ಸೋವು ... ಪ, ಆಜೀರ್ಣ ... ಅಜೀರ್ಣ ಹೊಟ್ಟೆಶೂಲಿ ... ಲಿ ಅರತಶೀಶೂಲಿ ನವಶೂಲಿ ಮೂತ್ರಶೂಲಿ ... ಕ ದುರ್ಬಲ ... ಸ್ತ್ರೀಯರ ಮುಟ್ಟ ಶೂಲಿ ... ಸಣ್ಣ ಕೂಸುಗಳ ... ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ ... ಸಣ್ಣ ಕೂಸಗಳಿಗೆ ವೈದ್ಯರಿಗೆ ಸಹ ತಿಳಿಯದೆ ಇದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ... ಅಮೌಲ್ಯ ... ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ... ಬೆಲೆ ಇಟ್ಟಿರುತ್ತದೆ ಒಂದ ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡ ರೂಪಾಯಿ ... ಉದ್ದಿಶ್ಯ ... ಬಾಟ್ಲಿ ಒಂದಕ್ಕೆ ... ಡಜನ್ ಬಾಟ್ಲಿಗಳ ... ನಾಲ್ಕು ಬಾಟ್ಲಿಗಳು ... ಕೊಡುತ್ತೇವೆ ... ಎಂಟು ... ವದ ಒಂದರಿಂದ ...

ಕನ್ ಇಲ್ಲ ಇದಕ್ಕೆ ನಾಲ್ಕು ಆಣೆ ... ಒಂದು ಕಾಲು ತೊಲೆ ಬಾಟ್ಲಿ ... ಒಂದು ಬಾಟ್ಲಿ ... ಕೊಡುತ್ತೇವೆ ... ಎಂಟು ಆಣೆ ಖರುವದು ನಮ್ಮ ಔಷಧವು ... ಹೊರಟರೆ ಮರಳ ತಕ್ಕೊಳ್ಳುತ್ತೇವೆ ... ಮಾಹಿತಿ ... ಕ್ಯಾಟಲಾಗು ... ಬೇಕಾದಲ್ಲಿ ... ಲಗತ ಇದದ ಕೂರ್ ದೊರೆಯಲಿಕ್ಕಿಲ ಅನುಮಾನ ... ತ್ರಿ ... ಕನ್ನಡ ಮರಾಠಿ ಮುಸಲ್ಮಾನಿ ಬಾಷೆಗಳಲ್ಲಿ ... ಪ್ರಕಾರ ... ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ... ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯ ... ಬೇಕು

ಎಚ್ ... ದಕ ...

ಹೆಡ ಆಫೀಸು ರಾಹಾವೂರ ...

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ... — ...

2 ... — ...

3 ... — ...

4 ...

5 ... — ...

... ರೋಗಗಳ ... 14 ದಿವ ...

6 ...

... ರಕ್ತ ... ಸರ್ಟಿಫಿಕೇಟ್ಸ ... ತಿಂಗಳ ... ಹೆಂಗಸರ ... ರೋಗಗಳನ್ನು ನಿವಾರಿಸಿ ಗರ್ಭಕೋಶವನ್ನು ಸರಿಪಡಿಸುತ್ತದೆ 1 ಬಾಟ್ಲಿ ಔಷಧಕ್ಕೆ 1 ಬಾಟ್ಲಿ ... 0-0

ಎಸ್. ಗಣಪಯ್ಯಾ ... ಸನ್ಸ್

... ಹೋರ್ಡರ್ಸ ...

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯವರ ... ವತ್ತು ... ೦೧೨೦ ... ಚರಿತ್ರೆ ... ರಾಜ ... ನಾರದ ಮ ... ರಿತ್ರೆ ೦-೧೨ ... ಕರ್ತವ್ಯ ... ೦-೮- ... ೦ ... ೦-೭-೦ ... ಸತ್ಯಶೋಧ್ಯಾರ ... ೦

ಮಿಳಿಸಿ— ಎಂ. ಎಂ. ಹರ್ಣೇಕರ.

... ೩

ಹೊಸ ರೋಗ "ಓಂ" ಹೊಸ ರೋಗ

ಗುಣ ಬಾರದಿದ್ದರೆ ಹಣಮರಳು

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ... ಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ ತಯಾರಿಸಿರುತ್ತೇವೆ ... ಪಾಕಸೇವನೆಯಿಂದ ... ಮೂತ್ರದ ... ಅಥವಾ ಆದಮೇಲೆ ಧಾತು ಬೀಳುವದು ... ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು ಬಹುದಿವಸದಿಂದ ... ಸೇವಮಾಡಿದ್ದ ... ಸಂಬಂಧಿಯ ... ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ... ಹಸಿವು ... ದಿಂದದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವು ... ಈ ಪಾಕಸೇವನೆಯಿಂದ ... ವಲ್ಲದೆ, ಇನ್ನೂ ಅನೇಕ ಮಹತ್ವದ ಗುಣ ... ಬರುವವು ಇದರ ಅನುಭವವು ಸೇವನೆಯ ... ದಿವಸವೇ ... ಬರುವದು ಸ್ತ್ರೀ ... ವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯ ರೋಗಗಳು ... ವಲ್ಲದೆ ಮುಟ್ಟ ... ದರಿಂದ ಸ್ತ್ರೀಯ ... ರಾಗಿ ಗರ್ಭಧಾರಣೆಗ ಯೋಗ್ಯರಾಗುವ ... ಇದ್ದರೆ ಒಂದು ಡಬ್ಬಿ ... ದಿನ ... ಡಬ್ಬಿ ... ಗುಣ ಬರ ... ನಿದಾನ ಒಂದು ಸಾರಿಯಾದರೂ ... ತರಿಸಿಕೊಂಡು ನೋಡಿರಿ.

... ಒಂದೇ ... ಸಹ ... ಡಬ್ಬಿ ...

... ಡಬ್ಬಿ ... ಡಬ್ಬಿ ...

... ಡಲ್ಪಡುವದು

... — ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ... ಶುದ್ಧ ಬರೆಯಬೇಕು

... — ... ಆಂಡ್ ಬ್ರದರ್ಸ ಮತ್ತು ಕಂಪನಿ

... ಪೇಟೆ, ... ಬೆಳಗಾಂವ

ಗ್ಯಾಸ ದೀವಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀವಗಳು ... ಸಾರ್ವಜನಿಕ ... ಹೊತ್ತಿನಲ್ಲಿ ... ರಾತ್ರಿ ಹೊತ್ತಿನಲಿ ... ದಲ್ಲಿ ... ಇದರಿಂದ ... ಈ ... ಈ ದೀಪಗಳು ... ಎಂಬ ... ಗಳು ಸಹ ಇಲ್ಲ

... ಭಾಡಿಗೆ ... ವಿಚಾರಿಸು

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ.

ಸೆಗಡೇಕರ, ದುಕಾನ, ಕುಮುಟಾ

Printed and published by Kri hnarao L. hav Shenvi at his Star f Kanara Press Kumta

No. Reg. B 1270.

ಷರ್ಷ ೮.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೫.

ಪತ್ರದ ವರ್ಗಣಿ –

ಕುಮಠೆಯಲ್ಲಿ ವರ್ಷಕ್ಕೆ ರೂಪಾಯಿ 2-0-0

ವ್ಹಿ. ಪಿ. ಅಂಚೆಪಟ್ಟಿ ಸಹಿತ ರೂಪಾಯಿ 2-12-0

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ –

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್‌ಅಗಲ) ೮ ಸಾಲುಗಳ ವರೆಗೆ ರೂ. 1 0 0 ಆನಂತರ ಪ್ರತಿ ಸಾಲಿಗೆ 0 2 0.

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿದೆ ಲ್ಲಬೇಕು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವದು

—[ಕುಮಠಾ— ಕಾನಡಾವೃತ್ತ ಗುರುವಾರ, ತಾರೀಖು ೨೬ ಮಾಹೆ ಅಗೋಸ್ತ ಸನ್ ೧೯೨೦ ನೇ ಇಸವಿ.]—

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆವ್ಹರಿ, ಕಣ್ಣು ಕತ್ತಲೆಯಿಂದ ಕಿವುಸೋರುವದು ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆಬಾರದಿರುವದು, ನರವು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ, ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲವನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆ 1ಕ್ಕೆ 1 0 0 3ಕ್ಕೆ 2 10 0 ದೊಡ್ಡ ಸೀಸೆ 1ಕ್ಕೆ 2-0-0 3ಕ್ಕೆ 5 4 0

ಚಂದನಾಸವ.

ಮೂತ್ರ ಕೃಚ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೋಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮಂತಾದ ಈ ಮೇಹರೋಗವನ್ನು ಗುಣ ಮಾಡುತ್ತದೆ

ಬಾಟ್ಲಿ 1 ರ ಕ್ರಯ 1 8 0

ಬಾಟ್ಲಿ 3 ರ ಕ್ರಯ 4 0 0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮೈನೆರೆಯಾಗುವದು, ರಜೋದಯದಲ್ಲಿ ಅತ್ಯಲ್ಪವಾಗಿ ಅತಿರೇಖವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃದ್ಕಂಪ, ಬಿಳಿಪ್ರದರ ಬಿಳಿಸೀರೆ) ಇನ್ನೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ 2/-

ಚಿನ್ ಚಿನ್ ಬಾಮು.

ಎಲ್ಲಾ ತರದ ನೋವು, ತಲೆನೋವು, ಜಕಂ, ಗಾಯ, ಚೇಳು ಕಡಿತ ತಕ್ಷಣ ಗುಣ ಬೆಲೆ ಸುಲಭ, ಗುಣ ಅಧಿಕ ಡಬ್ಬಿ ೧ ಕ್ಕೆ 8 ಆಣೆ ಟಪಾಲ ಖರ್ಚು ಬೇರೆ ಕೆಟಲಾಗಿಗೆ ಬರೆಯಿರಿ ವಿಳಾಸ —

ಮನೋಲ್ಲಾಸಿನಿ ಕಂಪನಿ.

7 ಕಂಕನಾಡಿ, ದಕ್ಷಿಣ ಕಾನಡಾ

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೆಜ್ವರ, ಕಂಪಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು 8 ಔನ್ಸಿನ ಬಾಟ್ಲಿ 1ಕ್ಕೆ ರೂ 1 8 ½ ಡಜನಿಗೆ ರೂ 8 8 1 ಡಜನಿಗೆ ರೂ 16 8

ಮಲೇರಿನ್:— ಮಲೆಜ್ವರದ ಮಾತ್ರೆಗಳು ಪ್ರಯಾಣಸ್ಥರಿಗೆ ಬಹು ಪ್ರಯೋಜನಕರವು 25 60 ಮತ್ತು 100 ಮಾತ್ರೆಗಳಿಗೆ ಆಣೆ 8 ರೂ 1 ಮತ್ತು ರೂ 8-1.

ರಿವುಮೊ ಬಾಮು: ತಲೆಶೂಲೆ ಕರಿಣವಾತ ಇತರ ಎಲ್ಲಾ ನೋವುಗಳಿಗೆ ಕ್ರಯ ಡಬ್ಬಿ 1ಕ್ಕೆ ಆ 8 1 ಡಜನಿಗೆ ರೂ 5-4 0

ಯುಕೆಲಿಪ್ಟಸ್ ಆಯಿಲ್: 1 ಔನ್ಸಿಗೆ ಆ 5. ½ ಡಜನಿಗೆ ರೂ 1-10 1 ಡಜನಿಗೆ ರೂ 3

ಶುಶ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು

ಡ್ರಾಮ್ 1 2 4 ಔನ್ಸ್ 1 2 4.
ಆ 2½ ಆ 3½ ಆ 6 ಆ 11 ರೂ 1 4 ರೂ 2 4

ದೃಷ್ಟಿಚಕ್ರಗಳು

ನಮ್ಮ ದೃಷ್ಟಿ ಪರೀಕ್ಷಕರು 1902 ನೇಯಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಡಾಕ್ಟರೊಡನೆ ಪಕ್ಕಾ ಶಾಗಿರ್ದರಾಗಿ ಪ್ರಾಯಶಃ ದೃಷ್ಟಿಗೂ ತಕ್ಕದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ ಇಲ್ಲಿ ರೋಲ್ಡ ಗೊಲ್ಡ ನಿಕ್ಕಲ ಗೂಡುಗಳೂ, ನಿಶಲಿಗೆ ಹಾಕಿಕೊಳ್ಳುವ ಕಣ್ಣಿಗೆ ತಂಪಾಗುವ ಕನ್ನಡಕಗಳೂ ಇತರ ಎಲ್ಲಾ ಮ್ಹಾಲುಗಳೂ ದೊರೆಯುವದು ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಹೋಗುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ಕಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು

ಪತ್ತೆ:—

ಮಲೇರಿಯಾನಾ ಕಂಪೆನಿ,
7. ಮಂಗಳೂರು.

ಅನುಭವಸಿದ್ಧ ಮಾದ ಔಷಧಗಳು!!!

ನಿಸ್ಪೃಹಸ್ಯ ತೃಣಂ ಜಗತ್ ।

ರಕ್ತಶುದ್ಧಿ, ಧಾತುವೃದ್ಧಿಯ ಮೇಲೆ ಅತಿ ಉತ್ತಮ
ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು,
ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಹೆಂದ್ರಿಯವಿಕಾರ, ನರಗಳ ಅಶಕ್ತತೆ ಅಂಗಾಸ್ತ್ರೀಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ ಉಪದಂಶವಿಕಾರ ಮಸ್ತಕಶೂಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ಪ್ರಕೃತ ಕ್ಷಪೂ ಕಾಂತಿಯೂ, ಸ್ಮರಣಶಕ್ತಿಯೂ, ಕಾಂತ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ್ದು ಗುಳಿಗೆ ೩೦ ಕ್ಕೆ ರೂ ೧ ೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೪ ದಿವಸದ ಔಷಧಕ್ಕೆ ರೂ. ೨-೦ ೦ (೩) ಗಜಕರ್ಣ ನಾಶಕ ಮಲಮು — ಡಬ್ಬಿಗೆ ಆಣೆ ೦-೮ ೦ (೪) ಮೂಲವ್ಯಾಧಿ ನಾಶಕಗುಳಿಗೆ — ಎಳು ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಪಾನಪತ್ರ ಔಷಧಿಯ ಸಂಗಡೆ ಅಂಚೆ ವೆಚ್ಚ ಬೇರೆ।

ವಿಳಾಸ — **ವೈದ್ಯ ವ್ಹಿ. ಎಸ್. ಮೋಡಕ ಮತ್ತು ಕಂಪನಿ, ಪೋಸ್ಟ ಶಿರಸಿ.**
ಜಿಲ್ಲಾ ಉತ್ತರಕಾನಡಾ.

ಕಂಬಳಿಗಳು.

ದೊಡ್ಡ ಕಂಬಳಿಗಳು.

ರೇನ ಕೋಟಿಗೂ ಕೋಟಿಗೂ, ಬರುವಂಥವು, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂಥವು ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ ನಮಗೆ ಬರೆದು ತಿಳಿಸಿರಿ ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,
ದಾವಣಗೇರಿ, ಮೈಸೂರ ಪ್ರಾಂತ.

ನೋಟಿಸು.

ಈ ಕೆಳಗೆ ಸಹಿ ಮಾಡುವವರು— ಕುಮಟಾ ತಾಲೂಕ ಬಗ್ಗೀಗಜ್ನಿ ಗ್ರಾಮ ಮತ್ತು ಬಗ್ಗೀ ಗ್ರಾಮದ ಪೈಕಿ ಕಿಮಾನಿ ಜಂತ್ರಡಿಗೆ ಸಂಬಂಧಿಸಿದ ನಿರ್ದಿಷ್ಟ ಸ್ಥಳಗಳ ಯಾವತ್ತೂ ಖಾತೆದಾರರಿಗೆ ವ ಮೂಲಗೇಣಿದಾರರಿಗೆ ಈ ಮೂಲಕ ಪ್ರಕಟಪಡಿಸುವದೇನೆಂದರೆ —

ಬಗ್ಗೀಗಜ್ನಿ ಗ್ರಾಮದ ಪೂರಾ ಜಮೀನ ವ ಬಗ್ಗೀ ಗ್ರಾಮದ ಪೈಕಿ ನಿರ್ದಿಷ್ಟ ಸ್ಥಳಗಳೂ ಕೂಡಾ, ಅಜಮಾಸ ೫೦೦ ಎಕ್ರೆ ಇಷ್ಟು ಸುಪೀಕ ಜಮೀನುಗಳ ಬೆಳೆಯು ಕಿಮಾನಿ ಜಂತ್ರಡಿಮೇಲೆ ಅವಲಂಬಿಸಿರುವದು ನಿರ್ವಿವಾದದ ಸಂಗತಿ [illegible] ಮಳೆ ಕಾಲದಲ್ಲಿ ೧೫-೨೦ ದಿವಸಗಳವರೆಗೆ ಮಳೆ ಇಲ್ಲದಿದ್ದರೂ, ಸದರಿ ಜಂತ್ರಡಿಯು ಪೂರೈಸುತ್ತಿರುವ ಸಂಗತಿ ಪ್ರತ್ಯಕ್ಷ ಅನುಭವದ್ದಾಗಿದೆ. ಅಂಥಾದ್ದರಲ್ಲಿ ಕೆಲ ವರ್ಷಗಳಿಂದ ನಿಮ್ಮೆಲ್ಲರ ಅನುಭವದ [illegible] ಯಷ್ಟೇ ಸದರಿ ಜಂತ್ರಡಿ [illegible] ಕೆಲಸ ನೋಡುವ ಬಗ್ಗೆ ನೌಕರರು [illegible] ಅವರ ವಾರ್ಷಿಕ ರಿಪೋರ್ಟ, ಮಂಡಳ ಪತ್ರ ಕೂಡಾ, ಸಾಲಿಯಾನ [illegible] ತಗಲುತ್ತಿದ್ದು ನಿಷೇಧಿಸಲ್ಪಡುವ [illegible] ದೆ [illegible] ಕಟ್ಟುವ ಬಗ್ಗೆ [illegible] ಕಳೆದ ಎರಡ ವರ್ಷಗಳಿಂದ ನಮ್ಮ ನಿಮ್ಮ ದಾರಾಶಯದ [illegible] ಖರ್ಚ ಬಗ್ಗೆ ಕೂಡದೆ [illegible] ತ್ತೇರಿ ಆದರೆ ನಮ್ಮ [illegible] ಒಡ್ಡಿನಿಯು ಅಜಮಾಸ [illegible] ಮಾನದಿಂದ ನಮಗೇನೇ ಹೆಚ್ಚಿನ [illegible] ವನು ತಪ್ಪಿಸುವ ಹಿಗ್ಗೆ [illegible] ವರ್ಷಗಳ ಪೂರಾ ಖರ್ಚ ನಾವೇ [illegible] ತ್ತದೆ ಆದರೆ ನಿಮ್ಮೆಲ್ಲರಮೇಲೆ ನಿಮ್ಮ [illegible] ಯುವಂತೆ ಕಳೆದ ಎರಡ ವರ್ಷಗಳಿಂದಾ [illegible] ವನು [illegible] ಈ ತಾರೀಖಿನಿಂದ ೧ ತಿಂಗಳ [illegible] ಗಾಗಿ ಸಲ್ಲಿಸಿ ಪಾವತಿ ಪಡಕೊಳ್ಳಬೇಕು [illegible] ಯಿಸದೆ ಇದ್ದಲ್ಲಿ ಆ ಸಬಂಧ ವಸೂಲಿ ಬಗ್ಗೆ ಕಾಯದೇಶೀರ ಇಲಾಜ ನಡಿಸಿದ್ದಲ್ಲಿ ಆ ಬಗ್ಗೆ ತಗಲುವ ಪೂರಾ ಖರ್ಚ ತೆರಲಿಕ್ಕೆ ನೀವೇ ಜವಾಬದಾರರಾದೀರಿ.

ಈ ಕಿಮಾನಿ ಜಂತ್ರಡಿಯು ಜಿಲ್ಲೆಯ ಎಲ್ಲ ಜಂತ್ರಡಿಗಳಲ್ಲಿ ದೊಡ್ಡದೆಂದು ಎಣಿಸಲ್ಪಡುತ್ತದೆ. ಸದರಿ ಕಿಮಾನಿ ಜಂತ್ರಡಿಯು ಈಗ ಅಜಮಾಸ ೦೦ ವರ್ಷಗಳ ಹಿಂದೆ ಕಟ್ಟಿದ್ದಾಗಿದ್ದು ಈಗ ಅದು ಅತಿ ಜೀರ್ಣವಾಗಿದ್ದು ಅದನ್ನು ಈಗ ಪುನಹಾ ಹೊಸದಾಗಿ ಕಟ್ಟಿಸದೇ ಇದ್ದರೆ ಎಲ್ಲಾ ಜಮೀನುಗಳಿಗೆ ಬಹಳೇ ಅಪಾಯ ಸಂಭವಿಸಿ ಎಲ್ಲರಿಗೂ ಹೆಚ್ಚಿನ ನುಕಸಾನು ಆಗುವ ಸಂಗತಿ ನಿಮಗೆಲ್ಲರಿಗೂ ಗೊತ್ತಿದ್ದ ಮಾತೇ ಸರಿ ಇಂಥ ಸಂಗತಿಯಲ್ಲಿ ನಮ್ಮ ವ ನಿಮ್ಮೆಲ್ಲರ ಹಿತದ ದೃಷ್ಟಿಯಿಂದ ಸದರಿ ಜಂತ್ರಡಿಯನ್ನು ಬರುವ ಬೇಸಿಗೆಯಲ್ಲಿ ಹೊಸದಾಗಿ ಕಟ್ಟಿಸಬೇಕೆಂತ ನಿಶ್ಚಯಮಾಡಿರುತ್ತೇವೆ. ಸದರಿ ಕೆಲಸಕ್ಕೆ ಈಗಿನ ದಿನಮಾನದಲ್ಲಿ ೩೦೦೦-೪೦೦೦ ರದ ವರೆಗೆ ಖರ್ಚು ಆಗಬಹುದಾಗಿ ತೋರುತ್ತದೆ. ಕಾರಣ ಸದರಿ ಮುದ್ದತ್ತಿನೊಳಗೆ ನೀವೆಲ್ಲರು "ಬಗ್ಗೀ" ಯಲ್ಲಿ ಸದರಿ ಕೆಲಸದ ವ್ಯವಸ್ಥೆ ಬಗ್ಗೆ ಒಟ್ಟುಗೂಡಿ ಆ ಸಂಗತಿ ನಮಗೆ ತಿಳಿಸಿ ಸದರಿ ಕೆಲಸದ ಬಗ್ಗೆ ಯೋಗ್ಯ [illegible] ಮಾಡತಕ್ಕದ್ದು. ಇದರಂತೆ ಮಾಡದಿದ್ದಲ್ಲಿ ಯಾ ಸದರಿ ಕೆಲಸದ ಕುರಿತು ಅಲಕ್ಷ್ಯ ಮಾಡಿದ್ದಲ್ಲಿ ಆ ಸಂಬಂಧ [illegible] ಯೋಗ್ಯ [illegible] ಲೆಕ್ಕಪ್ರಕಾರ ಸದರಿ "ಜಂತ್ರಡಿಯ" ಕಟ್ಟೋಣದ ಕೆಲಸ ನಡೆಯಿಸುವದರಲ್ಲಿ ಬಂದೀತು. ಆ ಸಂಬಂಧ ತಗಲುವ ಖರ್ಚ ನೀವೆಲ್ಲರೂ ನಿಮ್ಮ ನಿಮ್ಮ ಪಾಲಿನಂತೆ ಕೊಡಲಿಕ್ಕೆ ಜವಾಬದಾರರಿದ್ದೀರಿ ಕೊಡದ ಇದ್ದಲ್ಲಿ, ವಸೂಲಿ ಬಗ್ಗೆ ಕಾಯದೇಶೀರ ಇಲಾಜ ನಡಿಸಿ ಆ ಸಂಬಂಧ ತಗಲುವ ವಿಶಿಷ್ಟ ಖರ್ಚ ನಿಮ್ಮಿಂದ ವಸೂಲಮಾಡುವದರಲ್ಲಿ ಬರುವದು ತಿಳಿಯಬೇಕು.

ಗೋಕರ್ಣ	ಗಣಪತಿ ಶಿವರಾಮಭಟ್ಟ
ತಾ. ೨೫-८-२०	ಗೋಪಿ

Mr. Venktrao V. Wagh's Candidature.

We are asked to announce that at the earnest desire of over hundred public leaders from all Talukas in Kanara Mr Venkatrao V. Wagh, now First Class Subjudge Karwar, who shortly retires, is going to stand as Candidate for ensuing elections to Provincial Council from Kanara District, and will announce his Candidature in time. The general appeal to electorate is being issued over the signature of the said public leaders. The Election Manifesto will shortly follow.

ಶ್ರೀ. ವೆಂಕಟರಾವ ವಿ. ವಾಘರವರು ಒಬ್ಬ ಉಮೇದವಾರರು.

ಕನ್ನಡಜಿಲ್ಲೆಯ ಎಲ್ಲ ತಾಲೂಕಗಳ ನೂರಕ್ಕಿಂತ ಹೆಚ್ಚು ಸಾರ್ವಜನಿಕ ಮುಖಂಡರ ಆಗ್ರಹದ ವಿನಂತಿಯಂತೆ, ಶ್ರೀಯುತ ವೆಂಕಟರಾವ ವೈ. ವಾಘ — ಸದ್ಯಕ್ಕೆ ಕಾರವಾರದ ಸಬ ಜಡ್ಜ — ರವರು ಬೇಗನೇ ಪೆನಶನು ಪಡೆದು ಈ ಜಿಲ್ಲೆಯ ಪರಿಯಿಂದ ಪ್ರಾಂತಿಕ ಕೌನ್ಸಿಲ ಸಭೆಗೆ ಉಮೇದವಾರರಾಗಿ ನಿಲ್ಲುವವರಿದ್ದಾರೆಂದು ಪ್ರಕಟಿಸಲು ನಮ್ಮ ಮನಾಪೇಕ್ಷೆಯಾಗಿದೆ. ನೇಮಿಸಿದ ಮುದ್ದತ್ತಿನೊಳಗೆ ಅವರು ತಮ್ಮ ಉಮೇದವಾರಿಯನ್ನು ಜಾಹೀರ ಮಾಡುವವರಾಗಿಯೂ ಸದ್ಯಕ್ಕೆ ಸದರಿ ಪ್ರತಿಷ್ಠಿತ ಗೃಹಸ್ಥರ ಕಡಿಂದ ಮತದಾರರಿಗೆ ವಿನಂತಿ ಪತ್ರಿಕೆಯು ಹೊರಡಿಸಲ್ಪಡುವದೆಂದೂ, ಜಾಹೀರ ಪತ್ರಿಕೆಯು ಸಹ ಬೇಗನೇ ಕಳಿಸಲ್ಪಡುವದೆಂದು ನಮಗೆ — ತಂತಿ ಬಂದದೆ.

—ಸಂಪಾದಕ ಕಾ. ವೃ.

ಓಂ

बोले तैसा चाले। त्याची वंदावी पाउलें॥

ರಾ। ರಾ। ಕಾನಡಾವೃತ್ತ ಕರ್ತರಿಗೆ–

ತಮ್ಮ ಲೋಕಮಾನ್ಯ ಮತ್ತು ವಜನದಾರ ಪತ್ರದಲ್ಲಿ ಕೆಳಗಿನ ಮಜಕೂರಿಗೆ ಜಾಗೆ ಸಿಗುವದಾಗಿ ಪೂರ್ಣ ನಂಬಿಗೆಯದೆ

'ಹಳಿಯಾಳ ಅನಾಥ ಗೋಶಾಲೆ' ಸ್ಥಾಪನವಾಗಿ ಈಗ ಎರಡು ವರ್ಷಗಳ ಮೇಲಾಯಿತು ಇದರ ಎಲ್ಲ ಶ್ರೇಯಸ್ಸು ಗೊ॥ ಭ॥ ಚೌಂಡೆ ಮಹಾರಾಜ ಇವರಿಗೆ ಅದೆ ಈ ಹೊತ್ತಿನವರೆಗೆ ಗೋಶಾಲೆಯು ಭಿಕ್ಷಾವೃತ್ತಿಯ ಮೇಲೆಯೇ ನಡೆದಿರುವದಾಗಿ ತಿಳಿಯುತ್ತದೆ ಸ್ವಯಂಸೇವಕರು ಕೆಲಸ ಮಾಡುತ್ತಿದ್ದದ್ದು ಅಭಿನಂದನೀಯವು ಸ್ವಲ್ಪ ಸ್ವಾರ್ಥತ್ಯಾಗ ಮಾಡಿದಹೊರತು, ಕೆಲಸ ಒಳ್ಳೇ ರೀತಿಯಿಂದ ನಡೆಯಲೊಲ್ಲದು ಈಗ ಭಿಕ್ಷುಕರಸಂಖ್ಯೆ ಬಹಳೇ ಬೆಳೆದದೆ ಆದರೆ ನಿಸ್ವಾರ್ಥತ್ಯಾಗಿ ಭಿಕ್ಷುಕರ— ಸಾರ್ವಜನಿಕ ಕೆಲಸದ ದೆಸೆಯಿಂದ ಭಿಕ್ಷೆ ಬೇಡುವವರ ಸಂಖ್ಯೆ ಮಾತ್ರ, ಬೆರಳಿನಮೇಲೆ ಎಣಿಸುವಷ್ಟು ಅದೆ!! ಭಿಕ್ಷೆ ಬೇಡುವದು ಅಪಮಾನಕರವಾದದ್ದೆಂದು ಕೆಲ ಜನರು ತಿಳಿಯುತ್ತಾರೆ ಆದರೆ ಶ್ರೀ ಸಮರ್ಥ ರಾಮದಾಸ ಮಹಾರಾಜರು ಭಿಕ್ಷೆಯ ಮಹತ್ವವನ್ನು ವರ್ಣಿಸಿರುವರು (ದಾಸ ಬೋಧ ದಶಕಗಳ ಸಮಾಸ [illegible] ಅದನ್ನು ಒಂದಾವರ್ತಿಯಾದರೂ ಓದಬೇಕೆಂದ ನಾನು ಶಿಫಾರಸು ಮಾಡುವೆನು ಸಮರ್ಥ ಮಹಾರಾಜರು ಅನ್ನುತ್ತಾರಲ್ಲ— ब्राह्मणाची मुख्य दीक्षा॥ मागावी पाहिजे भिक्षा॥ [illegible] भिक्षा॥ [illegible] पाहिजे॥ ಬ್ರಾಹ್ಮಣರಾಗಬೇಕೆಂತ ಬಹಳ, ಜನರ ಪ್ರಯತ್ನ ನಡೆದದೆ ಗುಣ ಕರ್ಮಗಳಿಂದ ಬ್ರಾಹ್ಮಣರಾಗಲಿಕ್ಕೆ ಇದೊಂದು ಸಾಧನವದೆ ರಾಮದಾಸರ ಸಮರ್ಥೋಕ್ತಿಯಂತೆ ಬ್ರಾಹ್ಮಣನಾಗಲಿಕ್ಕೆ ಹೋಮ ಹವನ ಬೇಡ, ಮಡಿ ಉಟ್ಟದ ಅಡಚಣೆ ಇಲ್ಲ ಸಂಸಾರ ಬಿಟ್ಟು ವನವಾಸದಲ್ಲಿ ಹೋಗಲಿಕ್ಕೆ ಬೇಡ ಈಪ್ರಕಾರ ಅಗದಿ ಸುಲಭವಿದ್ದ ಬ್ರಾಹ್ಮಣತ್ವವನ್ನು ಸ್ವೀಕರಿಸಿ ರಾಮದಾಸರ ಉಪದೇಶದಂತೆ ನಾಚಿಕೆಯನ್ನು ಬಿಟ್ಟು ಗೋ ಮಾತೆಯ ದೆಸೆಯಿಂದ ಭಿಕ್ಷೆಯನ್ನು ಬೇಡಲಿಕ್ಕೆ ಸಿದ್ಧರಾಗಿರಿ ಭಿಕ್ಷೆ ಬೇಡಲಿಕ್ಕೆ ಯಾದದ ಪ್ರತಿಬಂಧವಿಲ್ಲ ಶ್ರೀಮತ್ ಶಂಕರಾಚಾರ್ಯರ ಆಜ್ಞಾಪತ್ರ ಬೇಡ ಸರಕಾರದ ಲಾಯಸನ್ಸು ಬೇಡ ಈ ಪ್ರಕಾರ ಎಲ್ಲ ತರದಿಂದ ಸೋಕಳೀಕ ಇದ್ದಮೇಲೆ ಪ್ರಿಯ ಬಾಂಧವರೇ, ಗೋ ಮಾತೆಯ ದೆಸೆಯಿಂದ ಭಿಕ್ಷೆ ಬೇಡಲಿಕ್ಕೆ ಹಿಂದೆ ಮುಂದೆ ಯಾಕೆ ನೋಡುತ್ತೀರಿ? ವಿಷ್ಣು ಸಂಕಷ್ಟದು भिक्षा पात्र अवलंबणे, जळो जिणे लाजिरवाणे [illegible] ಈ ಕ ಕಾರಣದ ಮಹಾರಾಜರು ಕ್ಷತ್ರಿಯ [illegible] ಕಲಿಸಿದ ಕಲಿಮಿನಂತೆ ಮುಂದೆ ತಂದಾರು ಸ [illegible] ಯಾಸಿ ಸಕಲ ಈ [illegible] ಯಾರ ದೆಸೆಯಿಂದದೆ ಇವರ ವಿಷಯ ಮುಂದೆ ಮಾಡಬೇಕಾಗಿಲ್ಲವೋ ನಿರ್ಲಜ್ಜರಾಗಿ ಸ್ವತಃ ಹೊಟ್ಟೆ ತುಂಬಿಕೊಳ್ಳುವದ ದೆಸೆಯಿಂದ, ಯಾರು ಭಿಕ್ಷೆ ಬೇಡುವರೋ ಅವರ ದೆಸೆಯಿಂದಲೇ ಇದು ಅದೆ ಸುಖವನ್ನು ಮತ್ತು ಶ್ರೀಮಾನ ಗೃಹಸ್ಥರ ತರುಣ ಮಕ್ಕಳು 'ಪ್ರೊಫೆಸರ' ಕೈ ಬಿಟ್ಟು ಈ ಕಾರ್ಯವನ್ನು ಮಾಡಲಿಕ್ಕೆ ಹಿಂದೆ ಮುಂದೆ ನೋಡುವರು ಶ್ರೀ ಛತ್ರಪತಿ ಶಿವಾಜಿಮಹಾ

(೬ ನೇ ಪಾನಿನಮೇಲೆ ನೋಡಿರಿ)

ಲೋ॥ ಟಿಳಕರ ಚರಿತ್ರದಿಂದಾಗುವ ಬೋಧ, ಮತ್ತು ಅವರ ರಾಷ್ಟ್ರೀಯ ಉನ್ನತಿಯ ಉಚ್ಚ ತತ್ವಗಳು.

Stone walls do not a prison make
Nor iron bars a cage,
Minds innocent and quiet take
That for a hermitage,

सामाजिक सुधारणा असो किंवा राजकीय सुधारणा असो, ती करण्याकरिता भिन्न भिन्न उपायाची योजना करावी लागते. राजकारणात मुत्सद्दीपणा जसा जरूर आहे, तशीच संकटें सोसण्याची तत्परताही अवश्य आहे राजकीय प्रगति ह्मणजे, सरकार व प्रजा यांच्यामधील झगडा होय, हें इतिहासावरून व अनुभवावरून स्पष्ट आहे हा झगडा निकोपास न जाता, प्रजेच्या इच्छा व आकांक्षा लक्षात घेऊन सरकाराने आपण होऊनच योग्य वेळीं सुधारणा करीत असावे हे अगदीं इष्ट आहे. व जें सरकार ह्या तत्वाप्रमाण वागत असते त्याची सत्ता चिरकाल टिकून त्याला राज्यक्रांतीपासून बिलकूल भय नसते. हा इतिहासाचा सिद्धांत सर्वसामान्य आहे. परंतु दुर्दैवानें वास्तविक स्थिति अशी आहे की, कित्येक सरकाराच्या ठिकाणीं सुधारणाबुद्धीच फार थोडीं असते, तर कित्येक सरकारांची 'सुधारणाबुद्धी योग्य वेळी जागृत होत नाहीं, हिंदुस्थान सरकारची सुधारणेस अतिशय प्रतिकूलता आहे असें नाहीं, परंतु त्यांना लोकमत चांगले कळत नाहीं ह्मणून ह्मणा, किंवा अन्य कारणास्तव जागृती व्हावी तितकी होत नाहीं अशी स्थिती असल्यामुळें, हिंदुस्थानाच्या राजकीय उन्नतीचा मार्ग नेहमींच सोपा राहील असें नाहीं. सरकारानें योग्यवेळी सुधारणा करून तो मार्ग कठीण करू नयें अशी आमची मनापासुन इच्छा आहे व ह्यांतच सरकाराचें खरें हित आहे. परंतु ही गोष्ट आपल्या हातात नसल्यामुळें, चळवळ करणें एवढेंच काय तें आपलें कर्तव्य आहे. तें करीत असता जाणूनबुजून कायद्याचें उल्लंघन करणें, किंवा राजसत्तेचा उपमर्द करणें हें अर्थातच कोणत्याही विचारी किंवा दूरदृष्टी मनुष्याच्या हातून होणार नाहीं. परंतु हें आपलें कर्तव्य सरकारास सदासर्वदा प्रियच वाटेल असें नाहीं, व अप्रियता असली ह्मणजे गैरसमज, राग, इत्यादिकांना जागाही रहाणारच. अशा बिकट परिस्थितींत आपण आपलें कर्तव्यकर्म करीत असतां, जीं संकटें येतील तीं सहन केल्याशिवाय व जो स्वार्थत्याग करावा लागेल तो केल्याशिवाय, गत्यंतर नाहीं हें राष्ट्रीय उन्नतीचें तत्व आहे. व रा टिळकांच्या चरित्रापासून जो बोध घ्यावयाचा तो हा कीं, ह्या तत्वाचें सत्यत्व व महत्व त्यांनीं आपल्या देशबांधवाच्या निदर्शनास आणलें आहे. त्यांचीं सर्वच राजकीय मतें व त्यांच्या सर्वच राजकीय पद्धती कोणाला पसंत पडोत किंवा न पडोत, परंतु राजकीय उन्नतीचा मार्ग सोपा नाहीं, त्याकरितां सतत उद्योग केला पाहिजे, चिकाटीनें वागलें पाहिजे व आपलीं विचारापूर्वक ठरविलेलीं तत्वें सोडून न देतां, "सुख—दुःखें समेकृत्वा लाभा—लाभौ जया जयौ!" ह्या समबुद्धीनें प्रेरित होऊन आलेल्या संकटाशीं टक्कर देऊन आपण आपलें कर्तव्य कर्म करीत राहिलें पाहिजे,' ह्या रा० टिळकांच्या चरित्रातून दिसून येणाऱ्या मुख्य तत्वाचा अधिकाधिक प्रसार होऊन, त्याप्रमाणें राजकीय सुधारकाकडून जरूर व इष्ट प्रसंगीं अधिकाधिक उन्नतीचीं मधुर फळें चाखावयास मिळाल्याशिवाय राहणार नाहींत हे अगदीं निश्चित आहे. हिंदुस्थानाच्या राजकीय प्रगतीच्या इतिहासात लोकांना राजकीय शिक्षण देणाऱ्यांच्या व संकटांना न जुमानतां, राजकीय चळवळीचें काम अव्याहतपणें चालविणाऱ्या राजकीय पुढाऱ्यांच्या वर्गात रा टिळक यांना उच्चस्थान मिळाल्याशिवाय राहणार नाहीं.

(रा ग. प्रधान —टिळक अंक)

———

आवेडा येथील नवीन होणारें प्ल्यांटेशन् बंदकरा.

रा रा कानडावृत्त पत्रकर्ते यांसी—

सुपा पेठा कीं, आवेडा येथील आह्मी रहीवासी रयतलोक विनंती करीतो कीं, या खालील ल्यार ओळीस आपले सुंदर पत्रीं जागा देवून प्रसिद्ध करावी, अशी आशा आहे,

आह्मी कानडा जिल्हा, सुपापेठा, सुपा फिर्केतील, आवेडा गावचे रहीवासी रयत व, खातेदार सरकारकडे विनंती करीतो कीं, सुपा शहरापासुन आमचे गांव ४ मैल असून, या गावालगत शेतीचे किनाऱ्यास फारेष्ट खातेकडून नगलबेट येथील फारेष्ट कंट्राक्टर मि के. व्हि सामत यांना २५० एकर जगा, दरसाल १० एकर प्रमाणे तोडून जाळून त्यांत सदर कंट्राक्टर यांणीं नाचणा (रागी) करून, त्या बरोबरच सदर जागेंत सागवानी रोप लावुन, लागवड करून द्यावी, याप्रमाणे १९ वर्षाचे करारानें दिल्याचे समजत. ज्या गांवीं सागवानचे नाव हुद्धां नाहीं असें असुन, तिकडे सागवानी रोपांची नवी प्ल्याटेशन तयार करून, रयतेस कोंडमारा करणें हे गांव पड पाडण्याचेंच चिन्ह होय, असे ह्मटल्याशिवाय आमच्यानें रहावत नाहीं. कारण, आमच्या गुरांना पावसाळ्यांत व, उन्हाळ्यांत चाऱ्याकरीतां व पाण्याकरीतां तिकडे हमेशा जाणेचा प्रसंग येत असतो. शिवाय शेतापासून फार लांब नसलेवरून, आह्मास हरघडी अडचण भासणारच आहे करीतां आवेडा येथें (आमचे गावात) नवीन होणारें सागवानी रोपाचें प्ल्याटेशन बंद करावें, अशी आमची सरकारकडे आग्रहाची विनंती आहे. कारण—

याच पेठ्यात (हुडसे) गावीं वरील प्रमाणे शेताच्या किनाऱ्यास फारेष्ट खात्याकडून या सालीं (तुर्त) प्ल्याटेशन करणें करितां कुंपी केली असून, त्यात सागवानी रोप लावल्यामुळें, शिवाय सदर कुंपीस कंपौंड नसून, शेतालगत असल्यानें केव्हां तरी एक वेळ चुकून गुरें गेल्यामुळे, गुरांना सुपा येथील कोंडवाडा पाहावा लागला. शिवाय फारेष्ट अमलदाराकडून दंड ही येणारच, (न आल्यास फार बरे होईल) यात संशय नाहीं. यामुळें सदर हुडसे गावीं कित्येक पिढीपावेतों जिवापलिकडे मेहनत घेवून, बागाइत वगैरे करून असलेल्या रा पांडुरंग वेंकटेश भट्ट (बाळभट), या नावाच्या खातेदार गृहस्थाना फारेष्ट प्ल्याटेशन करीतां होणाऱ्या गुरांच्या त्रासामुळें गावास कायमचा रामराम ठोकून, पोट भरेल तिकडे जाणेचा प्रसंग आला आहे. हे घडघडीत उदाहरण प्रत्यक्ष आमच्या डोळ्यासमोर घडून असलेलें पाहून, "पुढच्यास ठेचा लागताच, मागचा हुशार" या न्यायानें आह्मास आज नाही तरी उद्यां (पुढील सालीं) वरील प्रमाणे आमच्यावर पाळी येण्याचा प्रसंग आहेच. करीतां, सरकारने आमचे गावालगत प्ल्याटेशन करणेचा विचार बंदकरून, प्ल्याटेशन करणेचीच हौस, फारेष्ट अमलदाराना लागली असल्यास, आमच्या गावाहून २ मैल अंतरावर बेचराख असणाऱ्या उसोडा गावात प्ल्याटेशन करावें. नसलेस, आह्मास, तरी हेमुर बाजुकडील दिशा पत्करा अशी आगाऊ सुचना देवून, प्ल्याटेशन करा अगर आह्मागरीब रयतेची सहानूभूती मनांत वागवून, आमचे आवेडा गावालगत होणारे नवीन प्ल्याटेशन तावडतोब बंद करून, आह्मांगरीब रयतेस सुखी ठेवा, अशी आमची नम्रपण, आग्रहाची विनंती आहे.

आता याबद्दल आमचे ईकडील मुबई कायदे कौन्सीलचे सभासद नामदार बेळवी ही वरील हकीगत अवलोकन करून, यापुढे असे होणारे प्रयोगास आळा घालणेची योग्य तजवीज करितील अशी आशा आहे.

आता ही हकीगत वृत्तपत्रीं देणेचें कारण येवढेच कीं अर्जाने आमची लवकर दाद लागणे कठीण आहे. करीता असे करणे भाग पडले, कळावें, हे विनती.

गरीब रयत

आवेडा येथील सर्व रयता तर्फे,

ಕಾನಡಾವೃತ್ತ.

ಗುರುವಾರ ತಾರೀಖು ೨೬ ಮಾಹೆ ಅಗೋಸ್ಟ ೧೯೨೦

ಸ್ವರಾಜ್ಯದ ಶ್ರೀಗಣೇಶಾಯ ನಮಃ.

(ಲೇಖಾಂಕ ೨)

ಯಾವದೇ ಒಂದು ರಾಷ್ಟ್ರದ ಉದಯೋನ್ಮುಖ ಅವಸ್ಥೆಯು ಯಾವಾಗಲೂ ಹೃದಯಂಗಮವಾಗಿರುವದು. ಇಂಥ ಅವಸ್ಥೆಯೊಳಗೆ ಸುದೈವದಿಂದ ನಮ್ಮ ದೇಶವು ಈಗ ನಮ್ಮ ಸ್ವರಾಜ್ಯದ ಸ್ವಪ್ನವು ಪೂರ್ಣ ಪ್ರಸ್ಫುಲ್ಲಿತವಾಗುವ ಪೂರ್ವದಶೆಯಲ್ಲಿದೆ. ನಮ್ಮ ಸ್ವರಾಜ್ಯದ ಬಾಲ್ಯಾವಸ್ಥೆಯು ಮುಗಿದು, ತಾರುಣ್ಯದ ಸ್ಥಿತಿಯು ಪ್ರಾಪ್ತವಾಗುತ್ತಿದೆ. ಅದಕ್ಕಾಗಿಯೇ, ಇದಕ್ಕೆ ನವಯುಗವೆಂದೆನ್ನುವರು. ಜನರ ಮನಸ್ಸಿನೊಳಗೆ ಮಹತ್ವಾಕಾಂಕ್ಷೆಗಳು ವೃದ್ಧಿಂಗತವಾಗುತ್ತಲಿವೆ. ಇವುಗಳನ್ನು ಪೂರ್ಣ ಪಡಿಸಿಕೊಂಡ ಹೊರತು, ನಾವು ತಡೆಯೆವು ಎಂಬ ದೃಢನಿಶ್ಚಯವು ಸಹ ಅವುಗಳ ಸಂಗಡಲೇ ಬೆಳೆಯುತ್ತಲಿವೆ. ರಾಷ್ಟ್ರೀಯ ಜಾಗ್ರತಿಯ ಇಂಥ ಉತ್ಕಟ ಅವಸ್ಥೆಯೊಳಗೆ ಹಿಂದೀ ಜನತೆಯಿಂದ ಸ್ವರಾಜ್ಯವನ್ನು ದೂರವಿಡುವದು ಯಾರಿಗೂ ಶಕ್ಯವಿಲ್ಲ ಮತ್ತು ಅದು ಜಾಣತನದ್ದೂ ಆಗಲಿಕ್ಕಿಲ್ಲ.

ನಾವು ಸ್ವರಾಜ್ಯವನ್ನು ನಿಶ್ಚಿತವಾಗಿ ಸಂಪಾದಿಸದಿರೆವು ಎಂಬ ಆತ್ಮವಿಶ್ವಾಸವು ನಿಖಿಲ ಹಿಂದೀ ಜನರೊಳಗೆ ಇಂದಿಗೆ ಉಂಟಾದದ್ದು, ರಾಜ್ಯಕರ್ತರು ನಮಗೆ ಅಭಿವಚನವನ್ನಿತ್ತಿರುವರೆಂಬ ಕಾರಣದಿಂದಲ್ಲ. ಅದು ನಮ್ಮ ಬುದ್ಧಿಯ, ಒಕ್ಕಟ್ಟಿನ ಮತ್ತು ಕಾರ್ಯಕ್ಷಮತೆಯ ಶಕ್ತಿಯಿಂದ ಉಂಟಾಗಿದೆ. ಅನ್ಯರ ವಚನಗಳ ಮೇಲೆ, ಆಶ್ವಾಸನೆಗಳ ಮೇಲೆ ಭಾರವನ್ನಿಟ್ಟು ನಡೆಯುವ ದಿವಸಗಳು ಹಿಂದಾದವು. ಹಿಂದುಸ್ಥಾನದ ಭೂತಕಾಲವೇ ಅದರ ಭವಿಷ್ಯಕಾಲವನ್ನು ನಿರ್ದಿಷ್ಟಮಾಡಿಟ್ಟಿರುವದು. ಭೂತಕಾಲವು ನಮಗೆ ಬಿರುಸಾಗಿ ಕಲಿಸಿದ್ದರಿಂದ ಭವಿಷ್ಯತ್ಕಾಲದ ವಿಷಯವಾಗಿ ಜಾಗ್ರತವಿರುವಷ್ಟು ನಾವು ಜಾಣರಾಗಿದ್ದೇವೆ. ಅನ್ಯರು ಕೊಟ್ಟರೆ ಮಾತ್ರ, ನಮಗೆ ಸ್ವರಾಜ್ಯವು ದೊರೆಯುವದು ಎಂಬ ಮರುಳುತನದ ಮತ್ತು ಅಸ್ವಾಭಾವಿಕ ಕಲ್ಪನೆಯು ಭೂತಕಾಲದಲ್ಲಿ ನಮ್ಮನ್ನು ಆಕ್ರಮಿಸಿದ್ದರೂ, ಇಂದಿಗೆ ಅದು ಬಹುತರ ನಷ್ಟವಾಗಿದೆ. ಹೀಗಾಗಿ ನಮ್ಮ ಹಳೇ ಭ್ರಾಮಕ ವಿಚಾರಗಳು ನಿಃಶೇಷವಾಗುತ್ತ ನಡೆದಾಗಲೇ, ಹೊಸ ತತ್ವಗಳೂ, ಹೊಸ ಸತ್ಯಗಳೂ, ಸ್ವಚ್ಛವಾಗಿ ನಮ್ಮ ಕಣ್ಣುದುರಿಗೆ ಬಂದಿರುವವು. ಇಷ್ಟಕ್ಕೆ ಆತ್ಮವಿಶ್ವಾಸವು ಪ್ರಬಲವಾಗುತ್ತಿದೆ, ಮತ್ತು ಈ ಹೊಸ ಪ್ರವೃತ್ತಿಯ ಪರಿಣಾಮವು ಕಲ್ಯಾಣಕರವಾಗಲೇಬೇಕು. ಸ್ವರಾಜ್ಯವು ಮತ್ತು ಅದರ ಕಾಯಿದೆಯಂತೆ ರಚಿಸಲ್ಪಡುವ ಜವಾಬದಾರ ರಾಜ್ಯಪದ್ಧತಿಯು— ಇವೆರಡಕ್ಕೂ ಅಂಕಿತವಾಗಿ ನಮಗೆ ದೊರೆಯಬಹುದಾದ ಸ್ವತಂತ್ರತೆಯ ಹಕ್ಕುಗಳನ್ನು ಪರಿಪೂರ್ಣವಾಗಿ ನಾವು ಉಪಭೋಗಿಸಬೇಕೆಂಬ ತೀವ್ರ ಭಾವನೆಯು ರಾಷ್ಟ್ರದ ಅಂತಃಕರಣದೊಳಗೆ ಚೇತಿಸಲ್ಪಟ್ಟಿದೆ. ಜವಾಬದಾರಿಯ ಸ್ವರಾಜ್ಯದ ಮತ್ತು ಸನದಶೀರ ಸ್ವತಂತ್ರತೆಯ ಹೊರತು, ನಮ್ಮ ರಾಷ್ಟ್ರೀಯ ಜೀವಿತವು ಸಫಲವಾಗುವದು ಶಕ್ಯವಿಲ್ಲೆಂದು ಪ್ರತಿ ಒಬ್ಬರಿಗೆ ಕಂಡುಬಂದದೆ

ಇಂಥ ಭಾವನೆಯು ಹಿಂದೀ ಪ್ರಜೆಗಳೊಳಗೆ ನೆಲೆಗೊಂಡಿದೆಂದು ರಾಜ್ಯಕರ್ತರೊಳಗಿನ ಮುತ್ಸದ್ದಿಗಳಾದರೂ ಕಂಡು ಹಿಡಿದಿರುವರು. ನಮ್ಮೊಳಗಿನ ರಾಷ್ಟ್ರೀಯತನದ ಭಾವನೆಗಳ ಸತ್ಯತೆಯ ಬಗ್ಗೆ ರಾಜ್ಯಕರ್ತರೊಳಗಿನ ನಮ್ಮ ಪ್ರತಿಪಕ್ಷಿಗಳು ಕೊಟ್ಟ ಒಂದೊಂದು ಕಬೂಲಿ ಜಬಾಬೆಂತಲೇ ಹೇಳಬಹುದು. ನಮ್ಮೊಳಗಿನ ರಾಷ್ಟ್ರೀಯತ್ವದ ಆತ್ಮವಿಶ್ವಾಸವೇ ಪಾರ್ಲಿಮೆಂಟಿನ ಕೈಯಿಂದ ನಾವು ಕಳೆದ ಸಂಚಿಕೆಯಲ್ಲಿ ಹೇಳಿದ ಅಗಸ್ಟ ಪ್ರಕಟನೆಯನ್ನು ಹೊರಡಿಸಿರುವದು. ಇಂಥ ಜಾಹೀರ ಅಭಿವಚನವನ್ನು ಬಾದಶಹರ ಮಂತ್ರಿಮಂಡಳದಿಂದ ಕೊಡಿಸಿ, ಅದರಂತೆ ಬೇಗನೇ ಕಾಯಿದೆಯನ್ನು ಏರ್ಪಡಿಸಿ, ಹಿಂದುಸ್ಥಾನದ ಮತ್ತು ಇಂಗ್ಲಂಡದ ಹಿತವನ್ನು ಎಷ್ಟರ ಮಟ್ಟಿಗೆ ಭಾರತ ಮಂತ್ರಿಗಳು ಸಾಧಿಸಿದ್ದಾರೆಂದು ಪುರಾವೆಯು ಬೇಕಾದರೆ, ಈಗಿನ ಯುದ್ಧಖಾತೆಯ ಮಂತ್ರಿಗಳಾದ ಚರ್ಚಿಲ್ ಸಾಹೇಬರ ಮಾತಿನಲ್ಲೇ ತೋರಿಸಲಿಕ್ಕಾಗುವದು. ಪಂಜಾಬದೊಳಗಿನ ಅತ್ಯಾಚಾರಗಳನ್ನು ನಿಷೇಧಿಸುವಾಗ, ತಮ್ಮ ಭಾಷಣದೊಳಗೆ ಒಂದೆಡೆಯಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದೇನಂದರೆ— ಮೊಂಟೆಗ್ಯೂ ಸಾಹೇಬರು ಸ್ವರಾಜ್ಯದ ಕಾಯಿದೆಯನ್ನು ಏರ್ಪಡಿಸಿ, ಹಿಂದುಸ್ಥಾನದೊಳಗಿನ ಅಸಂತೋಷವನ್ನು ಕೈಲಾದಷ್ಟು ದೂರಪಡಿಸದಿದ್ದರೆ, ಹಿಂದುಸ್ಥಾನದ ಗತಿಯು ಇಂದಿಗೆ ಐರ್ಲಂಡದಂತೆ, ಇಜಿಪ್ತದಂತೆ, ಎಷ್ಟು ಕಷ್ಟಕರವಾಗುತ್ತಿತ್ತು, ಎಷ್ಟು ಭಯಂಕರವಾಗುತ್ತಿತ್ತು, ಎಂದು ಏನೂ ಹೇಳಲಾಗದು. ಸಾರಾಂಶ ನಮ್ಮಲ್ಲಿ ರಾಷ್ಟ್ರೀಯತನದ ಆಕಾಂಕ್ಷೆಗಳು ಜನಿಸಿದ್ದಾವೆ, ಅವುಗಳನ್ನು ಪೂರ್ಣಪಡಿಸುವ ಆತ್ಮವಿಶ್ವಾಸವು ಉಂಟಾಗಿದೆ, ಎಂಬುದನ್ನು ರಾಜ್ಯಕರ್ತರು ಅರಿತಿರುವರು. ಇದರೊಳಗಿನ ಮರ್ಮವನ್ನು ತಿಳಕೊಳ್ಳುವದೇ, ನಿಜವಾದ ಮುತ್ಸದ್ದಿತನವು. ಅದಕ್ಕಾಗಿಯೇ ಮುತ್ಸದ್ದಿಗಳ ಜಾಣತನವನ್ನು ಹೊಗಳಬಹುದು

ಕಳೆದ ೧೫೦ ವರ್ಷಗಳ ಬ್ರಿಟಿಷ ಆಳಿಕೆಯ ಇತಿಹಾಸದೊಳಗೆ ಹಿಂದುಸ್ಥಾನದ ರಾಜ್ಯಪದ್ಧತಿಯ ವಿಷಯವಾಗಿ, ಪಾರ್ಲಿಮೆಂಟು ಹಲವು ಕಾಯಿದೆಗಳನ್ನು ಏರ್ಪಡಿಸಿದೆ. ಇವುಗಳೊಳಗೆ ೧೮೬೧ ನೇ ಇಸ್ವಿಯಲ್ಲಿ ಇಂಡಿಯನ್ ಕೌನಸಿಲುಗಳ ಮೊದಲನೇ ಕಾಯಿದೆಯು ಏರ್ಪಡಿಸಲ್ಪಟ್ಟಿತ್ತು. ಇದರೊಳಗೆ ಸ್ವರಾಜ್ಯದ ಉದ್ದೇಶಗಳ ಗಂಧವೂ ಸಹ ಇಲ್ಲೆಂದು ಹೇಳಬಹುದು. ಆ ನಂತರ ೧೮೯೨ ನೇ ಇಸ್ವಿಯಲ್ಲಿ ಲಾರ್ಡ ಡಫರಿನ್ ಸಾಹೇಬರ ಕಾರಕೀರ್ದಿಯೊಳಗೆ ಎರಡನೇ ಕಾಯಿದೆಯಾಯಿತು. ಇದರೊಳಗೆ ಕೆಲವು ಹಿಂದೀ ಮೆಂಬರರನ್ನು ನೇಮಿಸುವದರ ಬದಲು, ಆರಿಸುವ ಹಕ್ಕು ಕೆಲವು ಲೋಕಸಂಸ್ಥೆಗಳಿಗೆ ದೊರೆಯಿತು. ಇದರೊಳಗಾದರೂ ಮತಸ್ವಾತಂತ್ರ್ಯದ ಹಕ್ಕು ಜನರಿಗೆ ಅತ್ಯಲ್ಪ ದೊರೆಯಿತೆಂತಲೇ ಹೇಳಬೇಕು. ಇದೇ ಅಮಲು ೧೬ ವರ್ಷಗಳ ತನಕ ನಡೆದು, ೧೯೦೯ರಲ್ಲಿ ಹೊಸ ಕಾಯಿದೆಯಾಯಿತು. ಈ ಕಾಯಿದೆಗೆ ಮೋರ್ಲೆ ಮಿಂಟೋ ಸುಧಾರಣೆಗಳೆಂದೆನ್ನುವರು. ಈ ಸುಧಾರಣೆಗಳೊಳಗೆ ಜನರು ಆರಿಸಿದ ಪ್ರತಿನಿಧಿಗಳ ಸಂಖ್ಯೆಯು ಕೆಲ ಮಟ್ಟಿಗೆ ಏರಿತೆಂಬುದು ನಿಜವು. ಆದರೆ, ಈ ಸುಧಾರಣೆಗಳ ಜನಕರಾದ ಮೋರ್ಲೆ ಸಾಹೇಬರು ಆಗಲೇ ಸ್ಪಷ್ಟವಾಗಿ ಹೇಳಿದ್ದೇನಂದರೆ— ಹಿಂದೀ ಜನರು, ಈಗಿನ ಮಾತಂತೂ ಬಿಡಿರಿ, ಭವಿಷ್ಯಕಾಲದಲ್ಲಿ ಸಹ, ಎಷ್ಟೂ ಉದಾರ ದೃಷ್ಟಿಯನ್ನು ಒಗೆದರೂ, ಸ್ವರಾಜ್ಯಕ್ಕೆ ಪಾತ್ರರಾದವರೆಂದು ಸ್ವಪ್ನದಲ್ಲಿ ಸಹ ಎಣಿಸಲಿಕ್ಕಾಗದು. ಹಿಂದೀ ಜನರು ಸ್ವರಾಜ್ಯವನ್ನು ಬೇಡುವದೆಂದರೆ, ಸಣ್ಣ ಮಕ್ಕಳು ಆಕಾಶದೊಳಗಿನ ಚಂದ್ರಮನನ್ನು ಬೇಡುವಷ್ಟು ಮರುಳತನದ ಸಂಗತಿಯಾಗಿದೆ. ಇಂಥ ಮಂತ್ರಿಗಳು ಮಾಡಿದ ಸುಧಾರಣೆಗಳಲ್ಲಿ ಸ್ವರಾಜ್ಯದ ಹಕ್ಕುಗಳು ನಮಗೆ ಎಷ್ಟರಮಟ್ಟಿಗೆ ಲಭಿಸಿದ್ದಾವೆಂದು

—ನವಾವೃತ್ತ — ತಾ ೨೭-೮-೧೯೩೦

(... ನ ವಾನಿನ ಮೇಲಿಂದ ಮುಂದರಿಸಿದ್ದು)

... ವ ಒಬ್ಬ ಕಾಜಿಯು ಗೋರಕ್ಷಣ ಮಾಡ ... ಉಪದೇಶ ಮಾಡುತ್ತ ತಿರುಗಾಡುತ್ತಿರು ... ಮುಸಲ್ಮಾನರು ಹಿಂದು ಜನರಿಗೆ ಗೋರಕ್ಷ ... ಉಪದೇಶ ಮಾಡುವ ಪ್ರಸಂಗ ... ಎಷ್ಟು ಲಜ್ಜಾಸ್ಪದವು! ಪ್ರಿಯ ಬಾಂಧ ... ದರೂ ಕಣ್ಣು ತೆರೆಯಿರಿ ಕೇಟ ಸಾಪ ... ಗೋರಕ್ಷಣೆ ಮಾಡಿ ಏನು ಮಾಡಬೇಕಾ ... ಸೀವು ಅನ್ನಬಹುದು! ನಿಮ್ಮೆಲ್ಲರ ... ಹಾಲು ಮತ್ತು ಧಾನ್ಯ ಬೇಕಾಗಿಲ್ಲವೋ? ... ನರಂತೆ ಗೋಭಕ್ತರೆಲ್ಲರು ಕೂಡಿ ... ದಿದ್ದಲ್ಲಿ, ನಿಮ್ಮ ಸ್ಥಿತಿ ಏನಾದೀತು? ಹೊಲ ... ಗೆ ಎತ್ತುವಿರಿ? ಗಾಡಿಯಲ್ಲಿ ... ತು ... ಗೆ ಮಾಡುವಿರಿ? ಎಲ್ಲ ಹೊಲಗಳು ಪಡ ... ದನ್ನ ಬರದಿದ್ದರೆ, ಏನು ತಿನ್ನುವಿರಿ? ... ಸುಜ್ಞ ನಾಗರಿಕರೇ, ಗೋರಕ್ಷಣದ ... ಗೂಡಿರಿ ಗೋವಧ ಪ್ರತಿಬಂಧಕ ಕಾ ... ಮಾಡುವರೆ, ನಮ್ಮ ದಯಾಳು ಸರಕಾರ ... ಗೆ ಬೇಡಿಕೊಳ್ಳಿರಿ

... ದ ಕೊರ್ತೆ ಯಾವದೊಂದು ಕಾರ್ಯಪ್ರ ... ಕರು ಮತ್ತು ವೈಶ್ಯರು— ವ್ಯಾಪಾರಿ ... ಪದತು ಮಾಡಬೇಕೆಂದು ಪ್ರಾರ್ಥಿಸುವೆನು. ... ಕಾ ... ... ರಲ್ಲಿ ಬರೆದಿರುವದು. ದ್ರವ್ಯ ... ಯು ... ನೇ ವಾನಿನಮೇಲೆ ಮುಂದರಿಸಿದೆ)

ಇಹವೃತ್ತ.

... ಪಿ— ಮಳೆ ಮಳೆ ಚೆಲೋ ಬೀಳು ... ದಿನೆ ೮— ಇಂಚು ಆಯಿತು ... ಸಸ್ಯಕ್ಕೆ ನೆಟ್ಟಗಿವೆ ಅತಿತ್ತ ಅಕ್ಕಿಯ ... ಇಳಿದರೂ, ಇಲ್ಲಿ ಆ ಮಾನದಿಂದ ಧಾರಣೆ ... ಇಲ್ಲವಾದ್ದು ಬಡಬಗ್ಗರಿಗೆ ಅಹಿತವಾಗಿದೆ ... ವರ್ಷ ಇದೆ ಕಾರ್ಯಸಲ್ಲಿ ಇಲ್ಲಿಯ ಮಂ ... ಶ್ರೀನಿವಾಸ ನಾಯ್ಕರು ದಾಸಾಕೃಷ್ಣಪ್ಪ ... ಗ ಮಗ್ಗರೆ ಮೂವರಮೇಲೆ ಕೊಟ್ಟ ಕಳ ... ಲ್ಲಿ ದೋಷನಿವೃತ್ತರಾಗಿ, ಆ ಪ್ರಕ ... ಸಭಾಗರೆಂಬುವರು ಆ ಫಿರ್ಯಾದಿಯ ... ಗಾದ ಮಾನನಷ್ಟ, ಧನ ನಷ್ಟಕ್ಕಾಗಿ, ... ಕ್ಕೆ ಮಾಡಿದ ಸಿವಿಲ ದಾವೆಯ ಚಿತ್ರಾ ... ಯಿಂದ ರೂಪಾಯಿ ೧೬೫ ಕ್ಕೆ ತೀರ್ಮಾನ ... ಅವರು ಸಹಿಸಿದ ಕಷ್ಟನಷ್ಟ ಅಪಮಾನ ... ನದಿಂದ ಚಿಕ್ಕಣ್ಣನ ನ್ಯಾಯವಾಗಿದೆಂದೂ, ... ರದು ಆರೋಪಿರ ಈ ಸಂಬಂಧದ ಮೊಕ ... ಪಲಿತಾಂಶವು ವಿಶ್ವಾಸಘಾತದಿಂದ ಆಳ ... ಯಿತೆಂದೂ, ತಿಳಿಯುತ್ತದೆ! ಪಾಪ! ... ವರ್ಷ ಹೊಸದಾಗಿ ಈ ತಾಲೂಕ ಉಪ್ಪಿನ ... ಪ್ರಮುಕ್ಕೆ ಗೋಚರವಾದ ಸೀ ... ಗುಮಾ ... ತ್ತನೆ ಜಂಗಲ ಉತ್ಪನ್ನ ಮಾಡಾಯಿ ... ದಾರಿಗಳಿಗೆ, ಹಿಂದು ನೆನೆನಿದ್ದರಾಯಿತು! ... ಹೆಜ್ಜೆ ಮುಂದೆ ಹಾಕುವದೇ ಅವರ ಧ್ಯೇಯವು. ... ಬರುವ ಸಪ್ಟಂಬರ ತಿಂಗಳ ೩೦ ನೇ ತಾರೀ ... ಮುಂಬಯಿ ಯಿಂದ ಅಗಬೋಟಿಗಳು ಕೊ

... ರ ತ್ರಿದೆ.
... ಸುಧಾ
... ಕ್ಕೆ ನಾ.
... is not
... n, It is
... admini-
... e asoci
... itiation,
... ಕಾಯಿ
... ಜಬಾಬ
... ಕೊಡಮಾ
... ನ್ಯವನ್ನು
... ಫಿರ್ಯಾದ
... ರ್ಲಮೆಂಟ
... ೧೯೧೯ ನೇ
... ನ ಆಕ್ಟ.
... ನೇ ಇಸ
... ರೆ, ಅವುಗ
... ತಿಧಾನಕರ
... ಸ್ವರಾಜ್ಯ
... ದರಿಯುವ
... ಈ ವರು
... ತರವು ೩೦,
... ಕಡಿಮೆ
... ಮೆ ಮಾಡಿ
... ರ್ಲಮೆಂಟು,
... ಂದ ಹೊರ
... ಂದೀ ಪ್ರಜೆ
... ಬಲು ವೇಗ
... ವುಗಳನ್ನು
... ವಿಲಂಬ
... ಕತೆಯು ರಾ
... ಪ್ರಮಾಣ
... ಸ್ವತಂತ್ರ
... ನೆ ದೊರಕು
... ವಕಾಶವಿದೆ
... ಷ್ಟ ಪ್ರಕಟ
... ಂಗತವಾಗು

... ು.

... ಲಾರ್ಡ ಸಿಂಹ
... ಗವರ್ನರರಾಗಿ
... ತರವು ಜಾಹೀರ
... ಹಿಂದುಸ್ಥಾನ
... ಗಳಾಗಿದ್ದರು,
... ಪಾರ್ಲಿಮೆಂ
... ಮಂತ್ರಿಗಳಾಗ
... ಇನ್ನು ಹಿಂದಿ
... ಕರರಾಗುವ ಅ
... ಯಿದೆ 'ದೇವೋ

ನ ಜಾನಾತಿ' ಎಂದು ಹೇಳುವ ಪುರುಷರ ಭಾಗ್ಯಸಂಬುದು ಇದೇ ಅಲಾಹಾಬಾದಿಸತಿಯಾಗುವಂಥ ಸನ್ಮಾನವನ್ನು ಪಡೆದದ್ದಕ್ಕಾಗಿ, ಲಾರ್ಡ ಸಾಹೇಬರಿಗೆ, ಅಭಿಮಾನಪೂರ್ವಕ ನಾವು ಅಭಿನಂದಿಸುವೆವು, ಮತ್ತು ಇವರ ಕೈಯಿಂದ ಬಿಹಾರ ಪ್ರಾಂತದ ಜನರ ಕಲ್ಯಾಣವಾಗಲೆಂದು ಬಯಸುವೆವು. ಇನ್ನು ಹಿಂದಿ ಲೋಕನಾಯಕರೊಳಗೆ ಕಲ್ಲುಗಳ್ಯಾವವು, ರತ್ನಂಗಿಗಳ್ಯಾವವು, ಎಂಬುದನ್ನು ಪರೀಕ್ಷಿಸಿ ನೋಡಿ, ಇಂಥ ಸೇವಕರಿಗಳನ್ನು ಮಾಡುತ್ತಾರೆಂಬು ತಿಳಿಯುವವರು ತಿಳಿಯಲಿ ನಮಗಂತೂ, ಹಿಂದೀ ಜನರು ಗವರ್ನರರಾಗಲಿಕ್ಕೆ ಪಾತ್ರರಿದ್ದಾರೆಂಬ, ಬಂಗಾಲ ಸಕಲ ಸಚಿಯ ಅಷ್ಟು ಹೊಡೆದ ಸರ್ಟಿಫಿಕೇಟನ್ನೇ, ಹಿಂದೀ ಜನರಿಗೆ, ಈ ನೇಮಣೂಕಿಯಿಂದ ಕೊಟ್ಟಂತಾಗಿದೆಂದು ಹೇಳಲು ಸಂಕೋಚವೇನೂ ಕಾಣುವದಿಲ್ಲ. ಇಂಥ ನ್ಯಾಯದೃಷ್ಟಿಯ ಔದಾರ್ಯಕ್ಕಾಗಿ ಆ ಪೂ ಬಾದಶಹರನ್ನೂ, ಸರಕಾರವನ್ನೂ, ಕೃತಜ್ಞತೆಯಿಂದ ಕೊಂಡಾಡುವೆವು ಇದೇ ಸಮಯ, ಹಿಂದುಸ್ಥಾನ ಸರಕಾರದ ಸೆಕ್ರೆಟರಿಯ ಮುಂಡಳದೊಳಗೆ, ಮೂರನೆ ಹಿಂದಿ ಮಂತ್ರಿಯ ನೇಮಣೂಕಿಯು ಜಾಹೀರಾಗಿದೆ ನಾ ಶಾಫಿ,ನಾ. ಶವರ್ಣ ಮಂತ್ರಿಗಳ ಜೊತೆಗೆ, ಡಾ। ತೇಜಬಹಾದೂರ ಸಪ್ರುಗಳೆಂಬ ವಿಖ್ಯಾತ ಕಾಯಿದೆ ಪಂಡಿತರನ್ನು ಕಾಯಿದೆ ಮಂತ್ರಿಗಳಾಗಿ ಸರಕಾರವು ನೇಮಿಸಿದೆ. ಹಿಂದುಸ್ಥಾನ ಸರಕಾರದ ಕಾರಭಾರದ ಧೋರಣದೊಳಗೆ ಈ ಮೂರು ಹಿಂದಿ ಮಂತ್ರಿಗಳು ಹಿಂದಿ ಲೋಕಮತವನ್ನು ಪ್ರತಿಬಿಂಬಿಸುವರೆಂದು ಹೊಸ ಧೋರಣದಿಂದ ಜನರ ಗುಣಗಾಣನರು ಹೆಚ್ಚೆಚ್ಚು ಮಂತ್ರಿಗಳಷ್ಟೇ ಹಿಂದಿ ಜನರಿದ್ದು, ಇನ್ನು ನಾಲಡು, ಕಾರಭಾರದ ಮೇಲೆ ಹಿಂದೀತನದ ಕಳೆಯು ಸ್ಪಷ್ಟವಾಗಿ ಹೊಳೆಯಬೇಕು ಇಂಥ ಅತಿಬಾರದ ಮತ್ತು ಸಾಹಸದ ಕಾರ್ಯವನ್ನು ಜರುಗಿಸಲಿಕ್ಕೆ, ಅವರಿಗೆ ಶಕ್ತಿಯನ್ನೂ ಮನೋಧೈರ್ಯವನ್ನೂ ದೇವರು ಕೊಡಲೆಂದು ಬಯಸಿ, ಡಾ ಸಪ್ರು ಮಹಾಶಯರನ್ನು ಅಭಿನಂದಿಸುವೆವು

---

೩ ಇಲೆಕ್ಷನ ಕಾನೂನುಗಳಂತೆ ಮತದಾರರ ಯಾದಿಯೊಳಗೆ ಅವಶ್ಯಕ ತಿದ್ದುಪಾಟಗಳನ್ನು ಮಾಡಿಕೊಳ್ಳುವ ಅವಧಿಯು ೨೦ನೇ ತಾರೀಖಿಗೆ ತೀರಿತು ಆದರೆ, ನನ್ನ ಹೆಸರು ದಾಖಲಾಗಿದೆಯೋ, ಇಲ್ಲವೋ, ಎಂಬ ಚಿಂತೆಯನ್ನು ಕೆಲವರು ಇನ್ನೂ ಮಾಡುತ್ತಲಿದ್ದಾರೆ ಮತದಾರರಾಗಲಿಕ್ಕೆ ಲಾಯಖರ್ಯಾರು, ನಾಲಾಯಖರ್ಯಾರೆಂದೂ, ಇನ್ನೂ ಕೆಲವರಿಗೆ ತಿಳಿದಿಲ್ಲ ಯಾದಿಯನ್ನು ನೋಡಿ, ಲಾಯಖರಿದ್ದು ಹೆಸರು ಹುಡುಕಿದರೂ, ಈ ಯಾದಿಯೊಳಗೆ ಅದು ಕಾಣುವದಿಲ್ಲೆಂದು ಹೇಳಿ, ಸಬ್ಬ ಕೋರ್ಟಗಳಿಗೆ ಅರ್ಜಿ ಮಾಡದಿದ್ದವರೂ, ಅರ್ಜಿಮಾಡಬೇಕೆಂದು ಮನಸ್ಸಿದ್ದರೂ, ಅರ್ಜಿಯ ನಮೂನೆ ತಿಳಿಯದಿದ್ದವರೂ, ಎಷ್ಟೋ ಮಂದಿ ಹಳ್ಳಿಗರಿರುವರೆಂದು, ಎಲ್ಲ ಜಿಲ್ಲೆಗಳಲ್ಲಿ ಕಂಡುಬಂದಿದೆ. ಇದರೊಳಗೆ ಅಸ್ವಾಭಾವಿಕ ಪರಿಣಾಮವೇನಿಲ್ಲ. ಇಲೆಕ್ಷನ್ ಕಟ್ಟಳೆಗಳು ಮೊದಲೇ ದೇಶಿ ಭಾಷೆಗಳಲ್ಲಿ ಪ್ರಕಟಿಸಲ್ಪಡಲಿಲ್ಲ, ಅವುಗಳನ್ನು ಹಳ್ಳಿಗಳಲ್ಲಿ ಹಂಚಲೂ ಇಲ್ಲ. ಇದಲ್ಲದೆ ಇದು ಮೊದಲನೇ ಇಲೆಕ್ಷನವು ಜನರಿಗೆ ಅದರ ಅನುಭವವು ಮುಂಚೆ ಎಂದೂ ದೊರೆತದ್ದಿಲ್ಲ. ಹೀಗಾಗಿ ಇದೆಲ್ಲ ಗೊಂದಲವೇನೆಂಬು ಅನೇಕ ಮತದಾರರಿಗೆ ತಿಳಿಯದಿರುವದು ಸಹಜವು. ಇಂಥ ಪರಿಸ್ಥಿತಿಯಲ್ಲಿ ಯಾದಿಯನ್ನು ೧೦ ದಿವಸಗಳೊಳಗೆ ಓಪನ್ ಓದಿ ಅದರ ತಿದ್ದುಪಾಟದ ಅರ್ಜಿ ಮಾಡುವಷ್ಟು ಮಾಹಿತಿಯು ಹಳ್ಳಿಗಳೊಳಗಿನ ಮತದಾರರಿಗೆ ಮೊದಲೆ ದೊರಕಿರುವದೆಂದು ಅನುಮಾನಿಸಿ, ಅಷ್ಟು ಅಲ್ಪ ಅವಧಿಯನ್ನು ನಿಶ್ಚಿತಮಾಡಿದ್ದು, ದೊಡ್ಡ ತಪ್ಪಾಗಿದೆಂದು ನಮ್ಮ ಮತವು. ನಮ್ಮಲ್ಲಿಯ ಕೋರ್ಟುಗಳಲ್ಲಿ ಎಷ್ಟು ಅರ್ಜಿದಾಖಲ ಆಗಿದ್ದಾವೆಂದು, ಇನ್ನು ತಿಳಿಯುವದು. ಪುಣೆ, ಮುಂಬಯಿಗಳಲ್ಲಿ ಮಾಡಿದಂತೆ ಮತದಾರರಿಗೆ ನಮ್ಮಲ್ಲಿಯ ಉಮೇದವಾರರು ಆ ಅವಧಿಯೊಳಗೆ ತಕ್ಕ ಸಹಾಯವನ್ನು ಮಾಡುವ ಪೂರ್ವಯೋಜನೆಯನ್ನೂ ಮಾಡಿದ್ದಿಲ್ಲ ಹೀಗಾಗಿ ಯಾರಿಗೆ ದಾರಿಲ್ಲೆಂಬಂತೆ, ನಮ್ಮಲ್ಲಿಯ ಮತದಾರರ ಹಾಡಾಯಿತು. ಇವನ್ನೆಲ್ಲ ನೋಡಿ, ನಮಗೀಗ ಒಂದು ಉಪಾಯವು ಸೂಚಿಸುತ್ತದೆ. ಈ ಹತ್ತು ದಿವಸಗಳ ಅವಧಿಯನ್ನು ಮತ್ತೂ ೧೫ ದಿವಸಗಳಿಂದ ಬೆಳಿಸಿ ಮತದಾರರ ಯಾದಿಯನ್ನು ಪೂರ್ಣ ಪಡಿಸಿಕೊಳ್ಳುವದೇ ಈ ಉಪಾಯವು. ಅವುಗಳ ಸದುದ್ದೇಶ ಸಫಲವಾಗಬೇಕಾದರೆ, ಇಂಥ ಸವಲತ್ತನ್ನು ಸರಕಾರವು ಕೊಡಲೇಬೇಕೆಂದು ನಮ್ಮ ಬೇಡಿಕೆಯು

---

೭. ಕಲಕತ್ತೆಯೊಳಗೆ ಸಪ್ಟಂಬರ ೪ ನೇ ತಾರೀಖಿನಿಂದ ಮೂರು ದಿವಸಗಳ ತನಕ, ಹಿಂದೀ ರಾಷ್ಟ್ರೀಯ ಸಭೆಯ ಜಾದಾ ಅಧಿವೇಶನವು ನೆರೆಯುವದು. ಲಾಲಾ ಲಜಪತರಾಯರೆಂಬ ಅತಿ ವಿಖ್ಯಾತ ಪಂಜಾಬೀ ಮುಖಂಡರು ಅಧಿವೇಶನದ ಅಧಿಪತಿಗಳಾಗಿ ಆರಿಸಲ್ಪಟ್ಟಿರುವರು (೧) ಖಿಲಾಪತ ಮತ್ತು ಪಂಜಾಬ ಪ್ರಕರಣದಿಂದುಂಟಾದ ರಾಜಕೀಯ ಪರಿಸ್ಥಿತಿ (೨) ಅಸಹಕಾರಿತೆ, (೩) ಸುಧಾರಣಾ ಕಾಯಿದೆಯ ಕಾನೂನುಗಳು, ಮತ್ತು ಅವುಗಳ ವಿಷಯವಾಗಿ ಜನರು ಸ್ವೀಕರಿಸಬೇಕಾದ ಧೋರಣ, ಈ ಮೂರು ಮಹತ್ವದ ವಿಷಯಗಳ ಬಗ್ಗೆ ಹಿಂದೀ ರಾಷ್ಟ್ರದ ಲೋಕಶಾಹಿಯ ನಿರ್ಣಯವನ್ನು ವ್ಯಕ್ತಪಡಿಸುವದು ಜಾದಾ ಸಭೆಯ ಉದ್ದೇಶವಾಗಿದೆ ಇಷ್ಟು ನಿಕಡೆಯ ರಾಷ್ಟ್ರೀಯ ಪ್ರಶ್ನೆಗಳನ್ನು ಬಿಡಿಸುವ ಪ್ರಸಂಗವು ಜನತೆಗೆ ಬಂದೊದಗಿದ್ದಿಲ್ಲ ಹಿಂದಿ ರಾಜಕಾರಣದೊಳಗೆ ಮುತ್ಸದ್ದಿತನವೆಷ್ಟಿದೆ, ದಿಟ್ಟತನವೆಷ್ಟಿದೆ, ಲೋಕಮತದ ಸಾಮರ್ಥ್ಯವೆಷ್ಟಿದೆ ಎಂಬುವನ್ನು ಈ ಸಭೆಯ ನಿರ್ಣಯಗಳು ತೋರಿಸುವವು. ಜನತೆಗಾದ ಅನ್ಯಾಯವನ್ನು ದೂರಪಡಿಸಿ, ನ್ಯಾಯವನ್ನು ದೊರಕಿಸಲಿಕ್ಕೆ ನಮಗೆ ಮುಂದಿನ ಸನದಶೀರ ದಾರಿಯನ್ನು ತೋರಿಸಲಿಕ್ಕೆ, ಈ ನಿರ್ಣಯಗಳೇ ಆಧಾರಭೂತವಾಗುವವು ವರಿಷ್ಠ ಕೌನ್ಸಿಲ ಸಭೆಯು ಮೊನ್ನಿನ ಪ್ರಾಸಂಗಿಕ ಭಾಷಣದಲ್ಲಾದರೂ, ಗವರ್ನರ ಜನರಲ ಲಾರ್ಡ ಚೆಮ್ಸ್‌ಫರ್ಡ ದೊರೆಗಳು, ಖಿಲಾಪತ ಅಸಹಕಾರಿತೆ, ಮತ್ತು ಪಂಜಾಬ ಪ್ರಕರಣದ ವಿಷಯವಾಗಿ ನುಡಿದ ಮಾತುಗಳಿಂದ, ಲೋಕಮತದ ತೃಪ್ತಿಯಾಗದು; ಅದರ ಶಾಂತಿಯಾಗದು ಎಂಬು ಹೇಳಿ ಹೊರತು ಗತ್ಯಂತರವಿಲ್ಲ ಪಂಜಾಬದೊಳಗಾದ ಅನರ್ಥವು, "ಆದದ್ದಾಯಿತು, ಇನ್ನು ಅದನ್ನು ತೊಳೆದು ಹಲಿಗೆಯಮೇಲೆ ಬರಿಯುವಾ" ಎಂಬ ಉಪದೇಶವು ಜನರ ಮನಸ್ಸಿನೊಳಗಿಂದ ಎಷ್ಟು ತೊಳೆಯಲಿಕ್ಕಾಗುವದು? ಖಿಲಾಪತ ಪ್ರಶ್ನೆಯು ಬರೆ ಹಿಂದು ಮುಸಲ್ಮಾನರ ಪ್ರಶ್ನೆಯಾಗಿಲ್ಲ, ಇಡೆ ಏಶಿಯಾ ಖಂಡದ ಭಾವಿ ರಾಜಕಾರಣಕ್ಕೆ, ಅದರ ನಿಕಟ ಸಂಬಂಧ ಬಂದಿರುವದು. ತುರ್ಕ ತಹನಾಮೆಯ ಪರಿಣಾ

ಗಳು ಕಲ್ಪನಾತೀತವಾಗುವವೆಂದು, ಅದರ ವಿಷಯ ಹಿಂದೀ ರಾಷ್ಟ್ರವು ಎಚ್ಚರಾಗಿ ಕರ್ತವ್ಯವನ್ನು ಜರುಗಿಸಬೇಕಾಗಿದೆ. ಈ ಕಾರಣ, ರಾಷ್ಟ್ರೀಯ ಸಭೆಯ ನಿರ್ಣಯಗಳ ಕಡೆಗೆ ಜನತೆಯು ಕಣ್ಣಿಟ್ಟು ಕೂತಿರುವದು

---

೪. ಶಿರ್ಶಿಯ ನಿವಾಸಿಕರು, ತಮಗೊಂದು ಸರಕಾರಿ ಹ್ಯಾಸ್ಕೂಲನ್ನು ಅನುಗ್ರಹಿಸಬೇಕೆಂದು, ಸರಕಾರಕ್ಕೆ ಮಾಡಿದ ಮನವಿಗೆ, ಮೆ॥ ಡಾಯರೆಕ್ಟರು, ಬೇಡಿಕೆಯನ್ನು ಕೊಡಲಾಗದೆಂದು ವಿಷಾದಪೂರ್ವಕ ತಿಳಿಸಿರುವರು. ಈ ಹುಕುಮಿನಿಂದ ಹೊಸ ಧೋರಣದಂತೆ, ಕಾನಡಾ ಜಿಲ್ಲೆಗೆ ಮತ್ತೊಂದು ಸರಕಾರಿ ಹ್ಯಾಸ್ಕೂಲು ದೊರೆಯುವ ಲಕ್ಷಣವೇನೂ ಕಾಣುವದಿಲ್ಲೆಂದು ನಿಶ್ಚಿತವಾಗಿ ಹೇಳಬಹುದು. ಇಂಥ ಮಹತ್ವದ ನಿರ್ಣಯಗಳನ್ನು ಕೊಡುವಾಗ, ವಿಶೇಷತಃ 'ನಾಸ್ತಿ' ಪರವಾದ ಹುಕುಮನ್ನು ಹೊರಡಿಸುವಾಗ ಅದರ ಸಮರ್ಪಕ ಕಾರಣಗಳನ್ನು ಹುಕುಮಿನಲ್ಲೇ ನಮೂದಿಸಿದರೆ, ನಿರ್ಣಯವು ಹಿತ ಸಮ್ಮತವಾದರೂ ಆಗುವದು. ವಿದ್ಯಾರ್ಥಿಗಳ ಪ್ರಮಾಣದಿಂದ, ಕಾನಡಾ ಜಿಲ್ಲೆಯ ಘಟ್ಟದಮೇಲಿನ ಇಂಗ್ರಜಿ ಶಿಕ್ಷಣದ ವಿಸ್ತಾರದ ಪ್ರಮಾಣದಿಂದ, ಇಲ್ಲವೇ, ಇಂಥ ಶಿಕ್ಷಣ ವಿಷಯಕ ಕಾರಣಗಳಿಂದ, ಶಿರ್ಶಿಯಲ್ಲಿ ಹ್ಯಾಸ್ಕೂಲಿನ ಆವಶ್ಯಕತೆಯಿಲ್ಲೆಂದು, ಸಾಧಾರ ಪ್ರತಿಪಾದಿಸಿ ಹುಕುಮು ಕೊಟ್ಟಿದ್ದರೆ, ಇನ್ನು ವಿವಾದವೇ ಇಲ್ಲಾಗಿತ್ತು. ಆದರೆ ಶಿರ್ಶಿಗೆ ಹ್ಯಾಸ್ಕೂಲು ಬೇಡೆಂಬ ನಿರ್ಣಯವು ಸರಕಾರಕ್ಕೆ ಮಾನ್ಯವಿಲ್ಲೆಂದು ಅದೇ ಹುಕುಮಿನಿಂದ ಹೇಳಬೇಕಾಗಿದೆ. ಯಾಕೆಂದರೆ, ಖಾಸಗೀ ಹ್ಯಾಸ್ಕೂಲನ್ನು ತೆರೆದರೆ, ಸರಕಾರಿ ಗ್ರಾಂಟು ಕೊಡುವ ಯೋಜನೆಯಾಗುವದೆಂದು, ಹುಕುಮು ಹೇಳುತ್ತದೆ. ಒಟ್ಟಿಗೆ, ಸರಕಾರಿ ಹ್ಯಾಸ್ಕೂಲಿನ ಭಾರವನ್ನು ಹೊತ್ತುಕೊಳ್ಳಲಿಕ್ಕೆ ಸರಕಾರವು ಸಿದ್ಧವಿಲ್ಲೆಂಬುದೇ, ಇದರ ನಿಷ್ಕರ್ಷವು. ಕಾಗೆಯು, ಕೋಗಿಲೆಯ ಮರಿಗಳನ್ನು ಕಾಪಾಡುತ್ತಿದ್ದರೆ, ಕೋಗಿಲೆಯು ತಾನಾಗಿ ಶಿಕ್ಷಣದ ಭಾರವನ್ನು ಯಾಕೆ ಸ್ವೀಕರಿಸುವದು? ಕಾಗೆಯಾಗಲಿ ಕೋಗಿಲೆಯಾಗಲಿ, ಶಿಶುಗಳನ್ನು ಬೆಳಿಸಬೇಕು. ಕೋಗಿಲೆಯು "ನಾ ಒಲ್ಲೆ" ಎಂದು ಹೇಳಿದಾಗ, ಕಾಗೆಗಳಾದರೂ, 'ಶಿಕ್ಷಣವು ಮಕ್ಕಳ ಪುಣ್ಯ'ವೆಂದು ಹೇಳಿ, ಆ ಶಿಕ್ಷಣದ ಕಾರ್ಯದಲ್ಲಿ ಕೈಭಾರವನ್ನು ಒಪ್ಪಿಸುವದು, ಇನ್ನು ಹಿತಕರ ಕರ್ತವ್ಯವೆಂದು ನಮ್ಮ ಮತವು. ನಮ್ಮ ಶಿರ್ಶಿಯ ಬಾಂಧವರು, ಸಾಧ್ಯವಿರುವದು ಬರುವ ಎಪ್ರಿಲ್ ೧೯೩೭ರ ಸೆಷನದೊಳಗೆ, ಶಿರ್ಶಿಯಲ್ಲಿ ಒಂದು ಹ್ಯಾಸ್ಕೂಲು ಎದ್ದು ನಿಲ್ಲುವಂತೆ, ಎಲ್ಲ ಆತಂಕಗಳನ್ನು ದೂರಪಡಿಸಿ, ಶಕ್ಯವಿದ್ದ ಪ್ರಯತ್ನಗಳನ್ನು ಜನರು ಮಾಡುವರೆಂದು, ನಾವು ಹೃದಯಾ ನಂಬಿರುವೆವು. ಇದೊಂದು ಅವರಿಗೆ ಸ್ವಾವಲಂಬನದ ಮೊದಲನೇ ಪಾಠವಾಗುವದು.

---

೫. ಲೋಕಮಾನ್ಯ ಟಿಳಕರಿಂದಲೆ— ಕಳೆದ ೪೦ ವರ್ಷಗಳ ಅವಧಿಯಲ್ಲಿ ಇಡಿ ಹಿಂದುಸ್ತಾನದ ಸ್ವಾತಂತ್ರ್ಯಕ್ಕಾಗಿ ಅಹೋರಾತ್ರ ಹೆಣಗಿ, ಹೆಣಗಿ, ಶಾರೀರಿಕ, ಮಾನಸಿಕ ಕಷ್ಟನಷ್ಟಗಳನ್ನು ಸಹಿಸಿ, ದೇಶವಾತ್ಸಲ್ಯದಿಂದ ಆಸೇತು-ಹಿಮಾಚಲದಲ್ಲಿ ಅಗಾಧ ರಾಷ್ಟ್ರಾಭಿಮಾನವನ್ನು ನೆಲೆಗೊಳಿಸಿದ, ಅಸಾಮಾನ್ಯ, ಧೀರೋದಾತ್ತ, ರಾಷ್ಟ್ರಪುರುಷರು — ಅತ್ಯೈವ ಅವತಾರಿಕ ಪುರುಷರು. ಅದಕ್ಕಾಗಿಯೇ, ಇವರು ಸಾರ್ವಜನಿಕ ಮನ್ನಣೆಗೆ, ಪೂಜನೆಗೆ ಪಾತ್ರರಾಗಿದ್ದರು. ಯಾವದೇ ವೃತ್ತ ಪತ್ರ ತೆರೆಯಿರಿ – ಸಾರ್ವಜನಿಕ ಸಭೆಗಳಿಂದಲೂ, ಅವರ ಭಾವಚಿತ್ರದ ಮೆರವಣಿಗೆಗಳಿಂದಲೂ, ಅವರನ್ನು ಭಕ್ತಿಪುರಃಸರ ಮನ್ನಿಸಿ, ಸ್ತುತಿ-ಸ್ತೋತ್ರಗಳಿಂದ ಭಜಿಸಿ, ಜನರು ತಮ್ಮ ಪೂಜ್ಯಬುದ್ಧಿಯನ್ನೂ ಕೃತಜ್ಞತೆಯನ್ನೂ ವ್ಯಕ್ತಪಡಿಸಿರುವರು. "ಕೇಸರಿ" ಪತ್ರದ ಕಾಲಮುಗಳಮೇಲೆ ಕಾಲಮುಗಳು ಅಸಂಖ್ಯ ದುಃಖಪ್ರದರ್ಶಕ ತಂತಿ, ಠರಾವುಗಳಿಂದ ಇನ್ನೂ ತುಂಬಿತುಳುಕುವದು ನೋಡಿ, ಬೆರಗಾಗಬೇಕು. ಮುಂಬೈಯಂಥ ಪ್ರಚಂಡ ಮುನಿಸಿಪಾಲಿಟಿಯು ಸಹ, ಈ ಮಹಾತ್ಮರ ಮನ್ನಣೆಗೆಂದು ಅತ್ಯಂತ ದುಃಖವನ್ನು ತೋರಿಸಿ, ಕಾರ್ಪೊರೇಶನದ ಕಾರ್ಯವನ್ನು ನಿಲ್ಲಿಸಿಬಿಟ್ಟಿತು. ಅಂದಮೇಲೆ, ಇತರ ಪುಟ್ಟಸಂಸ್ಥೆಗಳ ಪಾಡೇನು? ನಮ್ಮ ಈ ಪುಟ್ಟ ಶಹರದ ನಾಗರಿಕರು ಸಹ ಸಭೆಸೇರಿ, ಯಥಾಶಕ್ತ ಧರ್ಮಮಾಡಿ, ಆ ಮಹಾನುಭಾವರನ್ನು ಪೂಜಿಸಿದ್ದು ಎಲ್ಲರಿಗೂ ವಿದಿತವಾಗಿದ್ದು ಅಷ್ಟೇ, ಯಾವ ಕಾರಣದಿಂದಲೋ ಏನೋ!, ಇಲ್ಲಿಯ ಸ್ಥಾನಿಕ ಸ್ವರಾಜ್ಯವು(?) ಇವಕ್ಕಾಗಿಯೇ ಮುದ್ದಾಂ ಸಭೆಗೂಡಿ, ತನ್ನ ದುಃಖವನ್ನು ವ್ಯಕ್ತಪಡಿಸಲು ಮುಂದೆ ಬರದಿದ್ದರೂ, ಸುದೈವದಿಂದ ಪ್ರಾಪ್ತವಾದ ಸುಯೋಗವನ್ನು ಹೋಗಲಾಡಿಸಿ, ಆ ಸ್ವಾರ್ಥತ್ಯಾಗಿ ದೇಶಸೇವಕ ಪುಣ್ಯಾತ್ಮರಿಗೆ ಕೃತಘ್ನರಾದಬಗ್ಗೆ ತುಂಬಾ ವಿಷಾದಪಡುವೆವು. ಇಂಥ ಪುಟ್ಟ ಸಂಸ್ಥೆಗಳಿಗೆ ಸಹ ಲಭಿಸಿ, ಈಗ ಉಪಭೋಗಿಸುತ್ತಿರುವ, ಸದ್ಯದ ಜನ ಸರಕಾರಿ ಅಧ್ಯಕ್ಷಪದದ ಬಹುಮಾನವು ಇಂಥ ದೇಶಸೇವಕರ, ಅನುಪಮೇಯ, ದೀರ್ಘ ಹೋರಾಟದ ಸುಪರಿಣಾಮವೆಂಬುದು, ಈ "ಬಾವಸಾಹೇಬ" ಚಾಲಕರು ಪೂರ್ಣ ಮರೆತು, ಪಕ್ಷಗಳ್ಳರಾಗಿ, ಇಂಥ ಲೋಕಶಾಹಿಯ ಆಧಾರಸ್ತಂಭಗಳಾಗಿದ್ದ ಆ ಮಹಾಶಯರಿಗೆ ಅಪಮಾನ ಮಾಡಿ, ಪರ್ಯಾಯದಿಂದ ಲೋಕಶಾಹಿಯ ಕುತ್ತಿಗೆಯಮೇಲೆ ಇದರಿಂದ ಗುದ್ದು ಹೊಡೆದಂತಾಗಿದೆ. ಆ ಸಂಸ್ಥೆಯು ನಮ್ಮ ಲೋಕಶಾಹಿಯ ಒಂದು ಶಾಂತ ಪ್ರತಿನಿಧಿಯಾಗಿದ್ದು ಅದಕ್ಕೆ ಪೂರ್ಣ ಜವಾಬುದಾರರಾಗಿರುವರೆಂಬುದು, ಅವರಿಗೆ ಈಗ ಎಚ್ಚರಿಸಿ, ಈ ಅವರ ಅಪಕಾರಿತೆಯನ್ನು ವಿಷಾದಪೂರ್ಣ ನಿಷೇಧಿಸುವೆವು

(೭ ನೇ ಪಾನಿನಿಂದ ಮುಂದರಿಸಿದ್ದು)

ರಾಜರು ಸಹ ಭಿಕ್ಷೆ ಬೇಡಲಿಕ್ಕೆ ಸಿದ್ಧರಿಲ್ಲವೋ? ದೊಡ್ಡ ದೊಡ್ಡ ಪುಢಾರಿಯವರು, ಸಹ ರಾಷ್ಟ್ರಕಾರ್ಯದ ದೆಸೆಯಿಂದ ಭಿಕ್ಷೆ ಬೇಡುವದಿಲ್ಲವೋ? ಮುಂಬಯಿಯಲ್ಲಿ ಸುಶಿಕ್ಷಿತರು ಕೋಗ್ರೆಸ ಭಿಕ್ಷೆಯನ್ನು ಬೇಡುತ್ತಾರೆ. ವರ್ಷದ ಉತ್ಪನ್ನ ಸುಮಾರು ಏಳು ಸಾವಿರವಿದೆ ಇದರ ಕಡೆಗೆ ಲಕ್ಷಗೊಟ್ಟು 'ಪ್ರೊಬೇಶನ'ಕ್ಕೆ ಮರುಳಾಗದೆ, ಕಾರ್ಯವನ್ನು ಅಂಗೀಕರಿಸಬೇಕೆಂದು ಸವಿನಯ ವಿನಂತಿ ಇದೆ

'ಹಳಿಯಾಳ ಅನಾಥ ಗೋರಕ್ಷಣ'ದ ಸ್ವಯಂಸೇವಕರೇ, ಗೋ॥ ಇಮಾರತ ಫಂಡಿನ ಕಮಿಟಿಯವರು ಹಿಂದ ಕಾಲು ತೆಗೆಯುತ್ತಿದ್ದರೂ, ಸ್ವಲ್ಪ ಸ್ವಾರ್ಥತ್ಯಾಗ ಮಾಡಿ, ಊರೂರು ತಿರುಗಾಡಿ, ಗೋಮಾತೆಯ ದೆಸೆಯಿಂದ ಭಿಕ್ಷೆ ಬೇಡಿ, ಬೇಸಿಗೆಯಲ್ಲಿ ಬಿಸಲು ತಾಪವನ್ನು, ಮತ್ತು ಮಳೆಗಾಲದಲ್ಲಿ ಮಳೆಯ ತಾಪವನ್ನು ಸಹಿಸಲಿಕ್ಕೆ ಒಂದು ಕೊಟ್ಟಿಗೆಯನ್ನು ಕಟ್ಟಿಸುವ ಪುಣ್ಯ ತಕ್ಕೊಳ್ಳುವದು ನಿಮ್ಮ ಕೈಯಿಂದಾಗಬಾರದೇ? ಗೋ॥ ಇಮಾರತ ಫಂಡಿನ ಮೆಂಬರರ ಮನೆಗೆ ಸ್ವಯಂ ಸೇವಕರು ಪದೇ ಪದೇ ಹೋಗಿ, ಚಿಕಾಟಿ ತೋರಿಸಿ, ಕಸೋಟಿಗೆ ಹಚ್ಚುವಷ್ಟು ತಕ್ಕೊಂಡದ್ದು ಸ್ವಯಂ ಸೇವಕರಿಗೆ ಭೂಷಣ. ಎಡತಾಕ ಪಟ್ಟು ಮಾಡಲಿಕ್ಕೆ ಇದು ಕರ್ಜಿನ ಹಣವಲ್ಲೆಂಬುದು ಮೆಂಬರ ಸಾಹೇಬರಿಗೆ ತಿಳಿಯಬೇಕಾಗಿತ್ತು! ಕಮಿಟಿಯಲ್ಲಿ ಆಡಿದಂತೆ ಕೃತಿ ಆಗಬೇಕಾಗಿತ್ತು!! ಇದರ ವಿಷಯಕ್ಕೆ ತುಕಾರಾಮ ಮಹಾರಾಜರು ಅನ್ನುತ್ತಾರಲ್ಲ— 'बोले तैसा चाले त्याची वंदावी पाउले॥' ಈ ಪ್ರಕಾರ ವರ್ತಿಸಬಿದ್ದ ಪಕ್ಷದಲ್ಲಿ 'शुका घरी ऐसा नाम मोजुनि...... . ...' ಮೆಂಬರರೇ, ಈ ಪ್ರಕಾರ ಅಯೋಗ್ಯ ವರ್ತನದಮೇಲೆ, ಬೇರೆಯವರು ಇವರ ಕಡೆಗೆ ಬೊಟ್ಟು ತೋರಿಸಿ, ಟಾಳಾಟಾಳಿ ಮಾಡುವದು ಏನಾಶ್ಚರ್ಯವು? ಕುದುರೆಯು ತೊಬರಿಗೆ ಮುಂದೆ, ಮತ್ತು ಲಗಾಮಿಗೆ ಹಿಂದೆ, ಇದರಂತೆಯೇ, ಕೆಲ ಸಭ್ಯ ದೊಡ್ಡ ಕಾರ್ಯರು ಸಭೆಯ ಹೊತ್ತಿಗಾಗಲಿ, ಇಲ್ಲವೆ ಬೇರೆ ಹೊತ್ತಿಗೆ-ಮಾನ ಸಿಗುವ ಪ್ರಸಂಗದಲ್ಲಿ, ಮುಂದೆ ಬಂದು ಫೋವಟಪಂಚ ಮಾಡಿ, ಖುರ್ಚಿಯನ್ನು ಪಡಕೊಳ್ಳಲಿಕ್ಕೆ ಮಾತ್ರ ಧಡಪಡಿಸುವರು. ಅದೇ ಕೆಲಸ ಮಾಡುವ ಪ್ರಸಂಗ ಬಂದಾಗ ಮಾತ್ರ, ನಾಲ್ಕು ಹೆಜ್ಜೆ ಹಿಂದೆ ನಿಂತು, ದೂರಿಂದಲೇ ನಮಸ್ಕಾರ ಮಾಡುವರು! ಇದು ಎಂಥ ವಿಚಿತ್ರತನವು! ಹಿಂದುಸ್ಥಾನದಂಥ ಪವಿತ್ರ ಮತ್ತು ಅತ್ಯಂತ ಧಾರ್ಮಿಕ ದೇಶದಲ್ಲಿ, ಗೋರಕ್ಷಣೆಯು ದೆಸೆಯಿಂದ ಬರೆಯುವ ಮತ್ತು ಮಾತಾಡುವ ಪ್ರಸಂಗ ಬರುವದು ಉಚಿತವೇ?

ಹೊಸ ಪಿಢೀಯು ಹಳೇ ಪೀಢಿಗಿಂತ ಅಶಕ್ತಾಗುತ್ತ ನಡೆದದೆ. ಮುದುಕರು ಮಾಡುವಷ್ಟು ಕೆಲಸ ತಾರುಣ್ಯದಿಂದ ಮುಸುಮುಸುತ್ತಿರುವ ತರುಣರಿಂದಾಗುವದಿಲ್ಲ! ಇದು ಯಾತರ ಪರಿಣಾಮ? ಇದಕ್ಕೆ ಬೇರೆ ಎಷ್ಟೋ ಕಾರಣಗಳು ಇರಬಹುದು. ಆದರೆ, ಗೋರಸದ ಅಭಾವ, ಇದು ಒಂದು ದೊಡ್ಡ ಕಾರಣವದೆ. ಹಾಲಿನಲ್ಲಿ ಪೋಷಕ ಶಕ್ತಿ ಇರುವದರಿಂದಲೇ, ಕೂಸುಗಳು ಅನ್ನ ನೀರು ಇಲ್ಲದೆ, ಹಾಲಿನಮೇಲೆಯೇ ಬಾಳುತ್ತವೆ. ಸುಧಾರಣೆಗೆ ಮರುಳಾಗಿ, ಚಹಾಪಾನ ಮಾಡುವ ಹೆಂಗಸರಿಗೆ ಸ್ವತಃದ ಕೂಸಿಗೆ ಕುಡಿಸಲಿಕ್ಕೆ ಸಾಕಷ್ಟು ಹಾಲು ಇರುವದಿಲ್ಲ! ಗೋರಸ ಸಿಗುವದಿಲ್ಲ!! ಇವೆರಡರ ಅಭಾವದಿಂದಲೇ ಲಕ್ಷಗಟ್ಟಲೆ ಹುಡುಗರು ಯಮರಾಯರಾಧೀನರಾಗುತ್ತಾರೆ. ಯಾವದೇ ಕೆಲಸ ಮಾಡಲಿಕ್ಕೆ ಶಕ್ತಿ ಬೇಕು. ಶಕ್ತಿ ಬರಲಿಕ್ಕೆ ಹಾಲು ಬೇಕು. ಮುಬಲಕ ಹಾಲು ಸಿಗಬೇಕಾದರೆ, ಗೋರಕ್ಷಣ ಮಾಡಲಿಕ್ಕೆ ಬೇಕು. ಇಷ್ಟು ದಿವಸಗಳವರೆಗೆ ಗೋವಧದ ಪ್ರಶ್ನೆ ತೆಗೆದಲ್ಲಿ, ನಮ್ಮ ದಯಾಳು ಸರಕಾರವು ಮುಸಲ್ಮಾನ ಬಂಧುಗಳ ಕಡೆಗೆ ಬೊಟ್ಟು ತೋರಿಸುತ್ತಿದ್ದರು. ಗೋವಧದ ಶೇಕಡಾ ಸುಮಾರು ೧೦ ಮುಸಲ್ಮಾನರ ದೆಸೆಯಿಂದ, ಮತ್ತು ಉಳಿದವುಗಳು ಲಷ್ಕರದ ದೆಸೆಯಿಂದ— ಸೋಲಜರರ ದೆಸೆಯಿಂದ! ಈಗ ಮುಖ್ಯರಾದ ಹಕ್ಕದಂಥ ಮುಸಲ್ಮಾನ ಪುಢಾರಿಯವರು ಆಲ್ ಇಂಡಿಯಾ ಮೊಸ್ಲೆಮ ಲೀಗದಲ್ಲಿ, ಗೋವಧ ಮಾಡಬಾರದೆಂದು ಠರಾವು ಪಾಸ ಮಾಡಿರುವರು. ಅಫಗಾಣಿಸ್ತಾನದಲ್ಲಿ ಸಹ ಗೋವಧ ಮಾಡಬಾರದೆಂದು ಅಲ್ಲಿಯ ಅಮೀರರು ಕಾಯಿದೆಯನ್ನು ಮಾಡಿರುವರು.

(ಪುರವಣಿ ನೋಡಿರಿ.)

ಮಾಡುವದು ಜೀವದಮೇಲೆ ಬಂದರೆ, ಅಶಕ್ಯವಿದ್ದರೆ, ಶ್ರಮದ ಕೆಲಸವನ್ನಾದರೂ, ಅಂಗೀಕರಿಸಿರಿ. ಗೋಮಾತೆಯು ದೆಸೆಯಿಂದ ಭಿಕ್ಷೆ ಬೇಡಲಿಕ್ಕೆ ಸಿದ್ಧರಾಗಿರಿ ಯಾರೂ ಭಿಕ್ಷೆ ಇಲ್ಲನ್ನಲಿಕ್ಕಿಲ್ಲ. ಎರಡಂಪ್ಪೆಕೆ ಒಂದಾದರೂ ಕೆಲಸ ಕೈಕೊಳ್ಳಿರಿ. ಈ ಅಪೋಲ್ಯ ಸಂಧಿಯನ್ನು ವ್ಯರ್ಥ ಕಳೆದು, ಮಕ್ಕಳ-ಮರಿಗಳ ಹೊಟ್ಟೆಯಮೇಲೆ ಕಾಲು ಕೊಡಬೇಡಿರಿ

ರಾ|| ಬ|| ಗೋವಿಂದರಾವ ಮಠ ಸದರಿ ಹಳಿಯಾಳ ಅನಾಥ ಗೋಶಾಲೆಗೆ ಎಲ್ಲ ಬಗೆಯಿಂದ ಸಹಾಯವನ್ನೀಯುವಂತ ಅಭಿವಚನವನ್ನು ಕೊಟ್ಟು ಎರಡು ವರ್ಷಗಳಮೇಲಾಯಿತು. ಎರಡು ತಿಂಗಳ ಕೆಳಗ ರಾ|| ಬ|| ಗಿರಿ ಸಾಹೇಬರ ಅಧ್ಯಕ್ಷತೆಯಲ್ಲಿ ಗೋರಕ್ಷಣದ ಸಭೆಕೂಡಿ, ಮೂಕ ಅನಾಥ ಪ್ರಾಣಿಗಳ ದಸೆಯಿಂದ ಕೊಟ್ಟಿಗೆ ಕಟ್ಟಿಸುವ ಚರ್ಚೆಯಾಯಿತು. ಎರಡು ವರ್ಷಗಳಲ್ಲಿ ಎಷ್ಟೋ ಸಭೆಗಳಾಗಿ ಅತ್ಯುತ್ತಮ ಮತ್ತು ಅಭಿನಂದನೀಯ ಠರಾವುಗಳು ಪಾಸಾಗಿರಬಹುದು. ಆದರೆ ಪ್ರತ್ಯಕ್ಷ ಅಮಲಿನಲ್ಲಿ ನೋಡಿದರೆ, ಕುಂಬಳಕಾಯಿಯಷ್ಟು ದೊಡ್ಡ ಶೂನ್ಯ!! ಹಳಿಯಾಳದ್ದ ತಾಲೂಕಿನ ಠಿಕಾಣವಿದ್ದು, ಸಧನವದೆ, ರಾ|| ಬ|| ಗಿರಿ ಸಾಹೇಬರಂಥ ಮತ್ತು ಬೇರೆ ಧನಿಕ ಜನರ ಈ ಸಂಸ್ಥೆಯು ಸಂಬಂಧವಿದ್ದು, ಎರಡು ವರ್ಷಗಳಲ್ಲಿ ಮೂಕ ಮತ್ತು ದಯೆಗೆ ಪಾತ್ರವಿದ್ದಂಥ ಜನಾವರಗಳ ದೆಸೆಯಿಂದ ಒಂದು ಕೊಟ್ಟಿಗೆ ಸಹ ಕಟ್ಟಿಸುವದಾಗುವದಿಲ್ಲವೆಂಬದು ಎಷ್ಟು ಲಜ್ಜಾಸ್ಪದ ಮತ್ತು ಶೋಚನೀಯ ಸ್ಥಿತಿಯು!'!

ಗೋ|| ಕಮಿಟಿ ಮೆಂಬರರೇ, ಪೇಟೆ ಸಾವ್ಕಾರರೇ, ವೈಶ್ಯರೇ, ದೊಡ್ಡ ದೊಡ್ಡ ಕಟ್ಟಿಗೆ ಕಂಟ್ರಾಕ್ಟರರೇ, ಈಗಾದರೂ ಕಣ್ತೆರೆದು ಸುತ್ತಮುತ್ತಲು ಏನು ನಡೆದಿರುವದೆಂಬದನ್ನು ನೋಡಿರಿ ಈ ಹೊತ್ತಿನವರೆಗೆ ತಕ್ಕೊಂಡ ಕುಂಭಕರ್ಣ ನಿದ್ರೆಯು ಸಾಕು' ಗೋ-ಮಾತೆಯು, ನಿಮ್ಮ ಮತ್ತು ನಿಮ್ಮ ಮಕ್ಕಳ-ಮರಿಗಳ ದೆಸೆಯಿಂದ ಹಾಲು ಕೊಟ್ಟು, ಮತ್ತು ಅವಳ ಸುಪುತ್ರರು ಹೊಲದ ಮತ್ತು ಗಾಡಿಯ ಕೆಲಸಕ್ಕೆ ಸಾಯುವ ವರೆಗೆ ನಿಮ್ಮೆಲ್ಲರ ಉಪಯೋಗಕ್ಕೆ ಬೀಳುತ್ತಾರೆ ಮತ್ತು ಸತ್ತಮೇಲೆ ಸಹ ಅವರ ಶರೀರದ ಉಪಯೋಗ ನೀವು ಮಾಡಿಕೊಳ್ಳುವಿರಿ ಹೀಗಿದ್ದು ಗೋರಕ್ಷಣದ ಕಡೆಗೆ ದುರ್ಲಕ್ಷಮಾಡಿ, ಕೃತಘ್ನರಾಗಿ ಯಾವ ನರಕದ ಸಾಧನಮಾಡಿಡುವಿರಿ!!

आता जिल्हा कमिटीचें काम सुरू केले आहे सदर काम कायम कसें चालविले पाहिजे, याचा तपशील विचार आपल्या परिषदेचे अध्यक्ष सर नारायणराव चंदावरकर यांनी केलेल्या भाषणावरून आपल्या लक्षांत आला असलेच या कामास लोकांचें सहाय्य व पैशाची मदत पाहिजे हें सांगण्यास नको. मुख्यत्वेकरून रयत लोकांचे हाल हवाल. व त्यांना होणाऱ्या गैरसोई वगैरे समजून घेऊन त्या दूर करण्याचा उपाय सुचविण्यास व पत्रव्यवहार व हिशेब वगैरे ठेवण्यास, एक विद्वान वजनदार गृहस्थाची जरूरी आहे. तरी त्याच्या पगारा करिता व शिवंदी व छापणावळीचे खर्चाकरिता, पैशाची मदत पाहिजे

हे काम कायम चालविण्यासाठीं अगोदर ग्राम कमिट्याची नेमणूक करून, मग तालुका कमिटी नेमण्यात आली पाहिजे कारण ग्राम कमिटीकडून निवडलेले प्रतिनिधी मिळून तालुका कमिटी नेमली पाहिजे. या करिता आपल्या ग्रामच्या सर्व जातीच्या लोकांची सभा भरवून, त्यांतून आपल्या ग्रामाकरिता ५ ते ७ लोकांची एक ग्राम कमिटी नेमण्यात यावी, आणि जिल्हा कमिटीच्या प्रथम सभेत, ह्मणजे ता. २० मे रोजीं ठराव झाल्याप्रमाणे, प्रत्येक खातेदारानी या जिल्हा परिषदेच्या खर्चासाठीं आपण सरकारास देणें तिच्यांवर दर रुपयास १ पै प्रमाणे दरसाल वर्गणी देत यावी सदर वर्गणी तालुका कमिटीच्या अध्यक्षाकडे भरावी. या विषयीं आपल्या ग्रामाच्या खातेदाराची एक यादी तयार करून आपल्या रिकार्डांत ठेवावी, तसेच आपण वसूल केलेल्या रकमेचा हिशेब ठेवावा हीं सर्व कामे शक्य तितक्या लवकर करून आह्मास कळवावे.

जेथे मोठा ग्राम असतो, तेथे एकच कमिटी, व लहान ग्राम असल्यास आसि ग्राम एकत्र करून एक कमिटी नेमल्यास ठीक होईल त्याप्रमाणे सूचनेसाठीं आपण

ग्राम मिळून कमिट्या ठरवून आपणांस कळविलें आहे. प्रत्येक ग्राम कमिटीने तालुका कमिटीचा सभासद निवडून, त्याचें नाव आम्हांकडे पाठवावें. सर्व ग्राम कमिटी नेमल्या नंतर तालुका कमिटी नेमण्याची व्यवस्था करण्यांत येईल. याविषयी आपणांस मागाहून कळवूं.

वरील सर्व गोष्टींबद्दल आपण काय व्यवस्था केली हें आम्हांस खालील पत्त्यावर पत्रद्वारें लवकर कळवावें.

आपल्या या कमिटीचें काम चालविण्यास आपणांस लागणाऱ्या कागद व टपाल खर्चा-संबंधानें लागेल तो खर्च यापुढे वसूल करण्याच्या रकमेंतून तालुका कमिटीकडून मागाहून मिळेल. कळावें हे विनंती.

पत्ता — सेक्रेटरी डिस्ट्रिक्ट कमिटी ऑफिस,
रविवार पेट, कारवार.

गणेश रामकृष्ण तेलंग,
अध्यक्ष, कानडा जिल्हा कमिटी.

ದಕ್ಷಿಣ ಭಾಗದ ಮುಸಲ್ಮಾನ ಮತದಾರರಿಗೆ ವಿನಂತಿ.

ಹೊಸ ಸುಧಾರಣಾ ಕಾಯಿದೆಯಂತೆ ಮುಂಬಯಿ ಇಲಾಖೆಯು ಸುಧಾರಿಸಿದ ಕಾಯಿದೆ ಕೌನ್ಸಿಲಿಗೆ ದಕ್ಷಿಣಭಾಗದ ಮುಸಲ್ಮಾನರ ತರ್ಫೆನಿಂದ ೩ ಮೆಂಬರರನ್ನು ಆರಿಸತಕ್ಕದ್ದಿರುವ ಸಂಗತಿ ತಮಗೆಲ್ಲರಿಗೂ ಗೊತ್ತಿರಬಹುದು, ಅವುಗಳಲ್ಲೊಂದಕ್ಕಾಗಿ ನಾನು ಪ್ರಯತ್ನ ಮಾಡಬೇಕೆಂದು ಹಲವು ಗೃಹಸ್ಥರ ಸೂಚನೆಗಳು ಬಂದದರಿಂದ, ನಾನೊಬ್ಬನು ಉಮೆದ್ವಾರನಾಗಿ ನಿಂತಿದ್ದೇನೆ ನಮ್ಮ ದಕ್ಷಿಣಭಾಗದ ಮುಸಲ್ಮಾನ ಮತದಾರರು ತಮ್ಮ ಮತಗಳನ್ನು ಕೊಟ್ಟು ನನ್ನನ್ನು ಮೆಂಬರರಲ್ಲೊಬ್ಬನನ್ನಾಗಿ ಆರಿಸಿ ಕೊಟ್ಟರೆ, ಇಂಡಿಯನ್ ಮುಸಲಿಮ್ ಲೀಗದ ತತ್ವಗಳನ್ನು ಸರಿಸಿ, ಸದಸದ್ವಿವೇಕ ಬುದ್ಧಿಯನ್ನು ಸ್ಮರಿಸಿ, ಮುಸಲ್ಮಾನ ಸಮಾಜದ ಹಿತಸಂಬಂಧಗಳನ್ನು ಕಾಯ್ದು ನನ್ನ ಬಾಂಧವರ ಏಳಿಗೆ ಸಲುವಾಗಿ ಶಕ್ತ್ಯಾನುಸಾರವಾಗಿ ದುಡಿಯಬೇಕೆಂದಿದ್ದೇನೆ ಸರಕಾರ ಪ್ರಜಾಪಕ್ಷಗಳ ಸಂಗ್ರಾಮವಾದಲ್ಲಿ ಎಂದಿಗೂ ಪ್ರಜಾಪಕ್ಷವನ್ನೇ ಎತ್ತಿಹಿಡಿಯುವ ನನ್ನ ಪವಿತ್ರ ಕರ್ತವ್ಯವನ್ನು ಸ್ಮರಿಸಿ, ಆ ಬಗ್ಗೆ ನಿರ್ಭೀತೆಯಿಂದ ಕಾದಾಡಿ, ನನ್ನ ಲಕ್ಷ್ಯ ತಮ್ಮ ವಿಶ್ವಾಸವು ಅಸ್ಥಾನದಲ್ಲಿದ್ದಿಲ್ಲೆಂಬದು ಸಿದ್ಧಪಡಿಸಲು ತಯಾರ ಇದ್ದೇನೆ. ಆದದರಿಂದ ದಕ್ಷಿಣಭಾಗದಲ್ಲಿಯ ಮುಸಲ್ಮಾನ ಮತದಾರರು ನನಗೆ ಮತಕೊಟ್ಟು ನಮ್ಮ ದಕ್ಷಿಣಭಾಗದ ತರ್ಫೆನಿಂದ ನನ್ನನ್ನು ಮೆಂಬರರಲ್ಲೊಬ್ಬನನ್ನಾಗಿ ಆರಿಸಿಕೊಡುವರಾಗಿ ತುಂಬಾ ನಂಬುತ್ತೇನೆ.

ತಮ್ಮ ಹಿತಚಿಂತಕ,

ಅಂಕೋಲಾ ತಾ ೧-೯-೨೦ } ಸೈದ ಭದ್ರೊದ್ದಿನ ವ|| ಸೈದ ನಸರೊದ್ದಿನ ಕಾದ್ರಿ, ಶಿರಾಲಿ(?),
ಜನಾಬುದಾರ, ಅಂಕೋಲಾ

V. V. WAGH.

To, The Editor of Kanara News.

Dear Sir,

I find an announcement made in your paper of my candidature for election to the Bombay Legislative Council as a member for Kanara. It seems to have been made by some friends

It is necessary for me to make it clear that the announcement is premature I can not stand unless I get the permission of Govt for the same I have applied for permission. If I get it the fact will be duly announced.

Karwar, 6--9--1920 } V V. WAGH.

ಬಡ ಜಮೀನದಾರರೂ, ಪಟೇಲರೂ

ಕಾನಡಾವೃತ್ತ ಪತ್ರಕರ್ತರಿಗೆ,—

ಈ ಕೆಳಗಿನ ಸಂಗತಿಯನ್ನು ತಮ್ಮಲ್ಲಿ ಹೊರಡುವ ವೃತ್ತಪತ್ರದಲ್ಲಿ ಜಾಹೀರಪಡಿಸಿ, ಬಡ ಜಮೀನದಾರರ ಮತ್ತು ಬಡ ಪಾಟೀಲ ಜನರ ಕಲ್ಯಾಣ ಮಾಡಬೇಕಾಗಿ ತುಂಬಾ ನಂಬಿದ್ದೇನೆ. ಈ ನಮ್ಮ ಕಾನಡಾ ಜಿಲ್ಲೆಯಲ್ಲಿ ಬೇರೆ ಜಿಲ್ಲೆಯಂತೆ, ಬೇರೆ ಯಾವ ತರದ ಉದ್ಯೋಗ ವ ಧಂದೆ ಇರುವದಿಲ್ಲ ಇಲ್ಲಿಯ ಶ್ರೀಮಂತ ಜನರು ಮಾಡತಕ್ಕ ಉದ್ಯೋಗವೆಂದರೆ, ಫೋರೆಸ್ಟ ಕೂಪ ಕಂಟ್ರಾಕ್ಟಿನ ಕೆಲಸವೇ ಅವರ ಮುಖ್ಯ ಮುಖ್ಯ ಉದ್ಯೋಗವಾಗಿರುತ್ತದೆ ಇನ್ನು ಬಡವರಾದ ರೈತರು ಮಾಡತಕ್ಕ ಧಂದೆ ಅಂದರೆ, ಒಕ್ಕಲತನದ ಧಂದೆ ಮುಖ್ಯವಾದದ್ದಿರುತ್ತದೆ ಅದಕ್ಕೂ ಸಹ, ನಾನಾ ಪ್ರಕಾರದ ತ್ರಾಸ ವ ಕಷ್ಟಗಳು, ಅಂದರೆ, ಮೊದಲಿನಂತೆ ಈ ನಮ್ಮ ಮಲನಾಡ ಪ್ರಾಂತದಲ್ಲಿ ಕಾಲಕಾಲಕ್ಕೆ ಸರಿಯಾಗಿ ಸಾಕಷ್ಟು ಮಳೆಯು ಬೀಳದೆ ಪೈರ ಬಾರದ್ದರಿಂದ, ಮೇಲಿಂದಮೇಲೆ ದುಷ್ಕಾಳ ಬೀಳುತ್ತ ನಡೆದ ಸಂಗತಿ ಎಲ್ಲರಿಗೂ ಗೊತ್ತು ಇದ್ದ ಸಂಗತಿಯೇ ಇರುತ್ತದೆ. ಸಾಧಾರಣ ಪೈರು ಬಂದರೂ ಕೂಡ, ಅಡವಿ ಜಾನುವಾರಗಳ ಉಪದ್ರವದ ಮೂಲಕ, ಬಂದ ಪೈರು ಕೈಗೆ ಹತ್ತುವದು ಪ್ರಯಾಸವು. ಹೀಗಾಗಿ ಒಕ್ಕಲತನದ ಉದ್ಯೋಗಕ್ಕೆ ಬಹಳೇ ಹಾನಿ ಬಂದು, ಒಕ್ಕಲಿಗರ ಜಮೀನಗಳು ಬೀಳ ಬಿದ್ದು, ಹೊಟ್ಟೆ ತುಂಬಿಕೊಳ್ಳುವದಕ್ಕೆ ವಿಷ್ಠೂ ಆಧಾರ ವಿಲ್ಲದ ಮೂಲಕ, ಬಹಳೇ ಬಡವರಾಗಿರುತ್ತಾರೆ. ಈಗ ೨ ವರ್ಷಗಳಿಂದ ಮತ್ತೂ ಭಯಂಕರ ದುಷ್ಕಾಳ ಬಿದ್ದು ಕಾಳಕಡಿ ಧಾರಣೆ ವಿಪರೀತ ಹುಟ್ಟಿಯಾಗಿರುವದು. ಆಗಾಗ್ಗೆ ಸರಕಾರದವರು ಲಕ್ಷಕ್ಕೆ ತಂದು ಅವರಿಗೆ ಪಡತಕ್ಕ ಕಷ್ಟಗಳನ್ನು ಪರಿಹಾರ ಮಾಡಿದ್ದಲ್ಲಿ ಬೀಳುಬಿದ್ದ ಜಮೀನಗಳು ಸಾಗ ಆಗಬಹುದು ಈ ಜಿಲ್ಲೆಯ ಮೊದಲಿನ ಕಲೆಕ್ಟರರಾಗಿದ್ದ ಮ್ಯಾ| ಟಿಪ್ಪರ ಸಾಹೇಬರು ಬಡ ರಯತರಿಗೆ ಸವಲತ್ತು ಕೊಟ್ಟಿದ್ದರು. ಆ ಸವಲತ್ತುಗಳೆಂದರೆ, ರಾಜೀನಾಮೆಯಿಂದ ಸರಕಾರ ವಶದಲ್ಲಿ ಬಂದಿರುವ ಜಮೀನು ತನಗೆ ಸಾಗಮಾಡಬೇಕೆಂತ ಅರ್ಜಿ ಮಾಡಿದರೆ, ಆ ರಯತಗೆ ಸದರಿ ಜಮೀನು ೨ ವರ್ಷದವರೆಗೆ ತೀರ್ವೆ ಮಾಫಿಯಿಂದ, ನಂತರ ೩ ವರ್ಷದ ವರೆಗೆ ಅರ್ಧ ತೀರ್ವೆಯಿಂದ ಕೊಟ್ಟು ಬಡ ರೈತರನ್ನು ಉದ್ಧಾರ ಮಾಡಿ ಪುನಃ ಕಟ್ಟಿಕೊಂಡ ಬಗ್ಗೆ ಅವರನ್ನು ಈಗಲೂ ಹಾಡಿ ಹರಸುತ್ತ ಇರುತ್ತಾರೆ. ಈ ಕಾರಣ, ಆ ಬಡರೈತರಿಗೆ (ಹೊಸ ರೈತರಿಗೆ) ಎಷ್ಟು ಆನಂದವು. ಸುಖವು ಆಗಿರುತ್ತದೋ, ಅಷ್ಟೇ ತ್ರಾಸ ವ ಕಷ್ಟವು ಹಳೇನಾಡಿನ ಬಡ ಜಮೀನದಾರ ಜನರಿಗೆ ಆಗಿರುತ್ತದೆ. ಜಮೀನದಾರರು ಈ ತಬ್ಬಿನಲ್ಲಿ ಬಹಳ ಜಮೀನ ಆರತಕ್ಕ ದೊಡ್ಡ ರಯತ ಎಂತ ಆಗುತ್ತದೆ. ಈ ನಮ್ಮ ಮುಂಡಗೋಡ ಪೇಟೆಯಲ್ಲಿ ಈ ಪ್ರಕಾರದ ಜಮೀನದಾರರು ಬಹಳ ಇದ್ದು, ಮೇಲಿನ ಎಲ್ಲ ಕಾರಣಗಳ ಮೂಲಕ, ಜಮೀನಗಳು ಬೀಳಬಿದ್ದಿರುವದರಿಂದಲೂ ಬೇರೆ ಕಾರಣಗಳ ದೆಸೆಯಿಂದಲೂ, ತೀರ ಅನಿಷ್ಟ ಸ್ಥಿತಿಯುಳ್ಳವರಾಗಿ ಸಾಲಗಾರರಾಗಿರುತ್ತಾರೆ. ಈ ಪೇಟೆಯಲ್ಲಿ ಜನವಸ್ತಿ ಕಮ್ಮಿ ಇದ್ದು, ದನ ಜಾನುವಾರ ವ ಅಡವಿ ಜಾನುವಾರಗಳ ಸಂಖ್ಯೆ ಬಹಳ ಇರುತ್ತದೆ. ರಯತರು ಕಡಿಮೆ ಇರುವ ಮೂಲಕ, ಜಮೀನದಾರ ಜನರ ಭೂಮಿ ಸಾಗವಳಿ ಆಗದೆ ಬೀಳು ಬೀಳಲಿಕ್ಕೆ ಕಾರಣವಾಗಿರುತ್ತದೆ ಇದಾಚೆ ರೈತನು ಸಿಕ್ಕರೆ, ಸಾಗವಳಿ ಬಗ್ಗೆ ಎತ್ತು, ಬೀಜಾ, ಬಾಗಾಯತ ವ ರಯತರ ಕುಟುಂಬಕ್ಕೆ ತಗಲುವ ಖರ್ಚ ಸಹ ಬಡ ಜಮೀನದಾರನೇ ಕೊಡತಕ್ಕದ್ದು. ಆದರೆ ಅವರ ಜಮೀನ ಸಾಗವಳಿ ಆಗುತ್ತದೆ. ಇಷ್ಟೆಲ್ಲ ಕೊಟ್ಟು ಸಾಗವಳಿ ಮಾಡಿಸುವದು ಆಗುವದಿಲ್ಲ, ಎಂತ ತಿಳಿದು, ಆ ಬಡ ಜಮೀನದಾರನು ಸರಕಾರದಲ್ಲಿ ತನ್ನ ರಯತರಿಗೆ ತಗಾಯಿ ಕೊಡಿಸಬೇಕೆಂತ ಅರ್ಜಿ ಮಾಡಿದರೆ, ಜಮೀನ ಈಡೀನ ಮೇಲಿಂದ ತಗಾಯಿ ಸಿಗಲಾರದು ಎಂತ ಹುಕುಮು ಸಿಕ್ಕುತ್ತದೆ ಜಮೀನ ಜ್ಯಾಮೀನಿ ಇವಾಯ ಬೇರೆ ಜನರು ಆ ಬಡ ಜಮೀನದಾರರಿಗೆ ಜಾಮೀನು ಆಗುವದಿಲ್ಲ ಹೀಗಾಗಿ ತನ್ನಲ್ಲಿ ತ್ರಾಣಯಿಲ್ಲದ ವ ಸರಕಾರದಿಂದ ತಗಾಯಿ ಸಿಗದೇ ಜಮೀನು ಸಾಗ ಆಗದೆ, ಬೀಳುಬೀಳಲಿಕ್ಕೆ ಕಾರಣ ಆಗಿದ್ದಾವೆ. ಸರಕಾರದವರು ಸರಕಾರಿ ಪಡ ನಂಬರ ಪಡಕೊಂಡವನಿಗೆ ಕೊಟ್ಟ ಸವಲತ್ತು ಪ್ರಕಾರ, ತನ್ನ ಪಡ ಜಮೀನು ಸಾಗಮಾಡಬೇಕೆಂದರೆ, ಆಧಾರ ಇಲ್ಲ. ಮೇಲಿಂದಮೇಲೆ ಒದಗುವ ಭಯಂಕರ ದುಷ್ಕಾಳ ಮೂಲಕ, ಈಗ ೨ ವರ್ಷದಿಂದ ಸರಕಾರದವರು ತೀರ್ವೆ ತಹಕೂಬ ಕೊಟ್ಟಿರುತ್ತಾರೆ ಈ ತಹಕೂಬ ಸಾಗ ಭೂಮಿಗೂ, ಪಡಬಿದ್ದಿರುವ ಭೂಮಿಗೂ ಸಹ ಲಾಗುಮಾಡಿರುತ್ತಾರೆ. ಈ ಪಡಬಿದ್ದಿರುವ ತಹಕೂಬ ಬಾಕಿ ಪಡ ಬಿದ್ದಿರುವ ಭೂಮಿಯು ಜಮೀನದಾರ ಮೇಲೆ ಇರುತ್ತದೆ. ಇದೆಲ್ಲ ಸಂಗತಿಯನ್ನು ಮೇಹರಬಾನ ಕಲೆಕ್ಟರ ಸಾಹೇಬರವರು ತಮ್ಮ ದೃಷ್ಟಿಪಥಕ್ಕೆ ತಂದ, ಸರಕಾರಿ ಬಡ ರಯತರಿಗೆ ಯಾವ ರೀತಿ ಸವಲತ್ತು ಕೊಟ್ಟಿರುವರೋ ಅದೇ ಸವಲತ್ತು ಬಡ ಜಮೀನ

ಮುಂದೆ ೭ ನೇ ಪಾನು ನೋಡಿರಿ)

ಅತ್ಯುತ್ತಮವಾದ
ಮಂಗಳೂರ ನಶೀಪುಡಿ
ಮತ್ತು
ಸೇದುವ ಬೀಡಿಗಳು.

ಪರಮ, ಮಧ್ಯಮ ಮತ್ತು ಕಡಕ ನಮ್ಮಲ್ಲಿ ಸಿಗುತ್ತವೆ ಪರ ಮಾಘಕ ಹಿಂದು ಸರ್ತೆ ಅನುಭವ ತೆಗೆದುಕೊಂಡು ನೋಡಿರಿ, ರೋಕ ದರ ಸವಲತ್ತು ಇರುತ್ತದೆ.

ಪತ್ತೆ:— ಬಿ ದಾಸ
ನಶೀಪುಡಿ ಮತ್ತು ಬೀಡಿ ಮರ್ಚಂಟ,
ಕುಮಟಾ.

ಶಾಲೋಪಯೋಗಿ ಪುಸ್ತಕಗಳು.
ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ಖಾತ್ರಿ ಪೂರೈಸುವೆವು.
ಪತ್ತೆ— ಭಡಕೀ ಭ್ರಾತೃಸಂಘ,
ಗೋಕರ್ಣ.

ಜಾದಾರಾಷ್ಟ್ರೀಯ ಸಭೆ.

ಕಲಕತ್ತೆಯ ಅಪೂರ್ವ ಅಧಿವೇಶನವು.

[ನಮ್ಮ ಬಾತಮೀದಾರರಿಂದ.]

ಹಿಂದೀ ರಾಜಕಾರಣವು ಸದ್ಯಕ್ಕೆ ಬಹು ಪ್ರಕ್ಷುಬ್ಧವಾಗಿದೆ. ಬಹುಜನ ಸಮಾಜವು ಪ್ರಚಲಿತ ಚಳವಳಿಯಲ್ಲಿ ತಥ್ಯಾಂಶವೇನಿಲ್ಲೆಂದು ಮನಗಂಡಿದೆ. ಪ್ರಚಲಿತ ಚಳವಳಿಯ ಅಂಗ-ಉಪಾಂಗಗಳನ್ನೆಲ್ಲ ಪಂಜಾಬದ ಅತ್ಯಾಚಾರ, ಹಾಗು ಖಿಲಾಫತ ಪ್ರಕರಣ, ಈ ವಿಷಯಗಳಲ್ಲಿ ಯತ್ನಿಸಿ ನಮಗೆ ಹೇಳತಕ್ಕಂಥ ಲಾಭಗಳಾಗಿಲ್ಲೆಂದು ತಿಳಿದರೆ ಇಷ್ಟೇ ಅಕ್ಷಿ ನ್ಯಾಯಪ್ರಿಯತೆಯಲ್ಲಿ ಹೆಸರಾದಂಥ ಬ್ರಿಟಿಶ ಪಾರ್ಲಮೆಂಟವು ಸಹ ಭರತ ಪುತ್ರರಿಗೆ ಈ ಪ್ರಕರಣಗಳಲ್ಲಿ ನ್ಯಾಯಕೊಡಲಿಲ್ಲೆಂದು ಬ್ರಿಟಿಶ ನ್ಯಾಯಪ್ರಿಯತೆಯಲ್ಲಿ ಅಖಂಡ ವಿಶ್ವಾಸವಿದ್ದ ಹಿಂದೀ ಮುತ್ಸದ್ದಿಗಳು ಹೇಳಹತ್ತಿದ್ದಾರೆ. ಅಂದಮೇಲೆ ನಾವೀಗ ಮಾಡುವದೇನು? 'ಬಂದದ್ದು ಬರಲಿ' ಎಂದು ಕೈಯ ತಗಿಸಿಕೊಂಡು ಕೂಡ್ರುವದೋ? ಅಥವಾ ಅನ್ಯ ಉಪಾಯಗಳೇನಾದರೂ ಇದ್ದಾವೆ? ಇದ್ದರೆ ಅವು ಯಾವವು?

* * *

ಇವೆಲ್ಲ ಸಂಗತಿಗಳನ್ನು ವಿಚಾರಿಸಿ, ಶಕ್ಯವಿದ್ದ ಉಪಾಯಗಳನ್ನು ಯೋಜಿಸಲು ಜಾದಾರಾಷ್ಟ್ರೀಯ ಸಭೆಯ ಯೋಜನೆಯಾಗಿತ್ತು. ಅದರಂತೆ, ಕಲಕತ್ತಾ ನಗರಿಯಲ್ಲಿ ಕಳೆದ ಶನಿವಾರದಿಂದ ಲಾಲಾ ಲಜಪತರಾಯರ ಅಧ್ಯಕ್ಷತೆಯಲ್ಲಿ ಜಾದಾರಾಷ್ಟ್ರೀಯಸಭೆಗೆ ಮಧ್ಯಾಹ್ನ ೧ ಘಂಟೆಗೆ ಪ್ರಾರಂಭವಾಯಿತು.

* * *

ಪರಿಷತ್ತಿನ ನಿಯೋಜಿತ ಅಧ್ಯಕ್ಷರಾದ ಲಾಲಾ ಲಜಪತರಾಯರು ಕಲಕತ್ತೆಗೆ ಕಳೆದ ಗುರುವಾರ ದೆಹಲಿ ಪಂಜಾಬ ಮೇಲಿನಿಂದ ಎಕ್ಸ್‌ಪ್ರೆಸಿನ ಬಂದು ಮುಟಿದರು. ಸ್ಟೇಶನಿನಮೇಲೆ ಅಧ್ಯಕ್ಷರ ದರ್ಶನೋತ್ಸುಕರಾಗಿ ಸಾವಿರಾರು ಮಂದಿ ನೆರೆದಿದ್ದರು. ಸ್ಟೇಶನಿನಲ್ಲಿ ಉಗಿಬಂಡಿಯು ಪ್ರವೇಶವಾದ ಕೂಡಲೆ, 'ವಂದೇ ಮಾತರಮ್', 'ಲಾಲಾಜೀಕೀ ಜಯ' ಮುಂತಾದ ಜಯಘೋಷಗಳಿಂದ ಇಡೀ ಸ್ಟೇಶನು ದುಮದುಮಿಸಿತು. ಸ್ವಾಗತ ಕಮಿಟಿಯ ಅಧ್ಯಕ್ಷ, ಉಪಾಧ್ಯಕ್ಷ, ಪ್ರಮುಖ ಸಭಾಸದ ಮುಂತಾದವರ ಭೆಟ್ಟಿಗಳಾದ ಮೇಲೆ, ಅಧ್ಯಕ್ಷರ ಮೆರವಣಿಗೆಗೆ ಪ್ರಾರಂಭವಾಯಿತು.

* * *

ಅಧ್ಯಕ್ಷರನ್ನು ಒಂಭತ್ತು ಕುದುರೆಗಳಿಂದ ವಿಭೂಷಿತವಾದ ರಥದಮೇಲೆ ಕುಳ್ಳಿರಿಸಿದ್ದರು. ಅವರ ಸಂಗಡ ಸ್ವಾಗತಕಮಿಟಿಯ ಅಧ್ಯಕ್ಷರಾದ ಶ್ರೀ। ಬಿ ಚಕ್ರವರ್ತಿಯವರು ವಿರಾಜಮಾನರಾಗಿದ್ದರು. ಮೆರವಣಿಗೆಯ ಅಗ್ರಭಾಗದಲ್ಲಿ ಸ್ವಯಂಸೇವಕ ಪಥಕಗಳು ಕಂಗೊಳಿಸುತ್ತಿದ್ದವು. ಈ ಪಥಕಗಳ ಹಿಂಭಾಗದಲ್ಲಿ ನೂರಾರು ಮಂದಿ ರಾಷ್ಟ್ರವೀರರು ಅಶ್ವಾರೂಢರಾಗಿ ಕೂಚುಮಾಡುತ್ತಿದ್ದರು. ಮಧ್ಯಭಾಗದಲ್ಲಿ ಭಾರತಮಾತೆ ಮತ್ತು ಲೋಕಮಾನ್ಯ ಬಾಳ ಗಂಗಾಧರ ಟಿಳಕ ಇವರ ಭವ್ಯ ಚಿತ್ರಪಟಗಳು ಓಹ ಕಮನೀಯವಾಗಿ ಶೋಭಿಸುತ್ತಿದ್ದವು. ಪ್ರೇಕ್ಷಕರಿಗೆ, ಕಲಕತ್ತಾ ನಗರಿಯಲ್ಲಿ ಲೋಕಮಾನ್ಯರು ಜಾದಾರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಹಾಜರಿರುವ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳಲು, ಆತ್ಮಿಕಶಕ್ತಿಯಿಂದ ಬಂದಿದ್ದಾರೋ ಏನೋ ಎಂಬ ಭಾಸವಾಗುತ್ತಿತ್ತು. ಮಾರ್ಗಗಳ ಎರಡೂ ಬದಿಗಳಿಂದ, ಸ್ತ್ರೀಪುರುಷರು ಅಧ್ಯಕ್ಷರ ದರ್ಶನವನ್ನು ಪಡೆಯಲು ಉತ್ಸುಕರಾಗಿ ಹೋರಾಡುತ್ತಿದ್ದರು. ಮಾರ್ಗಗಳ ಮೇಲೆ ಧ್ವಜಾತೋರಣಗಳ ಲೆಕ್ಕವೇ ಇಲ್ಲ. ಅಧ್ಯಕ್ಷರ ರಥದಮೇಲಂತೂ, ಪುಷ್ಪವೃಷ್ಟಿ ನಡೆದೇ ಇತ್ತು. ಇಂಥ ಅಪೂರ್ವ ಸಮಾರಂಭದಿಂದ ಮೆರವಣಿಗೆಯು ಮಿಯೋಟರ ರೋಡದ ಪೋದಾರದ ಬಂಗ್ಲೆಗೆ ಮುಟ್ಟಿತು. ಇಲ್ಲಿಯೇ, ಅಧ್ಯಕ್ಷ ಮಹಾಶಯರ ಇಳಕೊಳ್ಳುವ ವ್ಯವಸ್ಥೆಯಾಗಿತ್ತು. ಇಡೀ ಮೆರವಣಿಗೆಗೆ ಸುಮಾರು ಮೂರು ತಾಸು ತಗಲಿತು.

* * *

ಅಧ್ಯಕ್ಷರು ನೆರೆದ ಜನರಿಗೆ ನಿರೋಪ ಕೊಡುವಾಗ, 'ಆದರದ ಸನ್ಮಾನ ಮಾಡಲು, ತಾವು ಇಷ್ಟು ಪ್ರಯತ್ನಪಟ್ಟ ಬಗ್ಗೆ, ನಾನು ತಮ್ಮ ಆಭಾರವನ್ನು ಎಷ್ಟೆಂದು ಎಣಿಸಲಿ! ತಾವೆಲ್ಲರೂ ಇದೇ ಉತ್ಸಾಹವನ್ನು ನಮಗೆ ಸ್ವರಾಜ್ಯ ಸಿಗುವವರೆಗೆ ತೋರಿಸಬೇಕು. ಇದರೊಳಗೆ ಎಳ್ಳಷ್ಟು ಸಹ ಕುಂದಿಸಬಾರದು. ದೇಶಸೇವೆ ಮಾಡುವಾಗ ಕಲಹಮಾಡಬೇಡಿರಿ. ದೇಶಮಾತೆಗೆ ಎಲ್ಲರೂ ಒಂದೇ. ಹಿಂದೂ ಇರಲಿ, ಮುಸಲ್ಮಾನನಿರಲಿ, ಕ್ರಿಶ್ಚನನಿರಲಿ, ಪಾರಸೀ ಇರಲಿ, ಎಲ್ಲರೂ ಹಿಂದಮಾತೆಯ ಪುತ್ರರೇ. ದೇಶಮಾತೆಯ ಭಕ್ತಿ ಮಾಡುವದರಲ್ಲಿ ನಾವೆಲ್ಲರೂ ಭೇದಭಾವಗಳನ್ನು ಮರೆತು, ಒಮ್ಮನಸ್ಸಿನಿಂದ ದುಡಿಯೋಣ' ಇಂಥ ಸ್ಫೂರ್ತಿದಾಯಕ ಸಂದೇಶವನ್ನು ಕೊಟ್ಟು ಸ್ವಗೃಹಕ್ಕೆ ತೆರಳಿದರು.

* * *

ಅದೇ ದಿವಸ ರಾತ್ರಿ, ಮಹಾತ್ಮಾ ಗಾಂಧಿ, ಮೌಲಾನಾ ಶೌಕತಅಲ್ಲಿ ಮುಂತಾದ ಮಹಾಶಯರು ಖಿಲಾಫತ ಸ್ಪೆಶಲದಿಂದ ಬಂದು ಮುಟ್ಟಿದರು. ಕಲಕತ್ತೆಯ ಗುಜರಾಥಿ, ಮಾರವಾಡಿ ಮುಂತಾದ ವ್ಯಾಪಾರಿಗಳು ಮಹಾತ್ಮರ ಬಂಗಿ ಮೆರವಣಿಗೆ ಮಾಡಿದರು. ಮರುದಿವಸ ಮುಂಬಯಿಯ ಕೊಂಗ್ರೆಸ ಸ್ಪೆಶಲದಿಂದ ಮಿ। ಮಹಮ್ಮದ ಅಲ್ಲಿ ಜಿನ್ನಾ, ಶ್ರೀ। ನರಸೋಪಂತ ಕೇಳಕರ, ಮಿ। ಬೆಪ್ಟಿಸ್ಟಾ ಮುಂತಾದ ಮುಂಬಯಿ ಪ್ರತಿನಿಧಿಗಳು ಬಂದು ಮುಟ್ಟಿದರು. ಮದ್ರಾಸದ ಬಿಝಂಟ ಅಮ್ಮನವರಂತೂ ಎರಡು ಮೂರು ದಿನಗಳ ಮುಂಚೆಯೇ ಬಂದು, ಅಸಹಕಾರಿತೆಯ ವಿರುದ್ಧ ಜೋರಿನ ಚಳವಳಿ ಮಾಡುತ್ತಿದ್ದಾರೆ.

* * *

ಮುಂಬಯಿ ಪ್ರತಿನಿಧಿಗಳು ಬಂದಂದಿನಿಂದ ಅಧ್ಯಕ್ಷ ಲಾಲಾ ಲಜಪತರಾಯರ ಬಂಗ್ಲೆಯಮೇಲೆ ಅಸಹಕಾರಿತೆಯ ವಿಷಯಕ ಖಲಬತ ನಡೆಯುತ್ತಿದ್ದಾವೆ. ಮಹಾತ್ಮಾ ಗಾಂಧಿಯವರು ಅಸಹಕಾರಿತೆಯ ಒಂದು ಕಾರ್ಯಕ್ರಮವನ್ನು ಸಭೆಯ ಮುಂದೆ ಇಟ್ಟಿರುವರು, ಮತ್ತು ಅದನ್ನು ಕೊಂಗ್ರೆಸು ಮಾನ್ಯಮಾಡಬೇಕು, ಎನ್ನುತ್ತಾರೆ. ಬಿಝಂಟ ಅಮ್ಮನವರಂತೂ ಅಸಹಕಾರಿತೆಯ ಹೆಸರು ತೆಗೆದರೆ, ವೈತಿಗೆಯುತ್ತಾರೆ. ಈ ಎರಡು ತುದಿಗಳನ್ನು ಬಿಟ್ಟರೆ, ಬಹುಜನ ಸಮಾಜವು ಅಸಹಕಾರಿತೆಯ ತತ್ವವನ್ನು ಮನ್ನಿಸುತ್ತದೆ. ಆದರೆ, ಮಹಾತ್ಮಾ ಗಾಂಧಿಯವರ ಕಾರ್ಯಕ್ರಮವು ಸಮ್ಮತವಿಲ್ಲ. ನಮ್ಮ ಮಹಮ್ಮದೀಯ ಬಾಂಧವರು ಮಹಾತ್ಮರ ಕಾರ್ಯಕ್ರಮವನ್ನು ಅಕ್ಷರಶಃ ಮನ್ನಿಸುತ್ತಾರೆ. ಮಹಮ್ಮದೀಯ ಬಾಂಧವರ ಅಪರಿಮಿತ ಉತ್ಸಾಹವೇ ಈ ಅಪೂರ್ವ ಅಧಿವೇಶನದ ಒಂದು ಅಪೂರ್ವತೆಯು.

* * *

ಅಸಹಕಾರಿತೆಯ ವಾದವಿವಾದದಲ್ಲಿ, ಎರಡು ದಿವಸಗಳು ನಿಮಿಷದಂತೆ ಕಳೆದುಹೋದವು. ಕಳೆದ ಶನಿವಾರ ಮಧ್ಯಾಹ್ನ ೧ ಘಂಟೆಗೆ ಕೊಂಗ್ರೆಸದ ಅಧಿವೇಶನಕ್ಕೆ ಪ್ರಾರಂಭವಾಗುವದೆಂದು ಜಾಹೀರಾಗಿತ್ತು. ಅದರ ಪೂರ್ವದಲ್ಲೇ, ಪ್ರೇಕ್ಷಕರೂ, ಪ್ರತಿನಿಧಿಗಳೂ ಬಂದು, ತಮ್ಮ ಆಸನಗಳನ್ನು ಹಿಡಿದು ಕೊಂಡಿದ್ದರು. ೧೫ ಸಾವಿರ ಮಂದಿ ಹಿಡಿಯುವಷ್ಟು ಭವ್ಯ ಮಂಟಪವು ಸಹ ಸಾಕಾಗದೆ, ಪ್ರೇಕ್ಷಕರು ಅಲ್ಲಲ್ಲಿ ನಿಂತಿದ್ದರು. ಉಚ್ಚಾಸನದ ಮಧ್ಯದಲ್ಲಿ, ಲೋಕಮಾನ್ಯರ ಪುರುಷಾಕೃತಿಯ ಛಾಯಾಚಿತ್ರವನ್ನು ತೂಗಡಿಸಿದ್ದರು.

* * *

ಮಧ್ಯಾಹ್ನ ೧ ಘಂಟೆಗೆ ಸುಮಾರು ಅಧ್ಯಕ್ಷ ಲಾಲಾ ಲಜಪತರಾಯರ ಸ್ವಾರಿಯು ಸ್ವಾಗತ ಕಮಿಟಿಯ ಅಧ್ಯಕ್ಷ, ಉಪಾಧ್ಯಕ್ಷ, ಪ್ರಮುಖ ಸಭಾಸದರೊಡನೆ ಮಂಡಪದಲ್ಲಿ ಪ್ರವೇಶಿಸಿತು. ಆಗ, ಇಡೀ ಮಂಟಪದಲ್ಲಿ ಚಪ್ಪಾಳೆಗಳ ಜಯಘೋಷವಾಯಿತು. ಅಧ್ಯಕ್ಷರು ಉಚ್ಚಾಸನದಮೇಲೆ ವಿರಾಜಮಾನರಾದ ಮೇಲೆ, ಸ್ವಾಗತಪರ ಪದ್ಯಗಳಿಗೆ ಪ್ರಾರಂಭವಾಯಿತು. ಸ್ವಾಗತಪರ ಪದ್ಯಗಳಾದ ಮೇಲೆ, ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ। ಬಿ. ಚಕ್ರವರ್ತಿಯವರು ತಮ್ಮ ಸ್ವಾಗತಪರ ಭಾಷಣವನ್ನು ಓದಿ ಹೇಳಿದರು.

* * *

ಆ ವೇಳೆ ಸರ ಆಶುತೋಷ ಚೌಧರಿಯವರು ಲಾಲಾ ಲಜಪತರಾಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಸೂಚನೆ ಮಾಡಿದರು. ಅದಕ್ಕೆ ಪಂಡಿತ ಮೋತಿಲಾಲ ನೇಹರು, ಖಾನ ಬಹಾದ್ದೂರ ಹುಸೇನ ಇವರು ಅನುಮೋದನ ಕೊಟ್ಟರು. ಆಮೇಲೆ ಬಿಝಂಟಅಮ್ಮನವರು ಅದೇ ಸೂಚನೆಯನ್ನು ಪುಷ್ಟೀಕರಿಸಲು, ಭಾಷಣ ಮಾಡುವದರಲ್ಲಿ, 'ಶೇಮ್' 'ಶೇಮ್' ಧ್ವನಿಯಿಂದ ಒಂದೇ ಕೋಲಾಹಲವಾಯಿತು. ಪಂಡಿತ ಮದನಮೋಹನ ಮಾಲವೀಯ, ಶ್ರೀ। ಬಿಪಿನ ಚಂದ್ರಪಾಲ ಮಹಾಶಯರು ಶ್ರೋತೃವರ್ಗವನ್ನು ಸುಮ್ಮಗೊಳಿಸಲು ಮಾಡಿದ ಯತ್ನಗಳು ನಿಷ್ಫಲವಾದವು. ಆದರೆ, ಮಹಾತ್ಮಾ ಗಾಂಧಿಯವರು ನಾಲ್ಕು ಮಾತುಗಳನ್ನು ಹೇಳಿದಮೇಲೆ, ಶ್ರೋತೃವೃಂದವು ಶಾಂತವಾಯಿತು. ಆಮೇಲೆ, ಬಿಝಂಟ ಅಮ್ಮನವರು, ನಾ। ಪಟೇಲ ಮುಂತಾದವರು ಪುಷ್ಟೀಕರಿಸಿದಮೇಲೆ, ಅಧ್ಯಕ್ಷ ಲಾಲಾ ಲಜಪತರಾಯರು 'ವಂದೇ ಮಾತರಮ್' ಜಯಘೋಷದೊಡನೆ ಸ್ಥಾನಾಪನ್ನರಾಗಿ, ತಮ್ಮ ಭಾಷಣಕ್ಕೆ ಸರಿಯಾಗಿ ೨ ಘಂಟೆಗೆ ಪ್ರಾರಂಭ ಮಾಡಿದರು. ಇವರ ಭಾಷಣವು ಮೂರು ತಾಸು ವರೆಗೆ ನಡೆದು, ಸರಿಯಾಗಿ ೫। ಘಂಟೆಗೆ ಮುಗಿಯಿತು.

* * *

ಅಧ್ಯಕ್ಷ ಲಾಲಾ ಲಜಪತರಾಯರ ಭಾಷಣವು ಬಹಳೇ ವಿಸ್ತೃತವಾಯಿತು. ಅವರು ಇಡೀ ಮೂರು ತಾಸು ತಡೆಯದೆ ತಮ್ಮ ಭಾಷಣವನ್ನು ಓದದೆ, ಮುಖೋದ್ಗತವಿದ್ದಂತೆ ಕೊಟ್ಟರು. ಪಂಜಾಬದಮೇಲಿನ ನಿವೇದನವೇ ಆ ಭಾಷಣದ ಮುಖ್ಯ ಭಾಗವೆಂದರೂ ಅನ್ನಬಹುದು. ಆಮೇಲೆ ಖಿಲಾಫತಿನ ವಿಷಯ ಮಹಮ್ಮದೀ ಬಾಂಧವರ ಧೋರಣವೇನೆಂದು ನಿವೇದಿಸಿ,

ಹಿಂದೀರಾಷ್ಟ್ರಕ್ಕೆ ಇರುವ ಅದರ ಸಂಬಂಧವನ್ನು ವಿಶದೀಕರಿಸಿದರು ಮಹಾತ್ಮಾ ಗಾಂಧಿಯವರ ಅಸಹಕಾರಿತೆಯಮೇಲೆ ದೇಶದಲ್ಲಿ ಐಕ್ಯಮತ್ಯವಿಲ್ಲದ ಮೂಲಕ, ಅದರಮೇಲೆ ತಮ್ಮ ನಿಶ್ಚಿತ ಅಭಿಪ್ರಾಯವನ್ನ ಅಧ್ಯಕ್ಷನಾತೆಯಿಂದ ಕೊಡುವದು ಪಕ್ಷಪಾತವಾದೀತೆಂದು ಹೇಳಿ, ಬಹುಜನ ಸಮಾಜದ ಕಲ್ಯಾಣವನ್ನೂ, ದೇಶೋನ್ನತಿಯನ್ನೂ, ಒಮ್ಮನಸಿನಿಂದ ಸಾಧಿಸಲು ಪ್ರತಿನಿಧಿ ಬಂಧುಗಳಿಗೆ ವಿನಂತಿಮಾಡಿ, ಸ್ವಸ್ಥಾನಾಪನ್ನರಾದರು. ಆಗ ವಂದೇಮಾತರಮ್‌ದ ಜಯಘೋಷದಿಂದ ಮಂಟಪವೆಲ್ಲ ದುಮುದುಮಿಸಿತು.

ಆಮೇಲೆ ವಿಷಯನಿಯಾಮಕ ಕಮಿಟಿಯು ನಿವಡಣೂಕಿಯಾಯಿತು ಈ ನಿವಡಣೂಕಿಯಲ್ಲಿ ವಿಶೇಷವೇನೆಂದರೆ, ಬರಹ ತಿಳಿಯುವ ಅಜ್ಞ ಪ್ರತಿನಿಧಿಯು ಸಹ ಯಾರ ಭೀಡೆಗೂ ಒಳಬೀಳದೆ, ತನಗೆ ಏನುಬೇಕು? ಯಾರಿಗೆ ಮತಕೊಡಬೇಕು? ಎಂಬದನು ಚನ್ನಾಗಿ ಅರಿತು ಮತಕೊಡುತ್ತಿದ್ದನ್ನು ವಿಷಯ ನಿಯಾಮಕ ಕಮಿಟಿಯಲ್ಲಿ ಅಸಹಕಾರಿತೆಯು ಪುರಸ್ಕರ್ತರ ಮತಪ್ರಾಬಲ್ಯವಾಗಿದೆ.

*   *   *

ಇಡೀ ರವಿವಾರವೆಲ್ಲ ವಿಷಯನಿಯಾಮಕ ಕಮಿಟಿಯು ವಾದವಿವಾದದಲ್ಲೇ ಕಳೆದು ಹೋಯಿತು. ಮಧ್ಯಾಹ್ನ ೫ ತಾಸುಹೊತ್ತಿಗೆ ಕೂಡಿದ ಸಭೆಯು ನಿಕಸವನೆ ರಾತ್ರಿ ಎಂಟು ಘಂಟೆವರೆಗೆ ನಡೆಯಿತು. ಅಸಹಕಾರಿತೆಯ ಠರಾವಿನಮೇಲೆ ಉಪಸೂಚನೆಗಳ ಉಪಸೂಚನೆಗಳು! ಅಸಹಕಾರಿತೆಯ ತತ್ವವು ಬಹುಮತವಾದರೂ, ಮಹಾತ್ಮಾಗಾಂಧಿಯವರ ಕಾರ್ಯಕ್ರಮವು ಅವರ ಅನುಯಾಯಿಗಳ ಹೊರತು ಯಾರಿಗೂ ಮಾನ್ಯವಿಲ್ಲ. ಠರಾವಿನಮೇಲೆ ೫-೬ ತಾಸು ವಾದವಿವಾದ ನಡೆದರೂ, ಏನೊಂದೂ ನಿಶ್ಚಿತಯೋಜನೆಯಾಗದೆ, ವಿಷಯನಿಯಾಮಕ ಮಂಡಳದ ಸಭೆಯು ವಿಸರ್ಜನೆಯಾಯಿತು. ಅದು ಪುನಃ ಸೋಮವಾರ ೩ ಘಂಟೆಗೆ ಕೂಡುವದು ಮಂಗಳವಾರ ಸದರಾಷ್ಟ್ರೀಯಸಭೆಯು ಅಧಿವೇಶನವು ನಡೆಯುವ, ಅದಿವಸ ಸಹ ವಿಷಯನಿಯಾಮಕ ಮಂಡಳವು ಕೂಡುವದೆಂದು ಜಾಹೀರಾಗಿದೆ. ರಾಷ್ಟ್ರೀಯ ಸಭೆಯು ಅಸಹಕಾರಿತೆಯ ಕಾರ್ಯಕ್ರಮವನ್ನು ಇಡೀ ಭರತಖಂಡವು ಅತುರತೆಯಿಂದ ಕಾಯುತ್ತದೆಂದು ಬೇರೆ ಹೇಳಬೇಕಾಗಿಲ್ಲ.

*   *   *

ರಾಷ್ಟ್ರೀಯ ಸಭೆಯು ಅಧಿವೇಶನಕ್ಕೆ ಪುನಃ ಸೋಮವಾರ ೧೧ ಘಂಟೆಗೆ ಪ್ರಾರಂಭವಾಯಿತು. ಮೊದಲನೇ ಠರಾವು ಲೋಕಮಾನ್ಯ ಬಾಳ ಗಂಗಾಧರ ಟಿಳಕ ಇವರ ನಿಧನದ ದುಃಖಪ್ರದರ್ಶನದ್ದಿತ್ತು. ಅದನ್ನು ಅಧ್ಯಕ್ಷರೇ ಸದ್ಗದಿತಭಾಷಣ ಮಾಡಿ ಸಭೆಯ ಮುಂದಿಟ್ಟರು. ಅದು ಎಲ್ಲರೂ ಎದ್ದುನಿಂತು ಪಾಸುಮಾಡಿದರು. ಬಿಹಾರದ ಮುಂದಾಳುಗಳಾದ ಶ್ರೀಮನೋಹರಪ್ರಸಾದ ಇವರ ನಿಧನದ ವಿಷಯು ಎರಡನೇ ಠರಾವನ್ನು ಸಹ ಅಧ್ಯಕ್ಷರೇ ಸೂಚಿಸಿ, ಮಂಜೂರು ಮಾಡಿಕೊಂಡರು.

*   *   *

ಶೋಕ ಪ್ರದರ್ಶನವಾದಮೇಲೆ, ಪಂಜಾಬದ ಅತ್ಯಾಚಾರದ ಸಂಬಂಧದ ಮೂರನೇ ಠರಾವನ್ನು ಸರ ಅಶುತೋಷ ಚೌಧರಿಯವರು ಸೂಚಿಸಿದರು. ಈ ಠರಾವು ಕಾಂಗ್ರೆಸ-ಕಮಿಟಿಯ ಅಭಿಪ್ರಾಯ ಮನ್ನಿಸಿ, ಸರಕಾರದಿಂದ ನೇಮಿಸಲ್ಪಟ್ಟ ಹಂಟರಕಮಿಟಿಯ ರಿಪೋರ್ಟು, ನಿಂದಾಜನಕ, ಅವಿಶ್ವಸನೀಯ, ಅನ್ಯಾಯ್ಯವಾದದ್ದೆಂತಲೂ, ಹಿಂದುಸ್ಥಾನಸರಕಾರದ ತ್ರೋಟಕ ಸಮಾಲೋಚನವು ಪಕ್ಷಪಾತ ಬುದ್ಧಿ ಪ್ರೇರಿತವಾದದ್ದೆಂತಲೂ ಅಭಿಪ್ರಾಯ ಪಟ್ಟಿರುತ್ತದೆ. ಈ ಠರಾವಿಗೆ ಅನುಮೋದನಪರವಾದ ಬಿಪಿನ್ನರ ಜಿನ್ನಾ ಇವರ ಭಾಷಣವು ಬಹಳೇ ಪರಿಣಾಮಕಾರಕವಾಯಿತು. ಪಂಜಾಬದ ದುಃಖದ ವರ್ಣನವನ್ನು ಕೇಳಿ, ನೆರೆದ ಪ್ರತಿನಿಧಿಗಳು ಬಹು ಕಳವಳಗೊಂಡರು. ಇದಕ್ಕೆ ಶ್ರೀ ಜೋಶಿರಾಮ, ಹಕಿಮ ಅಜಮಲಖಾನ ಮುಂತಾದವರು ಪುಷ್ಟಿಕೊಟ್ಟ ಮೇಲೆ, ಠರಾವು ಏಕಮತದಿಂದ ಮಂಜೂರಾಯಿತು. ಪಂಜಾಬ ಪ್ರಕರಣದಲ್ಲಿ ಯೋಗ್ಯರೀತಿಯ ನಿರ್ಣಯ ಕೊಡದಿದ್ದದರಿಂದ, ಬ್ರಿಟಿಶ ಪ್ರಧಾನಮಂಡಳದಮೇಲೆ ಹಿಂದಿರಾಷ್ಟ್ರದ ವಿಶ್ವಾಸವಿಲ್ಲೆಂಬ ನಾಲ್ಕನೇ ಠರಾವನ್ನು ಶ್ರೀ ಜಿತೇಂದ್ರ ಲಾಲ ಬಾನರ್ಜಿಯವರು ಸೂಚಿಸಿದರು, ಅದಕ್ಕೆ ಪಂಡಿತ ಜಿತನಮತ್ತ ಶುಕ್ಲ, ಡಾ॥ ಪನ್ನಾಲಾಲ ಇವರ ಭಾಷಣಗಳಾಗಿ, ಠರಾವು ಮಂಜೂರಾಯಿತು. ಇಷ್ಟಾದಮೇಲೆ, ರಾಷ್ಟ್ರೀಯ ಸಭೆಯು ಸೋಮವಾರದ ಬೈಠಕವು ಮುಗಿಯಿತು. ಪುನಃ ರಾಷ್ಟ್ರೀಯ ಸಭೆಯು ಬುಧವಾರ ಮಧ್ಯಾಹ್ನಕ್ಕೆ ಕೂಡುವದು.

ಕುಮಟಾ ಬೇಸಾಯದ ಪ್ರಯೋಗ ಹೊಲ.

ಹತ್ಯಾರು—ಗೊಬ್ಬರಗಳ ಪ್ರಾತ್ಯಕ್ಷಿಕೆಗಳು,

ಈ ಸಮಾರಂಭವು ನಿನ್ನೆ ತಾ. ೮ ನೇ ಬುಧವಾರ ಜಿಲ್ಲೆಯ ರಾ॥ ಸಾ॥ ಕುಳಕರ್ಣಿಯರ ಅಧ್ಯಕ್ಷತೆಯಲ್ಲಿ ಜರುಗಿತು. ಇದಕ್ಕಾಗಿ ಕಾರವಾರ, ಅಂಕೋಲಾ, ಹೊನ್ನಾವರ ಭಟ್ಕಳ ಮುಂತಾದ ತಾಲೂಕಗಳಿಂದಲೂ, ಈ ತಾಲೂಕ ಹಳ್ಳಿಪಳ್ಳಿಗಳಿಂದಲೂ ಸುಮಾರು ೨೦೦ ಜನರು ಕೂಡಿದ್ದರು. ಶೇತಕೀಖಾತೆಯ ಡೆಪ್ಯೂಟಿ ಡ್ಯಾರೆಕ್ಟರ ಸಾಹೇಬರು ೮ ದಿವಸ ಮುಂಚಿತಾಗಿಯೇ ಬಂದಿದ್ದರು. ಪ್ರಾರಂಭದಲ್ಲಿ ಫಾರ್ಮ ಸುಪರಿಂಟೆಂಡೆಂಟರು ಬಂದ ಸದ್ಗೃಹಸ್ಥರನ್ನು ಸ್ವಾಗತಮಾಡಿ, ಗಾಂವಟಿ ಮತ್ತು ಸುಧಾರಿಸಿದ ಹತ್ಯಾರುಗಳ ಪ್ರಯೋಗಗಳಿಂದ ತುಲನಾತ್ಮಕ ಪರಿಣಾಮ, ಮತ್ತು ಉಪಯೋಗದ ಜ್ಞಾನವನ್ನು ನೆರೆದ ಜನರಿಗೆ ಮಾಡಿಕೊಟ್ಟು, ಬೇಸಾಯದ ಹೊಲದಲ್ಲಿ ಈಗ ಮೂರು ವರ್ಷಗಳ ವರೆಗೆ ಅಲ್ಲಿ ಕೈಕೊಂಡ ಸುಧಾರಣೆಗಳ ಎಲ್ಲ ಬಗೆಯ ಅಂಗಉಪಾಂಗಗಳಿಂದಲೂ, ಈಗ ಪ್ರಚಾರದಲ್ಲಿರುವ ಗೊಬ್ಬರ, ಹೂತುವ ಕ್ರಮ, ನಟ್ಟಿ, ಉಪಕರಣ ಕೃಷಿಪದ್ಧತಿಗಳಿಗೂ, ಸುಧಾರಿಸಿದ ಪದ್ಧತಿಗೂ ತುಲನಾತ್ಮಕ ದೃಷ್ಟಿಯಿಂದ ವಿವೇಚನೆ ಮಾಡಿ, ಸಾಂಗ್ಯವಾಗಿ ಸಮಾಧಾನಪಡಿಸಿದರು. ಹಾಗೆಯೇ, ಕಬ್ಬಿನ ಸಾಗವಳಿಗೆ ಅವಶ್ಯಕ ಶಾಸ್ತ್ರೀಯ ಮಾಹಿತಿ, ತಗಣಿಯ ಹೊರತು ಸಾರ ಉಳ್ಳ ಗೊಬ್ಬರಗಳು ಯಾವ್ಯಾವು ಮತ್ತು ಎಷ್ಟೆಷ್ಟು ಮತ್ತು ಯಾವಾಗ ಹಾಕಬೇಕೆಂಬದು ಸಹ ಹೇಳಿ, ಆ ಸಮಯಾನೆಯಿಂದ ಮಾಡಿದ ಮಾದರಿಯ ಕಬ್ಬನ್ನು ಪ್ರತ್ಯಕ್ಷ ತೋರಿಸಿ, ಶಾಸ್ತ್ರಿ ಮಾಡಿದರು. ಈ ಸಂಬಂಧದ ಮಾಹಿತಿ ಹೇಳಿಕೊಂಡ ದೇಶಿ ಪ್ರಾಂತಿಕ ಪ್ರತಿ ಒಂದು ಸಣ್ಣ ಲೇಖವನ್ನು ಸಹ ಛಾಪಿಸಿ, ನೆರೆದ ಸಭಿಕರಿಗೆ ಹಂಚಿದ್ದರು. ತ್ಯಾಮುತರ ಸಮಯ ಧಾರ್ಮಿನೆ ಮೈದಾನಗಳಲ್ಲಿ ಹೊಸುವ ಹೋರಿಗಳ ಬೀಜ (ತರಪು) ವನ್ನು ತೆಗೆಯುವ ಪ್ರಯೋಗವನ್ನು ಇಲ್ಲಿಯ ಪಶುವೈದ್ಯಖಾನೆಯ ಡಾಕ್ಟರರು ಮಾಡಿ ತೋರಿಸಿದರು.

ಸುಕೀ ಜಾತಿಯ ಬೀಜದ ಕೋಣ (ಹೋರಿ) ವನ್ನು ನೆರೆದ ಜನರಿಗೆ ತೋರಿಸಿ, ಅದರಿಂದ ಹುಟ್ಟಿದ ಕರು ಎಷ್ಟು ಸಶಕ್ತವಾಗಿರುವವೆಂಬದು ಸಹ ತೋರಿಸಲ್ಪಟ್ಟಿತು.

ಆಮೇಲೆ ಪುನಃ ಅದೇ ಪಟಾಂಗಣದಲ್ಲಿ ಸಭೆಕೂಡಿ ಡೆರಗಿನಿಂದ ಅವರೆಗೆ ನಡೆದ ಉಪಕ್ರಮಗಳನ್ನು ಉದ್ದೇಶಿಸಿ ಯಾರಿಗಾದರೂ ಏನಾದರೂ ಕೇಳತಕ್ಕದ್ದಿದ್ದರೆ, ಕೇಳಬಹುದೆಂತ ಫಾ॥ ಸುಪರಿಂಟೆಂಡೆಂಟರು ಸೂಚಿಸಿದರು. ಆ ಪ್ರಕಾರ ಕೆಲವರು ತಮ್ಮ ತಮ್ಮ ಮಾಹಿತಿಯನ್ನು ಹೇಳಿದಮೇಲೆ, ರಾ॥ ಸಾ॥ ಮಾಮಲೇದರು ಈ ಜಿಲ್ಲೆಯ ರಯತರ ಬಡ ಸ್ಥಿತಿಯನ್ನು ಕಣ್ಣಾರೆ ನೋಡಿ, ಇಂಥ ಭಾರಿ ಕ್ರಯ ನಾಳುವ ಉಪಕರಣ–ಗೊಬ್ಬರಗಳನ್ನು ಕೊಂಡು ಕೊಳ್ಳುವಷ್ಟು ಸಾಮರ್ಥ್ಯವಿಲ್ಲೆಂಬರ್ಥದ ಮತ್ತು ಈ ಜಿಲ್ಲೆಯ ಶೇತಕಿ ಸುಧಾರಣೆಗೆ ಪ್ರತಿಬಂಧಕವಾದ ಜಂಗಲ ಕಾನೂನುಗಳ, ಕಾಡು ಮೃಗಗಳ ಕಾಟದ ಮತ್ತು ಅನಾರೋಗ್ಯಕರವಾದ ಮಲೇರಿಯಾದ ಪರಿಹಾರವಾದ ಹೊರತು ನಿಷ್ಪ್ರಯೋಜನವೆಂದು ಉದ್ಗಾರ ತೆಗೆದರು. ಡೆ॥ ಡ್ಯಾರೆಕ್ಟರರು ಇದಕ್ಕೆ ಜವಾಬು ಕೊಡುವಾಗ, ಅದನ್ನು ಒಪ್ಪಿದರೂ, ಏಕ ಕುಟುಂಬವಾದ ಸರಕಾರದ ಹಲವು ಖಾತೆಗಳಿದ್ದು ಆಯಾಯ ಖಾತೆಗೆ ಸ್ವತಂತ್ರವಾಗಿ ವಹಿಸಿರುವ ಕರ್ತವ್ಯಗಳಲ್ಲಿ ತಾವು ಕೈಹಾಕುವದು ಸರಿಯಲ್ಲವೆಂಬದನ್ನು ಸಮರ್ಥಿಸಿದರು. ಮೆಜಿಕಲೆಂಟರ್ನದಿಂದ ಕೆಲವು ಚಿತ್ರಗಳನ್ನು ತೋರಿಸುವ ಲವಲವಿಕೆಯು ಅವ್ಯವಸ್ಥಿತ ಸಾಧನಗಳ ಮೂಲಕ, ಸಾಧ್ಯವಾಗಲಿಲ್ಲ. ಹೀಗಾಗಿ ಸಭೆಯು ೯ ಘಂಟೆ ರಾತ್ರಿಗೆ ವಿಸರ್ಜನವಾಯಿತು.

ಕಲೆಕ್ಟರರ ಕೊಲೆ.

ಹೆಸರಾದ ಬದಮಾಷರ ಕೃತ್ಯ.

ಮೇರಿಯ ಕಲೇಕ್ಟರರ ಕೊಲೆಯ ವಿಷಯವಾಗಿ ವಿಶೇಷ ಸುದ್ದಿಗಳು ಬಂದಿವೆ. ಕನ್ನಹಾಕಿ ಕಳವು ಮಾಡಿದ ಬಗ್ಗೆ ನಾಲ್ಕುಸಾರೆ ಶಿಕ್ಷೆ ಹೊಂದಿದಂಥ ಮತ್ತು ಪೋಲೀಸರ ಬದಮಾಷಲೀಸ್ಟಿನಲ್ಲಿ ಹೆಸರಾಗಿರುವಂಥ ಒಬ್ಬ ಹರಿಜನನು ಮೂವರನ್ನು ಕೂಡಿಕೊಂಡು ಕತ್ತಿ, ಕಠಾರಿಗಳಿಂದ ಸಾಹೇಬರ ಕೊಲೆಮಾಡಿದನು. ಸರಕಾರದವರು ಖಿಲಾಫತದಲ್ಲಿ ಮಾಡಿದ ಅನ್ಯಾಯದ ಮುಯ್ಯವೆಂದು ಈ ಕೊಲೆ ಮಾಡಿದಂತೆ ಈತನು ಒಪ್ಪಿದ್ದಾನೆ. ಸರಕಾರದವರು ಮೇರಿಯ ಮುಸಲಮಾನರ ವಸತಿಯ ಸುತ್ತಲು ಕಾವಲಿಟ್ಟು, ಸ್ಟೇಶನಲ್ಲಿ ಒಡಾಡುವ ಬದಮಾಷ ಜನರ ಮೇಲೆ ವಿಶೇಷ ಲಕ್ಷ್ಯ ಇಟ್ಟಿದ್ದಾರೆ. ಕೊಲೆಮಾಡಿದವ ಕಬೂಲಿ ಜವಾಬಾಗಿದ್ದು, ಕಲೆಕ್ಟರ ಸಾಹೇಬರು ಸಿಗದ್ದರೆ, ಪೋಲಿಸ ಸಾಹೇಬರನ್ನಾದರೂ ಕೊಂದು ಕೊಲ್ಲುತ್ತಿದ್ದನೆಂದು ಹೇಳುತ್ತಾನೆ.

ವಿಜಯ—ಧಾರವಾಡ.

ಕಾನಡಾ ವೃತ್ತ.

ಗುರುವಾರ, ತಾರೀಖು ೯, ಮಾಹೆ ಸಪ್ಟಂಬರ, ಸನ್ ೧೯೨೦ ನೇ ಇಸವಿ.



ದೇಶ ಭಕ್ತ ಲಾಲಾ ಲಜಪತರಾಯ.

ಮಹಾತ್ಮಾ ಮೋಹನಚಂದ ಗಾಂಧಿ.

ಕಲಕತ್ತೆಯ ರಾಷ್ಟ್ರೀಯಸಭೆ.

ಕಲಕತ್ತೆಯೊಳಗೆ ರಾಷ್ಟ್ರೀಯ ಸಭೆಯ ಜಾದಾ ಅಧಿವೇಶನವು ಬಹಳೇ ಉತ್ಸಾಹದಿಂದ ಮತ್ತು ಬಹಳೇ ವಿಜೃಂಭಣೆಯಿಂದ ನೆರವೇರಿತೆಂದು ತಿಳಿಸಲು ಆನಂದವೆನಿಸುತ್ತದೆ. ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಿದಂದಿನಿಂದ ಮೊನ್ನಿನ ತನಕ ಅದರ ೩೫ ಅಧಿವೇಶನಗಳಾದವು. ಇಷ್ಟು ಅವಧಿಯೊಳಗೆ ಅದರ ಸ್ಥಿತ್ಯಂತರಗಳೂ ಬಹಳಾದವು. ಅದರ ಪ್ರತಿಪಕ್ಷಿಗಳಾದ ಎಂಗ್ಲೋ ಇಂಡಿಯನರ ಕಡೆಯಿಂದ, ಅದರ ಬಾಲ್ಯಾವಸ್ಥೆಯಲ್ಲಿ ಅದರ ವಿಡಂಬನೆಯೂ, ನಿಂದೆಯೂ, ಅಷ್ಟಿಷ್ಟಾಗಿಲ್ಲ. ಪ್ರಾಯದ ಸಂಗಡ ಅದರೊಳಗಿನ ಲೋಕಮಾತದ ಶಕ್ತಿಯು ಹೆಚ್ಚುತ್ತ ನಡೆದಂತೆ, ವಿಡಂಬನೆಯು ವಿಧ್ವಂಸಕ ಟೀಕೆಯ ಸ್ವರೂಪವನ್ನು ತಾಳಿತು. ಬರಬರುತ್ತ ರಾಷ್ಟ್ರೀಯ ಸಭೆಯ ಚಾಲಕರೊಳಗೆ ಧ್ಯೇಯದ ವಿಷಯವಾಗಿ ಏಕಮತವಿದ್ದರೂ, ಧ್ಯೇಯವನ್ನು ಪ್ರಾಪ್ತಮಾಡಿಕೊಳ್ಳುವ ಧೋರಣದ ದೃಷ್ಟಿಯಿಂದ ಮತಭೇದಗಳುಂಟಾಗಿ, ಲೋಕಮತನೇತರ, ಉದಾರ ಮತವಾದಿಗಳು, ಸ್ವರಾಜ್ಯವಾದಿಗಳೆಂಬ ಎರಡು ಪಕ್ಷಗಳಾದವು. ಹಿಂದೀ ರಾಜಕಾರಣದೊಳಗೆ ನೇಮಸ್ತರೂ, ರಾಷ್ಟ್ರೀಯರೂ ಎಂಬ ಸ್ವತಂತ್ರ ಪಕ್ಷಗಳಾದವು. ಇಂಥ ಪಕ್ಷಭೇದಗಳ ಆಪತ್ತಿಯಿಂದ ಕೆಲಕಾಲ ರಾಷ್ಟ್ರೀಯ ಸಭೆಯ ಲೋಕಶಿಕ್ಷಣದ ಕಾರ್ಯವು ಬಹಳೇ ಸಂಕುಚಿತವಾಯಿತು. ಪ್ರತಿನಿಧಿಗಳ ಸಂಖ್ಯೆಯೂ, ಸಹಸ್ರ ಪ್ರಮಾಣದಿಂದ ಶತ ಪ್ರಮಾಣಕ್ಕೆ ಇಳಿಯಿತು. ಮಹಾಯುದ್ಧವು ಪ್ರಾರಂಭಿಸಿದ ನಂತರ ಪುನಃ ಐಕ್ಯವಾಗಿ, ಲೋಕಗಂಗೆಯ ಪ್ರವಾಹವು ಬಹಳೇ ವಿಸ್ತೃತವಾಗಿ ಹರಿಯಹತ್ತಿತು. ಇನ್ನು ಕಳೆದ ಐದಾರು ವರ್ಷಗಳಿಂದ ಹಿಂದುಸ್ಥಾನದೊಳಗಿನ ಲೋಕಶಾಹಿಯು ಕೇಂದ್ರಸ್ಥಾನವಾಗಿ ಅದು ವೃದ್ಧಿಂಗತವಾಗುತ್ತಲಿದೆ. ರಾಷ್ಟ್ರೀಯ ಸಭೆಯ ಕಾರ್ಯದ ಮಹತ್ವವನ್ನು ಪಾರ್ಲಿಮೆಂಟ ಸಭೆಗೆ ಸಹ ತಿರಸ್ಕರಿಸಿ ನಾಲದೆಂದು, ಕಳೆದ ವರ್ಷ ಪ್ರಧಾನಮಂಡಲದೊಳಗಿನ ಮುಖ್ಯ ಪ್ರಮುಖ ಪ್ರಧಾನರು ಪಾರ್ಲಿಮೆಂಟ ಸಭೆಯಲ್ಲಿಯೇ, ಮೊಂಟೆಗ್ಯೂ ಕಾಯಿದೆಯನ್ನು ಶೀಘ್ರವಾಗಿ ಪಸಾರಿಸುವ ಆವಶ್ಯಕತೆಯನ್ನು ಕುರಿತು ಮಾತಾಡುವಾಗ, ಅಪ್ರತ್ಯಕ್ಷವಾಗಿ ಸೂಚಿಸಿದ್ದರು. ಇಂಥ ಮಹತ್ವದ ಪದವಿಯನ್ನು ಸತ್ತಾಧಿಕಾರಿಗಳ ದೃಷ್ಟಿಯಿಂದ ಸಹ, ರಾಷ್ಟ್ರೀಯ ಸಭೆಯು ಪಡೆದಿದ್ದಾಗ, ಇನ್ನೊಂದು ಹಿಂದೀ ಪ್ರತಿನಿಧಿಗಳ ಬಿನ್ ಸರಕಾರಿ ಪಾರ್ಲಿಮೆಂಟೇ ಆಗಿರುವದೆಂದು ನಾವು ಹೇಳಿದರೆ, ಅತಿಶಯೋಕ್ತಿಯಾಗದು. ಇಂಥ ಲೋಕಸಭೆಯ ಅಧ್ಯಕ್ಷತ್ವದ ಸನ್ಮಾನವನ್ನು ಪಡೆಯುವದು ಹಿಂದೀ ನಾಯಕರ ಗೌರವದ ಪರಮಾವಧಿಯೆಂದೆನಿಸಲ್ಪಡುತ್ತದೆ. ಕಲಕತ್ತೆಯ ಜಾದಾ ಅಧಿವೇಶನದ ಅಧ್ಯಕ್ಷತೆಯ ಸನ್ಮಾನವು, ಬ್ರಿಟಿಷ ರಾಜ್ಯದ ಇತಿಹಾಸದಲ್ಲಿ ಅಸಹ್ಯ ಯಾತನೆಗಳನ್ನು ಸಹಿಸಿ, ಅಜರಾಮರವಾದ, ಪಂಜಾಬ ಪ್ರಾಂತದ ಅತಿ ವಿಖ್ಯಾತ ದೇಶಭಕ್ತರಾದ, ಲಾಲಾ ಲಜಪತರಾಯರೆಂಬ ಮಹಾನುಭಾವರನ್ನು ನಿಖಿಲ ಭಾರತೀಯ ಕಾಂಗ್ರೆಸ್ಸು ಕಮಿಟಿಯು ಅರ್ಪಿಸಿತ್ತೆಂದು ನಾವು ಮೊದಲೇ ತಿಳಿಸಿದ್ದೆವು.

ಪಂಚ ನದಿಗಳ ಪುಣ್ಯ ಭೂಮಿಯೊಳಗೆ ಹುಟ್ಟಿದ ಈ ಸತ್ಪುತ್ರರು ತಮ್ಮ ಅಧ್ಯಕ್ಷ ಪದವಿಗೆ ಭೂಷಣಾವಹವಾಗುವಂತೆ, ತಮ್ಮ ಕರ್ತವ್ಯವನ್ನು ಧೈರ್ಯದಿಂದ, ಜಾಣತನದಿಂದ, ಮುತ್ಸದ್ದಿತನದಿಂದ ಜರುಗಿಸಿದರೆಂದು ನಿವೇದಿಸಲು, ಅತ್ಯಂತ ಸಂತೋಷಪಡುವೆವು. ಲಾಲಾಜಿಗಳೆಂದರೆ, ಹಿಂದೀ ಲೋಕನಾಯಕರೊಳಗಿನ ಅಸಾಮಾನ್ಯ ಮಹಾಪುರುಷರಾಗಿರುವರು. ಮಾತೃಭೂಮಿಯ ಸೇವೆಯಿಂದ ಅವರು ಎಷ್ಟು ಕಷ್ಟಗಳನ್ನು ಸಹಿಸಿದ್ದಾರೆ, ಎಷ್ಟು ಆಪತ್ತುಗಳಿಗೆ ಧೀರತೆಯಿಂದ ಎದುರಾಗಿದ್ದಾರೆ, ದೇಶತ್ಯಾಗವನ್ನು ಮಾಡುವಂಥ ದುರ್ಧರ ಸಂಕಟವನ್ನು ಗುಣುಗುಟ್ಟದೇ ತಾಳಿ, ಪರದೇಶದಲ್ಲಿಂದ ಸಹ, ದೇಶಸೇವೆಯ ವ್ರತವನ್ನು ಅವ್ಯಾಹತವಾಗಿ ಹ್ಯಾಗೆ ನಡಿಸಿದರೆಂದು ಲೋಕವು ಅರಿತಿರುವದು. ಅವರ ವಿಚಾರಗಳಲ್ಲಿ, ಉಚ್ಚಾರಗಳಲ್ಲಿ, ಆಚಾರಗಳಲ್ಲಿ, ದೈವಿಕ ಸ್ಫೂರ್ತಿಯ ಜೀವನಕಳೆಯು ಇರುವದು. ಅದರ ಪ್ರತ್ಯಂತರವು ಯಥಾರ್ಥವಾಗಿ, ಅವರ ಅಧ್ಯಕ್ಷತೆಯ ಕರ್ತವ್ಯದೊಳಗೆ ಎಲ್ಲರಿಗೂ ಕಂಡುಬಂದಿದೆ. ಅವರ ಭಾಷಣವನ್ನು ಸಮಗ್ರವಾಗಿ ಓದಿ ನೋಡಿದರೆ, ದೇಶಸೇವೆಯ ಕರ್ತವ್ಯದ ಧ್ವನಿಯು ಅದರ ಪ್ರತಿ ಒಂದು ಶಬ್ದದೊಳಗೆ, ಪ್ರತಿ ಒಂದು ವಾಕ್ಯದೊಳಗೆ, ಝೇಂಕರಿಸುತ್ತಿದೆ. ಸತ್ಯತತ್ವಗಳ ಪ್ರಕಾಶವು ಅವರ ನುಡಿಗಳೊಳಗೆ ಉಜ್ವಲವಾಗಿ ಪ್ರತಿಬಿಂಬಿಸಲ್ಪಟ್ಟಿದೆ. ಪಂಜಾಬ ಪ್ರಾಂತವು ತನ್ನ ಫಿರ್ಯಾದನ್ನು ಲಾಲಾಜಿಯವರ ಮುಖಾಂತರ ಮಾಡಿರುವದು. ಅವರ ಸಂದೇಶದ ಇತ್ಯರ್ಥವು ಇಷ್ಟೇ. ಪರಾವಲಂಬಿಗಳಾಗಬೇಡಿರಿ; ಸದೈವ ಕರ್ತವ್ಯದೊಳಗೆ ಮಗ್ನರಾಗಿರಿ; ಪರರು ನಿಂದಿಸಲಿ, ವಂದಿಸಲಿ, ಸ್ವರಾಜ್ಯದ ಧ್ಯೇಯದ ಕಡೆಗೆ ಇಟ್ಟ ದೃಷ್ಟಿಯನ್ನು ವಿಚಲವಾಗಗೊಡದೇ, ಹೊಡೆದು ಮುಂದೆ ಸಾಗಿರಿ. ಉದ್ಧರೇತ್ ಆತ್ಮನಾತ್ಮಾನಮ್। ನಾತ್ಮಾನಮವಸಾದಯೇತ್ ॥ ಆತ್ಮೈವ ಆತ್ಮನೋ ಬಂಧುಃ। ಆತ್ಮೈವ ರಿಪುರಾತ್ಮನಃ॥ ಇವರ ಸಂದೇಶದ ಸಾರಾಂಶವು ಇದೇ. ಅವರ ಉಪನ್ಯಾಸದ ವಿಸ್ತೃತ ವಿವೇಚನೆಯನ್ನು ಮತ್ತೊಮ್ಮೆ ಕೈಕೊಳ್ಳುವೆವು.

ಈ ಅಧಿವೇಶನದೊಳಗೆ ಲಾಲಾಜಿಯವರು ತಮ್ಮ ಜನ್ಮಭೂಮಿಯಾದ ಪಂಜಾಬದ ಕರುಣ ಕಥೆಯನ್ನು ಹಕ್ಕಿನಿಂದ ನಿವೇದಿಸಿದರೆ, ಮಹಾತ್ಮಾ ಗಾಂಧಿಗಳು ನಮ್ಮ ಮಹಮ್ಮದೀ ಬಾಂಧವರ ಖಿಲಾಫತಿನ ಹೃದ್ಗತವನ್ನು ಅಸಹಕಾರಿತೆಯ ಚರ್ಚೆಯ ಮುಖಾಂತರ ಹೊರಗೆಡಹಿದರು. ಮಹಾತ್ಮಾ ಗಾಂಧಿಗಳೆಂದರೆ, ಅವರೇನು ಸರ್ವಸಾಮಾನ್ಯ ವ್ಯಕ್ತಿಗಳಲ್ಲ! ಅವರ ಹೆಸರನ್ನು ಉಚ್ಚರಿಸಿದ ಕೂಡಲೇ, ನಮ್ಮ ಪುರಾಣಕಾಲದ ಯೋಗಿಗಳ ಮತ್ತು ತಪಸ್ವಿಗಳ ನೆನಪಾಗುತ್ತದೆ. "ಸತ್ಯಂ ವದ, ಧರ್ಮಂ ಚರ" ಎಂದು ಹೇಳುವದಕ್ಕಿಂತ, ಆಚರಿಸುವದೇ ಫಲಪ್ರದವೆಂದು, ಅವರು ತಮ್ಮ ಸತ್ಯಾಗ್ರಹಧರ್ಮದ ಕಠಿಣತರವಾದ ತಪಸ್ಸನ್ನು ಎಷ್ಟೋ ವರ್ಷಗಳಿಂದ ಆಚರಿಸುತ್ತಲೇ ಇರುವರು. ಅಸಹಕಾರಿತೆಯು ಅವರ ಸತ್ಯಾಗ್ರಹಧರ್ಮದ ಅಂಗವೇ ಆಗಿರುವದು. ಇವರಂಥ ಸಂಸಾರಿಕ ಯೋಗಿಗಳು ಇಡೀ ಜಗತ್ತಿನಲ್ಲಿ ಕೈಬೆರಳುಗಳಿಂದ ಎಣಿಸುವಷ್ಟು ಆದರೂ ದೊರಕುವದು ದುರ್ಲಭವು. ರಶಿಯಾದೊಳಗಿನ ಮಹಾವಿಖ್ಯಾತ ಟಾಲಸ್ಟಾಯರಂಥ ಅದ್ವಿತೀಯ ವಿಭೂತಿಗಳು ಇವರಾಗಿರುವರು. "ಜಗತ್ತಿನೊಳಗ ಇಂಥ ಮಹಾಪುರುಷರು ಎಲ್ಲಿದ್ದಾರೆಂದು ನನಗೆ ತೋರಿಸಿರಿ" ಎಂದು ಲಾಲಾಜಿಯವರೇ ತಮ್ಮದೊಂದು ಭಾಷಣದಲ್ಲಿ ಹೇಳಿದ್ದರು. ಇಂಥ ಅಸಾಮಾನ್ಯ ದೇಶಭಕ್ತರ ಸಂಯೋಗವು ಕಲಕತ್ತೆಯೊಳಗೆ ಮೊನ್ನೆ ಕೂಡಿಬಂದಿತ್ತು. ಅವರ ಮತಗಳ ಮಂಥನವೂ ಅಂದಿಗಾಯಿತು. ಅವರ ಸೇವಾತತ್ಪರತೆಯನ್ನು ನೋಡಿ, ಹಿಂದಮಾತೆಯು ಅವರಿಗೆ ಧನ್ಯವಾದಗಳನ್ನು ಅರ್ಪಿಸದಿರದು. ಇಂಥ ಪುಣ್ಯಶ್ಲೋಕ ಮಹಾನುಭಾವರ ಭಾವಚಿತ್ರಗಳ ದರ್ಶನವು ನಮ್ಮ ವಾಚಕರಿಗಾಗಬೇಕೆಂದು, ಮಹತ್ಪ್ರಯಾಸದಿಂದ ಅವುಗಳನ್ನು ಸಂಗ್ರಹಿಸಿ, ಇಂದಿಗೆ ಮುದ್ರಿಸಿರುವೆವು. ಅವುಗಳ ದರ್ಶನದಿಂದ ನಮ್ಮೆಲ್ಲರಿಗೆ ದೇಶಸೇವೆಯ ಸ್ಫೂರ್ತಿಯು ಉಂಟಾಗಲಿ; ಮತ್ತು ನಮ್ಮ ಮಾತೃಭೂಮಿಯ ಉತ್ತರೋತ್ತರ ಉತ್ಕರ್ಷವಾಗಲೆಂದು ಬಯಸಿ, ಇಂದಿನ ನಮ್ಮ ಸೇವೆಯನ್ನು ಮುಗಿಸುವೆವು.

“ಉದ್ಧರೇದಾತ್ಮನಾತ್ಮಾನಮ್.”

❋ ಜಾದಾ ರಾಷ್ಟ್ರೀಯ ಸಭೆ. ❋

ಅಧ್ಯಕ್ಷರಾದ ಲಾಲಾ ರಜಪತರಾಯರ ಭಾಷಣವು.

ಲಾಲಾ ಲಜಪತರಾಯರ ಭಾಷಣವು ಬಹಳೇ ವಿಸ್ತೃತವಿದೆ. ಅದರ ಸಾರಾಂಶವನ್ನಷ್ಟು ಕೆಳಗೆ ಕೊಟ್ಟಿರುವೆವು. ಅಧ್ಯಕ್ಷರು ರಾಷ್ಟ್ರೀಯ ಕಾರ್ಯದಲ್ಲಿ ಕಲಕತ್ತಾ ನಗರಿಯು ಎಷ್ಟು ಉಪಕರಿಸಿದೆ? ಪರಮಪೂಜ್ಯ ಮಹರ್ಷಿ ದಾದಾಭಾಯಿ ನವರೋಜಿಗಳು ಇದೇ ಸ್ಥಳದಲ್ಲಿ ಹಿಂದೀ ರಾಷ್ಟ್ರಕ್ಕೆ ಸ್ವರಾಜ್ಯದ ಮಹಾಮಂತ್ರವನ್ನು ಎಂತು ಅರ್ಪಿಸಿದರು ಎಂಬುವನ್ನು ವಿವರಿಸಿ, ತಮಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷತೆಯ ಸನ್ಮಾನವನ್ನು ಅನುಗ್ರಹಿಸಿದ್ದಕ್ಕಾಗಿ ಆಭಾರಗಳನ್ನೆಣಿಸಿ, ಪ್ರಚಲಿತ

ರಾಜಕೀಯ ಕಾದಾಟದ

ಕಡೆಗೆ ತಿರುಗಿದರು. ವರ್ತಮಾನ ಕಾಲದೊಳಗೆ ರಾಜಕೀಯ ಕ್ಷೇತ್ರದಲ್ಲಿ ನಮ್ಮದೊಂದು ದೊಡ್ಡ ಕಾದಾಟವೇ ಸಾಗಿದೆ. ಹಿಂದಿನ ಕಾಲದ ರಾಜಕಾರಣದ ಸರಳ ಗತಿಯು ಇಂದಿಗಿಲ್ಲ. ಮೊದಲಿನ ರಾಜಕಾರಣದೊಳಗೆ ಮತಭೇದಗಳಿದ್ದಿಲ್ಲವೆಂದು ಹೇಳಿದರೂ, ಹೇಳಬಹುದು. ಮೋಣಕಾಲೂರಿ ಯಾಚನೆ ಮಾಡುವ ಮನೋವೃತ್ತಿಯು ಇಂದಿಗಿಲ್ಲ. ಇನ್ನು ನಮ್ಮ ಬೇಡಿಕೆಗಳಿಗೆ ಧಿಟ್ಟ ಮತ್ತು ಫಲದಾಯಕ ಕೃತಿಯ ಬೆಂಬಲವಿದೆ. ಇಡೀ ದೇಶವು ಮಹತ್ತಾದ ಸಾತ್ವಿಕ ಕಾದಾಟದ ವ್ಯಥೆಯಲ್ಲಿದೆ. ನಮ್ಮ ಪ್ರತಿಪಕ್ಷಿಗಳು ಇದಕ್ಕೆ ಕ್ರಾಂತಿಯೆಂದು ಹಳಿಯುತ್ತಿರುವರು.

ಕ್ರಾಂತಿಯೆಂಬ ಶಬ್ದವನ್ನು

ಕೇಳಿದ ಕೂಡಲೆ, ಕೆಲವರು ಬೆರಗಾಗಿ ಬೆಚ್ಚುತ್ತಿರುವರು. ಇಂಥ ಶಬ್ದಗಳೇನು ನನಗೆ ಬೆದರಿಸವು. ಈಗ ನಡೆದಿರುವ ಯುಗವು ಅನೇಕ ದೃಷ್ಟಿಯಿಂದ ಕ್ರಾಂತಿಕರವದೆ. ಈಗಿನ ಕ್ರಾಂತಿಯು ಸರ್ವವ್ಯಾಪಿಯಾಗಿರುವದು; ಧಾರ್ಮಿಕ, ನೈತಿಕ, ಸಾಮಾಜಿಕ, ಶಿಕ್ಷಣವಿಷಯಕ, ಆರ್ಥಿಕ ಮತ್ತು ರಾಜಕೀಯ ತತ್ವಗಳೂ, ಸಂಸ್ಥೆಗಳೂ ಇನ್ನು ಉತ್ಕ್ರಾಂತಿ ಹೊಂದುವ ಸ್ಥಿತಿಯಲ್ಲಿರುವವು. ಸ್ವಭಾವತಃ ನಾವೇನು ಕ್ರಾಂತಿಕಾರಕರಲ್ಲ. ನಮ್ಮ ಚಲವಲವು ಯಾವಾಗಲೂ ಶಾಂತತೆಯಿಂದ ಅಸ್ತೆ ಅಸ್ತೆ ನಡೆದಿರುವದು. ಆದರೆ, ಹಿಮ್ಮೊಡೆದು ಸಾಗಬೇಕೆಂದು ನಾವು ನಿರ್ಧರಿಸಿ ಮುಂದರಿಯಹತ್ತಿದರೆ, ಕಡೆಗೆ ಮಾತ್ರ ತ್ವರೆಯಿಂದ, ಉಸ್ಸ ಉಸ್ಸ ಹೆಜ್ಜೆಗಳನ್ನಿಟ್ಟು ಮುಂದೆ ಸಾಗುವದು ನಮ್ಮ ಸ್ವಭಾವವು. ಹೀಗಿರುತ್ತಿದ್ದಲ್ಲಿ, ಕ್ರಾಂತಿಯು ಎಲ್ಲಿದೆ? ನಮ್ಮ ಸದ್ಯದ ರಾಜಕೀಯ-ಕಾದಾಟದೊಳಗೆ,

ಒಂದು ಮೌಜು

ಕಂಡು ಬರುವದು. ನಮ್ಮೊಳಗೆ ಈಗಿರುವ ವಿಧದ ಕ್ರಾಂತಿಯು ರಾಜ್ಯಕರ್ತರಿಂದಲೇ ನಮ್ಮಮೇಲೆ ಹೇರಿಸಲ್ಪಟ್ಟಿದೆ. ನಮ್ಮ ದೇಶದ ಔದ್ಯೋಗಿಕ, ಕ್ರಾಂತಿಕಾರಕರ್ಯಾರು? ಸಾಮಾಜಿಕ ಸ್ಥಿತ್ಯಂತರವನ್ನುಂಟುಮಾಡಿದವರ್ಯಾರು? ಇಂಗ್ರೇಜಿ ಪದ್ಧತಿಯ ಶಿಕ್ಷಣದಿಂದ, ವೃತ್ತಪತ್ರಗಳಿಂದ, ಕಾಯಿದೆಗಳಿಂದ, ನ್ಯಾಯಕೋರ್ಟುಗಳಿಂದ ನಮ್ಮ ಜೀವನ ಕ್ರಮವನ್ನು ಬಹುಪರಿಯಿಂದ ಅದಲುಬದಲು ಮಾಡಿದವರ್ಯಾರು? ಇಂಥ ಕ್ರಾಂತಿಯೊಳಗಿನ ಕೆಲವು ಸ್ಥಿತ್ಯಂತರಗಳು ನಮಗೂ ಬೇಕಾಗಿವೆ. ಆದರೆ ಸ್ವತಃ ರಾಜ್ಯಕರ್ತರಿಂದ ಸಹ ಅವರೊಳಗಿನ ಯಾವದೇ ಉಪಾಂಗವನ್ನು ನಾಶಪಡಿಸಲಿಕ್ಕಾಗದು. ನಮಗೀಗ ಕಾಣುವ ರಾಜಕೀಯ ಸ್ಥಿತ್ಯಂತರವನ್ನಂತೂ, ರಾಜ್ಯಕರ್ತರೇ ಉಂಟು ಮಾಡಿರುವರು. ಇದಕ್ಕಾಗಿ ಯಾರಿಗಾದರೂ ದೂಷಿಸುವದಿದ್ದರೆ, ದೋಷಕ್ಕೆ ಪಾತ್ರರಾದವರು ಅವರೇ ಸರಿ. ಇನ್ನು ಮಾತ್ರ, ಈ

ಕ್ರಾಂತಿಯ ಘಡಿಯಾರದ

ಮುಳ್ಳುಗಳನ್ನು ಹಿಂತಿರುಗಿಸುವದು ಸರ್ವಥಾ ಅಶಕ್ಯವು. ಸಾರಾಂಶ ನಾವೊಂದು ಬಿರುಸಾದ ಕಾದಾಟದಲ್ಲಿ ಸಿಲುಕಿಕೊಂಡಿರುವೆವೆಂಬುವದು ನಿಜವು.

ಅವರ ಅಂತಿಮ ಪರಿಣಾಮವೇನಾಗುವದೆಂಬ ದೇ ಶಿಪಂಚನೆಯ ವಿಷಯವು ಈ ಕಾದಾಟದ ಅಂತ್ಯವು, ಸಮಾಧಾನಕರವಾಗಬೇಕೆಂದು. ಸಮಂಜಸ ವ ಸ್ತು ಸುಶಿಕ್ಷಿತವರ್ಗದವರ ಸದಿಚ್ಛೆಯಿದೆ ಅದಕ್ಕಾಗಿ ಪುಂಡತನದ ಕೃತ್ಯಗಳನ್ನಷ್ಟೇ ಅಲ್ಲ ಪಶುಗಳನ್ನು ಸಹ ಶ್ಲಾಘಿಸಲು ಅವರು ದ ಡಿಯುತ್ತಿದ್ದರು. ಶಾಂತತೆಯ ದಾರಿಯಿಂದಲೇ ನಡೆದ, ರಾಜ್ಯಕರ್ತರಕೂಡಿರುವ ನಮ್ಮ ಸಂಬಂಧವನ್ನು ಜಿವಂತಾಗಿ [illegible] ವೇ ಕೆಂದು ನಾವು ಮನಃಪೂರ್ವಕ [illegible] ಸುತ್ತಿದ್ದೆವೂ, ಅಧಿಕಾರವಂತರಾದ ಅನೇಕ ವ್ಯಕ್ತಿಗಳು

ನಮ್ಮ ಸದಿಚ್ಛೆಯನ್ನು

ಮುರಿ [illegible] ಹವಣಿಸುತ್ತಿರುವರ [illegible] ಗಳಿಂದಲೇ ನಾವು ಕಾರ್ಯವನ್ನು ನಡಿಸುವೆವು, [illegible] ಅವರು ಈ ಉಪದ್ವ್ಯಾಪವನ್ನು ನಡಿಸುತ್ತಿರುವರು. ಹೀಗಾಗಿ [illegible] ಲಕ್ಷ್ಯವೇ ನಾವ [illegible] ಪ್ರಜಾತ [illegible] ರಾಜಕೀಯ [illegible] ಸಂಪಿಸಿ [illegible] ನಾವು ಶಿಲುಕಿ [illegible] ಇನ್ನು ಜಾ ರಾತನದಿಂದ, ಯುಕ್ತಿಯಿಂದ, ಧೈರ್ಯದಿಂದ [illegible] ಚಿತ್ತದಿಂದ, ಈ ಪ್ರಸಂಗಕ್ಕೆ [illegible] ಬೇಕಾಗಿದೆ.

ಇಂಥ ರಾಷ್ಟ್ರೀಯ ಸಂದರ್ಭದೊಳಗೆ

ಲೋಕಮಾನ್ಯ ಟಿಳಕ

ಪುಣ್ಯಾತ್ಮರಂದ ಅದ್ವಿತೀಯ ಮುಖಂಡರ ಆಕಸ್ಮಿಕ ನಿಧನವಾದದ್ದುಮೂಲಕ, [illegible] ತುಂಬಿ [illegible] ದಂಥ ಇತೀ ರಾಷ್ಟ್ರದ ಹಾನಿಯಾಗಿರುವದು ಹೇಳಿ, ಲೋಕಮಾನ್ಯರ [illegible] ಮಾಡಿ, ರಾಷ್ಟ್ರೀಯ [illegible] ವ್ಯಕ್ತಪಡಿಸಿ [illegible] ಅಪ್ಪಕೆ [illegible] ಸುದಾಪತು [illegible] ಚರ್ಚೆ [illegible] ವ್ಯಕ್ತಪಡಿಸಲೇ [illegible] ಈ ಸಭೆಯ [illegible] ನಡಿಸಲಿಕ್ಕೆ [illegible] ತೀರಿಸಿ [illegible], [illegible] ಪ್ರಕ [illegible] ಕ್ರಮವಾಗಿ [illegible] ಚರ್ಚಿಸಿದರು.

[illegible] ನಮಗೆ ಸಹ ಸಹಾಯಕ [illegible] ಲೆಕ್ಕ [illegible]

ನಾದಿರಶಾಹಿಯು

[illegible] ಸ್ವಾತಂತ್ರವನ್ನು [illegible] ಸಹಿತ [illegible] ರಿಸಿ, ಪಂಜಾಬ [illegible] ಗಳಿಗೆ, [illegible] ದಿಂದ [illegible] ರಣವಾದ [illegible] ಇದೇ [illegible] ಅವರ [illegible] ಇವರ [illegible] ಈ ಅಧಿಕಾರಿಗಳ [illegible] ಮಾಡಿದ [illegible] ಚೌಕಶಿಯನ್ನು, [illegible] ಲಿಕ್ಕೆ, ಸರಕಾರಕ್ಕೆ ಅವರು ಆಮಂತ್ರಣ ಮಾಡಿದವರ ಹಂಟರ ಕಮಿಟಿಯ [illegible] ನಿರ್ಣಯಗಳನ್ನು ಸಪ್ರ ಮಾಣ ನಿರಾಕರಿಸಿ, [illegible] ಸಂಸ್ಥಾನ [illegible] ಹಿಂದೀ [illegible] ರವರೂ, ಹಿಂದುಸ್ಥಾನ ಸರಕಾರದ [illegible] ಹಿಂದೀ ಮಂತ್ರಿಗಳಾದ ನಾಮದಾರ ಶಾಹಿಗಳವರೂ, ಇದೇ ಹಿಂದೀ ಲೋಕಮತವೂ ಒಂದೇ ಅಭಿಪ್ರಾಯವನ್ನು ವ್ಯಕ್ತ ಪಡಿಸಿವೆ ಇದರಲ್ಲಿ ಪಂಜಾಬ ಪ್ರಕರಣದ ವಿಷ ಯವಾಗಿ ಅವರು ಹೇಳಿದ್ದೇನಂದರೆ— ಪಂಜಾಬ ದೊಳಗಾದ ಕೊಲೆಯು [illegible] ಪ್ರಶ್ನೆಯಲ್ಲ

ರಾಷ್ಟ್ರೀಯ ಪ್ರಶ್ನೆಯಾಗಿರುವದು.

ನಾವು ಸರ [illegible] ರವರ ಕೃತ್ಯಗಳ ತಿರಸ್ಕಾರ ಮತ್ತು [illegible] ಮಾಡಬೇಕು [illegible] ವರ್ತನೆ ಅವರ ಜೊತೆಗಾರರಿಗೆ ಯೋಗ್ಯ ಶಿಕ್ಷೆಯಾಗ ಬೇಕು [illegible] ರವರು [illegible] ಹಂಟರ [illegible] ಕಮೀಟಿಯ [illegible] ಅಲ್ಪ [illegible] ರಿಪೋರ್ಟಿನ [illegible] ತಿಳಿಸುವದೇ [illegible] ತಮ್ಮ [illegible] ಅರಿವು [illegible] ಗೊತ್ತ ತಪ್ಪಾಗಿದೆ ಅವರನ್ನು [illegible] ಬೇಡುವ [illegible] ರಾಷ್ಟ್ರ [illegible] ಸಕಾರಣವದೆ ಪಂಜಾಬದೊ ಳಗೆ [illegible] ಯಿದೆ [illegible] ಇನ್ನು [illegible] ಹೇಳುವದ [illegible] ನಿಸ್ಸಂ [illegible] ಕ್ತಿ ಪ್ತ [illegible]

ಮುಯ್ಯಿಗೆ ಮುಯ್ಯಿ

[illegible] ಧಾರವಾಡದಲ್ಲಿ ಅದ್ [illegible] ಪ್ಯವು [illegible] ಅತ್ಯಾಚಾರಗಳ ಪುನರು ಕ್ತಿಯಾಗ [illegible] ವರ್ಣ [illegible]

[illegible] ತರದಲ್ಲಿ ಗಿದೆ ಹಿಂದುಸ್ಥಾನ ಸರಕಾರವು, ಬ್ರಿಟಿಷರ ಪ್ರಧಾನ [illegible] ಲ್ಲ, [illegible] ಮತ್ತು [illegible] ಈ ಸಮಗ್ರ [illegible] ಪ್ರಧಾನ ಅಪರಾಧಿ [illegible] ಸ್ಥಿತಿ [illegible] ಅತ್ಯಾಗ್ರಹದಿಂದ ನಮ್ಮ [illegible] ನಮ್ಮ ಕರ್ತವ್ಯ ವಲ್ಲವೆ? ಬ್ರಿಟಿಷ ರಾಜ್ಯದ ನ್ಯಾಯನೀತಿಗೆ ಅತ್ಯ ಹಿರಿದಾದ [illegible] ಗಳು [illegible] ನಾವಂತೂ [illegible] ನಿರ್ಧರಿಸಿದ್ದೇವೆ [illegible]

ಸಮಭಾಗಿ ಪಾಲುಗಾರ

ರೆಂದರೆ, ಹಿಂದುಸ್ಥಾನದೊಳಗಿನ [illegible] ಪ್ರ ಜಾ ಸ್ವತಂತ್ರತೆಯ ಹಕ್ಕು ಉಂಟೆಂಬ ಅದುವು ಹೊರ ಬಿದ್ದರೆ, ನಮ್ಮ [illegible] ಹೊರೆಯನ್ನು ಸ್ವೀಕರಿಸ [illegible] ನಾವು [illegible] ದಕ್ಷಿಣ ಆಫ್ರಿಕೆಯೊ ಳಗೆ ಕಾನಡಾದೊಳಗೆ ಆಸ್ಟ್ರೇಲಿಯಾದೊಳಗೆ, ಇಂ [illegible] ಒಳಗೆ ಒದಗಿ ಯಾವ ಸ್ವತಂತ್ರತೆಯ ಹಕ್ಕುಗಳು [illegible], ಅದೇ ವಿಧದ ಸ್ವತಂ ತ್ರತೆಯನ್ನು ಅವರಂತೆಯೇ ಇನ್ನು ನಾವು ಬೇಗನೆ ಪಡೆಯಬೇಕೆಂದು ನಿರ್ಧರಿಸಿದ್ದೇವೆ. ಪಂಜಾಬ ಪ್ರಕ ರಣದ ವಿಷಯವಾಗಿ ಸರ ಶಂಕರ ನಾಯ್ಯರವರ ಧೋರಣವನ್ನು ಹೊಗಳಿ ಅಧ್ಯಕ್ಷರು ಅವರ ಕರ್ತ ವ್ಯದಕ್ಷತೆಯನ್ನೂ, ಸ್ವಾರ್ಥತ್ಯಾಗವನ್ನೂ, ನ್ಯಾಯ ನಿಷ್ಠೆಯನ್ನೂ ಕೊಂಡಾಡಿದರು.

ಖಿಲಾಫತಿನ ವಿಷಯವಾಗಿ

ನಮ್ಮ ಮಹಮ್ಮದೀ ಬಾಂಧವರ ಬೇಡಿಕೆಯು ನ್ಯಾಯ ವದೆ ಅವರಿಗೆ ಇಂಥ ಸಮಯ ನೈತಿಕ ಬೆಂಬಲ ವನ್ನು ಕೊಡುವದು ನಮ್ಮ ಕರ್ತವ್ಯವದೆ. ಖಿಲಾಫ ತಿಯ ಪಕ್ಷವನ್ನು ಅವರಿಸಿ, ನಮ್ಮ ಮಹಮ್ಮದಿ ಬಾಂ ಧವರೊಂದಿಗೆ ನಾವಾದರೂ ರಾಜ್ಯತೃಷ್ಣೆಯ ಸಾ ಮ್ರಾಜ್ಯ ಸತ್ತಾವಾದಿಗಳನ್ನು ನಿಂದಿಸುವದೂ, ನಿ ಷೇದಿಸುವದೂ ನಮ್ಮ ಕರ್ತವ್ಯವೇ ಸರಿ ಇದಲ್ಲದೆ, ಹಿಂದೀ ರಾಷ್ಟ್ರದ ಭಾವೀ ಸ್ವಾತಂತ್ರ್ಯತೆಯ ಇವಾ ರತು ಚಿರಸ್ಥಾಯಿಯಾಗಿ, ಸುರಕ್ಷಿತವಾಗಿ ಬಾಳಲಿಕ್ಕೆ, ಹಿಂದೂ ಮುಸಲ್ಮಾನರ ಐಕ್ಯವೇ ಭದ್ರವಾದ ಆಧಾ ರವೆಂದು, ಬಹುಕಾಲದಿಂದ ಹಿಂದೀ ರಾಷ್ಟ್ರೀಯ ಸಭೆ [illegible] ಧೋರಣವೇ ನಿಶ್ಚಿತವಾಗಿದೆ ಈ ಹಿಂದೂ ಮು ಸಲ್ಮಾನರ ಐಕ್ಯದ ಧ್ಯೇಯಕ್ಕಾಗಿ ಮಹಮ್ಮದೀ ಯರ ಆಕಾಂಕ್ಷೆಗಳನ್ನು ಮನ್ನಿಸಿ, ಅವರ ಧಾರ್ಮಿಕ ಮನೋವೃತ್ತಿಗಳಿಗೆ ಬಾಧೆಯಾಗದಂತೆ ಖಿಲಾಫತಿನ ನಿರ್ಣಯಗಳನ್ನು ಐಪರ್ಣಿಸಿಕೊಳ್ಳಲಿಕ್ಕೆ ನಾವು ನಮ್ಮ ಮಹಮ್ಮದೀ ಬಾಂಧವರಿಗೆ ನೆರವಾಗಲೇ ಬೇಕು ಹಿಂದುಸ್ಥಾನದೊಳಗಿನ ಸೈನ್ಯವನ್ನು ರಾಜ್ಯ ಸಂಪಾದನೆಗೆಂದು ಪರದೇಶಕ್ಕೆ ಇನ್ನು ಕಳುಹಿಸ ಕೂಡದು ಹಿಂದೀ ಸೈನ್ಯವನ್ನು ಸ್ವದೇಶಕ್ಕೆ ತರಿಸ ದ [illegible] ಬೇಡಿಕೆಯು ತೀರ ನ್ಯಾಯವದೆ ಅಧ್ಯ ಕ್ಷರು ತುರ್ಕೀ ತಹನಾಮೆಯಿಂದ ತುರ್ಕೀ ಸಾಮ್ರಾ ಜ್ಯದ ವಿಭಾಗಣಿಯೆ ಮಾಡಿದೆ, ಅದರಿಂದ ತುರ್ಕರಿ ಅನ್ಯಾಯವೆಷ್ಟಾಗಿದೆ, ಎಂಬ ನನ್ನು ಸ್ಪಷ್ಟೀಕರಿಸಿ ಪ್ರಚಲಿತ

ಅಸಹಕಾರಿತೆಯ ವಿಷಯು.

ಚರ್ಚೆಯನ್ನು ಮಾಡಿದರು ಅಸಹಕಾರಿತೆಯ ವಿ ಷಯ [illegible] ಕಲ್ಕತ್ತೆಯಲ್ಲಿ [illegible] ನಡೆಯುವ ಕಾಂಗ್ರೆಸ ಸಭೆಯ ಅಧ್ಯಕ್ಷರು ಹಿಂದೀ ಲೋಕ ಮತಕ್ಕೆ [illegible] ಅಭಿಪ್ರಾಯಗಳನ್ನೆ ವ್ಯಕ್ತಪಡಿಸಬೇಕೆಂದು ಈ ಪದ್ಧತಿ ರೂಢಿಯಿದೆ ರೂಢಿಯಂತೆ ಈ ವಿಷಯವಾಗಿ ನನ್ನ ಸ್ವತಂತ್ರ ಮ ತವನ್ನ ನಾನು ಪ್ರತಿಪಾದಿಸಿದರೆ ತಪ್ಪಾಗಬಹುದ ರಾಷ್ಟ್ರೀಯ ಸಭೆಯ ಅಧ್ಯಕ್ಷರೆಂದರೆ, ಒಂದು ವಿಧ ಲೋಕಮತಪ್ರಿಯ [illegible] ವಿಷಯದ ಸ್ವತಂತ್ರ ಮ ತವನ್ನು ಒತ್ತಟ್ಟಿಗಿಟ್ಟು ಅಧ್ಯಕ್ಷರಿಗೆ ನಿಷ್ಪಕ್ಷಪಾತ ಸ್ಥಿತಿಯಿಂದ ತಮ್ಮ ಕರ್ತವ್ಯವನ್ನು ನೆರವೇರಿಸಬೇ ಕುತ್ತದೆ ಇದೇ ಕರ್ತವ್ಯವನ್ನು ನಾನೂ ಮಾ ಡೆನು [illegible] ಈ ವಾದಗ್ರಸ್ತ ವಿಷಯ [illegible] ನಾನು ಏನೂ [illegible] ಎಂ ಹೇಳಿ ಅಧ್ಯಕ್ಷರು ಅಸಹಕಾರಿತೆಯ ತತ್ವಗಳ [illegible] ಕ್ಷಣೆಯನ್ನು [illegible] ಸಂಕ್ಷಿಪ್ತವಾಗಿ ಮಾಡಿದರು

(ಮುಂದರಿಯುವದು)

ಶೆಕ್ಕಾರ ಸಂಸ್ಕೃತ ಪಾಠಶಾಲಾಧ್ಯಾಪಕ ಶ್ರೀ ದ ಭಟ್ಟಾತ್ಮಜ [illegible] ವಿರಚಿತವಾದ

" ಆತ್ಮವಿದ್ಯಾರಹಸ್ಯ ".

ವೆಂಬ ಗ್ರಂಥದ ಪ್ರತಿಗಳು ಅಚ್ಚಾಗಿದ್ದವು ವಾ ಚಕ್ರುಗಳು ಅವಶ್ಯಕ [illegible] ಕೆಳಗಿನ ವ ತಿಳಿಸಿದರೆ, ಕೃತಿಯು ಪುಸ್ತಕವಾಗಿ ಕಳಿಸಲ್ಪಡುವ

ಪತ್ತೆ — ಗಣೇಶ ರಾಮ [illegible]

[illegible] ನಂ ೧

ಪೋಸ್ಟ— ಕುಮಟ

ಜಿಲ್ಲಾ ಕಾರವಾರ

ಸ್ಫುಟ ಸೂಚನೆಗಳು.

೧. ನಮ್ಮ ಜಿಲ್ಲೆಯ ರಯತರ ಜೀವನಕ್ಕೆ ಮುಖ್ಯ ಆಧಾರವಾದ ಉದ್ಯೋಗವೆಂದರೆ, ಶೇತಕೀಧಂದೆಯು. ಅದು ಈಗೀಗ ಕ್ಷೀಣವಾಗುತ್ತ ಬಂದಿದೆಂಬದು ಸರಕಾರಿ ಅಡಳಿತೆಯ ವಾರ್ಷೀಕ ರಿಪೋರ್ಟಗಳನ್ನು ತೆರೆದರೆ ಕಂಡು ಬರುತ್ತದೆ ವರ್ಷಾನುವರ್ಷ ನಾವಿರಗಟ್ಲೆ ಎಕರೆಗಳಷ್ಟು ಕ್ಷೇತ್ರವು ಜಂಗಲಮಯವಾಗುತ್ತಿದೆ. ಪರಾನವ ಜನಸಂಖ್ಯೆಯೂ, ಕೃಷಿಕರ್ಮಕ್ಕೆ ತೀರ ಅವಶ್ಯಕ ಜಾನುವರಗಳ ಸಂಖ್ಯೆಯೂ ಕಡಿಮೆಯಾಗುತ್ತನೆಂಬದು ಸಹ ಅದೇ ರಿಪೋರ್ಟುಗಳು ಒಪ್ಪರುತ್ತವೆ. ಹೀಗಿದ್ದರೂ, ನಮ್ಮ ಸರಕಾರವು ಇನ್ನೂ ಸಾಕಷ್ಟು ಎಚ್ಚತ್ತು, ದಕ್ಷತೆಯಿಂದ ಆ ಕ್ಷಯವನ್ನು ಹಿಮ್ಮೆಟ್ಟಿಸಲು ಯಾ ತಡಿಸಲು ಪ್ರಯತ್ನಿಸಿಲ್ಲೆಂಬುವದು ಖೇದಕರವು. ರಾಜಕೀಯ ವಿಷಯಗಳಲ್ಲಿ ಘಟಿಸಿದ ಅನರ್ಥಗಳನ್ನು ನಿಷೇಧಿಸಿ, ಚಲವಲದಿಂದಲೂ, ವೃತ್ತಪತ್ರಗಳಿಂದಲೂ ಸರಕಾರದ ಲಕ್ಷಕ್ಕೆ ತಂದರೆ ವಿಚಾರದಬಗ್ಗೆ ದೊಡ್ಡ ದೊಡ್ಡ ಕಮಿಷನುಗಳನ್ನು ನೇಮಿಸುವಂತೆ, ನಮ್ಮ ಜಿಲ್ಲೆಯ ಜಂಗಲ ಧೋರಣದಬಗ್ಗೆ ಎಲಿಕಗೆಡೆ ನಡಿಸಿದ ಚಲವಲದ ಗೋಕುಗ ವಿವಾದಾಂಶಗಳನ್ನು ಕೇಳಿಕೊಂಡು ನಿಷ್ಕರ್ಷಿಸಲಿಕ್ಕೆ ಬಬ್ಬ, ಇಬ್ಬರೇ, ನಿಯೋಗಿಗಳನ್ನು ನೇಮಿಸಿರುವರಷ್ಟೇ. ಅವರು ಬಂದು ಸರ್ವಸಾಧಾರಣ ಜಂಗಲಧೋರಣವನ್ನು ಸ್ಥಿರವತಿಸಿ ಅವಶ್ಯವಿರೋಧವಾದ ಕಾನೂನುಗಳನ್ನು ಪರ್ವತಿಸ್ಯಾರು

೨. ಅದರೆ, ಸದ್ಯಕ್ಕೆ ಈ ತಾಲೂಕ ಒಂಗಣೆ ಮುಂತಾದ ಗ್ರಾಮದಲ್ಲಿ ಕಾಡಾನೆಗಳ ೧-೨ ಹಿಂಡುಗಳು ಬಂದು ರಯತರು ಬಹು ಶ್ರಮದಿಂದ ಬೆಳಿಸಿದ ಪೀಕು ನಷ್ಟ ಪಡಿಸುತ್ತಿರುವವೆಂದು ತಿಳಿಯುತ್ತದೆ ಇಂಥ ಹಿಂಡುಗಳು ಆ ಪ್ರದೇಶದಲ್ಲಿ ಈಗ ೨-೩ ವರ್ಷಗಳಿಂದ ಸಂಚಾರ ಮಾಡುತ್ತಿದ್ದ ಅದಿಕಾರಿಗಳು ಅವುಗಳ ಲೂಟಿಯನ್ನು ತಡಿಸಲಿಕ್ಕೆ ಪ್ರಯತ್ನಿಸಿಲ್ಲ ಹೊನ್ನಾವರ ತಾಲೂಕಿನಲ್ಲಿ ಕಳೆದ ವರ್ಷ ಇದೇ ರೀತಿ ಅವುಗಳ ಸೂರೆಯಾದಾಗ ರಾ। ಸಾ। ಓಸ್ಟ್ರರರು ಅವುಗಳನ್ನು ಕೊಲ್ಲ ಪಡಿಸಲುವಾಗಿ ಜಂಗಲ ಕ್ಯಾದೆಯಿಂದ ಅವಶ್ಯವಾದ "ಅಪ್ಪಣೆ" ಯನ್ನು ಗಳಿಸಲು ವಿಶ್ವಪ್ರಯತ್ನ ಮಾಡಿದರೂ, ಆಗದೆ, ನಮ್ಮ ಜಿಲ್ಹಾಧಿಪರ ಮುಖಾಂತರ ಮನವಿಗಳ ಮೇಲೆ ಮನವಿಗಳನ್ನು ಕಳುಹಿಸಿ ಕಟ್ಟಕಡೆಗೆ ಜಂಗಲಖಾತೆಯು ಅಪ್ಪಣೆಯಿಂದ ಇವಕ್ಕಾಗಿಯೇ ತಂದ ಭಾರಿ ಕ್ರಯದ ಬಂದೂಕಿನಿಂದ ಹಿಂದು ಕಾಡಾನೆಯನ್ನು ಕೊಲ್ಲಿಸಿದಮೇಲೆ, ಆ ಕಾಲದಿಂದ ಆ ಪ್ರದೇಶದ ರಯತರು ಬಿಡುಗಡೆ ಹೊಂದಿದರು ಅದರೆ, ಒಂಗಣೆ ಕಡಿಯ ರಹಿತರನರವಾಗಿ ಯಾವ ಮಹನೀಯರೂ ಇನ್ನೂ ಮುಂದರಿಯದಿದ್ದದರಿಂದಲೂ, ಆ ಅಸಹಾಯ ಬಡ ರಯತರು ಕಾಡಾನೆಗಳ ಜೊತೆಗೆ ತಕ್ಕ ಸಾಧನಗಳ ಅಭಾವದಿಂದಲೂ ಪೂರ್ಣ ಕಂಗೆಟ್ಟು ನಿರಾಶರಾಗಿ, ಮೈಸೂರ ಕಡಿಯ ಹಾದಿಯನ್ನನುಸರಿಸಲುದ್ಯುಕ್ತರಾಗಿರುವರೆಂದು ಕೇಳಿ ವಿಷಾದ ಪಡುವೆವು

೩. ಹಾಗಾದರೆ, ಮೈಸೂರ ಸರಕಾರವು ಅವರನ್ನು ಯೋಗ್ಯ ಆಶ್ರಯ ಕೊಡಲಿಕ್ಕೆ ಸಿದ್ಧವಿರತಕ್ಕದ್ದೇ ಅಲ್ಲ ಅವರನ್ನು ಆಳಿಸುವಂತೆ ಸತ್ಕರಿಸಿ, ಬೀಜ, ಎತ್ತು, ಮನೆ ಕಟ್ಟಲಿಕ್ಕೆ ಸಾಹಿತ್ಯ, ಅದರ ಮೇಲೆ ಮತ್ತಿಷ್ಟು ದಕ್ಷಿಣೆ ಕೊಟ್ಟು ಎರಡು ವರ್ಷ ರಾಜಾರ್ಥವಿಲ್ಲದೆ ಬೇಕಾದ ಪೈರನ್ನು ಬೆಳಿಸಿ ಜೀವಿಸಲು ಅನುಕೂಲಿಸುತ್ತದೆಂದು ಈಗ ಎಲ್ಲರಿಗೂ ಜಾಹೀರಾಗಿದೆ, ಮತ್ತು ನಮ್ಮ ಮೈಸೂರ ಸರಹದ್ದಿಯಲ್ಲಿರುವ ಸಾವಿರಗಟ್ಲೆ ರಯತರು ಜಂಗಲ ಕಾನೂನುಗಳ ಪ್ರತಿಬಂಧದ ಮೂಲಕ ಮೈಸೂರ ಪ್ರಾಂತದಲ್ಲಿ ಸೇರಿರುವರೆಂಬುದು ಸಹ ಜಾಹೀರಾಗಿದೆ. ಇಂಥ ಪ್ರಸಂಗದಲ್ಲಿ ನಮ್ಮ ಶಕ್ತಿವಂತ ಸರಕಾರವು ಈ ರಯತರ ಹಿತದಿಂದ ಅವರಿಗಾಗುವ ಸಂಕಷ್ಟಗಳನ್ನು ತಪ್ಪಿಸಿ, ರಯತರನ್ನೂ ಅವರು ಬೆಳಿಸಿದ ಪೈರನ್ನೂ ಸುರಕ್ಷಿತವಾಗಿ ಕಾಪಾಡದಿರುವದು ತೀರ ಅನುಚಿತವೆಂದೂ, ನಮ್ಮ ಜಿಲ್ಲೆಯ ಕಂದಾಯದ ಬಹಳ ಹಾನಿಯಾದೀತೆಂದು, ಯಾರೂ ಹೇಳ್ಯಾರು. ಅದ್ದರಿಂದ ನಮ್ಮ ಜಿಲ್ಹಾಧಿಪರಿಗೆ ಈ ವಿಷಯದ ಸಾದ್ಯಂತ ಹಕೀಗತನ್ನು ತಿಳಕೊಂಡು, ಹಂದಿ-ಹುಲಿ ಮತ್ತು ಕಾಡಾನೆಗಳ ಹಾವಳಿಯನ್ನು ಅಡಗಿಸಲಿಕ್ಕೆ ತಕ್ಕ ವಿವಾರಣೆಯನ್ನು ವಿಲಂಬವಾದದೆ ಕೈಕೊಳ್ಳಬೇಕಾಗಿ ಸವಿನಯ ಸೂಚಿಸುತ್ತೇವೆ. ಇಲ್ಲದಿದ್ದರೆ, ಅದರಿಂದ ನಮ್ಮ ಜಿಲ್ಲೆಯ ಶೇತಕೀಯ ಪ್ರಗತಿಗೆ, ರಯತರ ಜೀವಿತಕ್ಕೆ ಮಿತಿ ಇಲ್ಲದ ಪ್ರತಿಬಂಧಗಳುಂಟಾಗುವೆಂಬುವಲ್ಲಿ ಸಂದೇಹವಿಲ್ಲ.

೪. ಶ್ರೀ ಕ್ಷೇತ್ರ ಗೋಕರ್ಣ ರಥಬೀದಿಯ ಮಾರ್ಗವು ಬಹಳೇ ಅವ್ಯವಸ್ಥಿತ ಸ್ಥಿತಿಯಲ್ಲಿದ್ದು ಅದರೊಳಗಿಂದ ಹಾಯ್ದು ಹೋಗುವ ಒಂದು ಹಳ್ಳದ ನೀರು ಸರಾಗವಾಗಿ ಸಾಗಿ ಹೋಗದೆ ಅಲ್ಲಲ್ಲೇ ತತೆಪ ಅದರಿಂದ ಮಲೇರಿಯಾ ವೈರಿ ಜಂತು ರೋಗಗಳಾಗಿ ಜನರು ಸತ್ತಾಗುತ್ತಿದ್ದರು ಸೆನೆಟರಿ ಖಾತೆಯಿಂದ ಆ ಮಾರ್ಗವು ವಿಶೇಷವಾಗಿ, ಆ ಹಳ್ಳವು ದುರುಸ್ತ ಆಗಬೇಕಾಗಿ ಬಿರಮ ಹೊರ್ದ್ದಾತೆ, ಸೆನೆಟರಿ ಆಫೀಸರರು ಮೇಲಿಂದಮೇಲೆ ಬಂದು ಪ್ಲೇನ ಇಸ್ಪೆಕ್ಟ ಆಗಿ, ಹೋಗಿತ್ತು. ಈ ಕುರಿತು ನಾವು ಗತವರ್ಷ ಜೂನ ೨೦ ನೇ ಸಂಚಿಕೆಯಲ್ಲಿ ಇದೇ ಸಂಬಂಧ ಬರದ ಸ್ಫುಟ ಸೂಚನೆಗಳ ಪ್ರಕಾರ ಸನೆಟರಿ ಖಾತೆಯವರು ಆ ರಸ್ತೆಯ ಬಗ್ಗೆ ರೂಪಾಯಿ ೧೬,೦೦೦ ಮಂಜೂರ ಮಾಡಿದ ಬಗ್ಗೆ ಸರಕಾರವನ್ನೂ ಕ್ಷೇತ್ರವಾಸಿಗಳ ಮುಖ್ಯವನ್ನೂ ಅಭಿನಂದಿಸವೆವು ಎರೇ ಮಾರ್ಗದ ದುರುಸ್ತಿಯಾಗಿದೆ, ಗೋಕರ್ಣ ಶಿವರಾತ್ರಿ ಉತ್ಸವದ ದೊಡ್ಡ ರಥವು ಸುರಕ್ಷಿತವಾಗಿ ಬರುವ ಹಾಗೆ ಆ ಹಳ್ಳಕ್ಕೆ ಮಜಬೂತಾದ ಸಂಕ ಹಾಕಬೇಕಾದ್ದರಿಂದ, ಕಬ್ಬಿಣದ ತೊಲೆಗಳನ್ನು ಹಾಕಿ ರಸ್ತೆಯ ಸಹ ೩-೪ ಫೂಟ ಎತ್ತರ ಮಾಡಬೇಕಾದೀತ ಯಾಕಂದರೆ, ಆ ಹಳ್ಳದ ನೀರು ಸಹ ಎಲ್ಲಿಯೂ ತತೆಯದೆ ಹೋಗಗೊಡಬೇಕು. ಇನ್ನು ಮುಂದಾದರೂ ಕೆಲಸಕ್ಕೆ ಇಂಥ ಹುಟ್ಟಿಯ ದಿವಸಗಳಲ್ಲಿ ಆ ರಕಮು ಸಾಲುವದೆಂದು ನಾವೇನು ತಿಳಿಯಲಿಲ್ಲ ಅದರೂ ದೇವರ ಉತ್ಸವದ ಕೆಲಸಕ್ಕೆ ವಿಘ್ನ ಬಾರದಂತೆ ರಥವನ್ನು ಆ ಸಂಕದಮೇಲಿಂದ ಹರಿಯ್ಯಲಿಕ್ಕೆ ಅನುಕೂಲವಾಗುವಹಾಗೆ ಎಲ್ಲ ಕೆಲಸವು ಶೀಘ್ರವಾಗಿಯೂ, ಮಜಬೂತಾಗಿಯೂ ಆಗಬೇಕೆಂಬುವದೇ ನಮ್ಮ ಹೇಳಿಕೆಯು.

ಇಹವೃತ್ತ.

ಕಾಮಟಾ—ಮಳೆಯು ಇಷ್ಟರವರೆಗೆ ೮೭-೨೬ ಇಂಚು ಆಯಿತು ಪಳಿಜ್ಜರ ಮೈಲಿ ಹೊಟ್ಟೆಬೇನೆ ಇದ್ದೇ ಇರುವದು

ಭಟ್ಕಳದಲ್ಲಿ ಅಕ್ಕಿಯ ಧಾರಣೆ ಮಣವಗೆ ೧೮ ರೂಪಾಯಿ ೩॥ ರಂತೆ ಇದ್ದು, ಅಲ್ಲಿಂದ ಹೊನ್ನಾವರಕ್ಕೆ ಗಾಡಿಮೇಲೆ ತಂದು ರೂಪಾಯಿ ೭ ೭। ರಂತೆ ಇವರೂ, ಇಲ್ಲಿಯ ಧಾರಣೆ ಇಳಿಯಲಿಲ್ಲ ಈ ವರ್ಷ ಧರ್ಮದ ಅಂಗಡಿ ಇಲ್ಲ ! ಬಡ ಜನರ ಗೋಳಾಟಕ್ಕೇನು ಕಡಿಮೆ ಇಲ್ಲ !! ಜಮೀನವಾರರ ಧಾಯಿ ದೆಸೆಗೂ ಮಿತಿ ಇಲ್ಲ

ಇಲ್ಲಿಯ ಶೇತಕಿ ಫಾರ್ಮಿನಲ್ಲಿ ಗೊತ್ತು ಅದ್ದಂತೆ ಪ್ರಾತ್ಯಕ್ಷಿಕೆಗಳ ಬಗ್ಗೆ ಘಟ್ಟದ ಕೆಳಗಿನ ತಾಲೂಕಿನೊಳಗಿಂದ ಮತ್ತು ಹಳ್ಳಿಗಳಿಂದ ಜನರು ಕೂಡಿ ರಾತ್ರೆ ಕರದರೆಗೆ ಉಪಕ್ರಮಗಳು ನಡೆದವು

ಮುಂಬ್ಯೆ ಕ್ಯಾದೆ ಕೌನ್ಸಿಲದ ಮೆಂಬರಿಕೆಗೆ ಉಮೇದವಾರರಾದ ಶಿರ್ಶಿ ವಕೀಲ ರಾ। ಭೀಮರಾವ ರಿತ್ತಿಯವರು ಅವರ ಮಿತ್ರರಾದ ವಕೀಲ ಮಿ। ಕೊಲ್ಹಾಳಿ ಮತ್ತು ಗಂಗಾಧರ ರಾಮಚಂದ್ರ ಪಟವರ್ಧನ ಹೈರೇರು ಈ ತಾಲೂಕ ಮತದಾರರ ಸಮ್ಮತಿಗಳಿಸಲಿಕ್ಕೆ ನಿನ್ನೆ ಇಲ್ಲಿ ಮೋಟಾರಿನಮೇಲೆ ಬಂದಿದ್ದರು

ಇಲ್ಲಿಯ ಕಟ್ಟಿಗೆ ಡಿಪೋದಲ್ಲಿ ಕಟ್ಟಿಗೆ ಏನೂ ಇಲ್ಲದೆ ಬಡ ಜನರಿಗೆ ಅನಾವಶ್ಯಕ ಕಷ್ಟವಾಗಿದೆ ಇದಕ್ಕೆ ಜಂಗಲಖಾತೆಯ ರೇಂಜರ ಮತ್ತು ಮೇಲಿನ ಅಧಿಕಾರಿಗಳು ತಕ್ಕಮಟ್ಟಿಗೆ ಜವಾಬದಾರರಾದ ವಕ್ಷಕನ್ನು, ಈ ಡಿಪೋ ಮಾಲೀಕರು ಕಟ್ಟಿಗೆ ಪೂರೈಕೆಯನ್ನು ಮಾಡಲು ಬಾಧ್ಯ ಇರುವರೆ. ಅವರ್ಯಾರೂ ಜನರಿಗೆ ಅವಶ್ಯಕವಿರೋದ ಮಾಡಲಿಕ್ಕೆ ಆಗ್ಯಾರೆಂದು ಕೇಳುವೆವು

ಅಂಕೋಲಾ— ಮಳೆಯು ಸಾಧಾರಣ ಬೀಳುತ್ತದೆ. ಕಪ್ಪುಮಣ್ಣಿಗೆ ಜ್ವರವೂ, ಕೆಲವರೆಯಲ್ಲಿದೆ.

ಈ ಬರುವ ಕಾಯಿದೆ ಕೌನ್ಸಿಲಕ್ಕೆ ಮೆಂಬರರಾಗಲಿಚ್ಛಿಸುವ ಉಮೇದ್ವಾರರಲ್ಲಿ ಯಾವ ಉಮೇದ್ವಾರನಿಗೆ ಮತ ಕೊಡಬೇಕು ಮತ್ತು ನಮ್ಮ ಕ್ಯೆಯಮಗೇನಿತ ಬೇಕು ಎಂಬುವಗಳ ವಿಚಾರಮಾಡಿ ಅದರಂತೆ ತಾಲೂಕಿನ ಲೋಕಮತವನ್ನು ಜಾಗ್ರತಿ ಪಡಿಸುವರೆ ಒಂದು ಕಮಿಟಿಯು ಸ್ಥಾಪನವಾಗಬೇಕಾಗಿ ಮುಖಂಡರಲ್ಲಿ ವಿಚಾರ ನಡಿಯುತ್ತದಂತೆ ಉಭಯ್ಯ ಶೀಘ್ರಂ

ಸಿರ್ಸಿ— ಆ ಹೋದ ತಿಂಗಳ ೨೫ ನೇ ತಾರೀಖಿನ ದಿವಸ ಕೂಡಿದ ಮುನಿಸಿಪಲ್ ಕಮೀಟಿಯಲ್ಲಿ, ಅಪ್ರತಿಮ ವಾದ ಸ್ವದೇಶಾಭಿಮಾನವೂ, ಸ್ವಾರ್ಥತ್ಯಾಗವೂ, ಅದ್ವಿತೀಯ ಬುದ್ಧಿ ದುರೀಣತ ಅಭಾವಕ್ಕೆ ಕಾರಣವಾದ ಲೋಕಮಾನ್ಯ ಬಾಳಗಂಗಾಧರ ಟಿಳಕರವರ ಅಕಸ್ಮಿಕ ಪ್ರಸಂಗದಲ್ಲಾದ ಅಕಸ್ಮಿಕ ನಿಧನದ ಬಗ್ಗೆ, ಮಿ। ವಾಸುದೇವರಾವ ಧಾಕಪ್ಪನವರು ತಂದ ದುಃಖಪ್ರದರ್ಶನೀಯ ಠರಾವು ಸರ್ವಾನುಮತದಿಂದ ಪಾಸಾಗಿರುತ್ತದೆ ಇದನ್ನು ಎಲ್ ಸಾಹೇಬರೇ, ಅಟದಲ್ಲಿ ತನ್ನದೊಂದು ಗೊಟು ಅದಿಕ ಇದ್ದರೆ ನೋಡಿರಿ '

ಲೋಕಲಬೋರ್ಡಿಯ ಬಳಿಗೆ ಕೌನ್ಸಿಲ ಉಮೇದವಾರರ ಒಬ್ಬರ ದಿಂದಮೊಗ್ಗರು. ಹಿಂದುಮುಸಲ ಎರಡು ನಿಂತರೂ, ಹುರ್ತಕ್ಕೆ ಇಬ್ಬರ ಹೆಸರೇ ಕೇಳಬರುತ್ತಿದೆ ಅವರಲ್ಲಿ ಇಲ್ಲಿಯ ಮಿ। ಭೀಮರಾವ ರಿತ್ತಿಯವರು ೧ ಕಾರವಾರದ ಮಿ। ವೆಂಕಟ್ರಾವ ವಾದಿರವರು ೨ ಇಬ್ಬರ ಪ್ರಯತ್ನವೂ ಹಸ್ತೇ ಪರಹಸ್ತೇ ನಡೆದದೆ ಅದರೆ ' ಹೋಲಿಕೆಯ ಮಾ ಮರಿಂಗೆ ನೈಟೋಲೀತೆಯ ಬಾದ ಕುತ್ತಾಬಾಯಿಂಗಾ ಎಂಬಂತೆ ಇಲ್ಲಿದು ಎಷ್ಟೋ ಮತದಾರರ ಸ್ಥಿತಿಯಾಗಿದೆ '

ಹೋದ ವರ್ಷದ ಅಕ್ಕಿಯ ಡಿಪಾರ್ಟಮೆಂಟದಲ್ಲಿ ಉಳಿದ ರಕಮನ್ನು 'ಟಿಳಕರ ಮೆಮೋರಿಯಲ್' ಕ್ಕೆ ಕೊಡಬೇಕೆಂತ ಮುನಿಸಿಪಲ್ ಕಮಿಟಿಯಲ್ಲಿ ಹುಟ್ಟಿದ ಠರಾವು ನಾಪಾಸಾಯಿತು ಅದರ ಈ ಮೊದಲೇ ಕೂಡಿದ ಫಂಡಿನ ವ್ಯವಸ್ಥೆಯು ಹ್ಯಾಗಾಗುತ್ತದೋ ನೋಡಬೇಕು

ಮತದಾರರಿಗೆ ಅರಿಕೆ.

ನಮ್ಮ ಇಲಾಖೆಯ ಹೊಸ ಶಾಯಿದೆ ಕೌನ್ಸಿಲಿನ ಪ್ರತಿನಿಧಿಗಳನ್ನು ಆರಿಸುವದು ಬರುವ ನವಂಬರ ೧೬ನೇ ತಾರೀಕಿಗೆ ಇರುವದು. ಮುಂಬೈ ಸರಕಾರದ ಈಗಿನ ನೇಮದಂತೆ ನಮ್ಮ ಜಿಲ್ಲೆಯಿಂದ ಮುಸಲ್ಮಾನರಲ್ಲದ ಜನರ ಬಗ್ಗೆ ಒಂದೇ ಪ್ರತಿನಿಧಿಯನ್ನು ಆರಿಸಕಳ್ಳದ್ದದೆ, ಕನಿಷ್ಠ ಎರಡು ಪ್ರತಿನಿಧಿಗಳನ್ನಾದರೂ ನಮ್ಮ ಜಿಲ್ಲೆಯಿಂದ ಆರಿಸಿ ಕಳುಹಿಸಿ ಕೊಡುವ ಹಕ್ಕು ಕೊಡುವದಕ್ಕೆ ನಮ್ಮ ಜಿಲ್ಲೆ ಪರಿಷತ್ತು ಮುಂಬೈ ಸರಕಾರದವರ ಒಳಗೆ ಮಾಡಿದ ವಿನಂತಿಯು ನಿಷ್ಫಲವಾದಬಗ್ಗೆ [illegible] ನಮ್ಮ ಜಿಲ್ಲೆಗೆ ಕನಿಷ್ಠ ಅಂಥಾ ಎರಡು ಪ್ರತಿನಿಧಿಗಳನ್ನು ಆರಿಸುವ ಹಕ್ಕು ಸಿಗುವವರೆಗೆ ಈ ಪ್ರಶ್ನೆ ಕುರಿತ [illegible] ಚಳವಳ ಮಾಡುವದು ಅವಶ್ಯವದೆ

ಆವರೆಗೆ ಒಬ್ಬ ಪ್ರತಿನಿಧಿಯನ್ನಾದರೂ ಆರಿಸುವದು ನಮ್ಮ ಕರ್ತವ್ಯವದೆ. ನಮ್ಮ ಜಿಲ್ಲೆಯ ಕೊರತೆ ವ ತ್ರಾಸಗಳನ್ನು ಹೊಸ ಕೌನ್ಸಿಲಿನ ನಮ್ಮ ಜಿಲ್ಲೆಯ ಮೆಂಬರನಿಗೆ, ಮೇಲಿಂದಮೇಲೆ ತಿಳಿಸುವದಕ್ಕೆ ನಮ್ಮ ಜಿಲ್ಲಾ ಪರಿಷತ್ತು ಸಾಧನವಾಗಿರುವದು ಪರಿಷತ್ತಿನ ಒಂದು ಉದ್ದೇಶವು. ಆದ್ದರಿಂದ, ಹಾಗೆ ಆರಿಸಲ್ಪಡುವ ಪ್ರತಿನಿಧಿಯು ಯೋಗ್ಯ ಗೃಹಸ್ಥನಾಗಿರಬೇಕು. ಈ ಸಂಗತಿ ಕಡೆಗೆ ಲಕ್ಷಕೊಡುವದು ನಮ್ಮ ಪರಿಷತ್ತಿನಿಂದ ನೇಮಿಸಲ್ಪಟ್ಟ ಜಿಲ್ಲಾ ಕಮಿಟಿಯ ಕರ್ತವ್ಯವಿರುತ್ತದೆ.

ಈ ತರದ ಪ್ರತಿನಿಧಿಯನ್ನು ಆರಿಸುವದು ನಮ್ಮ ಜಿಲ್ಲೆ ಮತದಾರರಿಗೆ ಇದೇ ಮೊದಲನೇ ಪ್ರಸಂಗವಾಗಿರುವದರಿಂದ, ಆ ಬಗ್ಗೆ ಮತದಾರರು ವಿಶೇಷ ಜಾಗ್ರತ ವ ದೂರದೃಷ್ಟಿ ಉಳ್ಳವರಾಗತಕ್ಕದ್ದು. ನಮ್ಮ ಜಿಲ್ಲೆ ಸಂಬಂಧ ಒಳ್ಳೆ ವಿಷಯಗಳು ಚರ್ಚೆಯಾಗಿ [illegible] ತ್ರಾಸಗಳ ನಿವಾರಣೆ ಆಗತಕ್ಕದ್ದಿದ್ದು, ಈ ಎಲ್ಲ ವಿಷಯಗಳ ಪೂರ್ಣ ಮಾಹಿತಿ ತಕ್ಕೊಂಡು [illegible] ಈ ವಿಷಯಗಳನ್ನು [illegible] ದ ಕಾರಣದಿ [illegible] ನ್ಯಾಯ [illegible] ಪ್ರತಿನಿಧಿಯು [illegible] ಜಿಲ್ಲೆಯ ಎಲ್ಲ ವಿಷಯಗಳ [illegible] ಇರುವದು ಅತ್ಯಾವಶ್ಯಕವದೆ [illegible] ಪ್ರತಿನಿಧಿಯು [illegible] ಬೇಕು.

ಕಾರಣ, ಮತದಾರರ ಪ್ರತಿನಿಧಿ [illegible] ಆ ಗೃಹಸ್ಥನ [illegible] ಕೊಡಬೇಕು. [illegible] ಪದ್ಧತಿಯು ಸ್ವರೂಪದ ಪ್ರತಿ [illegible] ಕಳುಹಿಸುವ ಪ್ರತಿನಿಧಿ [illegible] ಅಂಬಿಸಿ ಇರುವದರಿಂದ, [illegible] ಕೂಲ ಯಾ ಪ್ರತಿಕೂಲ [illegible] ಮತದಾರರೇ [illegible]

ಮತದಾರರು ತಮ್ಮ [illegible] ಉಮೇದವಾರನಿಗೆ, [illegible] ದೇಶ ಹಿತ ವಾತ್ಸಲ್ಯ [illegible] ನಿಗೆ ಕೊಡದೇ, ಈತನು ತಮ್ಮ ವರ್ಗದವನು, ಈತನು ನನಗೆ ಇಷ್ಟವೆ ನನ್ನ ಕುಟುಂಬಕ್ಕೆ ಹಿತ ಮಾಡುವನು, ಈತನು ಬುದ್ಧಿವಂತನೆಂತ ವಿರಹಿತನಿದ್ದರೂ, ಶ್ರೀಮಂತನು ಮುಂತಾದ ಸ್ವಾರ್ಥಭಾವನೆಗಳಿಂದ ಅಯೋಗ್ಯ ಉಮೇದವಾರನನ್ನು ಪ್ರತಿನಿಧಿಯಾಗಿ ಆರಿಸಿದರೆ ಆ ಮತದಾರರು ದೇಶ ದ್ರೋಹಕ್ಕೂ ಆತ್ಮ ದ್ರೋಹಕ್ಕೂ ಒಳಗಾಗುವರು ಮತದಾರರು ಆಯಾಯ ಪಕ್ಷಗಳ [illegible] ಕಿವಿಗೊಟ್ಟು ಕೇಳಿ, ಉಮೇದವಾರರ ಮುಖಸ್ತುತಿಯಿಂದಲೂ, ಯಾ ಸವಿನುಡಿಗಳಿಂದಲೂ ಮರುಳಾಗದೇ, ತನ್ನಷ್ಟಕ್ಕೆ ವಿಚಾರ ಮಾಡಿ ಆಪ್ತ ಇಷ್ಟ [illegible] ಧರ್ಮದ ಭೇದಭಾವನೆಗಳನ್ನು ಲಕ್ಷಿಸದೆ, ಚುರುಕು ಬುದ್ಧಿ, ಸ್ವತಂತ್ರ ಮತ ಸತ್ಯಪ್ರೀತಿ ಉಳ್ಳವನನ್ನೂ, ಅಧಿಕಾರಿಗಳ ಮುಗುಳನಗೆಯಿಂದ [illegible] ನನ್ನೂ, ಅವರ ಬೆದರಿಕೆಗೆ ಅಂಜದಂಥವನನ್ನು ಇಡೀ ಜಿಲ್ಲೆಯ ಹಿತವನ್ನು [illegible] ನಿಜವಾಗಿ ಪಾತ್ರನಾಗಿರುವಂಥ ಉಮೇದವಾರನನ್ನೇ ಆರಿಸತಕ್ಕದ್ದು

[illegible] — ಕೌನ್ಸಿಲಿನ ಜಾಗೆಗೆ ಬಗ್ಗೆ ನಿಲ್ಲುವ ಎಲ್ಲ ಉಮೇದವಾರರಿಗೆ ತಮ್ಮ ಹೆಸರುಗಳು ಜಾಹೀರ ಮಾಡಲಿಕ್ಕೆ ಬರುವ [illegible] ತಿಂಗಳ ೧೫ ನೇ ತಾರೀಕಿನ ತನಕ ಅವಧಿ ಇರುತ್ತದೆ. ಆದ್ದರಿಂದ ಮತದಾರರು [illegible] ಕಾದಿಟ್ಟು ಎಲ್ಲ ಉಮೇದವಾರರ ಹೆಸರು [illegible] ನಂತರ, ಮೇಲೆ ಕಾಣಿಸಿದ ಗುಣಗಳುಳ್ಳ ಯೋಗ್ಯ ಉಮೇದವಾರನನ್ನು ಪ್ರತಿನಿಧಿಯಾಗಿ ಆರಿಸುವದು, ಹಿತಕರವೆಂದು ಮತದಾರರಿಗೆ ಜಿಲ್ಲಾ ಕಮೀಟಿಯು ಸೂಚನೆಯಾಗಿರುತ್ತದೆ

ಜಿಲ್ಲಾ ಕಮೀಟಿ ಆಫೀಸು ಕಾರವಾರ ತಾ ೬-೯-೧೯೨೦	*M. K. Telang* ಸೇಕ್ರೆಟರಿ ಕಾನಡಾ ಡಿಸ್ಟ್ರಿಕ್ಟ ಕಮಿಟಿ

"ಅಡಿಗೆಬಿದ್ದರೂ ಮೂಗುಮೇಲೆ!"

([illegible])

[illegible] ದೇವತೆಯನ್ನು [illegible] ವಾಗಿ ಭಜಿಸುತ್ತಿರುವದು [illegible] ಸಂಗತಿಯೆಂತಲೇ [illegible] ಚೀನ ದೇಶವೇ ಈ ಚಹಾ ದೇವತೆಯ [illegible] ರಲ್ಲಿ ಇಂಗ್ಲೆಂಡ [illegible] ಹಿಂದುಸ್ಥಾನಕ್ಕೆ [illegible] ಪರಿಚಯವನ್ನು ಮಾಡಿ [illegible] ಇವಳು ಜನರ ರಕ್ತದಮೇಲೆ [illegible] ವದರಿಂದ, ಆಧುನಿಕ [illegible] ಅಜಗಜಾಂತರ [illegible] ಯಾತಕೆಂದರೆ [illegible], ಮತ್ತು ಆಲ್ಕೊಮೊಟಿಕ್ [illegible] ದ್ರವ್ಯಗಳು [illegible] ದ್ರವ್ಯದಿಂದ ಪಚನ [illegible] . ಮತ್ತು ಶರೀರ ಸ್ವಾಸ್ಥ್ಯತೆಗೆ [illegible] ವಾಗಿರುವದರಿಂದ, [illegible] ತರತರದ ರೋಗಗಳ [illegible] ಉಳಿದ ಎರಡು ದ್ರವ್ಯಗಳಿಂದ [illegible] ತಂಕುಸಿನಮೇಲೆ ಕೆಟ್ಟ ಪರಿಣಾಮವಾಗುವದರಿಂದ, ವಿಪರೀತ ಮಾನದಿಂದ ಚಹಾ [illegible] ಸಂಭವವು ಕೂಡ ಇರುವದು ಇದಲ್ಲದೆ, ಚಹಾದ ಅಮಿತ ಪಾನ ಸೇವನೆಯಿಂದ ರಕ್ತಕ್ಷಯ, [illegible], ಮೂತ್ರಾಶಯಾದಿಗಳ ರೋಗಗಳು [illegible] ಇತ್ಯಾದಿ ವಿಕಾರಗಳೂ ಉಂಟಾಗುವವು.

ಚಹಾದ ದುಷ್ಪರಿಣಾಮವನ್ನೂ, ಚಹಾ ಅಂಗಡಿಗಳೊಳಗಿನ ಸ್ವಚ್ಛತೆಯ ಅಭಾವವನ್ನೂ, ಬಹುತೇಕ, ಚಹಾ ಭಕ್ತರು ಮನಃಪೂರ್ವಕವಾಗಿ ಬಲ್ಲರಾಗಿದ್ದರೂ, ವ್ಯಸನಾಧೀನರಾಗಿರುವದರಿಂದ ಮಾತ್ರ, ಅವರ ಆಟವೇನೂ ಸಾಗದಂತಾಗಿದೆ. ಆದರೆ ಚಹಾ ದೇವತೆಯ [illegible] ಭಕ್ತರೆನಿಸಿಕೊಳ್ಳುವ ನಮ್ಮ ಲಿಷ್ಟೋನಿಯನ್" ಪ್ರಭುಗಳವರು. ಆಗಿಗೆ ಬಿದ್ದರೂ ಮೂಗುಮೇಲೆ, ಎಂಬಂತೆ ವಿಶೇಷವಾಗಿ ತಮ್ಮ ವಿಶ್ರಾಂತಿ ಗೃಹಗಳೊಳಗಿನ ಸ್ವಚ್ಛತೆಯನ್ನು ಪ್ರತಿಪಾದಿಸುವ ಪ್ರಯತ್ನದಲ್ಲಿ, ಚಹಾದ ಅಮಿತಪಾನದಿಂದಾದ ತಮ್ಮ ಮಿದುಳಿನ ದೌರ್ಬಲ್ಯವನ್ನೇ ವ್ಯಕ್ತಪಡಿಸಿರುತ್ತಾರೆಂದು ಹೇಳಲಿಕ್ಕೇನೂ ಅಡ್ಡಿಯಿಲ್ಲ!

ವಾಚಕರೇ, ದೊಡ್ಡ ದೊಡ್ಡ ಶಹರಗಳಲ್ಲಿ ಮಾತ್ರ ಮಿಠಾಯಿಯ ಕಿಲ್ಲು ಇರುತ್ತಿದ್ದು, ಕೇರಿಯಂಥ ಸಣ್ಣ [illegible] ಗಳಲ್ಲಿ ಬೆಳಗ್ಗೆ ಮಾಡಿದ ತಿನಸು ಸಾಯಂಕಾಲಕ್ಕಾಗುವದು ಕಠಿಣವೆಂದು ಚಹಾ ಅಂಗಡಿಗಳನ್ನು ಎಂದೂ ನೋಡದಿದ್ದವರಂತೆ ಈ ಪಂಡಿತರು ಬರೆದಿರುವರು. ಇದು ಲೇಖನ ಕಾಲದಲ್ಲಿ ಉತ್ತೇಜನಾರ್ಥವಾಗಿ(Energy) ಪಡಿಸಿದಂಥ ಬಳ್ಳೇ ಸ್ಟ್ರಾಂಗ್ ಟೀದಿಂದಾದ ಪರಿಣಾಮ ವೋ ಏನೋ !"

ಇನ್ನು ಮಿಠಾಯಿಗೆ ಒಣ್ಣ ಬೆರಿಸುವವರಲ್ಲಿ ಸಹಾಯ ಮಾಡುವಂಥ ಮೋಟರ, ಟಾಂಗಾ, ಮೊದಲಾದ ಯಾನಗಳೇನೂ ಇಲ್ಲದ್ದರಿಂದ, ಇಲ್ಲಿ [illegible] ಬೇರೆ ಸಾಧನಗಳೇನೂ ಇಲ್ಲವೆಂದು ಈ ವಿದ್ವಾಂಸರು ವಾದಿಸಿರುವರು. ಆದರೆ ಆ ಕೆಲಸವು ಇಲ್ಲಿ [illegible] ಗಾಡಿಗಳ ಮೂಲಕವೋ, ವಿಶೇಷವಾಗಿ ಗಾಳಿಯ ಮೂಲಕವೋ, ಹೆಚ್ಚು [illegible] ನಡೆದಿರುತ್ತದೆಂಬುವದು ಕಣ್ಣಿದ್ದ ಕುರುಡರಿಗೆ ತಿಳಿಯುವ ಬಗೆಯಾದರೂ ಹ್ಯಾಗೆ ಇದೇ ಇವರ ತರ್ಕಶಾಸ್ತ್ರದೊಳಗಿನ ಪ್ರಾವಿಣ್ಯತೆ!

ತಾತ್ಪರ್ಯವೇನಂದರೆ, ಯಾವದೇ ಒಂದು ಉಪಯುಕ್ತ ಸಂಗತಿಯ ಯೋಜನೆಯನ್ನು ಮಾಡುವದಕ್ಕಿಂತ ಅದಕ್ಕೆ ವಿಘ್ನಗಳನ್ನು ತರುವದರಲ್ಲಿ ಪ್ರಯತ್ನವಾಗಲೀ ತಲೆಬಾಗಲೀ ಬಹಳ ಸ್ವಲ್ಪ ಬೀಳುತ್ತಿರುವದರಿಂದ, ಈಗಿನ ಸುಶಿಕ್ಷಿತರೆನಿಸಿಕೊಳ್ಳುವ ಕೆಲವು ತರುಣ ಪಂಡಿತರು ಈ ಸುಲಭವಾದ ಕಾರ್ಯವನ್ನು ಕೈಕೊಳ್ಳುವದು ಸಹಜವದೆ. ವಾದವಿವಾದಗಳನ್ನು ಮಾಡುವದೇ ಇವರ ಮುಖ್ಯ ಉದ್ದೇಶವಾಗಿರುವದರಿಂದ, [illegible] ಪ್ರಸಂಗಗಳನ್ನು ಇವರು ಸೂಕ್ಷ್ಮದೃಷ್ಟಿಯಿಂದ [illegible] ಹುಡುಕುತ್ತಿರುವರು ಯೋಗ್ಯಾಯೋಗ್ಯ ಪಕ್ಷವನ್ನು ಇವರು ನೋಡರು. ಜಯಾಪಜಯವನ್ನು ಇವರು ಅರಿಯರು. "ಬಿದ್ದರೇನಾಯಿತು, ಮೀಸೆಗೆ ಮಣ್ಣು ಹತ್ತೀತೇ?" ಎಂದು ವಾದಿಸಲಿಕ್ಕೆ ಸಹ ಹಿಂದು ಮುಂದು ನೋಡಲಿಕ್ಕಿಲ್ಲ ಸಿದ್ಧರಾಗಿರುವಂಥ ಹಟವಾದಿಗಳಿವರು. ಇಂಥವರೇ ಸಮಾಜಕ್ಕೆ ಬಹಳ ಘಾತಕರು. ಇದಕ್ಕೆ ನಮ್ಮ ಲಿಷ್ಟೋನಿಯನ್" ಮಹಾಪ್ರಭುಗಳ ಲೇಖವೇ ಸಾಕ್ಷಿಯಾಗಿದೆ. ಈ ರೀತಿಯಲ್ಲಿ ಆ ಪ್ರಭುಗಳು ಅಸತ್ಯಾಶ್ರಯವನ್ನು ಮಾಡಿ, ತಮ್ಮ ಯೋಗ್ಯತೆಗೆ ಕಲಂಕ ತಂದುಕೊಂಡ ಬಗ್ಗೆ, ಕಿಂಚಿತ್ ದುಃಖವಾಗುತ್ತಿದ್ದರೂ ಸತ್ಯಾಶ್ರಯವನ್ನು ಮಾಡಿ ಸ್ವರೂಪಕ್ಕೆ ತಕ್ಕ "ಲಿಷ್ಟೋನಿಯನ್" ಎಂಬ ಹೆಸರನ್ನು ಇರಿಸಿಕೊಂಡದ್ದಕ್ಕೆ ನಮಗೆ ಸ್ವಲ್ಪ ಆನಂದವೇ ಸರಿ!

ಶಿಕ್ಷಕರ ಸಂಬಳದ ಸಾವು!!

ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಶಿಕ್ಷಕರ ಪ್ರತಿನಿಧಿಗಳ ಸಭೆಯು ಮೊನ್ನೆನ ದಿವಸ ಈ ಊರಲ್ಲಿ ಕೂಡಿತ್ತು. ಈ ಜಿಲ್ಲೆಯಲ್ಲಿ ಅಷ್ಟೇನೋ ಶಾಲೆಯು ಎಲ್ಲಕ್ಕೂ ದೊಡ್ಡದಾಗಿದ್ದು, ಇದರ ಹೆಡ್ಡ ಮಾಸ್ತರರಾದ ರಾ ರಾ ಸ್ವಾಮೀ ಗೋವಿಂದ ಕಲಘಟಗಿಯವರು ಅಧ್ಯಕ್ಷರಾಗಿದ್ದರು. ನೂರು ಪಾಠಶಾಲೆಗಳು ಒಂದು [illegible] ಕೆಂಬ ಸುದ್ದಿಗನುಸರಿಸಿ, ಪ್ರಸ್ತುತ [illegible] ಶಾಲೆಗಳಲ್ಲಿ ನಿವ್ವಳ [illegible] ಕೆಲಸ ನಡೆಯಬೇಕು. ಆದರೆ, ಆಗಸ್ಟ ತಿಂಗಳಿಂದ ಸಂಬಳವನ್ನು [illegible] ಬಾರದೆಂದು [illegible] ಮಾಡಿದರು [illegible]

KANARA NEWS.

SPECIAL SUPPLEMENT.

Our Correspondent's Special Wire.] 10—9—1920.

Non-Cooperation Resolution Accepted.

Congress reassembled Wednesday. Noncooperation vehemently discussed. Gandhi's programme accepted. surrender titles, honorary offices; nonattendance official, semiofficials functions; gradually withdrawing children Government Schools, Colleges, establishing National Educational institutions. Boycott British Courts, establishing arbitration Courts. Refusing Mesopotamian service. Councilboycott: Boycott foreign goods. Pal's amendment:- sending mission to England, demanding immediate autonomy, if refused, adopting active Noncooperation dropping Councilboycott.

ಕಾನಡಾವೃತ್ತ.— ಸ್ಪೆಶಲ ಪುರವಣಿ,

ತಾಜಾ ತಂತೀಬಾತ್ಮಿಯು ಭಾಷಾಂತರ. ತಾ. ೧೦—೯—೧೯೨೦.

(ಮುಂಬಯಿಯ ಬಾತ್ಮೀದಾರರಿಂದ)

ಕಳೆದ ಬುಧವಾರ ತಿರುಗಿ ಜಾಡಾ ರಾಷ್ಟ್ರೀಯ ಸಭೆಯು ನೆರೆದು, ಅಸಹಕಾರಿತೆಯ ಸಂಬಂಧದ ಮಹಾತ್ಮಾ ಗಾಂಧಿಗಳ ಕಾರ್ಯಕ್ರಮವು ಆವೇಶದಿಂದ ವಾದವಿವಾದವಾಗಿ ಮಂಜೂರಾಯಿತು.— ಪದವಿಗಳನ್ನು ಒಪ್ಪಿಸುವಿಕೆ, ಬಹುಮಾನದ ಅಧಿಕಾರತ್ಯಾಗ; ಸರಕಾರಿ— ನೀಮ್-ಸರಕಾರಿ ಸಮಾರಂಭಗಳಿಗೆ ಹೋಗದಿರೋಣ; ರಾಷ್ಟ್ರೀಯ ಶಿಕ್ಷಣಸಂಸ್ಥೆಗಳನ್ನು ಸ್ಥಾಪನೆಮಾಡಿ, ಸರಕಾರಿ ಶಾಲೆ-ಕಾಲೇಜುಗಳಲ್ಲಿ ಕಲಿಯುವ ಹುಡುಗರನ್ನು ಕ್ರಮೇಣ ಬಿಡಿಸೋಣ; ಸರಕಾರಿ ನ್ಯಾಯ ಕೋರ್ಟುಗಳನ್ನು ತಿರಸ್ಕರಿಸಿ, ಪಂಚಾಯತಿ ಕೋರ್ಟುಗಳ ಸ್ಥಾಪನೆ; ಮೆಸೊಪೊಟೇಮಿಯಕ್ಕೆ ನೌಕರಿಯ ನಿರಾಕಾರ; ಕಾಯ್ದೆ ಕೌನ್ಸಿಲ ಚುನಾವಣೆಗೆ ಬಹಿಷ್ಕಾರ; ವಿದೇಶಿ ಜಿನ್ನಸುಗಳಿಗೆ ಬಹಿಷ್ಕಾರ. ಪಾಲರವರು ಸ್ವಾಯತ್ತತೆಯನ್ನು ಹಕ್ಕಿನಿಂದ ಬೇಡುವದಕ್ಕಾಗಿ ಈಗಲೇ ಇಂಗ್ಲಂಡಕ್ಕೆ ಒಂದು ಪ್ರಾತಿನಿಧಿಕ ಮಂಡಲವನ್ನು ಕಳುಹಿಸಿ, ಅದನ್ನು ಕೊಡುವದಿಲ್ಲೆಂತಾದರೆ, ಕೌನ್ಸಿಲ ಚುನಾವಣೆ ಬಹಿಷ್ಕಾರ ಬಿಟ್ಟು, ಆಸಕ್ತ ಅಸಹಕಾರಿತೆಯ ವ್ರತವನ್ನು ಅಂಗೀಕರಿಸಬೇಕೆಂಬ ಉಪಸೂಚನೆ ಮಾಡಿದರು.

Published by Krishnarao K. Shenvi at his Star of Kanara P. Kumta.

ಕಾರಣ, ಅವರ ಕಲ್ಯಾಣ... ವಾದರ ಕಲ್ಯಾಣವನ್ನು ಮಾಡ್ಯಾರಾಗಿ ಪೂರ್ಣವಾಗಿ ಕಂಬಿಕೊಂಡಿರುತ್ತೇವೆ. ನಮ್ಮಗೆಳಿಗೆ ಯಾವಾಲೂ ಕಲ್ಯಾಣವನ್ನು ಮಾಡತಕ್ಕ ಈ ಸಮ್ಮಗಳ ಹಿತಚಿಂತನೆಯನ್ನು ಮಾಡತಕ್ಕ ಸರಕಾರದವರ ಕಲ್ಯಾಣದ ಕುರಿತು ಪ್ರಜೆಗಳಾದ ನಾವೆಲ್ಲರು ಶ್ರೀ ದೇವರಿಗೆ ಪ್ರಾರ್ಥನೆ ಮಾಡುವೆವು.

ಮುಂಡಗೋಡ. } ಬಡ ಜಮೀನದಾರರ ಹ ಬಡ
ತಾ. ೨೯-೮-೨೦. } ಪಾಟೀಲ ಜನರ ಹಿತಚಿಂತಕ.

Bombay.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯ, ಬಿದ್ದ ಜಖಮು, ಪೆಟ್ಟಿನ ನೋವು, ಯಾವದೇ ತರದ ಜಖಮು. ಯಾ ಎಲುಗು ಮುರಿದಲ್ಲಿ ಸಹ ಇದನ್ನು ನೀರು ತಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ. ಕ್ರಯ ಕುಪಿ ೧ಕ್ಕೆ ೨ ಆಣೆ. ೧೨ ಕು. ೧-೩-೦. ವ್ಯಾಪಾರಸ್ಥರಿಗೆ ಭರಪೂರ ಕಮಿಶನ್. ಪತ್ತೆ:— ಮುಖ್ಯಾಜಿ ಹಿರಾಲಾಲ ದಲ್ಲಿ ತಮ್ಮ, ಗುರಜರ ಹವೇಲಿ, ಕುಮಟಾ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರೆಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವರು. ಮಾಹಿತಿಬಗ್ಗೆ ... ಅಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶಗಿರಿರಾವ ಧಾಕಪ್ಪನವರ, ಶಿರ್ಶಿ.

ಧುರೆ ಚುನ್ನಡಿ ಅಂಚಿನ ಸೀರೆಗೆ

ಕ್ರಯ ರೂ. 4-8-0.

ಇದು ಉಡುಳಿದಕ್ಕೆ ಧಡೂತಿಯಾಗಿಯೂ, ನೋಟಕ್ಕೆ ನಯವಾಗಿದ್ದೂ, ಬೆಲೆ ಸುಲಭವಾಗಿದ್ದೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ ೧೮ ಮೊಳ. ಬೇಕಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ಕ್ರಯ ರೂ. 4-8-0.

ಪತ್ತೆ.— ವಿ. ಕೆ. ಶೆನ್ ಅಂಡ್ ಕಂಪೆನಿ, 24, ವಿನಾಯಕಮೇಸ್ತ್ರಿ ಬೀದಿ, ಮದರಾಸ್.

ನಮ್ಮಲ್ಲಿ ಸಿಗುವ ದಿವ್ಯ ಔಷಧಗಳು.

ಶಿಲಾಜಿತಚೂರ್ಣ— ಎಲ್ಲ ಶರೀರದ ಬಲಬದ್ಧ ಜುಲಾಬ ಮಾಡಿಸುವ ಶಿಷ್ಪತ್ಯ ಚೂರ್ಣ. ಕ್ರಯ— ಪುಡಿ (೧ಕ್ಕೆ ೧|| ಆಣೆ) ೧೨ ಕ್ಕೆ ೧-೩-೦. ಬಾಲ ಸಂಜೀವನ ಮಾತ್ರೆ— ಈ ಮಾತ್ರೆಯು ಮಕ್ಕಳಿಗೆ ಉಪಯೋಗಿಸಿದರೆ ಯಾವದೇತರದ ಉಪದ್ರವು ಬರಲಾರದು. ಕ್ರಯ ಬುಟ್ಟಿ ೧ಕ್ಕೆ ರೂ. ೨|| ... ಗುಟಿಕಾ— ಯಾವದೇತರದ ಖಾಸಖ್ಯಾಸ, ... ಇವುಗಳಮೇಲೆ ಉಪಯೋಗಿಸುವದು. ಕ್ರಯ— ೧ಕ್ಕೆ ೨ ಆಣೆ ೧೨ ಕ್ಕೆ ೧| ರೂ. ನಾಶಕ ಚೂರ್ಣ— ಯಾವದೇತರದ ವ್ರಣ ಹುಣ್ಣಿಗೆ ಹಚ್ಚಿದರೆ ೮ ದಿವಸಗಳಲ್ಲಿ ಗುಣ. ಕ್ರಯ— ದೊಡ್ಡ ಡಬಿ ೧ ಕ್ಕೆ ರೂ. ೨-೦-೦.

ಆಯುರ್ವೇದ ವೈದ್ಯ ಶಾಲಾ,

ಎಸ್. ವೈದ್ಯ, ಗುರಜರಪೇಟ್ ಕುಮಟಾ.

ಪ್ರಖ್ಯಾತ! ಖಾತ್ರಿದಾಯಕ!! ಬಹುಮಾನಕಾರಕ!!

ಮುಖ ಜೀವನಾಮೃತ.



ಈ ಔಷಧವು ಹಲ್ಲು ಕೆಳತ, ಹಲ್ಲು ನೋಯುವ, ಹಲ್ಲು ಅಲಗಾಡುವ, ಹಲ್ಲುಗಳಿಂದ ರಕ್ತ ಕೀವು ಸುರಿಯುವ, ಬಾಯಿಯಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ. ಇದಲ್ಲದೆ ಬಾಲಗ್ರಹ; ಎಲ್ಲಾ ತರದ ಜ್ವರ, ತಲೆಯ ಬೇನೆ, ವಾಂತಿ, ಹೊಟ್ಟೆಕಟ್ಟೋಣ, ನಳಗು..., ಪ್ಲೇಗ, ಕಾಲರಾ, ಗುಂಟುಗಳಿಗೆ, ಮತ್ತು ವಿಷಕಾರಕ ಪ್ರಾಣಿಗಳು ಕಚ್ಚಿದ ಕೆಳತ, ಬಾಳಂತಿಯರಿಗೆ ನಂಜು ಏರಿದರೆ, ವ ೨೦ ಪ್ರಕಾರದ ರೋಗಗಳಿಗೆ ಗುಣ.

ಕ್ರಯ ಬಾಟ್ಲಿ ೧ಕ್ಕೆ ಫಕ್ತ ೦-೧೨-೦.

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದೀಕ ಕಂಪನಿ,
ಕುಮಟಾ. (ಎನ್. ಕೆನರಾ.)

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೬-೧೯೦೮ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಬತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಬತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಜನರ ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಓದಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇವೆ. ರೋಗದ ಪರೀಕ್ಷೆಯು ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಮುದ್ರಕ್ಕ ಮಾಡಿದ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹವದರೋಗ ಮಂದರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ(ಕಾಲರಾ), ಪ್ಲೇಗ್, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾಜ್ವರ, ಅನೇಕಪ್ರಕಾರದಜ್ವರ, ಗಂಟಾವಾತ, ಪಿತ್ತಶೂಲೆ, ಮೂಗಿನೊಳಗಿನ ಪಿನಸ ವಾದದಿಂದ ರೋಗವು ಕಣ್ಣಿನೊಳಗೆ ಹೂವು ಬೆಳೆಯುವದು, ಮತ್ತು ಕಣ್ಣು ನೋವು, ಕೆಮ್ಮು, ದಮ್ಮು, ಶ್ವಾಸ, ಅಪಸ್ಮಾರ, ಅರ್ಧ ಶಿರಃಶೂಲಿ, ಅಜೀರ್ಣ. ಹೊಟ್ಟೆಶೂಲಿ, ಮೈಶೂಲಿ, ಬರತಲೆಶೂಲಿ, ನರಶೂಲಿ, ವಾತಶೂಲಿ, ಶ್ಲೇಷ್ಮಜಡ್ಡು ಗುಪ್ತವ್ಯಸನಬೇನೆ, ಮುರುಕುತಜ್ಜಿ, ಗಜಕರ್ಣ, ಇಸಬು, ತದ್ದು, ಘಾಯುವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹವದಸಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಪಕ್ಕೆದೋಷ, ಹೊಟ್ಟೆ ದೊಡ್ಡದಾಗುವದು, ಮೈ ಹೊರಬೀಳುವದು, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಒಂದಲ್ಲೆ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ ಒಂದ ಕಾಲು ತೊಲೆ ಬಾಟ್ಲಿ ಒಂದಕ್ಕೆ ಎರಡು ರೂಪಾಯಿ, ನಮೂನೆ ಉದ್ದೇಶ ಎರಡು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ. ವಿ. ಪಿ ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದ. ಒಂದರಿಂದ ಹನ್ನೊಂದು ಬಾಟ್ಲಿಯವರಿಗೆ ಕಮಿಶನ್ ಇಲ್ಲ ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ಟಿಕೀಟು ಲಗತ ಇಡದೆ ಹೊತ್ತು ದೊರೆಯಲಿಕ್ಕಿಲ್ಲ. ಅನುಪಾನಪತ್ರಿಕೆಯು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ಸಿಕ್ಕ ವಿಳಾಸ ಇಂಗ್ಲಿಷ ಅಥವಾ ಕನ್ನಡದಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತಿರಬೇಕು

ಎಚ್. ಎ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸು ಶಹಾಪೂರ, ಬೆಳಗಾಂವ.

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ— ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ, ಶರೀರದ ಪಳಿತದಿಂದ ಅಶಕ್ತಿ ಹೊಂದಿದ ವೃದ್ಧರಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ದಾರ್ಢ್ಯ ಮತ್ತು ಮುಖದಲ್ಲಿ ಕಾಂತಿ ಗೊಳಿಸುವದು. 40 ಸಲ ಸೇವಿಸುವ ಲೇಹ, ಡಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-12 0.

2. ಮಹಾಚ್ಯವನಪ್ರಾಶ — (ಖಾತ್ರಿ ಗುಣ) — ಇನ್‌ಫ್ಲುಯೆಂಜಾ ನಿಮೋನಿಯಾ, ದಿವಸಕ್ಕೊಮ್ಮೆ ಶ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1 ಕ್ಕೆ 0-8-0

3 ಬಾಲಗ್ರಹ ಗುಟಿಕೆ.— ಕೂಸುಗಳ ಮಕ್ಕಳ ಆರೋಗ್ಯರಕ್ಷಣ ಸಂಜೀವನ ಬಾಟ್ಲಿ 1ಕ್ಕೆ 0-10 0

4. ಮಿಶ್ರ ಕ್ಷೀರ ಗುಟಿಕೆ. ಇದು ಕಾಸಕ್ಕೆ ಸಿದ್ಧ ಔಷಧಿ ಒಂದೇಗ ಪಿಕೆಯಿಂದ ಕೆಮ್ಮು ಬಿಟ್ಟಿತು ಕೆಮ್ಮು ಇಷ್ಟ ಗುಣ. ಬಾಟ್ಲಿ 1 ಕ್ಕೆ 0 10 0

5 ಮೇಹಕುಠಾರ — ಮೂತ್ರಕೃಚ್ಛ್ರ, ಉಷ್ಣ, ಮೂತ್ರ ಹೋಗುವಾಗ್ಯೆ ಉರಿಯ ಇದ್ದ ಕೀವನ್ನೂ ಕೂಡಲೆ ನಿಲ್ಲಿಸಿ, ಪಥ್ಯವಿಲ್ಲದೆ ಖಂಡಿತ ಗುಣಕೊಡುವದು, ಕಠಿಣ ರೋಗಿಗಳೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 14 ದಿವಸದ ಔಷಧಿ. ಕ್ರಯ ರೂ. 2.

6. ರಜೋದೋಷಾಂತಕ ಮತ್ತು ಮಾತ್ರೆ:— ಇದರ ಸೇವನೆಯಿಂದ ಜ್ವರ, ರಕ್ತ, ಪಿತ್ತ, ಅರುಚಿ. ಸೂತಕದ ಸಮಯದಲ್ಲಿ ಶಿರಹೊಟ್ಟೆನೋವು, ಸೊಂಟ ನೋವು, ತಿಂಗಳಿಗೆ 2 ಸರ್ತಿ ಮುಟ್ಟಾಗುವದು, ಹೆಂಗಸರ ರಕ್ತಸ್ರಾವ, ಬಿಳಿದು ಹೋಗುವದು ಇದೆಲ್ಲಾ ರೋಗಗಳನ್ನು ನಿವಾರಿಸಿ ಗರ್ಭಕೋಶವನ್ನು ಶುದ್ಧಪಡಿಸುತ್ತದೆ. 1 ಬಾಟ್ಲಿ ಔಷಧಕ್ಕೂ 1 ಬಾಟ್ಲಿ ಮಾತ್ರೆಗಳಿಗೂ 2-0-0

ಎಮ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡೊಕ್ಟರ್ಸ್ ರಥಬೀದಿ
ಮಂಗಳೂರ ದ. ಕ.

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯರ ಸಚಿತ್ರ ಚರಿತ್ರೆ, ಲೇಖನ ಮತ್ತು ಭಾಷಣ, ೦-೧೨-೦, ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦, ಡಾ॥ ಬಾ॥ ನಾರದ ಮಲ್ಲಪ್ಪನವರ ಸಚಿತ ಚರಿತ್ರೆ ೦-೧೨-೦, ಸ್ವಾತಂತ್ರ್ಯ ಸಿದ್ಧಾಂತ ೦-೮-೦, ಬುದ್ಧಿಯ ಮಾತು ೦-೪-೦, ಆಧುನಿಕ ಜಪಾನ ೦-೪-೦, ಪತಿತೋದ್ಧಾರ, ೦-೪-೦.

ವಿಳಾಸ:— ಎಂ. ಎಂ. ಹರ್ಡೇಕರ.
ದಾವಣಗೇರಿ.

ಹೊಸ ಶೋಧ! "ಓಂ" ಹೊಸ ಶೋಧ
ಗುಣ ಬಾರದಿದ್ದರೆ ಹಣಪರತು.
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಕರ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಿಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಸಿಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಹ ಗುಣವು ಆಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿಜವಾಗಿ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ ಡಬ್ಬಿಗೆ ರು. ೧ ೧೨ ಆಣೆ. ೩ ಡಬ್ಬಿಗಳಿಗೆ ೪ ರು. ೮ ಆಣೆ ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ—ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ
ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು. ಯಾವದೇ ತರದ ಸಾರ್ವಜನಿಕ ಕೆಲಸದ ಹೊತ್ತಿನಲ್ಲಿ ಯಾ ಮದುವೆ ಸಮಾರಂಭಗಳಲ್ಲಿಯೂ ರಾತ್ರೆ ಹೊತ್ತಿನಲ್ಲಿ ನಡೆಯುವ ಜನಸಮೂಹದಲ್ಲಿ ಹಚ್ಚಿದರೆ, ಇದರಿಂದ ಬೆಳಕು ಹೆಚ್ಚು ಬಿದ್ದು ಖರ್ಚು ಸಹ ಕಡಿಮೆ ತಗಲುತ್ತದೆ. ಈ ವಿನಹಾ ಆ ದೀಪಗಳು ತಾ, ಈ ದೀಪಗಳು ಹಚ್ಚು ಎಂಬ ತಾಪತ್ರಯಗಳು ಸಹ ಇಲ್ಲ.

ಬೇಕಾದವರು ಬಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಬರೆದು ತಿಳಿಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ.
ಹೆಗಡೇಕರ, ದುಕಾನ, ಕುಮಟಾ.

Printed and published by Krishnarao Keshav Shenvi, at his Star of Kanara Press, Kumta.

No. Reg: B. 1270.

ವರ್ಷ ೪.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೮.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು ರೂಪಾಯಿ 2-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-13-0.

ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ:-
ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ ರಕ್ತದೋಷ ... ಪ್ರಮೇಹವಿಕಾರ, ನರಗಳ ಶಿಥಿಲತೆ ಅಂಗನಿಸ್ತೇಜತ್ವ, ಧಾತುಹೋಗುವದ, ತಲೆತಿರುಗುವದು ಜೀರ್ಣಜ್ವರ ಅಗ್ನಿಮಾಂದ್ಯ ... ಮೊದಲಾದ ... ಮುಂತಾದ, ಅನೇಕ ವಿಕಾರಗಳು, ... ದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ ಕಾಂತಿಯೂ ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ ರತಿಸುಖಕ್ಕೆ ... ಶಕ್ತಿಯನ್ನು ಕೊಡ ತ್ತದೆ ... ೪೨ ದಿವಸ ... ೮೪ ಕ್ಕೆ ರೂ ೬-೦ ೦

(೧) ಬಾಲಾಮೃತಗ ... — ... ಎಲ್ಲ ರೋಗಗಳಮೇಲೆ ಅತಿ ಉತ್ತಮ ಪಾರದ್ದು ಗುಳಿಗೆ ೩೦ಕ್ಕೆ ರೂ ೧-೦-೦ (೨) ಸನ್ನಿಪಾತ ಮೇಲೆ ಚೂರ್ಣ — ೧೪ ದಿವಸದ ಔಷಧಕ್ಕೆ ರೂ ೨ ೧ ೦ (೩) ಗಜಕರ್ಣ ... — ಡಬ್ಬಿಗೆ ಆಣೆ ೦ ೮-೦ (೪) ... ಸಾಧಕಗಳಿಗೆ — ... ಗುಳಿಗೆ ೩೦ಕ್ಕೆ ರೂ ೨-೦-೦

... ಔಷಧಿಯು ... ಅಂಚೆ ವೆಚ್ಚ ...

ವಿಳಾಸ— ವೈದ್ಯ ವ್ಹಿ. ಎಸ್. ಮೋಡಕ
ಮತ್ತು ಕಂಪನಿ, ಪೋಸ್ಟ ಸಿರಸಿ.
ಜಿಲ್ಲಾ ಉತ್ತರಕಾನಡಾ

ಅತ್ಯುತ್ತಮವಾದ
ಮಂಗಳೂರ ನಶೀಪುಡಿ
ಮತ್ತು
ಸೇದುವ ಬೀಡಿಗಳು.

ನವನು, ... ಕಡಕ ನಮ್ಮಲ್ಲಿ ಸಿಗುತ್ತವೆ ಪರ ಮಾರಾಟಕ ಒಂದು ಸರ್ತಿ ಅನುಭವ ತೆಗೆದುಕೊಂಡು ನೋಡಿರಿ, ... ದೊರ ತ್ತದೆ

ಪತ್ತೆ — ಬಿ ದಾಸ
ಸೋಪ್ರುಡಿ ಮತ್ತು ಬಿಡಿ ಮರ್ಚಂಟ್,
ಕುಮಟಾ

फंडांचे मायबाप कोण ?

'एडवर्ड मेमोरियल फंड' ह्मणून एक फंड जमविण्याची लाट मागे सर्वठिकाणी आल्या वेळी, इतर गोष्टीत मागसलेला असल्यासहि. अशा गोष्टीत तरी कधींहि मागे न पडणाऱ्या कानडा जिल्ह्यातहि, सबंध जिल्ह्याचा ह्मणून, एक फंड जमविण्यात आला होता. या गोष्टीची कित्येकांस विस्मृति पडली असल्यासहि, त्याची पुनराठवण करून देणे अवश्य आहे. सदर फंड जमवितांना, आमच्या जिल्ह्यात विशेष हितावह अशा शेतकी संबंधाच्या एखाद्या गोष्टीकडे त्याचा विनियोग होईल असे सांगण्यात आले होते. त्याप्रमाणे सदर फंडातील चार किंवा पंधरा हजार रुपये कसल्याशा शेतकी 'फार्म' करिता सरकारच्या हवाली करण्यात आले, ही गोष्ट सर्वविश्रुत आहेच. बाकीचे दोन अडीच हजार रुपये पोस्टल सेविंग बँकेत धूळ खात पडले आहेत. ते येथे होऊ घातलेल्या नर्सिंग असोसिएशनला देण्याचा विचार सध्या येथे भरलेल्या सदर फंडाच्या कमिटीत चालला होता ह्मणे. फंड जमविला होता, कोणत्या कारणाकरिता, व त्याचा विनियोग विषयीं सध्या काय कल्पना काढीत आहेत. याचा विचार सदर कमिटीतील आमचे पुढारी ह्मणविणाऱ्यास शिवलाच नाही काय ? फंडाचा विनियोग न होता, फंड असे पडून राहतात व पाहिजे त्या वेळी आपल्या मोहरक्कर मर्जीप्रमाणे त्याची विल्हेवाट लावण्याची कल्पना एखादा बहादर पुढे आणतो यावरून काही फंड जमविण्यात निश्चित हेतु किंवा ध्येय काही नसतो. दुसरा एखादा लावता हेतूच कारणीभूत असतो हे उघड होत नाही काय ?

ज्या फंडास सर नारायण चंदावरकर यांच्या सारख्या विचारशील सद्गृहस्थानी एक हजार रुपयाची वर्गणी दिली असा 'पंजाब रिलीफ फंड' मागच्या वर्षी जमा होत असतांना, व त्या फंडास मदत करणे हे देशबांधवांविषयीं कर्तव्य व निव्वळ भूतदयेचे काम असता त्यास सदर फंडास एक दिडकीनेहि मदत करण्याची प्रेरणा कधी झाली नाही, अशा काही गृहस्थांनीं सरकारनी सुळीच सक्ति नसता, व ती बाब लोकांच्या स्वयंस्फूर्तीवरच सोपविलेली असता, लोकांनी उंबरठे झिजवून 'पीस सेलिब्रेशन' (विजयोत्सवा) करिता इकडे फंड गोळा केला होता. सदर फंडाचा काही भाग खर्च न होता राहिल्यामुळे, तो नर्सिंग असोसिएशनला देण्याचे काही दिवसामागे ठरविण्यात आले हे लोकांना समजलेच आहे. यावरून लोकांच्या मिथतीगतीचा विचार न करिता, स्वतःच्या वटेचारावरून, हे बडाड दर अनावश्यक प्रमाणावर फंड गोळा करितात व पुढे मूळच्या वर्गणीदाराची आठवण मुळीच न राहता, मूठभर लोकांच्या मॅनेजिंगकमिटीच्या नावाखाली सदर फंडाच्या शिलकेचा यांच्या वैयक्तिक लहरीप्रमाणे विनियोग होतो, हेच सिद्ध होत नाही काय ?

नर्सिंग असोसिएशन' ही संस्था आमच्या हिताचीच असेल, ती आमच्या कल्याणाकरिताच अवतरली असेल. तो प्रस्तुत वादाचा विषय नव्हे. सिविल हास्पिटलमध्ये 'नर्सिस' (परिचारिका) ची सोय करणे ही सरकारच्या कर्तव्य कर्तव्याची बाब होय. त्याविषयी लोकांनीहि सहाय्य करणे आवश्यक मानिल्यासहि, त्याबद्दल स्वतंत्र व्यवस्था चालली आहे. सरकार अर्धा खर्च चालविणार आहे. लोकातर्फे डिस्ट्रिक्ट लोकलबोर्डाने प्रतिमहिना काही ठराविक रक्कम देण्याचे ठरले आहे. स्वतंत्र वर्गण्याहि जमविण्याची खटपट चालली आहे. ती स्वतंत्र योजना रीतीने चालू आहेच. तेव्हा नर्सिंग असोसिएशन ही लोकास हितावह बाब ह्मणून, 'यथा नदीना बहवोऽम्बु वेगाः समुद्रमेवाभिमुखा द्रवन्ति' या न्यायाने निरनिराळ्या फंडाच्या शिलक रकमा त्या त्या वर्गणीदारांच्या संमतीची अपेक्षाच न करिता त्या त्या फंडाच्या मूळहेतूची पर्वाच न करिता, लोकशाहीच्या तत्वाला मुळीच न जुमानता तिकडे वळविणारे तुह्मी कोण ? 'नर्सिंग असोसिएशन' ही लोकहितकारी संस्था ह्मणून सर्व फंडाचा विनियोग तिकडेच करण्याची तयारी होऊं लागली असल्यास इकडील 'संयुक्त गो सा ज्ञा. परिषदे' च्या फंडाचेहि काही एकदोन हजार रुपये शिलक आहेत ह्मणे. त्या रकमेचीहि विल्हेवाट लावून टाकाना !

नर्सिंग असोसिएशनच्या परिचारिका कारवारच्या सिविल हॉस्पिटलमध्ये ठेवण्यात येणार अशी योजना असल्याचे ऐकून त्याचा फायदा सबंध जिल्ह्यास होणार नाही अशी आधीच तक्रार आहे. अशा परिस्थितीत, एडवर्ड मेमोरियल फंडासारखा सबंध जिल्ह्याच्या उपयोगाकरिता जमविलेल्या "जिल्हाफंड" मूठभर 'होयबा' ची कमिटी आपल्या सभोवार गोळा करून, पाहिजे त्या रीतीने निकाल लावून काढण्याची शक्कल यास सुचेल. व ज्या उद्देशाने जमविलेला फंड त्यास त्याच कामाकडे लावण्याचा विचार करितांना देखील, मूळचे वर्गणीदार रमलेल्या जिल्ह्याच्या लोकांच्या अनुमतीची गरज यास भासत नाही, यावरूनच आमचे पुढारी (Leaders) ह्मणविणाऱ्या ज्यांच्या अंगात 'डब्बूशाही' कशी मुरलेली आहे याचा प्रत्यय येतो. ते काही नाही. तुह्मी 'डब्बू' असाल, किंवा 'डब्बू' असाल तुमच्या अनुयायींच्या वर्गात काही भावी बहादूरहि असू शकतील. नर्सिंग असोसिएशनच्या कल्पनेचा उगम सरकारी अधिकाऱ्याकडून आल्यामुळेंच त्या संस्थेस परोपरीनें हातभार लावण्याचा दिव्य कल्पना तुमच्या डोक्यात का प्रकाश पाडूं लागल्या आहेत, याचेहि निदान आह्मी जाणतो पण लोकशाहीच्या वाढत्या सूर्यप्रकाशात कितावाच्या प्रकाशाने लुकलुकणाऱ्या काजव्याची डब्बुशाही टिकाव धरूं शकत नाही हें पक्के ध्यानात वाळगा. एवढ्या इशाऱ्याने तुह्मी या पुढें तरी, शहाणे व्हाल अशी आशा आहे. चालकानीं लोकांच्या अनुमतीनें काही योग्य व्यवस्था न करिता, एडवर्ड मेमोरियल फंड इतकी वर्षे निरुपयोगी स्थितीत पडून राहिला, ही एक गोडतूक झालीच आहे. आता ज्या उद्देशाकरिता तो जमा झाला होता, त्याच कार्याकडे तो खर्च झाला पाहिजे. त्याचा अन्य तऱ्हेनें विनियोग करणे असल्यास, त्यास जिल्ह्यातील सर्व वर्गणीदाराची अनुमति मिळविली पाहिजे लोकशाहीच्या तत्वांना आज तुह्मी मानलेच पाहिजे. तात्पुरत्या व्यवस्थेकरिता नेमलेल्या कामचलाऊ कमिटीला फंड कोणत्याहि इतर कार्याकडे लावण्याचा अधिकार दिलेला नसतो.

तसेच कारवारात जमविलेल्या 'टप्पर मेमोरियल फंडा' चीहि काय वाट लागली ते कळणे आवश्यक आहे. सदर फंड आजपर्यंत किती जमला, व त्याचा काय विनियोग होणार आहे, हे जाहीर होणे जरूर आहे, लोकांच्या पाठबळाचा अंदाज न करता, मोठमोठ्या योजना तयार करतात, व अगदीच थोडी रक्कम जमल्यामुळे, त्याचे अर्धें करतें. तसे करावे ह्मणून आपल्या मनाशीच ठरवीत. मुग गिळून गप्प बसतात, यावर सामान्य लोकानी काय कल्पना करावी की — फंड बुडाले — किंवा त्यास कोणी तरी मायबाप आहे ?

कारवार १२-९-२०   आपला,

"कोणी का असेना"

ಸಾ| ಸ್ಕೂಲ ಬಡೆಸ್ಕೂಲಿನ ವಲ್ಲದ

ಸ್ಕೂಲ ಬದಲ ಆಫೀಸ.

[illegible] ಕಾನಡಾವೃತ್ತ ಪತ್ರಿಕೆ [illegible]

[illegible]

ದರ್ಮ ಡಿಪಾರ್ಟಮೆಂಟ

[illegible] } ಸ್ಕೂಲ ಡಿಪಾರ್ಟ್‌ಮೆಂಟ ವಲ್ಲದ ಸ್ಕೂಲ [illegible]

ವಿಚಾರತರಂಗ.

ಲೇಖಕ ನಿರೀಕ್ಷಕ.

ಮಹಾತ್ಮಾ ಗಾಂಧಿಯವರ ಅಸಹಕಾರಿತೆಯ ಠರಾವು ಕಲಕತ್ತೆಯ ರಾಷ್ಟ್ರೀಯ ಸಭೆಯಲ್ಲಿ ಮಂಜೂರಾದಂದಿನಿಂದ, ಅವರಮೇಲೆ ಭಿನ್ನ ಭಿನ್ನ ಪ್ರಕೃತಿಯವರು ಭಿನ್ನ ಭಿನ್ನ ರೀತಿಯಿಂದ ಟೀಕಿಸುತ್ತಿದ್ದಾರೆ. ಕೆಲವರು, ವಿಶೇಷವಾಗಿ, ರಾಷ್ಟ್ರೀಯಪಕ್ಷದವರು, 'ಸುಧಾರಣಾ ಕಾಯಿದೆ ಕೌನ್ಸಿಲಿಗೆ ಬಹಿಷ್ಕಾರ ಹಾಕಿದ್ದು ಮುತ್ಸದ್ದಿತನವಾಗಲಿಲ್ಲ, ಇದು ರಾಷ್ಟ್ರೀಯ ಸಭೆಯ ಜಾಣತನದ ದ್ಯೋತಕವಲ್ಲ' ಎಂದು ಅನ್ನುತ್ತಾರೆ, ಇನ್ನು ಕೆಲವರು 'ಹೊಸ ಕೌನ್ಸಿಲಿನಲ್ಲಿ ಉಪಯುಕ್ತ ಕೆಲಸಮಾಡುವದು ತೀರ ಅಶಕ್ಯವು ದಿವಾಣನಂಥ ದೊಡ್ಡ ಅಧಿಕಾರಿಯು ಸಹ ಗವರ್ನರರ ಹಾಂಜಿ ಹಾಂಜಿ ಮಾಡಿ ದಿವಸ ಕಳೆಯಬೇಕಾಗುವದು. ಕೌನ್ಸಿಲಿನಲ್ಲಿ ಸೇರಿ, ದೇಶಸೇವೆ ಮಾಡುವದಕ್ಕಿಂತ, ಅಲ್ಲಿ ಹೋಗದೆ, ಚಳವಳಿ ಮಾಡುವದೇ ಹೆಚ್ಚು ಶ್ರೇಯಸ್ಕರವು' ಎಂದು ಹೇಳುತ್ತಾರೆ. ಕೆಲವರು, 'ಪರದೇಶಿ ವಸ್ತ್ರಾದಿಗಳಮೇಲೆ ಬಹಿಷ್ಕಾರ ಹಾಕಿದ್ದು ಒಳಿತಾಯಿತು, ಮಹಾತ್ಮರ ಕಾರ್ಯಕ್ರಮದಲ್ಲಿ ಈ ಸಂಗತಿಯೇ ವಿಶೇಷ ವ್ಯವಹಾರ್ಯವು' ಎಂದು ಅಭಿಪ್ರಾಯಪಟ್ಟರೆ, 'ಈ ಸಂಗತಿಯು ತೀರ ಅಶಕ್ಯವು, ಪರದೇಶೀ ವಸ್ತ್ರಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುವದು ತೀರ ಅವ್ಯವಹಾರ್ಯವಿದ್ದೇ ಅಲ್ಲ, ಅಶಕ್ಯವು,' ಎಂದು ನುಡಿಯುತ್ತಾರೆ ಇನ್ನು ಕೆಲವರು, 'ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿ, ಸರಕಾರದ ಹತ್ತರ ಅಸಹಕಾರಿತೆ ಮಾಡುವದು ತೀರ ವ್ಯವಹಾರ್ಯ ಮಾರ್ಗವು, ಇದನ್ನು ಪ್ರತಿಯೊಬ್ಬರು ಮಾಡಲೇ ಬೇಕು,' ಎಂದು ಹೇಳಿದರೆ, ಲಾಲಾ ಲಜಪತರಾಯರಂಥ ಮಾನ್ಯ ಮುಂದಾಳುಗಳು 'ರಾಷ್ಟ್ರೀಯ ಸರಕಾರದ ಹೊರತು, ರಾಷ್ಟ್ರೀಯ ಶಿಕ್ಷಣ ಕೊಡುವ ಸಂಸ್ಥೆಗಳನ್ನು ಸ್ಥಾಪಿಸುವದು ಅಶಕ್ಯವೆಂದು ಅಭಿಪ್ರಾಯ ಕೊಡುತ್ತಾರೆ. ಒಟ್ಟಿಗೆ, ಈ ಠರಾವೇ ದೋಷಪೂರ್ಣವಿರುತ್ತದೆ, ಅದನ್ನು ನಾವು ನಾಗಪುರದ ರಾಷ್ಟ್ರೀಯ ಸಭೆಯಲ್ಲಿ ರದ್ದುಮಾಡಿಕೊಂಡ ಹೊರತು, ತರಣೋಪಾಯವಿಲ್ಲ' ಎಂದು ದೊಡ್ಡ ದೊಡ್ಡ ಮುಂದಾಳುಗಳು ಉದ್ಗರಿಸುತ್ತಾರೆ. ಅದು ಹ್ಯಾಗೂ ಇರಲಿ, ಒಂದು ಸಂಗತಿಯ ಮೇಲೆ ಬಹುಜನ ಸಮಾಜದ ಐಕ್ಯಮತ್ಯವಿರುತ್ತದೆ. ಅದೇನಂದರೆ, ರಾಷ್ಟ್ರೀಯಸಭೆಯ ಠರಾವನ್ನು ರಾಷ್ಟ್ರಭಕ್ತರೆಲ್ಲರೂ ಶಿರಸಾ ಮನ್ನಿಸಿ, ಅದನ್ನು ಅಮಲಿನಲ್ಲಿ ತರಲು ಹೆಣಗಬೇಕು, ಮಡಿಯಬೇಕು.

* * *

ಈ ಠರಾವನ್ನು ಅಮಲಿನಲ್ಲಿ ತರುವ ಉಪಾಯಗಳ್ಯಾವವು? ಎಂಬದನ್ನು ವಿಚಾರಿಸಲು, ರಾಷ್ಟ್ರೀಯ ಸಭೆಯ ಕಾರ್ಯಕಾರೀ ಮಂಡಳವಾದ ಅಲ ಇಂಡಿಯಾ ಕೊಂಗ್ರೆಸ ಕಮಿಟಿಯ ಸಭೆಯು ಕಲಕತ್ತೆಯಲ್ಲಿ ಲಾಲಾ ಲಜಪತರಾಯ ಬಂಗಲೆಯಮೇಲೆ ಕೂಡಿತು ಅಲ್ಲಿ ಈ ಠರಾವಿನಮೇಲೆ, ಬಹಳೇ ವಾದವಿವಾದವಾಗಿ, ಕೊನೆಗೆ, ಈ ಠರಾವಿನನ್ವಯ ನಿಯಮಾವಲಿಯನ್ನು ತಯಾರಿಸಲು, ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಸಾಮದಾರ (ಈಗ ಶ್ರೀಯುತ) ವಲ್ಲಭಭಾಯ ಪಟೇಲ ಇವರದೊಂದು ಕಮಿಟಿ ನೇಮಿಸಲ್ಪಟ್ಟಿತು. ಈ ಕಮಿಟಿಯು ಇನ್ನು ೧೦–೧೫ ದಿವಸಗಳಲ್ಲಿ ನಿಯಮಗಳನ್ನು ತಯಾರಿಸಿ, ಆಲ ಇಂಡಿಯಾ ಕೊಂಗ್ರೆಸ ಕಮಿಟಿಯ ಮುಂದೆ ಮಂಜೂರಿಗಾಗಿ ಇಡುವದು ರಾಷ್ಟ್ರೀಯ ಸಭೆಯೆಂದರೆ, ಇಡೀ ವರ್ಷ ನಿದ್ರೆಗೈದು, ಕಡೆಯ ಮೂರು ದಿವಸಗಳಲ್ಲಿ ಶಾಬ್ದಿಕ ಚಳವಳಿ ಮಾಡುವ ಒಂದು ಸಂಸ್ಥೆಯು, ಅದನ್ನು ಕಾರ್ಯಕ್ಷಮ ಮಾಡಿದ ಹೊರತು, ನಮ್ಮ ಚಳವಳಿಗೆ ಸಜೀವತೆ ಬರಲಾರದು ಎಂದು ನುಡಿಯುತ್ತಿದ್ದರು ಪಂಜಾಬದ ಅತ್ಯಾಚಾರ, ಖಿಲಾಫತ ಪ್ರಕರಣ, ಮಹಾತ್ಮಾ ಗಾಂಧಿಯವರ ಪ್ರೇರಣೆ ಇವುಗಳಿಂದ ರಾಷ್ಟ್ರೀಯ ಸಭೆಗೆ ಚಾಲನೆ ಸಿಕ್ಕಿ, ತಮ್ಮ ಇಚ್ಛೆಯು ಸಫಲವಾದದ್ದನ್ನು ನೋಡಿ, ಲೋಕಮಾನ್ಯರ ಆತ್ಮಕ್ಕೆ ಶಾಂತಿಯೂ, ದೇಶಕ್ಕೆ ಸುಖವೂ ದೊರೆಯಲಿ.

* * * *

ಅಸಹಕಾರಿತೆಯ ಠರಾವು ಪಾಸಾದಂದಿನಿಂದ, ನಮ್ಮ ಹಿತಶತ್ರುಗಳು ಹಿಂದ ದೇಶಹಿತ ಬುದ್ಧಿಯಿಂದ ಪ್ರೇರಿತರಾಗಿ, ರಾಷ್ಟ್ರೀಯ ಸಭೆಯೊಳಗಿನ ವಿಚಾರಿ ಮುಖಂಡರಿಗೆ ತಮ್ಮ ನೇಮಸ್ತ ಬಾಂಧವರನ್ನು ಅನುಕರಿಸಿ, ಪೆಕ್ಕಿನ ಬಜಾರ ಸ್ಥಾಪಿಸಿರಿ ಎಂಬ ದೇಶದ್ರೋಹಿ ಉಪದೇಶಮಾಡುತ್ತಿದ್ದಾರೆ ಈ ಉಪದೇಶಕ್ಕೆ ಬಲಿಬೀಳುವ ಆತ್ಮಘಾತಕೀ ಜನರು ರಾಷ್ಟ್ರಭಕ್ತರಲ್ಲಿ ಯಾರೂ ಇಲ್ಲೆಂಬದು ನಮ್ಮ ಸುದೈವವು. ಅವರೂ ಕೆಲ 'ಪ್ರಾಮಾಣಿಕ' ಮುಂದಾಳುಗಳಿಗೆ ರಾಷ್ಟ್ರೀಯಸಭೆಯ ಠರಾವನ್ನು ಅಮಲಿನಲ್ಲಿ ತರುವದು ಸದಸದ್ವಿವೇಕ ಬುದ್ಧಿಯ ವಿರುದ್ಧವೆಂದು ಕಾಣುತ್ತದೆ. ಇಂಥ ಕೆಲ ಸದ್ಗೃಹಸ್ಥರು ರಾಷ್ಟ್ರೀಯ ಸಭೆಯ ಅಖಿಲ ಭಾರತೀಯ ಹಾಗೂ ಸ್ಥಾನಿಕ ಕಾರ್ಯಕಾರೀ ಮಂಡಳದ ರಾಜೀನಾಮೆಗಳನ್ನು ಕೊಟ್ಟಿರುವರು ಮದ್ರಾಸದ ಮುಂದಾಳುಗಳಾದ ಶ್ರೀ। ಕಸ್ತೂರಿರಂಗ ಅಯ್ಯಂಗಾರ, ಶ್ರೀ। ಸತ್ಯಮೂರ್ತಿ, ಇವರು ಮದ್ರಾಸ ಕೊಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಳದ ರಾಜೀನಾಮೆ ಕೊಟ್ಟಿರುವರು. ಶ್ರೀ। ಗೋಕರ್ಣನಾಥ ಮಿಶ್ರರವರು ರಾಷ್ಟ್ರೀಯ ಸಭೆಯ ಸೆಕ್ರೆಟರೀ ಜಾಗೆಯನ್ನು ತ್ಯಜಿಸಿರುವರು. ರಾಷ್ಟ್ರೀಯ ಸಭೆಯ ಭಕ್ತರು, ಅಸಹಕಾರಿತೆಯ ಠರಾವು ಅಮಾನ್ಯವಿದ್ದರೂ, ಠರಾವಿನನುಸಾರವಾಗಿ ಹೊಸ ಕಾಯಿದೆ ಕೌನ್ಸಿಲ ಸಭಾಸದರ ಸ್ಥಳಕ್ಕೆ ಉಮೇದ್ವಾರರಾಗಿ ನಿಲ್ಲುವ ಇಚ್ಛೆಯನ್ನು ತೊರೆದಿರುವರು ಲೋಕಮಾನ್ಯರ ಕೊಂಗ್ರೆಸ-ಡೆಮೊಕ್ರೆಟಿಕ ಪಾರ್ಟಿಯು ಹೊಸ ಕೌನ್ಸಿಲದಲ್ಲಿ ಸೇರುವದಿಲ್ಲ, ಶ್ರೀಯುತ ಚಿತ್ತರಂಜನದಾಸ ಇವರ ಅಧಿಪತ್ಯದೊಳಗೆ ಬಂಗಾಲಿ ರಾಷ್ಟ್ರೀಯರು, ಹಾಗೂ ತರುಣ ಪಂಜಾಬೀ ರಾಷ್ಟ್ರೀಯರು ತಮ್ಮ ಅಂಗವನ್ನು ನಿವಡಣೂಕಿಯೊಳಗಿಂದ ತೆಗೆದುಕೊಂಡಿರುವರು. ಮದ್ರಾಸಿನ ಸುಪ್ರಸಿದ್ಧ ಪುಢಾರಿಗಳಾದ ಶ್ರೀಯುತ ವಿಜಯರಾಘವ ಚಾರಿಯರು 'ತಾವು ಹೊಸ ಕೌನ್ಸಿಲುಗಳಿಗೆ ಹೋಗುವದಿಲ್ಲವೆಂದು' ಕಲಕತ್ತೆಯಲ್ಲೇ ಜಾಹೀರುಮಾಡಿದರು.

* * * * *

ಬ್ರಿಟಿಶ ಕೋರ್ಟುಗಳಿಗೆ ಬಹಿಷ್ಕಾರ ಹಾಕುವ ವಿಷಯದಲ್ಲಿ ಸಹ, ವಿಶೇಷ ಪ್ರಗತಿಯಾಗಿದೆ. ಬಂಗಾಲದ ಸುಪ್ರಸಿದ್ಧ ವಕೀಲರು ತಮ್ಮ ವಕೀಲಿಯನ್ನು ತಹಕೂಬ ಮಾಡಿರುವರು, ಪಂಡಿತ ಮೋತಿಲಾಲ ನೆಹರುರವರು ವಕೀಲಿಯನ್ನು ತಹಕೂಬ ಮಾಡಿದ್ದಲ್ಲದೆ, ಯುದ್ಧಕಾಲದಲ್ಲಿ ಸಿಕ್ಕಿದ ಪದಕವನ್ನು ಸಹ ಹಿಂತಿರುಗಿ ಕಳಿಸಿರುವರು, ರಾಜಕಾರಣದ ಸಂಪಾದಕರಾದ ಶ್ರೀಯುತ ಸೀತಾರಾಮ ಕೇಶವ ದಾಮಲೆ ಹಾಗೂ ಬೆಳಗಾವಿಯ ಸುಪ್ರಸಿದ್ಧ ಪುಢಾರಿ ಶ್ರೀ। ಗಂಗಾಧರರಾವ ದೇಶಪಾಂಡೆಯವರು ತಮ್ಮ ವಕೀಲಿ ಧಂದೆಗೆ ತೂರ್ತ ರಾಜೀನಾಮೆ ಕೊಟ್ಟಿರುವರು.

* * * * *

ಪಂಜಾಬದ ಅತ್ಯಾಚಾರದಿಂದ ಹಿಂದೀ ಜನರ ವಿಷಯದಲ್ಲಿ ಸರಕಾರದ ಮನಃಸ್ಥಿತಿಯು ಹೇಗಿರುತ್ತದೆ ಹಿಂದುಸ್ಥಾನದಲ್ಲಿ ಹಿಂದೀ ನಾಗರಿಕರ ದರ್ಜೆ ಏನು ಎಂಬದು ದಿನೇ ದಿನೇ ಸ್ಪಷ್ಟವಾಗುತ್ತದೆ. ಪಂಜಾಬಿನ ಅತ್ಯಾಚಾರಗಳಲ್ಲಿ ಬಲಿಬಿದ್ದವರಿಗೆ ಸರಕಾರವು ಏನು ಭರಪಾಯಿ ಮಾಡಿರುತ್ತದೆ? ಎಂಬ ಸವಾಲಿಗೆ ಮನೋರಂಜಕ ಉತ್ತರ ಸಿಕ್ಕಿರುತ್ತದೆ. ಯುರೋಪಿಯನ್ನರಿಗೆ ಸರಕಾರವು ತಲೆಗೆ ಸರಾಸರಿ ರೂಪಾಯಿ ೩೮ ಸಾವಿರ ಕೊಟ್ಟರೆ, ಹಿಂದೀ ನಾಗರಿಕರಿಗೆ ರೂಪಾಯಿ ೩೫೦ ಸಿಕ್ಕಿರುತ್ತವೆ! "ಬ್ರಿಟಿಷ ರಾಜ್ಯದಲ್ಲಿ ಹಿಂದಿ ಮತ್ತು ಯುರೋಪಿಯನ ಎಂಬ ಭೇದವಿಲ್ಲ ಎಲ್ಲರ ಒಂದೇ," ಎಂದು ಇಷ್ಟು ದಿವಸ ಡಂಗುರ ಹೊಡೆಯುವವರು ಈಗ ಮುಂದೆ ಬರಲಿ, ಮತ್ತು ಈ ಪಂಕ್ತಿ ಪ್ರಪಂಚವನ್ನು ತಿಳಿಸಿ ಹೇಳಲಿ. ಒಟ್ಟಿಗೆ ಹಿಂದೀನಾಗರಿಕರ ದರ್ಜೆಯು ಹಿಂದುಸ್ಥಾನದಲ್ಲಿ ಸಹ ರೂಪಾಯಿ ೩೫೦ ರ ಮೇಲಿಲ್ಲ. ಚಲಾಯಿ ಎತ್ತಿನ ಜೋಡಿ ಸಹ ಇದಕ್ಕಿಂತ ಹೆಚ್ಚು ಬೆಲೆ ಬೀಳುತ್ತದೆ. ನಮ್ಮ ದರ್ಜೆಯು ಪಶುಗಳ ದರ್ಜೆಗಿಂತ ಹೀನತರವಾಯಿತು! ಇಂಥ ದರ್ಜೆಯಿಂದ ಸರಕಾರದ ಹತ್ತ ನಾವು ಸಹಕಾರಿತೆ ಮಾಡುವದು ಹೇಗೆ? ಸಮಾನದರ್ಜೆಯವರೇ ಸಹಕಾರಿತೆ ಮಾಡಬಲ್ಲರು. ನಮ್ಮ ದರ್ಜೆಯನ್ನು ಏರಿಸಿದ ಹೊರತು, ಸಹಕಾರಿತೆಯ ಕೋಲಾಹಲವನ್ನೆಬ್ಬಿಸುವದು ಹಿಂದೀ ಜನರಿಗೆ ಮೋಸ ಹಾಕುವ ಉಪಾಯವು.

* * * * *

ಶಾಬ್ದಿಕ ಚಳವಳಿಯಿಂದ, ಬ್ರಿಟಿಷ ರಾಜ್ಯದಲ್ಲಿ ಏನೂ ಸಿಗುವದಿಲ್ಲೆಂದು ರಾಷ್ಟ್ರೀಯ ಸಭೆಯ ಇತಿಹಾಸವು ಹೇಳುವಂತೆಯೇ, ಮುಂಬಯಿ ಟಪಾಲ ಶಿಪಾಯರ ಚಳವಳಿಯು ಸಹ ಹೇಳುತ್ತದೆ ಈ ಬಡ ಶಿಪಾಯರು ಈಗ ೨–೩ ತಿಂಗಳುಗಳಿಂದ ಅರ್ಜಿಯಮೇಲೆ ಅರ್ಜಿ ತಂತಿಯಮೇಲೆ ತಂತಿ, ಬರೇ ಅಧಿಕಾರಿಗಳ ಮುಖದಮೇಲೆ ಮುಲಾಖತು ಕೊಂಡು, 'ಜಿನಸುಗಳ ತುಟ್ಟಿಯಾಗುತ್ತ ನಡೆದಿವೆ; ಇಳಿಯುವ ಲಕ್ಷಣ ಸಹ ಸಂಭವವಿಲ್ಲ. ನಮ್ಮ ಸಂಬಳವು ಖರ್ಚಿನ ಮಾಪದ ತೀರ ಕಡಿಮೆ, ಮುಂಬಯಿಯಲ್ಲಿ ಹೆಂಡರ ಮಕ್ಕಳನ್ನು ಸಾಕಿ, ಬಾಳ್ವೆಮಾಡಿಕೊಳ್ಳುವದು ತೀರ ಅಶಕ್ಯವು; ಏನಾದರೂ ನಮ್ಮ ವ್ಯವಸ್ಥೆ ಮಾಡಿರಿ ಎಂದು ಬೇಡಿಕೊಳ್ಳುತ್ತಿದ್ದಾರೆ. ಆದರೆ ಟಪಾಲ ಅಧಿಕಾರಿಗಳು ಅವರ ಕಡೆಗೆ ಲಕ್ಷಕೊಡುವದೇ ಇಲ್ಲ! ಕಟ್ಟಕಡೆಗೆ, ಬಡ ಟಪಾಲು ಶಿಪಾಯಿಗಳು ಶಾಬ್ದಿಕ ಸನದಶೀರ ಚಳವಳಿಯಿಂದ ಬೇಸತ್ತು, ಕಳೆದ ಸೋಮವಾರದಿಂದ ಅಸಹಕಾರಿತೆಯ ತತ್ವವನ್ನು ಅಂಗೀಕರಿಸಿ, ಸಂಪುಮಾಡಿ ಕೂತುಕೊಂಡಿರುವರು. ಟಪಾಲ ಖಾತೆಗೆ ವರ್ಷಕ್ಕೆ ಲಕ್ಷಗಟ್ಟಲೆ ರೂಪಾಯಿ ಲಾಭವಿರುತ್ತ ಸರಕಾರವು ಬಡ ಶಿಪಾಯಿಗಳಿಗೆ ಯಾಕೆ ಪೀಡಿಸುವದೆಂದು ತಿಳಿಯುತ್ತದೆ ಸದ್ಯಕ್ಕೆ, ಸಣ್ಣ ವ್ಯಾಪಾರಿಗಳ ಮೇಲೆ, ಹಾಗೂ ವೃತ್ತ ಪತ್ರಕರ್ತರಮೇಲೆ ಹೊರಿಸಿದ ಎರಡಾಣೆ ಕರಿಗೆಯಿಂದ ಟಪಾಲಖಾತೆಗೆ ಬಹಳ ಉತ್ಪನ್ನವಾಗುವದು. ಆದರೂ ಶಿಪಾಯಿಗಳ ಸ್ಥಿತಿಯು ಸುಧಾರಿಸುವದೇ ಇಲ್ಲ ಒಟ್ಟಿಗೆ, ಶಾಬ್ದಿಕ ಚಳವಳಿಯು ಬ್ರಿಟಿಶ ರಾಜ್ಯದಲ್ಲಿ ನಿರುಪಯೋಗಿಯು ಇದೇ ಖರೆ. ನೋಡುವ, ಅಧಿಕಾರಿಗಳು ಟಪಾಲ ಶಿಪಾಯಿಗಳ ಹೊರತು, ಹ್ಯಾಗೆ ಕೆಲಸಮಾಡುತ್ತಾರೆಂದು!

ವಾಚಕರಿಗೆ ಸೂಚನೆ.

ಈ ಸಂಚಿಕೆಯೊಂದಿಗೆ ನಮ್ಮ ನಾಲ್ಕನೇ ವರ್ಷವು ಮುಗಿಯಿತು. ಹಳೇ ವರ್ಷದ ವ್ಯವಹಾರವು ಮುಗಿಸಿಕೊಳ್ಳಲಿಕ್ಕೂ, ಹೊಸ ವರ್ಷದ ಕಾರ್ಯಕ್ರಮವನ್ನು ನಿರ್ಣಯಿಸಿಕೊಳ್ಳಲಿಕ್ಕೂ, ನಮಗೆ ಒಂದು ಹಪ್ತೆಯ ರಜೆ ಕೊಳ್ಳಬೇಕಾಗಿದೆ. ಹಳೆ ಚಂದಾದಾರರು ಬಾಕಿಯುಳ್ಳ ವರ್ಗಣಿಯನ್ನು ನಮಗೆ ತ್ವರ್ಯವೇ ಕಳುಹಿಸುವ ಅನುಗ್ರಹಮಾಡುವದಷ್ಟೇ ಅಲ್ಲ, ಹೊಸ ವರ್ಗಣಿದಾರರನ್ನು ಕೂಡಿಸಿಕೊಡುವ ಕೃಪೆಯೂ ಅವರಿಂದಲೇ ಆಗಬೇಕು. ಅದನ್ನಷ್ಟು ಅವರು ಅನುಗ್ರಹಿಸುವರೆಂದು ನಂಬಿ, ವಾಡಿಕೆಯಂತೆ ನಮ್ಮ ಹೊಸ ವರ್ಷದ ಪ್ರಥಮ ಸಂಚಿಕೆಯನ್ನು ಅಶ್ವಿನ ಶ ಪ್ರತಿಪದಾ (ತಾ. ೧೪—೧೦—೧೯೨೦) ದಿನ ಪ್ರಕಟಿಸುವೆವು.

[ಸಂ. ಕಾ. ವೃ.

ಕಾನಡಾವೃತ್ತ.

ಗುರುವಾರ ತಾರೀಖು ೩೦ ಮಾಹೆ ಸಪ್ಟಂಬರ ೧೯೨೦

ಅಸಹಕಾರಿತೆಯ ತಾತ್ವಿಕ ವಿವೇಚನೆ.

ನಮ್ಮಲ್ಲಿ ನಾಲ್ಕೂ ಕಡೆಯಲ್ಲಿ ಅಸಹಕಾರಿತೆಯ ಚರ್ಚೆಯು ನಡೆದಿದೆ. ಅಸಹಕಾರಿತೆಯ ವ್ಯಾಪ್ತಿಯು ಎಷ್ಟರಮಟ್ಟಿಗೆ ಇರತಕ್ಕದ್ದು, ಅಸಹಕಾರಿತೆಯೊಳಗೆ ಎಲ್ಲಿಯ ತನಕ ಮುಂದರಿಯುವದು ಶಕ್ಯವು ಮತ್ತು ಇಷ್ಟವು, ಎಂಬುದರ ವಿಷಯವಾಗಿ ವೃತ್ತ ಪತ್ರಗಳಲ್ಲಿ ತಾತ್ವಿಕ ವಿವೇಚನೆಯು ನಡೆದಿರುವದು. ಯಾವದೇ ವಿಷಯದ ತಾತ್ವಿಕ ಮಂಥನೆಯನ್ನು ಮಾಡುವದರೊಳಗೆ ಬಂಗಾಲದೊಳಗಿನ ವಿಖ್ಯಾತ ಮುಖಂಡರಾದ ಮತ್ತು ನಿಪುಣ ಲೇಖಕರಾದ, ಬಾಬು ಬಿಪಿನಚಂದ್ರ ಪಾಲ ಮಹಾಶಯರ ಕೈಹಿಡಿಯುವವರು ವಿರಳರು. ಬಿಪಿನ ಬಾಬುರವರು "ಲುಕರ ಓನ" ಎಂಬ ಸಾಪ್ತಾಹಿಕ ಪತ್ರಿಕೆಯ ಜಾದಾ ಸಂಚಿಕೆಯೊಳಗೆ ಅಸಹಕಾರಿತೆಯ ತಾತ್ವಿಕ ವಿವೇಚನವನ್ನು ಬಹಳೇ ಸೂಕ್ಷ್ಮರೀತಿಯಿಂದ ಮಾಡಿರುವರು. ಅದನ್ನಷ್ಟು ವಾಚಕರಿಗಾಗಿ, ಇಂದಿಗೆ ಸಾರಾಂಶತಃ ಎತ್ತಿ ಕೊಡುವೆವು. ಬಾಬು ಮಹಾಶಯರು ರಾಷ್ಟ್ರೀಯ ಪಕ್ಷದವರಿದ್ದು, ಯಾವಾಗಲೂ ಸ್ವತಂತ್ರ ಮತವಾದಿಗಳೆಂಬ ಖ್ಯಾತಿ ಹೊಂದಿದವರು. ಅದಕ್ಕಾಗಿ, ಅವರ ಮತಗಳು ತ್ರಯಸ್ಥರಿಗೆ ಸಹ, ವಿಚಾರಾರ್ಹವಾಗುತ್ತವೆ.

ನಿಃಶಸ್ತ್ರ ಪ್ರತೀಕಾರದ ಜನರ ಕೈಯೊಳಗಿದ್ದ ಒಂದೇ ಒಂದು ಸಾಧನವು, ಅಸಹಕಾರಿತೆಯಾಗಿರುವದೆಂದು ಪ್ರಸ್ತಾವನೆಯೊಳಗೆ ಪ್ರತಿಪಾದಿಸಿ, ಶ್ರೀಯುತ ಪಾಲರವರು ಹೇಳುವದೇನಂದರೆ— "ಜನರೊಳಗೂ, ಅವರ ಸರಕಾರದೊಳಗೂ, ಸಂಪೂರ್ಣ ಅಸಹಕಾರಿತೆಯು ತೀರ ಅಶಕ್ಯವಾದ ಮಾತಾಗಿರುವದು. ಇಬ್ಬರೊಳಗೂ ಪರಸ್ಪರ ಸಮ್ಮಂಧವು ಪೂರಾ ಇಲ್ಲದಂತಾಗಿ, ಒಬ್ಬರು ಮತ್ತೊಬ್ಬರಕೂಡ ಯುದ್ಧವನ್ನು ಕಾದಾಡಹತ್ತಿದಾಗ, ಸಹಕಾರಿತೆಯು ಪೂರ್ಣವಾಗಿ ಲೋಪವಾಗುವದು. ಮತ್ಯಾವ ಸ್ಥಿತಿಯಲ್ಲಿಯೂ, ಇಂಥ ಪ್ರಸಕ್ತಿಯು ಅಸಂಭಾವ್ಯವು. ಅಸಹಕಾರಿತೆಯು ಸನದಶೀರತನದ ಸೀಮೆಯು ಎಷ್ಟರಮಟ್ಟಿಗಿರುತ್ತದೆಂದು ಅರಿತುಕೊಳ್ಳಲಿಕ್ಕೆ, ಸರಕಾರವೆಂಬ ಸಂಸ್ಥೆಯ ಕಾರ್ಯಕ್ಷೇತ್ರವನ್ನು ಲಕ್ಷಿಸಬೇಕಾಗುತ್ತದೆ. ಸರಕಾರದ ಕಾರ್ಯಕ್ಷೇತ್ರದೊಳಗೆ ಪ್ರಧಾನ ಮತ್ತು ಗೌಣ ಕ್ಷೇತ್ರಗಳೆಂಬ ಎರಡು ಭೇದಗಳನ್ನು ಮಾಡಬಹುದು. ರಾಜ್ಯದೊಳಗೆ ಶಾಂತತೆಯನ್ನೂ, ವ್ಯವಸ್ಥೆಯನ್ನೂ, ಕಾಪಾಡುವದು, ಪರಚಕ್ರದಿಂದ ದೇಶವನ್ನು ರಕ್ಷಿಸುವದು, ಪ್ರಧಾನ ಕ್ಷೇತ್ರದೊಳಗಿನ ಕಾರ್ಯಗಳಾಗಿರುವವು. ಪೋಲೀಸ, ಲಷ್ಕರ ಮತ್ತು ನ್ಯಾಯಕೋರ್ಟುಗಳು, ಇವೇ ಕಾರ್ಯಗಳ ಸಾಧನಗಳಾಗಿರುವವು. ಇವುಗಳಿಂದ ಸಹಕಾರಿತೆಯನ್ನು ದೂರಪಡಿಸುವದು ಸನದಶೀರವಾಗುವದೆಂದು ಹೇಳಲಾಗದು. ಆದ ಕಾರಣ, ರಾಜ್ಯಕಾರಭಾರದೊಳಗಿನ ಈ ಖಾತೆಗಳಿಗೆ ಸಹಕಾರಿತೆಯನ್ನು ತೋರಿಸಬಾರದೆಂದು ಹೇಳಲಾಗದು. ಆದರೆ, ಈ ನಿಯಮಿತ ಕ್ಷೇತ್ರದೊಳಗೂ, ಮತ್ತೊಂದು ವಿಧದಿಂದ ಫಲಪ್ರದ ಅಸಹಕಾರಿತೆಯ ಚಳವಳಿಯನ್ನು ಪ್ರವರ್ತಿಸಲಿಕ್ಕಾಗುವದು. ಊರೊಳಗೆ ಶಾಂತತೆಯನ್ನೂ, ಸುವ್ಯವಸ್ಥೆಯನ್ನೂ, ಕಾಪಾಡುವದು, ಪೋಲೀಸರ ನ್ಯಾಯ್ಯ ಕರ್ತವ್ಯವು. ಅದನ್ನಷ್ಟೇ ಅವರು ಜರುಗಿಸುತ್ತಿರುವದು ಸರ್ವಸಮ್ಮತವಾಗುವದು. ಆದರೆ, ತಮ್ಮ ಕರ್ತವ್ಯದ ಹೊರಗೆ ಹೆಜ್ಜೆಯನ್ನಿಟ್ಟು, ದರಾಸುರಿ ಮಾಡಿ, ಜನರಿಗೆ ದಹಶತ ಹಾಕುವದೂ, ಶಾಂತ ರೀತಿಯಿಂದ ಕೆಲಸ ನಡಿಸುವ ಸಭೆಗಳನ್ನು ಮತ್ತು ಮೆರವಣಿಗೆಗಳನ್ನು ಮುರಿಯುವದೂ, ಭಾಷಣ ಸ್ವಾತಂತ್ರ್ಯವನ್ನೂ, ಚಳವಳದ ಸ್ವಾತಂತ್ರ್ಯವನ್ನೂ, ನ್ಯಾಯಕೋರ್ಟುಗಳ ಅಪ್ಪಣೆಯಿಲ್ಲದ ಹೊರತು, ಅಪಹರಿಸುವದೂ, ಪೋಲೀಸರ ಕೆಲಸವಲ್ಲ. ಪುಂಡಾವೆಯನ್ನು ಉಂಟುಮಾಡುವದೂ, ಗುನ್ಹೆಗಳನ್ನು ಎಬ್ಬಿಸುವದೂ, ಸ್ಪಷ್ಟವಾಗಿ ದಂಗೆಯಾಗುತ್ತದೆಂದು ಕಂಡುಬಂದ ಹೊರತು, ನಿಃಶಸ್ತ್ರ ಜನರ ಮೇಲೆ ಗುಂಡುಹಾರಿಸುವದೂ, ಪೋಲೀಸರ ಕರ್ತವ್ಯದೊಳಗಿನ ಕೆಲಸಗಳಾಗಿಲ್ಲ. ಇಂಥ ಕಾಯದೆಯು ಹಾಕಿಕೊಟ್ಟ ಕರ್ತವ್ಯದ ಸೀಮೆಯ ಹೊರಗೆ ಪೋಲೀಸರು ಹೆಜ್ಜೆಯನ್ನಿಟ್ಟರೆ, ಅವರನ್ನು ನಿಯಂತ್ರಿಸಲಿಕ್ಕೆ ಒಂದು ವಿಧದ ಅಸ

ಶಾಸನದ ಕಾರ್ಯವನ್ನೇ ವ್ಯವಸ್ಥಿತ ರೀತಿಯಿಂದ ಸಾಗಿಸಬಹುದು. ಕರ್ತವ್ಯಾತಿಕ್ರಮದ ಅಪರಾಧವನ್ನು ಮಾಡುವ ಪೋಲೀಸ, ಸಿಪಾಯಿಗಳಿಗೆ ಕಠಿಣತರವಾದ ಸಾಮಾಜಿಕ ಬಹಿಷ್ಕಾರದಿಂದ ಪೀಡಿಸಬಹುದು. ಸೈನ್ಯದೊಳಗೂ, ಹಿಂದುಸ್ಥಾನದ ಹೊರಗೆ ನೌಕರಿ ಮಾಡಲಿಕ್ಕೆ ಹೊಸ ರಿಕ್ರೂಟರು ಬದ್ಧೀಕೃತರಾಗದೆ, ಮತ್ತು ಸಾಮ್ರಾಜ್ಯ ಸತ್ತಾವಾದಿಗಳ ರಾಜ್ಯತೃಷ್ಣೆಯ ಆಕಾಂಕ್ಷೆಗಳನ್ನು ತೃಪ್ತಿಪಡಿಸಲಿಕ್ಕೆ ಪರದೇಶಗಳಿಗೆ ಹೋಗಲಿಕ್ಕೆ ಒಪ್ಪಿಗೆ ಕೊಡದೆ, ಅಸಹಕಾರಿತೆಯನ್ನು ಆಚರಿಸಲಿಕ್ಕಾಗುತ್ತದೆ. ಹಿಂದುಸ್ಥಾನದೊಳಗಿನ ಸಿಪಾಯಿಗಳಿಗೂ, ರಿಕ್ರೂಟರಿಗೂ, ಮೆಸೊಪೊಟೇಮಿಯಾದಲ್ಲಿ ಹೋಗಿ ಕಾದಾಡಲಿಕ್ಕೆ ಕಬೂಲಿ ಕೊಡಬೇಡಿರೆಂದು, ಇದೇ ತತ್ವದಿಂದ ಹೇಳಬಹುದು.

ಆದರೆ, ಗೌಣ ಕಾರ್ಯಕ್ಷೇತ್ರದಲ್ಲಿ ಅನೇಕ ತರದ ಅಸಹಕಾರಿತೆಯನ್ನು ತೋರಿಸಲಿಕ್ಕಾಗುವದು. ಬ್ರಿಟಿಷ ಸಾಮ್ರಾಜ್ಯಸತ್ತೆಯ ವಿಶಿಷ್ಟ ಸಾಧ್ಯವು, ಸಾಂಪತ್ತಿಕ ಶೋಷಣವು. ರಾಜ್ಯಕಾರಭಾರವನ್ನು ನಡಿಸುವದು ಮತ್ತು ಸಂಪತ್ತನ್ನು ಎಳಕೊಳ್ಳುವದು, ತಮ್ಮ ಅಡಳಿತದ ಒಂದೇ ಕರ್ತವ್ಯದ ಎರಡು ಭಾಗಗಳೆಂದು ಲಾರ್ಡ ಕರ್ಜನ ಸಾಹೇಬರೇ ಹೇಳಿರುವರು. ಆದ ಕಾರಣ, ಪರಕೀಯ ವಿತ್ತಶೋಷಕರ ಕಡೆಗೆ ನಿಜವಾದ ಮತ್ತು ಪರಿಣಾಮಕಾರಕ ಅಸಹಕಾರಿತೆಯನ್ನು ಪ್ರಯೋಗಿಸತಕ್ಕದ್ದು. ಈ ಕ್ಷೇತ್ರದಲ್ಲಿ ಪರಿಪೂರ್ಣ ಅಸಹಕಾರಿತೆಯು ಶಕ್ಯವಿದೆ. ಮತ್ತು ಅದು ಕಾಯದೆಗೂ ಸಮ್ಮತವದು. ಇಂಥ ನಮ್ಮ ವಿತ್ತರಕ್ಷಣೆಗಾಗಿ, ನಡಿಸಿದ ಅಸಹಕಾರಿತೆಯಿಂದ ಎಂಗ್ಲೊಇಂಡಿಯನ ವರ್ತಕರು ನಮ್ಮಕಡೆಗೆ ಸಂಧಾನ ನಡಿಸಿ, ತುದಿಯಲ್ಲಿ ತಕ್ಕ ತಡಜೋಡಾಗಿ ನಮ್ಮೊಳಗೆ ಒಪ್ಪಂದವಾದರೆ, ವೃಥಾ ಕಾಲವನ್ನೂ, ಶಕ್ತಿಯನ್ನೂ, ವೆಚ್ಚಮಾಡದೆ, ಸುಲಭವಾಗಿ ನಮ್ಮ ಉದ್ದಿಷ್ಟವನ್ನು ನಮಗೆ ಸಾಧಿಸಲಿಕ್ಕಾಗುವದು. ಸ್ವಾಯತ್ತ ಹಿಂದುಸ್ಥಾನಕ್ಕಾದರೂ, ಪರ ರಾಷ್ಟ್ರೀಯ ವ್ಯಾಪಾರ ವ್ಯವಹಾರಗಳನ್ನು ನಡಿಸದೆ, ಮತ್ತು ಪರಕೀಯರ ಭಂಡುವಾಲಿನ ಸಹಾಯವಿಲ್ಲದೆ, ತನ್ನ ವ್ಯವಹಾರವನ್ನು ಸಾಗಿಸಲಿಕ್ಕಾಗುವದೆಂದು ಹೇಳಕೂಡದು. ನಮ್ಮ ವ್ಯಾಪಾರದ ಮತ್ತು ಭೂಮಿಗಳ ಉತ್ಕರ್ಷಕ್ಕಾಗಿ, ನಮಗೆ ಪರಕೀಯರ ಆರ್ಥಿಕ ಸಹಾಯವು ಅವಶ್ಯಕವಿದ್ದಷ್ಟರಮಟ್ಟಿಗೆ ಬೇಕು. ಇಂಥ ಸಾಂಪತ್ತಿಕ ವ್ಯವಹಾರದೊಳಗಿನ ಪರಸ್ಪರರ ಹಿತಗಳನ್ನು ಕಾಪಾಡಲಿಕ್ಕೆ ಹಿಂದೀ ಮುತ್ಸದ್ದಿಗಳು ಅರ್ಹರೇ ಇರುವರು. ವರ್ತಮಾನ ಸ್ಥಿತಿಯಲ್ಲಿ ಬ್ರಿಟಿಷ ಧನಿಕರು ಮತ್ತು ವರ್ತಕರು ನಮ್ಮ ಸಾಂಪತ್ತಿಕ ಮತ್ತು ರಾಜಕೀಯ ಜೀವನಕ್ರಮದಮೇಲೆ ಇಷ್ಟು ಪರಿಪೂರ್ಣವಾಗಿ ಸತ್ತೆಯನ್ನು ನಡಿಸುತ್ತಾರೆ—

ಆದರಿಂದ ನಮ್ಮ ಮಹತ್ವಾದ ರಾಷ್ಟ್ರೀಯ ಹಿತಗಳಿಗೆ ಅದು ಬಹಳೇ ಬಾಧಕವಾಗಿದೆ. ಅನಾದರಣ, ಬಹಿಷ್ಕಾರದಂಥ ಸಾಧನದಿಂದ ಇಂಥ ಆರ್ಥಿಕ ಅಸಹಕಾರಿತೆಯನ್ನು ನಾವು ಆಚರಿಸಿದರೆ, ವಿಲಾಯತಿಯಲ್ಲಿಯೂ, ಹಿಂದುಸ್ಥಾನದಲ್ಲಿಯೂ, ಸರಕಾರದಮೇಲೆ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಅಮಲು ನಡಿಸುವ ಬ್ರಿಟಿಷ ಧನಿಕರು ನಮ್ಮ ಕೂಡ ಸಂಧಿಯ ಪ್ರಸ್ತಾಪ ನಡಿಸಿ, ಸ್ವರಾಜ್ಯ ಪ್ರಾಪ್ತಿಯ ಕಾರ್ಯದಲ್ಲಿ ಸಹ, ಅವರೇ ನಮ್ಮ ಸಹಾಯಕರ್ತ್ಯಾಕಾಗಬಾರದು?"

"ಸ್ಥಿರವಾದ ಶಾಂತತೆಯನ್ನು ಸ್ಥಾಪಿಸಲಿಕ್ಕಂದು ಯುದ್ಧವನ್ನು ಕಾದಾಡಬೇಕಾಗಿರುತ್ತದೆ. ಯುದ್ಧಕ್ಕೆಂದು ಯುದ್ಧವನ್ನು ಯಾರೂ ನಡಿಸುವದಿಲ್ಲ. ಅಸಹಕಾರಿತೆಯು ಒಂದು ವಿಧದ ನೈತಿಕ ಮತ್ತು ಸನದಶೀರ ಕಾದಾಟವು, ಅದೇನು ಸ್ವತಂತ್ರ ಸಾಧ್ಯವಲ್ಲ. ಎರಡು ಪಕ್ಷಗಳೊಳಗೆ ಈಗಿರುವದಕ್ಕಿಂತ ಫಲಪ್ರದ, ಪ್ರೀತಿಕರ ಮತ್ತು ಶಾಶ್ವತಿಕ ಸಹಕಾರಿತೆಯನ್ನುಂಟು ಮಾಡಿ, ಉಭಯತರ ಹಿತವನ್ನು ಸಾಧಿಸುವ ಸಾಧನವಿದು. ಯಾರಕೂಡ ತಾತ್ಕಾಲಿಕವಾಗಿ ನಾವು ಸಹಕಾರಿತೆಯನ್ನು ಆಚರಿಸುವದಿಲ್ಲವೋ, ಅವರೊಳಗೂ, ನಮ್ಮೊಳಗೂ, ಹೆಚ್ಚು ಸುಖಕರ, ಶ್ರೇಷ್ಟ ಪ್ರಮಾಣಿಕ, ಮತ್ತು ಶ್ರೇಷ್ಟ ಅಭಿಮಾನಾಸ್ಪದವಾದ ಸಹಕಾರಿತೆಯನ್ನುಂಟುಮಾಡುವ ಸಿದ್ಧತೆಗಂದು, ನಾವು ಅಸಹಕಾರಿತೆಯನ್ನೇ ಅಂಗೀಕರಿಸಬೇಕಾಗಿದೆ. ಈ ಉದ್ದಿಷ್ಟದ ಯಥಾರ್ಥ ಕಲ್ಪನೆಯಿಲ್ಲದೆ, ಅಸಹಕಾರಿತೆಯನ್ನು ಆಚರಿಸುವವರಾಗಲಿ ವಿರೋಧಿಸುವವರಾಗಲಿ ಈ ಚಲುವಳಿಯ ಮಿತ್ರಗಳಾಗದೆ, ಶತ್ರುಗಳಾಗಿರುವರು."

ಅಸಹಕಾರಿತೆಯ ತಾತ್ವಿಕ ವಿವೇಚನೆಯನ್ನು ಈ ರೀತಿ ವಿಹಂಗಮ ದೃಷ್ಟಿಯಿಂದ ಮಾಡಿ, ಶ್ರೀಯುತ ಪಾಲ ಮಹಾಶಯರು, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಮಾದರಿಯಂತೆ, ನಮ್ಮ ದೇಶದ ಪ್ರಾಂತಗಳು ಸಂಯುಕ್ತ ಸ್ವರಾಜ್ಯವನ್ನು ವರ್ಣಿಸುವ ಕ್ಯಾದೆಯನ್ನು ಪಾರ್ಲಿಮೆಂಟಿನಿಂದ ಪಡೆಯುವ ತನಕ, ಎಲ್ಲ ಉದ್ದಿಷ್ಟಗಳನ್ನು ಸಾಧಿಸುವಂತೆ, ಅಸಹಕಾರಿತೆಯನ್ನು ಆಚರಿಸಬೇಕೆಂದು ತುದಿಯಲ್ಲಿ ಸೂಚಿಸಿರುವರು.

ಸ್ಫುಟ ಸೂಚನೆಗಳು.

೧. ಅಸಹಕಾರಿತೆಯ ವಿಷಯವಾಗಿ ನಮ್ಮ ಇಡೀ ಜಿಲ್ಲೆಯ ಲೋಕಮತವನ್ನು ಸಂಕಲಿತ ಮಾಡಿ, ಪ್ರಕಟಿಸುವದು ಅವಶ್ಯಕವಾಗಿದೆಂದು, ಜಿಲ್ಹಾ ಸಭೆಯ ಖಾಸಾ ಅಧಿವೇಶನದಿಂದ, ಇಲ್ಲವೆ, ಇತರ ಸಾಧನದಿಂದ, ಅದನ್ನು ಬೇಗನೇ ಜಾಹೀರಮಾಡಿಸತಕ್ಕದ್ದೆಂದು, ಹಳಿಯಾಳ ತಾಲೂಕಾ ಸಭೆಯ ಅಧ್ಯಕ್ಷ ಶ್ರೀ|| ಶ್ಯಾಮರಾವ ಭದ್ರಿರವರು ಸೂಚಿಸಿರುವದೆಂದು ನಾವು ಕೇಳುತ್ತೇವೆ. ಶ್ರೀ|| ಭದ್ರಿಗಳವರ ಸೂಚನೆಯು ಬಹಳೇ ಸಮಯೋಚಿತವಾಗಿದೆ. ಬಹಳೇ ಜಿಲ್ಹಾ ಕಮಿಟಿಗಳೂ, ಪ್ರಾಂತಿಕ ಕಮಿಟಿಗಳೂ, ಕಾಂಗ್ರೆಸಿನ ಅಪ್ಪಣೆಯನ್ನು ಮಾನ್ಯಮಾಡಿ, ತಮ್ಮ ನಿರ್ಣಯಗಳನ್ನು ಪ್ರಕಟಿಸಿರುವವು. ಇಂಥ ಸಾರ್ವರಾಷ್ಟ್ರೀಯ ಕಾರ್ಯದಲ್ಲಿ, ಜಿಲ್ಹಾ ಕಮಿಟಿಗಳು ಮಾರ್ಗದರ್ಶಕರಾಗಬೇಕಂಬ ಬಗ್ಗೆ ಮತಭೇದವಿರದು. ಅಸಹಕಾರಿತೆಯ ನಿರ್ಣಯಕ್ಕಾಗಿ ಜಿಲ್ಹಾ ಪರಿಷತ್ತಿನ ಖಾಸಾ ಅಧಿವೇಶನವನ್ನು ಕೂಡಿಸುವದು ನಮ್ಮ ಜಿಲ್ಲೆಯಲ್ಲಿಂತೂ ಸಾಧ್ಯವಾದ ಮಾತಲ್ಲೆಂದು ನಮಗೆ ಕಾಣುತ್ತದೆ. ಜಿಲ್ಹಾ ಸಭೆಯು ಜಿಲ್ಹಾ ಕಮಿಟಿಯನ್ನು ಆರಿಸಿಕೊಟ್ಟಿರುವಾಗ, ಅವರೇ ತಮ್ಮ ಸ್ಪೇಶಲ ಸಭೆಯನ್ನು ಕರೆದು, ಈ ವಿಷಯದ ಚರ್ಚೆ ನಡಿಸಿ, ತಮ್ಮ ನಿರ್ಣಯವನ್ನು ವ್ಯಕ್ತಪಡಿಸುವದು ಸಾಧ್ಯತರ ಉಪಾಯವೆಂದು ನಮ್ಮ ಮತವು. ಸಭೆಗೆ ಹಾಜರಿರಲಿಕ್ಕೆ ಅಶಕ್ಯರಾದ ತಾಲೂಕಾ ಪ್ರತಿನಿಧಿಗಳು, ತಮ್ಮ ಮತವನ್ನು ಲೇಖಿ ತಿಳಿಸಿದರೂ, ಮತಗಳ ಎಣಿಕೆಯೊಳಗೆ ಅವರ ಮತವನ್ನು ಎಣಿಸಲಿಕ್ಕಾಗುವದು. ಇಂಥ ಅನೇಕ ಕಮಿಟಿಗಳು ಇದೇ ಮಾರ್ಗವನ್ನು ಅವಲಂಬಿಸಿರುವವು. ಈ ವಿಷಯದ ನಿರ್ಣಯವನ್ನು ಪ್ರಕಟಿಸುವದು ಇನ್ನು ಅನೇಕ ದೃಷ್ಟಿಯಿಂದ ಬಹು ವಿಚಾರಿಕ ಸಂಗತಿಯಾಗಿದೆಂದು ನಾವು ಹೇಳುವೆವು. ಕಾಂಗ್ರೆಸಿನ ಅಪ್ಪಣೆಯು ಎಲ್ಲ ಜಿಲ್ಹಾ ಕಮಿಟಿಗಳಿಗೆ ಮಾನ್ಯವಿರಬೇಕು. ಐಕ್ಯದ ದೃಷ್ಟಿಯಿಂದ ಮತ್ತು ಲೋಕಶಾಹಿಯ ದೃಷ್ಟಿಯಿಂದ ರಾಷ್ಟ್ರಕ್ಕೆ ಬಹುಸಮ್ಮತವಾದ ನಿರ್ಣಯವು ಸರ್ವರಿಗೂ ಮಾನ್ಯವಿರಲೇಬೇಕು. ಭಿನ್ನ ಮತದವರು ಸಹ ಬಹುಮತವನ್ನು ಮನ್ನಿಸದಿದ್ದರೆ, ರಾಷ್ಟ್ರಕಾರ್ಯವು ನಡೆಯುವ ಬಗೆ ಹೇಗೆ? ಒಟ್ಟಿಗೆ ರಾಷ್ಟ್ರೀಯ ಸಭೆಯ ಅಸಹಕಾರಿತೆಯ ನಿರ್ಣಯವು ನಮ್ಮ ಜಿಲ್ಹಾ ಸಭೆಯ ಪ್ರತಿನಿಧಿಯಾದ, ಜಿಲ್ಹಾ ಕಮಿಟಿಗೆ ಮಾನ್ಯವಾಗಲೇಬೇಕು. ಜಿಲ್ಲೆಯೊಳಗಿನ ಲೋಕಮತವು ಅಸಹಕಾರಿತೆಗೆ ಅನುಕೂಲವಾಗಿಯೇ ಇರುವದೆಂದು ನಾವು ಹೇಳುವೆವು. ನಮ್ಮದೊಂದು ಚಿಕ್ಕ ವಿಚಾರವನ್ನು ಕಾನಡಾ ಜಿಲ್ಲೆಯಲ್ಲಿ ಕಟ್ಟಿಡಲಿಕ್ಕೆ ಇನ್ನು ಯಾರಿಂದಾಗದು, ಲೋಕಮತದ ಶಕ್ತಿಯು ಕಾನಡಾ ಜಿಲ್ಲೆಯಲ್ಲಿ ಸಹ, ಸಾಕಷ್ಟು ಬೆಳೆದದೆ. ಮ. ಗಾಂಧಿಯವರಿಗೆ ಜಗ್ಗಿ ಎಳೆದು, ತಮ್ಮ ಮತದ ದೀಕ್ಷೆಯನ್ನು ಕೊಟ್ಟು, ರಾಷ್ಟ್ರೀಯ ಧರ್ಮವನ್ನು ಅವರಿಂದ ಅದು ಆಚರಿಸಿಕೊಳ್ಳುವದು. ಆದಕಾರಣ, ಕಾಂಗ್ರೆಸಿನ ನಿರ್ಣಯವನ್ನು ನಾವು ಶಿರಸಾ ಮಾನ್ಯಮಾಡುತ್ತೇವೆಂದು ಹೇಳುವದು ವಿಚಾರಿಕವು. ಕರ್ತವ್ಯವೆಂದು ಮಾತ್ರ, ವಿಧೇಯತನದಿಂದ ನಾವು ಅದನ್ನು ಮಾಡಲೇಬೇಕು.

೨. ಕೋಟಿಗಟ್ಲೆ ರೂಪಾಯಿಗಳನ್ನೂ, ಲಕ್ಷಗಟ್ಲೆ ಮನುಷ್ಯರನ್ನೂ ರಣದೇವತೆಗೆ ಆಹುತಿಕೊಟ್ಟು, ಮಹಾಯುದ್ಧವನ್ನು ಕಾದಾಡುವ ಉದ್ದೇಶವೇನಿತ್ತು? ಜಗತ್ತಿಗೆ ಸುಖವಾಗಬೇಕು; ಜನರಿಗೆ ತಮ್ಮ ಸಂಸಾರ ಯಾತ್ರೆಯನ್ನು ಸುಸೂತ್ರವಾಗಿ ಸುಖದಿಂದ ನಡಿಸಲಿಕ್ಕಾಗಬೇಕು; ಒಟ್ಟಿಗೆ ಮನುಷ್ಯನ ಜೀವಿತವು ಇಹಲೋಕದಲ್ಲಿ ಶಾಂತತೆಯನ್ನು, ಸುಖವನ್ನೂ, ಪಡಿಯಬೇಕು. ಈ ಧ್ಯೇಯದ ಪ್ರಾಪ್ತಿಯು ಎಷ್ಟರಮಟ್ಟಿಗಾಗಿದೆಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುವದು ಕಠಿಣವಾಗಿದೆ. ಶಾಂತತೆಯ ಮಾತು ಒತ್ತಟ್ಟಿಗಿರಲಿ. ಜನತೆಗೆ ಜೀವನ ಕಲಹದಲ್ಲಿ ಸುಖವೆಷ್ಟಾಗಹತ್ತಿದೆಂದು ನೋಡಿದರೆ, ಮನಸ್ಸಿಗೆ ನಿರಾಶೆಯಾಗುತ್ತದೆ. ಮಹಾಯುದ್ಧದಿಂದ ನಿಶ್ಚಿತವಾಗಿ ಲಾಭವಾಗುವದೆಂದು ಹೇಳಿದ, ರಾಜಕೀಯ ಸ್ವಾತಂತ್ರ್ಯದ ದೊಡ್ಡ ದೊಡ್ಡ ಲಾಭಗಳು ಪ್ರಸೂತಿ ವೈರಾಗ್ಯದಲ್ಲಿರುವಾಗ, ದೊಡ್ಡದೊಂದು ಹಾನಿಯು ಮಾತ್ರ ಎಂದೋ ಜನ್ಮತಾಳಿ, ಜಗತ್ತಿಗೆಲ್ಲ ಈಗ ಒಂದೆರಡು ವರುಷ ಪೀಡಿಸಹತ್ತಿದೆ ಯುದ್ಧದಿಂದ ಜನಿಸಿದ ಮಹರ್ಘತೆಯು, ಹಿಂದುಸ್ಥಾನದಂಥ ದೇಶದಲ್ಲಿ ಪ್ರಜೆಗಳಿಗೆ ತ್ರಾಹಿತ್ರಾಹಿ ಮಾಡುತ್ತದೆಂದು ಹೇಳಿದರೆ, ಇದೊಂದು "ತೋಳಬಂತಲೇ ತೋಳಬಂತೆ"ಂದು ಹೇಳುವ ಬೊಬ್ಬಾಟವೆಂದು ತಿರಸ್ಕರಿಸಲಿಕ್ಕಾಗುತ್ತಿತ್ತು. ಆದರೆ, ಸರಕಾರದ ಇಮಾನಿ ನೌಕರರಿಗೆ-ಸಿಪ್ಪಾಯಿಯಿಂದ ಸಣ್ಣ ಕಾರಕೂನರತನಕ, ಎಲ್ಲರೂ ಮಹರ್ಘತೆಯ ತೋಳವನ್ನು ಕಣ್ಣಾರೆ ನೋಡಿ, ತಮ್ಮ ಆತ್ಮರಕ್ಷಣೆಗಾಗಿ ಬಡತಿಯ ಪರವಾನೆಯನ್ನು ಬೇಡುತ್ತಿರುವರು. ಮಹರ್ಘತೆಯ ತೋಳದ ಬಾಯಿಯಲ್ಲಿ ಬೀಳದೆ, ಬದುಕುಳಿಯಬೇಕಾದರೆ, ಇದೇ ಪರವಾನೆಗಳಿಂದ ಅವರ ರಕ್ಷಣೆಯಾಗಬೇಕು, ಎಂದು ಸರಕಾರವು ಮನಗಂಡಿದೆ. ಆದರೆ, ದೊಡ್ಡ ದೊಡ್ಡ ಪಗಾರದ ನೌಕರರಿಗೆ, ಪರವಾನೆಗಳನ್ನು ಹೆಚ್ಚು ಪ್ರಮಾಣದಿಂದಕೊಟ್ಟು ಹೋದಮೂಲಕ, ಕೆಳತರಗತಿಯ ನೌಕರರಿಗೆ "ದೇತಾಂವ್ ದೀಲಾತಾಂವ್" ಎಂದು ಹೇಳಿದಂತೆ, ಹೆಚ್ಚು ಕಡಿಮೆ ಬಡತಿಯ ಪರವಾನೆಗಳನ್ನು ಕೊಡಮಾಡಿ, ಅವರ ಸಮಜೂತಿ ಮಾಡುವ ಪ್ರಸಂಗವು ಸರಕಾರದಮೇಲೆ ಬಂದಿದೆ. ಹೀಗಾಗಿ ತೋಳವು ಶಾಲಾಮಾಸ್ತರ, ಕಾರಕೂನ, ಶಾನಭೋಗ, ಪಟೀಲರಂಥ ಬಡಪ್ರಾಣಿಗಳನ್ನು, ಅಸ್ತೆ ಅಸ್ತೆ ನುಂಗಿಬಿಡುವದೆಂದು ಈ ಬಡ ನೌಕರರಿಗೆ ಅಂಜಿಕೆಯಾಗಿದೆ. ಈ ಅಂಜಿಕೆಯು ನಿರಾಧಾರವಲ್ಲೆಂದು ನಮ್ಮದೂ ಮತವು. ಬೇಡಿದಷ್ಟರ ಬಡತಿಯ ಪರವಾನೆಗಳನ್ನು ಕೊಟ್ಟುಬಿಟ್ಟರೆ, ಸರಕಾರಿ ತಿಜೋರಿಯು ಬರಿದಾಗುವದೆಂದು ಸರಕಾರಕ್ಕೆ ಅಂಜಿಕೆಯಿದ್ದರೆ, ವರಿಷ್ಟ ನೌಕರರು ತಮ್ಮ ದೊಡ್ಡ ದೊಡ್ಡ ರಕಮಿನ ಬಡತಿಯ ಹಣವನ್ನು, ತಮ್ಮ ಸ್ವಾಮಿನಿಷ್ಟ ನೌಕರರ ರಕ್ಷಣೆಗೆಂದು ಅರ್ಪಿಸಿದರೆ, ಇದೇ ಲೆಕ್ಕವು ಅಂಕಗಣಿತದಿಂದಲೇ ಸುಲಭವಾಗಿ ಬಿಡಿಸಲಿಕ್ಕಾಗುವದು.

೩. ತಮ್ಮ ತಮ್ಮ ಹಿತರಕ್ಷಣೆಗಾಗಿ, ಸಣ್ಣ ದೊಡ್ಡ ಸರಕಾರಿ ನೌಕರರು ಸಂಘಗಳನ್ನು ಏರ್ಪಡಿಸುತ್ತಿರುವದು ಅಭಿನಂದನೀಯವು. ಶಿರಸಿಯೊಳಗಿನ ರೆವಿನ್ಯೂ ಕಾರಕೂನರು, ತಮ್ಮ ಹೆಡ ಕಾರಕೂನರಾದ ಮಿ|| ಎಮ್. ಜಿ. ಬಸ್ರೂರರವರ ಅಧ್ಯಕ್ಷತೆಯೊಳಗೆ ಸಭೆಗೂಡಿಸಿ, ಪಗಾರು, ಬಡತಿ, ರಜೆ ಮುಂತಾದ ತಮ್ಮ ನೌಕರಿಗೆ ಸಂಬಂಧಿಸಿದ ವಿಷಯಗಳ ಮೇಲೆ ಚರ್ಚೆನಡಿಸಿ, ಪಾಸು ಮಾಡಿದ ಠರಾವುಗಳನ್ನು ನಮ್ಮೆಡೆಗೆ ಕಳುಹಿಸಿರುವರು. ಅವುಗಳನ್ನು ನಾವು ಸಹಾನುಭೂತಿಪೂರ್ವಕ ಸ್ವೀಕರಿಸುವೆವು. ಈ ಸಭೆಯ ಠರಾವುಗಳನ್ನು ಮತ್ತೊಂದೆಸೆಗೆ ಪ್ರಕಟಿಸಿರುವೆವು. ಪ್ರಾರಂಭದ ಪಗಾರವು ರೂ. ೫೦-೬೦ ಇರಬೇಕು, ಎರಡು ವರ್ಷಕ್ಕೊಮ್ಮೆ ೧೦ ರೂ. ಬಡತಿ; ಕೊನೆ ಪಗಾರು ೧೦೦ ರೂಪಾಯಿಯಾಗಿರಬೇಕು; ಮತ್ತು ಇದೇ ಪ್ರಮಾಣವನ್ನು ೧೯೨೦ ನೇ ಎಪ್ರಿಲದಿಂದ ಚಾಲುಮಾಡಬೇಕು; ವಿಶಿಷ್ಟ ಆಫೀಸೊಳಗೆ ಬಂದವರಿಗೆ, ಅಂದರೆ, ಹೆಡ ಕಾರಕೂನರಿಗೆ, ೧೨೫ ರಿಂದ ೨೦೦ ರೂ. ತನಕ, ಬಡತಿ ದೊರೆಯ

ಬೇಕು, ಮುಂಜಿನಂತೆ ಕಾಯಿದ ಬೋರ್ಡಿನ ಪರೀಕ್ಷೆಗ ಳನ್ನು ಪಾಲು ಮಾಡಬೇಕು, ಮೇಲಿನ ಗ್ರೇಡಿಗೆ ಬಡತಿಯಾದಾಗ, ಮತ್ತು ವರ್ಗಾವರ್ಗಿ ಯಾದಾಗ, ಸ್ಥಾನಿಕ ವೃತ್ತಪತ್ರಗಳಲ್ಲಿ ಅವುಗಳನ್ನು ಪ್ರಕಟಿಸ ಬೇಕು, ಈಗಿನ ನಿಬಂಧಿಯನ್ನು ಸಹ ಕಡಿಮೆ ಮಾಡ ಬಾರದು, ೫೦ ವರ್ಷ ಪ್ರಾಯದೊಳಗೆ ೨೫ ವರ್ಷ ಗಳ ಅವಧಿಯ ನೌಕರಿಯಾದರೆ, ಕೂಡಲೆ ಪವಶನು ದೊರೆಯಬೇಕ ಹಕ್ಕಿನ ರಜೆಯು ಲಭ್ಯವಾದಷ್ಟು ಎಷ್ಟೊ ತಿಂಗಳಿದ್ದರೂ ದೊರೆಯಬೇಕು ಕಟ್ಟ ಕಡೆ ಯ ಅಭಾವನ್ನು ನೀಗಬೇಕು ತಮ್ಮ ಕೊರತೆಗಳನ್ನು ಅಧಿಕಾರಿಗಳ ಮುಂದಿಡಲಿಕ್ಕೆ [illegible] ಸಿದ ಇತರ ಎಲ್ಲ ಕರ್ತವ್ಯವನ್ನು ಸಲಿಸಲಿಕ್ಕೆ [illegible] ನ್ಯಾಯಿಕ ಅಧಿಕಾರಿಯನ್ನು ಸ್ಥಾಪಿಸಬೇಕ [illegible] ಬಹಳ ಪ್ರಾಮುಖ್ಯವಾದ ಠರಾವುಗಳನ್ನು [illegible] ಕ ಕಾರ್ಯದ ಸಭೆಯು ಪಾಸುಮಾಡಿ, ಪರಿಷತ್ ಕಡೆಗೂ, ಬೇರೆ ಸಭೆಗಳ ಕಡೆಗೂ ಅವುಗಳನ್ನು ಕಳುಹಿಸಿತು [illegible] ಅವರ [illegible] ಸಮಾನ ಮಾಡಿ ಪರಸ್ಪರ ಚರ್ಚಿಸಿ, [illegible] ನವರೂ ಅವುಗಳನ್ನು ಪುಷ್ಟೀಕರಿಸಿ ತಮ್ಮ ಕರ್ತವ್ಯ ನಿಷ್ಠ ನೌಕರರನ್ನು [illegible] ಕಾಣಿರುವೆವು

ಕಾಂಗ್ರೆಸಿನ ಅಸಹಕಾರಿತೆಯ [illegible] ಮಾನ್ಯಮಾಡಿ ಅನೇಕ ರಾಷ್ಟ್ರೀಯ [illegible] ಯನ್ನು ಸ್ವೀಕರಿಸಿದ್ದಾರೆ [illegible] ಅಧಿಕಾರಲಿಕ್ಕೆ [illegible] ಪ್ಯವಸ್ಥೆ [illegible] ಅಭಿಮಾನ [illegible] ಸಂಪೂರ್ಣ [illegible]

[illegible]

ಉಮೇದ್ವಾರ [illegible] ರಿತ್ತಿ, ಸಮಾಜದ [illegible] ಉಮೇದ್ವಾರಿಯನ್ನು [illegible] ಇನ್ನೆ [illegible] ಶಕ್ತಿಯಾಗಿ, ನಾವು [illegible] ವೆವು ಸರಕಾರಿ [illegible] ನಾಲಿನ ನಮ್ಮ ಅವುಗಳನ್ನು [illegible] ಶಿಕ್ಷಣ [illegible] ಅದರೆ, ಕಾಂಗ್ರೆಸಿನ [illegible] ಸ್ಥಯ ಅನುಶಾಸನವನ್ನು ಸ್ವೀಕರಿಸ [illegible] ಅವರ ಕಾನೂನುಗಳನ್ನು [illegible] ವೆ ಇಂದು ನಿರ್ಮಲ ಮನಸ್ಸಿನಿಂದ [illegible] ಸೆಯ ಆಚರಣ ಇಲ್ಲದೆ ಯಾರಿಗೆ [illegible] ಗುವದು? ನಮ್ಮ ಕಾಂಗ್ರೆಸಿನ ಹುಕುಮನ್ನು ಪಾಲಿಕ್ಕೆ ಯಿಂದಲ್ಲ, ಬಲಾತ್ಕಾರದಿಂದಲ್ಲ, ಕೇವಲ ಸ್ವಸಂತೋಷ ದಿಂದ ಶಿರಸಾ ಮಾನ್ಯಮಾಡುವೆವೆಂದರೆ, ಅದರಿಂದ ನಮ್ಮ ರಾಷ್ಟ್ರದ ನೈತಿಕ ಶಕ್ತಿಯು ಎಷ್ಟು ಎಂದೆಂದು ಉದಾಹರಣೆಯಂತೆ ನಾವು [illegible] ಲ್ಲವೇ? ಇದರಿಂದ ನಮ್ಮ ಕಾಂಗ್ರೆಸ ಸಭೆಯ ಶಕ್ತಿ ಯೂ, ಬೆಲೆಯೂ ಯಾರಿಗೂ ತಿರಸ್ಕರಿಸಲಿಕ್ಕಾಗ ದಷ್ಟು ವೃದ್ಧಿ ಹೊಂದುವದೆಂದು ಎಲ್ಲರೂ ತಿಳಿದಿರಲಿ ಹಿಂದೆ ಮುಂದೆ ಯಾದಾವರೂ, ನಮ್ಮ ಉದ್ದಿಷ್ಟವು ಫಲಿ ಸದೆ ಹೋದರೆ, ಕೋನುರಳವು ಶೀಘ್ರವಾಗಿ ನಮಗೆ ಲಭಿಸಬೇಕಾದರೆ, ಕಾಂಗ್ರೆಸಿನ ಸಂಘಶಕ್ತಿಯಿಂದಲೇ ನಮಗ ಅಪರಿಮಿತ ಸಹಾಯವು ದೊರಕುವದು ಇನ್ನು ತಾತ್ಕಾಲಿಕ ಪ್ರಸಂಗದ ಹಾನಿ ಲಾಭಗಳನ್ನೆ ಣಿಸಿ ಕಾಂಗ್ರೆಸಿನ ಅಪ್ಪಣೆಯನ್ನು ಅವಮಾನ್ಯ ಮಾಡು ವದು, ಅಥವಾ ತಿರಸ್ಕರಿಸುವದು, ದೇಶದ ದೊಡ್ಡ ಅಪರಾಧವಾದೀತು, ಪಾಪವಾಗುವದೆಂದು ನಮ ಗೆ ಹೇಳಬೇಕಾಗಿದೆ ಇಂಥ ವಿಶೇಷ ದೃಷ್ಟಿಯಿಂದ ವಿಚಾರ ಮಾಡಿ, ಅಸಹಕಾರಿತೆಯನ್ನು ಆಚರಿಸಿ ನಮ್ಮ ಮುಕ್ತಿ ಪಡೆಯಲ್ಲಿ, ನಾವು ಸಂಪೂರ್ಣಕ ಅವ ಲಂಬಿಸುವೆವು

ಕಾನಡಾ ಜಿಲ್ಲೆಯೊಳಗೆ ಅಸಹಕಾರಿತೆ.

[illegible] ಜೋಶಿಯವರು [illegible] ತರ್ಫಿನ ಉಮೇದ್ವಾರಿಯನ್ನು ಹಿಂದೆ ತಕ್ಕೊಂ ಡರು

[illegible] ಜಿಲ್ಲೆಯ ಕೌನ್ಸಿಲ ಉಮೇ ದ್ವಾರಿಯನ್ನು ಹಿಂದ ತಕ್ಕೊಂಡರು

[illegible] ರಾವ ರಿತ್ತಿ ವಕೀಲ [illegible] ಉ ಮೇದ್ವಾರಿಯನ್ನು ಹಿಂದೆ ತಕ್ಕೊಂಡರು

[illegible] ಸಾಹೇಬ, [illegible] ಅಂಕೋಲಾ [illegible] ತರ್ಫಿನ ಉಮೇದ್ವಾರಿಯನ್ನು ಹಿಂದೆ ತಕ್ಕೊಂಡರು

ಅಲ್ಲಿ [illegible] ಸಾಹೇಬ [illegible] ಮತ್ತು [illegible] ಸರ ಕಾರ [illegible] ರಾಜಿ ನಾಮೆ ಕೊಟ್ಟರ

ಇನ್ನೊಂದೆಡೆಯಲ್ಲಿ [illegible] ಕಾನಡಾಜಿಲ್ಲೆಯ [illegible] ವಾ [illegible] ನಕಿಂದ ಹೊರಡಿಸಿದ ಜ್ಯಾಹಿರ ಪತ್ರಿ [illegible] ಉತ್ತರವಾಗಿ ಕೊಟ್ಟ [illegible] ಪತ್ರವು ಪ್ರಕ [illegible] ಅಪತ್ರವನ್ನೋದಿದಬಳಿಕ ವ್ಯಕ್ತವಾಗು [illegible] ಕೌನ್ಸಿಲ ಚುನಾವಣೆ ಸಂ [illegible] ಅಲ್ಲಿ ನೆರವೇರಿಸುವ ಕರ್ತವ್ಯದ ಸಂಬಂ [illegible] ಅದರಂತೆ ಅವರು ಮಾ [illegible] ಆ ಹುದ್ದೆಯ ಅ [illegible] ವಾಗುತ್ತದೆಂದು [illegible] ದೇ [illegible] ಕಾಂಗ್ರೆಸ್ಸಿನಲ್ಲಿ ಪ್ರ [illegible] "ಅಜ್ಞಾಪಕ" ಅಸ [illegible] ವಿರುದ್ಧ [illegible] ಲ ಚುನಾವಣೆ [illegible] ಅರಿಯುವದೂ [illegible] ರಾಜನೀತಿ [illegible] ಸ್ವದೇಶಭಕ್ತಿ [illegible] ಆಗುವ ದೆಂಬು [illegible] ಹೇಳದೆ ಬಾರದು ಸಂಭವಿಸಿದ ಅತ್ಯಾಚಾರ ಮತ್ತು [illegible] ಸಂಬಂ ಧ ನ್ಯಾಯ ದೊರಕಿಸಿದ ಹೊರತು, [illegible]

ಸಂಘಟನೆಗೆ ಕಾರಣೀಭೂತವಾದ ಸರಕಾರದ ಸಂಗಡ ಸಹಕಾರಿತೆ ನಡೆಸುವದು ಒಂದು ಗುನ್ಹೆಯೆಂತಲೇ ತಿಳಿಯಬೇಕು ನಮ್ಮ ಜಿಲ್ಲೆಯ ಸರ್ವಸಾಧಾರಣ ಮ ತದಾರರ, ವಿಶೇಷವಾಗಿ, ಬಹುತರ ತರುಣ ಮಂಡ ಳಿಯ, ಅಭಿಪ್ರಾಯವು ಸಹ ಇದೇ ಆಗಿರುವದೆಂ ಬುದು, ಈ ಸಂಚಿಕೆಯ ೭ ನೇ ಪಾನಿನಲ್ಲಿ ಕೊಟ್ಟ ಈ ವಿಷಯದ ಒಬ್ಬರ ಪತ್ರವು ಸಾಕ್ಷಿಯಾಗಿರುತ್ತದೆ. ಆದ್ದರಿಂದ, ಈ ಚುನಾವಣಿ ರಣಾಂಗಣದಿಂದ ಶ್ರೀ ರಿತ್ತಿಯವರು ತಮ್ಮ ಮೈ ತೆಗೆದ ಕೊಂಡದ್ದರಿಂದಲೂ, ಈಗ ಅವರೊಳಗಿನ ಸೊಗಸನ್ನು ಅರಿಹೋಗಿರುವದರಿಂ ದಲೂ ಶ್ರೀ ಪಾಪುರವರು, ತಾಂವು ಇಚ್ಛಿಸಿದ ಕೌನ್ಸಿಲ ಉಮೇದವಾರಿಯನ್ನು ಹಿಂತಿರುಗಿ ಕೊಳ್ಳಬೇಕೆಂದು ಸವಿನಯ ಸೂಚಿಸುದಿರೆವು ಜಿಲ್ಲೆಯ ಉತ್ಕರ್ಷ, ಸುಧಾ ರಣೆ ಮಾಡಬೇಕೆಂಬ ಇಚ್ಛೆ ಇದ್ದವರಿಗೆ, ಸಾಕಷ್ಟು ಸಾ ಧನಗಳಿವೆ, ಎಂದು ಶ್ರೀ ಪಾಪುರವರು ಕೇಳುವಂತೆ, ಈಗೀಗ ನಮ್ಮ ಜಿಲ್ಲೆಯ ಜನತೆಯಲ್ಲಿ ರಾಷ್ಟ್ರೀಯತ್ವದ ಚೇತನೆಯು ಪಸರಿಸಹತ್ತಿರುವದರಿಂದ, ಆ ಪ್ರವಾಹಕ್ಕ ನುರೂಪವಾದ ಮತ್ತು ಶ್ರೀ ಪಾಪುರವರು ಗಳಿಸಿದ ತಮ್ಮ ಹೆಸರಿನಿಯ ಕಾರಕಿರ್ದಿಗೆ ತಕ್ಕ, ಅಂಥ ಕಾರ್ಯ ಗಳೆಂದರೆ, ಜಿಲ್ಹಾ ಕಾಂಗ್ರೆಸ ಕಮಿಟಿ, ಸ್ವರಾಜ್ಯ ಸಂಘ, ಮೊದಲಾದವುಗಳನ್ನು ಸ್ಥಾಪಿಸಿ, ಜನತೆಯ ಉಬ್ಬಾ ಸಕ್ಕೆ ಸಹಾಯ್ಯಕರಾಗಿ, ಅವರನ್ನು ಪ್ರೋತ್ಸಾಹಿಸುವ ದೇ ಆಗುವದೆಂದು ಕೋರುವೆವು

ಇಹವೃತ್ತ.

ಕುಮಟಾ— ಮುಂಗಾರು [illegible] ಇಂಚು ಆ ಯಿತು ಶಕೆ ಬಹಳ ಮಳೆ ಇಲ್ಲದ್ದರಿಂದಲೂ, ಪ್ರ ಖರ ಬಿಸಿಲಿನಿಂದಲೂ ಪೈರ ಬಹಳ ಬಾಡಿತ್ತು ನಿನ್ನೆ ಬಿದ್ದ ಮಳೆಯಿಂದ ಸ್ವಲ್ಪ ತಂಪು ಹುಟ್ಟಿದ

ಬೈಂದೂರ ಅಕ್ಕಿ ಬಂದರೂ ಅಕ್ಕಿ ಧಾರಣೆ ಯ ದಾವ್ರಕಾರವದೆ, ಇಳಿಯುವ ಚಿನ್ಹ ತೋರಲೊ ಲ್ಲದು. ಊರ ಒಮಿಾನದಾರರು ಶಿಲ್ಕು ಅಕ್ಕಿ ಆ ಮಾರತೊಡಗಿದ್ದಾರೆ!

ಈ ವರ್ಷ ಮೋಹರಂನು ಮೆರವಣಿಗೆಯು ಅಪೂ ರ್ವವಾಗಿ, ಹಿಂದು ಮುಸಲ್ಮಾನರು ಕೂಡಿ ವಿಜೃಂಭ ಣೆಯಿಂದ ಜರುಗಿತು ಇದರಿಂದ ಅವರೊಳಗಿನ ಪ್ರೀ ತಿಯೂ, ಬಂಧುಭಾವವೂ ಧೃಢವಾಯಿತು ಇಬ್ಬರ ನ್ಯಾಯ್ಯ, ಮೂರನೆಯ ವರ್ಗ ಹಿತವೆಂಬ ಧೋರಣಕ್ಕೆ ಇನ್ನು ಇಂಬು ಇಲ್ಲ! ಇದೊಂದು ಆತ್ಮಜ್ಞಾನದ ಪರಿ ಣಾಮವು!! ಇದರ ಅಂತಿಮ ಧ್ಯೇಯವೂ, ಸಫ ಲವೂ— ಸ್ವರಾಜ್ಯ ಪ್ರಾಪ್ತಿಯು!!!

ತಾ ೧೩ ರಲ್ಲಿ ಕೆ ಎ ಸೊಸಾಯಟಿಯ ಕೌನ್ಸಿಲಗೆ ಬೇರಿಯ ಸಭೆಗೂಡಿದವು ಕೌನ್ಸಿಲ ಸಭೆಯು ಜನವರಿ ೪ ನೇ ಕೂಡಿದ ಗ ಜೊತಿ ಸಭೆಯಲ್ಲಿ ಮಂಜೂರಾದ ಟ್ರ್ಯಾಮನ್ಸ್ರೀಲಿಗೆ ಮಂಜೂರಿ ಕೊಟ್ಟಿತು, ಗ ಜೊತಿ ಸಭೆ ಯಲ್ಲಿ ಕಳೆದ ವರ್ಷ ಶಿಂಗ್ಸಿಕಂಕ್ಷ್ಯಾಗೆ ಸಂಬಂಧ ವ ರ್ಷದ ಲೆಕ್ಕ ತಪಾಸಣ [illegible] ಸಮಿಸಿಕೊಳ್ಳ ಲ ಅಧಿಕಾರಗ [illegible] ಕೊಡಲ್ಪಟ್ಟಿತು, [illegible] ವರ್ಷ ಶಾಲೆಯ [illegible] ಜಮಾ ರೂಪಾಯ ೧೧ ೨೦೦ ಮತ್ತು [illegible] ೮೦೦ ರ ಬ ಜೆಟ್ ಮತ್ತು ಸೊಸಾಯಟಿಯ ಬಗ್ಗೆ ಜಮಾ [illegible] ಮ ತ್ತು ಖರ್ಚು [illegible] ಬಜೆಟ ಗಳು ಮಂಜೂರ ಮಾಡಲ್ಪಟ್ಟವು ಶಾಲೆಯ ವಾರ್ಷಿಕ ವರದಿ ಬಳಗೊಂಡ ಶಾಲೆಯ ತ್ರೈಮಾಸಿಕವು ಬದಪ್ಪ ಬೇಗ ಶ್ರೀ ಜಗನ್ನಾ ಥವಂತ ಗಾಂವಸ್ಕರರ ಸಂಪಾದಕಿಯುವ ನಡಿಸಬೇ ಕೆಂತ ಗೊತ್ತಾಯಿತು

ಈ ವಾರದಲ್ಲಿ ಹಳ್ಳಿಯಿಂದ [illegible] ಅತಿಕ್ ಎರ ಹತ್ತಿದೆ [illegible] " [illegible]

ರಗಳೂ, ತೃಷಾಶಾಂತಿಗ್ರಹಗಳೂ, ವಲಿವೋರಹತ್ತವೆ! ಗುತ್ತಿಗೆಯವರ ಮುಖಕಮಲವು ಹೊಳೆಯಲಾರಂಭಿಸಿವೆ!! ಅಸಾಮಿಗಳ ಜೋಳು ವಸ್ತ್ರ ಸುಣಾಪಾಗಹತ್ತಿದೆ!!!

ಫೋರೆಸ್ಟ ಗಾರ್ಡ ಗೋವು ಇವನು ನೆಲ್ಲಕೇರಿ ಠಾಣೆ ದೇವು ಬಿನ ಗಣಪುಗೆ ಕೋಳಿ ಹಿಡಿಯಲಿಕ್ಕೆ ಕರೆಬನಂತೆ! ಅನಕಾರವನಾಡಿದರಿಂದ, ಎದೆಯಮೇಲೆ ವಶ್ರಿಯ ಪ್ರಹಾರವಾಯಿತಂತೆ! ಕಸಬಾ "ಪೋಲಿಸ" ವಟೀಲರು ಹಾಜರಿದ್ದರಂತೆ!! ಇಂಥ ದರ್ಬಾರವುಸ್ತ್ರಿ ನಡಿಸುವದು ಯಾವ ಕಾಯಿದೆಯಿಂದೆಂಬುದ ಅವರು ಹೇಳ್ಯಾರೋ? ಒಬ್ಬ ಜೀವ ಮಾಜಿಸ್ತ್ರೀಟರು ಕಣ್ಣಿದ್ದರೂ, ಕುರುದರಾಗಿ ಹೋಪರಂತೆ!!

ಹೊನ್ನಾವರ— ಇಲ್ಲಿಯ ಜಲಾವ ಕಟ್ಟಿಗೆಯ ಡಿಪೋದಲ್ಲಿ ಕಟ್ಟಿಗೆ ಏನೂ ಇಲ್ಲ ಡಿಪೋದಲ್ಲಿ ೧೫ ನ್ನೆಮ ಜೂಡಿಗಳು ಮಾತ್ರ ಕಾಣುತ್ತವೆ ಊರ ಜನರು ಜಲಾವ ಕಟ್ಟಿಗೆಯ ಸಂಬಂಧ, ವ ಹೆಣಗಳನ್ನು ಸ ಹುವ ಸಂನುಂದದ ಗೋಳಾಟವೆಷ್ಟೆಂಬುದು ವರ್ಣಿಸಲಿಕ್ಕೆ ಅಸಾಧ್ಯವು ಜಂಗ್ಲಿ ಖಾತೆಯ ಡಿವಿಜನಲ್ ಫೋರೆಸ್ಟ ಆಫೀಸರರು, ಡಿಪೋ ಲಗ್ತ ಇದ್ದು, ಮೇಲಿನ ಸಂಗತಿಗಳು ಗೊತ್ತಿದ್ದು, ಊರ ಜನರು ಹೇಳಿಕೊಂಡರೂ ಕೂಡ, ಏನೂ ವ್ಯವಸ್ಥೆ ಮಾಡದೆ, ಊರ ಒಡ ಜನರ ಗೋಳಾಟ ನೋಡುವದು ಅವರಿಗೆ ಭೂಷಣಾಸ್ಪದವೇನು? ಇನ್ನಾದರೂ ಇದರ ಕಡೆಗೆ ಲಕ್ಷ ಪೂರೈಸುವರೋ, ನೋಡಬೇಕು

ಇಲ್ಲಿ ಈ ವರ್ಷ ಗೋಳುಬಲೆಯ ವ್ಯಾಪಾರದಲ್ಲಿ ಬಾಸ ರಗೋಷದ ನಾಲ್ಕೈದು ಮಂದಿಗೆ ಮಾತ್ರ ೩-೪ ಸಾವಿರದ ಮೀನು ಬಿದ್ದದೆ ಬಾಕಿಯವರು ಸಮುದ್ರದ ಕಡೆಗೆ ಮೀನಿಗೆ ಪ್ರಾರ್ಥನೆ ಮಾಡುತ್ತಾರೆ

ತಾ ೧೯-೯-೨೦ ನೇ ದಿವಸ ನೆರೆದ ಸಭೆಯಲ್ಲಿ ಠರಾವು ಆದಂತೆ, ಈ ದಿನ ಕೂಡಿದ ಸಭೆಯಲ್ಲಿ ಹಿಂದಿ ಸ್ವರಾಜ್ಯ ಸಂಘ"(ತಾಲೂಕಾ ಸಭೆ"ಸ್ಥಾಪನೆಯಾಗಿ ಇಲ್ಲಿಯ ವಕೀಲ ಮಿ ಎಮ್ ಡಿ ಶಿರ್ಕೆ, ಇವರಿಗೆ ಸಂಘದ ಅಧ್ಯಕ್ಷ, ವಕೀಲ ಮಿ ಯೂ ವಿ ನಾಯ್ಕ, ಚಿಕ್ಕನಕೋಡ ಇವರಿಗೆ ಉಪಾಧ್ಯಕ್ಷ, ಮಿ ಕೇ ಎಸ್ ಬಳಕೂರ, ಮತ್ತು ವಿ ಸಿ ಮ್ಹಾಲೆ, ಇವರು ಸೆಕ್ರೆಟರಿ (ಖಜಾನದಾರ) ಯಾಗಿ ನೇಮಿಸಲ್ಪಟ್ಟರು ಸಭೆಗೆ ಊರೊಳಗಿನ ಹಿಂದೂ, ಮುಸಲ್ಮಾನ ಕ್ರಿಶ್ಚನ್ ಕೂಡಿ ಸುಮಾರು ೩೦೦-೩೫೦ ಜನರ ಸಮುದಾಯವು ಕೂಡಿತ್ತು ಸಭೆಯಲ್ಲಿಯೇ ಅಜಮಾಸು ನೂರು ಜನರು ಸ್ವಸಂತೋಷದಿಂದ ಸದರ ಸಂಘದ ಸಭಾಸದರಾಗಿರುವದಲ್ಲದೆ, ಒರುವ, ರವಿವಾರದೊಳಗೆ ಈ ಸಭಾಸದರ ಸಂಖ್ಯೆಯು ಅಜಮಾಸ ೨೦೦ ರ ತನಕ ಹೋಗಿ ಮುಟ್ಟೀತೆಂತ ಅರಿತೋರುತ್ತದೆ ಮಿ ಶಿರ್ಕೆಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ, ನಾಗರೀಕ ಜನರ ಆಕಾಂಕ್ಷೆಯನ್ನು ಪೂರೈಸಿದ್ದಕ್ಕೆ ಅವರ ಆಭಾರ ಎಣಿಸಿದಷ್ಟು ಸಾಲದ ಸದರ ಸಂಘಕ್ಕೆ ಪ್ರವೇಶ ಫೀ, ತೀರ ಕಡಿಮೆ ಅಂದರೆ ಗಂಟ್ಯಾಣೆ ಮತ್ತು ವರ್ಷದ ವರ್ಗಣಿ, ೨ ಆಣೆಯಂತಲೂ ನಿಶ್ಚಯಿಸಿರತ್ತದೆ

ಸಂಘದ ಸಭಾಸದರಾಗಲಿಕ್ಕೆ ಅನುಕೂಲವಾಗಬೇಕೆಂದ ಫೀ ಕಡಿಮೆ ಇಟ್ಟಿದೆ ಸಭಾಸದರಾಗಲಿಕ್ಕೆ ಇಚ್ಛಿಸುವವರ ಸದರ ಸಂಘದ ಕಾರ್ಯಕಾರಿ ಮಂಡಳದವರಿಗೆ ಬರೆದು, ಇಲ್ಲವೆ ಸಮಕ್ಷ ಭೆಟ್ಟಿಯಾಗಿ, ಸಭಾಸರಾಗಿರಬಹುದು

ಕಾನಡಾ ಜಿಲ್ಲೆಯ ಪೈಕಿ ಹೊನ್ನಾವರ ಇದು ಈ ವರಗೆ ಪೂರ್ಣ ನಿದ್ರಾವಸ್ಥೆಯಲ್ಲಿರುತ್ತಿದ್ದರೂ, ಈಗಿನ ಜಾಗ್ರತೆ ಮತ್ತು ಉತ್ಸಾಹ ನೋಡಿದರೆ, ಇದು ಮಹಾತ್ಮಾ ಗಾಂಧಿ ವಕ್ಕೆ ಪಾಸಿ ಲೋಕಮಾನ್ಯ ಟಿಳಕ ಗಂಗಾಧರ ಟಿಳಕ ಇವರ ಪುಣ್ಯ ಪ್ರಭಾವವೇ, ಎಂದ ಎಣಿಸಲಿಕ್ಕೆ ಏನೂ ಸಂಶಯವಿಲ್ಲ

ಅಂಕೋಲಾ— ಹಮಾವಾರ ಶಕೆ ಬಿಸಾಳಾದ ತ್ರದೆ ಮೋಡಗಳೂ ಆಗುತ್ತಿರುತ್ತವೆ ಈ ಆರವಾಡೆಯಲ್ಲಿ ೧ ೨ ದಿವಸ ಸ್ವಲ್ಪ ಮಳೆಯೂ ಆಯಿತು

ಹಳವಳ್ಳಿಯಲ್ಲಿ ಹವೀಕ ಬ್ರಾಹ್ಮಣ ಜಾತಿಯ ಒಬ್ಬ ಹುಡುಗನನ್ನು ಕತ್ತಿಯಿಂದ ಹೊಟ್ಟೆಯಮೇಲೆ ಹೊಡೆದು, ಭಯಂಕರ ಜಖಮು ಮಾಡಿಬಿಟ್ಟದ್ದರಿಂದ ಹುಡುಗನಿಗೆ ಅಂಕೋಲೆಗೆ ತಂದು ಕಾರವಾರಕ್ಕೆ ಒಯ್ದು ನಂತರ, ಸರ್ಜನರು ಕಡಿದ ಹೊಟ್ಟೆಯನ್ನು ಹೊಲಿದರೂ, ಅದೇ ದಿವಸ ಅವನು ತೀರಿಕೊಂಡನು. ಖೂನ ಮಾಡುವ ಉದ್ದೇಶದಿಂದಲೇ, ಈ ಅತ್ಯಾಚಾರವನ್ನು ಮಾಡಿದ್ದರೆಂದು ಪೋಲೀಸರು ಪತ್ತೆ ಹಚ್ಚಿ, ೨ ಇದ್ದ ಜನರನ್ನು ಕೈದು ಮಾಡಿರುವರು ಹುಡುಗನ ಆಪ್ತರೊಳಗಿನ ಒಬ್ಬಿಬ್ಬರಮೇಲೂ ಪೋಲೀಸರ ಸಂಶಯ ಏನೆಂಬ ಸುದ್ದಿಯಿದೆ

ಅಸಹಕಾರಿತೆಯ ವಿಷಯವಾಗಿ ಮತ್ತು ಇಲೆಕ್ಷನದ ವಿಷಯವಾಗಿ ಊರೊಳಗೆ ಅಲ್ಲಲ್ಲಿ ಚರ್ಚೆ ನಡಿಯುತ್ತದೆ ಬೇಗನೆ ಹಳ್ಳಿಯ ಮತ್ತು ತಾಲೂಕಿನೊಳಗಿನ ಪ್ರತಿನಿಧಿಗಳ ಸಭೆಗೂಡುವದೆಂದು ಸುದ್ದಿಯಿದೆ

ಶಿರಸಿ— ಮಿ|| ವಿ ವಿ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಜರಗಿದ ೧೯ ತಾಲೂಕ ಹೋಮರೂಲ ಲೀಗಿನ ಮೆಂಬರರ ಸಭೆಯಲ್ಲಿ, ಜಿಲ್ಲಾ ಪರಿಷತ್ತು ಕಮಿಟಿ ಅಧ್ಯಕ್ಷ ಮಿ|| ಮಂಗೇಶರಾವ ತೇಲಂಗರವರು, ಹಳಿಯಾಳದ ಮಿ| ಭಿದ್ರಿಯವರು ಒರೆದ ಪತ್ರದ ಒಂದು ಪ್ರತಿಯ ಸಹಿತ ಒರೆದ, "ಜಾಬಾ ಕಾಂಗ್ರೇಸು ಠರಾವು ಮಾಡಿದ ಅಸಹಕಾರಿತೆಯ ಠರಾವು ಕಾನಡಾ ಜಿಲ್ಲೆಗೆ ಲಾಗು ಆದೊ, ಇಲ್ಲೋ,' ಎಂಬ ಪತ್ರದ ಕುರಿತು ಈ ಕೆಳಗಿನ ಠರಾವುಗಳು ಪಾಸಾದವು —

೧ ಕಲಕತ್ತೆಯಲ್ಲಿ ಪ ದ್ದಂ ಕೂಡಿದ ರಾಷ್ಟ್ರೀಯ ಸಭೆಯ ಅಸಹಕಾರಿತೆಯ ಠರಾವನ್ನು ಮಂಜೂರ ಮಾಡಿದ್ದೇವೆ, ಅದನ್ನು ಮನ್ನಿಸುವುದು ಕಾನಡಾ ಜಿಲ್ಲೆಯ ಮತ್ತು ಪ್ರತಿ ಕಾನಡಾ ರಹಿವಾಸಿಯ ಕರ್ತವ್ಯವು, ಮತ್ತು ಅದನ್ನು ಆಸ್ತೆ ಆಸ್ತೆ ಜ್ಯಾರಿಯಲ್ಲಿ ತರಬೇಕೆಂದು ವ ನಿನಮಾಡಬೇಕೆಂತಲೂ,

೨ ಈ ಠರಾವಿನ ಯೋಗ್ಯಾಯೋಗ್ಯತೆಯನ್ನು ನಿರ್ಧರಿಸುವ ಹಕ್ಕು ಜಿಲ್ಲಾ ಪರಿಷತ್ತಿಗೆ ಇಲ್ಲೆಂತಲೂ,

೩ ಅಸಹಕಾರಿತೆಯ ತತ್ವಕ್ಕೆ ನಾವೆಲ್ಲರು ಬದ್ಧರಿರುವದರಿಂದ, ನಮ್ಮ ಜಂಗಲ ಸಂಕಷ್ಟಗಳ ಸಂಬಂಧ ಠರಾವಿನಿಂದ ಆರಿಸಲ್ಪಟ್ಟ ದ ಆವರಿಂದಲೂ ಸರಕಾರನಿಯುಕ್ತ ಇಬ್ಬರಿಂದಲೂ ಒಳಗೊಂಡ ಕಮಿಶನು ನೇಮಿಸಬೇಕಾಗಿ ಹೇಳುವದು ಈಗ ಅವಶ್ಯವಿಲ್ಲ. ಜಿಲ್ಲೆಯ ಕಡೆಯಿಂದ ಒಂದು ಸ್ವತಂತ್ರ ಕಮಿಟಿ ನೇಮಿಸಿ ಪುರಾವೆ ಕೊಂಡ, ಜಂಗಲ ಖಾತೆಯಿಂದಾಗಿದ ಉಪದ್ರವಗಳನ್ನು ಪ್ರಕಟಿಸಬೇಕು

"ದೇಶಭಕ್ತ ಗಂಗಾಧರರಾವ ದೇಶಪಾಂಡೆ ಮುಂತಾದವರು ಸಭ್ಯಕ್ಕೆ ಇಲ್ಲಿ ಬರತಕ್ಕವರಿದ್ದಾರೆಂತ ವರ್ತಮಾನ ಇರುತ್ತದೆ"

ಹಳಿಯಾಳ— ಸ್ವಲ್ಪ ಮಳೆ ಬಿದ್ದರಿಂದ ಪೈರು ಸಜೀವವಾಗಿದೆ ಚಳಿಜ್ವರ ಒಂಟು ಹುಣಸವಾಡದ ವನಪ್ಪಗಾಲೆ ಕಾಯದ ಆದ ಒಗ್ಗ ಹ ೦ ಬಂತ ಪುರಸಭೆಯ ಇಬ್ಬ ಶಿಕ್ಷಕ ಸಭೆಗೆ ತಾಲೂಕ ಶಿಕ್ಷಕ ಸಂಘದಿಂದ ವಿ|| ಘುರಯ ಮಾಸ್ತರರು ಕಳಿಸಲ್ಪಟ್ಟರು. ಜಬಾಫು ಕಟ್ಟಿಗೆ ಮಖಾಡಿಯಮೇಲೆ ಒಂದಿ ಇಲ್ಲದ್ದರಿಂದ ಚಿಮಣಿ ಎಣ್ಣೆ ಹಾಕಬೇಕಾಗುತ್ತದೆ ದ್ವಿದಳ ಧಾನ್ಯ ಬಿತ್ತನಿಕ್ಕೆ ಹಂಗಾಮು ಅರಿತು ಧಾರಣೆ ತೇಜ ರಂಗೂನ ಅಕ್ಕಿ ಪೂರೈಸೀತು ಆದರೆ ಲಕ್ಷ ಪೂರೈಸುವದ್ಯಾರು? ಸ್ವರಾಜ್ಯ ಸಂಘದ ಪನಾಳಿ ನಡೆದದೆ ಕಲಕತ್ತ ಕಾಂಗ್ರೆಸಿಂದ ಮರತ ಬಂದ ಮಿ|| ಎ ಬ ಮುನಿಯಾರವರು ಅಸಹಕಾರಿತೆಯ ವಿಷಯದ ಸಂಗತಿಗಳು ಹೇಳಲಿದ್ದಾರೆ ಗೋರಕ್ಷಣ ಫಂಡಿಗೆ ಜಕ್ಕಾ ದುಕಾನದಾರ ಅನಂತಯ್ಯನು ರೂಪ್ಯಾ ೯, ಬಾಜಾರ ಸೋಂಗ ವ್ಯವಸ್ಥಾಪಕ ಮಂಡಳಿಯಿಂದ ರೂಪ್ಯಾ ೨ ದೊರೆಯವು ಕ್ರೀಗಣೇಶ ಉತ್ಸವ, ನೂಜರದ ಸಮಾರಂಭಗಳು ಸಹಕಾರಿತೆಯಿಂದ ಜರಗಿಸಲ್ಪಟ್ಟವು ಹಿಂದು ಮುಸಲ್ಮಾನ ಪ್ರ

ರಿಗಳು ಮನವಟ್ಟಿ ಕಪ್ಪಬಿಸ ವ್ಯಸನವನ್ನು ಕಡಿಮೆ ಮಾಡಬಾರದೋ ಮು|| ೨ ನೇ ವಾರ್ಡಿಗೆ, ವಿ|| ರಾಮಚಂದ್ರ ವಾಸುದೇವ ದೇಶಪಾಂಡೆ ೩ ನೇಗೆ ವಿ|| ನಾರಾಯಣ ಗೋವಿಂದ ಬದ್ರಿಯವರು ಆರಿಸಲ್ಪಟ್ಟರ ಆಳನಾವರ ಸ್ಟೇಶನ ಮಾಸ್ತರರು ಅಫೀಲು ಗಾಡಿತಕ್ಕದ್ದಿರುವದರಿಂದ, ಜಾಮೀನಿನಮೇಲೆ ಬಿಟ್ಟದ್ದು ತಿಳಿದ ಅಸ್ತದ ಕಾಡು ಪಟಗಳ ಗಡಂಡಿ ಇದ್ದೇ ಇರ ಪದ

☞ ಬೇಕು

ಮಾಹೀತಿಯುಳ್ಳ ಗೌಡಸಾರಸ್ವತ ಅಡಿಗೆಯವನು ಬೇಕು ಪಗಾರು ತಿಂಗಳಿಗೆ ೩ ರಿಂದ ೮ ರ ವರೆಗೆ ಸದರಿ ಕೆಲಸದ ಮಾಹೀತಿ ಇದ್ದ ಹೆಂಗಸಿಗೆ ತಿಂಗಳಿಗೆ ರೂಪ್ಯಾ ೫ ರಿಂದ ೭ ರ ವರೇಗೆ ಲಾಯಖಿ ಪ್ರಕಾರ ಹೆಚ್ಚಿನ ಪಗಾರ

ತಾರೀಖು ೨೮-೩-೧೯೨೦

ವಕೀಲ ಪ್ರಂಪ್ಲೀಕರಾವ ಪಂಡಿತ, ಶಿರ್ಸಿ

ಮಿ| ಬೀಮರಾವ ಜಿ ರಿತ್ತಿ ವಕೀಲ ಶಿರ್ಸಿ

ಕಾನಡಾವೃತ್ತ ಪತ್ರ ಕರ್ತರಿಗೆ

ಅಯ್ಯಾ,

ಈ ನಮ್ಮ ಕಾನಡಾಜಿಲ್ಲೆ ಪತಿಯಿಂದ ನಾನು ಮುಂಬೈ ಕಾಯಿದೆ ಕೌನ್ಸಿಲ ಮೆಂಬರನಾಗುವ ಇಚ್ಛೆಯಿಂದ ಉಮೇದ್ವಾರನಾಗಿ ನಿಂತ ಸಂಗತಿ ತಮ್ಮ ಪತ್ರದ ಮುಖಾಂತರ ಪ್ರಸಿದ್ಧಪಡಿಸಿರುತ್ತಿದ್ದನಷ್ಟೇ ಇದರಿ ಕಲಕತ್ತಾ ಶಹರದಲ್ಲಿ ಕೂಡಿದ ಜಾದಾ ರಾಷ್ಟ್ರೀಯ ಸಭೆಯಲ್ಲಿ ಅಸಹಕಾರಿತೆಯ ಠರಾವು ಮಂಜೂರಾದ್ದರಿಂದ, ಸದರಿ ಕೌನ್ಸಿಲದ ಮೆಂಬರನಾಗಲಿಕ್ಕೆ ರಾಷ್ಟ್ರೀಯ ಪಕ್ಷದವನಾದ ನನಗೆ ಬರುವಂತೆ ಇಲ್ಲ ಆದದರಿಂದ ಸದರಿ ನನ್ನ ಉಮೇದ್ವಾರಿಯನ್ನು ಈ ಲೆ ಖ ದ ಮೂಲಕವಾಗಿ ಮರತ ತೆಗೆದುಕೊಂಡಿರತ್ತೇನೆ

ನಾನು ಉ ಮೆ ದ್ವಾರನಾಗಿ ನಿಂತದ್ದನ್ನು ಪ್ರಕಟಿಸಿದ ತರುವಾಯ ಬಹ ತೇಕ ಮತದಾರರು, ನಾನು ಸದರಿ ಕೌನ್ಸಿಲದ ಮೆಂಬರನಾಗಿ ಚುನಾಯಿಸಿ ಬರಬೇಕೆಂಬ ಬವಲಪಿಕೆಯಿಂದ ಮನಃಪೂರ್ವಕವಾಗಿ ನನ್ನ ಉಮೇದ್ವಾರಿ ಕ ರಿತು ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಿ, ನನಗೆ ತಮ್ಮ ಮ ತಗಳನ್ನು ಕೊಡತಕ್ಕದ್ದಾಗಿ ವಚನ ಕೊಟ್ಟ ನಂದ ಅವ್ರ ಆ ಎಲ್ಲಾ ಸದ್ಗೃಹಸ್ಥರ ಕ್ಷಮೆ ಬೇಡಿಕೊಳ್ಳುತ್ತೇನೆ ಮತ್ತು ಅವರೆಲ್ಲವರ ಉಪಕಾರವನ್ನು ಅಂತಃಕರಣಪೂರ್ವಕವಾಗಿ ಎಣಿಸುತ್ತೇನೆ

೧೯ ತಾರೀಕು ⎫ ತಮ್ಮ ವಿಧೇಯ,
೨೩-೯-೨೦ ⎭ ಭೀಮರಾವ ಜಿ ರಿತ್ತಿ, ವಕೀಲ ಶಿರ್ಸಿ

ಶಿರ್ಸಿ ತಾಲೂಕ ನರ ಪರಿಷತ್ತು.

ಶಿರ್ಸಿ ತಾಲೂಕ ನರ ಕಾರ್ಯಕರ್ತನ ವಿ | ಮ ಗೇಶರಾವ ಗ ಬಿಸ್ಸೂರರವರ ಅಧ್ಯಕ್ಷತೆಯ ಲ್ಲಿ ಕೂಡಿದ ಸಭೆಯ ಲ್ಲಿ ಪಾಸಾದ ಠರಾವುಗಳು—

೧. ಈ ಪರಿಷತ್ತು ನಮ್ಮ ಬಾದಶಹಾ ಪಂಚಮ ಜಾರ್ಜ ಬಾದಶಹರ ಬಗ್ಗೆ ಬೊರ್ಡ ಮಹಾರಾಜರಿಗೆ ಅವರ ಸರಕಾರಿ ಕಡೆ ಲೆವಲಾರಾಜಭಕ್ತಿಯನ್ನು ಅಗಾಧ ಕುಲ ಶ್ರದ್ಧೆಯಿಂದ ನಿಷ್ಠೆಯನ್ನು ವ್ಯಕ್ತಪಡಿಸುತ್ತದೆ

೨ ಇಂಡಿಯಾ ಸರಕಾರದ ಮತ್ತು ಇಂಗ್ಲಂಡದ ಬ್ರಿಟಿಷ ಪ್ರಜೆಯ ಹಿಂದೀ ಸರದ ಮೇಲು ಸುಧಾರಣೆ ಕಾಯಿದೆಯಂತೆ ಹೊರಡಿಸಿದ ನಿಯಮ ಜಾತೀಯವಾರ ರಂಪ, ಅವರ ಸ್ವಾತಂತ್ರ್ಯ ಪದವಿಗಳು ಸಾಫಲ್ಯವಾಗಲಿಲ್ಲವಾದ್ದರಿಂದ ಪ್ರತಿನಿಧಿಗಳು ಚುನಾಯಿಸಿದಂತೆ ಶಿಷ್ಟ ನಡಿಯಗಾರರ — ರ ಶಿರಸ್ಥ ರವ— ಯೊಂದಿಗೆ (unified) ಮತದ ಸ್ವತಂತ್ರ ಸಂಸ್ಥೆ ನಡೆದ (non-unified)– ಪ್ರದ

ವುದ ಪಗಾರು ಕ್ರಮದಿಂದ [illegible] ಒತ್ತಟ್ಟಿಗಿಟ್ಟು [illegible] ಬರುತ್ತ [illegible] ಹೆಚ್ಚು [illegible] ನೌಕರರು ಕ್ರಮದಿಂದ ಕಾರ್ಯಸಾಧಕವ ಪ್ರತಿಬಂಧವಿಲ್ಲದೆ, [illegible] ರೂಪಾಯಿ ೧೦೦ ಆಗುವ [illegible], [illegible] ಮುಖ್ಯ [illegible] ವಿಂದಾವರೂ ಸಹದ [illegible] ಕು.

೩ [illegible] ಕಾರ್ಯಸಾಧಕತ್ವ [illegible] ಪ್ರಾರಂಭದ ಪಗಾರ [illegible] ೩೦ ಆಗಿ [illegible] ರೂಪಾಯಿ ಹಚ್ಚಿದ [illegible] ರೂಪಾಯಿ ೩೦೦ ಆಗಬೇಕು.

೪. ಕೆಳ (Lower [illegible] (High [illegible] ಗಳಿಂದ [illegible] ಪರೀಕ್ಷೆಗಳ, [illegible] ಅವರ ನೌಕರರ, ಕ್ರಮವಾಗಿ [illegible] ೧೦ [illegible] ಪಾಸಿಕವಾದವರಿಗೆ, ಅವರ [illegible] [illegible].

ನೌಕರರ [illegible] ಕ್ರಮವಾಗಿ [illegible] ನಿರ್ಧರಿಸಿ [illegible] ಮತ್ತು [illegible] ಕಾರದ್ದ [illegible] ಪ್ರತಿಸಿಕ್ಕಿ [illegible] ಆಗಿವೆ [illegible] ಮತ್ತು [illegible] ನೌಕರರ [illegible] ಬಗ್ಗೆ [illegible].

೬. [illegible] ಮತ್ತು [illegible] ಪ್ರತಿನಿಧಿ [illegible] ನೌಕರರ [illegible] ಸಾಧಕ [illegible].

೭. ಸನ್ ೧೯೭೦ [illegible] ನೇ ಸರಕಾರಿ [illegible] ನೌಕರರ [illegible] ಮತ್ತು [illegible] ನೇ, ೧೧ (11) ನೇದರಲ್ಲಿ ದಾಖಲು [illegible] ಕೂಡಿದ [illegible] ಪರೀಕ್ಷೆಯನ್ನು ತೆಗದುಕೊ ಕಿ, ಅವರ [illegible] ಪರೀಕ್ಷೆಗ ಳನ್ನು ದಾಖಲು ಆಗಬೇಕು

೮. ಸಧ್ಯಕ್ಕೆ ಶಕ್ತಿ ಮೀರಿ ಕೆಲಸ ಮಾಡುವ ನೌಕರ ರನ್ನು ಸುಧಾರಣೆಯ ಸಲುವಾಗಿ ಕಡಿಮೆ ಮಾಡದೆ, ಅವರ ಕೆಲಸದ ತಾಸುಗಳು, ಜಿಲ್ಲಾ ಠಿಕಾಣೆಯ ಹೊ ರಗೆ, ಬೆಳಗಿನಿಂದ ಕಡಿಮೆ ಮಾಡಬೇಕು; ಕೆಲಸದ ಅವಸರವಿದ್ದಾಗ, ಅಧಿಕವೇಳೆಯ ಭತ್ತೆ ಕೊಡಬೇಕು.

೯. ಬಿನಶಸು ಕೊಳ್ಳುವ ಪಯೋಗವನ್ನು, ಅವುಲು ನಡಿಸುವ ನೌಕರರಿಯ ಬಗ್ಗೂ ಮತ್ತು ಮಂತ್ರಿವಡದ ನೌಕರರಿಯ ಬಗ್ಗೂ, ೫೦ [illegible]; ಮತ್ತು [illegible] ಸಿನ ಪ್ರಮಾಣವು ೩೫ ವರ್ಷಕ್ಕೆ ತಗ್ಗಿಸಬೇಕು. ಪಕ್ಕಿನ ರಜೆಸಂಚಯದ ಪ್ರತಿಬಂಧವನ್ನು ಇಡದೆ, ಅದು ಹ್ಯಾಗೆ ಹ್ಯಾಗೆ ಲಭ್ಯವಾಗುತ್ತದೋ, ಹಾಗೆ ಹಾಗೆ, ಅವಶ್ಯವಿ ದ್ದಾಗ, ನನೂ ಅತ್ತಿ ಇಲ್ಲದೆ, ಕೇಳಿದಾಕ್ಷಣ, ಸರಾಗವಾ ಗಿ ಕೊಡಬೇಕು; ತಮ ಪರಿಸ್ಥಿತ ಪರ್ಯಾಯಮೇಲೆ ಅವಲಂಬಿಸಿದಾರದು.

೧೦ [illegible] ಪರೀಕ್ಷೆ ಕಟ್ಟಡವೆಯಲ್ಲಿ ಕೆಲಸ ಮಾಡುವ ನೌಕರರಿಗೆ, ಆ ಸಂಬಂಧ ವಿಶೇಷ ಭತ್ತೆ ಕೊಡಬೇಕು; ಮತ್ತು ತಮ ಉಪರಿವರ ವಗಾವಣಿಯಿಂದ ರೂ [illegible] ೧ [illegible] ತಸಕ [illegible].

೧. ಯೋಗ್ಯತೆ ಪಡೆಯದ ನೌಕರರಿಗೆ, ಪರಿಶ್ರಾಂತಿ [illegible] ಕಾರ್ಯಸಾಧಕತ್ವದ ಸರ್ಟಿಫಿಕೇಟು ಕೊಟ್ಟ [illegible], ಅವರು ಯೋಗ್ಯತೆ ಪಡೆದವರ ಎಲ್ಲ ಸವಲತು ಗಳಿಗೆ ಅರ್ಹರಿರುವರು.

೧೨ ಈ ನೌಕರರ ಸಂಕಷ್ಟಗಳನ್ನು ಆಗಿಂದಾಗ [illegible] ಬಗ್ಗೂ, ಇತರ ಭ್ರಾತೃ ಸಂಘಗಳ ಕೂಡ ಪತ್ರವ್ಯವಹಾರ ನಡಿಸುವ ಉದ್ದೇಶ್ಯ ಸಹ, ಒಂದು [illegible] ಕಮಿಟಿಯನ್ನು ನೇಮಿಸಿ, ಅದಕ್ಕೆ [illegible] (ex-officio) [illegible] [illegible] ನೇಮಿಸಬೇಕು, ಕಾರ್ಯಕ್ರಮದ ಪ್ರತಿಗಳು "ಕಾನಡಾವೃತ್ತ" "ಧುರೀಣ" ಪತ್ರಕರ್ತರ ಕಡೆಗೆ ಪ್ರಕಟಣೆಯ ಬಗ್ಗೆ, ದಕ್ಷಿಣ [illegible] ಎಲ್ಲ ಹೆಡ್ ಕ್ಲಾರ್ಕನರ ಬಳಿಗೆ, ರತ್ನಾಗಿರಿ [illegible], [illegible] ಬ್ರದರ [illegible], ಪೂ [illegible] ಎಸೋಸಿಯೇಶನಕ್ಕೆ ಮತ್ತು [illegible] ಕಲೆಕ್ಟರವರಿಗೆ ಕಳುಹಿಸಬೇಕು.

ಅಧ್ಯಕ್ಷರ ಆಭಾರ ಮನ್ನಣೆಯ ಸೂಚನೆಯಿಂದ [illegible] ವಿಸರ್ಜನವಾಯಿತು

ಮ. ಗ. ಬಸ್ರೂರ, ಅಧ್ಯಕ್ಷ.

ಕಾರವಾರ. ೧೯—೯—೨೦.

Mr. V. V. WAGH.

To The Editor, Kanara News,

Dear Sir,

It has become necessary for me, in consequence of the changed atmosphere, to address this letter to you as I find your name among the signatories to the printed appeal to the electors of the District of Kanara, issued in support of my candidature.

You are aware, that since February last, my name has been mentioned as a candidate for the new Legislative Council on behalf of our District. I recently gave the District to understand that I would stand as a candidate after obtaining Government's permission as I am still a Subordinate Judge in Government service.

The last day for standing as a candidate is the 12th of October. Reports have come to my ears, that people in some parts of the District, sympathise with the Non-co-operation Resolution, passed by the Special Congress at Calcutta, and do not desire any candidate to represent them in the Council.

I had not sought the honour of standing as a candidate for the District. I had agreed to stand because many gentlemen of note interested in Kanara, wished it. My desire was that there should be more candidates than one, & that election should take place after contest. Otherwise the Electorate loses opportunities of education, regarding its duties, and a sense of responsibility to the voters is not so well impressed on the mind of the candidate who becomes a Councillor, not by election but by the mere act of standing as a candidate.

Interest was created in the work of election, therefore, when Mr. Ritti, Pleader of Sirsi, offered himself as one of the candidates and began canvassing work in the District. I was looking forward to work on my behalf very shortly. With that object in view, I applied for leave from the 1st of October next, preparatory to my retirement from the 20th of the month, and I was preparing to issue my manifesto on the 1st. But since the Non-co-operation Resolution was passed at Calcutta, Mr. Ritti, I am informed, has withdrawn his candidature, and the charm of the election, so far as I am concerned, is gone.

As a Government servant, I do not yet belong to any school of politics, and I have to eschew in this letter the discussion of any principles of politics, concerning the propriety or otherwise of Non-co-operation. Yet my personal sense of honour and self-respect tells me that it would be graceless on my part to force myself as a Councillor on the Constituency by the mere act of being nominated and declared as elected by the operation of a technical rule, when the general sense of the electors in the District is not to have a representative for themselves. Any work that I could do, as Councillor for the material and moral advancement of the District would be by the electors' co-operation. Without their sympathy and co-operation, therefore, the member-ship of Council is not an office of honour. At least that is my personal view of it.

I request you, therefore, to let me know by the 5th October 1920, what is the general sense of the electors, you are in contact with, and what you have to say in the matter. If I find that the general sense of the District is opposed, I am not going to stand. Those who have the will, can find ample scope in different spheres for work of social and public usefulness.

I am etc.,

Karwar, 25-9-20.

V. V. WAGH.

ರಾಷ್ಟ್ರೀಯ ಸಭೆಯ

ಅನುಜ್ಞೆಯನ್ನು ಮನ್ನಿಸಿರಿ!

...ವೇ ಕಲಕತ್ತೆಯಲ್ಲಿ ನೆರೆದ ಜಾದಾ ರಾಷ್ಟ್ರೀ...ಯಲ್ಲಿ ಪಾಸಾದ, ಅಸಹಕಾರಿತೆಯ ಕಾರ್ಯ...ಬೇರೆ ಬೇರೆ ವಿಷಯಗಳಲ್ಲಿ ನಮ್ಮ ಜಿಲ್ಲೆಯ ...ದೆ ತಾತ್ಕಾಲಿಕ ವಿಚಾರದ ಪ್ರಶ್ನೆಯಾಗಿ ...ನ ಮುಖ್ಯ ಸಂಗತಿಯಂದರೆ, ನೂತನ **ಕೌನ್ಸಿಲುಗಳ ಬಹಿಷ್ಕಾರವು.** 'ಕೌನ್ಸಿ... ಮೆಂಬರರಾಗಲಿಕ್ಕೆ ತಾವು ನಿಲ್ಲಬೇಕೋ? ...ಲಿನಲ್ಲಿ ತಮ್ಮ ತರ್ಫೆನ ಮೆಂಬರನು ಹೋಗ...?' ಎಂಬ ವಿಚಾರವು ನಮ್ಮ ಭಾವೀ ಮೆಂಬ...ಗೂ ಎಲ್ಲಿ ಮತದಾರರ ಮುಂದಿರುವ ಒಂದು ಪ್ರಶ್ನೆಯಾಗಿ ತೋರುತ್ತದೆ. ಈ ಪ್ರಶ್ನೆಯ ...ಮಾಡುವಾಗ, ಹಲವರು ಅಸಹಕಾರಿತೆಯ ...ಯೋಗ್ಯತೆಯ ವಿವೇಚನ ಮಾಡುವದು ...ತ್ತದೆ. ಆದರೆ, ಈ ವಿಚಾರವೆಲ್ಲ ಈಗ ತೀರ ...ಕವೂ, ಅನಾವಶ್ಯಕವೂ, ಎಂದು, ಯಾರೂ ...ವಿದರು. ಇಡೀ ಜನಾಂಗದ 'ರಾಷ್ಟ್ರೀಯ ... ಅಖಿಲ ರಾಷ್ಟ್ರದ ವಿಚಾರಪೂರ್ವಕ ನಿಶ್ಚಿ...ನಿರ್ಣಯವೆಂದು ಜಾಹೀರವಾಡಿದ ಸಂಗತಿ ...ನಾವು ಪುನರ್ವಿಚಾರವಾದಬಯಸ್ತರಾಗುವ ..., ರಾಷ್ಟ್ರೀಯ ಸಭೆಯ ಮಾರ್ಗದರ್ಶಕತ್ವದ ...ವನ್ನೇ ನಾವು ಉಪೇಕ್ಷಿಸಿದಂತಾಗುವದು. ...ಯ ಸಭೆಯು ತೋರಿಸಿಕೊಟ್ಟ ಪಥವನ್ನೇ ...ರಕತ್ವದಿಂದ ಆಕ್ರಮಿಸುವದು, ಎಲ್ಲ ರಾಷ್ಟ್ರ...ಕರ್ತವ್ಯವು. ಇಡೀ ಜನಾಂಗದ ನಿಷೇಧವನ್ನು ..., ಕೌನ್ಸಿಲಿನಲ್ಲಿ ಪಾಸಾದ 'ರೌಲಾಟ ಕಾ...ಯದೆ ಕಾಯಿದೆಯು, ರಾಜಾಜ್ಞೆ ಎನಿಸಿ... ನಮಗ ಮಾನ್ಯವಾಗಬೇಕಾಗಿರುವದಾದರೆ, ... ಸಭೆಯ ಮುಖಾಂತರ ಜಾಹೀರ ಆದ ...ದ ಈ ಅಭಿಪ್ರಾಯವು, ನಮ್ಮ ವೈಯಕ್ತಿಕ ...ದ್ದರೂ, ಅದನ್ನು ಬದಿಗಿಟ್ಟು, ಇದನ್ನು ಶಿರಸಾ ...ನ್ನಿಸುವದು ನಮ್ಮೆಲ್ಲರ ಕರ್ತವ್ಯವಲ್ಲವೋ? ...ಸ್ಥಿತಿಯಲ್ಲಿ ನಮ್ಮ ತರ್ಫೆನಿಂದ ಕೌನ್ಸಿಲಿಗೆ ...ವನ್ನು ಕಳಿಸುವಬಗ್ಗೆ, ನಮ್ಮ ಅಭಿಪ್ರಾಯ ... ಯಾರಾದರೂ ಕೇಳಿದರೆ, ರಾಷ್ಟ್ರೀಯ ...ರ್ಣಯವನ್ನು ಮನ್ನಿಸಿ ನಡೆಯುವದು ವಿಹಿ...ವೇ, ಸಹಜಪ್ರಾಪ್ತ ಒಂದೇ ಉತ್ತರವು. ರಾ...ಸಭೆಯ ಆಜ್ಞೆಗೆ ವಿರುದ್ಧವಾಗಿ, ನಮ್ಮ ತರ್ಫೆ...ಂಬರನು ಹೋಗುವದು, ಎಂದೂ ಪ್ರಶಸ್ತ.... ರಾಷ್ಟ್ರೀಯ ಸಭೆಯ ಅನುಜ್ಞೆಯೇ ನಮಗೆ ...ರ್ಶಕವು. ಆದಕಾರಣ, ನಮ್ಮ ತರ್ಫೆನಿಂದ ...ಬರನೇ ಬೇಕಾಗಿಲ್ಲ. ಹೀಗಿರುತ್ತ, ಜನಾಂ...ಜ್ಞೆಯನ್ನು ಲಕ್ಷಿಸದೇ, ಯಾರಾದರೂ ಮೆಂಬ...ಕ್ಕೆ ಮುಂದೆ ಬಂದರೆ, ಅವರು ರಾಷ್ಟ್ರಮತಾ...ನುಗಳೇ ಅಲ್ಲ. ಅಂಥವರಿಗೆ ನಮ್ಮ ಪ್ರತಿನಿಧಿ ...ಎಂದೂ ಎಣಿಸಲಿಕ್ಕೆ ಬರುವಂತಿಲ್ಲ. ಅವರು ...ನಿಯುಕ್ತ ಸಭಾಸದರ ಪಂಕ್ತಿಯಲ್ಲೇ ಶೋಭಿ...ಂಥವರು; ರಾಷ್ಟ್ರೀಯ ಸಭೆಯ ಅನುಯಾ...ದ ನಮ್ಮೆಲ್ಲರಿಂದ ಮತಗಳನ್ನು ಪಡೆಯ...ಸಹಕಾರಿತೆಯನ್ನು ಹೊಂದಲಿಕ್ಕೂ, ಅರ್ಹ...ದೇ ನನ್ನ ಪ್ರಮಾಣಿಕ ಮತವು.

ಓರ್ವ ಕಾಂಗ್ರೆಸ-ಅಭಿಮಾನಿ.

ಕುಮಟೆ ಪೇಟೆ ಧಾರಣೆ.

ಜಿನಸು.	ದರ.
ರಂಗೂನ ಪೆ. ಗೋಣಿ ೧ಕ್ಕೆ ...	೧೫॥—೧೬
ಕುಚ್ಚಿನ ಅಕ್ಕಿ ಮಾಪಗಿ ...	೭॥—೮
ರಾಗಿ ನಿಖಕ್ಕೆ ...	೧೨—೧೩
ಗೋದಿ ಗೋಣಿ ೧ಕ್ಕೆ ...	೩೦
ಹುರುಳಿ ನಿಖ „ ...	೧೫—೧೫॥
ಕಡಲೆ ನಿಖ ೧ಕ್ಕೆ ...	೧೯॥
ತೊಗರಿಬೇಳೆ ಗೋಣಿ ೧ಕ್ಕೆ ...	೩೦—೩೩
ಹೆಸರು ಬೇಳೆ „ ...	೧೮॥—೨೪
ಮೋರಿಸ ಸಕ್ಕರೆ ಮಣ „ ...	೧೪॥—೧೫
ಮೆಣಸಿನ ಕಾಯಿ ಮಣ „ ...	೨—೮
ಹಳೇಸೆ ಮಣ ...	೬
ಕೊಬ್ರಿ ಎಣ್ಣೆ ಮಣ ...	೧೧।
ಕೊತ್ತಂಬರಿ ಗೋಣಿ „ ...	೧೩—೧೪
ಉಪ್ಪು ಗೋಣಿ „ ...	೪-೫-೦
ಕೆರೆಸಿನ ಸೂರ್ಯ „ ...	೪ ೮-೦
„ ಹಂಸ „ ...	೩-೧೦-೦
ಬೆಲ್ಲ ಸಿಂತಿ ೧ಕ್ಕೆ ...	೬೦—೭೦
ಗಾಂವಟಿ ಪೆಟ್ಟಿ „ ...	೧೦೫—೧೨೧
„ ಗೋಟು „ ...	೫೫—೬೦
ಮೆಣಸು „ ...	೧೫೫—೧೬೦
ಯಾಲಕ್ಕಿ „ ...	೪೦—೫೦

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ನಾವು ಪೂರೈಸುವೆವು.

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ.

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣವಪಸು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ. ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಕಾರವಾಗಿ ಧಾತುಪೌಷ್ಟಿಕ ವೀರ್ಯ ವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗರ್ಮಿ, (ಚಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾವುಗಳು ಕಟಿಶೂಲೆ ವಾತರೋಗ ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟಿ. ಖ. ಬೇರೆ. ಅನುಪಾನಪತ್ರಿಕೆ ಔಷಧದ ಸಂಗಡ.

ವಿಳಾಸ— ಜಿ. ಎಲ್. ಜೋಶಿ. ಕಂಪನಿ,

ಪೋಸ್ಟ— ಬನವಾಸಿ. ಉತ್ತರ ಕಾನಡಾ.

ಅನಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯಿ, ಬಿದ್ದ ಜಖಮು. ಪೆಟ್ಟಿನ ನೋವು, ಯಾವದೇ ತರದ ಜಖಮು. ಯಾ ಎಲುಬು ಮುರಿದಲ್ಲಿ ಸಹ ಇದನ್ನು ನೀರು ತಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ. ಕ್ರಯ ತೊಲೆ ೧ಕ್ಕೆ ೨ಆಣೆ. ೧೨ ತೊ. ೧—೨—೦. ವ್ಯಾಪಾರಸ್ಥರಿಗೆ ಭರಪೂರ ಕಮಿಶನ್. ಪತ್ತೆ:— ಮಗನ್ಲಾಲ ಹೀರಾಲಾಲ ವಲ್ಲಭರಾಮ, ಗುರ್ಜರ ಹವೇಲಿ, ಕುಮಟಾ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿಯಾದರೆ ತರಿಸಿಕೊಡುವೆವು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಮಧುರೆ ಚುನ್ನಡಿ ಅಂಚಿನ ಸೀರೆಗೆ

ಕ್ರಯ ರೂ. 4-8-0.

ಇದು ಉಪಯೋಗಕ್ಕೆ ಥಳಕಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ ೧೮ ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ಕ್ರಯ ರೂ. 4-8-0.

ವಿಳಾಸ:— ವಿ. ಕೆ. ಪೆನ್ ಆ್ಯಂಡ್ ಕಂಪನಿ,

24, ವಿನಾಯಕಮೇಸ್ತ್ರಿ ಬೀದಿ, ಮದರಾಸ್.

✱ ✱ ✱ ✱ ✱ ✱ ✱ ✱ ✱ ✱ ✱ ✱ ✱

☞ ನಮ್ಮಲ್ಲಿ ಸಿಗುವ ದಿವ್ಯ ಔಷಧಗಳು.

ಮೋಘರಾಜಚೂರ್ಣ— ಎಲ್ಲ ತರೀನಾತರದ ಮಲಬದ್ಧತೆಯ ಜುಲಾಬ ಮಾಡಿಸುವ ನಿಷ್ಪತ್ಯ ಚೂರ್ಣ.

ಕ್ರಯ— ಪುಡಿ (೧ಕ್ಕೆ ೧॥ ಆಣೆ) ೧೨ ಕ್ಕೆ ೧—೨—೦.

ವಿರಬಾಲ ಸಂಜೀವನ ಮಾತ್ರಾ— ಈ ಮಾತ್ರೆಯು ಹುಡುಗರಿಗೆ ಉಪಯೋಗಿಸಿದರೆ ಯಾವದೇತರದ ಉದರ ವ್ಯಾಧಿಯು ಬರಲಾರದು. ಕ್ರಯ ಬಾಟ್ಲಿ ೧ಕ್ಕೆ ರೂ. ॥

ಖಾಸ ಶ್ವಾಸ ಗುಟಿಕಾ— ಯಾವದೇತರದ ಖಾಸಶ್ವಾಸ, ದಮ್ಮು, ಕೆಮ್ಮು ಇವುಗಳಮೇಲೆ ಉಪಯೋಗಿಸುವದು.

ಕ್ರಯ— ೧ಕ್ಕೆ ೨ ಆಣೆ ೧೨ ಕ್ಕೆ ೧। ರೂ.

ವ್ರಣಪಾಲಕ ಚೂರ್ಣ— ಯಾವದೇತರದ ವ್ರಣ ಹುಣ್ಣಿನಮೇಲೆ ಹಚ್ಚಿದರೆ ೮ ದಿವಸಗಳಲ್ಲಿ ಗುಣ.

ಕ್ರಯ— ದೊಡ್ಡ ಪುಡಿ ೧ ಕ್ಕೆ ರೂ. ೨-೦-೦.

ಪಿ. ಆಯುರ್ವೇದ ವೈದ್ಯ ಶಾಲಾ,

ಆರ್. ಎಸ್. ವೈದ್ಯ, ಗುರಜನಪೇಟ್ ಕುಮಟಾ.

ಜಗತ್ಪ್ರಖ್ಯಾತ! ಖಾತ್ರಿದಾಯಕ!! ಬಹುಮಾನಕಾರಕ!!

ಮುಖ ಜೀವನಾಮೃತ.

ಈ ಔಷಧವು ಹಲ್ಲು ಕೆಳೆತ, ಹಲ್ಲು ನೋಯುವ, ಹಲ್ಲು ಅಲುಗಾಡುವ, ಹಲ್ಲೊಳಗಿಂದ ರಕ್ತವ ಕೀವು ಸುರಿಯುವ, ಮುಖದಲ್ಲಿ ಉಂಟಾದ ದುರ್ಗಂಧ ಈ ಎಲ್ಲಾ ವಿಕಾರಗಳಿಗೆ ರಾಮಬಾಣ ಔಷಧ. ಇದಲ್ಲದೆ ಬಾಲಗ್ರಹ, ಎಲ್ಲಾ ತರದ ಜ್ವರ, ತಲೆಯ ಬೇನೆ, ವಾಂತಿ, ಹೊಟ್ಟೆಕಚ್ಚೋಣ, ನಳಗುಳ, ಪ್ಲೇಗ, ಕಾಲರಾ, ಗುಂಟುಗಳಿಗೆ, ಮತ್ತು ವಿಷಕಾರಕ ಪ್ರಾಣಿಗಳು ಕಚ್ಚಿದ ಕೆಳೆತ, ಬಾಳಂತಿಯರಿಗೆ ಸಂಜು ಮೂಡಿದರೆ, ಮ ೨೦ ಪ್ರಕಾರದ ಮೇಹರೋಗಕ್ಕೆ ಗುಣ.

ಕ್ರಯ ಬಾಟ್ಲಿ ೧ಕೆ ಫಕ್ತ ೦-೧೨-೦.

ಪತ್ತೆ:- ಗೋವಿಂದ ಎಸ್. ಕೆರೇಕರ.

ಶ್ರೀ ಪಾಂಡುರಂಗ ಪ್ರಸಾದಿಕ ಕಂಪನಿ,

ಕುಮಟಾ (ಎಸ್. ಕೆನರಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ ಸ. ೧೯೬೩ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮಸವರಿಕೆಯಾಗಿ ತಾ. ೧೦-೮-೧೯೦೮ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಇಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಅಮೌಲ್ಯವಾದ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅದು ತಮೇ ಎಂದು ಶಿವ ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ [illegible] ರೋಗಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ [illegible] ಮತ್ತ ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯೋಗ ಎಷ್ಟೋ, ಅನೇಕ ಸರಟಿಫಿಕೇಟುಗಳು ಸಹ ದೊರೆಯುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ಸೂಚಿಸುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗವಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕಪ್ರಕಾರದಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ, ಕಾಲಿನ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ, ಅಜಗ್ಯ, ಇದ್ದಲಿಸಿ, ಅಜೀರ್ಣ. ಹೊಟ್ಟೆಶೂಲಿ, ಮೈಶೂಲಿ, ಅರತಲೆಶೂಲಿ, ನಡಶೂಲಿ, ವಾತಶೂಲಿ, ರಕ್ತಜಡ್ಡು, ಗುಪ್ತವ್ಯಸನಬೇನೆ, ಹುರುಕುಕಜ್ಜಿ, ಗಜಿಕರ್ಣ, ಇಸಬು, ತದ್ದು, ಫೋಡುವ್ಯಾಕ್, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಆರವಿ. ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಮೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ. ನಮೂನ ಉರ್ದಿಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟ್ಲಿಗಳನ್ನು ತೆಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟ್ಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಐದು ಆಣೆ ಬರುವದು. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಬಗೆತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನವ ತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತಿರಬೇಕು.

ಎಚ್. ಎ. [illegible], ಸಂಪಾದಕ ಅರ್ಕಶಫಾ,

ಹೆಡ್ ಆಫೀಸು [illegible]ಪೂರ, ಬೆಳಗಾಂವ.

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ:— ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ ರೋಗಗಳ ಬಾಧೆಯಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ದೇಹಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಗೊಳಿಸುವದು. 40 ಸಲ ಸೇವಿಸುವ ಲೇಹ, ಡಬ್ಬಿ 1ಕ್ಕೆ 1-[illegible] ಡಬ್ಬಿಗಳಿಗೆ 4-12-0.

2. [illegible]:— (ಖಾತ್ರಿ ಗುಣ):— ಇನ್‌ಫ್ಲೂಯಂಜಾ, ನಿಮೋನಿಯಾ, ದಿವಸಕ್ಕೊಮ್ಮೆ, ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ 0-8-0.

3 ಬಾಲಗ್ರಹ ಗುಟಿಕೆ:— ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಬಾಟ್ಲಿ 1ರ ಕ್ರಯ 0-10-0

4. [illegible] ಗುಟಿಕೆ:... ಇದು ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಕಟ್ಟಿದ ಕೆಮ್ಮು ಇತ್ಯಾದಿ ಗುಣ. ಬಾಟ್ಲಿ 1 ರ ಕ್ರಯ. 0-10-0

5 [illegible].— ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರ ಹೋಗುವಾಗ್ಯೆ ಉರಿಯುವದನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ, ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗ ಗುಣಸಿಕ್ಕುತ್ತದೆ. 14 ದಿವಸದ ಔಷಧಿ. ಕ್ರಯ ರೂ. 2

6. ಅಶೋಕಾರಿಷ್ಟ ಮತ್ತು ಮಾತ್ರೆ:— ಇದರ ಸೇವನೆಯಿಂದ ಜ್ವರ, ರಕ್ತ, ಪಿತ್ತ, ಅರುಚಿ, ಸೂತಕದ ಸಮಯದಲ್ಲಿ ಕಿರಿಹೊಟ್ಟೆನೋವು, ಸೊಂಟನೋವು, ತಿಂಗಳಿಗೆ 2 ಸರ್ತಿ ಮುಟ್ಟಾಗುವದು, ಹೆಂಗಸರ ರಕ್ತಸ್ರಾವ, ಬಿಳಿದು ಹೋಗುವದು ಇದೆಲ್ಲಾ ರೋಗಗಳನ್ನು ನಿವಾರಿಸಿ ಗರ್ಭಕೋಶವನ್ನು ಸರಿಪಡಿಸುತ್ತದೆ. 1 ಬಾಟ್ಲಿ ಔಷದಕ್ಕೂ 1 ಬಾಟ್ಲಿ ಮಾತ್ರೆಗಳಿಗೂ 2-0-0.

ಎಮ್. ಗಣಪಯ್ಯಾ ಎಂಡ ಸನ್ಸ್

ನೇಟಿವ್ ಡೊಕ್ಟರ್ಸ್ ರಥಬೀದಿ,

ಮಂಗಳೂರ ದ. ಕ.

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯರ ಸಚಿತ್ರ ಚರಿತ್ರೆ, ಲೇಖನ ಮತ್ತು ಭಾಷಣ, ೦ ೧೨-೦, ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦, ದಾ|| ಬ|| ಪಾರದ ಮಳೆಪ್ಪನವರ ಸಚಿತ್ರ ಚರಿತ್ರ ೦-೧೨-೦, ಸ್ವತಂತ್ರ್ಯ ಸಿದ್ಧಾಂತ ೦-೮-೦, ಬುದ್ಧಿಯ ಮಾತು ೦-೪-೦, ಅಧುನಿಕ ಜೀವನ ೦-೪-೦, ಪತಿತೋದ್ಧಾರ, ೦-೪-೦.

ವಿಳಾಸ:— ಎಂ. ಎಂ. ಹರ್ಡೇಕರ.

ದಾವಣಗೇರಿ.

ಹೊಸ ಶೋಧ! ಒಂದ ಹೊಸ

ಗುಣ ಬಾರದಿದ್ದರೆ ಹಣಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ

ಅಮೃತ ಜೀವನ ಪಾ[illegible]

ಈ ಆಶ್ಚರ್ಯಕರವಾದ ಪಾಕನ್ನು ಅನೇಕ [illegible]ಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೊ[illegible]ಯ ಮೇರೆಗೆ ರೋಗಿಗಳಿಗೆ ಉಪಯುಕ್ತ ವಾ[illegible]ಕ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ ಪಾಕಸೇವನೆಯಿಂದ ನಪುಂಸಕತ್ವ, ಮು[illegible]ಮೊದಲು ಅಥವಾ ಆದಮೇಲೆ ಧಾತು ಬೀಳ[illegible] ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ[illegible]ಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿನದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ವಿಕಾರಗಳು ಗುಣವಾಗುವವು. ಮಲಶುದ್ಧಿಯಾ[illegible]ನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದದ[illegible]ವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗು[illegible]ಟಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂ[illegible]ಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ[illegible]ಗಳೂ ಬರುವವು. ಇದರ ಅನುಭವವು ಸೇವ[illegible] ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಯಾರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ[illegible]ರ ರೋಗಗಳು ನಿರ್ಮೂಲವಾಗುವವಲ್ಲದೆ ನಿರ್ದೋಷವಾಗಿ ನಿಯಮಿತವಾಗುವದರಿಂದ[illegible]ರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯ[illegible]ರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾ[illegible]ಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪ[illegible] ವಲೂ, ಗುಣ ಬರುವದು. ನಿದಾನ ಒಂದು ಸಾ[illegible]ದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧೪ ತೊಲೆಯ[illegible]ಗೆ ರು. ೧ ೧೨ಆಣೆ. ೩ ಡಬ್ಬಿಗಳಿಗೆ ೪ ರು ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲೀಷ ಅಥವಾ[illegible]ಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ—ವ್ಹಿ. ಆರ್. ಬ್ರದರ್ಸ ಮತ್ತು ಕ[illegible]

ಪೋಸ್ಟ ನಿಪ್ಪಾಣಿ, ಜಿ. ಬೆಳ[illegible]

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು. ಯಾವತ್ತೆತರದ ಸಾರ್ವ[illegible] ಕೆಲಸದ ಹೊತ್ತಿನಲ್ಲಿ ಯೂ ಮದುವೆ ಸಮಾರಂ[illegible]ಲ್ಲಿಯೂ ರಾತ್ರೆ ಹೊತ್ತಿನಲ್ಲಿ ನಡೆಯುವ ಜನ[illegible] ಪದಲ್ಲಿ ಹಚ್ಚಿದರೆ, ಇವರಿಂದ ಬೆಳಕು ಹೆಚ್ಚು ಖರ್ಚ ಸಹ ಕಡಿಮೆ ತಗಲುತ್ತದೆ. ಈ ವಿದ[illegible] ದೀಪಗಳು ತಾ, ಈ ದೀಪಗಳು ಹೆಚ್ಚು ಎಂಬ[illegible] ತ್ರಯಗಳು ಸಹ ಇಲ್ಲಿ.

ಬೇಕಾದವರು ಭಾಡಿಗೆಯ ದರವಾರ ವಗೈ[illegible] ಶಿತಿ ಕೆಳಗಿನ ವತ್ತೆಗೆ ಮಕ್ತಾ ಸಿಕ್ಕಿ [illegible] ಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನೆ[illegible]

ಹೆಗಡೇಕರ, ದುಕಾನ್ಯ ಕುಮ[illegible]

Printed and published by Krishnarao Keshav Shenvi, at his Star of Kanara Press, Kumta.

रा. दत्तोपंत नाडकर्णीप्रमाणेंच, 'नेमस्त' ह्मणून तरी, आपलें बीद राखण्याचा मुद्दाम प्रयत्न करण्याचा मोह रा. कुलकर्णी यांस पडला असावा. पण कोणाहि मोठ्या व्यक्तीशीं आपला मतभेद किंवा त्यांच्या कित्येक कृतीबद्दल नापसंती असल्याचें वगैरे, आजकालच्या एक फेशनप्रमाणें जाहीर नमूद करणें हें, सदर व्यक्तींत आणि आपणांत योग्यतेचें कांहीं तरी साम्य असल्यासच, शोभतें. ही एक गोष्ट बाजूस ठेवल्यासहि, मतभेद किंवा कृतीबद्दल नापसंती प्रदर्शित करण्याची गरज भासण्यास, वेळ अवेळ ह्मणून कांहीं तरी आहे, व कोणाहि व्यक्तीच्या सर्वसम्मत सद्गुणांबद्दल गौरवयुक्त आदर योग्यवेळीं प्रदर्शित केल्यानें आपला मतभेद टाकून दिल्याचें किंवा सदर व्यक्तीचें अनुयायित्व पत्करल्याचें कांहीं पाप माथीं बसत नाहीं. ही साधी गोष्ट आमच्या शहाण्या ह्मणविणाऱ्यांच्याहि लक्ष्यांत कशी येत नाहीं, याचेंच आश्चर्य वाटतें. ना. कामत, मि. परांजपे वगैरे नेमस्त पुढाऱ्यांचा त्यांच्याशीं मतभेद नव्हता काय ? पण मुंबई प्रांतिक कॉंग्रेस कमिटीच्या सभेंत, मि. परांजप्यांनीं पुढें मांडलेल्या ठरावांत, किंवा टिळकांच्या सुतकाच्या दहाव्या दिवशीं पुण्यास भरलेल्या जाहीर दुःखवट्याच्या सभेंत ना. कामत यांनीं पुष्टी दिलेल्या ठरावाच्या शब्दयोजनेंत, आपला मतभेद घुसडून देण्यास त्यांनीं प्रयत्न केला नाहीं. सदर सभेंत ना. कामत मोकळ्या मनानें काय ह्मणाले तें पहा. "टिळकांच्या देशभक्तीविषयीं ज्यांना आदर वाटत नसेल, तो देशभक्तच नसला पाहिजे" हेच ना. कामत यांचे उद्गार होत. लो. टिळकांशीं कितीतरी मतभेद असलेल्या सर. नारायणराव, सर दिनशा, मि. परांजपेसारख्या दुसऱ्या पक्षातील अग्रणींनीहि वर लिहिल्याप्रमाणें, हृदयपूर्वक काय उद्गार काढले आहेत, ते अवलोकन करा. टिळकांशीं प्रत्येक बाबतींत, पावलोपावलीं, मतभेद असलेल्या, व त्यांच्या कितीतरी कृती नापसंत असलेल्या, मुंबईच्या "सुबोध पत्रिके" सारख्या पत्रानेंहि योग्य प्रसंग ओळखून, त्यांच्याविषयीं किती आदरयुक्त उद्गार काढले आहेत; ते वाचा. ह्मणजे 'मतभेद' 'कृतीविषयीं नापसंती' ह्मणून वगैरे, ओरडत सुटण्याची वेळ अवेळ केव्हां असते, व थोर व्यक्तींविषयीं योग्य आदर प्रदर्शित करण्यांत धन्यता वाटण्याची वेळ कोणती असते, या विषयीं युक्तायुक्ततेचा विचार कांहींतरी तुह्मांस समजून येईल. असो. रा. कुलकर्णी यांनीं पुढें आणलेल्या उपसूचनेस कारवार, येथील बेंच म्याजिस्ट्रेट व लोकलबोर्डाचे सरकारनियुक्त एक मेंबर, मि. शेख आदम साहेब (आपल्या आजपर्यंतच्या लोकपक्षीय कामगिरी(?)कडे बोट दाखवून, मुसलमानांच्यावतीनें कौन्सिलर होऊन लोकसेवा (!) करण्यास पुढें आलेले गृहस्थ ते हेच होत.) यांनीं दुजोरा दिला. उपसूचनेवर मतें घेण्यांत येऊन, उपसूचना मांडणारे व दुजोरा देणारे अशा दोघांचीच अनुकूल मतें पडून, २ विरुद्ध ६ मतांनीं उपसूचना नापास झाली. रा. गणपतराव नाडकर्णी यांच्या मूळ ठरावावर ९ विरुद्ध २ मतें पडून, बहुमतानें मूळ ठरावच पास झाला ही आनंदाची गोष्ट होय. सदर मूळ ठरावावर विरुद्धमतें देणाऱ्यांत रा. मंगेश पुंडलीक कुलकर्णी, व मि. शेख आदम साहेब हे दोघेहि होते, हें सांगणें नकोच. सभेंत हजर असलेले दुसरे एक सरकारनियुक्त मेंबर, कारवारचे मामलेदार, यांनीं टिळकांच्या मृत्युविषयीं दुःखप्रदर्शनच करूं नये, असें वाटून कीं काय, त्यांनीं मूळ ठरावास व उपसूचनेसहि विरुद्धमत दिलें. "टिळक हे सरकारचे प्रतिस्पर्धी, वैरी होते. तेव्हां त्यांच्याविषयीं ठराव आणुन सरकारी नोकर असलेल्या एकदोन सभासदांना पेचांत पाडूं नका" अशीहि सूचना करून अध्यक्ष रा. दत्तोपंत नाडकर्णी यांनीं कांहीं तारे तोडले होते ह्मणे. पण मोठमोठे सरकारी नोकर सभासद असलेल्या मुंबई म्युनिसिपालिटी व इतर कित्येक म्युनिसिपालिट्या व लोकलबोर्डें वगैरे संस्थांत लो. टिळकांविषयीं ठराव येऊन पास झाले आहेत, व अशा वेळीं कोणतेंच मत प्रदर्शित करणें सरकारी नोकरांना इष्ट वाटत नसल्यास, त्यांनीं अशा सभेंतून गैरहजर राहून सभेंत कोणताच भाग न घेणें हा सरळ रस्ता त्यांस मोकळा आहेच, हें अध्यक्षांस कळावयास पाहिजे होतें. असो. एकंदरींत मूळ ठराव बहुमतानें तरी पास झाला, या विषयीं, ठराव पुढें मांडणारे रा. गणपतराव नाडकर्णी व दुजोरा देऊन अनुकूल मतें दिलेले रा. मंजनाथ हरिजोशी, रा. शामराव गायतोंडे वगैरे इतर मेंबर यांचें अभिनंदन करणें अवश्य आहे. जातां जातां, आमच्या कांहीं लोकनियुक्त मेंबरांना लोकपक्षाविषयीं कितीसा आदर वाटतो, तें या उदाहरणावरून समजून घेऊन, स्थानिक निवडणुकीच्या वेळीं वगैरे यापुढें लोकांनीं विशेष सावधराहणें भाग आहे, हेंहि सहज सुचवावेसें वाटतें.

सदाशिवगड, ता. १९-९-२०. आपला, बातमीदार.

ಕ್ವಾಡೆ ಕೌನ್ಸಿಲದ ವಿಲಕ್ಷಣ!

ಶ್ರೀಯುತ ಕಾನಡಾವೃತ್ತ ಸಂಪಾದಕ ಮಹಾಶಯರೇ,

ತಮ್ಮ ತಾರೀಖು ೧೪ ರ ವೃತ್ತಪತ್ರವನ್ನು ಓದಿದ ಕೂಡಲೆ, ಮುದ್ದಾಮು ತಯಾರಿಸಿದ ಮನೋಹರ ಕೃಷ್ಣ ವರ್ಣದ ಪ್ರೇಮಿವಸ್ತ್ರ ಕಾಣ್ಣಿಸಿದ ಸದ್ಭಾತೀ ಮುಖಗಳಕಡೆಗೆ ನಜರ ಹೋಯಿತು. ಈ ಮಹಾಶಯರು ಕೌನ್ಸಿಲ ಉಮೇದವಾರಾಗಿ ನಿಂತ ಕಾರಣ, ಸೂಕ್ಷ್ಮ ವಿಚಾರ ಮಾಡಿ ನೋಡಲಾಗಿ, ಒಂದು ದಂತಕಥೆಯು ನೆನಪು ಬರುತ್ತದೆ. ಅದೇನೆಂದರೆ:

"ಒಬ್ಬ ಅರಸನು ತನ್ನ ಪ್ರಜೆಗಳ, ತನ್ನ ಮೇಲಿನ ಪ್ರೀತಿಯನ್ನು ತಿಳಿಕೊಳ್ಳುವದಕ್ಕೆ ದೂಪತ್ತು ಜನರಿಗೆ ತನ್ನ ಮನೆ ಮುಂದಿರುವ ತೋಟದಲ್ಲಿ, ಆ ತಂಬಿಗೆ ಹಾಲಿನಂತೆ ರಾತ್ರಿ ಪ್ರತಿ ಒಬ್ಬನು ಹಾಕಬೇಕಾಗಿ ತಿಳಿಸಿದನು. ಅದಕ್ಕೆ ಆ ಪ್ರೀತಿಯ ಪ್ರಜೆಗಳು (ಅವರು ನಮ್ಮಂತೆ ಇದ್ದಿಲ್ಲಾ.) ತಾನೊಬ್ಬ ರಾತ್ರಿ ಹೊತ್ತು, ಹಾಲಿನ ಬದಲು, ನೀರು ಹಾಕಿದರೇನಾಯಿತು ಎಂಬ ವಿಚಾರದಿಂದ, ಪ್ರತಿ ಒಬ್ಬನು ಹಾ ದಿನದಲ್ಲಿ ಆ ತಂಬಿಗೆ ನೀರನ್ನೇ ಹಾಕಿ ಹೋದನಂತೆ. ಒಬ್ಬನ ಮೇಲೆ, ಹಾಲಿನ ಅಂಶ ಇನ್ನು." ಇದೇ ವಿಚಾರ, ಈ ಮಹಾತ್ಮರಲ್ಲಿ ಹುಟ್ಟಿರಬೇಕು.

ಇಲ್ಲದಿದ್ದರೆ, ಲಾಯಕು ಇದ್ದ ಇಬ್ಬರು ಉಮೇದವಾರರು ದುರ್ಭಾಗ್ಯ ಕಾರಣದಿಂದ ತಮ್ಮ ಉಮೇದವಾರಿಯನ್ನು ಮರಳ ತೆಗೆದುಕೊಂಡ ಕೂಡಲೇ, "ಹಾಳೂರಿಗೆ ಉಳಿದವನೇ ಗೌಡಾ" ಎಂಬಂತೆ, ಈ ಖಾಲೀ ಬೀಳುವ ಜಾಗೆಯನ್ನು ತಾವು ಅಲಂಕರಿಸಿ, ತಂಮ ಇಡೀ ಆಯುಷ್ಯದಲ್ಲಿ ಭಗೀರಥ ಪ್ರಯತ್ನಪಟ್ಟಾಗ್ಯೂ ಅಸಾಧ್ಯವಿರುವಂಥ, ವ ಈಗ ಹುನ್ನಾಗಿ ಬಂದ ಪ್ರಸಂಗ ಕಳಕೊಳ್ಳಬಾರದಾಗಿ, ತಿಳಿದು ನಿಂತಿದ್ದಾರು? ಆದರೆ ಕೌನ್ಸಿಲ ಹೋಲ, ಅಂದರೆ, ಸಿಂಹಾಸನವನ್ನು ಒಬ್ಬರು ಹೋಲಿಸಿದಂತೆ, "ಶಾಲಿಂ ಖಾನೆ" ಯೋ "ರಂಗಮಹಾಲು" ಅಲ್ಲಾ, ಎಂಬ ಸಂಗತಿ ಮತದಾರರು ಈ ಉಮೇದವಾರಿಗೆ ಖಾತ್ರಿ ಮಾಡಿ ಕೊಡಬೇಕು. ವ ಪಾರ್ಲಿಮೆಂಟ ಸಭೆಯಲ್ಲಿ ಕುಸಾದ ಕಡಿವಿನಂತೆ, ಯಾರಿಗೂ ಮತ ಕೊಡಬಾರದು. ಮತಕೊಡುವದಕ್ಕೆ ಯಾರಿಗಾದರು ಬೆದರ ಬಂದಲ್ಲಿ, (ಇದು ಶಕ್ಯವಿಲ್ಲ, ಯಾಕಂದರೆ, ಈ ಪರಿಸ್ಥಿತಿಯಲ್ಲಿ ಮತದಾರರಿಗೆ ಭಯ ಹಾಕಲಿಕ್ಕೆ ಲಾಯಕಿ ಇರುವ ಉಮೇದವಾರನು ತಮ್ಮ "ಪ್ರೇಮಿನಲ್ಲಿ" ತೋರುವದಿಲ್ಲ.) ತಮ್ಮ ಮತವನ್ನು ಪಾರ್ಲಿಮೆಂಟ ಸಭೆಯಲ್ಲಿಯಂತೆ, ಯಾರಿಗೂ ಕೊಡುವದಿಲ್ಲಾ. ನೀವು ನಿರ್ಲಜ್ಜರಾಗಿ ಮತವನ್ನು ಬೇಡುತ್ತೀರಿ? ಈ ಮೊದಲೆ ನೀವು ಒಟ್ಟಾಯಿಸಿದ ವ ಮುಂದೆ ಒಟ್ಟಾಯಿಸಬಹುದಾದ ದೇಶ ಸೇವೆಯು "ಧಂಡೀ ಗಾಳಿಯಷ್ಟು" ದೊಡ್ಡ ಪ್ರಾಜ್ಯವೇ ಎಂಬ ನಿಜಸ್ಥಿತಿಯು ಎಚ್ಚರಿಕೆ, ಮತ ಕೇಳಲಿಕ್ಕೆ ಬಂದವರಿಗೆ ಮಾಡಿಕೊಟ್ಟು, ಅವರ ಇಷ್ಟು ಫಜೀತಿ ಮಾಡಬೇಕಲ್ಲು. ಅದರಿಂದ ಈ ಮತ ಭಿಕ್ಷುಕರ ಸ್ಥಿತಿ "भीक नको, पण कुत्रा आवर" ಎಂಬಂತ ಆಗಬೇಕು.

ಈಮ್ಯಾ, ಹೊನ್ನಾವರ ಬಂಧುಗಳು ಜಾಹಿರ ಮಾಡಿದಂತೆ, ಈ ಉಮೇದವಾರರು ಮತದಾರರ ಅಪೇಕ್ಷೆಯಿಂದ ನಿಂತವರಲ್ಲಾ. ಕಾರಣ ತಮ್ಮ ಪ್ರತಿನಿಧಿಗಳೇ, ಇರುವದಿಲ್ಲಾ ಎಂಬ ಸಂಗತಿ ಜಾಹೀರ ಸಭೆ ಮಾಡಿ, ಠರಾವುಗಳನ್ನು ಪಾಸ ಮಾಡಿ, ಯೋಗ್ಯ ಅಧಿಕಾರಿಗಳಕಡೆ ಅವುಗಳ ನಕಲುಗಳನ್ನು ಕಳಿಸಬೇಕು. ಹೀಗೆ ಇಷ್ಟು ಬರೆದು ರಜಾ ತೆಗೆದುಕೊಳ್ಳುವೆನು.

ತಮ್ಮ,
ಮತದಾರಹಿತೇಚ್ಛು.

☞ ಬೇಕು. ಬೇಕು.

ಮಾಹಿತಿಯುಳ್ಳ ಗೌಡಸಾರಸ್ವತ ಅಡಿಗೆಯವನು ಬೇಕು. ಪಗಾರು ತಿಂಗಳಿಗೆ ೭ರಿಂದ ೮ ರ ವರೇಗೆ. ಸದರಿ ಕೆಲಸದ ಮಾಹಿತಿ ಇದ್ದ ಹೆಂಗಸಿಗೆ ತಿಂಗಳಿಗೆ ರೂಪಾಯಿ ೫ ರಿಂದ ೬ರ ವರೇಗೆ. ಲಾಯಕಿ ಪ್ರಕಾರ ಹೆಚ್ಚಿನ ಪಗಾರು. ತಾರೀಖು ೨೮-೩-೧೯೨೦.

ವಕೀಲ ಪುಂಡಲೀಕರಾವ ಪಂಡಿತ, ಶಿರ್ಸಿ.

ಕಾನಡಾವೃತ್ತ.

ಗುರುವಾರ, ತಾರೀಖು ೨೮ ಮಾಹೆ ಅಕ್ಟೋಬರ ೧೯೩೦

ಕಾಡಿನ ಸುರಾಜ್ಯ.

(ಲೇಖಾಂಕ ೨)

ಧೋರಣದ ಮೀಮಾಂಸೆ.

अम्भोदा बहवोहि सन्ति गगने सर्वेऽपि नैतादृशा ।
केचिद् वृष्टिभिरार्द्रयन्ति वसुधां गर्जन्ति केचिद् वृथा ॥

ಜಂಗಲ ಖಾತೆಯ ಹೊಸ ಧೋರಣದ ಮತಿತಾರ್ಥವನ್ನಷ್ಟು ಒಂದನೇ ಲೇಖಾಂಕದೊಳಗೆ ಹೇಳಿದೆವು. ಇಂದಿಗೆ ಅದರ ಚರ್ಚೆಯನ್ನು ಕೈಕೊಳ್ಳುವೆವು. ಕಾನಡಾ ಜಿಲ್ಲೆಯ ಬೇಸಾಯವು ಜಂಗಲ ಖಾತೆಯ ನಿರ್ಬಂಧನೆಗಳ ಮೂಲಕ, ಪ್ರಾಣಸಂಕಟವಾಗುವಷ್ಟು ತ್ರಾಸದಿಂದ ಬಳಲುತ್ತಿರುವಾಗ, ಈಗ ಕೊಡಮಾಡಿದ ಹಕ್ಕುಗಳಿಂದ, ಅದರ ತ್ರಾಸವು ಕಮಿಯಾಗುವದೆಂದು ಕೇಳಿದರೆ, ಭರ್ತೃಹರಿಕವಿಗಳ ನುಡಿಗಳಿಂದಲೇ ಯಥಾರ್ಥವಾಗಿ ಉತ್ತರಕೊಡಲಿಕ್ಕಾಗುವದು. ಆಕಾಶದಲ್ಲಿ ಬಹಳೇ ಮೋಡಗಳು ಕವಿಯುತ್ತಿರುವವು. ಎಲ್ಲ ಮೋಡಗಳು ಮಳೆಗರೆಯುತ್ತವೇನು? ಕೆಲವು ಮಾತ್ರ ವೃಷ್ಟಿಯನ್ನೀಯುವವು. ಹಲವು ಬರೆ ಗರ್ಜನೆಯನ್ನಷ್ಟು ಮಾಡುವವು. ಹೊಸ ಹುಕುಮಿನ ಗತಿಯು ಇಂಥ ಮೋಡಗಳಂತಾಗಿದೆ. ಇವುಗಳಿಂದ ಬೇಸಾಯಗಾರರ ಬಾಯಿಯೊಳಗೆ ಒಂದೆರಡು ಹನಿಗಳು ಸಹ ಬೀಳುವವೋ, ಇಲ್ಲವೋ! ಇವೆಲ್ಲ ಖಟಾಟೋಪದಿಂದ ಸರಕಾರದ ದಯೆಯ ಮೋಡಗಳು "ವೃಥಾ ಗರ್ಜಂತಿ" ಗೆ ಮಾತ್ರ ಕಾರಣವಾಗಿರುವವೆಂದು ಹೇಳಬೇಕಾಗಿದೆ. ಇಷ್ಟಾಗಿ, ಸರಕಾರದ ಹೊಸ ಸೂಚನೆಗಳು ತೀರ ಅಪೂರ್ಣವಾಗಿರುವವು, ಬಹಳೇ ನಿರಾಶಾಜನಕವಾಗಿರುವವು, ಅದಕ್ಕಾಗಿ ಅಗ್ರಾಹ್ಯವಾಗಿರುವವೆಂದು ಸರಕಾರಕ್ಕೆ ಸಾಫ ಸ್ಪಷ್ಟವಾಗಿ ತಿಳಿಸಬಯಸುವೆವು. ಕಾನಡಾ ಜಿಲ್ಲೆಯೊಳಗಿನ ಜನಸಂಖ್ಯೆಯು ವೃದ್ಧಿಂಗತವಾಗಬೇಕಾದರೆ, ಜಿಲ್ಲೆಯೊಳಗೆ ಅಪರಿಮಿತವಾಗಿ ಬೆಳೆದ ಅನಾರೋಗ್ಯದಿಂದ, ಆಗುವ ನಾಶವನ್ನು ತಡೆಯಬೇಕಾದರೆ, ಜಿಲ್ಲೆಯೊಳಗಿನ ಬೇಸಾಯದ ಸ್ಥಿತಿಯು ಮತ್ತೆ ಪೂರ್ವಕಾಲದಲ್ಲಿದ್ದ ಅದರ ಉನ್ನತಿಯನ್ನು ಹೊಂದಲಿದ್ದಾದರೂ, ಅದರ ಸಮೃದ್ಧಿಯೂ, ಅದಕ್ಕೆ ಪ್ರಾಪ್ತವಾಗಬೇಕಾದರೆ, ಇಂಥ 'ಹಾವು ಸಾಯಬಾರದು, ಕೋಲು ಮುರಿಯಬಾರದು.' ಎಂಬ ಅರೆಮನಸಿನ ಧೋರಣದಿಂದ ಎಂದೂ ಇಷ್ಟ ಪ್ರಾಪ್ತಿಯಾಗದು. ಇದರಿಂದ, ಆಗುವದೆಂಬುದು ಅಸಂತೋಷದ ಅತಿರೇಕವು ಮತ್ತು ಬೇಸಾಯದ ಅವನತಿಯಂಥ ಹಾನಿಯು. ಮೂಲೇ ಕುಠಾರದಂಥ ಘಟ್ಟ ಮತ್ತು ನ್ಯಾಯ್ಯ ಧೋರಣದಿಂದಲೇ ಇದನ್ನೆಲ್ಲ ಪರಿಹರಿಸಲಿಕ್ಕಾಗುವದು.

ಸರಕಾರವು ಸೂಚಿಸಿದ ಹೊಸ ಯೋಜನೆಯು ಸಕಾರಣವಾಗಿ ನಿರಾಶಾಜನಕವಾಗಿದೆ. ಬೇಸಾಯದ ಅವನತಿಯು ಮತ್ತು ಇಡೀ ಜಿಲ್ಲೆಗೆ ಉಂಟಾದ ಆಪತ್ತಿನ ಕಾರಣಗಳು ಎಷ್ಟು ಬುಡತನಕ ಸೇರಿರುವವು? ಅದರ ವ್ಯಾಪಕತೆ ಎಷ್ಟಿದೆ? ಬೇಸಾಯದ ಕೈಕಾಲುಗಳನ್ನು ಬಿಗಿಯಾಗಿ ಕಟ್ಟಿದ ಪಾಶಗಳಿಗೆ, ಒಂದಲ್ಲ, ಎರಡಲ್ಲ ನೂರಾರು ಗೆಣ್ಣುಗಳನ್ನು ಹ್ಯಾಗೆ ಹಾಕಿರುವರು. ಇವೆಲ್ಲ ಕಾರಣಮಾಲಿಕೆಯು ಗರ್ಭಿತವದೆ, ಸರಕಾರವು ಯಥಾರ್ಥವಾಗಿ ಗ್ರಹಿಸದೆ ಇಲ್ಲ. ಸ್ವಾರ್ಥದಿಂದ ಮತ್ತು ಪೂರ್ವಗ್ರಹಗಳಿಂದ ಜಂಗಲಖಾತೆಯ ಅಧಿಕಾರಿಗಳು ರಚಿಸಿಟ್ಟ, ತೀರ ನಿರಾಧಾರ ಸಿದ್ಧಾಂತಗಳ ಮೇಲೆ, ಯಾವದೇ ಕಟ್ಟೋಣವನ್ನು ಕಟ್ಟಿ, ಅದರೊಳಗೆ, ನೀವು ಮನೆಮಾಡಿ ನಿಲ್ಲಿರೆಂದು ಹೇಳಿದರೆ, ಅದರೊಳಗೆ ಪ್ರವೇಶಿಸಲಿಕ್ಕೆ ಒಪ್ಪುವರು? ನಮಗೆ ಜಸುಬಿನ ಮನೆಯು ಬೇಡ, ಗಟ್ಟಿಯಾದ, ವಿಶಾಲವಾದ ಸುಖಕರವಾದ ಮನೆಯು ಬೇಕೆಂದು ಬೇಸಾಯಗಾರರು ಪೂರ್ವಾನುಭವದಿಂದ ಹೇಳುವರು. ಅದಕ್ಕಾಗಿಯೇ ಹೊಸ ಯೋಜನೆಯು ಅವರಿಗೆ ಅಗ್ರಾಹ್ಯವಾಗಿದೆ. ಲಗುಬಗೆಯಿಂದ ಗೃಹಪ್ರವೇಶವನ್ನು ಮಾಡಬೇಕೆಂದು ಸೆಟ್ಲಮೆಂಟ ಆಫೀಸರರಿಂದ ಪ್ರತಿನಿಧಿಗಳನ್ನು ಕರೆಸಿದರೂ, ರೈತರೇನು ಇನ್ನು ಮರುಳಾಗರು. ಕಷ್ಟದ ಸೂಚಿ, ಹಜ್ಜೆಯನ್ನಿಡುವಷ್ಟು ಜಾಣತನವು ಜನರಲ್ಲಿದೆ. "ನಮಗೇನು ಬೇಕೆಂದು ಅಧಿಕಾರಿಗಳು ನಮಗೆಲ್ಲಿ ಕೇಳಿರುವರು? ಫಾರೆಸ್ಟ ಖಾತೆಯು ಕೊಡಲಿಕ್ಕೆ ಒಪ್ಪಿದಷ್ಟು ಮತ್ತು ರೆವಿನ್ಯೂ ಖಾತೆಯು ತಮ್ಮಷ್ಟಕ್ಕೆ ತಾವೇ ನಿರ್ಣಯಿಸಿ, ನಮಗೆ ಕೊಡಮಾಡಿದಷ್ಟು ನೀವು ನಮಗೆ ಕೊಡಲಿಕ್ಕೆ ಬಂದಿದ್ದೀರಿ" ನಮ್ಮ ಬೇಸಾಯದ ನಿರ್ವಾಹಕ್ಕೆ ಬೇಕಾಗುವಷ್ಟು ನಮ್ಮ ಮೂಲ ಹಕ್ಕುಗಳ ಪೂರ್ತಿಯಾಗುವಷ್ಟು, ನೀವೇನು ಕೊಡುವದಿಲ್ಲೆಂದು ರೈತರು ಸೆಟ್ಲಮೆಂಟ ಆಫೀಸರರಿಗೆ ಜವಾಬು ಹೇಳಿದರೆ, ಅವರೇನು ದೋಷಪಾತ್ರರಾಗಲಿಕ್ಕಿಲ್ಲ.

ಸದ್ಯಕ್ಕೆ ಈ ವಿಷಯದ ಚರ್ಚೆಯನ್ನು ತಾವು ಮಾಡಿದ್ದೇವೆಂದು, ಸರಕಾರವು ತಮ್ಮ ಹುಕುಮಿನಲ್ಲಿ ಹೇಳುತ್ತದೆ. ಚರ್ಚೆಯು ಎಲ್ಲಿ ನಡೆಯಿತು? ಯಾರಕೂಡ ನಡೆಯಿತು? ಇದರ ಗಂಧವಾರ್ತೆ ಸಹ ರೈತರಿಗಿಲ್ಲ. ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳಿಗೆ ರಿಪೋರ್ಟ ಮಾಡಿರೆಂದು, ಅಪ್ಪಣೆಮಾಡಿಸಿ ಕಮಿಶನರರಿಂದ ಮಾಮಲೇದಾರರ ತನಕ, ಹೇಳಾದರೆ, ಗ್ರಾಮಸ್ಥರ ತನಕ ಕಾಗದೀ ಕುದುರೆಗಳನ್ನು ಓಡ್ಯಾಡಿಸಿ, ಇದೆಲ್ಲ ವ್ಯವಹಾರಕ್ಕೆ ಬೇಸಾಯದ ಸ್ಥಿತಿಯ ಚರ್ಚೆಯೆಂದು ಸರಕಾರೀ ಭಾಷೆಯಲ್ಲಿ ಹೇಳುತ್ತಾಇದ್ದರೆ, ಹೇಳಿರಿ. ತಮ್ಮ ನಿಜವಾದ ಕೊರತೆಗಳ ಚರ್ಚೆಯು ಇದರೊಳಗಾಗಿದೆಂದು ರೈತರು ಮಾತ್ರ ಎಂದೂ ಹೇಳರು. ಇಂಥ ಚರ್ಚೆಯಿಂದ ಮಳೆಗರೆಯದ ಮೋಡಗಳು ನಿರ್ಮಿಸಲ್ಪಟ್ಟರೆ, ಸೋಜಿಗವೇನು? ಸಾಮಾನ್ಯ ಒಕ್ಕಲಿಗರ ಕೂಡ, ಇಲ್ಲವೆ, ಅವರ ಒಡೆಯರ ಕೂಡ, ಅವರ ನಿಜವಾದ ಕೊರತೆಗಳನ್ನು ಯಾರೂ ಕೇಳಿಲ್ಲ, ಮಾಡಿಲ್ಲ ಆದದ್ದಿದ್ದರೆ 'ಮಾಬಾಪ' ತನದ ಕಾಗದೀ ರಿಪೋರ್ಟುಗಳ ಚರ್ಚೆಯು, ಇಂಥ ಚರ್ಚೆಯಿಂದ ಹೊರಟ ನಿರ್ಣಯವು, ಪರಿಪೂರ್ಣವಾಗಿರುವದು ಹೇಗೆ? ರೈತರಿಗಾದರೂ, ಹೊಸ ಹಕ್ಕುಗಳು ಹ್ಯಾಗೆ ಗ್ರಾಹ್ಯವೆನಿಸುವವು? ರೋಗದ ಪರೀಕ್ಷೆಯೇ ಯಥಾರ್ಥವಾಗಿ ಆಗದಿದ್ದ ಮೇಲೆ, ಅದರ ನಿದಾನವು ತಪ್ಪುವದು ಸಹಜವು. ಚಿಕಿತ್ಸಕರು ಕೊಡಮಾಡಿದ ಔಷಧಿಗಳ ಯದ್ವಾತದ್ವಾ ಮಿಶ್ರಣವನ್ನು ಬಲಾತ್ಕಾರದಿಂದ ಕುಡಿಸಿದರೂ, ರೋಗಿಗೆ ರೋಗಪರಿಹಾರವೆಷ್ಟಾಗುವದು? ಇಂಥ ಮದ್ದು ಅಗ್ರಾಹ್ಯವಲ್ಲವೇ?

ಈಗಿನ ಹೊಸ ಧೋರಣವನ್ನು ನಿರ್ಣಯಿಸುವಾಗ, ಸರಕಾರದ ದೃಷ್ಟಿಯು ಜಂಗಲ ಖಾತೆಯ ನಿರಾಧಾರ ಪೂರ್ವಗ್ರಹಗಳಿಂದ, ಅದರ ಉತ್ಪನ್ನದ ಸ್ವಾರ್ಥದ ಮೋಹದಿಂದ, ಕಲುಷಿತವಾಗಿದೆಂದು ಹೇಳಿದರೆ, ತಪ್ಪಾಗುವದೇನು? ನಮ್ಮ ಸ್ಟೇಟ ಸೆಕ್ರೆಟರಿಗಳು ೧೮೬೫ನೇ ಇಸವಿಯಲ್ಲಿ ಜಂಗಲ ಧೋರಣದ ವಿಷಯವಾಗಿ ಒಂದು ಖಲಿತೆಯನ್ನು ಪ್ರಕಟಿಸಿದ್ದರು. ಈ ರಾಜಾಜ್ಞೆಯೊಳಗೆ "ಅಕ್ಕ ಸವತಿಯಾಗಬಾರದು, ಅಕ್ಕನ ಮಗಳು ಬಡವಾಗಬಾರದು" ಎಂಬ ತತ್ವದ ಮಂತ್ರೋಪದೇಶವಿದೆ. 'ಸ್ಥಾನಿಕ ಜನರ ಹಿತದ ದೃಷ್ಟಿಯಿಂದ ಮಾತ್ರವಲ್ಲ, ಎಲ್ಲ ಜನತೆಯ ಸಾರ್ವತ್ರಿಕ ಹಿತದ ದೃಷ್ಟಿಯಿಂದ, ಜಂಗಲುಗಳನ್ನು ಕಾಪಾಡಬೇಕೆಂದು,' ೬೦ ವರುಷಗಳ ಹಿಂದೆ ಕೊಟ್ಟ ಉಪದೇಶವಿದು. ಅದರ ನಂತರ ೧೮೯೧ನೇ ಇಸವಿಯಲ್ಲಿ, [illegible], ೧೮೯೪ ರಲ್ಲಿ, ಹಿಂದುಸ್ಥಾನ ಸರಕಾರದ ಸಂಕಲ್ಪಗಳ ಪ್ರಸಾರ ಪುನರುಚ್ಚಾರಣೆಯು ಎಷ್ಟೋ ಸಾರೆ ಆಗಿರುವದು. ೧೮೯೪ನೇ ಇಸವಿಯ ಹಿಂದುಸ್ಥಾನ ಸರಕಾರದ ರಿಜೊಲ್ಯೂಶನದೊಳಗೆ "ಕಾಡಿನ ಸಂರಕ್ಷಣೆಗಿಂತ, ಬೇಸಾಯಕ್ಕೇನು ಬೇಕೆಂದು ನೋಡಿ, ಅದರ ಬೇಡಿಕೆಗಳನ್ನು ಪೂರೈಸುವದೇ ಪ್ರಧಾನ ಕರ್ತವ್ಯವೆಂದು" ಸರಕಾರವೇ ಹೇಳಿದೆ. ೧೮೯೪ನೇ ಇಸವಿಯಲ್ಲಿ "ಕಾಡೆಂಬುದು ಬೇಸಾಯದ ತೊತ್ತಾಗಿರುವದು; ಒಕ್ಕಲಿಗರ ಬಾಬ ಎಲ್ಲ ಹಕ್ಕು

ಗಳನ್ನು (Rights of user) ಆಧರಿಸಲೇ ಬೇಕು" ಎಂದು, ಅವಾವಿಸ್ ಇತ್ಯರ್ಥವು ಸಾಗುತ್ತಿದೆ. ಇವೆಲ್ಲ ಅಭಾವಗಳನ್ನು ಮರೆತು, ೧೯೩೧ನೇ ಇಸವಿಯ ಖಲಿತೆಯನ್ನು ಸರಕಾರವು ಹುಡುಕಿ ತೆಗೆದು, ನಮ್ಮ ಮುಂದೆ ಎತ್ತಿ ಹಿಡಿಯುತ್ತದೆಂದರೆ, ಸರಕಾರವು ಜಂಗಲಖಾತೆಯ ವಕಾಲತನ್ನು ನಡಿಸುತ್ತಿದೆ, ಸ್ವತಂತ್ರ ನ್ಯಾಯಾಧೀಶನವನ್ನು ನಡಿಸುವದಿಲ್ಲೆಂದು, ಜನರು ಸಕಾರಣ ಪ್ರತಿಪಾದಿಸುವರು. ವಕೀಲರು ತಮ್ಮ ಪಕ್ಷಗಾರರ 'ಕೇಸ'ನ್ನು ಹ್ಯಾಗೆ ಸಮರ್ಥಿಸುತ್ತಾರೆಂದು ನೋಡಿರಿ "ಬೆಟ್ಟ ಹುಟ್ಟಿತು, ವೇಸಾಯವು ಕುಗ್ಗಿತು' ಎಂದು ಒಪ್ಪಿ, ಫಾರೆಸ್ಟ ಸೆಟ್ಲಮೆಂಟದ ಇದೊಂದು ಸಾಹಜಿಕ ಪರಿಣಾಮವೆಂದೂ, ರೈತರ ಹಕ್ಕುಗಳ ಸ್ವಾತಂತ್ರ್ಯದ ನಿಯಮಬದ್ಧತೆಯು ಇದೆಂದೂ, ಹೊಸ ಹುಕುಮಿನ ಅನೇಕ ಕಲಮು ಸಮರ್ಥಿಸುತ್ತದೆ. ಇದೆಲ್ಲ ವಕೀಲಿ ಚಳವಳಿಯಲ್ಲದೆ, ಮತ್ತೇನು? ಜನಸಂಖ್ಯೆಯು ಕಡಿಮೆಯಾದದ್ದರ ಸಮರ್ಥನೆಯೂ, ತೀರ ಅಸಮಾಧಾನಕರವದೆ. ಬೆಟ್ಟದ ಜಿಲ್ಲೆಯ ನೈಸರ್ಗಿಕ ಅನಾರೋಗ್ಯದಿಂದಲೇ ಜನರು ಪ್ರಾಣಬಿಡುತ್ತಾರಾದರೆ, ಮತ್ತು ಜನಕ್ಷಯವನ್ನು ತಪ್ಪಿಸಲಿಕ್ಕಾಗದಿದ್ದರೆ, ಯಾರಾದರೂ ಕಣ್ಣೀರು ಸುರಿಸುವದೇಕೆ? ಬೆಟ್ಟಗಳ ಸಂಪತ್ತು ಬೇಕೆಂದು, ಜನರು ಬೇಡ, ಎಂಬ ಧೋರಣವು ತೀರ ನಿರಾಶಾಜನಕವಲ್ಲದೆ, ಮತ್ತೇನು? ಇಂಥ ಸಿದ್ಧಾಂತಗಳನ್ನು ಸಮರ್ಥಿಸುವದು ವಕೀಲರಿಂದಲ್ಲದೆ, ನ್ಯಾಯಾಧೀಶರಿಂದಾಗದು. ಇರಲಿ.

ರೈತರಿಗೆ ಬೇಕಾದದ್ದು ನ್ಯಾಯವು, ಮತ್ತಿಷ್ಟು ಕೊಡಲಿಕ್ಕಾದರೆ, ದಯೆಯು. ಅದಕ್ಕಾಗಿ ಜನರು ನ್ಯಾಯಾಧೀಶರ ನಿರ್ಣಯಗಳ ಹಾದಿ ಕಾಯುತ್ತಿದ್ದರು. ಅದರ ಬದಲಾಗಿ, ಅವರಿಗೆ, ನ್ಯಾಯಾಧೀಶರೇ ವಕೀಲರಾದಂತೆ, ವಕೀಲಿ ಸಮರ್ಥನೆಗಳಿಂದ ತುಂಬಿದ, ಹಿಡಿ-ಬಿಡು ಧೋರಣದ ನಿರ್ಣಯಗಳನ್ನು ಹೊಸ ಹುಕುಮು ಕೊಡುವದಾಗಿದೆ. ಹೊಸದಾಗಿ ಸಿಗುವ ಹಕ್ಕುಗಳು ಮನುಷ್ಯನನ್ನು ವಂಚಿಸುವ ಮೋಹಗಳೆಂದು ಹೇಳಿದರೆ, ತಪ್ಪಾಗದು. ಅವುಗಳಿಂದ ಸುಳಿಯಾಗುವದೆಂದು ನಂಬಿಗೆಯಾಗದು. ಸದ್ಯಕ್ಕೆ ಮಾತ್ರ ವೃಥಾ ಗರ್ಜನೆಯಷ್ಟಾಗಿದೆ. ಇದನ್ನೆಲ್ಲ ಅರಿತು, ಲೋಕಮತವು ಎಷ್ಟು ನಿರಾಶೆಯೊಳಗೆ, ಎಷ್ಟು ಅಸಂತೋಷದೊಳಗೆ ಸಾಗುತ್ತ ನಡೆದಿದೆಂದು, ಸರಕಾರವು ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುತ್ತಿರಲಿ. ಭಿಕ್ಷಾಂದೇಹಿ ವೃತ್ತಿಯನ್ನು ದೂರಸಾರಿ, ನವಯುಗದೊಳಗಣ ಸ್ವಾಭಿಮಾನದಿಂದ ಜನ ನುಡಿಯಹತ್ತಿದ್ದೇನಂದರೆ—

यं यं पश्यसि तस्य तस्य पुरतः ।
मा ब्रूहि दीनं वचः ॥

ಸ್ಫುಟ ಸೂಚನೆಗಳು.

ಸದ್ಯಕ್ಕೆ ಎತ್ತ ನೋಡಿದತ್ತ ಕೆಳ ತರಗತಿಯ ನೌಕರರ ಸಂಪುಗಳೇ ಸಂಪುಗಳು. ಮುಂಬಯಿಯೊಳಗೆ ಟಪಾಲು ಶಿಪಾಯಿಗಳ ಸಂಪು ಎಷ್ಟು ತಿಂಗಳು ನಡೆಯುತ್ತಿದೆ. ಖಾಸಗಿ ಪತ್ರಗಳೂ, ವೃತ್ತಪತ್ರಗಳೂ, ಪರ ಊರಿನಿಂದ ಮುಂಬಯಿ ನಿವಾಸಿಗಳ ಕೈಗೆ ಹ್ಯಾಗೆ ಸೇರುತ್ತವೋ, ಏನೋ. ಗ್ಯಾಸ ಕಂಪನಿಯ ಸಂಪು, ಟ್ರಾಮವೇ ಸಂಪು, ಬಂಗಾಲದ ಸಂಪು, ರೇಲ್ವೆ ಸಂಪು ಹೀಗೆಲ್ಲ ತಮ್ಮ ವೃತ್ತಿಯನ್ನು ಬಿಟ್ಟು, ಬಡ ನೌಕರರು ಉದರನಿರ್ವಾಹಕ್ಕಾಗಿ ಅಸಹಕಾರಿತೆಯನ್ನು ಆಧರಿಸಿ, ತಮ್ಮ ಬರೆ ಹೊಟ್ಟೆಯ ಹಕ್ಕುಗಳಿಗಾಗಿ ಬಡಿದಾಡುತ್ತಿರುವರು. ಸರಕಾರಿ ನೌಕರರೊಳಗೂ ಈ ಬೇನೆಯು ಸೋಂಕು ಕಡಿಮೆ ಪಗಾರದ ನೌಕರರಿಗೆ ತಗಲುತ್ತಿದೆಂದು ತೋರುತ್ತದೆ. ರತ್ನಾಗಿರಿಯ ಕ್ಕಾನ ಭೋಗಿಗರು ದಸ್ತರಗಳನ್ನು ಕಟ್ಟಿಟ್ಟಿರುವರು. ಪಟನ ದಾರವಾಡ ಇತರ ಜಿಲ್ಲೆಯ ಕುಲಕರ್ಣಿಗಳು ತಮ್ಮ ದಸ್ತರದೊಳಗೆ ಕೈಹಾಕುವಾಗ, ಮೊದಲಿನಷ್ಟು ಉತ್ಸುಕತೆಯಿಂದ, ಕರ್ತವ್ಯದಕ್ಷತೆಯಿಂದ, ಕೈಹಾಕುವದಿಲ್ಲೆಂದು ಸಾಮಾನ್ಯವಾಗಿ ಹೇಳಬಹುದು. ಅವರೊಳಗೂ ಅಸಂತೋಷವು ಬುದಬುದಕ್ಕೆ ಸೇರುತ್ತದೆಂದು ಹೇಳುವದೇ ತಾತ್ಪರ್ಯವು. ಮಾಮಲೇದಾರರಾದರೂ ತಮ್ಮ ಪಗಾರದ ಸ್ಕೇಲಿನಿಂದ ಎಷ್ಟು ಸಂತುಷ್ಟರಾಗಿದ್ದಾರೆ? ಮಿ. ವೀಡ ಸಾಹೇಬರು ಅವರ ಡೆಪ್ಯುಟೇಶನಕ್ಕೆ ನಿಷ್ಠುರತೆಯಿಂದ ಜಗ್ಗಿ ಹೊಡೆಯಲಿಲ್ಲೇನು? ಶಾಲಾ ಮಾಸ್ತರರ ಸಂಬಳದ ಪ್ರಶ್ನೆಯನ್ನು ಮೊನ್ನಿನ ೨೩ನೇ ತಾರೀಖಿನಿಂದ ಒಂದು ಕಮಿಟಿಯೇ ವಿಚಾರಿಸುತ್ತಿದೆ. ಸಂಕ ಮುರಿದಾಗ ಸ್ನಾನ ಮಾಡಿಕೊಳ್ಳಬೇಕೆಂಬದನ್ನು ನೆನಿಸಿ, ಇತರರು ತಮ್ಮ ತಮ್ಮ ಸ್ನಾನಕ್ಕೆ ಸಿದ್ಧರಾಗಿರುವರು. ಅಸಿಸ್ಟಂಟ ಇಂಜಿನಿಯರಿಗಂತೂ, ಕೈಗೆ ಬಂದ ಬಡತಿ ಪಗಾರವನ್ನು ಅವೇ ಕೈಗಳಿಂದ ತಿರುಗಿ ಕೊಡುವ ಹುಕುಮಾಗಿದೆ. ಕುದುರೆಯನ್ನು ಮಾರಿಕೊಂಡ, ಅದನ್ನು ಅರೆ ಹಣ ಮಾಡಿ ತಿಂದವರು ಹೆಚ್ಚು ಇರುವವರೊಳಗೆ, ಕೆಲಗಿಳಿದ ಕುದುರೆಗೆ ಸಲಾಮು ಹೊಡೆದು, ಪುನಃ ಕಾಲಿನಿಂದಲೇ ಮೋರೆ ಕೆಳಗೆ ಮಾಡಿ ನಡೆಯುವ ಪ್ರಸಕ್ತಿಯಿದು. ದುರ್ಹರ್ಷತೆಯ ಪ್ರತಾಪವೆಷ್ಟು ನೋಡಿರಿ! ಸರಕಾರೀ ಗಾರ್ನಿಶಿನ ವಸ್ತುವಿನ ಹುಕುಮು, ರದ್ದೀ ಕಾಗದವಾಗಿ ಬೀಳುವಷ್ಟು ಕೋಟಾಲೆಯ ಬಾಜಾರು ಈ ದುರ್ಹರ್ಷತೆಯೇ ಹುಟ್ಟಿಸುವದು ಅಂತೂ ಇಂತೂ ಸರಕಾರದ ಮತ್ತು ವ್ಯಾಪಾರೀ ಸಾವುಕಾರರ ತಿಜೋರಿಗಳೊಳಗಿನ ಡಬ್ಬಿ ಭಂಗಾರವು ಹಿಡಿದ್ಯಾಗಿ, ಕುದಿಯುತ್ತಿದೆಂಬುದು ನಿಜವು. ಚಂಚಲತೆಯು ಸಂಭಾವಿಸು. ಮತ್ತೇನು?

---

೨ ಈ ಆಪತ್ತಿಯ ನಿವಾರಣೆಗೆ ಉಪಾಯವಿಲ್ಲೇನು? ಉಪಾಯವಿದೆ, ಒಂದಲ್ಲ, ಎರಡು ಉಪಾಯಗಳಿದ್ದಾವೆ "ಅರ್ಥಮನರ್ಥಂ ಭಾವಯ ನಿತ್ಯಂ, ನಾಸ್ತಿ ತತಃ ಸುಖಲೇಶಃ ಸತ್ಯಂ" ಎಂದು ವೈರಾಗ್ಯೋಪದೇಶವನ್ನು ಮಾಡುವ ಉಪಾಯವೊಂದಿದೆ. ಆದರೆ, ಇಂಥ ಉಪದೇಶವನ್ನು ಕೊಡುವವರು ಬರೇ ಗಡ್ಡ ವಿಶಾನೆಗಳನ್ನು ಬೋಳಿಸಿಕೊಂಡು ಸಾಲದು. ಶಂಕರಾಚಾರ್ಯರಂತೆ ಸ್ವತಃ ಸನ್ಯಾಸದೀಕ್ಷೆಯನ್ನು ತಕ್ಕೊಂಡು, ತ್ಯಾಗಧರ್ಮವನ್ನು ಮೊದಲೇ ಆಚರಿಸಿ, ತೋರಿಸಬೇಕಲ್ಲವೇ? ಇದರ ತೀರ ವಿಪರೀತ ವೃತ್ತಿಯನ್ನು ಧರಿಸಿದವರು, ಸ್ವತಃ ತಮ್ಮ ಸಂಸಾರವನ್ನು ಚಕ್ರಬಡ್ಡಿಯಿಂದ ಬೆಳಿಸಿಕೊಳ್ಳಲಿಕ್ಕೆ ತತ್ಪರರಿದ್ದವರು, ಪರರಿಗೆ ವಿರಕ್ತಿಯನ್ನು, ಯಾವ ಬಾಯಿಯಿಂದ ಉಪದೇಶಿಸುವರು? ಹೀಗಾಗಿ ಈ ಉಪಾಯವು ಅಶಕ್ಯವಾಗಿದೆ. ಇನ್ನು ಬಾಕಿ ಮತ್ತೊಂದು ಉಪಾಯವು ಉಳಿದದೆ ಸಾವುಕಾರರು ಒಂದೇ ಅಕವಡ ಗುಮಾಸ್ತರಾಗಿ, ಇಲ್ಲವೇ ಶಿಪಾಯಿಗಳಾಗಿ, ಇಷ್ಟೇ ಪಗಾರದಲ್ಲಿ ಅವರಂತೇ ನಿರ್ವಾಹ ಮಾಡಿ ತೋರುವದು; ಕಲೆಕ್ಟರರಾಗಲಿ, ಡೆ| ಕಲೆಕ್ಟರರಾಗಲಿ, ಒಂದೇ ತಿಂಗಳು ಗ್ರಾಮಸ್ಥರ ದಸ್ತರವನ್ನು ತಕ್ಕೊಂಡು, ಅನುಭವಕ್ಕೆಂದು ಸ್ವಲ್ಪ ಕಷ್ಟ ಸಹಿಸಿ, ತೀರ ಕೃಪಣರಾಗಿ ಹಿಂದಿನ ನೌಕರರಂತೆ ಸಂಸಾರ ಮಾಡಿ ತೋರುವದು; ಎ| ಇನಸ್ಪೆಕ್ಟರರು, ಒಂದೆರಡು ತಿಂಗಳು ಹಳ್ಳಿ ಶಾಲೆಯ ಮಾಸ್ತರರಾಗಿ, III ವರ್ಷದ ಸ್ಕೇಲ ಪಗಾರದಿಂದ — ಅಸಿಸ್ಟಂಟರ ಸಂಬಳದಿಂದಲ್ಲ— ಹ್ಯಾಗೆ ಬಾಳಿರಲಿಕ್ಕಾಗುತ್ತದೆಂದು ಉದಾಹರಣೆಯಿಂದ ತೋರಿಸುವದು. ಸ್ವತಃ ಅನುಭವವನ್ನು ಕೊಂಡುಕೊಳಹತ್ತಿದರೆ, ಈ ಅಧಿಕಾರಿಗಳ ಆಸಗು ಕೌನ್ಸಿಲದಲ್ಲಾಗಲಿ, — ಪಾರ್ಲಿಮೆಂಟದಲ್ಲಿ ಸಹ, ಹೇಳಿಬಂದ ಹೊರತು ಇರದು ಕಡೆಗೆ ಜಡತಿ ಸ್ಕೇಲು ಮುಂದೂಡಾಗಲಿಕ್ಕೆ ವಿಲಂಬವಾಗದು. ದಯಾಶೀಲರಾದ ವರಿಷ್ಠರು ತಮ್ಮ ದೊಡ್ಡ ದೊಡ್ಡ ಅಂಕಗಳ ಬಡತಿಗಳನ್ನು ತ್ಯಾಗಮಾಡಿ, ಬಡ ನೌಕರರಿಗೆ ಹೊಟ್ಟೆತುಂಬ ಬಡಿಸಿ, ಪಾತ್ರೆಯೊಳಗೆ ಅನ್ನ ಶಿಲಕು ಉಳಿದರೆ, ತಾವೆರಡು ತುತ್ತು ಉಣ್ಣುವರು. ನಿಜಕ್ಕೆ ಶಿವನ ರಿಂಯವೆ, ಹಾಗಿನಂತೆ, ತಾವೆಲ್ಲ ಉಪವಾಸ, ಅರೆಹೊಟ್ಟೆಯವರಿಗೆ, ಉಪೋಷಣ ಮಾಡಿಸರು. ಇದೊಂದು ನಮ್ಮ ನಂಬಿಗೆಯು. ಇದು ನಿಜವೋ, ಸುಳ್ಳೋ, ಸರಕಾರವೇ ಹೇಳಲಿ.

---

೩. ಕೈಲಾಸವಾಸಿ. ಪುಣ್ಯಾತ್ಮಗಳಿಗೆ ವೃತ್ತಸ್ಥರ ಸಾಯದಂತೆ ಸಲಹಕ್ಕ ಸಾಲವನ್ನು ತೀರಿಸದಿರುವದು ವೃತ್ತಪತ್ರಿಕೆಗಳ ಕೈಯಿಂದಾಗುವದೊಂದು ಅಕ್ಷಮ್ಯ ಅಪರಾಧವೇ. ಬರೇ ವಿಸ್ಮೃತಿಯ ಸ್ಖಲನದಿಂದ, ಇಂಥಾದೊಂದು ಅಪರಾಧಕ್ಕೆ ನಾವು ಗುರಿಯಾಗಿದ್ದೇವೆ. ಈ ಸಾಲಕ್ಕೆ ಅವಧಿಯಬಾಧಕವು ತಟ್ಟುವದಿಲ್ಲವಾದರೂ, ಹೃದಯಿಂದ ಇಂದಿಗೆ ಅದನ್ನು ನಮಗೆ ತೀರಿಸಬೇಕಾಗಿದೆ. ವಿಖ್ಯಾತ ಸುಧಾರಕರೂ, ಕರ್ತವ್ಯನಿಷ್ಠ ಸಮಾಜಸೇವಕರೂ, ಆದ, ರಾ| ಆನಂದರಾವ ಸದಾಶಿವ ವಾಘರವರು, ಕಳೆದ ತಿಂಗಳಲ್ಲಿ ಸ್ವರ್ಗಸ್ಥರಾದರೆಂಬ ಅತಿದುಃಖದ ವಾರ್ತೆಯು ನಮ್ಮ ರಿಕಾರ್ಡಿನೊಳಗೆ ಗೊತ್ತಿಲ್ಲದೆ, ಅಡಿಕೊಂಡು ಕೂತಿತ್ತು. ಅದನ್ನು ಮೊನ್ನೆ ತೆರೆದು ನೋಡಲು, ಅವರ ದೀರ್ಘಾವಧಿಯ ನಿಟ್ಟುಸಿರುಗಳಿಂದ ನಮ್ಮ ದುಃಖವು ದ್ವಿಗುಣಿತವಾಗಿದೆ. ಸಾಮಾಜಿಕ ಸುಧಾರಣೆಯಲ್ಲಿ ಅತಿ ತೋರಿಸುವದಕ್ಕಿಂತ, ಮಾಡಿತೋರಿಸುವದು ಶ್ರೇಯಸ್ಕರವೆಂದು, ಆಚರಣೆಯಿಂದ ಮನಗಾಣಿಸುವ ಸದಾಚಾರಿ ಸುಧಾರಕರೊಳಗೆ ಇವರೊಬ್ಬರಾಗಿದ್ದರು. ಇವರ ಸ್ವಭಾವವು ಶಾಂತ, ವಿನಯಶೀಲವಿದ್ದಷ್ಟು 'ಪರೋಪಕಾರಿಯಾಗಿತ್ತು. ಇಡೀ ದಿವಸ ಸಮಾಜಸೇವೆಗಾಗಿ, (*Social service League*) ಸೇವಾಸಂಸ್ಥೆಯಲ್ಲಿ ಹಣಗುತ್ತ ಅತ್ಯಗೌರವದ ಅಭಿಲಾಷೆಯನ್ನು ಹಿಡಿಯದೆ, ಶಾರೀರಿಕ ಕಷ್ಟಗಳನ್ನು ಲೆಕ್ಕಿಸದೆ, ತಮ್ಮ ಇಹಲೋಕದ ಕರ್ತವ್ಯಗಳನ್ನು ಇವರು ಮನಃಪೂರ್ವಕ ನಡುಗಿಸುತ್ತಿದ್ದರು. ಮುಂಬಯಿಯೊಳಗಿನ ಸಮಾಜಸೇವಕರೊಳಗೆ ಇವರೊಬ್ಬ ಅಗ್ರಗಣ್ಯರಿದ್ದರೆಂದು ಯಥಾರ್ಥವಾಗಿ ಹೇಳಬಹುದು. ಲೋ

ಕ ಸೇವೆಯೊಳಗೆ, ಅತಿ ಪರಿಶ್ರಮದಿಂದ, ಇವರು ದೇಶ ಯಜ್ಞವನ್ನು ಮಾಡಿದರೆಂದು ಹೇಳಿದರೂ ಸಲ್ಲಬಹುದು. ಇಂಥ ಲೋಕೋಪಕಾರಿ ಗೃಹಸ್ಥರು ಅಕಾಲಕ್ಕೆ ಕಾಲಾಧೀನರಾಗುವದು ಸಮಾಜದ ದುರ್ದೈವವು. ಅವರ ನಿಧನದಿಂದುಂಟಾದ ಹಾನಿಯು "ಸೇವಾ ಸಂಸ್ಥೆಗೆ" ದೀರ್ಘಕಾಲ ತೋರುವದು. ಉಪಾಯವಿಲ್ಲ. ಈಶೇಚ್ಛಾ ಬಲೀಯಸೀ.

ಇಹವೃತ್ತ.

ಕುಮಟಾ— ಮಳೆಯು ಇನ್ನೂ [illegible] ಇಂಚು ಆಯಿತು. ಈ ವಾರದಲ್ಲಿ [illegible] ಇಲ್ಲ ಎಲ್ಲ ತರದ ರೋಗರಾಯಿ ಹೊರತು ಜನಗಳ ರೋಗ [illegible] ಬಂದಿದೆ [illegible] ಕೆಲಸ [illegible] ನಡೆದಿದೆ.

ಕಳೆದ ವಿಜಯಾ ದಶಮಿಯ ದಿನ, ಶ್ರೀಮನ್ ಮಧ್ವಜಯಂತಿ ಉತ್ಸವವೂ, ಬ್ರಾಹ್ಮಣ ಸಂತರ್ಪಣೆ ಮತ್ತು ರಾತ್ರಿ ಪ್ರಾಣಿಹಿಂಸೆ ನಿಷೇಧದ ವ್ಯಾಖ್ಯಾನಗಳಾದವು, ಪ್ರತಿಪಕ್ಷದ ಮಂಡಣೆಯೂ ಆಯಿತಂತೆ. [illegible] ಪರಿಣಾಮವೇನು ಆದದ್ದು. "[illegible] ಉಪರೂ [illegible] ದೇವಸ್ಥಾನದಲ್ಲಿ [illegible] ಬಲಿಯಾಗಿ, ಕುಂಬಳಕಾಯಿಯು ಸಮರ್ಪಣೆಯಾಯಿತಂತೆ! ಅದರೆ, ಆ "ಶಕ್ತಿ" ಯು ಉದಾರವಾಗಿ, ಇವರಿಂದಲೇ ಸಂತುಷ್ಟವಾಯಿತೋ, ಅಥವಾ ಮುಂದಿನ ವರ್ಷ ತನ್ನ ಆಹಾರವನ್ನು ಚಕ್ರಬಡ್ಡಿಯಿಂದ ವಸೂಲ ಮಾಡುತ್ತದೋ ನೋಡುವ.

ಈ ತಾಲೂಕ ಶ್ಯಾನಭಾಗ ಸಂಘದ ಸಭೆಗೂಡಿ, [illegible] "ಪ್ರತಿಕಾರಿ ನಡೆಸದೆಂದು ತಿಳಿಯುತ್ತದೆ. ಹೊನ್ನಾವರದಲ್ಲಿ ದಶಂಬರ ನಾತಾಳಿ ರಜೆಯಲ್ಲಿ ಕೂಡುವ ಅವರ ಜಿಲ್ಲಾ ಪರಿಷತ್ತಿನ [illegible] ಅವರ ಸಾಂಗ್ರತೆ ಮಾತಜೋಡಿಸುವರಂತೆ!

ಜಂಗಲ ಖಾತೆಯ ಗಾರ್ಡರೂ ಸಹ, ನಾಳಿನ ೩೧ ನೇ ತಾರೀಕಿಗೆ ಹೊನ್ನಾವರದಲ್ಲಿ ಒಟ್ಟಾಗಿ, ತಮ್ಮ ಪಗಾರ ಬಡತಿಯ ವಿಷಯ ವಿಚಾರಮಾಡಬೇಕೆಂದು ಹೊರಟಿರುವರು. ಆದರೆ, ಕೆಲವು ಮೂರೋ, ನೂರಂಗಟ್ಟೆ ಪಗಾರಿನ ಮೇಲಾಧಿಕಾರಿಗಳು, ಕೋಳಿಗಳನ್ನೆಲ್ಲ ಬಿಟ್ಟಿಟ್ಟು, ಬೆಳಗಾಗುವದನ್ನು ತಡೆಯಬೇಕೆಂಬ ವಿಚಾರದಲ್ಲಿರುವರಂತೆ! ನೋಡುವ, ಬೆಳಗಾಗ ತ್ತದೋ, ಇಲ್ಲೋ!

ನವರಾತ್ರಿಯ ನಿಮಿತ್ತದ ಇಲ್ಲಿಯ, ದೇವಸ್ಥಾನಗಳಲ್ಲಾಗುವ ದೇವಕಾರ್ಯಗಳು, ನಿನ್ನೆ ಹುಣ್ಣಿಮೆಯ ಗ್ರಹಣದ ದೆಸೆಯಿಂದ, ನಾಳೆಗೆ ಇಟ್ಟಿರುವರು.

ಇಲ್ಲಿಯ ಅರ್ಬನ ಕ್ರೆಡಿಟ ಸೊಸಾಯಟಿಯ ಜನರಲ ಸಭೆಯು ಕಳೆದ [illegible] ನೇಗೆ ಕೂಡಿತು. ಎರಡು ಸಾವಿರ ರೂಪಾಯಿಗಳ ಜಾಮೀನಿನಮೇಲೆ ಎರಡು ವರ್ಷಗಳವರೆಗೆ, ಗರೀಬ ಜನ ಹಾಗೆ [illegible] ದೇಸಿ ನಡಿಸಲಿಕ್ಕೂ, ಮುಂಬಯಿ [illegible] ನಿಯಲ ಬ್ಯಾಂಕಿನಮೇಲೆ ಹುಂಡಿ ವ್ಯವಹಾರ ನಡೆಸಲಿಕ್ಕೂ [illegible] ರಕಮು ಒಂದು ಸಾವಿರದ ಬದಲಾಗಿ, ಎರಡು ಸಾವಿರ ವರಿಯುತರ ಕೊಡಲಿಕ್ಕೂ, ಸರಕಾರಿ [illegible] ವಾರದೊಂದಿಗಳಮೇಲೆ ಬಾಜಾರ ಧಾರಣೆಗೆ ತಕ್ಕ ಸಾಲ ಕೊಡಲಿಕ್ಕೂ ಠರಾವಾದ [illegible] ಗಿ, ಮಿನಿಟು ಸಿಗದೆ, ಕಾರ್ಯದರ್ಶಿಗಳಿಂದ ತಿಳಿಯುತ್ತದೆ. [illegible] ಮೇಲೆ, [illegible] ನಲ್ಲಿ ಬರುವದು

ಉತ್ತರಕಡೆಗೆ ಮುಂಬಯಿಯಿಂದ ವಾರಕ್ಕೆ ಎರಡಾವರ್ತಿ, ಒನ್ಮೆ ವಸ್ಸಾಲಿನ ದೊಡ್ಡ ಬೋಟು, ಒನ್ನೆ ಬಸೇ ಪ್ರಮಾಣಿಕರ ಸೋಯಿಯ ಸಣ್ಣ ಬೋಟು ೨[illegible] ದುವ ಉಪಕ್ರಮವು ಸ್ತುತ್ಯವಾದದ್ದು. ಆದರೆ, ಮುಂಬಯಿಯ ಸಂಪುಗಳ ಮೂಲಕ, ವಿಶೇಷವಾಗಿ, [illegible] ಲ ಸಂಬಂಧ ಮೂಲಕ, ಇಲ್ಲಿಯ ವ್ಯಾಪಾರಿ ಜನರು ಕಂಗೆಟ್ಟು ಹೋಗಿರುವರು.

ಗೋಕರ್ಣ ತ್ರೈಮಾಸಿಕ ದ [illegible] ಯು ಈಗ ಅಪ್ಪ್ರಮಾಸಿಕವಾದದ್ದು, ಪ್ರಾತಿನಿಧಿಕ ತತ್ವದಮೇಲೆ ಯಾದರೆ, ಒಪ್ಪ ಬಹುದಲ್ಲದೆ, ಸರಕಾರದಿಂದ [illegible] ವರೆ ತಮಗೆ ಬೇಡವೆಂದು ಒಂದು ಮನವಿಯು ಸರಕಾರಕ್ಕೆ ಹೋಗಿಯದೆಂಬ ಸುದ್ದಿ ಇದೆ ನಿಜವಾದರೆ ಸ್ತುತ್ಯವು.

ಜಾವಾ ಕಾಂಗ್ರೆಸದ ಠರಾವಿಗನುಸರಿಸಿ, ಜನರನ್ನು ಈ ತತ್ವಕ್ಕೆ ಎಚ್ಚರಿಸುವ ದೊಡ್ಡ ದೊಡ್ಡ ಜಾಹೀರಾತುಗಳನ್ನು ಸ್ವರಾಜ್ಯ ಸಂಘದ ವತಿಯಿಂದ ಗೋಕರ್ಣದಲ್ಲಿ ಗೋಡೆಗಳಿಗೆ ಅಂಟಿಸಿದ್ದು, ಹರಿದು ತೆಗೆಯಲಿಕ್ಕೆ ಮಾಡಿದ ಪ್ರಯತ್ನವು ಗಡಚು ಅಂಟಿನಿಂದ ನಿಷ್ಫಲವಾಯಿತು! ಈ ಪುಣ್ಯಾತ್ಮರು ಯಾರವು

ಸುಪಾ— [illegible] ಇಲ್ಲ ಮೊಹಗಳು [illegible] ಗುತ್ತವೆ ಇಲ್ಲಿಯ ಕಾಂಗ್ರೆಸ [illegible] ಗನುಸರಿಸಿ ಶ್ರೀ ಎನ್ ಡಿ ಸುಂಕ್ಷನಕರ ಮತ್ತು ಜಿ ಎನ್ [illegible] ಯವರು ತಮ್ಮ [illegible] ಮಾನೆಸುವಾರಿದ [illegible] ರಾಗಿ [illegible] ದಿಂದ, ಈ ಕೆಲಸ ಮಾಡ [illegible] ಸ್ಥಾನಿಕ ಅಧಿಕಾರಿಗಳಿಗೆ ತಿಳಿಸಿರುವರ

[illegible] ತಮಿಯುಲ್ಲಿರುವರು [illegible] ಪಂಚರ [illegible] ಸರಕಾರದ [illegible] ಇದೆ

ಹೊನ್ನಾವರ— [illegible] ಮೇಲಿಂದ [illegible] ದಕ್ಕೆ [illegible] ಮೇಲಿಂದ ಆ [illegible] ದಶಕ್ಕೆ [illegible] ಪ್ರವಾಸಿಕರ ಕಡೆಯಿಂದ [illegible] ದಾರರಿಗೆ ಸರಕಾರದಿಂದ ಗೊತ್ತು ಮಾಡಿದ ರಕಮು [illegible] ಪ್ರವಾಸಿಕರ ಕೊಟ್ಟು [illegible] ಅದರಮೇಲೆ [illegible] ಪ್ರವಾಸಿಕನ [illegible] ದಿಂದ [illegible] ಜನರನ್ನೇ ಲಿಸ [illegible] ಮೇಲೆ ಹತ್ತಿಸಿಕೊಳ್ಳದೆ [illegible] ಕೊಟ್ಟವರನ್ನು ಮಾತ್ರ ಹತ್ತಿಸಿಕೊಂಡು [illegible] ತಿಳಿಸಿದಲ್ಲಿ [illegible] ಕೊಡುತ್ತಾನೆ [illegible] ದೋಣಿಕಾರರಿಗೆ [illegible] ವಸೂಲ ಮಾಡುತ್ತಾನಾಗಿ ತಿಳಿಯುತ್ತದೆ

ಅದಲ್ಲದೆ, ಕಾಸರಕೋಡದಿಂದ [illegible] ಪ್ರವಾಸಿ ಇದ್ದರೆ, [illegible] ಮಾಡಿಕೊಂಡು ದೋಣಿಮೇಲೆ ಕೂಡ್ರಿಸುತ್ತಾರೆ ಕೊಡದಿದ್ದರೆ, ಅಲ್ಲೆ ಬಿಟ್ಟುಬಿಡುತ್ತಾರೆ

ಈ ಕಾಲಿಗೆ ಜಂಗಲ ಇಲ್ಲದ್ದರಿಂದ [illegible] ಹೋಗುವ ಗಾಡಿಗಳು ದೋಣಿಯ ಮೇಲಿಂದಲೇ ಪಾರವಾಗಬೇಕಾಗುತ್ತದೆ. ತುಂಬಿದ ಗಾಡಿಗೆ ಐದು ರೂ ಖಾಲಿ ಗಾಡಿಗೆ ನಾಲ್ಕಾಣೆ ಈ ಪ್ರಕಾರ ಗುತ್ತೇದಾರನಿಗೆ ನೇಮಿಸಿದ ರಕಮು, ಇರುತ್ತದೆ. ಆದರೆ, ಹೊಳೆಕಾರರಿಗೆ ಅದರ ಇಮ್ಮಡಿ ಎಂಟಾಣೆ, ಹನ್ನೆರಡಾಣೆ, ವ [illegible] ಕೊಟ್ಟ ವಿನಹಾ ಗಾಡಿಪಾರವಾದ ಪರಿಲ್ಲ. ದೋಣಿಕಾರರ ಪ್ರವಾಸಿಕರಿಗೆ ಮತ್ತು ಗಾಡಿಕಾರರಿಗೆ ಎಷ್ಟು ತರದಿಂದ [illegible] ತ್ತಾರೆಂಬ ಬಗ್ಗೆ ವರ್ಣಿಸಲಿ ಅಸಾಧ್ಯ

ಇದಲ್ಲದೆ, ಲೋಕಲ್ ಬೋರ್ಡಿನವರು ದೋಣಿಮೇಲಿಂದ ಬರುವ ಹೋಗುವ ಪ್ರಯಾಣಿಕರಿಗೆ ವಿಶ್ರಾಂತಿ ತೆಗೆದುಕೊಳ್ಳಲಿಕ್ಕೆ ದಕ್ಕೆಮೇಲೆ ವಿಶ್ರಾಂತಿಗೃಹ ಕಟ್ಟಿದ್ದಾರೆ. ನಿಜವಾಗಿ ಪ್ರಯಾಣಿಕರಿಗೆ ಆ ಗೃಹದ ಏನೂ ಉಪಯೋಗ ವಾಗಲಿಕ್ಕೆ ಸಿಗ ವದಿಲ್ಲ. ಮುಕ್ತದಾರನು ತಾನೇ ಆ ಗೃಹ ಹಿಡಿಸಿಕೊಂಡಿರುತ್ತಾನೆ [illegible] ಪ್ರವಾಸಿಕರು [illegible] ಬಂದರೆ ಅವರು [illegible] ಕೂಡು ತ್ತಾರೆ [illegible] ಈ ಎಲ್ಲ ಸಂಗತಿಗಳನ್ನು ಅಧಿಕಾರಿಗಳು ಲಕ್ಷ್ಯಕ್ಕೆ ತಂದು, [illegible] ಪ್ರವಾಸಿಕರ [illegible] ದಿಸಿದ್ದಲ್ಲಿ ಬಹಳೇ ಪುಣ್ಯಪ್ರಾಪ್ತಿ ಮಾಡಿಕೊಂಡಂತಾಗುವದು.

ಸಾಂಬಿತ್ರಣಿ— ಇಲ್ಲಿಯ ಶ್ರೀಯುತ [illegible] ಪರಪ್ಪಾ ಗುಗ್ಗರಿಯವರ ಅಧ್ಯಕ್ಷತೆಯಿಂದ ಸಭೆಗೂಡಿ ಗೋರಕ್ಷಣ ಸಂಸ್ಥೆ ಸ್ಥಾಪನವಾಗಿ, ರೂಪಾಯಿ [illegible] ವಂತಿಗೆಯಾಯಿತು

ರಾವಸಾಹೇಬಿ ಬಿಟ್ಟರೇನು?

ಆಯ್ಯಾ, ವೃತ್ತಪತ್ರಾಧಿಪರೇ,

ಕಳೆದ ಕಾನಡಾ ಧುರೀಣದಲ್ಲಿ ಶ್ರೀಯುತ ಜಿ. ಅಣ್ಣಾಜಿರಾಯರು ರಾವಸಾಹೇಬ ಮಾಸೂರ, ಬಸ್ರೂರ ಇವರ ವಿಷಯ ಬರೆಯುವಾಗ, ಮಿಸ್ತರ ಮಾಸೂರ, ಮಿಸ್ತರ ಬಸ್ರೂರ ಎಂದು ಬರೆದಿದ್ದಾರೆ. ಅದೇ ಸಂಚಿಕೆಯ ಇಹವೃತ್ತದಲ್ಲಿ ರಾವಸಾಹೇಬ ಗಣಪತರಾವ ಮಾಸೂರರ ಬದಲು, ಶ್ರೀಯುತ ಗಣಪತರಾವ ಮಾಸೂರ, ಎಂದು ಬರೆದಿದ್ದಾರೆ. ಇದರ ಕಾರಣವೇನು? ರಾಷ್ಟ್ರೀಯ ಸಭೆಯ ಅಸಹಕಾರಿತೆ ಠರಾವಿನಿಂದ, ರಾವಸಾಹೇಬ ಎಂಬ ಬಿರುದು ಉಪಯೋಗಿಸಲಿಕ್ಕೆ ಶ್ರೀ॥ ಜಿ. ಅಣ್ಣಾಜಿರಾಯರು ಸಮ್ಮತಿಸುವದಿಲ್ಲತ್ತೋ? ಅಥವಾ, ಸದರಿ ರಾವಸಾಹೇಬದ್ವಯರು, ಸರಕಾರೀ ಜಂಗಲ ಧೋರಣದಿಂದ ಬೇಸತ್ತು, ತಮ್ಮ ಕಿತಾಬನ್ನು ತೊರೆದರೋ? ಧುರೀಣ ಕರ್ತರಾಗಲಿ, ಅದರ ಸಂಪಾದಕ ಮಂಡಳದವರಾಗಲಿ (ರಾವಸಾಹೇಬ ಮಾಸೂರ, ಕುಳಕರ್ಣಿ, ಮತ್ತು ಶ್ರೀಯುತ ಕಲ್ಯಾಣಪುರಕರ ವಗೈರೆ) ಯಾಗಲಿ, ಸ್ಪಷ್ಟೀಕರಿಸುವರೇನು? ಕುಮಟೆಯ ರಾವಸಾಹೇಬ ಮಾಸೂರರು ಕಾರವಾರದಲ್ಲಿ, ತಾವು, ಹಾಗು, ರಾವಸಾಹೇಬ ಕುಳಕರ್ಣಿ, ಬಸ್ರೂರರು ತಮ್ಮ ತಮ್ಮ ಕಿತಾಬುಗಳನ್ನು ತೊರೆಯುತ್ತೇವೆಂದು ಹೇಳಿದರೆಂದು, ಕಾರವಾರದಿಂದ ಬಂದು ಬಾಜಾರಗಪ್ಪೆಯು ಎದ್ದಿತ್ತು! ಈ ಅಪ್ಪಣೆನನ್ನನುಸರಿಸಿ, ಸದರಿ ರಾವಸಾಹೇಬರು ತಮ್ಮ ಬಿರುದು ಸರಕಾರದ ವಶಕ್ಕೆ ಕೊಟ್ಟು, ನೌಕರಿಯು ಆದರೇನು ಮನಃ ಇರಲಿ, ರಾವಸಾಹೇಬದ್ವಯರು ಕಿತಾಬುಗಳನ್ನು ತ್ಯಜಿಸಿದ್ದು ನಿಜವಿದ್ದರೆ ಅದು ತೀರ ಸ್ತುತ್ಯವು; ಇಷ್ಟೇ ಅಲ್ಲ, ಪ್ರತಿಯೊಬ್ಬ ಕಿತಾಬುಧಾರಿಯೂ ಅನುಕರಣ ಮಾಡುವಂಥ ಸಂಗತಿಯು. ನಮ್ಮ ಕುಮಟೆಯ ರಾವಸಾಹೇಬ ವೈಗಳಾಗಲಿ ಕುಲಕರ್ಣಿಯವರಾಗಲಿ, [illegible] ಪಂಡಿತರಾಗಲಿ, ತಮ್ಮ ಬಾಂಧವರ ಉಪಕ್ರಮವನ್ನು ಪುಷ್ಟೀಕರಿಸಿ, ಜಿಲ್ಲೆಯ ಮಾನವನ್ನು ಕಾಯುವರೇನು?

೧೮-೧೦-೨೦ } ತಮ್ಮ ವಿಧೇಯ,
ಅಸಹಕಾರಿತಾವಾದಿ.

ಕುಮಟೆ ಪೇಟೆ ಧಾರಣೆ.

ಜಿನಸು		ದರ.
ರಂಗೂನ ದ ಗೋಣಿ ೧ಕ್ಕೆ	...	೧೫—೧೫॥
ಕುಚ್ಚಿಗೆ ಅಕ್ಕಿ ಖಂಡಗಿ	...	೬॥—೭।
ರಾಗಿ ನಿಬಕ್ಕ	.	೧೦
ಗೋದಿ ಗೋಣಿ ೧ಕ್ಕೆ	...	೧೮—೨೦
ಹುರುಳಿ ಸಿದ	...	೧೪
ಕಡಲೆ ಸಿದ ೧ಕ್ಕೆ	..	೧೬॥—೧೫
ತೊಗರಿಬೇಳೆ ಗೋಣಿ ೧ಕ್ಕೆ	...	೨೦—೨೫
ಹೆಸರು ಬೇಳೆ ,,	...	೧೭॥—೨೦
ಪೋಲಿಸ ಸಕ್ಕರೆ ಮಣ ,,	...	೧೨
ಬೆಣಸಿನ ಕಾಯಿ ಮಣ	...	೧—೮
ಹಳೇ ಕೊಬ್ಬರಿ ಮಣ	...	೮॥
ಕೊಬ್ಬರಿ ಎಣ್ಣೆ ಮಣ	...	೧೨—೧೨।
ಕೊತ್ತಂಬರಿ ಗೋಣಿ ,,	..	೧೧—೧೨
ಉಪ್ಪು ಗೋಣಿ ,,	...	೪-೨೫-೦
ಸೆಣಸಿನ ಸೂಯಗೆ ,	...	೪ ೭-೦
,, ಹಂಚ ,,	...	೩ ೯-೬
ಬೆಲ್ಲ ಒಂದೆ ೧ಕ್ಕೆ	...	೬೦—೭೦
ಗಾಂಜಿಬ ಡಬ್ಬೆ ,,	...	೮೫—೧೦೫
ಗೋಣಿ ,,	...	೧೦—೬೦
ಜಾಲಿ ,,	...	೬೫—೭೦೦
ಚಕ್ಕ ,,	...	೧೪೫—೧೫೫
ಮೆಣಸು ,,	..	೧೬೫—೧೭೦
ಯಾಲಕ್ಕಿ ,,	...	೪—೪೦

ಶ್ರೀ ಗೋಕರ್ಣಕ್ಕೆ ಬರುವ ಯಾತ್ರಿಸ್ಥರ ಅನುಕೂಲತೆಗೋಸ್ಕರ, ಗೋಕರ್ಣ ಶ್ರೀಮಹಾಬಲೇಶ್ವರಸ್ವಾಮಿ ಸ್ಥಾಪಿಸುವ ದವಾಖಾನೆಗೆ ಪ್ರೇಮದಿಂದ ನೀಡಿದ ಸಹಾಯಕರ ವರ್ಗಣಿ ಯಾದಿ:—

ಸಹಾಯಕರ ಹೆಸರುಗಳು.—	ವರ್ಗಣಿ
(ಹಿಂದಿನ ಸಂಚಿಕೆಯು ಅಂಕು ರಕಮು)	9…1-0-0
ಸದಾಶಿವಭಟ್ಟ ಗಾಯತ್ರಿ	10 0-0
ಸುಬ್ರಾಯ ಕೃಷ್ಣ ಶಾಸ್ತ್ರಿ	6-0-0
ನಾರಾಯಣ ಮಹಾಬಲೇಶ್ವರ ಪಂಡಿತ	12-0 0
ಗಣೇಶ ವಾಂಡ್ರಂಗ ಕಾಮತ	19 0 0
ವಿಟ್ಠಲ ಸಂಗಪ್ಪ ಪಂಡಿತ ಅಗಸಾಲಿ	101-0-0
ನಾರಾಯಣ ರಾಮಕೃಷ್ಣ ಪಂಡಿತ	101-0-0
ಗಣಪಯ್ಯ ವೆಂಕಟರಮಣ ಪಂಡಿತ	101-0-0
ರಾಮ ಮೊಣ್ಣ ಕಾಮತ	51-0-0
ಮುದ್ದು ವೆಂಕಣ್ಣ ನಾಯಕ	15 0 0
ಹನುಮಂತ ಪಣ್ಣಪ್ಪ ನಾಯಕ	25-0-0
ಮು. ಕೊಡ್ತಿ ಹೊಸಬ ನಾಯಕ ಗೋಕರ್ಣ	10-0-0
ಸೀತಾರಾಮ ನಾಯಕ	5-0-0
ಶ್ರೀ ಗೋಕರ್ಣ ಮಹಾಬಲೇಶ್ವರ ದೇವ	100-0-0
ಗೋವಿಂದ ಸುಬ್ರಾಯ ಶಾಸ್ತ್ರಿ ರಾ. ತಾರಮಕ್ಕಿ ಸ್ವರ್ಣ ಪರೀಕ್ಷಕ ನ್ಯಾಪಜ್ಞ ಸಂಗ್ರಹ ಬಗ್ಗೆ	25-0-0
ಶ್ರೀ ವೆಂಕಟರಮಣ ದೇವ ಹಸ್ತೆ ನಾಗಪ್ಪ ವಿಶ್ವೇಶ್ವರ ಕಾಮತ	25-0-0
ತಾರೀಖು 1-10-1920 ನೇ ವರೆಗೆ ವರ್ಗಣಿ ಕೂಡ	3204-12-0

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅಥವಾ ಭೆಟ್ಟಿ ಯಾದರೆ ತರಿಸಿಕೊಡುವರು. ಪಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಶಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳು ಸಹ ಸಿಕ್ಕುವವು.

ಪತ್ತೆ— ಬೆಡಕೀ … …

ಹಾಜರಾಗಿ, ಈಗ ೩-೪ ದಿವಸಗಳಾದವು. ಈ ಪತ್ರದ ಸುಪ್ರಸಿದ್ಧ ಸಂಪಾದಕ, ಹಿಂದದೇಶ ಹಿತಚಿಂತಕ, ಶ್ರೀಯುತ ಹೊರ್ನಿಮನ ಸಾಹೇಬರಿಗೆ ಹದ್ದಪಾರಿಯಾದ ಸಂಗತಿಯು ತಮ್ಮ ವಾಚಕರಿಗೆ ಗೊತ್ತದೆ. ಅಮೇಲೆ ಆ ಪತ್ರವು ಮಿ॥ ಸಯ್ಯದ ಅಬ್ದುಲಾ ಬ್ರೇಲ್ವಿಯವರ ಸಂಪಾದಕತ್ವದಲ್ಲಿ ಬಂತು. ಈ ಕರ್ತವ್ಯವನ್ನು ಮಿ॥ ಬ್ರೇಲ್ವಿಯವರು ಇಂದಿನವರೆಗೆ ಬಹು ಚಾತುರ್ಯದಿಂದಲೂ, ದಿಟ್ಟತನದಿಂದಲೂ ನೆರವೇರಿಸಿದರು. ಸತ್ಯಾಗ್ರಹದ ತಹಕೂಬಿ, ಅಸಹಕಾರಿತೆಯ ಪ್ರಾರಂಭ, ಇವುಗಳ ಮಧ್ಯಯುಗದಲ್ಲಿ 'ಕ್ರೊನಿಕಲ'ದ ಸಂಪಾದಕತ್ವವನ್ನು ಹೊರ್ನಿಮನ ಸಾಹೇಬರ ಧೋರಣದಿಂದ ನಡಿಸಿದಬಗ್ಗೆ, ಇಡೀ ಹಿಂದುಸ್ಥಾನವು ಅವರಿಗೆ ಋಣಿಯಾಗಿರುವದು.

'ಕ್ರೊನಿಕಲ'ದ ಹೊಸ ಸಂಪಾದಕರ ಹೆಸರು ಮಾ॥ ಕಣ್ದ್ಯಾಕ ಪಿಕಥೋಲ. ಇವರು ಯುರೋಪಿಯನ ಗೃಹಸ್ಥರು. ಆದರೂ ಮಹಮ್ಮದೀ ಧರ್ಮಕ್ಕೆ ಸೇರಿದವರು. ಇವರ್ಲ್ಲಿಷೆ, ತುರ್ಕಸ್ಥಾನದಲ್ಲಿ ಎರಡು ಮೂರು ವರ್ಷ ಉಳಿದು, ಖಿಲಾಫತಿನ ವಿಷಯವನ್ನು ಉತ್ತಮರೀತಿಯಿಂದ ಪರಿಶೀಲಿಸಿದ್ದಾರಂತೆ! ಇವರ ಋತಗಳೇನು? ವಿಚಾರಗಳೇನು? ಎಂಬಿ ಸಂಗತಿಗಳೆಲ್ಲಿ ಇನ್ನು ಬೇಗನೆ ತಿಳಿಯುವವು. ಸುಮ್ಮನೆ ಗಾಬರಿಮಾಡಿ ಪ್ರಯೋಜನವೇನು?

ಮುಂಬಯಿಯಲ್ಲಿ ಸಂಪಿನ ಶುಭಾನು ಜೋರಿನಿಂದ ನಡೆದಿದೆ. ಕಳೆದ ಎಂಟು ದಿವಸಗಳಲ್ಲಿ ಯಜಮಾನರ ಮರ್ಯಾಗ್ರಹವುಗಳಿಗೆ, ನೌಕರರ ಸತ್ಯಾಗ್ರಹವಾಗಲಿ, ಎಳ್ಳಷ್ಟು ಸಹ ಕುಂದಲಿಲ್ಲ. ಗ್ಯಾಸಕಂಪನಿಯು ಮನೇಜರು "ಕೆಲಸದಮೇಲೆ ಹಾಜರಾಗದಿದ್ದರೆ, ಕಡಿಮೆ ಮಾಡಲಾದೀತು" ಎಂದು ಧಮುಕಿಕೊಟ್ಟು ಹೆದರಿಸುತ್ತಾನೆ; ಟ್ರಾಮ ಕಂಪನಿಯವರು ಹೊಸ ಹೊಸ ಜನರನ್ನು 'ರಿಕ್ರೂಟ' ಮಾಡಿ, ತಮ್ಮ ಕಂಪನಿಯ ಕೆಲಸವು ನಿರಾತಂಕ ನಡೆದಿದೆಂದು ತೋರಿಸಬೇಕು ಯತ್ನಿಸುತ್ತಿದ್ದಾರೆ. ಆದರೂ ಈ ಬೇಗಡೆಯಿಂದ ಮೋಸ ಹೋಗುವರ್ಯಾರು? ಕಂಪನಿಗೆ 'ಸಂಪಿನ ಮೊದಲು ರೂಪಾಯಿ ೧೫ ಸಾವಿರ ಉತ್ಪನ್ನವಾದರೆ, ಈಗ ೩-೪ ಸಾವಿರ ಆಗಬೇಕಾದರೆ, ಜೀವದಮೇಲೆ ಬರುತ್ತದೆ, ಜನರಿಗೆ ಎಷ್ಟು ಅನಾನುಕೂಲತೆಯಾಗುತ್ತಿದೆ ಎಂದು ಇನ್ನು ಹೇಳಬೇಕೇನು?

ಟಪಾಲ ಶಿಪಾಯಿಗಳ ಸಂಪು ಯಶಃಪೂರ್ಣವಾಗಿದೆ. ಮುಂಬಯಿಯಲ್ಲಿ ಪರಮೇಶ್ವರ ಶೀತಲಮಹಾಶಯ' ಎಂಬ ಪ್ರಸಿದ್ಧ ಗೃಹಸ್ಥರಂತೆ, ಸಾವಿರಗಟ್ಟೆ ರೂಪಾಯಿ ಕಿಬು ಬಿಂಗ್ಲ ಯಲ್ಲಿ … ಯಮೇಲೆ ಕೂತು ಹವೇತ್ತಿನ್ನುವ ಅಧಿಕಾರಿಗಳು, ಬಡ ಟಪಾಲು ಶಿಪಾಯಿಗಳಿಗೆ ೨-೪ ರೂಪಾಯಿ ಕೊಡಲಿಕ್ಕೆ ಹಿಂದೆಮುಂದೆ ನೋಡುತ್ತಾರೆ. ಇಷ್ಟೇ ಅಲ್ಲ, ಮೇಲೆ ಧಮುಕಿ ವಗೈರೆ ಹಾಕಿ, "ಸ್ವಾಮಿನಿಷ್ಠ" ಸೇವಕರನ್ನು ಎಳೆದೊಯ್ಯಲು ಬಹು ಪರಿಯಿಂದ ಯತ್ನ ಮಾಡಹತ್ತಿದ್ದಾರೆ. ಆದರೆ ಕಲಿಯುಗದಲ್ಲಿ 'ಜೆಕ್ಕಟ್ಟೇ ಬಲವು' ಎಂಬ ನಾಣ್ಣುಡಿಯನ್ನು ಪೂರ್ಣವಾಗಿ ಅರಿತವರು ಇಂಥ ಬಲೆಯಲ್ಲಿ ಬೀಳದಿದ್ದದ್ದೇನು ಆಶ್ಚರ್ಯವಲ್ಲ.

ಜನರ ಅನುಕೂಲತೆಯಂತೂ ಸರಕಾರದ ಲೆಕ್ಕದಲ್ಲಿ ಇಲ್ಲೇ ಇಲ್ಲ. ಬೇಜವಾಬದಾರ ಅಧಿಕಾರಿಗಳು ಬೇಜವಾಬದಾರ ರೀತಿಯಿಂದ ನಡೆಯುವದು ಅವರ ಧರ್ಮವು. ಜನರು ಮಾತ್ರ ಅಧಿಕಾರಿಗಳ ಹಟವನ್ನು ಮುರಿದು, ಟಪಾಲ ಶಿಪಾಯಿಗಳ ನ್ಯಾಯ್ಯ ಬೇಡಿಕೆಗಳನ್ನು ಕ್ಷಾಗೆ ಮಾನ್ಯ ಮಾಡಿಸುವರು, ಎಂಬ ವಿವಂಚನೆಯಲ್ಲಿದ್ದಾರೆ.

ಫಾರೆಸ್ಟ ಖಾತೆಯ ನ್ಯಾಯ.

ಸಂಪಾದಕ ಕಾನಡಾವೃತ್ತ ಇವರಿಗೆ—

ತಮ್ಮ ಲೋಕಪ್ರಿಯ ವರ್ತಮಾನಪತ್ರದಲ್ಲಿ ಈ ಕೆಳಗೆ ಬರೆದ ಸಂಗತಿಯನ್ನು ಅವಶ್ಯ ಪ್ರಕಟಿಸಬೇಕಾಗಿ ವಿನಂತಿ. ಇದೇ ವರುಷ ಬೇಸಗೆಯಲ್ಲಿ ಕೆಲವು ಕಡೆ ಬೆಂಕಿಹತ್ತಿ, ಜಂಗಲವು ಅಲ್ಪ ಸ್ವಲ್ಪ ಸುಟ್ಟಿರುವವು. ಆದರಂತೆ ಅಂಕೋಲಾ ತಾಲೂಕ ಕೊಡಗದ್ದೆ ತರ್ಫಿನಿಂದ ಅಡವಿಯು ಸುಡುತ್ತಾ, ಕ್ರಮೇಣ ಗುಳ್ಳಾಪೂರ, ಚಿಕ್ಕುಮನೆ ಈ ಹಳ್ಳಿಗಳಮೇಲಿಂದ ಅರಬೈಲ ತರ್ಫೆಗೆ ಬೆಂಕಿ ಬರಲು, ಅರಬೈಲ ಊರ ರೈತರು ಸದರೀ ಬೆಂಕಿಯನ್ನು ನೊಂದಿಸಲಿಕ್ಕೆ ಮುನತವಾಗಿರುವರು. ಇಷ್ಟೇ ಅಲ್ಲ, ಪ್ರತಿವರ್ಷ ಫಾರೆಸ್ಟಖಾತೆಯು ಬಿಟ್ಟಬೇಗಾರಿಯ ಬಗ್ಗೆ, ಸದರಿ ರೈತರ ಸಹಾಯವು ಇದ್ದೇ ಇರುವದು. ಹೀಗಿರುತ್ತ ಫಾರೆಸ್ಟಖಾತೆಯವರು ಇವಕ್ಕೆ ಪ್ರತಿಫಲವಾಗಿ, ಅರಬೈಲ ರೈತರಿಗೆ ಇರುವ ಗೋಚರಾದ ಫೀ ೨ ಆಣೆ ಇದ್ದದ್ದನ್ನು ೧ ರೂ ಮಾಡಿರುತ್ತಾರೆ. ಅದೇ ಅರಬೈಲ ಊರ ಸಮೀಪವೇ ಇರುವ ಧಣಸಗುಳಿಯ ರೈತರಿಗೆ ಮಾತ್ರ, ೨ ಆಣೆ ಗೋಚರಾದ ಫೀ ಇಟ್ಟಿದ್ದಾರೆ. ಮತ್ತು ಗುಳ್ಳಾಪೂರ, ಚಿಕ್ಕುಮನೆ ಈ ಗ್ರಾಮದಲ್ಲಿಯ ರೈತರಿಗೆ ಮಾತ್ರ ಪೂರ್ತಾ ಮಾಫೀ ಇಟ್ಟಿರುವರು. ಈ ಫಾರೆಸ್ಟ ಖಾತೆಯವರ ಮುಖಂಡನದ ನ್ಯಾಯಕ್ಕೆ ಏನೆನ್ನಬೇಕು?

ಅರಬೈಲ
೨೦-೧೦-೨೦ } ಒಬ್ಬ ಬಡ ರೈತ

ಚಿತ್ರಪುರ ಪಾಂಡುರಂಗಪ್ಪ ಸಾಡ್ಕೆರ್	250-0-0
ಭವಾನಿಶಂಕರ ಮಂಗೇಶಯ್ಯ ಚಿಕ್ಕಮನೆ	150 0-0
ಶಿವಭಟ್ಟ ವೆಂಕಟರಮಣಭಟ್ಟ ಗೋಕರ್ಣ	5-0-0
ನಾಗಪ್ಪ ವಿಶ್ವೇಶ್ವರ ಕಾಮತ	51-0 0
ಗಣೇಶರಾವ ಅನಂತಯ್ಯ ಸಾಡ್ಕೆರ್	25-0 0
ಪರಮೇಶ್ವರ ಮಂಗೇಶರಾವ ಸಾಡ್ಕೆರ್	50-0-0
ಗಣಪತಿ ದೇವರಭಟ್ಟ ಗೋಪೀ	200-0-0
ಭವಾನಿಶಂಕರರಾವ ಸುಬ್ರಾವ …	5-0-0
ಸುಬ್ರಾಯ ಪರಮ ಭಟ್ಟ ಗೋಕರ್ಣ	15-0-0

ಫೋಸ್ಟ— ಹೆಗಡೆ, ಉತ್ತರ ಕಾನಡಾ.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯಿ, ಬಿದ್ದ ಜಕಮು, ಪೆಟ್ಟಿನ ಸೋವು, ಯುದ್ಧದೀ ತರದ ಜಕಮು, ಯಾ ಎಲಬು ಮುರಿದಲ್ಲಿ ಸಹ ಇದನ್ನು ನೀರು ಹಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ. ಕ್ರಯ ಶೀಸೆಗೆ ೧ ರೂಪಾಯಿ. ೧೨ ಶೀ. ೧-೨-೦. ವ್ಯಾಪಾರಸ್ಥರಿಗೆ ಭರಪೂರ ಕಮಿಶನ. ಪತ್ತೆ — ಮುಂಬ್ಯಾಪ ಪಿತಾಂಬಾಲ ದಳ್ಳಿಕರಾಮ, ಗುರವರ ಕಲೀಲಿ ಕಾಮಟಾ

ವಕೆ ಆಂಧ್ರಿಯೆಸ್ತಂಭಿಕ ಗರ್ಮ, (ಜಾಟ) ಗುಪ್ತರೋಗ ಇವ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹು ಣ್ಣುಗಳು ಪಿತ್ತದ ಬಾಧೆಗಳು ಕಟಾವಾಗಿ ನಾ ಕರೋಗ ಮುಂತಾದವು ಅತಿಶ್ರಯ ಗುಣವಾಗಿ ಶರೀರಕ್ಕೆ ನಿರೋ ಗತ್ವವೂ ಕಾಂತಿಯೂ ರತಿಸುಖಕ್ಕೆ ಸಂತೋಷ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ. ಖ. ಬೇರೆ. ಅನುಮಾನ ಪತ್ರಿಕ ಬಿಡಲಿದ ಸಂಗಡ.

ವಿಳಾಸ—**ಜೆ. ಎಲ್. ಜೋಶಿ. ಕಂಪನಿ.**

ಫೋಸ್ಟ— ಬನವಾಸಿ, ಉತ್ತರ ಕಾನಡಾ

ಈ ಸೇವೆಯೊಳಗೆ, ಅತಿ ಪರಿಶ್ರಮದಿಂದ, ಇವರು ದೇಹ ಯಜ್ಞವನ್ನು ಮಾಡಿದರೆಂದು ಹೇಳಿದರೂ ಸೇರಬಹುದು. ಇಂಥ ಲೋಕೋಪಕಾರಿ ಗೃಹಸ್ಥರು ಅಕಾಲಕ್ಕೆ ಕಾಲಾಧೀನರಾಗುವದು ಸಮಾಜದ ದುರ್ದೈವವು. ಅವರ ನಿಧನದಿಂದುಂಟಾದ ಹಾನಿಯು "ಸೇವಾ ಸಂಸ್ಥೆಗೆ" ದೀರ್ಘಕಾಲ ತೋರುವದು. ಉಪಾಯವಿಲ್ಲ. ಈಶೇಚ್ಛಾ ಬಲೀಯಸೀ.

ಇಹವೃತ್ತ.

ಕುಮಟಾ— ಮಳೆಯು ಇಷ್ಟರಂದಿರ್ಗೆ ೩-೬೦ ಇಂಚು ಆಯಿತು. ಈ ವಾರದಲ್ಲಿ ಮಳೆ ಇಲ್ಲ. ಎಲ್ಲ ತರದ ರೋಗಗಳಾಯಿ ಹೊರತು ಜನಗಳ ರೋಗವೂ ಬಂದಿದೆ. ಮೆಳೆ ಕಟಾಪಿನ ಕೆಲಸ ಪ್ಯಾರಿಯಿಂದ ನಡೆದರೆ ತಮಗೆ ಜೀವವೆಂಬ ಒಂದು ಮನವಿಯು ಸರಕಾರಕ್ಕೆ ಹೋಗಿಯದೆಂಬ ಸುದ್ದಿ ಇದೆ. ನಿಜವಾದರೆ ಸ್ತುತ್ಯವು.

ಜಾವಾ ಕಾಂಗ್ರೆಸದ ಠರಾವಿಗನುಸರಿಸಿ, ಜನರನ್ನು ಕರ್ತವ್ಯಕ್ಕೆ ಎಚ್ಚರಿಸುವ ದೊಡ್ಡ ದೊಡ್ಡ ಇಸ್ತಿಹಾರಗಳನ್ನು ಸ್ವರಾಜ್ಯಸಂಘದ ವತಿಯಿಂದ ಗೋಕರ್ಣದಲ್ಲಿ ಗೋಡೆಗೆಗೆ ಅಂಟಿಸಿದ್ದು, ಹರಿದು ತೆಗೆಯಲಿಕ್ಕೆ ಮಾಡಿದ ಪ್ರಯತ್ನವು ಗಟ್ಟಿ ಅಂಟಿನಿಂದ ನಿಷ್ಫಲವಾಯಿತು! ಈ ಪುಣ್ಯಾತ್ಮರು ಯಾರಮ್ಮ!

ಸುಪಾ— ಮಳೆ ಇಲ್ಲ. ಬೆಳೆಗಳು ಒಣಗುತ್ತವೆ. ಇಲ್ಲಿಯ ಕಾಂಗ್ರೆಸ ಠರಾವಿಗನುಸರಿಸಿ ಶ್ರೀ ಎಸ್. ಡಿ. ಸುಂಕ್ಷನಕರ ವಕೀಲ ಜ... ಎಸ... ಲಿಕರ್ಣಿಯವರು ತಮ್ಮ ಅನುಮತಿಯ ಮೊರತೆ ಒರುವ ಯಾಸೆಸುವಾ [illegible]

ಸಾಂಬಿತ್ರೀಣಿ— ಇಲ್ಲಿಯ ಶ್ರೀಯುತ ಬಸಪ್ಪಾ ಪರಪ್ಪಾ ಗುಗ್ಗರಿಯವರ ಅಧ್ಯಕ್ಷತೆಯಿಂದ ಸಭೆಗೂಡಿ ಗೋರಕ್ಷಣ ಸಂಸ್ಥೆ ಸ್ಥಾಪನವಾಗಿ, ರೂಪ್ಯಾ ೨೫ ವಂತಿಗೆ ಯಾಯಿತು.

ರಾವಸಾಹೇಬಿ ಬಿಟ್ಟರೇನು?

ಆಯ್ಯಾ ವೃತ್ತಪತ್ರಾಧಿಪರೇ,

ಕಳೆದ ಕಾನಡಾ ಧುರೀಣದಲ್ಲಿ ಶ್ರೀಯುತ ಜಿ. ಅಣ್ಣಾಜಿರಾಯರು ರಾವಸಾಹೇಬ ಮಾಸೂರ, ಬಸ್ರೂರ ಇವರ ವಿಷಯ ಬರೆಯುವಾಗ, ಮಿಸ್ಟರ ಮಾಸೂರ, ಮಿಸ್ಟರ ಬಸ್ರೂರ ಎಂದು ಬರೆದಿದ್ದಾರೆ. ಅದೇ ಸಂಚಿಕೆಯ ಇಹವೃತ್ತದಲ್ಲಿ ರಾವಸಾಹೇಬ ಗಣಪತರಾವ ಮಾಸೂರರ ಬದಲು, ಶ್ರೀಯುತ ಗಣಪತರಾವ ಮಾಸೂರ, ಎಂದು ಬರೆದಿದ್ದಾರೆ. ಇದರ ಕಾರಣವೇನು? ರಾಷ್ಟ್ರೀಯ ಸಭೆಯ [illegible] ರಾವಸಾಹೇಬ ಎಂಬ ಬಿರು

ಮುಂಬಯಿಯ ಸುದ್ದಿ.

ಅಸಹಕಾರಿತೆಯ ಪ್ರಗತಿ.

(ನಮ್ಮ ಬಾತಮೀದಾರರಿಂದ)

ಮುಂಬಯಿಯಲ್ಲಿ ಅಸಹಕಾರಿತೆಯ ಪ್ರಗತಿಯು ಭರದಿಂದ ಸಾಗುತ್ತಲಿದೆ. ಮಾಂಡವಿಯಲ್ಲಿ ಒಂದು ರಾಷ್ಟ್ರೀಯ ವಿದ್ಯಾಮಂಡಳವನ್ನು ಸ್ಥಾಪಿಸಿ, ಅದರ ಮುಖಾಂತರ ರಾಷ್ಟ್ರೀಯ ಶಾಲೆಗಳು ಬೇಗನೆ ಸ್ಥಾಪನೆಯಾಗುವವು. ಮುಂಬಯಿಯ ನೆಶನಲ ಯೂನಿಯನ ಸಂಸ್ಥೆಯು ಪಂಚಾಯತ ಕೋರ್ಟುಗಳನ್ನು ಸ್ಥಾಪಿಸುವ ವಿಚಾರದಲ್ಲಿದೆಂದು ತಿಳಿಯುತ್ತದೆ. 'ಸರಕಾರದ ಹತ್ತರ ಸಹಕಾರಿತೆಯನ್ನು ಮಾಡಬೇಡಿರಿ: ಕಾಯಿದೆ ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕಿರಿ; ಸಭೆಯ ಆಜ್ಞೆಯನ್ನು ಪಾಲಿಸಿರಿ' ಎಂಬ ದೊಡ್ಡ ದೊಡ್ಡ ಜಾಹೀರಾತಿಗಳು ಮತದಾರರನ್ನು ರಾಷ್ಟ್ರೀಯ ಕರ್ತವ್ಯದ ಎಚ್ಚರು ಮಾಡಗೊಡುತ್ತವೆ. ಇದಲ್ಲದೆ, ಹಿಂದೀ ರಾಜ್ಯಸಂಘ, ಸ್ವರಾಜ್ಯಸಭಾ ಮುಂತಾದ ರಾಷ್ಟ್ರೀಯ ಸಂಸ್ಥೆಗಳು, ಕೌನ್ಸಿಲು ಬಹಿಷ್ಕಾರ ಪ್ರಚಾರ ಕೆಲಸವನ್ನು ಬಲು ಉತ್ಸಾಹದಿಂದ ಮಾಡುತ್ತಿವೆ. ಸ್ವಯಂಸೇವಕರು ಮನೆಮನೆ, ಓಣಿಓಣಿ ತಿರುಗಾಡಿ ಮತದಾರರಿಗೆ ತಮ್ಮ ಹಕ್ಕಿನ ಕುರಿತು, ರಾಷ್ಟ್ರೀಯ ಕರ್ತವ್ಯಗಳ ಅರಿವು ಮಾಡಿಕೊಟ್ಟು, ಬರುವ ಕೌನ್ಸಿಲ [illegible] ಮತಕೊಡಬೇಡಿರಿ' ಎಂದು ಬೋಧಿಸುತ್ತಿದ್ದಾರೆ. ಈ ಕೆಲಸವನ್ನು ನಮ್ಮಲ್ಲಿಯ ಸ್ವರಾಜ್ಯಸಂಘಗಳು ಅನುಕರಿಸಿ, ತಮ್ಮಲ್ಲಿ ಅಸಹಕಾರಿತೆಯ ಒಳ್ಳೆಯ ಪ್ರಚಾರವನ್ನು ಉಂಟುಮಾಡುವರೇನು?

* * *

[illegible] ನಿಶಯದ ಮೇಲೆ ಕಳೆದ [illegible], ಶ್ರೀಯುತ [illegible] ಒಂದು [illegible] ನಿಮ್ಮ ಮನಸ್ಸಿನಲ್ಲಿಯಾಗಿತ್ತು.

* * *

ಖ್ಯಾತಿ ಬಹಿಷ್ಕಾರವು ನಮ್ಮ ಪೂರ್ವ ಪರಂಪರಾಗತ ಚಳವಳಿಯು [illegible] ಒಂದು ಮಾಗ್ರವು, ಅಸಹಕಾರಿತೆಯು ಒಂದು. [illegible] ಕಿತಾಬುಗಳನ್ನಾಗಲಿ ಸರಕಾರಿ ನೌಕರಿಗಳನ್ನಾಗಲಿ ತ್ಯಜಿಸುವದಾದರೂ, ಅಸಹಕಾರಿತೆಯೋ ಈ ಚಳವಳಿಯು ಇನ್ನೂ ರಾಜಕಾರಣದಲ್ಲಿ ಉಪಯೋಗಕ್ಕೆ ಬಂದಿಲ್ಲ. ಆದರೆ, ನಮಗೆ ಸದ್ಯ ಸ್ಥಿತಿಯಲ್ಲಿ ಅನ್ಯ ಉಪಾಯವಿಲ್ಲ. ಎಲ್ಲ ಸನದಶೀರ [illegible] ಚಳವಳಿ ಮಾಡಿ ಬೇಸತ್ತೆವು. ಈಗ ಅಸಹಕಾರಿತೆಯ ಹೊರತು ನಮಗೆ ಗತಿಯೇ ವಿಷಯ, ಯಾರೂ ಸಂಶಯ ಪಡಬಾರದು. ಅಸಹಕಾರಿತೆಯ ಚಳವಳಿಯಿಂದಲೇ ಇಜಿಪ್ತ ದೇಶವು ೨-೪ ತಿಂಗಳುಗಳಲ್ಲಿ ಸ್ವರಾಜ್ಯವನ್ನು ಗಳಿಸಿತು. ಹಂಗೇರಿ ಪ್ರಾಂತವು ಒಂಬತ್ತು ತಿಂಗಳುಗಳಲ್ಲಿ ಅಸ್ತಿಯಾದಿಂದ ಸ್ವರಾಜ್ಯವನ್ನು ಕಸಕೊಂಡಿತು. ಇಷ್ಟು ಪ್ರಭಾವಶಾಲಿ ಚಳವಳಿ ಇದು! ಇದರ ಯಶಸ್ವಿತೆಯಲ್ಲಿ ನೀವು ಪೂರ್ಣ ವಿಶ್ವಾಸವಿಡಿರಿ, ಮತ್ತು ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಶಿರಸಾ ಮನ್ನಿಸಿ, ಈ ವ್ರತವನ್ನು ರಾಷ್ಟ್ರೀಯ ನಿಷ್ಠೆಯಿಂದ ಆಚರಿಸಿರಿ;

* * * *

ಕಾಯಿದೆ ಕೌನ್ಸಿಲುಗಳ ವಿಷಯದ, ಶ್ರೀ ಪಟೇಲರ ವಿಚಾರಗಳನ್ನು, ಪ್ರತಿಯೊಬ್ಬ ದೇಶಾಭಿಮಾನಿಯು ಲಕ್ಷದಲ್ಲಿಡತಕ್ಕದ್ದು. ದೇಶಕ್ಕೆ ಕಲ್ಯಾಣವಾಗುವ ಸದಿಚ್ಛೆಯಿಂದ ಪ್ರೇರಿತರಾಗಿ, 'ನಾ ಮುಂದೆ ನೀ ಮುಂದೆ' ಎಂದು ಕಾದಾಡುವ ಕೌನ್ಸಿಲು ಉಮೇದ್ವಾರರು ಮುಖ್ಯವಾಗಿ ಪರಿಶೀಲಿಸತಕ್ಕದ್ದು. ಅವರು ಹೇಳಿದ್ದೇನಂದರೆ— ನಾನು ೭-೮ ವರ್ಷ ಎಲ್ಲ ಉದ್ಯೋಗ ಬಿಟ್ಟು, ಕೌನ್ಸಿಲುಗಳಿಂದ, ಶಕ್ಯವಿದ್ದಷ್ಟು ಪ್ರಜೆಗಳ ಹಿತ ಸಾಧಿಸಲು ಯತ್ನಿಸಿದ್ದೇನೆ. ಪ್ರಜೆಗಳಿಗೆ ಮ್ಯುನಿಸಿಪಾಲಿಟಿಯಲ್ಲಿ ಮೂರು ನಾಲ್ಕಾಂಶ ಸಭಾಸದರನ್ನು ಆರಿಸುವ ಹಕ್ಕು ಕೊಡಿಸಿ, ಲೋಕಲ್ಬೋರ್ಡಿಗೆ [illegible] ಸರಕಾರೀ ಅಧ್ಯಕ್ಷರನ್ನು ನೇಮಿಸಿರಿ ಪ್ರಜೆಗಳಿಗೆ ಪುಕ್ಕಟೆಯಾದ ಶಿಕ್ಷಣವನ್ನು ಕೊಡಿಸಿ, ಮುಂತಾದ ಠರಾವುಗಳನ್ನು ತಂದೆನು. ಕೌನ್ಸಿಲು ಬಹಿಷ್ಕಾರ ಠರಾವು ಬಂದದಾಗಿ ನನ್ನ ಮತವಿತ್ತು. ಆದರೆ ರಾಷ್ಟ್ರೀಯ ಸಭೆಯಲ್ಲಿ ಮುಂದು ನನ್ನ ಈ ಹೊತ್ತಿಗೆ [illegible] ಸ್ವರಾಜ್ಯವು ನನ್ನ ಹೊಂದು ಸಾಧಕವಾಗಿ ಹೆಚ್ಚಿನಿಂದ ನಾ [illegible] ಧ್ಯೇಯವಲ್ಲ. ನಮಗೀಗ ಸ್ವರಾಜ್ಯವು ಬೇಕು, ಅದರ ಹೊರತು, ಬೇರೆ ಇತರೇ ಸುಧಾರಣೆಗಳು ನಿಷ್ಪ್ರಯೋಜಕನಿದ್ದಾವೆ. ಕೌನ್ಸಿಲುಗಳಲ್ಲಿ ಸೇರುವ ಮುಖ್ಯ ಉದ್ದೇಶವು ಸ್ವರಾಜ್ಯ ಸಾಧನೆಯು ಉತ್ತಮ ಉಪಾಯವಿಂದು, ಸ್ವರಾಜ್ಯವೇ ಧ್ಯೇಯವಾದ ಸ್ಥಿತಿಯೊಳಗಿಂದ ಕೆಳಗಿಳಿದವೇಕೆ, ಮೊಂಟೆಗ್ಯೂ ಸುಧಾರಣೆಗಳ ಉಪಯೋಗವೇನು? ಇದರಿಂದ ನನ್ನ ಮತವು ಈಗ ಬದಲಿಹೋಗಿದೆ. ಕೌನ್ಸಿಲು ಬಹಿಷ್ಕಾರವೇ ಸರ್ವಶ್ರೇಯೋಸ್ಕರವು. ಅದನ್ನು ಪ್ರತಿಯೊಬ್ಬ ನಾಗರಿಕನು ಹಿಂದವಾತೆಯನ್ನು ಸ್ಮರಿಸಿ, ಆಚರಿಸಲೇಬೇಕು. ಶ್ರೀಯುತ ವಿಠ್ಠಲಭಾಯಿ ಪಟೇಲರ ವಿಚಾರಗಳು ಯಾರಿಗೆ ಮಾನ್ಯವಾಗಲಿಕ್ಕಿಲ್ಲ?

ಹುಬಳಿ

ಖತ್ತಕಡೆಗೆ ಮುಂಬಯಿಯಿಂದ ವಾರಕ್ಕೆ ಎರಡಾವರ್ತಿ, ಒಮ್ಮೆ ನಾಗ್ಲಿನ ದೊಡ್ಡ ಬೋಟು, ಒಮ್ಮೆ 'ಬರೇ ಪ್ರಯಾಣಿಕರ ಸೋಯಿಯ ಸಣ್ಣ ಬೋಟು' ಬರುವ ಉಪಕ್ರಮವು ಸ್ತುತ್ಯವಾದದ್ದು. ಆದರೆ, ಮುಂಬಯಿಯ ಸಂಪುಗಳ ಮೂಲಕ ಪೀಡಿತವಾಗಿ, ಹವಾಲ ಸಂಪಿನ ಮೂಲಕ, ಇಲ್ಲಿಯ ವ್ಯಾಪಾರಿ ಜನರು ಕಂಗೆಟ್ಟುಹೋಗಿರುವವು.

ಗೋಕರ್ಣ ತ್ರೈಮಾಸಿಕ ಮ್ಯುನಿಸಿಪಾಲಿಟಿಯು ಈಗ ಅಷ್ಟಮಾಸಿಕವಾದದ್ದು, ಪ್ರಾತಿನಿಧಿಕ ತತ್ವದವರೆಲೆಯಾದರೆ, ಒಪ್ಪಬಹುದಲ್ಲದೆ, ಸರಕಾರನಿಯುಕ್ತನೆಂತಾಲಿಂದ ಬರುವ ಹೋಗುವ ಪ್ರಯಾಣಿಕರಿಗೆ ವಿಶ್ರಾಂತಿ ತೆಗೆದುಕೊಳ್ಳಲಿಕ್ಕೆ ಧಕ್ಕೆಮೇಲೆ ವಿಶ್ರಾಂತಿಗೃಹ ಕಟ್ಟಿದ್ದಾರೆ. ನಿಜವಾಗಿ ಪ್ರಯಾಣಿಕರಿಗೆ ಆ ಗೃಹದ ಪಾಲು ಉಪಯೋಗ ಮಾಡಲಿಕ್ಕೆ ಸಿಗುವದಿಲ್ಲ. ಮುಕ್ತದಾರನು ತಾನೇ ಆ ಗೃಹ [illegible]. ಬಡ ಪ್ರವಾಸಿಕರು ರಾತ್ರಿಸಲ್ಲಿ ಬಂದರೆ ಅವರು ಬಿಸಲಲ್ಲೇ ಕಾಲು ತ್ರಾಸ ಪಡುತ್ತಾರೆ. ಈ ಎಲ್ಲಾ ಸಂಗ್ತಿಗಳನ್ನು ಅಮಲದಾರರು ಲಕ್ಷಕ್ಕೆ ತಂದು, ಬಡ ಪ್ರವಾಸಿಕರ ಗೋಳನ್ನು ಕಾಂಬದಿಸಿದ್ದಲ್ಲಿ ಬಹಳೇ ಪುಣ್ಯಪ್ರಾಪ್ತಿ ಮಾಡಿಕೊಂಡಂತಾಗುವದು.

ಕೊತ್ತಂಬರಿ ಗೋಣಿ	,,	...	೧೧—೧೨
ಉಪ್ಪು ಗೋಣಿ	,,	...	೪-೫-೦
ಕರೆಪಿನ ಸೂರ್ಯ ,		...	೯-೭-೦
ಹಂಚ	,,	...	೨-೯-೬
ಬೆಲ್ಲ ಮುಂಡಿ ಗಿಕ್ಕೆ		...	೬೦—೭೦
ಗಾಂವಟಿ ಬೆಟ್ಟೆ	,,	...	೮೫—೧೦೫
ಗೋಟು	,,	...	೫೦—೬೦
ಜೋಳ	"	...	೬೫—೭.೭೫
ಜೆಕಣ	"	...	೧೩೫—೧೪೫
ಮೆಣ್ಸು	"	...	೧೭೫—೧೭೦
ಅರಾಣಿಕ್ಕೆ	"	...	೪೦—೫೫

ಶ್ರೀ ಗೋಕರ್ಣಕ್ಕೆ ಬರುವ ಯಾತ್ರಸ್ಥರ ಬಗ್ಗೆ, ಗೋಕರ್ಣ ಕ್ಷೇತ್ರದವರಿಂದ ಸ್ಥಾಪಿಸುವ ದವಾಖಾನೆಗೆ ಶ್ರೀಯುತರಿಂದ ಬಂದಿದ್ದ ಸಹಾಯಕರ ವರ್ಗಣಿ ಯಾದಿ:—

ಸಹಾಯಕರ ಹೆಸರುಗಳು.—	ವರ್ಗಣಿ.
(ಹಿಂದಿನ ಸಂಚಿಕೆಯ ಅಂಕಿ ಬೆರಸಿ 961-0-0)	
ಸದಾಶಿವಭಟ್ಟ ಗಾಯತ್ರಿ ಪಿ	10 0-0
ಸುಬ್ರಾಯ ಕೃಷ್ಣ ಶಾಸ್ತ್ರಿ ಕಾಶ್ಮಿ ಪಿ	6 0-0
ನಾರಾಯಣ ಮಹಾಬಲೇಶ್ವರ ಪಂಡಿತ	12-0 0
ಗೋಕರ್ಣ ರಾಂಛ್ರಂಗ ಕಾಮತ	19 0 0
ವಿಠ್ಠಲ ನಾಗಪ್ಪ ಪಂಡಿತ ಅಗಸಾಲಿ	101-0-0
ನಾರಾಯಣ ರಾಮಕೃಷ್ಣ ಪಂಡಿತ ಪಿ	101-0-0
ಗಣಪಯ್ಯಾ ವೆಂಕಟರಮಣ ಪಂಡಿತ ಪಿ	101-0 0
ಗೋಪಾಳ ರಾಂಛ್ರಂಗ ಪಂಡಿತ ಪಿ	101-0-0
ಗೋವಿಂದರಾಯ ಮಹಾದೇವ ಪಂಡಿತ ಪಿ	101-0-0
ಭಾಗೀರಥಿ ಕೋಂ ರಾಮ ಗಣಪ್ಪಯ ಪಂಡಿತ ಪಿ	75 0-0
ಸುಬ್ರಮಣ್ಯ ಶಿವರಾಮ ಜೋಶಿ ಗೋಕರ್ಣ	8-0 0
ಗಂಗಾಧರಶಾಸ್ತ್ರಿ ಗೋಕರ್ಣ	5-0 0
ಅನಂತ ಪದ್ಮನಾಭಯ್ಯಾ ಬಂಕಿಕೊಡ್ಲ	30-0-0
ನಾಗಪ್ಪಾ ಮಹಾಬಲೇಶ್ವರಯ್ಯಾ ಪಿ	35-0-0
ಸದಾಶಿವ ವೆಂಕಟರಮಣಯ್ಯಾ ಹಂಡೆ ಪಿ	35-0-0
ಹರಿಹರ ಶಾಂತಭಟ್ಟ ಕಾಗಾಲ ಪಿ	33-0-0
ಎನ್. ವಿ. ಕಾಮತ ಕಾರವಾರ	3-0-0
ಅನಂತ ರಾಮರಾವ ಪಡುಕರ ನಾಡಕರ್ಣಿ	51-0-0
ಮುರಾರಿ ಗೋವಿಂದ ಪ್ರಭು ಕಡವಿ ಕಂಪನಿ	41-0-0
ಮಂಗೇಶರಾವ್ ಅನಂತಯ್ಯಾ ಕುಲಕರ್ಣಿ	30-0-0
ಲಿಂಗಯ್ಯಾ ಮಧುನಾಯ್ಕ ಹಸ್ನೆಹಳ್ಳಿ	5-0-0
ರಾಮಪ್ಪಾ ಹಮ್ಮಣ್ಣನಾಯ್ಕ ವಾಸಗೇರಿ	12-12-0
ಮುಕುಂದ ಸುಬ್ಬನಾಯ್ಕ ಹಸ್ನೆಹಳ್ಳಿ	5 0-0
ಅನಂತ ನಾರಾಯಣ ಶ್ಯಾನಭಾಗ ಚಿತ್ತಾಲ ಪಿ	51-0-0
ಶಾಮರಾಯ ಕೋಂ ಶಿವೇಶ್ವರ ಪಿ	10-0-0
ಸುಬ್ರಾಯ ಗಣ್ಪಾ ಹೆಗಡೆ ವಾಸಗೇರಿ	5-0 0
ರಾಮಾ ನಾರಾಯಣ ಶೆಟ್ಟಿ ಹೊಸಕೇರಿ	15 0-0
ವೀರಪ್ಪಾ ತಿಮ್ಮಪ್ಪಾ ಶೆಟ್ಟಿ ಪಿ	15-0-0
ಕೃಷ್ಣಾ ನಾರಾಯಣ ಶೆಟ್ಟಿ ಹೊಸಕೇರಿ	5-0-0
ವೆಂಕಣ್ಣಾ ಚಂದ್ರ ನಾಯ್ಕ ವಾಸಗೇರಿ	10-0 0
ಹಮ್ಮಣ್ಣಾ ಸಾಂತಯ್ಯಾ ನಾಯ್ಕ ಪಿ	10-0-0
ವೆಂಕಣ್ಣಾ ರಾಮ ನಾಯ್ಕ ಹಸ್ನೆಹಳ್ಳಿ	5-0-0
ಮಹಾಬಲೇಶ್ವರ ನಾರಾಯಣಭಟ್ಟ ದೇವತಿ	10-0 0
ರಾಮಚಂದ್ರ ಮಂಗೇಶಯ್ಯಾ ಕುಲಕರ್ಣಿ	10-0-0
ಶ್ರೀಧರ ಮಂಗೇಶರಾವ್ ಬಂಕಿಕೊಡ್ಲ	15-0-0
ಮಹಾಬಲೇಶ್ವರ ಶಿವರಾಮ ಜೋಶಿ ಗೋಕರ್ಣ	5-0-0
ರಾಮಕೃಷ್ಣ ಹಮ್ಮಣ್ಣ ನಾಯ್ಕ ವಾಸಗೇರಿ	5-0-0
ವಾಸ್ತವ ಮಂಜುನಾಥಭಟ್ಟ ಕಾಗಾಲ	8-0-0
ದತ್ತಾತ್ರೆಯ ರಾಂಛ್ರಂಗಪ್ಪಾ ನಾಡಕರ್ಣಿ	250-0-0
ಭವಾನಿಶಂಕರ ಮಂಗೇಶಯ್ಯಾ ಚಿತ್ರಮನೆ	150 0-0
ಶಿವಭಟ್ಟ ವೆಂಕಟರಮಣಭಟ್ಟ ಗೋಕರ್ಣ	5-0-0
ನಾಗಪ್ಪಾ ವಿಶ್ವೇಶ್ವರ ಕಾಮತ ಪಿ	51-0 0
ಗಣೇಶರಾವ ಅನಂತಯ್ಯಾ ನಾಡಕರ್ಣಿ	25-0 0
ಸರ್ವೇಶ್ವರ ಮಂಗೇಶರಾವ್ ನಾಡಕರ್ಣಿ	50-0-0
ಗಣಪತಿ ದೇವರಭಟ್ಟ ಗೋಕರ್ಣ	200-0-0
ಭವಾನಿಶಂಕರರಾವ್ ಸುಬ್ರಾವ ಪೈಂಡುರ	5-0-0
ಸುಬ್ರಾಯ ಪರಮೇಶ್ವರ ಭಟ್ಟ ಗೋಕರ್ಣ	15-0-0
ರಾಮಾ ವೆಂಕಟಯ್ಯಾ ನಾಯ್ಕ ಹಸ್ನೆಹಳ್ಳಿ	51-0-0
ಮುದ್ದು ವೆಂಕಣ್ಣ ನಾಯ್ಕ ಪಿ	15-0 0
ಹಮ್ಮಣ್ಣ ತಿಮ್ಮಪ್ಪ ನಾಯ್ಕ	25-0-0
ಮ.ಕೆ.ರಾಮ ಹೊಸಬ ನಾಯ್ಕ ಗೋಕರ್ಣ	5 0 0
ವೀರಣ್ಣಾ ರಾಮ ನಾಯ್ಕ ಪಿ	5-0-0
ಶ್ರೀ ಗೋಕರ್ಣ ಮಹಾಬಲೇಶ್ವರ ದೇವ	100-0-0
ಗೋವಿಂದ ಸುಬ್ರಾಯ ಶೆಟ್ಟಿ ನಾನು ತಿರುಮಲ ಸ್ವರ್ಣ ಸಾಲಿಗ್ರಾಮ ಸ್ವರ್ಣ ಮಂಡಳದ ಬಗ್ಗೆ	25-0 0
ಶ್ರೀ ವೆಂಕಟರಮಣಸ್ವಾಮಿ ದೇವ ತರ್ಫೆ ನಾಗಪ್ಪಾ ವಿಶ್ವೇಶ್ವರ ಕಾಮತ	25-0-0
ತಾರೀಖು 1-10-1920 ನೇ ವರೆಗೆ ವರ್ಗಣಿ ಒಟ್ಟು	3204-12-0
ಪೋಸ್ಟೇಜ ಬಟ್ಟ	6-0-11
ಓದ ಬೆಳೆದ ಬಟ್ಟ	12-6-0
	3223-2-11
ಛಾಪಖಾನೆ ಖರ್ಚ ವಜಾ	4-8-3
	3218-10-8
ಪೋಸ್ಟಾಫೀಸುಸೆವ್ವಿಂಗ್ಸ ಬ್ಯಾಂಕ	3118-10-8
ಓದ ಬೆಳೆದ ಬ್ಯಾಂಕ್ ದ.ಮ.	100-0-0
ಒಟ್ಟು	3218-10-8

ಸವಲತ್ತು ! ಸವಲತ್ತು !!

ಬಗ್ಗೋಣ ರಾಮನ ತಿಮ್ಮಣ್ಣ ಪಂಡಿತರ

ದುರ್ಮತಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಬೆಲೆ ರೂಪಾಯಿ ೧-೭-೦ ಇಟ್ಟಿದೆ. ಆದರೆ, ಇದೇ ಅಕಟೋಬರ ತಿಂಗಳ ಅಖೈರದೊಳಗೆ ಮುಂಗಡ ಕೊಡುವವರಿಗೆ ರೂಪಾಯಿ ೧೧-೦-೦ ದ ಸವಲತ್ತಿ ದರ ಇಟ್ಟಿದೆ. ಅವಶ್ಯವಿದ್ದವರು ಇದರ ಪ್ರಯೋಜನಪಡೆಯ ಬಹುದು.

ಚಾಲಕ ಸ್ವಾರ್ ಸಿಟ್ ಕೆನರಾ ಪ್ರೆಸ್, ಕುಮಟಾ.

ಪ್ರಸಿದ್ಧ ಚಾಯಿ ಪುಡಿಗಳು.

ಸೀಲೋನ್, ಕಿಂಗ್, ಶಾಂಘಾಯಿ ೧೦ ಕ್ಕೆ ೧೪ ಚಿಲ್ಲರೆ ವ್ಯಾಪಾರಿಗಳಿಗೆ ರಿಯಾಯಿತಿ ದರದಿಂದ ಕೊಡುವದು. ಹೋಲ್‌ಸೇಲ್ ದರಕ್ಕೆ ಕೇಳಿಕೊಂಡರೆ, ಭಾರೀ ಕಮಿಶನ್.

ಪತ್ತೆ— ಎಸ್. ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಿವಿಯ ಘಾಯ, ಬಿಳ್ಳ ಜಳಕಿಯು, ಪಟ್ಟಿನ ಸೋಪು, ಯಾವದೇ ತರದ ಜಳಕಿಯು. ಯಾ ಎಲಗು ಮುರಿದಲ್ಲಿ ಸಹ ಇದನ್ನು ನೀರು ಹಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ. ಕ್ರಯ ಬಾಟಲಿ ೧ಕ್ಕೆ ೧ ರೂ. ೧೨ ಬಾ. ೧-೨-೦. ವ್ಯಾಪಾರಸ್ಥರಿಗೆ ಭರಪೂರ ಕಮಿಶನ್. ಪತ್ತೆ — ಮುಬ್ಬಾಜಿ ಹಿರಾಲಾಲ ದಲ್ಲಿ ತರಾಮ, ಗುರಖರ ಹವೇಲಿ ಕುಮಟಾ.

ಬಂದೂಕ ಯಾ ಸಾಮಾನು.

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರಕೊಂಡರೆ ಅದನ್ನು ಭೆಟ್ಟಿ ಯಾದರೆ ತರಿಸಿಕೊಡುವರು. ವಾಹಿತಿಬೇಕಿದ್ದರೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ.

ಶೇಷಗಿರಿರಾವ ಧಾಕಪ್ಪನವರ, ಶಿರ್ಸಿ.

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳು ಸಾಕಷ್ಟು ಸಿಕ್ಕುವುವು.

ಪತ್ತೆ— ಭಡಕಿ ಭ್ರಾತೃಸಂಘ, ಗೋಕರ್ಣ.

ಅತ್ಯುತ್ತಮವಾದ ಮಂಗಳೂರ ನಶ್ಯವು, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ಕೋಕ ದರ, ಸವಲತ್ತು ಇರುತ್ತದೆ.

ಪತ್ತೆ:— ಬಿ. ದಾಸ, ಕುಮಟಾ.

ನಮ್ಮಲ್ಲಿ ಸಿಗುವ ದಿವ್ಯ ಔಷಧಗಳು.

ಮೇಘನಾಶಕ ಚೂರ್ಣ— ಎಲ್ಲ ಕಾರಣಗಳಿಂದ ಹುಟ್ಟಿದ ತಲೆಯ ಬುರುಬು ನಾಶಿಸುವ ನಿಶ್ಚಯ ಚೂರ್ಣ.

ಕ್ರಯ ಪ್ರತಿ (೧ಕ್ಕೆ ೧೪ ಡಬಿ) ೧೨ ಕ್ಕೆ ೧-೨-೦.

ವಿರಚಿತ ಸಂಜೀವನಿ ಮಾತ್ರೆ— ಈ ಮಾತ್ರೆಯು ಕೂಸುಗಳಿಗೆ ಉಪಯೋಗಿಸಿದರೆ ಯಾವದೇ ತರದ ಉದರ ವ್ಯಾಧಿಯು ಬರಲಾರದು. ಕ್ರಯ ಬಾಟ್ಲಿ ೧ಕ್ಕೆ ರೂ. ೧॥

ನಾಸ ಸ್ಪಾನ ಗುಟಿಕೆ— ಯಾವದೇ ತರದ ನಾಸ ಸ್ಪಾಸ, ದಮ್ಮು, ಕೆಮ್ಮು ಇವುಗಳಮೇಲೆ ಉಪಯೋಗಿಸುವದು.

ಕ್ರಯ— ೧ಕ್ಕೆ ೨ ಆಣೆ ೧೨ ಕ್ಕೆ ೧॥ ರೂ.

ಸ್ವಪ್ನನಾಶಕ ಚೂರ್ಣ— ಯಾವದೇ ತರದ ಸ್ವಪ್ನ ಹುಣ್ಣಿ ಸಮೇಲೆ ಹಚ್ಚದರೆ ೮ ದಿವಸಗಳಲ್ಲಿ ಗುಣ.

ಕ್ರಯ— ದೊಡ್ಡ ಡಬಿ ೧ ಕ್ಕೆ ರೂ. ೨-೦-೦.

ಶ್ರೀ. ಆಯುರ್ವೇದ ವೈದ್ಯ ಶಾಲಾ,

ಆರ್. ಎನ್. ವೈದ್ಯ, ಗುರಖರವೇಟ ಕುಮಟಾ.

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣಸಲ್ಲದು.)

ಧಾತುಪುಷ್ಟಿಕರ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನೇಂದ್ರಿಯ ದ ಶಿಥಿಲತೆ, ನಿಶಕ್ತತೆ, ನಪುಂಸಕತ್ವ ಹೋಗಿ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಬಹುಪುಷ್ಟಿ ಈ ವಿರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮಧುಮೇಹ ವಿಕ ಇಂದ್ರಿಯಸ್ತಂಭಕ ಗರ್ಮಿ, (ಪ್ರಮೇಹ) ಗನೋತ್ಪತ್ತಿ ದೇಹದ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಡಿಮೆ ಮಾಡುವ ಮುಂತಾದವು ಅತಿಶಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಶರೀರಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಬಾಟ್ಲಿಗೆ ೩೦ ಗುಳಿಗೆಗಳು ದೊರೆಯುತ್ತವೆ. ತಿಮ್ಮತ್ತು ೩೦ ಗುಳಿಗೆಗಳಿಗೆ ೪ ರೂಪಾಯಿ ಟ. ಖ. ಬೇರೆ. ಅನುಪಾನ ಪತ್ರಿಕೆ ಔಷಧದ ಸಂಗಡ.

ವಿಳಾಸ— ಜಿ ಎಲ್. ಜೋಶಿ. ಕಂಪನಿ.

ಪೋಸ್ಟ— ಬನವಾಸಿ. ಉತ್ತರ ಕಾನಡಾ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ [illegible] ರಜಿಸ್ಟರ ಮಾಡಲ್ಪಟ್ಟ

ಆರ್ಕಶಫಾ ಅಥವಾ ಆರೋಗ್ಯಬಿಂದು.

[illegible]

ರೋಗದ ನಾಮಗಳು

[illegible] ಜ್ವರ, ಗಂಡಮಾಲೆ [illegible] ಅಜೀರ್ಣ [illegible] ಪುತ್ತು [illegible] ಹೊಟ್ಟೆ ಬೇನೆ [illegible] ಮೊದಲಾಗಿ ಅನೇಕ ರೋಗಗಳು [illegible] ಈ ಆರೋಗ್ಯಬಿಂದುವಿನ [illegible]

[illegible]

[illegible]

[illegible] ಔಷಧಗಳು.

1 [illegible]

2 [illegible]

3 [illegible]

4 [illegible]

5 [illegible]

6 [illegible] ಮತ್ತು [illegible]

ಎಸ್. ಗಣಪಯ್ಯಾ ಅಂಡ ಸನ್ಸ್
ನೆಟಿವ್ ಡೊಕ್ಟರ್ಸ್ ರಥಬೀದಿ
ಮಂಗಳೂರ [illegible]

ಹೊಸ ಪುಸ್ತಕಗಳು.

[illegible] ಚರಿತ್ರೆ [illegible] ಸ್ವಾಮಿ [illegible] ಚರಿತ್ರೆ [illegible] ಕೃತಕತ್ವ [illegible]

ವಿಳಾಸ:— ಎಂ. ಎಂ. ಹರ್ಡೇಕರ.
[illegible]

ಹೊಸ ತೋಟ "ಓಂ" ಹೊಸಹೋಟ
ಗುಣ ಚಾರದಿದ್ದರೆ ಹಣ ಮರಳಿ

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ.)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ [illegible] ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯೋಗದಿಂದ ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ [illegible] ಮೂತ್ರದ [illegible] ಅಥವಾ ಆದಮೇಲೆ ಧಾತು ಬೀಳುವದು [illegible] ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿ [illegible] ವೃದ್ಧಿಯಾಗುವದು, ಒಹುದಿವಸದಿಂದ [illegible] ಸಂಬಂಧಿಯು [illegible] ಗುಣವಾಗುವವು ಮಲಶುದ್ಧಿಯಾಗಿ [illegible] ಹಸಿವಾಗುವದು. [illegible] ಯಾವ್ಯಾವ ಅಪ್ರತಿಮ ಗುಣವುಳ [illegible] ಈ ಪಾಕಸೇವನೆಯಿಂದ [illegible] ಇನ್ನೂ ಅನೇಕ ಮಹತ್ವದ ಗುಣ [illegible] ಅನುಭವ [illegible] ಸ್ತ್ರೀ [illegible] ಮೊದಲಾದ ಸ್ತ್ರೀಯ [illegible] ಸ್ತ್ರೀಯು [illegible] ಯೋಗ್ಯರಾಗುವ [illegible] ಒಂದು ಡಬ್ಬಿ ಪಾಕಿನಿಂದ [illegible] ಮೂರು ಡಬ್ಬಿ ಪಾಕಿನಿಂದ [illegible] ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

[illegible] ಡಬ್ಬಿ [illegible] ಡಬ್ಬಿಗಳಿಗೆ [illegible] ಡಬ್ಬಿ [illegible] ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಲ್ಲಿ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ—[illegible] ಆರ್ ಬ್ರದರ್ಸ ಮತ್ತು ಕಂಪನಿ.
ಪೋಸ್ಟ ಸಿಪ್ಪಾಣಿ, ಜಿ ಬೆಳಗಾಂವ

ಗ್ಯಾಸ ದೀಪಗಳು.

ಭಾಡಿಗೆಗೆ ಇಟ್ಟಿರುವೆವು.

ಈ ದೀಪಗಳು ಯಾವದೇ ತರದ ಸಾರ್ವಜನಿಕ [illegible] ಹೊತ್ತಿನಲ್ಲಿ ಯಾವ [illegible] ರಾತ್ರಿ ಹೊತ್ತಿನಲ್ಲಿ ನಡೆಯುವ [illegible] ಇವುಗಳ [illegible] ಹೆಚ್ಚು [illegible] ತಗಲುತ್ತದೆ. ಈ [illegible] ದೀಪಗಳು [illegible] ಈ ದೀಪಗಳು ಹೆಚ್ಚು [illegible] ತ್ರಾಸಗಳು ಸಹ ಇಲ್ಲ.

[illegible] ಭಾಡಿಗೆಯ [illegible] ಪತ್ರ [illegible]

ಪ್ರವಾಸೋಸ್ತ್ರವು [illegible] ಕ್ಲಾಸಭಾಗ.
ಹೆಗಡೇಕರ, ದುಕಾನ, ಕುಮಟಾ.

Printed and published by Kr[illegible]rao Kesha[illegible] at h[illegible] Kanara Press Kum[illegible]

Reg: No. B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪.

ಪತ್ರದ ವರ್ಗಣಿ:-
ಕುಮಟೆಯಲ್ಲಿ ತಗಾವೆ ರೂಪಾಯಿ 2-0-0.
ಮನೆಯಾರ್ಡರಿನಿಂದ ರೂ. 2-13-0.
ವ್ಹಿ. ಪಿ. ಅಂಚೆವೆಚ್ಚ ಸಹಿತ ರೂಪಾಯಿ 2-15-0.
ಬಿಡಿ ಸಂಚಿಕೆಗೆ 0-1-0.

ನರಪತಿಹಿತಕರ್ತಾ द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:-
ಕನ್ನಡ, ಇಂಗ್ಲಿಷ ವ್ಯಾಕಾ ಪ್ರಾಪಿನ(೧೫ ಎಮ್‌ಅಕ್ಷ) ೫ ಸಾಲುಗಳ ವರೆಗೆ ರೂ. 1-0-0
ಅನಂತ್ರ ಪ್ರತಿ ಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ಹೊತ್ತರಿರುವವೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

-[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೪ ಮಾಹೆ ನವಂಬರ ಸನ್ ೧೯೨೦ ನೇ ಇಸವಿ.]-

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಹೊಟ್ಟು, ಕಣ್ಣುಉರಿ, ಕಿವಿಯಿಂದ ಕೀವು ಸೋರುವದು, ಪಿತ್ತಸಂಬಂಧ, ಕಣ್ಣುನೋವು, ಅಪಸ್ಮಾರ, ದೃಷ್ಟಿ ಬಾಧವಿರುವದು, ನೆನಪು ಶಕ್ತಿ ಕುಂದಿ ಹೋಗುವದು, ಇವುಗಳನ್ನೆಲ್ಲಾ ನಿಂತಿತ ಗುಣವಾಗುತ್ತದೆ; ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆ 1ಕ್ಕೆ 1-0-0; 3 ಕ್ಕೆ 2-10-0. ದೊಡ್ಡ ಸೀಸೆ 1ಕ್ಕೆ 2-0-0. 3ಕ್ಕೆ 5-4-0

ಚಂದನಾಸವ.

ಮೂತ್ರ ಕೃಚ್ಛ, ಮೂತ್ರ ಹನಿ ಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ, ಮುಂತಾದ ಈ ಮೇಹರೋಗವನ್ನು ಗುಣ ಮಾಡುತ್ತದೆ.

ಬಾಟ್ಲಿ 1 ರ ಕ್ರಯ 1-8-0.
ಬಾಟ್ಲಿ 3 ರ ಕ್ರಯ 4-0-0

ನಾರೀಸಖಿ.

ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋದಯದಲ್ಲಿ ಅತ್ಯಲ್ಪವಾಗಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು ಸೊಂಟನೋವು, ಹೃತ್ಕಂಪ, ಬಿಳಿಸೆರಗು (ಬಿಳಿಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಬಾಟ್ಲಿಗೆ ರೂ. 2/-.

ಚಿನ್ ಚಿನ್ ಬಾಮ.

ಎಲ್ಲಾ ತರದ ನೋವು, ತಲೆನೋವು, ಚಳಂ, ಘಾಯ, ಚೇಳು ಕಡಿತ ತಕ್ಷಣ ಗುಣ. ಬೆಲೆ ಸುಲಭ. ಗುಣ ಅಧಿಕ. ಡಬ್ಬಿ ೧ ಕ್ಕೆ 8 ಆಣೆ ಟ. ಖ. ಅಲಾಯದ. ಕೆಟಲಾಗಿಗೆ ಬರೆಯಿರಿ. ವಿಳಾಸ:—

ಮನೋಲ್ಲಾಸಿನಿ ಕಂಪನಿ.

7. ಶಂಕರನಾರಿ, ದಕ್ಷಿಣ ಕಾನಡಾ.

MALARIANA COMPANY.

HAMPANKATTA, MANGALORE

ಮಲೇರಿಯಾನ:— ಮಲೆಜ್ವರ, ಕಂಪಜ್ವರ ಮತ್ತು ಇದರಿಂದುಂಟಾಗುವ ಬಾಧೆಗಳು ಪೂರ್ಣ ಗುಣಪಡಿಸುವದು. 8 ಔನ್ಸಿನ ಬಾಟ್ಲಿ 1ಕ್ಕೆ ರೂ. 1-8 ½ ಡಜನಿಗೆ ರೂ. 8-8; 1 ಡಜನಿಗೆ ರೂ. 16-8.

ಮಲೇರಿನ್:— ಮಲೆಜ್ವರದ ಮಾತ್ರೆಗಳು, ಪ್ರಯಾಣಸ್ಥರಿಗೆ ಬಹು ಪ್ರಯೋಜನಕರದ್ದು. 25. 60 ಮತ್ತು 100 ಮಾತ್ರೆಗಳಿಗೆ ಆಣೆ 8. ರೂ. 1. ಮತ್ತು ರೂ. 8-1.

ರೆವ್ಯುಮೊ ಬಾಮು: ಸಂಧಿವಾತ, ಕಟಿವಾತ, ಇತರ ಎಲ್ಲಾ ನೋವುಗಳಿಗೆ. ಕ್ರಯ: ಡಬ್ಬಿ 1ಕ್ಕೆ ಆ 8. 1 ಡಜನಿಗೆ ರೂ 5-4-0.

ಯುಕಲಿಪ್ಟಸ್ ಆಯಿಲ್: 1 ಔನ್ಸಿಗೆ ಆ. 5. ½ ಡಜನಿಗೆ ರೂ.1-10 1 ಡಜನಿಗೆ ರೂ. 3.

ಶುಸ್ಲರ್ ಪಂಡಿತರ ಹನ್ನೆರಡು ಟಿಶ್ಯು ಔಷಧಗಳು.

ಡ್ರಾಮ್ 1. 2. 4. ಔನ್ಸ್ 1. 2. 4.
ಆ.2½ ಆ.3½ ಆ.6. ಆ.11. ರೂ.1-4. ರೂ.2-4

ದೃಷ್ಟಿಚಕ್ರಗಳು.

ನಮ್ಮ ದೃಷ್ಟಿ ಪರೀಕ್ಷಕರು 1902 ನೇದರಿಂದ ದೃಷ್ಟಿ ಪರೀಕ್ಷೆಯಲ್ಲಿ ಬಹು ಪ್ರಖ್ಯಾತಿಪಟ್ಟ ಹೊಕ್ಕಲೊಡನೆ ಪಕ್ಕಾ ಕಂಬಿತವಾಗಿ ಪ್ರಾಯಕ್ಕೂ ದೃಷ್ಟಿಗೂ ತಕ್ಕುದಾದ ಕನ್ನಡಕಗಳನ್ನು ಆರಿಸಿ ಕೊಡುವ ಕೌಶಲ್ಯವನ್ನು ಪೂರ್ಣ ತಿಳಕೊಂಡು ಕನ್ನಡಕಗಳನ್ನು ಸುಲಭಕ್ರಯದಲ್ಲಿ ಕೊಡುತ್ತಿರುತ್ತಾರೆ. ಇಲ್ಲಿ ರೋಲ್ಡ ಗೋಲ್ಡ ನಿಕ್ಕಲ ಫ್ರೇಮುಗಳೂ, ಬಿಸಿಲಿಗೆ ಹಾಕಿಕೊಳ್ಳುವ ಕನ್ನಡಿಗೆ ತಂಪಾಗುವ ಕನ್ನಡಕಗಳೂ ಇತರ ಎಲ್ಲಾ ವಸ್ತುಗಳೂ ದೊರೆಯುವವು. ಪರ ಊರಿನವರು ತಮ್ಮ ಪ್ರಾಯವನ್ನಾಗಲೀ, ದೃಷ್ಟಿಗೆ ಸರಿಕಾಣುವ ಕನ್ನಡಕವನ್ನಾಗಲಿ, ಅದರ ನಂಬ್ರವನ್ನಾಗಲಿ ನಮಗೆ ತಿಳುಹಿಸಿದಲ್ಲಿ ಅವರಿಗೆ ಹೊಸ ಕನ್ನಡಕವನ್ನು ಕಳುಹಿಸಬಹುದು.

ಪತ್ತೆ:—

ಮಲೇರಿಯಾನಾ ಕಂಪೆನಿ,
7. ಮಂಗಳೂರು.

ಅನುಭವಸಿದ್ಧ ವಾದ ಔಷಧಗಳು!!!
ಸಿಪ್ಸ್ರಿ ಹಸ್ಮ ಕೃಬ್ನಜಗತ್!!

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ.
ಪ್ರವಾಳ, ಕೇಶರ, ಅಮರಸತ್ವ, ಶಿಲಾಜತು,
ಮತ್ತು ವನಸ್ಪತಿ ಮಿಶ್ರಿತ.

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉಪದಂಶವಿಕಾರ, ಮಸ್ತಕಶೂಲೆ, ಪ್ರಮೇಹ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ, ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ ೪೨ ದಿವಸ ಬೇಕು. ಗುಳಿಗೆ ೮೪ ಕ್ಕೆ ರೂ. ೪-೦-೦

(೧) ಬಾಲಾಮೃತಗುಟಿಕಾ.— ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ್ದು. ಗುಳಿಗೆ ೩೦ ಕ್ಕೆ ರೂ. ೧-೦-೦. (೨) ಸ್ವಪ್ನಾವಸಮೇಲೆ ಚೂರ್ಣ:— ೧೪ ದಿವಸದ ಔಷಧಕ್ಕೆ ರೂ. ೩-೦-೦. (೩) ಗಜಕರ್ಣನಾಶಕ ಮಲಮ — ಡಬ್ಬಿಗೆ ಆಣೆ ೦-೮-೦. (೪) ಮೂಲವ್ಯಾಧಿ ನಾಶಕಗುಳಿಗೆ— ಹಳೆ ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ. ೨-೦-೦.

ಅನುಪಾನಪತ್ರ, ಔಷಧಿಯ ಸಂಗಡ. ಅಂಚೆ ವೆಚ್ಚ ಬೇರೆ.

ವಿಳಾಸ— **ವೈದ್ಯ. ವ್ಹಿ. ಎಸ್. ಮೋಡಕ ಮತ್ತು ಕಂಪನಿ, ಪೋಸ್ಟ ಸಿರಸಿ.**
ಜಿಲ್ಲಾ ಉತ್ತರಕಾನಡಾ.

ಮಧುರೆ ಚುನ್ನಡಿ ಅಂಚಿನ ಸೀರೆಗೆ

ಕ್ರಯ ರೂ. 4-8-0



ಇದು ಉಪಯೋಗಕ್ಕೆ ಧಡತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ ೧೮ ಮೊಳ ಸುಂದರವಾದ ಸರಕು. ಒಂದನ್ನು ತರಿಸಿ ಪರೀಕ್ಷಿಸಿ ಕ್ರಯ ರೂ. 4-8-0.

ವಿಳಾಸ:— ವಿ. ಕೆ. ಪೆನ್ ಅಂಡ್ ಕಂಪನಿ
24, ವಿನಾಯಕಮೇಸ್ತ್ರಿ ಬೀದಿ, ಮದರಾಸ

मि. एस. जी. बेंकर यांच्या भिंतीस लावण्याच्या मोठ्या जाहिरातींतला मजकूर

[सरकाराशी सहकारिता करणेकरता कौन्सिलावर बहिष्कार घाला '

महात्मा गांधी ह्मणतात : –

' आपला मान गमवण्य [illegible] असेल, खिलाफत व पंजाब यांच्या [illegible] झालेले अन्याय दूर व्हावे अशी [illegible] [illegible] अमेल व [illegible] विषयी [illegible] [illegible]

बिलकूल [illegible]

मतदारानो '

[illegible]]

[सरकाराशी सहकारिता करणेकरता '

कौन्सिलावर बहिष्कार घाला

[illegible] ज्या [illegible] -याशी व कोणी [illegible] त्याला कोणत्याही [illegible]

असा राष्ट्रीय सभेचा हुकूम आहे

ज्याना ज्याना मतदाराचा हक्क मिळाला असेल त्यांचे या हुकुमाप्रमाणे चालणे हे कर्तव्य होय मतदारांना ! हे कर्तव्य बजावा व कोणासही मत देणार नाही असा [illegible] नाम्यावर सही करा]

Untrained Teachers of Primary Schools and Time-scale.

To The Editor, 'Kanara News'
Sir,

Will you kindly [illegible] space for the following in the next issue of your esteemed journal [illegible] oblige. There are not a few untrained men among the teachers of primary schools. Since April 1909 such untrained teachers have been admitted into pensionable service and given a grade of Rs. 11 per month. Though they are without any special qualifications they are men of experience, acquired in the course of their pretty long service. I think it is not unusual to find capable and diligent workers among the untrained teachers. As they also give the best of their service to the state, [illegible] promotions graded according to the time scale I humbly [illegible] that they ought not to be [illegible] the dark. I beg to [illegible] that in the case of the assistant teachers the initial pay [illegible] Rs. [illegible] rising up to Rs. 50, [illegible] the Head masters, [illegible] pay should be Rs. 30 [illegible] up to Rs. [illegible] In the struggle [illegible] untrained teachers [illegible] few advantages. So they [illegible] special consideration

Yours,
[illegible]
Untrained Head master
[illegible] Kumta

[illegible] ಈಗಿನ ಕರ್ತವ್ಯವೇನು ?

[illegible]

ಇವರ ರಾಷ್ಟ್ರಭಕ್ತ

ಧುರೀಣದ
" ಹಿಂಸೆಯ ಪ್ರೋತ್ಸಾಹನ. "

ಪ್ರಿಯ ಸದ್ಗುಣಾಂತಃಕರಣಿಗಳಾದ ಮಹನೀಯರೇ

ಇದೇ ಕಳೆದ ಮಂಗಳವಾರ ತಾರೀಖು ೨೬ನೇ ದಿವಸ ಧುರೀಣದ ಇಹವೃತ್ತದಲ್ಲಿ ಬರೆದ ಹಿಂಸೆಯ ಪ್ರೋತ್ಸಾಹನದ ಲೇಖವನ್ನೂ ಅಸ್ಥಾನಿಕ ವಿವರಣೆಯನ್ನೂ, ಅಪೂರ್ಣವಾದ ಸ್ವಕಪೋಲಕಲ್ಪಿತ ವಿಚಾರತರಂಗಗಳನ್ನೂ ನೋಡಿ ನಿರಕ್ಷರ ಕುಕ್ಷಿಗಳು ಸಹ ನಗದಿರಲಾರರೆಂದು ನಿಸ್ಸಂಶಯವಾಗಿ ಹೇಳಬಹುದು [illegible] ಉತ್ತರಗಳನ್ನು ಸ್ವಲ್ಪ ವಿಚಾರದಿಂದ ಕೊಡಲಿಚ್ಛಿಸುವೆವು [illegible] ಪಂಜಾಬದಲ್ಲಿ ನಡೆದ ಘೋರ ನರಬಲಿಯ ಸಂಗತಿಗಳನ್ನು ಕೇಳಿದರೆ, ಏನನ್ನುವರೋ ಎಂಬ ಸಂದೇಹವದೆ ' ಎಂಬ ವಾಕ್ಯವನ್ನು ಬರೆದಿರುತ್ತಾರಷ್ಟೇ [illegible]

[illegible]

" ತಾತ ತೋಡಿದ ಬಾವಿಯೆಂದು ಸಾಳು ನೀರು ಕುಡಿಯಬಹುದೇ " [illegible]

[illegible]

(ಅಪೂರ್ಣ)

ತನ್ನ ಮರಿ, ಪರರ ಮರಿ.

(ಲೇಖಕ- Pro-ಧುರೀಣ)

ಕಳೆದ ಅಕ್ಟೋಬರ ತಾ. ೫ನೇ ಕಾನಡಾ ಧುರೀಣದಲ್ಲಿ 'ಅಸಹಕಾರಿತೆ ಮತ್ತು ಕಾನಡಾ ಜಿಲ್ಲೆ' ಎಂಬದೊಂದು ಉದ್ದನ್ನ ಲೇಖವು ಪ್ರಕಟವಾಗಿದೆ. ಅದರೊಳಗೆ 'ಧುರೀಣರು' ಅಸಹಕಾರಿತೆಯಮೇಲೆ ತಮ್ಮ ವಿಚಾರಗಳನ್ನು ಸ್ಫುಟಪಡಿಸಿದ್ದಾರೆ. ಆ ಲೇಖದಲ್ಲಿ ಮುನಿಸಿಪಾಲಿಟಿ ಹಾಗು ಲೋಕಲ್‌ಬೋರ್ಡ ಇಂಥ ಸ್ಥಾನಿಕ ಸ್ವರಾಜ್ಯದ ಸಭಾಸದರು ತಮ್ಮ ತಮ್ಮ ಸ್ಥಳಗಳ ರಾಜೀನಾಮೆಕೊಡುವದು ಕಠಿಣವೆಂದು, ಮೊದಲು ಸರ್ವಸ್ಥಾಪನಾನ್ನ ಠರಾಯಿಸಿಟ್ಟು, ಅದರ ಕಾರಣಗಳನ್ನು ಸಹ ನಮೂದಿಸಿರುವರು. ಅವು ಯಾವವೆಂದರೆ —

(೧) ಈ ಸಂಸ್ಥೆಗಳಿಗೆ ಪಿತಾರ್ಥಯುಕ್ತವಾದ ಆಲೋಚನೆಯನ್ನು ಕೊಡಲಿಕ್ಕೆ ಯೋಗ್ಯರಾದ ಸದಸ್ಯರು ದೊರಕುವದು ದುರ್ಲಭ,

(೨) ಒಮ್ಮೆ ಇಂಥ ಮನುಷ್ಯರಿದ್ದಲ್ಲಿ, ಅಂಥವರನ್ನು ಬಹುತರ ಸರಕಾರದವರೇ ಆರಿಸುವರು.

(೩) ಮತದಾರರಿಂದ ಆರಿಸಲ್ಪಡುವ ಸದಸ್ಯರಾಗಲಿಕ್ಕೆ, ಮತದಾರರಿಂದ ಮತವನ್ನು ಪಡೆಯಲಿಕ್ಕೆ ಮಾಡಬೇಕಾದ ಅನೇಕ ಸ್ಥಿರ ಪ್ರಯತ್ನಗಳನ್ನು ಮಾಡುವ ಶ್ರಮವನ್ನು ಕೈಕೊಳ್ಳಲಿಕ್ಕೆ ಇಂಥವರು ಸಿದ್ಧರಾಗಿರುವದಿಲ್ಲ.

(೪) ಆದುದರಿಂದ ಅವರು ಸರಕಾರದ ಆರಿಸೋಣದಮೇಲೆಯೇ ಅವಲಂಬಿಸಿರುವರು.

(೫) ಇಂಥವರು ಸ್ಥಾನಿಕ ಸ್ವರಾಜ್ಯ ಕಾರ್ಯನಿರ್ವಾಹಕ್ಕೆ ಅತಿ ಅಗತ್ಯವಾಗಿರುವರು.

(೬) ಅದ್ದರಿಂದ, ಇವರು ಸ್ಥಾನಪಡೆದಾಗುವದು ಅತ್ಯವಶ್ಯವೇ ಸರಿ.

(೭) ಲೋಕಮತದಿಂದ ಆರಿಸಲ್ಪಡುವ ಸದಸ್ಯರು ಬಹುತರ ವಿದ್ಯಾರಹಿತರು

(೮) ಕಾರ್ಯನಿರ್ವಾಹಕ ವೃತ್ತಿಯಲ್ಲಿ ವಿಶೇಷ ಸಹಾಯ ಮಾಡಲು ಯೋಗ್ಯರಾಗಿಲ್ಲ.

(೯) ಇಂಥವರಿಂದ ಸ್ಥಾನಿಕ ಸ್ವರಾಜ್ಯದ ಕಾರ್ಯ ನಡೆಯುವದು ಕಠಿಣವೇ ಸರಿ.

* * * * *

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಅಸಹಕಾರಿತೆಯ ಆಚರಣೆಯು ಕಠಿಣವೇಕೆ? ಎಂಬದನ್ನು (ಧುರೀಣರ ವಿಚಾರಗಳ ಸಂಬಂಧ ಗೈರಸಮಜೂತಿ ಆಗಬಾರದೆಂದು) ನಾನು ಧುರೀಣರ ಭಾಷೆಯಲ್ಲಿ ಕೊಟ್ಟಿದ್ದೇನೆ. ಈ ಕಲಮುಗಳನ್ನು ಸೂಕ್ಷ್ಮದೃಷ್ಟಿಯಿಂದ ಪರ್ಯಾಲೋಚಿಸಿದರೆ, ಇದರೊಳಗೆ ತರ್ಕವೆಷ್ಟಿದೆ, ಕುತರ್ಕವೆಷ್ಟಿದೆ, ಧುರೀಣರಿಗೆ ಅಸಹಕಾರಿತಾ ತತ್ವದ ಮರ್ಮವು ಎಷ್ಟರ ಮಟ್ಟಿಗೆ ತಿಳಿದದೆ ಎಂಬ ಸಂಗತಿಗಳು ಮಾರ್ಮಿಕ ವಾಚಕರಿಗೆ ತಿಳಿಯುವವು. ಸದ್ಯಕ್ಕೆ, ನಾನು ಅಸಹಕಾರಿತೆಯಂಥ ಪವಿತ್ರ ಸ್ವಾರ್ಥತ್ಯಾಗಿ ತತ್ವದ ಹಿಂದೆ, 'ಧುರೀಣ' ಸಾಹೇಬರು ಸ್ವಾರ್ಥವನ್ನು ಹ್ಯಾಗೆ ಅಡಗಿಸಿಟ್ಟಿದ್ದಾರೆ, ಹಾಗು ತಮ್ಮ ಸ್ವಾರ್ಥ ಸಾಧಿಸುವಾಗ ಲೋಕಶಾಹಿಯ ಅಮೂಲ್ಯ ತತ್ವವನ್ನು ಹ್ಯಾಗೆ ಮಣ್ಣುಗೂಡಿಸಿರುತ್ತಾರೆಂಬ ಎರಡೇ ಬಾಬುಗಳನ್ನು ಚರ್ಚಿಸುವೆನು

* * * * *

ಪ್ರಿಯ ವಾಚಕರೇ, 'ಧುರೀಣರ' ವಿಧಾನಗಳನ್ನು ಸ್ವಲ್ಪ ವಿಮರ್ಶಿಸಿರಿ. 'ಯೋಗ್ಯ ಮನುಷ್ಯರನ್ನು ಬಹುತರ ಸರಕಾರದವರೇ ಆರಿಸುವರು, ಮತ ಪಡೆಯಲು ಮಾಡಬೇಕಾದ ಅನೇಕ ಸ್ಥಿರ ಪ್ರಯತ್ನಗಳನ್ನು ಮಾಡಲಿಕ್ಕೆ, ಈ ಯೋಗ್ಯ ಮನುಷ್ಯರು ಸಿದ್ಧರಾಗಿರುವದಿಲ್ಲ; ಅದ್ದರಿಂದ ಇವರು ಸರಕಾರೀ ನೇಮಣೂಕಿಯಮೇಲೆ (ಧುರೀಣರ ಭಾಷೆಯಲ್ಲಿ, ಆರಿಸೋಣದ ಮೇಲೆ) ಅವಲಂಬಿಸಿರುವರು; ಈ ಯೋಗ್ಯ ಮನುಷ್ಯರಿಗೆ ಖಟಪಟಿ ಬೇಡಾದರೆ, ಮೆಂಬರಿಯಾಕೆ? ಎಂದು ಯಾರೂ ಕೇಳಬಹುದು. ಅದಕ್ಕೆ ಧುರೀಣರ ಉತ್ತರವಿಷ್ಟೇ— ಈ ಮಹಾಪುರುಷರಹೊರ್ತು, ಸ್ಥಾ. ಸ್ವ ಕಾರ್ಯನಿರ್ವಾಹವಾಗುವದಿಲ್ಲ. ಧುರೀಣರ ಈ ಮೂಖತನದ ವಿಧಾನ ನೋಡಿದರೆ, ದರ್ಪಶಾಲಿ ಧುರೀಣಶಾಹಿಯ ಒಣ ಹೆಮ್ಮೆಯು ಅವರ ಸ್ತುತಿಪಾಠಕರನ್ನು ಎಷ್ಟು ಕುರುಡರಾಗಿ ಮಾಡಿಟ್ಟದೆಂದು ಯಾರಿಗೂ ತಿಳಿಯುವದು. ಕೇವಲ ಜನಹಿತ ತತ್ಪರರಾಗಿ, ಈ ಧುರೀಣರು ಸರಕಾರೀ ಅಧಿಕಾರಿಗಳ ಸಮಯ ಕಾಯ್ದು, ಅವರ ಮೆಹರ್ಬಾನಿಯಿಂದ ಸ್ಥಾ. ಸ್ವ. ಕಾರ್ಯನಿರ್ವಾಹವನ್ನು ಸ್ವಾರ್ಥತ್ಯಾಗಪೂರ್ವಕ ಮಾಡುವರು !

'ಬಹುತರ ಯೋಗ್ಯ ಮನುಷ್ಯರನ್ನು' ಸರಕಾರದವರೇ ಆರಿಸುವರು,' ಎಂಬ ಧುರೀಣರ ವಿಧಾನಕ್ಕೆ ಇದೇ ಭರತಖಂಡದಲ್ಲಿ ಪುಷ್ಟೀಕೊಡುವವರು ಯಾರೂ ಇಲ್ಲ. ಎಲ್ಲ ಹಿಂದೀ ಮಂದಾಳುಗಳು ಏಕಸ್ವರದಿಂದ ಹೀಗೆ ಹೇಳುತ್ತಾರಲ್ಲ,— ಸರಕಾರದಿಂದ ನೇಮಿಸೋಣಾದ ಮನುಷ್ಯರು ಬಹುತರ ಅಯೋಗ್ಯರು, ನಾಲಾಯಖರು, ನಮ್ಮ ಧುರೀಣರು ಹೇಳುತ್ತಾರೆ- 'ಬಹುತರ ಯೋಗ್ಯರ'. ಇದರಮೇಲಿಂದ, ಒಂದೇ ಕಾನಡಾ ಜಿಲ್ಲೆಯಲ್ಲಿ ಸಾಹೇಬರು ವಿಶೇಷ ಪ್ರಜಾವಾತ್ಸಲ್ಯದಿಂದ ತುಂಬಿ ತುಳುಕುವವರಿರಬೇಕು; ಈ ಬಗ್ಗೆ ಪುರಾವೆ ಇಲ್ಲದ್ದರಿಂದ, ಈ ಅನುಮಾನವು ನಿರುಪಯೋಗಿಯು. ಅಲ್ಲದೆ, ಧುರೀಣರು ಕಾನಡಾಜಿಲ್ಲೆಯ ನೌಕರಶಾಹಿಯ ವಕೀಲರಿರಬೇಕು, ಅಥವಾ 'ಧುರೀಣ'ದ ಬಹುತರ ಎಲ್ಲ ಧುರೀಣರು ಸರಕಾರದಿಂದ ಆರಿಸಲ್ಪಟ್ಟವರಿರಬೇಕು. ಅದರಿಂದ 'ಧುರೀಣವು' ಅವರ ವಕೀಲಿ ಮಾಡಲು ಉದ್ದ ಲೇಖವನ್ನು ಬರೆದಿರಬೇಕು. ಇದರೊಳಗಿನ ನೌಕರಶಾಹಿಯ ವಕೀಲರೆಂಬ ತರ್ಕವನ್ನು ಧುರೀಣರು ಎಂದೂ ಸಮ್ಮತಿಸಲಿಕ್ಕಿಲ್ಲ. ಅದನ್ನು ಬಿಟ್ಟರೆ, ಒಂದೇ ತರ್ಕವು ಉಳಿಯಿತು 'ಧುರೀಣ'ವು ಧುರೀಣರ ಯೋಗ್ಯ ಮನುಷ್ಯರ ವಕೀಲಿ ಮಾಡುತ್ತದೆ; ಹೊರ್ತು, ಇದರೊಳಗೆ ಬೇರೆ ಏನಿಲ್ಲ. ಧುರೀಣರ ಯೋಗ್ಯ ಮನುಷ್ಯರಿಗೆ, ತಮ್ಮ ಸ್ಥಳಬಿಡುವದು ಜೀವದಮೇಲೆ ಬಂದಿದೆ; ಅಸಹಕಾರಿತೆ ಅನವಶ್ಯವೆಂದು ಹೇಳುವದು ಮನೋಧೈರ್ಯವಿಲ್ಲ, ಈ ಮುಶ್ಕೀಲ ಸಂಕಟದಲ್ಲಿ 'ಧುರೀಣ' ಸರಕಾರೀ ನೇಮಣೂಕಿಯಾದ ಯೋಗ್ಯ ಮನುಷ್ಯರು ಬಿದ್ದಿದ್ದಾರೆ. ಅದರಿಂದ 'ಅವರು ಕಾರ್ಯನಿರ್ವಾಹಕ್ಕೆ ಅತಿ ಅಗತ್ಯ ಜನರು, ಅವರ ಹೊರ್ತು, ಸ್ಥಾನಿಕ ಸ್ವರಾಜ್ಯ ನಡೆಯುವದು ಕಠಿಣವು' ಮುಂತಾದ, ನಿರರ್ಥಕ ಪ್ರಲಾಪಗಳನ್ನು ಧುರೀಣರು ಬರೆಯುತ್ತಾರೆ. ಇದರೊಳಗೆ ಸ್ವಾರ್ಥದ ಹೊರ್ತು ಬೇರೆ ಏನಿಲ್ಲ.

* * * * *

ಈ ಸ್ವಾರ್ಥ ಸಾಧಿಸುವದಕ್ಕೆ 'ಧುರೀಣರು' ಒಂದು ರಾಮಬಾಣ ಉಪಾಯವನ್ನು ನಮೂದಿಸಿರುವರು. ಅದೇನಂದರೆ:— ಮತದಾರರು ತಮ್ಮ ಮತವನ್ನು ಯೋಗ್ಯ ಮತ್ತು ಸುಶಿಕ್ಷಿತ ಜನರನ್ನೇ ಆರಿಸುವದರಲ್ಲಿ ಉಪಯೋಗಿಸಬೇಕು ಅಂದರೆ, ಸರಕಾರೀ ನೇಮಣೂಕಿಯ ಮಹತ್ವವು ಕಡಿಮೆಯಾಗುವದು. ಸರಕಾರೀ ನೇಮಣೂಕಿಯ ಮಹತ್ವವು ಕಡಿಮೆಯಾಗಲಿಲ್ಲೆಂದು ಧುರೀಣರಿಗೆ ಇನ್ನೂ ತಿಳಿಯದಿದ್ದರೆ, ಇನ್ನು ಮುಂದೆ ತಿಳಿಯುವದು. ಯಾಕೆ, ಮೊನ್ನೆ ಕಾರವಾರ ತಾ| ಲೋ| ಬೋರ್ಡಿನಲ್ಲಿ ನೇಮಣೂಕಿಯ ಪ್ರಸಾದದ ಬೆಲೆಯೇ ಬಿತ್ತು. ಸರಕಾರದಿಂದ ನೇಮಿಸಲ್ಪಡುವ ಜನರು ಪ್ರಜೆಗಳ ಹಿತವನ್ನು ಎಷ್ಟರಮಟ್ಟಿಗೆ ಒಯ್ಯುತ್ತಾರೆ, ಮತ್ತು ಪ್ರಜೆಗಳಲ್ಲಿ ಅವರಿಗೆ ಎಷ್ಟು ಆದರವಿದೆ ಎಂಬ ಸಂಗತಿಯು ಇಡೀ ಹಿಂದುಸ್ಥಾನಕ್ಕೆ ಗೊತ್ತದೆ, ಆ ಯೋಗ್ಯ ಮನುಷ್ಯರಿಗೆ ಸಹ ತಿಳಿದು ಹೋಗಿದೆ. ಧುರೀಣರು ಕಣ್ಮುಚ್ಚಿ ಜಗತ್ತೆಲ್ಲ ಕುರುಡೆಂದು, ಬೇಕಾದರೆ, ತಿಳಕೊಳ್ಳಲಿ.

* * * * *

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೬-೧೯೨೮ ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂತು ಉತ್ಪತ್ತಿಯವರಿಗೆ ಸರ್ವ ಮೊತ್ತ ಬಾಟ್ಲಿಗಳು ಕೂಡಿ ಮೂವತ್ತೊಂಬತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯೋಗ ಎಷ್ಟೋ, ಇ ತಾವು ಸರ್ಟಿಫಿಕೇಟುಗಳು ಸಹ ದೊರೆಯುತ್ತವೆ ಅವು ಬರೆಯುಲಿಕ್ಕೆ ಜಾಗವಿಲ್ಲ ಸಾಲದು ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕ

ರೋಗದ ಹೆಸರುಗಳು

ಕ್ಷಯರೋಗ ಹಡದರೋಗ ಷಂಡ ರೋಗ, ಗುಲ್ಮರೋಗ ಮಲರೋಗ, ಮರಾವಾತ (ಕಾಲರಾ) ಪ್ಲೇಗ ಚಳಿಜ್ವರ, ವಿಷಮ ಜ್ವರ ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಟಲುಬೇನೆ, ಕಿವಿ ಶೂಲೆ ಹಲ್ಲುಗಳ ಒಳಗಿನ ಹುಳ ಮತ್ತು ದಂತಶೂಲ, ತಲೆಶೂಲೆ ಕಣ್ಣುಗಳ ಬೇನೆ ಮತ್ತು ಕಣ್ಣು ನೋವು ದಮ್ಮು ಶ್ವಾಸ ಅಪಸ್ಮಾರ, ಅತಿಸಾರ ಹೊಟ್ಟೆಶೂಲಿ ಪಕ್ಕಶೂಲಿ ಬೆನ್ನುಶೂಲಿ ನಡಶೂಲಿ, ಮಾಕಶೂಲಿ, ಕೀಲುಶೂಲಿ, ಗುದದ್ವಾರದಬೇನೆ, ಮೂಲವ್ಯಾಧಿ, ಗಜಕರ್ಣ ಇಸಬು, ತದ್ದು, ಕೆಮ್ಮು ಸಂಗ್ರಹಣಿ ಸ್ತ್ರೀಯರ ಹೊಟ್ಟೆಶೂಲಿ ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡರೋಗ, ಮೈ ಹೊರಬೀಳೋದು ಸಣ್ಣ ಕೂಸುಗಳ ವಿಷ್ಣುರೋಗ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಾದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ಸಮಾನೆ ಬಟ್ಟಿಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ. ಪಿ. ಖರ್ಚ ಬೇರೆ ಒಂದು ಡಜನ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳ ಕಮಿಶನ್ ಕೊಡುತ್ತೇವೆ ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದು ಬಾಟ್ಲಿಯವರಿಗೆ ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದ ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಬರುವದು. ನಮ್ಮ ಔಷಧವು ಬೇಕೆಂದು ಬರೆದರೆ ವರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ದ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಕಳಿಸಿ ಅರ್ಧ ಆಣೆ ದೊರೆಯಲಿಕ್ಕಿಲ್ಲ ಅನುಮಾನ ಪತ್ರಿಕೆಯು ಕನ್ನಡ ಮರಾಠಿ ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯ ಸೂಚಿತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತಿರಬೇಕು

ಎಚ್. ಎ. ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸು ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾ ಮದನ ಕಾಮೇಶ್ವರಿ ಲೇಹ — ಬಹು ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ವಕೀಲರು ಇಂದ್ರಿಯ ದೌರ್ಬಲ್ಯ ಅಜೀರ್ಣ ಮಲಬದ್ಧತೆ ರೋಗಗಳ ಫಲದಿಂದ ಶಕ್ತಿ ಹೋದ ಪ್ರಕೃತಿಯ ಜನರೂ ಇದನ್ನು ಸೇವಿಸಿದ್ದಲ್ಲಿ ರಕ್ತಪುಷ್ಟಿ, ದಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಗೊಳಿಸುವ ೪೦ ದಿವಸ ಸೇವಿಸುವ ಲೇಹ ಡಬ್ಬಿ 1ಕ್ಕೆ 1-1-0 ಡಜನ್ 14-12-0.

2 ಮಹಾಜ್ವರಾಂಕುಶ — (ಖಾತ್ರಿ ಗುಣ) — ಇನ್‌ಫ್ಲುಯೆಂಜಾ ನಿಮೋನಿಯ, ದಿನಕ್ಕೊಮ್ಮೆ, ದ್ವಿತೀಯ ತೃತೀಯ ... ಜ್ವರಗಳ ಮೇಲೆ ರಾಮಬಾಣ ... 1 ... 0 8 0

3 ಬಾಲಗ್ರಹ ... — ... ಮಕ್ಕಳ ಅಪಸ್ಮಾರಕ್ಕೆ ... ೦ 1 0

4 ಖಾಸಕುಟ ... ... ಔಷಧಿ ಒಂದೇ ಗುಳಿಗೆ 0

5 ... — ... ... 1 ... 0

ಎಸ್. ಗಣಪಯ್ಯಾ ಅಂಡ ಸನ್ಸ್
ನೆಟಿವ್ ಡಾಕ್ಟರ್ಸ ರಾಣೇಬೆನ್ನೂರ
ಮ. ಗದಗ ...

ಬಂದೂಕ ಹಾಗು ಸಾಮಾನು

ನಿಮಗೆ ಹೊಸ ಕಾಯಿದೆಯಂತೆ ಬಂದೂಕು ಅಥವಾ ಬೇಕಾದ ಸಾಮಾನು ಈ ಕೆಳಗಿನ ಪತ್ತೆಗೆ ಬರೆದರೆ ಅಥವಾ ಭೆಟ್ಟಿಯಾದರ ತರಿಸಿಕೊಡುವರು. ಮಾಹಿತಿಬಗ್ಗೆ ಭೆಟ್ಟಿ ಆಗಿರಿ, ಅಥವಾ ಪತ್ರವ್ಯವಹಾರ ಮಾಡಿರಿ

ಶೇಷಗಿರಿರಾವ ಥಾಕಪ್ಪನವರ ಶಿರ್ಸಿ.

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯವರ ಸಚಿತ್ರ ಚರಿತ್ರೆ, ಲೇಖನ ಮತ್ತು ಭಾಷಣ, ೦-೧೨-೦, ಸ್ವಾಮಿ ದಯಾನಂದರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೨-೦ ... ... ವರ ಸಚಿತ್ರ ಚರಿತ್ರೆ ೦-೧೦-೦, ... ೦-೮-೦ ... ... ೦-೪-೦ ಆಧುನಿಕ ... ೦-೪-೦ ... ೦-೫-೦

ವಿಳಾಸ:— ಎಂ. ಎಂ. ಹರ್ಡೇಕರ,
ಮುಂಡಗೋಡ

ಹೊಸ ಔಷಧ! "ಓಂ" ಹೊಸ ...
ಗುಣ ಬಾರದಿದ್ದರೆ ಹಣವಾಪಸು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ)

ಅಮೃತ ಜೀವನ ಪಾಕ

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ... ಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ... ಮಿಶ್ರಮಾಡಿ ಅನುಭವಿಕ ಡಾಕ್ಟರ್ ವೈದ್ಯರ ಯೋ... ಮೇರೆಗೆ ರೋಗಿಗಳಿಗೆ ಲಾಭಯುಕ್ತವಾಗು... ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ ... ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರ... ಹೋದಲು ಅಥವಾ ಅದರಮೇಲೆ ಧಾತು ಬೀಳುವ... ನಿಲ್ಲುತ್ತದೆ, ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ... ಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸ... ದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ... ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ... ಸ್ವಾಗಿ ಹೊಟ್ಟೆ ಹಸಿಯುವದು. ಇಷ್ಟರಿಂದಲೂ ... ವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣ... ಬಾಗಬೇಕೊ ಅವೆಲ್ಲವೂ ಈ ಪಾಕಸೇವನೆಯಿಂದ ... ಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗು... ಗಳೂ ಬರುವವು ಇದರ ಅನುಭವವು ಸೇವನೆ... ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ... ಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀ... ರ ರೋಗಗಳು ನಿರ್ಮೂಲವಾಗುವವಲ್ಲದೆ ಮು... ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀ... ರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗು... ವು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕನಿ... ಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕ... ವಲೂ ಗುಣ ಬರುವದು ನಿದಾನ ಒಂದು ಸಾರಿಯ... ವರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ ಅಂಚೇ ಹಾಸಲು ಸಹ ೧ಳ ತೊಲೆಯ ... ಗೆ ರು ೧ ೧೨ಆಣೆ ೩ ಡಬ್ಬಿಗಳಿಗೆ ೪ ರು ೮ ಆ... ೧೨ ಡಬ್ಬಿಗಳಿಗೆ ೧೫ ರು ಮೇಲೆ ೧ ಡಬ್ಬಿ ... ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ... ದರಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ—ಪ್ಟಿ ಆರ್ ಬ್ರದರ್ಸ ಮತ್ತು ಕಂಪ...
ಪೋಸ್ಟ ಪಿಪ್ಪಾಣಿ, ಜಿ. ಬೆಳಗಾಂ...

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯು ದರವಾದ ... ಹಿತ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಷಿ ತಿಳಕೊ... ಬಹುದು.

ಪುರುಷೋತ್ತಮ ಲಕ್ಷ್ಮಣಯ್ಯಾ ಗ್ಯಾಸಭಾಗ...
ಹೆಗಡೇಕರ, ಮುಕಾಮ, ಕುಮಟಾ

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಕಡಿದ ಘಾಯ, ಬಿದ್ದ ಜಖಮು, ... ನೋವು, ಯಾವದೇ ತರದ ಜಖಮು ... ಮ ದಿವಸ ಸಹ ಇದನ್ನು ನಿತ್ಯ ಹಾಕಿದರೆ ... ಮೂರು ದಿವಸದಲ್ಲಿ ಗುಣ ಕ್ರಯ ತೊಲೆ ೧ಕ್ಕೆ ... ೧ಃ ಸೇ ೧-೩-೦ ... ...
... ಹವೇಲಿ ... ...

Printed and published by K... Kesh... Shanvi at his Sta... Kanara Press, Kum...

Reg. No B 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೧.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಆಗಾವು ರೂಪಾಯಿ 2-0-0.
ಮನೆಯಾರ್ಡರಿಯಿಂದ ರೂ 2-13-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-15-0.
ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:-
ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಸ್‌ಉದ್ದ) ೮ ಸಾಲುಗಳವರೆಗೆ ರೂ. 1-0-0
ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೩ ನೂಹ ಡಿಸೆಂಬರ ಸನ್ ೧೯೨೦ ನೇ ಇಸವಿ.]—

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು, ಜಾಂಬಳಿ ೧೦ಂಕ್ಕೆ ಗಳಿಗೆ ಕಪ್ಪು ಪಾತ್ರ ಗಳಿಗೆ ಶಾಯಿ ಸೆಂಪಲಿಗೆ ಒಂದಾಣೆ ರೋಕ ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್ ವ್ಹಿ. ಭಾಗ್ವತ.

ಪೋಸ್ಟ— ಶೆಗಡೆ, ಉತ್ತರ ಕಾನಡಾ

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳ ಸ್ಟೇಶನರಿ ಸಾಮಾನುಗಳನ್ನು ನಾವು ಪೂರೈಸುವೆವು.

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ

ಸತ್ಯಮೇವ ಜಯತೇ
(ಗುಣಬಾರದಿದ್ದರೆ ಹಣಮರಳು)
ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಇಂದ್ರಿಯದ ಶಿಥಿಲತೆ, ನಿಬ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವಿರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗರ್ಮಿ, (ಡಾಗಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲ ವಾತರೋಗ ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೩ ರೂಪಾಯಿ ಟ ಖ. ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ.

ವಿಳಾಸ— **ಜಿ. ಎಲ್. ಜೋಶಿ ಕಂಪನಿ.**

ಪೋಸ್ಟ— ಸಿರಸಿ ಉತ್ತರ ಕಾನಡಾ.

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ರೋಖ ದರ, ಸವಲತಿಸ ಇರುತ್ತದೆ

ಪತ್ತೆ:— ಬಿ. ದಾಸ, ಕುಮಟಾ

ಕಂಬಳಿಗಳು.

ದೊಡ್ಡ ಕಂಬಳಿಗಳು.

ದೇಶ ಸೇವಕರಿಗೂ, ರೋಗಿಗೂ, ಗುರುಜನರಿಗೂ, ಮತ್ತು ಹಾಸಿಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂತಹ ಹೊಸನಮೂನೆ ದೊಡ್ಡ ಕಂಬಳಿಗಳು ಬೇಕಾದರೆ, ನಮಗ ಬರೆದು ತಿಳಿಸಿರಿ. ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಪಿರ್ಜೆ ಶ್ರೀನಿವಾಸರಾವ,

ದಾವಣಗೇರಿ, ಮೈಸೂರ ಪ್ರಾಂತ.

☞ ನಮ್ಮಲ್ಲಿ ಸಿಗುವ ದಿವ್ಯ ಔಷಧಗಳು

ಮೇಘರಾಜಚೂರ್ಣ— ಎಲ್ಲ ತರಹದ ಜ್ವರದ ಮಲಬದ್ಧತೆಯು ಜುಲಾಬ ಮಾಡಿಸ ದ ನಿಷ್ಪಕ್ವ ಚೂರ್ಣ.
ಕ್ರಯ— ಪುಡಿ (೧ಕ್ಕೆ ೧॥ ಆಣೆ) ೧೨ ಕ್ಕೆ ೧-೨-೦
ಮಿರಜಾಲ ಸಂಜೀವನಿ ಮಾತ್ರಾ— ಈ ಮಾತ್ರೆಯು ಹುಡುಗರಿಗೆ ಉಪಯೋಗಿಸಿದರ ಯಾವದೇ ತರದ ಜ್ವರ ವ್ಯಾಧಿಯು ಬರಲಾರದು ಕ್ರಯ ಬಾಟ್ಲಿ ೧ಕ್ಕೆ ರೂ ೨॥
ಖಾಸ ಶ್ವಾಸ ಗುಟಿಕಾ— ಯಾವದೇ ತರದ ಖಾಸ ಶ್ವಾಸ, ದಮ್ಮು, ಕೆಮ್ಮು ಇವುಗಳ ಮೇಲೆ ಉಪಯೋಗಿಸುವದು
ಕ್ರಯ— ೧ಕ್ಕೆ ೨ ಆಣೆ ೧೨ ಕ್ಕೆ ೧। ರೂ
ವ್ರಣನಾಶಕ ಚೂರ್ಣ— ಯಾವದೇ ತರದ ವ್ರಣ ಹುಣ್ಣಿನ ಮೇಲೆ ಹಚ್ಚಿದರೆ ೮ ದಿವಸಗಳಲ್ಲಿ ಗುಣ.
ಕ್ರಯ— ದೊಡ್ಡ ಪುಡಿ ೧ ಕ್ಕೆ ರೂ ೨-೦-೦

ಶ್ರೀ. ಆಯುರ್ವೇದ ವೈದ್ಯ ಶಾಲಾ,

ಆರ್ ಎನ್. ವೈದ್ಯ, ಗುಜರಪೇಟ್ ಕುಮಟಾ

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುರ್ಮತಿ ಸಂವತ್ಸರದ

ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕಾಗದದ ಕ್ರಯ ಮತ್ತಿಷ್ಟು ತುಟ್ಟಿಯಾದ ಮೂಲಕ, ೧೦೦ಕ್ಕೆ ೧೨ ೮-೦, ೫೦ಕ್ಕೆ ೬ ೧೦-೦, ೨೫ಕ್ಕೆ ೩ ೧೦-೦, ಇಟ್ಟಿದೆ.
ಮಾಲಕ ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ.

ಅನುಭವಸಿದ್ಧವಾದ ಔಷಧಗಳು!!!
ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ
ಪ್ರವಾಳ ಕೇಶರ, ಅಮರಸತ್ವ, ಶಿಲಾಜತು,
ಮತ್ತು ವನಸ್ಪತಿ ಮಿಶ್ರಿತ.

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉದರವಾತವಿಕಾರ, ಮಸ್ತಕಶೂಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕಾಂತಿ ವೃದ್ಧಿಯಾಗಿ, ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ ೪೨ ದಿವಸ ಬೇಕು. ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳ ಮೇಲೆ ಅತಿ ಉತ್ತಮವಾದ್ದು ಗುಳಿಗೆ ೩೦ ಕ್ಕೆ ರೂ. ೧-೮-೦. (೨) ಸ್ವಪ್ನಾವಸ್ಥೆ ಮೇಲೆ ಚೂರ್ಣ— ೧೪ ದಿವಸದ ಔಷಧಕ್ಕೆ ರೂ. ೨-೦-೦ (೩) ಗಜಕರ್ಣ ನಾಶಕ ಮಲಮು— ಡಬ್ಬಿಗೆ ಆಣೆ ೦-೮-೦. (೪) ಮೂಲವ್ಯಾಧಿ ನಾಶಕಗುಳಿಗೆ — ಹೊಳು ಒಗೆದು ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦
ಅನುಪಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ!

ವಿಳಾಸ— **ವೈದ್ಯ ವ್ಹಿ. ಎಸ್. ಮೋಡಕ ಮತ್ತು ಕಂಪನಿ, ಪೋಸ್ಟ ಸಿರಸಿ.**
ಜಿಲ್ಲೆ ಉತ್ತರಕಾನಡಾ

ಮಧುರೆ ಜುನ್ನಡಿ ಅಂಚಿನ ಸೀರೆಗೆ

ಕ್ರಯ ರೂ 4-8-0



ಇದು ಉಡುವುದಕ್ಕೆ ಭಡೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದ ಬಣ್ಣ ಹೋಗದು ಸೀರೆಯು ಉದ್ದ ೧೮ ಮೊಳ ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ
ಕ್ರಯ ರೂ. 4-8-0.

ವಿಳಾಸ — ವಿ. ಕೆ. ಸೆನ್ ಅಂಡ್ ಕಂಪನಿ,
24, ವಿನಾಯಕಮೇಸ್ತ್ರಿ ಬೀದಿ, ಮದರಾಸ್

ನೋಟೀಸು.

ಈ ಮೂಲಕ ಸಕಲರಿಗೂ ತಿಳಿಯಪಡಿಸುವದೇನಂದರೆ— ನನ್ನ ಅವಿಭಕ್ತ ಚಿಗಪ್ಪ ಶಿವರಾಮ ವಿಘ್ನೇಶ್ವರ ಭಟ್ಟಾ ಹಿರೇಗಂಗೆ ಗೋಕರ್ಣ, ಇವರು ನನಗೆ ಮೋಸಪಡಿಸುವ ಉದ್ದೇಶದಿಂದ ಅಲ್ಲಲ್ಲಿ ಪ್ರೋ ನೋಟು ವಗೈರೆ ಬರದು ಹಣ ವಂಚಿಸುತ್ತಾ ಬರುತ್ತಾರಾದ್ದರಿಂದ, ನನ್ನ ಲೇಖೀ ಅನುಮೋದನೆ ವಿನಹಾ, ಸದ್ರಿಯವರು ಮಾಡಿದ ವ ಮಾಡುವ ಯಾವದೇ ತರದ ಸಾಲವು ನನ್ನ ವ ನನ್ನ ಮಿಳಕತ್ತಿಗೆ ಸಹ ಬಾಧಿಸಲಾರದು, ಎಂಬ ಸಂಗತಿ ಈ ನೋಟೀಸಿನ ಮೂಲಕ ಜಾಹೀರಪಡಿಸುತ್ತೇನೆ

ಗೋಕರ್ಣ, ತಾ ೧೮-೧೨-೨೦ } तात्रिक केशव अनंत भट हिरगंगे

No Public Meeting.

To, The Editor, Kanara News

Sir

I read with surprise the contents under the heading "Ankola Sarvajanic Sabha" given in your issue of the 9th instant quoting a resolution that I should be requested to resign the Presidentship of the T L Board

I invariably move every day through all the centres of the town where meetings are generally held & uptil now I have not found that there had been held any meeting of the public importance to which I was not invited But I had no news of any meeting of the kind mentioned in your paper till I read your paper On minute inquiries also I have found that no such meeting was ever held If a few persons sitting in any corner or in a shop to idle away their time, talked of such proposals and they were conveyed to you by your informant they cannot be called as the proceedings of a public meeting

I now request that you will kindly publish this letter in your next issue and oblige I beg to remain Sir

Your most obedient servant

ANKOLA 9 12 20 | S A Nadkarni

ಅಡಿಕೆ ರೈತರ ನ್ಯಾಯ! ಸಾವುಕಾರ ದಳಾಲರ ಆದಾಯ

ಕುಮಟೆಯಲ್ಲಿ ನಡೆಯುತ್ತಿರುವ ಅಡಿಕೆ ವ್ಯಾಪಾರದ ರೀತಿಯ ಬಹು ಚಮತ್ಕಾರವುಳ್ಳದು. ಎಲ್ಲ ಕಡೆಗೂ ಸಾಮಾನ್ಯವಾಗಿ ೨೦ ಮಣದ ಖಂಡಿಯಿರುತ್ತಾ ಕುಮಟೆಯಲ್ಲಿ ಮಾತ್ರ ಅಡಿಕೆ ಬಗ್ಗೆ ಸದರಿ ೨೨ ಮಣದ ಖಂಡಿಯ ಕೆಂಬದ ತಿಳಿಯುವದಿಲ್ಲ ೧ ಪಂಚೆ ೧ಗೆ ಇಂಗ್ರೇಜೀ ತೂಕದ ರಾತಲು ಕಕ್ಷಿನಿಂದ ತೊಲೆ ೧೫೦ ಕ ಮಣದಲ್ಲಿ ಅಡಿಕೆ ಮಾರಲಿಕ್ಕೆ ತರುವವರ, ೧೬೧ ತೊಲೆಗಳ ಪಂಚೇರಿನ ಕಲ್ಲಿನಿಂದ ತೂಗಿಕೊಂಡು ಬಂದರೆ ೨೦ ವ ಣಗಳ ಬೆಲೆಯು ಸಿಗ ಹುದು ಇದರಲ್ಲೂ ಧರ್ಮಾದಾಯ, ದಲಾಲಿ ಹೊರವಟ್ಟಾ ಒಳವಟ್ಟ ವಗೈರೆ ವಜಾಆಗಿ ಖಂಡಿಗೆ ನೂರು ರೂಪಾಯಿ ಧಾರಣೆಯಿದ್ದರೆ ರೈತನಿಗೆ ೮೦ ರೂಪಾಯಿ ಸಿಕ್ಕರೆ ಹೆಚ್ಚು. ಅಂತೂ ಖಂಡಿಗೆ ೩ ಮಣದಷ್ಟು ಅನವಶ್ಯಕವಾಗಿ ಹೆಚ್ಚು ತಕ್ಕೊಳ್ಳುವದಲ್ಲದೆ ಬೆಲೆಯಲ್ಲಿಯೂ ವಜಾಯಿಸುವದು

ಮೊದಲು ಖಂಡಿಗೆ ೨೨ ಮಣಗಳ ಲೆಕ್ಕಾಚಾರ ತೆಗೆದು ಕೊಡುತ್ತವೆಂದು ತಿಳಿದಿದ್ದರು ಈಗ ೨೩ ಮಣಗಳು ಬೇಕಾಗುತ್ತವೆಂದು ಲೆಕ್ಕಾಚಾರ ತಿಳಿದವರು ಹೇಳುತ್ತಿದ್ದಾರೆ ಲೆಕ್ಕಾಚಾರ ತಿಳಿಯದ ದಿನ ಪರು ಎಷ್ಟು ಹೆಚ್ಚು ತರುತ್ತಾರೋ ಅದು ತೆಗೆದು ಕೊಂಡವರಿಗೇ ಗೊತ್ತು. ಇನ್ನು ಕೆಲವು ವರುಷಗಳಲ್ಲಿ ೨೫ ಮಣದ ಖಂಡಿಯಾದರೂ ಆಗಬಹುದಾಗಿ ತೋರುತ್ತದೆ

ಪ್ರತ್ಯಕ್ಷರೀತಿಯಿಂದಾಗಲಿ ಅಪ್ರತ್ಯಕ್ಷರೀತಿಯಿಂದಾಗಲಿ ಹೇಗಾದರೂ ಲಾಭಗಳಿಸಿ ಕೊಳ್ಳುತ್ತಾರೆ. ಬಹುಶಃ ಅಡಿಕೆ ರೈತರೆಂದರೆ ಹುಚ್ಚರೆಂದು ಇವರು ತಿಳಿದಿದ್ದಾರೆ. ಯಾರು ಏನೇ ಹೇಳಲಿ [illegible] ಪುಣ್ಯಾತ್ಮ ಜನರ [illegible] ತಾಂತ್ರಿಕ [illegible] ದಲಾಲರು [illegible] ದ್ವರಮಾಡಿದ [illegible] ಅನುಭವಕ್ಕೆ ಬರದೇ ಇರದು

[illegible]

ಇನ್ನು [illegible] ಅಡಿಕೆ ರೈತರ [illegible]

[illegible] ವೃತ್ತಿ

ಹೊಸದಾಗಿ [illegible] ವ್ಯಾಪಾರವಲ್ಲ [illegible] ಅಡಿಕೆ [illegible] ಆದಾಯ ಮಾಡಿಕೊಳ್ಳುವವರು [illegible] ದಲಾಲರಿಗೆ ಆದಾಯವೆಂದರೆ ಧಾರಣೆಯ [illegible] ಅಡಿಕೆ [illegible] ದರ [illegible] ದೊರೆಯುವದಿಲ್ಲ

ವರ್ತಕರ ಸಂಘ [illegible] ಸಾವುಕಾರರು ಖಂಡಿಗೆ [illegible] ತಕ್ಕೊಳ್ಳುವ [illegible] ಇಲ್ಲವೆಂದು [illegible] ಕುಮಟೆಯ ಕಾಗದಪತ್ರಗಳಲ್ಲಾಗಲಿ ಸಾವುಕಾರರಾಗಲಿ ಅಸಾಮಿಗಳಿಗೆ ತೋರಿಸಿ [illegible] ಕಾರಣ ವಿಷಯವನ್ನು [illegible] ಅಸಾಮಿ [illegible] ಕೇಳಿದರೆ "ಪದ್ಧತಿಯಿಲ್ಲ" ವೆಂಬದಕ್ಕೆ ಕಾರಣವಾಗಲಿ ಪತ್ರವನ್ನಾಗಲಿ ತೋರಿಸಿ ಯಾವ ಅಸಾಮಿ ಗಾದರೂ ಸಮಂಜಸವಾಗಿ ಸಮಾಧಾನಪಡಿಸಿದ್ದುಂಟೋ? ಕೆಲವರಿಗಂತೂ ಲೆಕ್ಕಾಚಾರದ ಪಟ್ಟಿಯಾದವಿನಹಾ, ತಮ್ಮ ಅಡಿಕೆ ಯಾವ ಧಾರಣೆಯಿಂದ ಮಾರಾಟವಾಯಿತೆಂಬುದು ಸಹ ತಿಳಿಯುವದಿಲ್ಲ!

ಅಡಿಕೆಯನ್ನು ಯೋಗ್ಯ ರೀತಿಯಿಂದ ತಯಾರಿಸಿಕೊಂಡು ಹೋದ ಅಸಾಮಿಗೂ ಒಂದೇ ಕಚ್ಚಾ ಮಾಲು ಮಾಡಿಕೊಂಡು ಹೋದ ಅಸಾಮಿಗೂ ಒಂದೇ! ತಮ್ಮ ನಿಯಮಗಳ ಪ್ರಕಾರ ಅಡಿಕೆಗಳನ್ನು ತೆಗೆಯದೆ ಬಿಡರು! ಅದು ಯಾವ ಪ್ರಕಾರದ ನಿಯಮವೋ, ಅದು ಅವರಿಗೇ ಗೊತ್ತು

ಧಾರಣೆ ಏರಿಳಿತ ನಿಬಂಧನೆಯಂತೆ, ವರ್ಷಗಟ್ಲೆ ಅತಿ ಪ್ರಯಾಸಪಟ್ಟು ತಯಾರಿಸಿದ ಬಡ ಅಡಿಕೆ ರೈತರ ಅಡಿಕೆಯ ಕುಮಟೆಯಲ್ಲಿ ಈ ರೀತಿ ಮಿತಿಯಿಲ್ಲದೆ ಸೂರೆಯಾಗುವದನ್ನು ನೋಡಿ ಯಾರಿಗೂ ದಯ ಬಾರದಿರುವದ ಅಡಿಕೆ ರೈತರ ದುರ್ದೈವವೋ? ದಲಾಲ-ಸಾವುಕಾರರ ಸುದೈವವೋ!

ಈ [illegible] ಮಿತಿಯಿಲ್ಲದ ಹಾನಿಯನ್ನು ಹೊಂದುತ್ತಿದ್ದರೂ ಅಡಿಕೆ ರೈತರಲ್ಲಿ ಯಾರಿಗೂ ಇನ್ನೂ ಎಚ್ಚರಿಕೆಯಾಗಲಿಲ್ಲ. [illegible] ಊರವರಿಗೊಂದಾಗಲಿ, ತಾಲೂಕಿಗೊಂದಾಗಲಿ, ಸಭೆಯನ್ನು ನಿಯಮಿಸಿಕೊಂಡು ಈ ಸಂಪದ ಮುಖಾಂತರ ಹೊನ್ನಾವರ ತಾಲೂಕಿನವರು, ಹೊನ್ನಾವರ ಬಂದರದಿಂದ; ಕುಮಟಾ ತಾಲೂಕಿನವರು ತದಡಿಯ ಬಂದರದಿಂದಲೂ ಮುಂಬಯಿಗೆ ಪರಭಾರ ಅಡಿಕೆ ಕಳುಹಿಸಿ, ಅಲ್ಲಿಂದ ಬೇಕಾದ ಸಾಮಾನುಗಳನ್ನು ತರಲು ಯತ್ನಮಾಡಲು ಅಡ್ಡಿ ಏನಿರುವದು? ಜಗತ್ತಿನಲ್ಲೆಲ್ಲ ಸ್ವತಂತ್ರತೆಯ ಬಗ್ಗೆ ಜನಪಳಿಕ್ಕೆತ್ತಿರಲು ಅಡಿಕೆ ರೈತರಾದ ನಾವು ಮಾತ್ರ ಪರಾವಲಂಬಿತರಾಗಿ ತಿಳಿದೂ ತಿಳಿದೂ ಹಾನಿಯನ್ನನುಭವಿಸಿ, ಪರದೇಶೀಯರಿಗಾದಾಯವಾಗುವದು ನಮಗೆ ನಾಚಿಕೆಯಲ್ಲವೇ? "ಸರ್ವಂ ಪರವಶಂ ದುಃಖಂ, ಸರ್ವಮಾತ್ಮವಶಂ ಸುಖಂ" ಎಂಬಂತೆ ನಮ್ಮ ಉದ್ಧಾರಕ್ಕೆ ನಾವೇ ಪ್ರಯತ್ನಪಡತಕ್ಕದ್ದು. ನಮಗೆ [illegible] ಸಾವುಕಾರರ ನಿಯಮಗಳ ಹಂಗು ಅವರ ಕೃಪೆಯ ಅಪೇಕ್ಷೆಯೂ ಬೇಡ! [illegible] ಊರಿನವರೂ ಪರಭಾರೆ ಮುಂಬೈ ವ್ಯಾಪಾರದ ನಿಶ್ಚಯಮಾಡಬೇಕಾಗಿ ಎಲ್ಲ ಅಡಿಕೆ ರೈತ ಬಂಧುಗಳಿಗೂ ನನ್ನ ಆಗ್ರಹಪೂರ್ವಕ ವಿನಂತಿಯದೆ.

ತಾವಡಿ ಪುರ, ತಾ ೧೩-೧೨-೨೦ } ತಿ ರಾ ಶೇಠಿ ಮೂಲೂರ

"ರಾಷ್ಟ್ರದ ಉನ್ನತಿಯೂ ಅವನತಿಯೂ"

(ಲೇಖಕ— ಸತ್ಯಮಾನ, ಬೀ ಏ)

[illegible] ಹಿಂದೂ ರಾಷ್ಟ್ರವು ಪ್ರಪಂಚ [illegible] ಅದರ ಸಾಂಪತ್ತಿಕ ಸ್ಥಿತಿಯು [illegible] ಯಾಗಿರಬೇಕಾಗುವದರಿಂದ, ಅದಕ್ಕೆ ತಕ್ಕ [illegible] ಉದ್ಯೋಗ ಕಾರಖಾನೆ, ಕೈಗಾರಿಕೆ [illegible] ಅನೇಕ ವ್ಯಾಪಾರಗಳು ಆ ರಾಷ್ಟ್ರದಲ್ಲಿ [illegible] ಗಿರಬೇಕು ಈ ರೀತಿಯಲ್ಲಿ [illegible] ರಾಷ್ಟ್ರದಲ್ಲಿ ಉನ್ನತಿ [illegible] ಸಾಧನಗಳು [illegible] ನಾವೇ [illegible] ರಾಷ್ಟ್ರವು [illegible] ಸಾಧನಗಳಿಗಾಗಿಯೂ [illegible] ವಿಷಯಗಳಿಗೆ [illegible] ರಾಷ್ಟ್ರದ [illegible] ರಾಷ್ಟ್ರ [illegible]

ವಿಪಸಿದ್ಧವಾದ ಮಾತಾಗಿದೆ. ಇದೇ ತತ್ವವನ್ನವಲಂಬಿಸಿದ್ದ ಜರ್ಮನ್ ರಾಷ್ಟ್ರವು ಸ್ವಂತ ಸಾಮರ್ಥ್ಯದಿಂದ ಇಡೀ ಜಗತ್ತನ್ನೇ ಅಲ್ಲಾಡಿಸಿ ಬಿಟ್ಟಿತು! ವೈಭವದ ಶಿಖರವನ್ನೇರಿ, ಮೆರೆಯುತ್ತಿರುವ ಅಮೇರಿಕಾವನ್ನು ನೋಡಿ, ಉಳಿದ ರಾಷ್ಟ್ರಗಳು ದಂಗುಬಡಿದು, ಕಣ್ಣು ಕಿಕ್ಕಿರಿಸಿ ನೋಡುತ್ತಿರುವವು!! ದೂರವೇಕೆ? ನಮ್ಮ ಜಪಾನೀ ಗೆಳೆಯರಾದರೂ ಸಾಮಾನ್ಯರೇ? ಅವರು ಅಲ್ಪಾವಧಿಯಲ್ಲಿಯೇ ತಮ್ಮ ಧ್ಯೇಯವನ್ನು ಯುಕ್ತಿಪ್ರಯುಕ್ತಿಗಳಿಂದ ಸಾಧಿಸಿ, ಎತ್ತಿ ಹೊಡೆದು ಮುಂದೆ ನಿಂತಿರುವದನ್ನು ಕಂಡು, ಆಶ್ಚರ್ಯಚಕಿತರಾದ ನಾವು ಧನ್ಯವಾದವನ್ನು [illegible] ಇರಲಾರೆವು!!

ಈ ನಮ್ಮ ಭರತಖಂಡವಾದರೂ, ಹಿಮ್ಮೆ ಸ್ವಾವಲಂಬನದ ಮಂತ್ರವನ್ನು ಜಪಿಸಿ, ಅದರ ಪ್ರಸಾದದಿಂದ ವೈಭವದ ಪರಮಾವಧಿಗೆ ಮುಟ್ಟಿತ್ತು. ಆ ಕಾಲದಲ್ಲಿ ಅದು ಸುಖ-ಸಂಪತ್ತುಗಳ ತವರುಮನೆಯಾಗಿ, ಸುವರ್ಣ ಭೂಮಿ ಎಂಬ ಅಭಿಧಾನದಿಂದ ಮೆರೆಯುತ್ತಿರಲು, ಉಳಿದ ರಾಷ್ಟ್ರಗಳು ಅಜ್ಞಾನ ಅನರ್ಥಗಳೆಂಬ ಅಂಧಃಕಾರದಲ್ಲಿ ಮುಳುಗಿದ್ದವು. ಆದರೆ ಕ್ರಮೇಣ, ಆ ಸುವರ್ಣದ ಕಾಂತಿಯು ಲೋಹಚುಂಬಕದಂತೆ ಪರರಾಷ್ಟ್ರದವರ ಕಣ್ಣುಗಳನ್ನು ಆಕರ್ಷಿಸಿಕೊಂಡಿತು. ಅದ್ದರಿಂದ ಬೇರೆ ಬೇರೆ ಜನಾಂಗದವರು ಒಬ್ಬರ ಹಿಂದೊಬ್ಬರಾಗಿ ಬಂದು, ಕೈಗೆ ಸಿಕ್ಕಿದ್ದನ್ನು ಅಪಹರಿಸಿಕೊಂಡು ಹೋದರೂ, ಅಷ್ಟರಿಂದ ನಮ್ಮ ಹಿಂದಿನ ಮಾತೆಯ ವೈಭವವು ಕುಗ್ಗದಂತಿದ್ದಿತು. ಆದರೆ ಅವಳು ಮತ್ತೊಂದು ವ್ಯಾಪಾರೀ ಧೋರಣದ ಕುಟಿಲ ಜನಾಂಗಕ್ಕೆ ಎದುರಾಗಬೇಕಾಯಿತು. ಇದೇ ಈಗಿನ ನಮ್ಮ ಅಧೋಗತಿಗೆ ಕಾರಣವಾಯಿತೆಂದು ಹೇಳಿದರೆ, ಅತಿಶಯೋಕ್ತಿಯಾಗದು. ಮತ್ತು ಈ ಜನಾಂಗವೆಂದರೆ, ಸದ್ಯಕ್ಕೆ ನಮ್ಮೆಲ್ಲರ ಮನಸ್ಸನ್ನು ಹಲವು ಬಗೆಯಿಂದ ನೋಯಿಸಿರುವಂಥ ಗೌರಕಾಯದವರು. ಮೊದಲು ಇವರಿಗೆ ಇಲ್ಲಿ ವ್ಯಾಪಾರಕ್ಕೆಂತ ಆಶ್ರಯ ಕೊಟ್ಟದ್ದೇ, "[illegible]," ಎಂಬಂತೆ, ಆಯಿತೆಂತಲೇ ಹೇಳಬೇಕಾಗಿದೆ. ಯಾಕೆಂದರೆ, ಅವರು ಬಂದ ಕೂಡಲೆ ಚಾಣಕ್ಯನ ಕಾರಸ್ಥಾನವನ್ನು ನಡಿಸಿ, ಕುಟಿಲ ಕುಯುಕ್ತಿಗಳಿಂದ ಅಂತಃಕಲಹದ ಫಾಯದೆಯನ್ನು ಪಡೆದು, ರಾಜ್ಯವನ್ನು ಸ್ಥಾಪಿಸಿದರು. ಇಷ್ಟರಿಂದಲೂ ಅವರ ಮಹತ್ವಾಕಾಂಕ್ಷೆಯು ಶಾಂತವಾಗುವಂತಿದ್ದಿಲ್ಲ. ಇಲ್ಲಿಯ ಜನರಿಗೆ ಮಂಕುಬೂದಿಯನ್ನು ಬಳಿದು, ಅವರನ್ನು ನಿರಂತರವಾಗಿ ಅಜ್ಞಾನಾಂಧಃಕಾರದಲ್ಲಿಟ್ಟು, ಅವರ ಮಸ್ತಿನಮೇಲೆ ತಾವು ಯಥೇಚ್ಛವಾಗಿ ಚೈನಿ ಹೊಡೆಯಬೇಕೆಂದು ಯತ್ನಿಸಿ, ಅದಕ್ಕೋಸ್ಕರ ಶಿಕ್ಷಣಪದ್ಧತಿ ಮೊದಲಾದ ವ್ಯೂಹಗಳ ರಚನೆ ಮಾಡಿದರು (ಅವುಗಳ ವಿಷಯವಾಗಿ ಇನ್ನೊಮ್ಮೆ ವಿವೇಚನೆ ಮಾಡುವೆವು). ಅದ್ದರಿಂದ ಒಂದು ಮನೋಹರವಾದ ಫಲವನ್ನು ಪ್ರವೇಶಿಸಿದಂಥ ಹುಳವು ಅಂತರ್ಭಾಗವನ್ನೆಲ್ಲ ಕೊರೆದು ಮೇಲ್ಭಾಗವನ್ನಷ್ಟೇ ಇಡುವಂತೆ, ಅವರು ನಮ್ಮ ಭರತಖಂಡವನ್ನು ನಿಃಸತ್ವವನ್ನಾಗಿ ಮಾಡತೊಡಗಿದರು. ಅದಕ್ಕಾಗಿ ಅವರು ಜಗತ್ಪ್ರಖ್ಯಾತವಾದ ನಮ್ಮ ಸ್ವದೇಶೀ ಕೈಗಾರಿಕೆ, ಕಾರಖಾನೆ ಮೊದಲಾದ ಆರ್ಥಿಕಸಾಧನಗಳನ್ನು ಕ್ರಮೇಣ ಗುದ್ದ ಹತ್ತಿದರು ಮತ್ತು ಅದೇ ಸಂಧಿಯನ್ನು ಸಾಧಿಸಿ, ತಮ್ಮ ದೇಶದ ಕಾರಖಾನೆಗಳಿಗೆ ಪ್ರೋತ್ಸಾಹನವನ್ನು ಕೊಟ್ಟು, ಅವುಗಳಲ್ಲಿ ತಯಾರಾದಂಥ ಜಿನಸುಗಳನ್ನು ತಂದು, ಇಲ್ಲಿ ಹೇರಳವಾಗಿ ಮಾರಿ, ಸ್ವಾರ್ಥವನ್ನು ಸಾಧಿಸಿದರು. ಹೀಗಾಗಿ ಕೋಟ್ಯವಧಿ ರೂಪಾಯಿಗಳು ಪರದೇಶಗಳಿಗೆ ಹೋಗುತ್ತಿರುವದರಿಂದ, ನಮ್ಮ ಮಾತೃಭೂಮಿಯು ವೈಭವದ ಶಿಖರವನ್ನು ಇಳಿದಿರಲು, ಎಷ್ಟೋ ರಾಷ್ಟ್ರಗಳು ಅದನ್ನು ಏರಿರುವವು.

ಹಿಂದಕ್ಕೆ ಘಟೋದ್ಗಜನೆಂಬ ರಾಕ್ಷಸನು ಮಾಯಾಬಾಜಾರ ಒಂದನ್ನು ನಿರ್ಮಿಸಿ, ಜನರನ್ನು ವಂಚಿಸಿದ್ದನಂತೆ! ಅದರಂತೆ, ಈ ಆಂಗ್ಲೇಯರ ಮನೋಹರವಾದ ಮಾಯಾಬಾಜಾರಕ್ಕೆ ಮರುಳಾಗಿ, ನಾವು ನಮ್ಮ ಧನ-ಮನಗಳೆರಡನ್ನೂ ಅದಕ್ಕೆ ಅರ್ಪಿಸಿರುವದರಿಂದ, ನಮ್ಮ ಸ್ವಾವಲಂಬನ, ಸ್ವದೇಶಾಭಿಮಾನಾದಿ ಉಚ್ಚ ಗುಣಗಳು ನಷ್ಟವಾಗಿ, ನಾವು ಇಂಥ ದೀನಾವಸ್ಥೆಗೆ ಮುಟ್ಟಿರುತ್ತೇವೆ. ಇದು ನಮ್ಮ ಕಾಲಿನಮೇಲೆ ನಾವೇ ಕಲ್ಲು ಹಾಕಿ ಕೊಂಡಷ್ಟು ಹಾಸ್ಯಾಸ್ಪದವಾದದ್ದು. ಸರಿ. ಆದ್ದರಿಂದ, ಇನ್ನುಮೇಲಾದರೂ ಎಚ್ಚೆತ್ತು, ಇಂಥ ಅಪಾಯಕಾರಕವಾದ ಪರದೇಶಗಳ ಥಳಕೋಪಸ್ಥಿತ ಬಾಜಾರಗಳಿಗೆ ಮರುಳಾಗದೆ, ಅವುಗಳಿಗೆ ಬಹಿಷ್ಕಾರ ಹಾಕಿ ಸ್ವದೇಶೀ ಕಾರಖಾನೆ ಕೈಮಗ್ಗಾದಿಗಳಿಗೆ ಪ್ರೋತ್ಸಾಹನವನ್ನು ಕೊಟ್ಟು, ದೇಶೋನ್ನತಿಯನ್ನು ಸಾಧಿಸುವದು ರಾಷ್ಟ್ರಭಕ್ತರಾದ ನರನಾರಿಯರ ಆದ್ಯ ಕರ್ತವ್ಯವಾಗಿದೆ.

ಇಂಥ ಪವಿತ್ರವಾದ ಕರ್ತವ್ಯಕ್ಕೆ ಮನಸ್ಸೆಂಬ ಮರ್ಕಟದಿಂದ ಅನೇಕ ವಿಘ್ನಗಳು ಒದಗುವ ಸಂಭವವಿದೆ. ಆದರೆ, ಅಂಥ ಪ್ರಸಂಗದಲ್ಲಿ ಆ ಮರ್ಕಟವನ್ನು ಸದಸದ್ವಿವೇಕ ಎಂಬ [illegible] ಬಿಗಿದು, ಹತ್ತೋಟಿಗೆ ತರಿಸಿ, ಸ್ವದೇಶೀ ವ್ರತವನ್ನು ಸಾಧಿಸತಕ್ಕದ್ದು.

ಪತ್ರಿಕೆಗಳ ಅಂಬೋಣ

ಕರ್ಮವೀರ, ತಾರೀಖು ೨೦-೧೧-೧೯೨೦

ವಿಚಾರಶೂನ್ಯರಿಗೆ ಅವರ ವಿಚಾರಶೂನ್ಯತೆಗೆ ತಕ್ಕಂತೆ ಉತ್ತರ ಹೇಳುವುದೇ ಬುದ್ಧಿವಂತರ ಲಕ್ಷಣ! ಆದರೆ ನಮ್ಮ ಸ್ಟೇಟ ಸೆಕ್ರೆಟರಿಗಳಿಗೆ ಪಾರ್ಲಿಮೆಂಟಿನ ಇದಿರಾಳಿಗಳಿಗೆ ಉತ್ತರ ಹೇಳುವುದೆಂದರೆ, ಮುಖ್ಯವೇಳೆ ನಾಲಿಗೆಯೇ ಅಲ್ಲಾಡದು, ಅಥವಾ ಆಡಿದರೂ, ಆ ಇದಿರಾಳಿಗಳ ಕೋಪಶಮನವಾಗುವದಕ್ಕೆ ಮೊದಲೇ, ಅಷ್ಟೇ, ನಿಜಸ್ಥಿತಿ ಹೇಗಾದರೂ ಇರಲಿ, ತೀವ್ರ ವಿಮರ್ಶೆಗಳೊಡನೆ ತನ್ನನ್ನು ಪೀಡಿಸುತ್ತಿರುವ ಆ ಪ್ರತಿದ್ವಂದ್ವಿಗಳ ಮುಖಭಂಗದಲ್ಲಿ 'ಅಧಿಕಾರವರ್ಗವು ನಿಮ್ಮಂತೆಯೇ ಅನುಭವ ಮಾಡಿದೆ' ಎಂದರೆ ಅವರಿಗೂ, ನಸುನಗೆ, ಇವರಿಗೂ ಕರ್ತವ್ಯಭಾರದಿಂದ ವಿಮೋಚನೆ, ಅದ್ದರಿಂದಲೇ ಇತ್ತೀಚೆಗೆ ಪಾರ್ಲಿಮೆಂಟ್ ಸಭೆಯಲ್ಲಿ ಹಿಂದುಸ್ಥಾನದಲ್ಲಿ ಅತ್ಯಂತ ಆಘಾತಕರವಾದ ಸಂಭವವೆಂದರೆ '೧೯೧೯ನೇ ಇಸವಿಯ ವಿಪ್ಲವವೆಂದೂ, ಹಲವು ರೀತಿಯ ಅಪವಾದಗಳು ಮನಸ್ವೀಯಾಗಿ ಮುಂದೆ ಬಂದು, ನಿಜಸ್ಥಿತಿಯನ್ನರಿತಿದ್ದರೂ, ಪ್ರತಿಕೂಲವಾಗಿ ಮಾತಾಡಲೊಲ್ಲದ ನಮ್ಮ ಸ್ಟೇಟ್ ಸೆಕ್ರೆಟರಿಯವರ ಸಮ್ಮತ ಪ್ರಕಾರ ನಿಜವೆಂದೇ ಆಗಿಹೋಯಿತು. ಕೈಗನ್ನಡಿಯಂತಿರುವ ಆ ಹಂಟರ್ ಕಮ್ಮಿಟಿಯ ರಿಪೋರ್ಟನ್ನಾದರೂ ಮುಖಕ್ಕಿದಿರಾಗಿ ಹಿಡಿದು, ಆ ದಂಗೆಯಲ್ಲಿ ಅಪರಾಧಿತರಾದ ದಂಗೆಖೋರರ ವಿಷಯವನ್ನು ಖಂಡಿಸಿ, ಬ್ರಿಟನ್ನಿನವರ ಮನಸ್ಸು ಕೆಡದಂತೆ ಮಾಡುವುದು, ಹೇಗೆ ಆಲೋಚಿಸಿದರೂ, ಸುಲಭವಾಗಿಯೇ ಇತ್ತು, ಆದರೆ ನಮ್ಮ ಉದ್ಧಾರಕರ್ತರಿಗೆ ಮೊಸರಲ್ಲಿ ಕಲ್ಲು ಸಿಕ್ಕಿದೆ, ಆ ಕಲ್ಲನ್ನೇ ಅವರೂ ಬಾಯಲ್ಲಿಟ್ಟುಕೊಂಡು, ಹಾಗೂ ಹೀಗೂ ಕೊನೆತನಕವೂ ಸಾಗಿಸಬೇಕೆಂದಿದ್ದರೂ, ಇದಿರಾಳಿಗಳ ಮರ್ಮಭೇದಕವಾದ ಒಂದೆರಡು ಮಾತು ಕ್ಷಮಾಶೀಲರಾದ ಮಾಂಟೇಗ್ ಸಾಹೇಬರ ಮನಸ್ಸನ್ನೂ ಒಮ್ಮೆಗೆ ಚುಚ್ಚದಿರಲಿಲ್ಲ. ಯುನೈಟೆಡ್ ಸ್ಟೇಟಿನಲ್ಲಿ ಇಂಪೀರಿಯಲ್ ಮತ್ತು ಪ್ರೊವಿನ್ಸಿಯಲ್ ಸಭೆಗಳಿಗೆ ಮೆಂಬರರಾಗಲಿರುವ ಉಮೇದುವಾರರೆಲ್ಲರೂ ಸರಕಾರದಲ್ಲಿ ಡಿಪೊಜಿಟ್ ಇಟ್ಟು, ಅವರಲ್ಲಿ ಸೋತಷ್ಟು ಓಟುಗಳು ದೊರೆಯದಿದ್ದವರು, ಅದನ್ನು ಸರಕಾರಕ್ಕೇ ತೆರಬೇಕೆಂಬ ಒಂದು ನಿರ್ಬಂಧವಿದೆಯಲ್ಲ! ಅದರಂತೆಯೇ ಹಿಂದುಸ್ಥಾನದಲ್ಲಿಯೂ ಅಂಥದೊಂದು ನಿರ್ಬಂಧವು ಜಾರಿಯಲ್ಲಿರುವುದು ಅಗತ್ಯವಲ್ಲವೇ?—ಎಂದು ಭಾರತದ ಹಿತಶತ್ರುಗಳೊಬ್ಬರು ಪ್ರಶ್ನೆಮಾಡಲು, ಮಾಂಟೇಗ್ ಸಾಹೇಬರು ಸ್ವಲ್ಪ ಕಣ್ಣು ಬಿಟ್ಟು, "ಅದೇಕಿದ್ದು, ಹೇಗೆ? ಹಿಂದುಸ್ಥಾನದ ರಚನಾಕ್ರಮವೂ, ಬ್ರಿಟಿಶ್ ರಚನಾಕ್ರಮವಷ್ಟು ಎತ್ತರಕ್ಕೇ ಏರಿಸಿಕೊಳ್ಳಲಿ?" ಎಂದು ಹೇಳುವಷ್ಟು ಸಜೀವತೆಯನ್ನು ತೋರಿದರಂತೆ. ಚೆನ್ನಾಯಿತು! ಸಾಹೇಬರೆ! ಹತ್ತು ಮಾತಿಗೆ ಒಂದು ಮಾತಾದರೂ ಬಾಯಿಂದ ಹೊರಕ್ಕೆ ಹೊರಟಿತಲ್ಲ! ಅದಕ್ಕೆ ಸಲಾಮು ನಿಮಗೂ! ನಿಮ್ಮ ಇದಿರಾಳಿಗಳಿಗೂ!

ಧಾರವಾಡ ರಾಜಹಂಸ ತಾರೀಖು ೬-೧೨-೧೯೨೦

ಅಲಿಗಡ ಕಾಲೇಜವು ಮೊದಲು ಅಸಹಕಾರಿತೆಯನ್ನು ಮಾಡಿ, ದೇಶಕ್ಕೆಲ್ಲ ಮುಂದಾಳು ಆಯಿತು. ಅದಾಗಿ ಅಲ್ಲಿ ರಾಷ್ಟ್ರೀಯ ಕಾಲೇಜಾದರೂ ಆಯಿತು. ಆ ಮೇಲೆ ಗುಜರಾಥದವರು ತಮ್ಮದೊಂದು ವಿಶ್ವವಿದ್ಯಾಲಯವನ್ನೇ ಸ್ಥಾಪಿಸಿದರು. ಅದರಂತೆ ಗುಜರಾಥದಲ್ಲಿ ಕೆಲವು ಕಾಲೇಜುಗಳೂ ಕೂಡ ರಾಷ್ಟ್ರೀಯವಾದವು. ಈ ಚಳವಳಿಯಲ್ಲಿ ಮಹಾರಾಷ್ಟ್ರವು ಹಿಂದ ಬೀಳುವದೆಂದೆಂದು ಕೆಲವರು ಅನ್ನುತ್ತಿದ್ದರು. ಅಷ್ಟರಲ್ಲಿ ಟಿಳಕ ಮಹಾವಿದ್ಯಾಲಯದ ಸುದ್ದಿಯು ಬಂದಿತು ಮತ್ತು ಮಹಾರಾಷ್ಟ್ರದ ಕೇಂದ್ರವಾದ ಪುಣೆಯಲ್ಲಿ ರಾಷ್ಟ್ರೀಯ ಕಾಲೇಜವು ಹೊರಟಂತಾಯಿತು.

ಬಾಲವಿವಾಹವೋ, ಬ್ರಹ್ಮಚರ್ಯಹಾನಿಯೋ?

(ಲೇಖಕ— ಕೌಶಿಕ)

ನಮ್ಮಲ್ಲಿ ತರುಣರೂ-ಬ್ರಹ್ಮಚರ್ಯವೂ. (ಅ)

(೬)

ಈ ಮೊದಲು ಬ್ರಹ್ಮಚರ್ಯವನ್ನು ಸಾಕಷ್ಟು ನಿರೂಪಿಸಿದೆವು. ಇದು ನಮ್ಮ ಸಮಾಜದಲ್ಲಿ ಸ್ತ್ರೀ ಪುರುಷರೊಳಗೆ ಎಷ್ಟರಮಟ್ಟಿಗೆ ನೆಲೆಗೊಂಡಿರುವದು, ಅಥವಾ ನೆಲೆಗೊಳ್ಳುವ ಆಶೆಯಲ್ಲಿರುವದು ಎಂಬುದನ್ನು ನೋಡುವ.

ಶಾಸ್ತ್ರದೃಷ್ಟಿಯಿಂದ ಧರ್ಮಾರ್ಥ ಕಾಮಮೋಕ್ಷಗಳನ್ನು ಪಡೆಯುವದೇ ಮನುಷ್ಯನ ಕರ್ತವ್ಯಗಳೆಂದು ಹೇಳಿದಂತಾದರೂ, ವ್ಯಾವಹಾರಿಕ ರೀತಿಯಿಂದಾದರೂ, ವ್ಯವಹಾರದ ಯಾವದೇ ಧ್ಯೇಯವಿದ್ದರೂ, ಅದು ಈ ಪುರುಷಾರ್ಥಗಳನ್ನು ಬಿಟ್ಟಿರುವದಿಲ್ಲ, ಎಂಬುದಾದರೂ ಸ್ಪಷ್ಟವಾದ ಮಾತಾಗಿದೆ. ಮನುಷ್ಯನು ಬಹುಕಾಲ ಬಾಳಬೇಕು, ಸುಖದಿಂದ ಇರಬೇಕು, ದುಃಖದ ಗಾಳಿ ಸಹ ಅವನಿಗೆ ಬಡೆಯಬಾರದು, ಯಾವ ಕೆಲಸದಲ್ಲಿಯೂ ನಿರಾಶೆಯುಳ್ಳವನಾಗದೆ, ಸಮಾಜದಲ್ಲಿ ಮಾನ ಮಾನ್ಯತೆಗಳನ್ನು ಪಡೆಯಬೇಕು, ಇವೇ ಅಲ್ಲವೋ, ಎಲ್ಲ ಪಾಶ್ಚಾತ್ಯ-ಪೌರ್ವಾತ್ಯ ರಾಷ್ಟ್ರಗಳ ಆಕಾಂಕ್ಷೆಗಳು? ಇವನ್ನು ಪಡೆಯಲಿಕ್ಕೆ ದೇಹವನ್ನು ಕ್ಷೀಣಪಡಿಸದೆ, ಮನಸ್ಸನ್ನೂ, ಇಂದ್ರಿಯಗಳನ್ನೂ ನಿಗ್ರಹಿಸಿಕೊಳ್ಳಬೇಕಲ್ಲವೇ? ಇಷ್ಟೇ, ಇದಕ್ಕೆ ಬೇರೆ ಯಾವದಾದರೂ ಉಪಾಯಗಳು ಉಂಟೋ? ವಿದ್ಯಾರ್ಜನೆಗೆ ಹೋಗಿರಿ, ದ್ರವ್ಯವನ್ನು ಗಳಿಸಲಿಕ್ಕೆ ಹೋಗಿರಿ, ಯುದ್ಧಕ್ಕೆ ಸನ್ನದ್ಧರಾಗಿರಿ, ಬೇಕಾದ ಉದ್ಯೋಗವನ್ನು ಕೈಕೊಳ್ಳಲಿಕ್ಕೆ ಹೋದರೂ, ನಿಮಗೆ ಶಾರೀರಿಕ, ಮಾನಸಿಕ ಸಾಮರ್ಥ್ಯದ ಬಂಡವಲು ಬೇಕೇ ಬೇಕು, ಮೊದಲು ಬೇಕು. ಜಗತ್ತಿನೊಳಗಿನ ಸಾಹಸಗಳು, ಶೋಧಗಳು, ಪರಾಕ್ರಮಗಳು ಇದೇ ಬಂಡವಲಿನ ಲಾಭಗಳು. ಈಗ ಈ ಬಂಡವಲನ್ನು ಯಾರು ಕೂಡಿಸಿಟ್ಟಿರು

(೬ನೇ ಪಾನಿನಮೇಲೆ ಮುಂದರಿದಿದೆ)

ಕಾನಡಾವೃತ್ತ

ಗುರುವಾರ, ತಾರೀಖು ೨೩ ಮಾಹೆ ಡಿಸೆಂಬರ ೧೯೨೦

ಕಾಡಿನ ಸುರಾಜ್ಯ!

(ಲೇಖಾಂಕ — ೬)

ನಮಗೇನು ಬೇಕು?

ಜಂಗಲಖಾತೆಯ ಹೊಸ ಧೋರಣವೇನಿದೆ, ಅದರೊಳಗಿನ ಹೊಸ ಹಕ್ಕುಗಳು ಎಷ್ಟು ಅಗ್ರಾಹ್ಯವಿದ್ದಾವೆ, ನಮ್ಮ ಮಾಮೂಲ ಹಕ್ಕುಗಳೇನಿದ್ದವು, ಅವುಗಳ ಪ್ರತಿಬಂಧದಿಂದ ನಮ್ಮ ಬೇಸಾಯಕ್ಕೆ ಎಷ್ಟು ಅಪರಿಮಿತ ಹಾನಿಯಾಗಿದೆ, ಈಗಿನ ಹಿಡಿ-ಬಿಡು ಧೋರಣದಿಂದ ಬೇಸಾಯದ ಆಪತ್ತಿಯನ್ನು ತಡಿಸಿ, ಅದರ ಪಳಿಗೆಯನ್ನು ಸಾಧಿಸುವದು ಎಷ್ಟು ದುಃಸಾಧ್ಯವದೆಂಬುದರ ವಿಷಯವಾಗಿ, ಹಿಂದಿನ ಲೇಖಗಳಲ್ಲಿ ಶಕ್ಯವಿದ್ದಷ್ಟು ಸಾದಾರವಾಗಿ ಚರ್ಚಿಸಿದೆವು. ಕಾನಡಾ ಜಿಲ್ಲೆಗೆ ಈ ವಿಷಯವು ಅದರ ಪಂಚಪ್ರಾಣಗಳಷ್ಟು ಮಹತ್ವದ್ದಾಗಿದೆ. ಅದರ ವ್ಯಾಪ್ತಿಯೂ ೫ ಲೇಖಾಂಕಗಳಿಂದೇಕೆ, ೫೦ ಲೇಖಾಂಕಗಳಿಂದ ತುಂಬಿದರೂ ತುಂಬದು. ಈ ವಿಷಯವನ್ನು ಲಕ್ಷಿಸಿ, ಸರಕಾರವು ಪ್ರಕಟಿಸಿದ ಠರಾವುಗಳೂ, ಸ್ಥಾನಿಕ ಅಧಿಕಾರಿಗಳೂ, ವರಿಷ್ಠಾಧಿಕಾರಿಗಳೂ ತಮ್ಮ ವಾರ್ಷಿಕ ವರದಿಗಳಲ್ಲಿ ನಮೂದಿಸಿಟ್ಟ ವಿಚಾರಗಳೂ, ಕಳೆದ ೩೦ ವರುಷಗಳಲ್ಲಿ ಅಷ್ಟಿಷ್ಟು ಜಾಹೀರಾಗಿಲ್ಲ. ಬಂಡಿಗಟ್ಟಲೆ ಕಾಗದವನ್ನೂ, ಮಣಗಟ್ಟಲೆ ಮಸಿಯನ್ನೂ ಅಧಿಕಾರಿಗಳು ವೆಚ್ಚಮಾಡಿರಲಿಕ್ಕೆ ಸಾಕು, ಅಷ್ಟು ಲೇಖ ಭಾಂಡಾರವು ಸರಕಾರಿ ದಿಕಾರ್ಡ ಆಫೀಸುಗಳಲ್ಲಿ ತುಂಬಿದೆ. ಅವುಗಳೊಳಗಿನ ಅವತರಣಗಳನ್ನು ಎತ್ತಿಕೊಟ್ಟು ಅವುಗಳೊಳಗಿನ ಪರಸ್ಪರ ವಿಸಂಗತತನವನ್ನು ಬೈಲಿಗೆ ತರುವ ಗೊಡವೆಗೆ ನಾವು ಹೋಗಲಿಚ್ಛಿಸುವದಿಲ್ಲ ಅದರ ಮುಂದಿನವನ್ನು ನಮ್ಮ ವ್ಯವಸಾಯಬಂಧುಗಳು ಸಾಕಷ್ಟು ಮಾಡಿರುವರು ಒಂದೇ ವಿಷಯದಿಂದ ವಾಚಕರಿಗೆ ಬೇಸರಪಡಿಸಬಾರದೆಂದು, ಈ ಲೇಖಮಾಲೆಯನ್ನು ನಮಗೀಗ ಮುಗಿಸಬೇಕಾಗಿದೆ. ಈ ವಿಷಯದ ವ್ಯಾಪಕ ಚರ್ಚೆಯನ್ನು ಕೈಕೊಂಡು, ನಮಗೆ ಇಷ್ಟೇ ಸಿದ್ಧಪಡಿಸುವದಿತ್ತು— ಕಳೆದ ೩೦ ವರುಷಗಳಲ್ಲಿ ಜಂಗಲಖಾತೆಯು ಕಾರಭಾರದಿಂದ ಸರಕಾರವು ಕಾಡಿನ ಸುರಾಜ್ಯವನ್ನು ಪರಿಪೂರ್ಣವಾಗಿ ಸಂಪಾದಿಸಿದೆ. ಸರಕಾರದ ಧ್ಯೇಯವೇ "ಸುರಾಜ್ಯ' ವಾಗಿತ್ತು ಬದರ ಏಕತಂತ್ರಿ ಕಾರಭಾರದಿಂದ ಸರಕಾರದ ದೃಷ್ಟಿಗೆ ಅಭಿನಂದನಾಸ್ಪದವಾದ ಮ ಜನರ ದೃಷ್ಟಿಯಿಂದ ಅಹಿತಕಾರಕವಾದ, ಅಪಾಯಕರವಾದ ಪರಿಣಾಮಗಳು ಬೇಸಾಯಕ್ಕೆ ಸಂಭವಿಸಿವೆ ಸಾರಾಂಶ, ಸರಕಾರಕ್ಕೆ ಬೇಕಾದದ್ದು "ಕಾಡಿನ ಸುರಾಜ್ಯವು" ಜನರಿಗೆ ಬೇಕಾದದ್ದು "ಬೇಸಾಯದ ಸ್ವರಾಜ್ಯವು." ಒಬ್ಬರ ಹೋರೆಯು ದಕ್ಷಿಣ ಧ್ರುವದಕಡೆಗಿದ್ದರೆ, ಮತ್ತೊಬ್ಬರದು ಉತ್ತರ ಧ್ರುವದಕಡೆಗೆ ಧ್ಯೇಯವು ವಸ್ತುತಃ ಇಷ್ಟು ಭಿನ್ನವಾಗಿತ್ತು ಅದಕ್ಕಾಗಿ ಪರಿಣಾಮಗಳು ಇಷ್ಟು ವಿಪರೀತವಾಗಿ ಅನರ್ಥಕಾರಕವಾಗಿರುವವು. , ಇನ್ನು ಇಬ್ಬರು ಒಂದೇ ದಿಕ್ಕಿಗೆ ಹೋರೆ ಮಾಡಿ ನಡೆಯಲಿಕ್ಕಾಗದೇನು? ಇಬ್ಬರು ಒಂದೇ ಧ್ಯೇಯವನ್ನು ಸಾಧಿಸಲಿಕ್ಕಾಗದೇನು? ಆದೀತು ಇದ ರೊಳಗೆ ಅಸಾಧ್ಯವಾದ ಮಾತೇನಿಲ್ಲ ಸತ್ತಾಧಾರಿಯಾದ ಸರಕಾರವು ಜನರ ಸಹಕಾರಿತೆಗೆ ಅನುಕೂಲವಾಗುವಂಥ ಧೋರಣವನ್ನು ಮುಂದಿಟ್ಟರೆ, ಎಲ್ಲವೂ ಸಾಧ್ಯವು ಇಂಥ, ಜನರಿಗೆ ಗ್ರಾಹ್ಯವಾಗಬಹುದಾದಂಥ ಧೋರಣವು ಯಾವದು? ಅದರ ಸ್ಥೂಲ ಸ್ವರೂಪವಾದರೂ ಏನಿರತಕ್ಕದ್ದೆಂದು ಹೇಳಿ, ಒಟ್ಟಿನ ಮೇಲೆ ನಿಮಗೇನು ಬೇಕೆಂದು ಸ್ಪಷ್ಟವಾಗಿ ಹೇಳಿರಿ ಎಂದು ಸರಕಾರವು ನಮ್ಮನ್ನು ಕೇಳಿದರೆ, ಆದೇ ನಮ್ಮ ಉತ್ತರವೆಂದು ಸರಕಾರಕ್ಕೆ ತಿಳಿಸಲಿಕ್ಕೆಂದು, ಲೋಕಮತದ ಹಕ್ಕಿನ ಪ್ರತಿಕೂಲತೆಯನ್ನು ಇಂದಿನ ಸಮಾಪ್ತಿಯ ಲೇಖಾಂಕದಲ್ಲಿ ಮುಂದಿಡಲು ಯತ್ನಿಸುತ್ತೇವೆ. ಪ್ರಾಯಿಕ ಸೂಚನೆಗಳನ್ನು ಜನರು ಮುಂದಿಡುವದಿಲ್ಲವೆಂಬ ಆರೋಪವನ್ನು ಪರಿಹರಿಸಲಿಕ್ಕೆಂದು ವಿಶೇಷತಃ ನಮ್ಮ ಪ್ರಯತ್ನವು. ೫ ಲಕ್ಷ ಜನಸಂಖ್ಯೆಯು ಸುಖದಿಂದ ಬಾಳಬೇಕೆಂದು, ಇಡೀ ಒಂದು ಜಿಲ್ಲೆಯು ಕಾಡಾಗಿ ಬೆಳೆಯಬಾರದೆಂದು, ಸದುದ್ದೇಶದಿಂದ, ಭೂತದಯೆಯ ಕಳವಳದಿಂದ, ಎರಡು ಒಳ್ಳೆ ಸೂಚನೆಗಳನ್ನು ಮಾಡುವೆವು

ಈ ಪರವಾಗಿ ಮಾಡುವ ಸೂಚನೆಗಳ ಸಾಧ್ಯತೆ ಸ್ಪಷ್ಟವಾಗಿ ಕಣ್ಣದುರಿಗೆ ಕಾಣಬೇಕೆಂದು ಅದನ್ನೇ ಮೊದಲು ಹೇಳುತ್ತೇವೆ ಈ ಸಾಧ್ಯವೆಂದರೆ, ನಮ್ಮ ಈಗಿದ್ದ ಬೇಸಾಯವಷ್ಟೇ ಸುಸೂತ್ರವಾಗಿ ನಡೆದು ಅದರ ಉತ್ಕ್ರಾಂತಿಯಾದರೆ ಸಾಲದು ಕಳೆದ ೩೦-೪೦ ವರ್ಷಗಳಲ್ಲಿ ಕ್ರಮೇಣ ನಾಶಹೊಂದಿದ ಬೇಸಾಯದ ಪುನರುಜ್ಜೀವನವಾಗಬೇಕು. ಒಮ್ಮೆಗಲೇ ಜಾದುಗಾರರ ಮಂತ್ರದಿಂದಾದಂತೆ ಬೇಸಾಯವು ಮತ್ತು ಅದರ ವಿಸ್ತಾರವು ಸುಸಂಪನ್ನ ಸ್ಥಿತಿಗೆ ಬರುವದೆಂದು ನಾವು ಹೇಳುವದಿಲ್ಲ ೧೦-೧೫ ವರ್ಷಗಳಲ್ಲಾದರೂ ನಮ್ಮ ಬೇಸಾಯದ ಪೂರ್ವ ವೈಭವವು ನಮಗೆ ಪ್ರಾಪ್ತವಾಗಬೇಕು. ಬೇಸಾಯದ ಸ್ವರಾಜ್ಯವೆಂದು ನಾವು ಹೇಳುವ ಶಬ್ದ ಸಮುಚ್ಚಯದೊಳಗೆ ಇದೇ ಅರ್ಥವು ಗರ್ಭಿತವಾಗಿರುವದು ಇದೇ ಸಾಧ್ಯವನ್ನು ಮುಂದಿಟ್ಟು ಅದು ಕೈಗೂಡುವಂತೆ ಆವಶ್ಯಕವಾದ ಸಾಧನಗಳನ್ನು ಪೂರೈಸಲಿಕ್ಕೆ ಬಹಳೇ ವ್ಯಾಪಕವಾದ ಕಾನೂನುಗಳ ಸ್ವತಂತ್ರ ಕಾಯಿದೆಯನ್ನೇ, ಇನ್ನು ನಿರ್ಮಿಸಬೇಕಾಗಿದೆ. ಈ ಸಾಧನಗಳೆಂದರೆ, ಪ್ರಾಕ್ಕಾಲದಿಂದ ನಾವು ಅನುಭೋಗಿಸುತ್ತಿರುವ ಶೇತಕಿ ಹಕ್ಕುಗಳೇ ಅದಕ್ಕಾಗಿ ನಮ್ಮ ಮಾಮೂಲ ಹಕ್ಕುಗಳೇನಿದ್ದವೆಂದು ನಿರ್ಣಯಿಸಲಿಕ್ಕೆ, ಬೇಸಾಯದ ಹಿತದ ಪ್ರಾತಿನಿಧಿಕ ಸ್ವರೂಪದ ಒಂದು ಕಮಿಶನ್‌ವನ್ನು ನೇಮಿಸಬೇಕಾಗುವದು. ಭಾವೀ ದಿವಾಣರು ಈ ಕಮಿಶನಿನ ಅಧ್ಯಕ್ಷರಿರತಕ್ಕದ್ದು. ನಮ್ಮ ಬೇಸಾಯವನ್ನು ಪೂರ್ವಕಾಲದ ಸಂಪನ್ನತೆಗೆ, ಮತ್ತು ಶಕ್ಯವಿದ್ದರೆ, ಅದಕ್ಕಿಂತ ಹೆಚ್ಚು ಊರ್ಜಿತಾವಸ್ಥೆಗೆ ತರಲಿಕ್ಕಾಗುವಂತೆ, ಸಾಧನಗಳನ್ನು ರೈತರಿಗೆ ನಿರಾತಂಕವಾಗಿ ಪ್ರಯೋಗಿಸಲಿಕ್ಕಾಗಲು, ಹೊಸ ಕಾಯಿದೆಯನ್ನು ರಚಿಸಬೇಕು. ಈ ಕಾಯಿದೆಗೆ

"ಕಾನಡಾ ಜಿಲ್ಲೆಯ ಶೇತಕಿ ಹಕ್ಕುಗಳ ಕಾಯಿದೆ,"

ಎಂದು ಹೆಸರಿಡತಕ್ಕದ್ದು. ಈ ಕಾಯಿದೆಗೆ ಶಾಶ್ವತಿಕ ಸ್ವರೂಪವಿರಬೇಕು. ಅದರ ಕಾನೂನುಗಳನ್ನು ಜಂಗಲ ಖಾತೆಗೆ ನಿಷೇಧಿಸಲಿಕ್ಕಾಗಬಾರದು. ಇಂಡಿಯನ್ ಫಾರೆಸ್ಟ ಅಕ್ಟಿನ ತಾತ್ವಿಕ ಪ್ರತಿಬಂಧಗಳನ್ನು ಹೊಸ ಕಾಯಿದೆಯಲ್ಲಿ ದೂರಪಡಿಸಿಕೊಳ್ಳಬೇಕು. ಇದೊಂದು 'Forest permanent settlement" ಅಂದರೆ, ಜಮಿಯ ಶಾಶ್ವತಿಕ ತರಮಬಂದಿಯಾಗಿರತಕ್ಕದ್ದು. ಈ ಕಾಯಿದೆಯಂತೆ, ಬೇಸಾಯದ ಉಪಯೋಗದ ಬೆಟ್ಟವೆಲ್ಲ ಜಂಗಲಖಾತೆಯ ಕೈಯಿಂದ ತೆಗೆದು, ದಪ್ಪಿನ್ನು ಖಾತೆಯ ಕೈಯಲ್ಲಿ ಪದ್ಯಕ್ಕೆ ನಿಕ್ಷೇಪವಾಗಿಟ್ಟು, ಕಟ್ಟಕಡೆಗೆ ಹಳ್ಳಿಯ ಪಂಚಾಯತುಗಳಿಗೆ ವರ್ಗಾಯಿಸಿಕೊಡುವ ಯೋಜನೆಯಾಗತಕ್ಕದ್ದು. ಶೇತಕಿಗಾಗಿ ಇಪ್ಪತ್ತು ಸಾವಿರ ಎಕರೆ ರಿಜರ್ವ ಅಡವಿಯನ್ನು ಈಗಿದ್ದ ಶೇತಕಿ ಹಕ್ಕಿನ ಅಡವಿಗೆ ಕೂಡಿಸಿದರೆ, ಗೋಚರಾವ, ಒಣ ಕಟ್ಟಿಗೆ, ಶೇತಕಿ ಉಪಯೋಗದ ಸಣ್ಣ ಇಮಾರತು ಕಟ್ಟಿಗೆ ಇತರ ಎಲ್ಲ ಸಾಮಗ್ರಿಗಳಿಗೆ ಸಾಲುವದೋ, ಅದರ ಮೂರು ನಾಲ್ಕು ಪಟ್ಟು ಅಡವಿಯನ್ನು ಶೇತಕಿಗೆ ಅರ್ಪಿಸಬೇಕಾಗುವದು, ಎಂಬ[illegible]ನ್ನೂ, ಇತರ ಅವಾಂತರ ಸಂಗತಿಗಳನ್ನೂ ಶೇತಕಿ ಕಮಿಶನ್‌ನೇ ನಿರ್ಣಯಿಸತಕ್ಕದ್ದು. ಕಮಿಶನಿನ ಸಭಾಸದರಷ್ಟು ಜನ ನಿಜವಾದ ಪ್ರತಿನಿಧಿಗಳಿದ್ದರಾಯಿತು ಇಂ[illegible] ಕಾಯಂ ಸ್ವರೂಪದ ಮತ್ತು ವ್ಯಾಪಕವಾ[illegible] ಕಾಯಿದೆಯನ್ನು ನಿರ್ಮಿಸಿದ ಹೊರತು ಗತ್ಯಂತರವಿಲ್ಲೆಂದು, ಹಿಂದಿನ ಕಟು ಅನುಭವದಿಂ[illegible] ನಮಗೆ ಹೇಳಬೇಕಾಗಿದೆ. ಈ ಹೊಸ ಕಾ[illegible]ದೆಯ ತತ್ವವು ಹಿಂದುಸ್ಥಾನ ಸರಕಾ[illegible] ತಮ್ಮ ೧೮೯೪ ನೇ ಇಸ್ವಿಯ ಠರಾವಿನಲ್ಲಿ [illegible] ಕೊಟ್ಟ ಧೋರಣದಂತೆ; ಡಾಕ್ಟರ ಹೊಲ[illegible]

ರಂಬ ತಜ್ಞರು ಮಾಡಿದ್ದ ಶಿಫಾರಸುಗಳಂತೆ 'ಅಡವಿಯು ಬೇಸಾಯದ ಪರಿಚಾರಿಕೆ' "ಯಾಗಿರತಕ್ಕದ್ದೆಂಬುದೇ ಇರತಕ್ಕದ್ದು. ಅಡವಿಗಳ ತಾತ್ಕಾಲಿಕ ಉತ್ಪನ್ನದ ಮೋಹದಿಂದ ಬೇಸಾಯದ ಹಿತವನ್ನು ದುರ್ಲಕ್ಷಿಸಿ, ಬರೇ ಭಾಷಾ ಸಡಂಬರದ ಠರಾವುಗಳನ್ನು/ಪ್ರಕಟಿಸಿ, ಇನ್ನು ಮುಂದೆ ಕಾನಡಾ ಜಿಲ್ಲೆಯ ಶೇತಕಿಯ ವಿಡಂಬನೆಯೂ, ಹಾನಿಯೂ, ಆಗದಂತೆ, ಹೊಸ ಕಾಯಿದೆಯ ಯೋಜನೆಯಾಗಬೇಕಾಗಿದೆ. ನಮ್ಮ ವಿಧಾಯಕ ಸೂಚನೆಯು ಇದೇ. ಅದಕ್ಕೆ ಬೆಲೆ ಇದ್ದರೆ, ಅದನ್ನು ಸ್ವೀಕರಿಸಿರಿ. ತುದಿಯಲ್ಲಿ ನಾವು ಹೇಳುವದೇನೆಂದರೆ, ನಮಗೆ ಕಾಡಿನ ಸುರಾಜ್ಯವು ಬೇಡ. ಬೇಸಾಯದ ಸ್ವರಾಜ್ಯವು ಬೇಕು. ಮುಂಬಯಿ ಇಲಾಖೆಯೊಳಗಿನ ಕಾನಡಾ ಜಿಲ್ಲೆಯು ನಿಃಶೇಷವಾಗಿ ಕಾಡಾಯಿತೆಂದು ಹೇಳಿಕೊಳ್ಳಬಾರದೆಂದು, ಅದರೊಳಗಿನ ನಾಲ್ಕು ಕಾಲುಲಕ್ಷ ಲೋಕವಸತಿಗೆ ತಮ್ಮ ಮಾತೃಭೂಮಿಯಾದ ಕರ್ನಾಟಕ ನಾಡನ್ನು ಬಿಟ್ಟು, ಪರದೇಶಕ್ಕೆ ತೆರಳುವ ದುರ್ದೈವವು ಇಂದಲ್ಲಾದರೂ, ಮತ್ತು ೩೦-೪೦ ವರ್ಷಗಳ ನಂತರ ಸಂಭವಿಸಬಾರದೆಂದು, ಬೇಸಾಯದ ಸ್ವರಾಜ್ಯವು ನಮಗೆ ಬೇಕು. ಅದರ ಮೂರ್ತ ಸ್ವರೂಪಕ್ಕಾಗಿ, ಕಾನಡಾ ಜಿಲ್ಲೆಯ ಶೇತಕೀ ಹಕ್ಕುಗಳ ಸ್ವತಂತ್ರ ಕಾಯಿದೆಯು ನಮಗೆ ಬೇಕು, ಎಂದು ಹೇಳಿ, ಸ್ವಲ್ಪ ಉದ್ದವಾದ ಈ ಲೇಖಮಾಲೆಯನ್ನು ಇಲ್ಲಿಗೆ ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಜಂಗ್ಲಲಶಾಹಿಯ ಆಡಳಿತದೊಳಗಿನ ಕಾಡಿನ ಸುರಾಜ್ಯದ ಲೇಖಮಾಲೆಯನ್ನು ಇಂದಿಗೆ ಮುಗಿಸಿದ್ದೇವೆ. ಜನರಿಗೆ ಈ ವಿಷಯದ ತಕ್ಕಷ್ಟು ಜ್ಞಾನವಾಗಬೇಕೆಂದು ಸುಲಭ ಶೈಲಿಯಿಂದಲೇ ನಾವು ಅದನ್ನು ಚರ್ಚಿಸಿದ್ದೇವೆ. ಬರೆ ವಿನಾಶಕ ಟೀಕೆಯಿಂದ ಪರಿಣಾಮವೇನೆಂದು ಹೇಳುವವರ ಗೋಸ್ಕರ ಒಂದು ವಿಧಾಯಕ ಯೋಜನೆಯ ಮೂಲ ತತ್ವಗಳನ್ನು ಇಂದಿಗೆ ರೇಖಾಂಕಿತ ಮಾಡಿದ್ದೇವೆ. ಇದರೊಳಗೆ ನೂತನತೆಯೇನಿಲ್ಲ. ಇಂಥ, ಇಲ್ಲವೇ, ಇದೇ ವಿಧದ ವ್ಯಾಪಕ ಯೋಜನೆಯನ್ನು ಮುಂದಿಟ್ಟು, ಅದರ ಬಗ್ಗೆ ಲೋಕಮತವೇನಿದೆಂದು ತಿಳುಕೊಂಡು, ಹೊಸ ಉಪಕ್ರಮವನ್ನು ಕೈಕೊಂಡ ಹೊರತು ನಿರ್ವಾಹವಿಲ್ಲೆಂಮ, ಲೋಕಮತದ ಇತ್ಯರ್ಥವನ್ನು ಸರಕಾರಕ್ಕೆ ಸಾದರಪಡಿಸುವದು ನಮ್ಮ ಕರ್ತವ್ಯವು. ಈಗ ಸೆಟಲ್‌ಮೆಂಟ ಅಧಿಕಾರಿಗಳು ಕೈಕೊಂಡ ಯೋಜನೆಯು ಯಾರಿಗೂ ಗ್ರಾಹ್ಯವಿಲ್ಲ; ಅಜ್ಞಾನದಿಂದ, ಇಲ್ಲವೇ ಸ್ವಾರ್ಥದಿಂದ ಯಾರಾದರೂ ಅದನ್ನು ಸ್ವೀಕರಿಸಿದರೆ, ಬೇಸಾಯಗಾರರ ಅಸಂತೋಷವು ಎಳ್ಳಷ್ಟು ಕಡಿಮೆಯಾಗದೆ, ಮತ್ತೂ ಹೆಚ್ಚಾಗಬಹುದು. ಈ ಯೋಜನೆಯು ಅಷ್ಟು ಅಪೂರ್ಣವದೆ, ಅಷ್ಟು ಸದೋಷವಾಗಿದೆ. ಸತ್ಯ ಸ್ಥಿತಿಯನ್ನು ಗ್ರಹಿಸದೆ ಇದೇ ಯೋಜನೆಯನ್ನು ರೈತರಮೇಲೆ ಹಚ್ಚಿದರೆ, ಅದರಿಂದಾಗುವ ನಿರಾಶೆಯಿಂದ ಮತ್ತು ಲೋಕಮತದ ತಿರಸ್ಕಾರದಿಂದ, ಸರಕಾರವು ಜನರನ್ನು ಅಸಹಕಾರಿತೆಯ ಸತ್ಯಾಗ್ರಹದೊಳಗೆ ತಾವಾಗಿ ದೂಡಿದಂತಾಗುವದು. "ಯೂಯಂ ಯೂಯಂ, ವಯಂ ವಯಂ" ನಿಮ್ಮಷ್ಟಕ್ಕೆ ನೀವು, ನಮ್ಮಷ್ಟಕ್ಕೆ ನಾವು, ಎಂಬಂತೆ ಒಬ್ಬರ ಮೋರೆಯು ಹಿಂದೆಕ್ಕೆ, ಮತ್ತೊಬ್ಬರ ಮೋರೆಯು, ಮತ್ತೊಂದೆಡೆಗೆ, ಆಗುವದು ಯಾವದೇ ದೃಷ್ಟಿಯಿಂದ ಹಿತಕರವಲ್ಲ. ಬರೆ ಭೀಡೆಯಿಂದ ಇಲ್ಲವೇ ಸಾವರ್ಜನಿಕ ಕ್ಕಾಗಿ ಕೊಟ್ಟಷ್ಟು ತಕ್ಕೊಳ್ಳುವ ಎಂದರೆ, ನಮ್ಮ ಹೊಟ್ಟೆ ತುಂಬದು. ಇದು ಕಾನಡಾ ಜಿಲ್ಲೆಗೆ ಅದರ ಜೀವಿತದ ಪ್ರಶ್ನೆಯಾಗಿದೆ. ಮೂಲ ಮುದ್ದೆಯ ಸಂಗತಿಗಳ ವಿನಯವಾಗಿ, ಕೊಡಕೊಂಡೋಣವು ನಡೆಯುವದಿಲ್ಲ. ಬಹಳೇ ದಿಟ್ಟತನದಿಂದ ನ್ಯಾಯಕ್ಕಾಗಿ ಸರಕಾರವು ಎದ್ದು ನಿಂತು, ಈ ದೊಡ್ಡ ಮತ್ತು ಕಠಿಣ ಪ್ರಾಯವಾದ ಪ್ರಮೇಯವನ್ನು ಬಿಡಿಸಬೇಕಾಗಿದೆ ಇಷ್ಟೇ ನಮ್ಮ ಹೇಳಿಕೆಯು.

---

೨. ರೈತರೂ ಜಮೀನದಾರರೂ "ನಾವೊಲ್ಲೆ" ಹೇಳುವ ಅಸಹಕಾರದ ಪರಿಸ್ಥಿತಿಯು ಇದೇ ಮಾದಲನೇದಲ್ಲ. ೧೮೦೦ ನೇ ಇಸವಿಯ ಸುಮಾರಕ್ಕೆ ನಮ್ಮ ಮೊದಲನೇ ಕಲೆಕ್ಟರರಾದ, ಮನರೊ ಸಾಹೇಬರಿಗೂ ಇದೇ ವಿಧದ ಇಕ್ಕಟ್ಟಿನ ಪರಿಸ್ಥಿತಿಗೆ ಎದುರಾಗಬೇಕಾಗಿತ್ತೆಂದು, ಅವರೊಬ್ಬ ಚರಿತ್ರಕಾರರು ಅವರ ಅನುಭವವನ್ನು ಬರೆದಿಟ್ಟಿರುವರು. ಅದರ ಅವತರಣವನ್ನು ಶ್ರೀ. ದುಭಾಷೆಯವರ ಲೇಖದೊಳಗೆ ಕಳೆದ ಸಂಚಿಕೆಯೊಳಗೆ ಪ್ರಕಟಿಸಿದ್ದೇವೆ. ಟಿಪ್ಪು ಸುಲ್ತಾನನ ಕಡೆಯಿಂದ ನಮ್ಮ ಜಿಲ್ಲೆಯು ಕಂಪನಿ ಸರಕಾರದ ಕೈಗೆ ಬಂದಾಗ್ಗೆ, ಮೊದಲನೇ ಶೀರ್ವೆ ಠರಾವಬಂದಿಯ ಕಾಲಕ್ಕೆ, ಮನರೋ ಸಾಹೇಬರಿಗೆ ಬಂದ ಜನರ ಅಸಹಕಾರದ ಅನುಭವವನ್ನು ಅವರ ಶಬ್ದಗಳಿಂದಲೇ ಲೇಖಕರು ಸ್ಮರಣ ಟಿಪ್ಪಣಗಳಲ್ಲಿ ಸೇರಿಸಿದ್ದಾರೆ. ಇಂಥ ಐತಿಹಾಸಿಕ ಅನುಭವವು ಮನೋರಂಜಕವಿದ್ದಷ್ಟು ಬೋಧಪ್ರದವದೆ. ಮನರೋ ಸಾಹೇಬರು ಹೇಳಿದ್ದರ ಸಾರಾಂಶವೇನೆಂದರೆ— "ಈ ರೈತರೆಂದರೆ, ಬಹಳೇ ಉದ್ಧಾರ ಮತ್ತು ಉಪದ್ರವಿ ಜನರು. ಹೈದರ ಅಲ್ಲಿಯು ಬಂದನು; ಅವನು ಭೂಮಿಯ ಶೀರ್ವೆಯನ್ನು ಜುಲುಮೆಯಿಂದ ಏರಿಸಿದನು. ಈಗ ಕಂಪನಿ ಸರಕಾರವು ಬಂತು. ಅದೂ ಅದೇ ತೆರಿಗೆ ಹಾಕಿರೆಂದು ಹೇಳುತ್ತದೆ. ಹೀಗಾಗಿ ಅವರು ಬಹಳೇ ಸಿಟ್ಟಿಗೆದ್ದಿದ್ದರು. ಶೀರ್ವೆಯ ಠರಾವಬಂದಿಗೋಸುಗ ಏನಾದರೂ ಸಂಧಾನ ನಡೆಸಲಿಕ್ಕೆ ಕರೆದರೆ, ಅವರು ತಮ್ಮದೊಂದು (Bill of rights) "ಪ್ರಾಕ್ಕಾಲದ ಹಕ್ಕುಗಳ" ಯಾದಿಯನ್ನು ಮುಂದಿಟ್ಟು, ಹೈದರನು ವಸೂಲಮಾಡಿದ ಕಂದಾಯವನ್ನು ತಿರಿಗಿ ಕೊಡ್ರಿ, ಕಡೆಗೆ ಮುಂದಿನ ಮಾತು ಮಾತಾಡುವಾ, ಎಂದು ಹೇಳುತ್ತಿದ್ದರು. ಇದೇನು ನಾವು ತಪ್ಪುವದಿಲ್ಲೆಂದು, ಅವರು ಒಕ್ಕಟ್ಟು ಮಾಡಿದಂತೆ, ಒಬ್ಬರ ಸುಳಿವು ಸಹ ಕಚೇರಿಗೆ ಕಾಣಿಸುತ್ತಿದ್ದಿಲ್ಲ. ಪೇಟೆಗಳನ್ನು ಕಳುಹಿದರೂ, ಒಬ್ಬರೂ ಸಿಗುತ್ತಿದ್ದಿಲ್ಲ. ಅಮಲದಾರರಿಗೆ ಬೋಕಿ ನೀರು ಕೊಡದೆ, ಅವರು ಉಪವಾಸಗೆಡವಿದರು. ಹಳ್ಳಿಗಳಲ್ಲಿ ಹೋದರೆ, ಜನರು ಮತ್ತೊಂದು ಹಳ್ಳಿಗೆ ಪಾರಾಗುತ್ತಿದ್ದರು. ಎಂಟೆಂಟು ಹತ್ತತ್ತು ದಿವಸ ಹಾದಿ ಕಾಯುತ್ತ ಕುಳಿತರೂ, ಒಬ್ಬರ ಮೋರೆಯೂ ನನ್ನ ಕಣ್ಣಿಗೆ ಬೀಳಲಿಲ್ಲ." ಮನರೊ ಸಾಹೇಬರ ಕಾಲದ ೧೦೦-೧೨೦ ವರ್ಷಗಳ ಹಿಂದಿನ ಮಾತಿದು. ಸಾಹೇಬರ ಚಾತುರ್ಯದಿಂದ ಆಗಿನ ರೈತರ ಒಕ್ಕಟ್ಟು ಮುರಿದು, ಠರಾವಬಂದಿಯ ಮಾಗಣಿಯಾಯಿತು. ಮತ್ತು ಶೀರ್ವೆಯ ಪ್ರಮಾಣವು ಮೊದಲಿನಿಂದ ಏರಿತು. ಆದರೆ ಆಗಿನ ಶೇತಕೀ ಹಕ್ಕುಗಳು ಮಾತ್ರ ಸಾಮಶೇಷವಾದವು. ಇನ್ನು ನಮ್ಮ ಶೇತಕಿ ಹಕ್ಕುಗಳನ್ನು ಮಾಮೂಲ ಪ್ರಕಾರ ನಮಗೆ ಕೊಡ್ರಿ ಎಂದು ರೈತರು ಹಟ ಹಿಡಿದರೆ, ಅವರ ತಪ್ಪೇನು? ಸರಕಾರಕ್ಕೆ ಬಿಟ್ಟಿವು ಮೊದಲು ಬೇಕಾದರೆ, ಜನರಿಗೆ ಬೇಸಾಯವು ಮೊದಲು ಬೇಕು. ಅದಕ್ಕಾಗಿ ಅವರು ನ್ಯಾಯದಿಂದ ಕಾದಾಡುತ್ತಾರೆ. ಮತ್ತೇನಕ್ಕಿಲ್ಲ.

---

೩. ಶಾಲಾ ಮಾಸ್ತರರ ಬಡತಿಯ ಕಚ್ಚಾ ಯೋಜನೆಯು ಜಾಹೀರಾಯಿತು. ಕಾರಕೂನರ ಬಡತಿಯ ಪಗಾರು ಸಹ ಮಂಜೂರಾಯಿತು. ನಮ್ಮ ಶಾನುಭೋಗರ ಗ್ರಹಗತಿಯು ಮಾತ್ರ ತೀರಲಿಲ್ಲ. ದುಡಿದು ದುಡಿದು ಹಣ್ಣಾದ, ಈ ನೌಕರರ ಪಾಡು ತೀರ ಶೋಚನೀಯವಾಗಿದೆ. ಅವರ ನ್ಯಾಯ್ಯ ಬೇಡಿಕೆಗಳ ತೀರ್ಪು ಇನ್ನೂ ಸಿಗಲಿಲ್ಲೆಂದು ಬೇಸತ್ತು, ನಿರಾಶೆಯಿಂದ ಅವರು ಕಟ್ಟಕಡೆಗೆ ಸಂಪಿಗೆ ಈಡಾದರು. ಸ್ವಾಭಿಮಾನಿ ನವಕರರು ಹಿಡಿಯುವ ಇದೊಂದೇ ದಾರಿಯೆಂದು, ಅನಿರ್ವಾಹವಾಗಿ ಅವರು ಸಂಪಿನ ದಾರಿ ಹಿಡಿದಿರುವರು. ಕುಮಟೆಯ ಬಹುತರ ಎಲ್ಲ ಶಾನುಭೋಗರು ದಪ್ತರಗಳನ್ನಿಟ್ಟರು. ಮಿ| ಹೇಗ ಸಾಹೇಬರು ಹೇಳಿದ ಮಾತುಗಳಿಂದ ಅವರು ತಮ್ಮ ನಿಶ್ಚಯವನ್ನು ಬಿಡಲಿಲ್ಲ. ನಿರಾಶೆಯಿಂದ ಅವರ ಮನಸ್ಸು ಗಟ್ಟಿಯಾಗಿದೆ. ಹೊನ್ನಾವರದ ಬಹುತೇಕ ಎಲ್ಲ ಶ್ಯಾನುಭೋಗರು ಸಹ ಸಂಪು ಮಾಡಿದ್ದಾರೆಂದು ತಂತಿ ವಾರ್ತೆಯಿದೆ. ಅಂಕೋಲೆಯವರು ಕುಮಟೆ-ಹೊನ್ನಾವರದ ಹಿಂದೆ ಹೊರಟಿದ್ದಾರೆ. ಬಹುತರ ಎಲ್ಲ ತಾಲೂಕುಗಳಲ್ಲಿ ಇದೇ ಹಾಡಾಗಿದೆ. ಇಂಥ ಪರಿಸ್ಥಿತಿಯುಂಟಾಗಲಿಕ್ಕೆ ಕಾರಣವಾದವರ್ಯಾರೆಂದು ಸರಕಾರವೇ ಹೇಳಲಿ. ಎಲ್ಲ ಖಾತೆಗಳ ಕೆಳ ನೌಕರರ ಬಡತಿಯ ಯೋಜನೆಗಳು ಹೊರಬಿದ್ದವು. ದೊಡ್ಡ ಅಧಿಕಾರಿಗಳ ಪಗಾರು ನೂರುಗಟ್ಟಲೆಯಿಂದ ಏರಿತು. ಶ್ಯಾನಭೋಗರು ಮಾತ್ರ ತ್ರಿಶಂಕುಗಳಾಗಿ ಯಾಕೆ ಬಿದ್ದಿರುವರು? ಅವರ ಕಷ್ಟಗಳನ್ನು ಸಿವಿಲಿಯನ ಅಧಿಕಾರಿಗಳು ಸ್ವತಃ ಕಣ್ಣಿನಿಂದ ನೋಡುತ್ತಿರುವರು. ಹೀಗಿದ್ದು, ಅವುಗಳ ನ್ಯಾಯ್ಯವಾದ ಪರಿಹಾರವೇಕಾಗುವದಿಲ್ಲ? ಪರಿಷ್ಕರ ಹುಕುಮು ಮುಂಚೆ ಪಾಲಿಸುವದೊ, ಹೊಟ್ಟೆಯ ಹುಕುಮು ಮುಂಚೆ ಪಾಲಿಸುವದೋ, ಇವೇ ಎರಡು ಪ್ರಶ್ನೆಗಳು ಅವರ ಮುಂದಿದ್ದಾಗ, ಹೊಟ್ಟೆಯ ಹುಕುಮು ಅವರು ಪಾಲಿಸಹತ್ತಿದ್ದಾರೆ ಇದು ಸ್ವಾಭಾವಿಕವು. ಅವರ ಸಂಪಿನ ಆಪತ್ತಿಯನ್ನು ಪರಿಹರಿಸುವದು ಸರ್ವಥಾ ಸರಕಾರದ ಕೈಯಲ್ಲಿದೆ. ಸ್ವಭಾವತಃ ಅವರು ಕರ್ತವ್ಯದಕ್ಷ ಮತ್ತು ಇಮಾನಿ ನೌಕರರು. ಅವರ ನ್ಯಾಯ್ಯ ಬೇಡಿಕೆಗಳನ್ನು ಇನ್ನಾದರೂ ಸರಕಾರವು ಮಾನ್ಯಮಾಡುವದೆಂದು ಕೋರುವೆವು.

---

೪. ಬಂಕಿಕೊಡ್ಲ ಶಾಲೆಯ ಮುಖ್ಯಾಧ್ಯಾಪಕರಾಗಿದ್ದ ಶ್ರೀಯುತ ಗೋಪಾಳರಾವ ವಿಠೋಬಾ ಶೇಣ್ವಿಯವರು ಕಳೆದ ಆದಿತ್ಯವಾರ ಉದರ ವಿಕಾರದಿಂದ ಅಕಾಲಿಕವಾಗಿ ನಿಧನಹೊಂದಿದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವೆನಿಸುತ್ತದೆ. ತೀರ ಬಡ ಮನೆಯಲ್ಲಿ ಜನ್ಮತಾಳಿ, ಬಾಲ್ಯದಲ್ಲೇ ತಂದೆಯು ಕಳೆದಿಂದ ಮೂಗಿನಮೇಲೆ ಕಲ್ಲು ಹಾಕಿ ಕೊಲ್ಲಲ್ಪಟ್ಟು ಬಹಳೇ ಕಷ್ಟಕರ ಸ್ಥಿತಿಯಲ್ಲಿ ತ್ಯಾಗೂ ಮಾಡಿ ವಿದ್ಯಾರ್ಜನೆಯನ್ನು ಮಾಡಿ, ಟ್ರೇಂಡರಾಗಿ, ಇವ

ವಿದ್ಯಾನಿಪುಣ ಶಿಕ್ಷಕರಾಗಿದ್ದರು ಇಂಗ್ರಜಿಯ ಜ್ಞಾನವಿಲ್ಲದೇ ಪ್ರತಿ ಒಂದು ವಿಷಯದಲ್ಲಿ ಇವರು ಬಹಳ ಪಾರಂಗತರಿದ್ದರೆಂದು ನೋಡಿ, ವಿದ್ವಾಂಸರು ಸಹ ಬೆರಗಾಗುತ್ತಿದ್ದರು. ಅವರ ನಿಧನದಿಂದ ಪ್ರಾಥಮಿಕ ಶಿಕ್ಷಕರೊಳಗಿನ ಒಂದು ಅಮೂಲ್ಯ ರತ್ನವೇ ಕಾಣದಂತಾಯಿತೆಂದು ನಮಗೆ ಹೇಳಬೇಕಾಗಿದೆ ವಿದ್ವತ್ತೆಗಿಂತ ಹೆಚ್ಚು ಅಮೋಲಿಕವಾದ ಅವರ ಸಂಪತ್ತೆಂದರೆ ಅವರ ನಿರ್ಮಲ ಶೀಲವಾಗಿತ್ತು. ಅದಕ್ಕಾಗಿ, ಮತ್ತು ಅವರ ವಿನಯಶೀಲತೆಗಾಗಿ, ಸೌಜನ್ಯಕ್ಕಾಗಿ ಅವರು ಎಲ್ಲರಿಗೂ ತಮ್ಮ ಆಪ್ತರಂತೆ ಪ್ರಿಯರಾಗಿದ್ದರು. ಒಂದೇ ತಿಂಗಳ ವ್ಯಾಧಿಯಿಂದ, ಆಕಸ್ಮಿಕವಾಗಿ ಅವರ ನಿಧನವಾದದ್ದರಿಂದ ಅವರ ಹೆಂಡತಿಗೂ ಅವರ ಅನುಜರಾದ ಶ್ರೀ ಪುರುಷೋತ್ತಮರಾಯರಿಗೂ ಅಕಾಲದೊಳಗಿನ ಕೊಡ್ಲಿಯ ಏಟು ಬಿದ್ದಂತಾಗಿ, ಅಸಹ್ಯ ದುಃಖವಾಗುವದು ಸಹಜವು ಅವರ ನಿರಾಶ್ರಿತ ಹೆಂಡತಿಯ ಮತ್ತು ಒಬ್ಬ ಸಣ್ಣ ಹುಡುಗನ ಸಂರಕ್ಷಣೆಯ ಭಾರವು ಅವರ ಭ್ರಾತೃನಿಷ್ಠ ಅನುಜರ ಮೇಲೆ ಬಿದ್ದರೆ ಆಶ್ಚರ್ಯಗೆ ಯಾರ ಉಪಾಯವೂ ನಡೆಯದು. ಅನೇಕ ಮಿತ್ರರು ಈ ದುಃಖದಲ್ಲಿ ಪಾಲುಗಾರರಿದ್ದಾರೆಂದು ತಿಳಿದು, ಶ್ರೀ ಪುರುಷೋತ್ತಮರಾಯರು ತಮ್ಮ ಸಾಂತ್ವನಮಾಡಿಕೊಳ್ಳಬೇಕ ಕಣ್ಣು ಮುಚ್ಚಿನಮೇಲೆ "ಸ, ಹಿ, ಕಿ ಜಿಪತ್ತಿ" ಎಲ್ಲಾ ಸವಾಸಿಗಳ ಅಲ್ಪವಯಸ್ಸ ಹುಡುಗನು ದೀರ್ಘಾಯುಷಿಯಾಗಲಿ ಮತ್ತು ಮೃತರ ಆತ್ಮಕ್ಕೆ ಚಿರಕಾಲಿಕ ಶಾಂತಿ ದೊರೆಯಲೆಂದು ನಾವು ದೇವರಿಗೆ ಪ್ರಾರ್ಥಿಸುತ್ತೇವೆ

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯು ಬೀಳುತ್ತಿದೆ ರೋಗರಾಯಿ ಇದ್ದೇ ಇರುವದು ಧಾನ್ಯಗಳ ಬೆಲೆಯೂ ಕಡಿಮೆ ಇಲ್ಲ

ಮೆ॥ ಕಲೆಕ್ಟರ ಸಾಹೇಬರು ಊರೂಕ ಠರಾವಮಾಡಿ ಕಾರವಾರಕ್ಕೆ ತೆರಳಿದರು ಅಬಕಾರಿ ಇಲ್ಲೇ ಉಂಟು

ಮೆ॥ ಕೋಲಿನ್ಸ ಸಾಹೇಬರ ಸ್ವಾರಿ ಯಲ್ಲಾಪುರಕ್ಕೆ ಹೋಗಿ ನಾತಾಳ ರಜೆಗೆ ಸರಿಯಾಗಿ ಕಾರವಾರಕ್ಕೆ ಮುಟ್ಟುವದು.

ಇಲ್ಲಿಯ ಟಾಂಗೆ ಕಂಪನಿಯ ಅಜಾಗ್ರತೆಯ ಹುಡುಗತನದಿಂದ, ದಾಕ್ತರರ ಒಬ್ಬ ದೇವಳೀ ಜಾತಿಯ ೬-೭ ವರ್ಷದ ಹುಡುಗನ ಮೈಮೇಲಿಂದ ಚಕ್ರದಾಟಿ ಇಲ್ಲಿ ಸರಕಾರಿ ದವಾಖಾನೆಯ ಔಷಧೋಪಚಾರದಿಂದ ಸುಧಾರಣೆಗೆ ಬಂದಿರುವನು ಇಂಥ ಅಪಘಾತದ ವಿಚಾರ ಪೋಲೀಸರು ಏನು ಮಾಡಿದರು ? ಪರಿಣಾಮವೇನಾಯಿತು ?

ಕುಮಟಾ ತಾಲೂಕ ಕ್ರಿಮಿನಲ್ ದಾವಾಗಳು ಇಳಿದವೆಂದು ತಿಳಿದು ಬರುತ್ತದೆ. ಒಂದೆ ಗಾಡಿಗಳ ಹಾಸಲು ಬೇಕಾಯಿತೆಂದರೆ ದಿನದ ಮಾಡಿದ ಬಗ್ಗೆ ೨-೩ ಅರ್ಜಿಗಳಾಗಿದ್ದುವೆಂದು ತಿಳಿಯುತ್ತದೆ ಪರಿಣಾಮವೇನಾಗುತ್ತದೆ ನೋಡಬೇಕು.

ಕಟ್ಟಕಡೆಗೆ ಕೊಟ್ಟ ಕಾದಾಟದಲ್ಲಿ ಬೇಸತ್ತ ಈ ತಾಲೂಕಿನ ೪೦ ಜನ ಶ್ಯಾನಭಾಗರು ಒಮ್ಮೆಲೇ ಸ್ವಾತಂತ್ರ್ಯದಿಂದ, ಧೈರ್ಯದಿಂದ, ಜವಾಬಿನಿಂದ ತವಾಸಿನ ವೇಳ್ಯ ಮಾಮಲೇದಾರರ ಸಮಕ್ಷ, ದೊಡ್ಡ ಸಾಹೇಬರ ಚಕ್ರರಾಜ, ತಮ್ಮ ಹೊಟ್ಟೆ ತೊರಿಸಿ, ಪ್ರಾಂತ ಸಾಹೇಬರ ಹೆಸರಿನ "ದಪ್ತರ" ಒಂದ ಇಟ್ಟ ರಿಪೋರ್ಟ ಕೊಟ್ಟಬಿಟ್ಟರಂತೆ! ಇದೊಂದು ಎಲ್ಲರಿಗೂ ಸಾಶ್ಚರ್ಯವಾಗಿದೆ ಸಾಹೇಬರು ಸಾವೋಪಚಾರದ ೧ ವರ್ತನೆಗಳನ್ನು ಉಪದೇಶ ಮಾಡಿ, ಆ ರಿಪೋರ್ಟಗಳನ್ನು ಹರಿದು ಹಾಕಿರೆಂದು ಹಿಂತಿರುಗಿ ಕೊಟ್ಟರಂತೆ' ಅವರು ಆ ರಿಪೋರ್ಟಗಳನ್ನು ಸಣ್ಣ ಸಾಹೇಬರ ಕಡೆಗೆ ಕಳುಹಿಸಿದ್ದಲ್ಲದೆ ಎಲ್ಲ ತಾಲೂಕಿನವರಿಗೂ, ಇಲಾಖೆ ನ ಧಿಕಾರ್ಯ ರಂತಿಗಳೂ ಬಿದ್ದಿಟ್ಟಿದ್ದ ಸಣ್ಣ ಸಾಹೇಬರು ಈವತ್ತು ಇಲ್ಲಿ ಬಿರುಮ್ಮಾರಂತೆ' ಆದರೆ ಗೇನು ಕರುಣೆಯಿಲ್ಲನಂತೆ' ಈ ಮಾರ್ಗದಿಂದ ಕಾರ್ಯಸಾಧಿಸುವದಕ್ಕಿಂತ, ಅವರ ಹೊಟ್ಟೆಯ ಕಾವನು ಕೇಳವನ್ನು ಮಾಡಿ... ಸಾಧಿಸ ದಮ ಬಿ ಸಲ್ಲಿದೆ

ಈ ತಾಲೂಕ ಒಂದೆ ಗೆ ಎಂಬಲ್ಲಿ ಒಂದು ಮೊದ ಜುಗಾರ ಮಂಡಳವನ್ನು ಹಿಡಿದು ೧೧ ಜನ ಆರೋಪಿಯ ರು ಕ್ಕೆ ದ ನಾಪಟ್ಟಿಟ್ಟಿರುವರು ಇದೊಂದು ಪೋಲೀಸ ಜಯ ದ್ದೂರಿ' ಇಂಥ ಪವಿತ್ರಕಳ ವ್ಯಕ್ತಿಗಾಗಿ ಅವರನ್ನು ಜನಾಮಾಗಲೂ ಹೊಗಳುವದು ಅವಶ್ಯ ಪಾತ್ರ ಮಾಡಿದ್ದರಾಯಿತ

ಮಿ॥ ಇಲ್ಲಿ ಅವರು ಸಾಹೇಬರು ರಾಜೀನಾಮೆ ಕೊಟ್ಟರೋ॥ ಹೋದಲ ಮ ಒಬ್ಬ ಎ ರಕ್ಕೆ ಸಂಚೆಗೋ ಬಿ ಉಸ್ಮಾನ ಪಲ್ಲವ ಸಾಬು ಸಾಹೇಬರು ಸೇವಿ ಸ್ಥಿಟ್ಟರು ವರ ತಮ್ಮ ಪೂರ್ವಾಧಿಕಾರಿಗಳ ಯಾತ್ರೆ ರಾಜೀನಾಮೆ ಕೊಟ್ಟರೆಂಬುದ ಇವರು ಸ ರೆಗೋಳಿದ ಕ್ಷಿದ್ದ ಪೋದ ತಿಳಿಯಲಿಲ್ಲವೋ ಏನೊ ಈಗ ಕಡಕ್ಕೆ ದ ಟ್ಟದಂತೆ ತಿಳಕೊಂಡಾರು.

ಈ ವರ್ಷ ನಾಗಪುರದಲ್ಲಿ ಕಾಂಗ್ರೆಸಿನ ಸಭೆಯ ಟಿಕೇಟ—ಹೆ...ವರಿಂದ ಹೇಗೆ ಟಿಕೇಟ ದೊರೆಯುವರು ... ಮಾತ್ರ ದಲಿಗೆ ಟಿಕೇಟ ಹೋಗಲಿಲ್ಲ' ದೆ ಕ... ಇವರು ಎಂದಾದರೂ ಕಾಂಗ್ರೆಸ್ಸ ... ಈ ವರ್ಷದ ... ಶ್ರೀ ...

ಸದಾಶಿವಗಡ— [illegible]

ಅಂಕೋಲಾ— [illegible]

ಈ ೧೨ನೇ ... ದಿವಸ ... ಶ್ರೀ ... ಆಗಮಿಸಿದ ... ಇವರ ಉದ್ದೇಶ ... ವಿವರಣೆ ... ಸಂಘ ... ಇವರು ... ಉದ್ದೇಶಗಳಲ್ಲಾ ಸ್ವಷ್ಟವಾದ

ಇಲ್ಲಿ ಒಂದು ಕನಸ್ಯಾಮಂದಿರ ಸೊಸೈಟಿಯನ್ನು ಬೇಗನೆ ಸ್ಥಾಪಿಸುವ ವಿಚಾರ ನಡೆದದೆ

ತಾ ೧೬ನೇ ಗುರುವಾರ ದಿವಸ ಜ್ಯೋಯಿಂಗೆ ಇನಸ್ಪೆಕ್ಟರ ಮಿ॥ ಹೊಗರ ಸಾಹೇಬರು ಎಮ್ಮೆ ಶಾಲೆಗೆ ಬೆಟ್ಟಿಯನ್ನು ಕೊಟ್ಟರು ಹೊಯಿಗಡ ಕೆಲಸವನ್ನು ನೋಡಿ ಆನಂದವನ್ನು ವ್ಯಕ್ತ ಪಡಿಸಿದರಂತೆ

ಇಲ್ಲಿಯ ಮೊಡ್ಡದ ನೆತನದವರೂ ವಯೋವೃದ್ಧರೂ ಆದ, ಶ್ರೀ॥ ಬಾಬುರಾವ ಧೊರಣ್ಣವು ನಾಡ್ಕರ್ಣಿಯವರು ತಾ ೧೬ನೇಗೆ ಕೈಲಾಸವಾಸಿಯಾದರೆಂದು ತಿಳಿಸಲು ಬಹಳೇ ವ್ಯಸನವಾಗುತ್ತದೆ ಇವರು ಪೆನಶನಿದಾರರಿದ್ದರು ಇವರ ನಿಧನದಿಂದ ಕುಟುಂಬರೂ, ವಿದ್ವಾಂಸರೂ, ಅನಾಥರೂ ಆದ ಒಬ್ಬ ಹಿರಿಯರು ಇಲ್ಲದಂತಾದರು ಪರಮೇಶ್ವರನು ಈ ಸತ್ಪುರುಷರ ಆತ್ಮಕ್ಕೆ ಶಾಂತಿಯನ್ನೀಯಲಿ

ತಾ ೨೦ನೇ ದಿವಸ ಕಲೆಕ್ಟರ ಸಾಹೇಬರ ಸ್ವಾರಿಯು ಇಲ್ಲಿ ಬಂದಿತ್ತು ಸೋಮವಾರ ಎಂದ ತಾಸ ಕಡೆಗೆ ...

ಅವರು ಶಾನಭೋಗ ಜನರು ಸಂಪು ಮಾಡದಂತೆ ಸಮಾಧಾನ ಹೇಳುವರ, ಶಿರಸ್ತೆದಾರ ಸಾಹೇಬರಿಗೆ ಹೇಳಿದ್ದರಂತೆ' ಆದರಂತೆ ಶಿರಸ್ತೆದಾರರು ಶ್ಯಾನಭೋಗರಿಗೆ ಕರಿಸಿ, ತಿಳಿಸಿ ಹೇಳಿದರು ಅದರಿಂದ ಅವರ ಮನಸ್ಸಿನಮೇಲೆ ಪರಿಣಾಮವೇನೂ ಆಗಲಿಲ್ಲ ಅವರ ಅಸಂತೋಷವು ಬೆಳೆಯುತ್ತಲೇ ಇದೆ

ತಾಜಾ ಬಾತ್ಮಿ ಇಲ್ಲಿಯ ಶಾನಭೋಗರು ಸಹ ದಪ್ತರ ಇಟ್ಟ ಬಗ್ಗೆ ತಂತಿ ಹೊರಟಿದೆ

ಯಲ್ಲಾಪೂರ— ಹವಾಮಾನವು ಮುಂಚಿನಂತೆಯೇ ಇರುವದು ಚಳಿಯು ಅತಿಶಯ. ಪ್ಲೇಗದ ೨-೩ ಕೇಸುಗಳು ಆದವು ಅಡಿಕೆ ಹಾಗು ಭತ್ತ ಕೊಯ್ಯುವ ಕೆಲಸವು ಬಹಳ ಜೋರಿನಿಂದ ನಡೆದಿರುವದು. ಕಾಳಿನ ಧಾರಣೆಯು ಇಳಿಯುವ ಸಂಭವವಿರುವದು ಮೆಕರಬಾನ್ ಕಸ್ಟಮ ವೇಟರರ ಸ್ವಾರಿಯು ಇಲ್ಲಿಗೆ ಬಂದಿರುವದು.

ಹಳಿಯಾಳ— ಚಳಿ ಬೀಳುತ್ತಿದೆ ಮಲೇರಿಯಾ ಜ್ವರ ಮತ್ತು ಕೆಮ್ಮು ಚಾಲು ಉಂಟು ಭತ್ತದ ಬೆಳೆಯು ಒಕ್ಕೋಣಿಯು ಚಾಲು ಇದ್ದು, ಜಂಗಲ ಜನಾವರಗಳ ಹಲ್ಲೆ ಸಹ ಚಾಲು ಆದೆ ಲೋಕಪ್ರಿಯ ಡಾ॥ ಗಾಯತೊಂಡೆಯವರು ವರ್ಗವಾಗಿ, ಡಾ॥ ಕೊಯಿಲೋರವರು ಹಾಜರಾದರು ಇವರೂ ಹಿಂದಿನವರ ಕೈವಾರಿಯಾಗುವರೆಂದು ಆಶೆ ಕಾಳಿನದಿಯ ಉಗಮದಲ್ಲಿ ಒಂದು ಸಂಗಮ ಭಟಭಡಿ ಆದ ಅದರ ವಹಾಣಿ ಮಾಡಿ, ಅಬಿಸ್ಕಾರಿಯ ಕೊಪಲಿಕ್ಕೆ ತಜ್ಞ ಆಫೀಸರರು ಬಂದಿರುವರು. ಗೋ॥ ಗ್ಯಾ. ಭಿ ಸ್ಟವಂಡಳದ ತರ್ಫೆನಿಂದ ನಾಗಪೂರ ಅಲ್-ಇಂಡಿಯಾ ಗೋರಕ್ಷಣ ಸಭೆಗೋಸುಗ ಪ್ರತಿನಿಧಿ ಆರಿಸೋಣವಾಯಿತು ಶಾಲಾ ಮಾಸ್ತರರ ಅವಿನಾಭ್ಯಯಾಗಿ ವಗಾರ ಜಿಸ್ಟೋರಿನ ಸಂಬಂಧ ನಿರಾಶೆ ವ್ಯಕ್ತಪಡಿಸಲಾಯಿತು ತಾಲೂಕಾ ಸಭೆಯಿಂದ ಕಾಂಗ್ರೆಸಕ್ಕೆ ಪ್ರತಿನಿಧಿಗಳು ಹೋಗುವ ೨ ಇರಿಗೇಶನ ಸುಪರಿಂಟೆಂಡೆಂಟ ಇಂಜಿನಿಯರರು ಒಂದು ಧಾರವಾಡಕ್ಕೆ ಹೋದರು. ಕೊ ಆ ಸೊಸಾಯಿಟಿಯ ಕೆಲಸದ ವ್ಯವಸ್ಥೆ— ನಿಯಮಿತ ವೇಳ್ಯಕ್ಕೆ ಮತ್ತು ನಿರ್ದಿಷ್ಟ ಸ್ಥಳಕ್ಕೆ— ಇಡುವದವಕ್ಕೆ ಗಾಡಿಗಳು ಬಿಟ್ಟಿಗೆ ಹಿಡಿಯುವ ಕೆಲಸ ಚಾಲು ಆದೆ

ಶಿರ್ಶಿ— ದಾರವಾಡ ಹ್ಯಾಸ್ಕೂಲದಲ್ಲಿದ್ದ ಇಲ್ಲಿಯ ಶ್ರೀ ಪಿ ಹಿ ಕೆಸ್ಕರ ಎಂಬುವರು ಅಸಹಕಾರಿತೆಯ ತತ್ವದಂತೆ ಶಾಲೆಗೆ ಶರಣು ಹೊಡೆದಿರುವರು ಇದಲ್ಲದೆ ಹೆಣ್ಣು ಮಕ್ಕಳ ಶಾಲೆಯೊಳಗಿನ ಅಜಮಾಸ ೨೫ ಹುಡುಗೆಯರನ್ನು ಅವರವರ ಪಾಲಕರು ಶಾಲೆಯಿಂದ ಬಿಡಿಸಿರುವರು.

ಶಿಕ್ಷಕ ಪಾಠಶಾಲೆಯವೂ, ರಾಷ್ಟ್ರೀಯ ಶಾಲೆಯೂ ಪ್ರಗತಿಯಲ್ಲಿವೆ ಗಾಂಧಿ ಆಶ್ರಮದಲ್ಲಿ ವಿಜಯ ವ್ಯಾಖ್ಯಾನ ಮಾಲೆಯ ೨ ನೇ ವ್ಯಾಖ್ಯಾನವು ಶ್ರೀ॥ ಕೊಲ್ಲಾಳಿಯವರ ಅಧ್ಯಕ್ಷತೆಯಲ್ಲಾಗಿ, ವ ಖ್ಯ ವ್ಯಾಖ್ಯಾತರಾದ ಶ್ರೀ ಕೊಪ್ಪೆಯವರು ಬ್ರಿಟಿಷ ರಾಜ್ಯವನ್ನು ಜನರು ರಾಮರಾಜ್ಯಕ್ಕೆ ಹೋಲಿಸ ತ್ರಿದ್ದರೆಂತಲೂ, ಆದರೆ, ಕ್ರಮೇಣ ಆ ಭ್ರಮೆಯು ಇಲ್ಲದಂತಾಗಿ, ಸಧ್ಯದ ಖಿಲಾಫತ್ ಹಾಗೂ ಪಂಜಾಬದ ಪ್ರಕರಣಗಳಲ್ಲಿ ಅದು ಎಷ್ಟೋ ಜನರಲ್ಲಿ ಪೂರ್ಣವಾಗಿ ನಷ್ಟವಾಗಿದೆ ರೂ. ಕುರುಡ ಎತ್ತಿಗೆ ಕರಡವೇ ಕೈಲಾಸ' ವೆಂಬಂತೆ ಮಿರಾಳರಿಗೆ ಒಡು ಸಮಾಧಾನಕರವಾಗಿ ಕಾಣಿಸುತ್ತಿರುವದು, ಶೋಚನೀಯವೆಂತಲೂ, ಸವಿಸ್ತಾರವಾಗಿ ವಿವರಿಸಿದರು. ಈ ವೇಳೆ ಶ್ರೀ॥ ಕೊಲ್ಲಾಳಿ, ಘಾಟಪ್ಪೆ, ಮತ್ತು ನ್ಯಾಮ, ಇವರು ಸ್ವದೇಶೀ ಕಾರಖಾನೆಗಳ ಅಂತಿವ, ಅದರಿಂದ ನಮ್ಮ ದೇಶಕ್ಕಾಗುವ ಲಾಭ ಮತ್ತು ಇದಕ್ಕಾಗಿ ನಾವು ಕೈಕೊಳ್ಳಬೇಕಾದ ಉಪಾಯಗಳನ್ನು ಸರಸವಾಗಿ ವರ್ಣಿಸಿದರ

ಶಾಲೆಗಳಿಗೆ ಸಂಬಂಧಿಸಿದ್ದ ವಸತಿ ಗೃಹಗಳಿಗೆ ವರ್ಷಾಸನವನ್ನು (grant) ಪಡೆಯುವ ಹಕ್ಕು ಇರುತ್ತಿದ್ದ ಈಗ ಆ ಹಕ್ಕು ವಿದ್ಯಾರ್ಥಿಗಳ ಖಾಸಗಿ ಖಾನಾವಳಿಗೆ ಇರುವಂತೆ ವ್ಯವಸ್ಥೆ ಆಗಿದೆಯಂತೆ' ಅಂದ ಬಳಿಕ, ಸರಕಾರದ ಪಾಯಶಾಲೆಗಳು ಎಲ್ಲಿಯವರೆಗೆ ಪರರಿನ ಸ್ಥಿತಿ ಏನನ್ನು ಕೇಳಿರಿ!

ರು? ಇಲ್ಲವೆ, ಇವರ ಸಂಚಯದ ಬಗ್ಗೆ ನಮ್ಮಲ್ಲಿ ಎಷ್ಟು ಮಂದಿ ಜೋಗಾಡುವರು? ಇದನ್ನು ಸಂಗ್ರಹಿಸುವ ಕಾಲವು ಬ್ರಹ್ಮಚರ್ಯದ್ದು. ಅಂದರೆ ಮಹರ್ಷಿಗಳ ಮತದಂತೆ ಹೇಳುವದಾದರೆ, ಮನುಷ್ಯನ ಆಯುಷ್ಯವಾದ ಮೊದಲಿನ ಒಂದು ನಾಲ್ಕನೆಯಂಶವು ತಾರುಣ್ಯದ ಪೂರ್ವಭಾಗವೆಲ್ಲ ಇದರಲ್ಲೇ ವೆಚ್ಚವಾಗತಕ್ಕದ್ದಿರುತ್ತದೆ. ನಮ್ಮ ದೇಶದ ತರುಣರೊಳಗಿನ ನೂರಕ್ಕೆ ತೊಂಬತ್ತರಷ್ಟು ಮಂದಿ ಆಹಾರಾದಿ—ವಳು ಸಾಮಾನ್ಯವಾದ ವ್ಯವಸಾಯದಲ್ಲಿಯೇ ತೊಡಗಿದ್ದದ್ದು ಕಂಡುಬರುತ್ತದೆ. ಉಳಿದ ಜನರೂ ವಿದ್ಯಾರ್ಜನೆಯಲ್ಲಿ ತೊಡಗಿದ್ದರೂ, ಮೇಲೆ ಹೇಳಿದ ಲಾಭವು ಇವರಿಗೂ ಇವರ ದೇಶಕ್ಕೂ ಬಹಳ ಸ್ವಲ್ಪವಾದರೂ ತೋರಿಬರುವದಿಲ್ಲ! ಇದು ನಮ್ಮ ಸಾಮಾಜಿಕ ಸುಧಾರಕರ ಮನಸ್ಸಿಗೆ ಏಕೆ ಬರಲಾರದು? ಯಾವದೊಂದು ವಿಷಯದ ಚಟ ಹತ್ತಿ ಮನುಷ್ಯನ ಸ್ವಭಾವವು ತಯಾರಾಗುವ ವ್ಯವಸ್ಥೆಯು, ಅವನ ಬಾಲ್ಯಾವಸ್ಥೆಯಿಂದಲೇ ಆರಂಭವಾಗುತ್ತದೆ. ಈ ಕೆಲಸವನ್ನು ವ್ಯಕ್ತಿಯೂ ಕೈಕೊಳ್ಳುವದಿಲ್ಲ, ಸಮಾಜವೂ ಮಾಡಿಸುವದಿಲ್ಲ!

ಈ ಮನಸ್ಸಾದರೂ ಏನು ಇರುತ್ತದೆ? ಇದ ಶರೀರದ ಒಂದು ಸೂಕ್ಷ್ಮವಾದ ಭಾಗವು. ಅಂದರೆ ಶರೀರವು ಯಾವ ದ್ರವ್ಯಗಳಿಂದ ಹುಟ್ಟಿರುವದೋ ಅವೇ ದ್ರವ್ಯಗಳ ಸೂಕ್ಷ್ಮವಾದ ಅವಯವಗಳಿಂದಲೇ ಮನಸ್ಸು ಆಗಿರುವದು. ಈ ಮಾತು ಮುಂದಿನ ಶ್ರುತಿಯಿಂದ ಸ್ಪಷ್ಟವಾಗುವದು.

“ಅನ್ನಮಶಿತಂ ತ್ರೇಧಾವಿಧೀಯತೇತಸ್ಯ ಯಸ್ಥವಿಷ್ಠೋ ಧಾತುಃತತ್ಪುರೀಷಂ ಭವತಿ ಯೋ ಮಧ್ಯಮಸ್ತನ್ಮಾಂಸಂ ಯೋಣಿಷ್ಠಸ್ತನ್ಮನಃ।”

(ಛಾಂದೋಗ್ಯೋಪನಿಷತ್)

ತಿಂದ ಅನ್ನವು ಮೂರು ಪ್ರಕಾರವಾಗಿ ಮಾಡಲ್ಪಡುವದು. ಅದರ ಸ್ಥೂಲವಾದ ಭಾಗವು ಮಲವಾಗಿಯೂ, ಮಧ್ಯಮ ದ್ರವ್ಯವು ಮಾಂಸವಾಗಿಯೂ, ಸೂಕ್ಷ್ಮವಾದ ಅಂಶವು ಮನಸ್ಸಾಗಿಯೂ ಆಗುವದು ಎಂದು ಮೇಲಿನ ಶ್ರುತಿವಾಕ್ಯದ ಅರ್ಥವು. ಆದ್ದರಿಂದ ಆರೋಗ್ಯಕಾರಕ ಪದಾರ್ಥಗಳನ್ನು ಸೇವಿಸೋಣದರಿಂದಲೇ ಶರೀರವು ನಿರೋಗಿಯೂ ಸಶಕ್ತವೂ ಆಗುತ್ತಿರುವದರಿಂದ, ಅಂತಹ ಪದಾರ್ಥಗಳ ದ್ರವ್ಯಗಳಿಂದಲೇ ಪೋಷಿಸಲ್ಪಟ್ಟ ಮನಸ್ಸಾದರೂ ನಿರ್ಮಲವೂ, ಬಲವುಳ್ಳದ್ದೂ ಆಗುವದೆಂಬುದು ಸಹಜವು. ಈ ಮಾತನ್ನು ಶ್ರೀ ಕೃಷ್ಣಪರಮಾತ್ಮರು ಗೀತೆಯಲ್ಲಿ ಆಹಾರದ ವರ್ಗೀಕರಣಗಳನ್ನು ಮಾಡುವಾಗ, ಚನ್ನಾಗಿ ವಿಶದಮಾಡಿರುವರು. ಈ ಮಾತು ಕೆಳಗೆ ಕೊಟ್ಟ ಶ್ಲೋಕಗಳಿಂದ ಗೊತ್ತಾಗುವದು.

ಆಯುಃ ಸತ್ವಬಲಾರೋಗ್ಯ-
ಸುಖಪ್ರೀತಿವಿವರ್ಧನಾಃ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ
ಆಹಾರಾಃ ಸಾತ್ವಿಕಪ್ರಿಯಾಃ॥
ಕಟ್ವಮ್ಲಲವಣಾತ್ಯುಷ್ಣ
ತೀಕ್ಷ್ಣರೂಕ್ಷವಿದಾಹಿನಃ।
ಆಹಾರಾ ರಾಜಸಸ್ಯೇಷ್ಟಾ
ದುಃಖಶೋಕಾಮಯಪ್ರದಾಃ॥
ಯಾತಯಾಮಂ ಗತರಸಮ್
ಪೂತಿ ಪರ್ಯುಷಿತಂ ಚ ಯತ್।
ಉಚ್ಛಿಷ್ಟಮಪಿ ಚಾಮೇಧ್ಯಮ್
ಭೋಜನಂ ತಾಮಸಪ್ರಿಯಮ್॥

ಆಯುಷ್ಯ, ಮನಸ್ಸಿನ ಸ್ಥಿರತ್ವ, ಬಲ, ಆರೋಗ್ಯ, ಸುಖ, ತೃಪ್ತಿ ಇವುಗಳನ್ನು ಹೆಚ್ಚಾಗಿ ಬೆಳಸುವದಿದ್ದು, ರಸಯುಕ್ತವೂ, ಹಾಲು ತುಪ್ಪ ಮೊದಲಾದ ಸ್ನಿಗ್ಧ ಪದಾರ್ಥದಿಂದ ಕೂಡಿದ್ದೂ, ಆಗಲೇ ತಯಾರಿಸಿದ್ದೂ, ಮನೋಹರವಾದದ್ದೂ ಆದ ಆಹಾರವು ಸಾತ್ವಿಕರಿಗೆ ಪ್ರಿಯವಾಗುವದು. ಕಾರ, ಹುಳಿ ಉಪ್ಪು, ಈ ರುಚಿಗಳುಳ್ಳ ಪದಾರ್ಥಗಳು, ಅತಿಶಯ ಉಷ್ಣವಾದ ಪದಾರ್ಥಗಳು (ಮಸಾಲೆಗಳು), ಶರೀರದಲ್ಲಿ ತೀವ್ರವಾಗಿ ಸೇರುವ ಪದಾರ್ಥಗಳು, ಮೈಯಲ್ಲಿ ದಾಹವನ್ನು ಹುಟ್ಟಿಸುವ ಪದಾರ್ಥಗಳು ಇವು ಶೋಕವನ್ನೂ, ದುಃಖವನ್ನೂ, ಬೇನೆಯನ್ನೂ ಹುಟ್ಟಿಸುವವಿದ್ದು ರಾಜಸರಿಗೆ ಸೇರುವ ಆಹಾರಗಳಿರುವವು. ಮತ್ತು ಯಾವ ಆಹಾರವು ಆರಿ, ತಣ್ಣಗಾಗಿರುವದು, ರುಚಿ ಹೋಗಿರುವದು, ಹೊಲಸು ನಾರುವದು, ಹಳಸಿರುವದು, ಎಂಜಲಾಗಿರುವದು, ಅಶುದ್ಧವಾಗಿರುವದು ಅದು ತಾಮಸರಿಗೆ ಪ್ರಿಯಕರವಾದ ಊಟವಾಗಿರುವದು. ಇದು ಮೇಲೆ ಹೇಳಿದ ಶ್ಲೋಕಗಳ ತಾತ್ಪರ್ಯವು.

ಇದರಮೇಲಿಂದ ಆಹಾರಕ್ಕೂ ಮನಸ್ಸಿಗೂ ನಿಕಟ ಸಂಬಂಧವಿರುತ್ತದೆಂದು ಸ್ಪಷ್ಟವಾಗುವದು. ಸಾತ್ವಿಕ ಮನಸ್ಸಿನಲ್ಲಿ ಕಾಮಕ್ರೋಧಮದಾದಿ ... ಹಬ್ಬಿರುವದು. ಇದಲ್ಲದೆ ಮನಸ್ಸು ಸಾತ್ವಿಕವಾಗಿದ್ದರೆ, ಹೇಗೆ ಹಿಡಿದಲ್ಲಿಟ್ಟುಕೊಳ್ಳಲಿಕ್ಕೆ ಬರುವದೋ, ಹಾಗೆ ರಜೋಮಯವೂ ತಮೋಮಯವೂ ಆಗಿದ್ದರೆ, ಆಗುವದಿಲ್ಲ. ಗ್ರಾಮ್ಯಪಶುಗಳನ್ನು ಹಿಡಿದಲ್ಲಿಟ್ಟುಕೊಳ್ಳಲಿಕ್ಕೆ ಬರುವಂತೆ, ವನ್ಯ ಪಶುಗಳನ್ನು ಇಟ್ಟುಕೊಳ್ಳಲಾಗುವದಿಲ್ಲ, ಇದು ಅನುಭವದ ಮಾತು. ಬ್ರಹ್ಮಚರ್ಯವನ್ನು ಪಾಲಿಸುವ ವಿದ್ಯಾರ್ಥಿಯು ಈ ಸಂಗತಿಯನ್ನು ಎಷ್ಟರಮಟ್ಟಿಗೆ ತಿಳಿದಿರುತ್ತಾನೆ? ಅಥವಾ ಅವನ ಪಾಲಕರು ತಿಳಕೊಂಡಿರುತ್ತಾರೆ? ಮುಂಜಾವಿನ ನ್ಯಾಹರಿಗೆ ಅವಶ್ಯವಿದ್ದ ಸಾಮಾನುಗಳನ್ನು ಮನೆಯಲ್ಲಿ ಮಾಡಿಸುವ ಗೋಜಿಗೆ ಹೋಗದೆ, ತಮ್ಮ ಮಕ್ಕಳನ್ನು ಎತ್ತಿಕೊಂಡು ಚಹಾದ ಹೊಟೆಲಿಗೆ ಹೋಗಿ, ಅವರಿಗೂ ಚಹಾ ಕುಡಿಸಿ, ತಾವೂ ಅದನ್ನು ಹೊಡೆದು ಕೃತಕೃತ್ಯರಾದೆವೆಂದು ತಿಳಿಯುವ ಪಾಲಕರ ಮನಸ್ಸಿಗೆ ಇದರ ಗಂಧವು ಎಲ್ಲಿಂದ ಹತ್ತಬೇಕು! ಮದ್ಯಮಾಂಸಗಳನ್ನು ಒಲ್ಲೆವೆಂದು ಅತ್ತರೂ ಹಲವು ತರದಿಂದ ಅವರ ಮನಸ್ಸನ್ನು ಒಲಿಸಿ, ವಂಚಿಸಿ, ಕಡೆಗೆ ಬಲಾತ್ಕಾರದಿಂದಾದರೂ ಮಕ್ಕಳಿಗೆ ಅದನ್ನು ಊಡಿಸುವ ಪಾಲಕರದು ಅದೆಂಥಾ ಮೋಜೋ! ಇರಲಿ, ಇದರಿಂದ ನಮ್ಮ ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಉಚ್ಚತರದ ಈ ಹೇಯವಾದ ವ್ಯಸನವು ನಿಬಿಡವಾಗಿ ಅಂಟಿಕೊಂಡಿರುವದು. ಇದಕ್ಕಾದರೂ ವ್ಯವಸ್ಥೆಯಿರುವದೇ? ಅದೂ ಇಲ್ಲ! ಈ ಪ್ರಕಾರ ಇವನ್ನು ತಿಂದುಂಬುವ ಮನಸ್ಸಿಗೆ ಬಂದ ಬೇರೆ ಪದಾರ್ಥಗಳನ್ನೂ ಮಿತಿಮೀರಿ ಸೇವಿಸುವದರಿಂದ, ಅವರ ಪ್ರಕೃತಿಯೂ ಮನಸ್ಸೂ ಯಾವತರದ್ದಾಗುವದೆಂಬುದನ್ನು ವಾಚಕರು ತರ್ಕಿಸಲಿ. ಇವರ ಈ ಯಥ್ಯಾಚಾರದ ಪರಿಣಾಮವನ್ನು ಮಾತ್ರ, ದುಷ್ಪರಿಣಾಮವನ್ನು ಇವರಕೂಡ ಅನುಭವಿಸಬೇಕಾಗುತ್ತದೆಂಬುದನ್ನು ದುಃಖದಿಂದ ಹೇಳಬೇಕಾಗಿದೆ.

ಗಂಧ ಮಾಲ್ಯಾದಿ ಭೋಗ್ಯ ವಸ್ತುಗಳನ್ನು ವಿದ್ಯಾರ್ಥಿಗಳು ಉಪಭೋಗಿಸಬಾರದೆಂದು ಶಾಸ್ತ್ರಕಾರರ ಅಪ್ಪಣೆಯುಂಟು. ಇದನ್ನಾದರೂ ವಿದ್ಯಾರ್ಥಿವರ್ಗವು ಎಲ್ಲಿ ಪಾಲಿಸುತ್ತದೆ? ಕನ್ನಡಕು, ಬೂಟು, ಸ್ಟಾಕಿಂಗುಗಳೂ ಇಲ್ಲದವನೂ ಉಚ್ಚ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಯೇ ಅಲ್ಲವೆಂಬುವಾಗೆ, ಈಗಿನ ಸ್ಥಿತಿಯುಂಟಾಗಿದೆ. ಬೋರ್ಡಿಂಗುಗಳಿಂದ ವಾಸಮಾಡುವ ವಿದ್ಯಾರ್ಥಿಗಳ ಪೆಟ್ಟಿಗೆಗಳಲ್ಲಂತು ಎಷ್ಟೋ ಜಾತಿಯ ಅತ್ತರಗಳೂ ಸೆಂಟುಗಳೂ ತುಂಬಿರುವವು. ಕೊನೆಯನ್ನು ಧರಿಸದೆ ಬಿಸಿಲಲ್ಲಿ ಹೋಗುವದು, ಕ್ಯಾಪ್ ಇಟ್ಟುಕೊಂಡು ನ್ಯಾಪ್ ಹಾಕಿದ ವಿದ್ಯಾರ್ಥಿಗಾದರೂ ಜಡವೆನಿಸುತ್ತದೆ! ಪ್ರಾಚೀನಕಾಲದ ಹೋಮ—ಶಾಲೆಗಳಿಂದ ಹೊರಡುವ ಹೋಮ ಧೂಮಗಳಿಗಿಂತ ಈಗಿನ ವಿದ್ಯಾರ್ಥಿಗಳ ಬಾಯಿಂದಲೂ ಮೂಗಿನಿಂದಲೂ ಹೊರಡುವ ಧೂಮ ಪ್ರವಾಹವು ನಿಬಿಡವಾಗಿರುವದು! “ವರ್ಜಯೇತ್ ಗಂಧಮಾಲ್ಯಂ. ಉಪಾನಚ್ಛತ್ರಧಾರಣಮ್.” ಎಂದು ಹೊಯ್ಕೊಳ್ಳುವ ಮುದಿ ಮನುವಿನ ಆ ಹಾಳು ಹರಟೆಗಳನ್ನು ಯಾರು ಕೇಳಬೇಕು! ನರ್ತನವೂ, ಗೀತವಾದ್ಯಗಳೂ, ದ್ಯೂತವೂ, ಜನವಾದ ಪರಿವಾದಗಳೂ ವಿದ್ಯಾರ್ಥಿಗಳಿಗೆ ಈಗೀಗ ಅವಶ್ಯವಾಗಿ ಗೊತ್ತಾಗಿರಬೇಕೆಂದು ನೆಲಗೊಳ್ಳಹತ್ತಿದೆ. ಗ್ಯಾದರಿಂಗಗಳಲ್ಲಾಗುವ ಸುಗ್ಗೀ ಹಬ್ಬದ ಪ್ರದರ್ಶನಗಳೇ ಇದಕ್ಕೆ ಸಾಕ್ಷಿಯು.

ಓದಿರಿ! ಸಚಿತ್ರ ಓದಿರಿ!!

ಲೋಕಮಾನ್ಯವಾದ

ಬೆಲೆ [ಬಾಳ ಗಂಗಾಧರ ಟಿಳಕ] ೪|| ಆಣೆ

(ಎರಡನೇ ಆವೃತ್ತಿ)

ಈ ಪುಸ್ತಕದಲ್ಲಿ ಲೋಕಮಾನ್ಯರ ಸಂಪೂರ್ಣ ಚರಿತ್ರವನ್ನು ಕೊಟ್ಟಿರುವದಲ್ಲದೆ, ಲೋಕಮಾನ್ಯರ ಉತ್ತಮವಾದ ಫೋಟೋ ಮತ್ತು ಲೋಕಮಾನ್ಯರ ಹಸ್ತಾಕ್ಷರದ ೨ ಚಿತ್ರಗಳನ್ನು ಕೊಟ್ಟಿರುವೆವು. ದಪ್ಪ ಕಾಗದ, ಮನೋಹರವಾದ ಮುದ್ರಣ. ಪುಸ್ತಕದ ಬೆಲೆ ವ್ಹಿ. ಪಿ. ರಜಿಸ್ಟರದ್ವಾರಾ 2 ಆಣೆ, ಇಲ್ಲವೆ ೫ ಆಣೆಯ ಸ್ಟಾಂಪುಗಳನ್ನು ಕಳಿಸಬಹುದು.

ಪತ್ತೆ— ವ್ಹಿ. ಎಸ್. ರಂಗ್ರೈ ಬೇಣಾವಿ.
ಪೋಸ್ಟ ಎಲ್ಲಾಪೂರ. (ಜಿಲ್ಲಾ ಕಾರವಾರ.)

ಕುಮಟ ಪೇಟ ಧಾರಣೆ.

ಜಿನಸು.		ದರ.
ರಂಗೂನ ಡ. ಗೋಣಿ ೧ಕ್ಕೆ	..	೧೭|||
ಕುಚ್ಚಿಗೆ ಅಕ್ಕಿ ಮಾನಗಿ	...	೫||—2
ರಾಗಿ ನಿಚಕ್ಕೆ	...	೯||—೧೦
ಗೋದಿ ಗೋಣಿ ೧ಕ್ಕೆ	...	೧೯—೨೨
ಹುರುಳಿ ನಿಚ „	...	೧೪||—೧೫
ಕಡಳೆ ಬೇಲ ೧ಕ್ಕೆ	...	೧೫||—೧೬|
ತೊಗರಿಬೇಳೆ ಗೋಣಿ ೧ಕ್ಕೆ	...	೨೧||—೩೦
ಹೆಸರು ಬೇಲ „	...	೩೦—೩೫
ಮೋರಿಸ ಸಕ್ಕರೆ ಮಣ „	...	೯
ಮೆಣಸಿನ ಕಾಯಿ ಮಣ „	...	೫||—೬
ಹರಳೆಣ್ಣೆ ಮಣ	...	೯
ಕೊಬ್ಬರಿ ಎಣ್ಣೆ ಮಣ	...	೧೨|||—೧೩
ಕೊತ್ತಂಬರಿ ಗೋಣಿ „	...	೧೧||—೧೨||
ಉಪ್ಪು ಗೋಣಿ „	...	೪-೫-೦
ಕೆರೆಸಿನ ತೂಯ್ಲ „	...	೪-೫-೦
„ ಹಂಸ „	...	೩-೯-೬
ಬೆಲ್ಲ ಖಂಡಿ ೧ಕ್ಕೆ	...	೪೫—೬೦
ಗಾಂವಟಿ ಅಡಿಕೆ „	...	೮೫—೯೫
„ ಗೋಟು „	...	೩೦—20
„ ಚಾಲಿ „	...	೮೫—೯೦
„ ಚಿಕಣಿ „	...	೧೧೫—೧೩೦
ಮೆಣ್ಸು „	..	೧೫೦—೧೫೫
ದಸಾಲಿಕ್ಕಿ „	...	೪೫—೫೦
ಯಲ್ಲಾಪೂರ ರಾಶಿ „	..	೧೧೫—೧೨೫
ಶಿರ್ಶಿ ರಾಶಿ „	...	೧೨೦—೧೪೦
ಸಿದ್ದಾಪೂರ ರಾಶಿ „	..	೧೩೦—೧೪೫
ಹೇರೂರ ರಾಶಿ „	...	೧೧೦—೧೨೫

ಲೋಕಮಾನ್ಯವಾದ
ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ಲೆಂಡೆಲ್ ಇಸ್ಟೇಟಿನ, ಎಲ್ಲಾ ತರದ ಚಹಾ ಮತ್ತು ಉಟಕಮುಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್ಲ) ನಮ್ಮ ವ ಶಿವಾಯ ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು. ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ. ಪತ್ರದ್ವಾರ ದರದ ಖುಲಾಸೆ ಮಾಡಿಕೊಳ್ಳಿರಿ

ವಿ. ಪಿ. ಶಾನಭಾಗ ಮತ್ತು ಬ್ರದರ್ಸ
ಹೊನ್ನಾವರ. ಉತ್ತರ ಕಾನಡಾ.

V. P. Shanbhag & Bors.
HONAWAR. (N. Kanara.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದ … ನೇ ನ್ಯಾಯ … ನೇ ಅಕ್ಟೋಬರನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕೇಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕೇಶಫಾ … ಔಷದವು ಯಾವತ್ತು ರೋಗ … ಸಾವಿರ … ಆರೋಗ್ಯಬಿಂದು … ಜಾತ್ಯಕ್ಕೆ ಒಂದೇ … ಔಷಧವು … ರೋಗಗಳ … ರೋಗಗಳ … ಬರೆದಿಟ್ಟ … ರೋಗಗಳ … ರೋಗಸಿವಾರಣ ಮಾಡಿಕೊಳ್ಳಬೇಕು

ರೋಗಗಳ ನಾಮಾವಳಿ

ಕ್ಷಯರೋಗ, ಹಸ … ಗುಲ್ಮರೋಗ, … ಪ್ಲೇಗ … ಜ್ವರ … ರೋಗವು … ಕಲ್ಲುಸಕ್ಕರೆ … ರೋಗಗಳು … ಆರೋಗ್ಯಬಿಂದುವಿನ … ಬಾಟ್ಲಿಗೆ … ತೋಲೆ ಬಾಟ್ಲೆ ಒಂದಕ್ಕೆ … ಬಾಟ್ಲಿಗಳು … ಒಂದು ಬಾಟ್ಲಿಯವರಿಗೆ …

… ಇಲ್ಲ ಇಟ್ಟ … ಒಂದು ಕಾಲು ತೋಲೆ ಬಾಟ್ಲಿ … ಔಷದದ … ಸರಕಾರ … ತಕ್ಕೊಳ್ಳತಕ್ಕದ್ದು … ಕಾರ್ಡು … ಬರೆಯುತಿರಬೇಕು

… ಅರ್ಕೇಶಫಾ, … ಆಫೀಸು … ಬೆಳಗಾಂವ

ಶಾಸ್ತ್ರೀಯರೀತಿಯಿಂದ ಗುಣಪಡಿಸುವ

ಔಷಧಗಳು.

1 … ಕಾಮೇಶ್ವರಿ ರಸ — … ಸಿದ್ಧವಾಗಿ … 0 … 1 …

2 … ಮಕರಧ್ವಜ … ಕ್ಷಯ … 1 … 0 6 0

3 … ಮಕ್ಕಳ … 0 10 0

4 … ಔಷಧಿ … ಒಂದು … 1 0 … 0 10

5 … 0

ಎಸ್. … ಗೋಪಾಲ … ಸನ್ಸ್

… ಬೆಳಗಾಂವ

ಬಂದೂಕ ಮತ್ತು ಸಾಮಾನು.

… ಬೇಕಾದ … ಮಾಹಿತಿ … ಬರೆದುಕೊಂಡು … ಪತ್ರವ್ಯವಹಾರ ಮಾಡಿರಿ

ಶೇಷಗಿರಿರಾವ ಥಾಕಪ್ಪನವರ, ಶಿರ್ಶಿ.

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯವರ ಚರಿತ್ರ … ಚರಿತ್ರ … ಬುದ್ಧಿಯ …

ವಿಳಾಸ:— ಎಂ. ಎಂ. ಹರ್ಡೇಕರ.

ಧಾರವಾಡ

ಹೊಸ ಶೋಧ! "ಓಂ" ಹೊಸಶೋಧ!
ಗುಣ ಬಾರದಿದ್ದರೆ ಹಣವಾಪಸು.
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ.)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ … ಸಿದ್ಧಹಸ್ತರಾದ ಅನುಭವಿಕ ದೇಶೀವೈದ್ಯರ … ರೋಗಿಗಳಿಗೆ ಉಪಯುಕ್ತವಾಗುವಂತೆ … ಪ್ರಯಾಸದಿಂದ ತಯಾರಿಸಿರುತ್ತೇವೆ … ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ … ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ … ಉಷ್ಣ ಸಂಬಂಧಿಯ … ಮಲಶುದ್ಧಿಯಾಗಿ … ಹಸಿಯುವದು. ಉಷ್ಣದಿಂದದೂಷಿತವಾದ ಶರೀರಕ್ಕೆ … ಈ ಪಾಕಸೇವನೆಯಿಂದ … ಇನ್ನೂ ಅನೇಕ ಮಹತ್ವದ ಗುಣಗಳೂ ಇರುವವು ಇದರ ಅನುಭವವು ಸೇವನೆಯ … ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ … ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು … ಸ್ತ್ರೀಯು ಸಶಕ್ತಳಾಗಿ ಗರ್ಭಧಾರಣೆಗೆ ಯೋಗ್ಯಳಾಗುವಳು … ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದ … ದಿವಸವಿದ್ದದ್ದರೆ ಮೂರು ಡಬ್ಬಿ ಪಾಕಿನಿಂದ … ಗುಣ ಬರುವದು … ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ

ಬೆಲೆ … ಕ್ರಿಕೆಟ … ಡಬ್ಬಿಗಳಿಗೆ … ಡಬ್ಬಿಗಳಿಗೆ … ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ—… ಅರ್ ಬ್ರದರ್ಸ ಮತ್ತು ಕಂಪನಿ … ಬೆಳಗಾಂವ

ಜ್ಞಾನ ದೀಪಗಳು

ಛಾಡಿಗೆಗೆ ಇಟ್ಟಿರುವವು.

… ಕೆಳಗಿನ ಪತ್ತೆಗೆ … ಬರೆಯಿರಿ.

… ಲಕ್ಷ್ಮೀ … ಜ್ಞಾನಭಾಗ

ಹೆಗಡೆ, ಕರ. ದುಕಾನ, ಕುಮಠಾ.

ಅಪೂರ್ವವಾದ ಎಣ್ಣೆ.

ಈ ಎಣ್ಣೆ … ನೀರು … ಗುಲಾಬ ಹಚ್ಚಿದರೆ … ವ್ಯಾಪಾರಿಗಳಿಗೆ … ಹಿರಾಲಾಲ … ಗುಜರಾತ … ಕುಮಠಾ.

Printed and published by Krishnarao Keshav Shet … at the S … of K … Press Kumta

Reg No B 1270

ವರ್ಷ ೫. | ಸಂಚಿಕೆ ೧೨.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.—
ಕುಮಟೆಯಲ್ಲಿ ಊರವ್ರ
ರೂಪಾಯಿ 2-0-0.
ಮನೆಯಾರ್ಡರಿಯಿಂದ
ರೂ. 2-13-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 2-15-0
ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ —
ಕನ್ನಡ, ಇಂಗ್ಲಿಷ ಮ್ಯಾಕ್ಸ ಪ್ಯಾರಿಸ(೧೫ ಎಮ್‌ಲಬ್ದ) ೫ ಸಾಲುಗಳ ವರೆಗೆ ರೂ 1-0-0
ಅನಂತ್ರ ಪ್ರತಿ ಸಾಲಿಗೆ 0-2-0
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೩೦ ಮಾಹೆ ಡಿಸೆಂಬರ ಸನ್ ೧೯೨೦ ನೇ ಇಸವಿ.]

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು, ಜಾಂಬಳಿ ೧೦೦ ಕ್ಕೆ ೧೪ ಆಣೆ ಕಪ್ಪು ದವಾತ್ರ ೧೨ ಆಣೆ ಶಾಯಿ ಸೆಂಪಲಿಗೆ ಒಂದಾಣೆ ಶೋಕ ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್. ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಶಾಲೋಪಯೋಗಿ ಪುಸ್ತಕಗಳು.

ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು, ಸ್ಟೇಶನರಿ ಸಾಮಾನುಗಳನ್ನು ನಾವು ಮಾರ್‍ಕ್ತಸುವೆವು

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

ಸತ್ಯಮೇವ ಜಯತೇ
(ಗುಣಬಾರದಿದ್ದರೆ ಹಣವಾಪಸು)
ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನೇಂದ್ರಿಯದ ಶಿಥಿಲತೆ, ನಿಬಳತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯ ವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗರ್ಮಿ, (ಪರಮ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಆಶ್ಚರ್ಯಕರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ. ಖ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ

ವಿಳಾಸ— **ಜಿ. ಎಲ್. ಜೋಶಿ ಕಂಪನಿ.**

ಪೋಸ್ಟ— ಸಿರಸಿ ಉತ್ತರ ಕಾನಡಾ.

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ರೋಖ ದರ, ಸವಲತಿಯು ಇರುತ್ತದೆ.

ಪತ್ತೆ:— ಬಿ ವಾಸ್ಯ, ಕುಮಟಾ.

ಕಂಬಳಿಗಳು.

ದೊಡ್ಡ ಕಂಬಳಿಗಳು

ರೇಸ ಕೋಟಿಗೂ, ಕೋಟಿಗೂ, ಹಿಡ ಸಂಧಕ್ಕೂ, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬರುವಂಥವು ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ ಕೂಡಲೇ ಯೋಗ್ಯ ಕಿಮ್ಮತ್ತಿಗೆ ಕಳಿಸುವೆವು

ಶಿರ್ಶಿ ಶ್ರೀನಿವಾಸರಾವ,
ದಾವಣಗೇರಿ, ಮೈಸೂರ ಪ್ರಾಂತ

ನಮ್ಮಲ್ಲಿ ಸಿಗುವ ದಿವ್ಯ ಔಷಧಗಳು

ಮೇಘರಾಜಚೂರ್ಣ— ಎಲ್ಲ ತರೇಣತರದ ಮಲಬದ್ಧತೆಯು ಜುಲಾಬು ಮಾಡಿಸುವ ನಿಸ್ಪತ್ಯ ಚೂರ್ಣ. ಕ್ರಯ— ಪುಡಿ (೧ಕ್ಕೆ ೧॥ ಆಣೆ) ೧೨ ಕ್ಕೆ ೧-೩-೦

ಎಳಬಾಲ ಸಂಜೀವನಿ ಮಾತ್ರಾ— ಈ ಮಾತ್ರೆಯು ಕೂಸುಗಳಿಗೆ ಉಪಯೋಗಿಸಿದರೆ ಯಾವದೇತರದ ಉದರವ್ಯಾಧಿಯೂ ಬರಲಾರದು ಕ್ರಯ ಬಾಟ್ಲಿ ೧ಕ್ಕೆ ರೂ ೨॥

ಶ್ವಾಸ ಕಾಸ ಗುಟಿಕಾ— ಯಾವದೇತರದ ಶ್ವಾಸಕಾಸ, ದಮ್ಮು, ಕೆಮ್ಮು ಇವುಗಳಮೇಲೆ ಉಪಯೋಗಿಸುವದು ಕ್ರಯ— ೧ಕ್ಕೆ ೨ ಆಣೆ ೧೨ ಕ್ಕೆ ೧॥ ರೂ

ವ್ರಣನಾಶಕ ಚೂರ್ಣ— ಯಾವದೇತರದ ವ್ರಣ ಹುಣ್ಣಿನಮೇಲೆ ಹಚ್ಚಿದರೆ ೮ ದಿವಸಗಳಲ್ಲಿ ಗುಣ ಕ್ರಯ— ದೊಡ್ಡ ಕುಪಿ ೧ ಕ್ಕೆ ರೂ ೨-೦-೦

ಪಿ. ಆಯುರ್ವೇದ ವೈದ್ಯ ಶಾಲಾ,

ಆರ್ ಎನ್. ವೈದ್ಯ, ಗುರಜಗಪೇಟ್ ಕುಮಟಾ

ಬಗ್ಗೋಣ ರಾಮಾ ಶಿವ್ಯಣ್ಣ ಪಂಡಿತರ

ದುರ್ಮತಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕಾಗದದ ಕ್ರಯ ಮತ್ತಿಷ್ಟು ತುಟ್ಟಿಯಾದ ಮೂಲಕ, ೧೦೦ಕ್ಕೆ ೧೨-೮-೦, ೫೦ಕ್ಕೆ ೬-೧೦-೦, ೨೫ಕ್ಕೆ ೩-೧೦-೦, ಇಟ್ಟದೆ

ಮಾಲಕ ಸ್ವಾರ್ ಸಿಥ್ ಕೆನರಾ ಪ್ರೆಸ್,
ಕುಮಟಾ.

ಅನುಭವಸಿದ್ಧವಾದ ಔಷಧಗಳು !!!
ನಿಸ್ಪೃಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ
ಪ್ರವಾಳ, ಕೇಶರ, ಅಮರಸತ್ವ, ಲೋಹ,
ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉಪದಂಶವಿಕಾರ, ಮಸ್ತಕಶೂಲಿ ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ಪ್ರಥಕ್ತವೂ, ಕಾಂತಿಯೂ, ಸ್ಮರಣಶಕ್ತಿಯೂ, ಕಣತ ವೃದ್ಧಿಯಾಗಿ, ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦

